ಸಂಪಾದಕರು:

ರಂಗೋ ಕೃಷ್ಣ ಲಕ್ಕುಂಡಿ ಬಿ. ಎ. (ಆನರ್ಸ್) ಬಿ. ಟಿ. (ಫರ್ಸ್ಟ್ ಕ್ಲಾಸ)

ಕೂಗುವೊಂದಾಗಿ । ಕರುಳೊಂದಾಗಿ । ಹೃದಯದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ವಿದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ ॥ ಭೋಗ ಬಿಟ್ಟೇಳಿರೈ ॥
ಕನ್ನಡಮ್ಮನ ಕುವರರೇ । —ಋಗ್ವೇದ

ಸಂಪುಟ ೮೮ } ೧೯೪೮ನೇ ಜನವರಿ, ಫೆಬ್ರುವರಿ, ಮಾರ್ಚ { ವರ್ಷ ೨೧ ಸಂ. ೧೦, ೧೧, ೧೨

ರಾಷ್ಟ್ರ ಪಿತಾ

(೧)

ಕರುಣಾನಿಧಿಯೋ ರಾಷ್ಟ್ರಪಿತಾ ।
ಪರಮ ಸಾಧು ಗುಣದಧೀರಾ ।
ಶಾಂತಿ ಶಿಖಾಮಣಿ ಜಗವಿಖ್ಯಾತಾ ।
ನೀರಜನೇತ್ರನ ಭಕುತಕ ಶ್ರೇಷ್ಠಾ ॥

(೨)

ಭಾರತರಾಷ್ಟ್ರದ ಸ್ವಾತಂತ್ರದಾತಾ ।
ದೀನಜನಾಂಗದ ಮೂಲೋದ್ಧಾರಾ ।
ತ್ಯಾಗಿ ವಿರಾಗಿ ನಿರ್ಮಲ ವಾಣಿ ।
ಯೋಗಿಸದಾಸನ್ಮಾರ್ಗದ ಜ್ಯೋತಿ ॥

(೩)

ಧರ್ಮದ ದಯೆಯನು ಜಗಕೆಲ್ಲ ತೋರಿದೆ ।
ಜಾತಿಯ ಐಕ್ಯಕೆ ನೀಂಬಲಿಯಾದೆ ।
ಕುಲದ್ರೋಹಿ ನಿನ್ನನು ಗುಂಡಿಕ್ಕಿದನೆ ।
ನಾವಿನ್ನು ತಬ್ಬಲಿ ಗಾಂಧಿಮಹಾತ್ಮನೆ ॥

(೪)

ನಿನ್ನ ಭಾರತವಿಂದು ದುಃಖ ಪೂರಿತವು ।
ನಿನ್ನ ಕ್ಷಮೆಕೇಳಲ್ಕೆ ನಾಚಿಕೊಂಡಿಹುದು ।
ನಿನ್ನ ಕಳೆದು ಕೊಂಡ ಕಣ್ಣೀರಿಡುತಲಿಹೆವು ।
ಮೂನ್ನ ಹುತಾತ್ಮನೆ ಮಾರ್ಗದರ್ಶಕ ನಾಗು ॥

—ಶ್ರೀ. ಕಲಾಲ ಚೂಡಾಮಣಿರಾಯ

ಮರೆಯಾದ ಮಹಾತ್ಮ

(ಧಾಟಿ :— " ಉದಯವಾಗಲಿ ನಮ್ಮ ಚಲುವ ಕನ್ನಡನಾಡು " ಎಂಬಂತೆ)

ಮರೆಯಾದ ! ಮರೆಯಾದ !! ಮಹಿಮ !!! ಜಗತೊರೆದು ।
ಮರೆಯಾದರೂ ನಿನ್ನ ನಾಮ ಜಗಬಿಡದು ॥ ಪ ॥

ಸತ್ಯ, ಶಾಂತಿಗಳಿಂದ ದಾಸ್ಯವನು ಕಡಿದೊಗೆದು ।
ಹೆತ್ತಮ್ಮ ಭಾರತಿಯ ಬಂಧನವ ಬಿಡಿಸಿ ॥

ಸತ್ಯ ಸಂಧನೆ ನಿನ್ನ ಮಹಿಮೆ ಪೊಗಳಲು ಧರಣಿ ।
ಮೊತ್ತ ಸಾಸಿರ ಪೆಡೆಯ ಶೇಷಗಸದಳವು ॥ ೧ ॥

ಹಿಂದು, ಮುಸಲಿಮ, ಶೀಖ ಬಾಂಧವರು ಒಂದೆಂದು ।
ಹಿಂದು ಮಾತೆಯೆ ನಮ್ಮ ಮಾತೆಯಂದು ॥

ಸಂದ ಬೋಧನೆಯಿಂದಲೊಂದು ಗೂಡಿಸಿ ಮನವ ।
ತಂದೆ ಯಂದದಿ ಜಗಕೆ ಮಾರ್ಗ ತೋರಿಸಿದಿ ॥ ೨ ॥

ಹರಿಜನರು ನಾವೆಂದು ಹೆಮ್ಮೆ ಪಡುತಿಯ ಜನರ ।
ಹರಿತನವ ಕಡಿದೊಗೆದು ಹರಿಯ ಸ್ನೇಹಿತರಾಗಿ ॥

ಹರಿಕಿರಿಗಳೆಂಬ ಭೇದವನು ಕಳೆಯುತೆ ತಾವು ।
ಹರಿಜನರ ಪೊರೆದಿರೈ ದೀನಬಂಧು ॥ ೩ ॥

ಉಚ್ಚಕುಲ ನೀಚಕುಲರೆಂಬ ಹುಚ್ಚರು ನಿಮ್ಮ ।
ಬಿಚ್ಚು ಮನದಾ ಬೋಧೆಯಿಂದೆಚ್ಚರಾಗೆ ॥

ಹೆಚ್ಚು ಕಡಿಮೆಗಳೆಂಬ ತುಚ್ಛ ಭಾವವ ಬಿಡಿಸಿ ।
ಸ್ವಚ್ಛ ಮನ ಮಾಡಿದಾ ಕೆಚ್ಚೆದೆಯ ವೀರಾ ॥ ೪ ॥

ರಾಮ ರಹಿಮರು ಒಂದೆಯಂಬ ಮಂತ್ರವ ಜಗದಿ ।
ಪ್ರೇಮ ಪೂರ್ವಕವಾಗಿ ಬೋಧಿಸುತ್ತಿರಲು ॥

ಹಿಂದೂ ತರುಣ ಕ್ರೂರಾತ್ಮ, ಪಾಪಾತ್ಮ- ।
ನೀ ಮಹಾತ್ಮನ ದೇಹ ಸೂರೆ ಗೊಂಡಿಹನಯ್ಯೊ ॥ ೫ ॥

ಸಿ. ಬ. ನವಾತಿ
ಅ. ಮಾ. ತುಮ್ಮಿನಕಟ್ಟಿ

ಮಹಾತ್ಮಾ ಗಾಂಧಿ.

(ಆನಂದಾಚಾ ಎಂಬಂತೆ)

ಭಾರತ ಮಾತೆಯ ಬಂಧ ವಿಮೋಚನ
ದಾರಿಯ ತೋರಿದ ಮೋಹನ ದಾಸನೆ ||
ಪೋರಬಂದರದ ಶೌರಿಯು ನೀನೆ | ಮೊರಿದ ವೈರಿಯ ಸೋಲಿಸಿದಾತನೇ |

ದೂರದ ಆಂಗ್ಲರ ನಾಡಿಗೆ ನೀನು |
ಸಾರುತಕಾಯಿದೆ ಪಂಡಿತನಾದಿ |
ಕರೆಯುನು ಕೇಳುತ ಭಾರತದ ಜನರ | ದೂರದ ಆಫ್ರಿಕೆ ಸೇರಿದೆ ನೀನು ||

ತಾಯಿಯ ನಾಡಿನ ಕಷ್ಟವ ನೋಡಿ |
ಕಾಯದೆ ಕಷ್ಟವ ಬಹುಪರಿ ಸಹಿಸಿ |
ನೋಯದೆ ನೀನು ಬಂದಿಯ ವಾಸವೆ | ಜಯಸಂಪಾದನ ಪಥವೆಂದರಿತಿ ||

ರಾಟೆಯ ನಿನ್ನಯ ಪರಮಾಯುಧವು
ರಾಟೆಯೆ ನಿನ್ನಯ ದಿವ್ಯೌಷಧವು |
ರಾಟೆಯೆ ತಿರುಗಿಸಿ ಕೋಟಿಜನಕೆ ನೀ | ಊಟದ ಮಾರ್ಗವ ತೋರಿಸಿ ಕೊಟ್ಟೆ ||

ಹರಿಜನ ಹೃದಯದ ಮರುಕವ ಕೇಳಿ |
ಕರಗಿತು ನಿನ್ನಯ ಕೋಮಲ ಹೃದಯ |
ಪರಿಪರಿಯಿಂದಲೆ ಹರಿಜನರಿಗೆ ನೀ | ಕರುಣೆಯ ತೋರಿದಿ ಭಾರತಪುತ್ರಾ ||

ನಿನ್ನಯ ಮಾರ್ಗವು ಶಾಂತಿಯ ಮಾರ್ಗವು |
ನಿನ್ನಯ ಮಂತ್ರವಹಿಂಸೆಯ ಮಂತ್ರವು |
ನಿನ್ನಯ ಮಂತ್ರವ ಜಪಿಸುತ ಭಾರತ | ಉನ್ನತ ಸ್ವತಂತ್ರ ನಾಡಾಯ್ತು ||

ಗಾಂಧಿಯ ರಾಟೆಯ ತಿರುಗಿಸುತ |
ಗಾಂಧಿಯಮಂತ್ರವ ಜಪಿಸುತ್ತ |
ಗಾಂಧಿಯ ಶಾಂತಿಯ ಮಾರ್ಗದೆ ನಡೆದು | ಗಾಂಧಿ ಮಹಾತ್ಮಾ ಅನ್ನೋಣ ||

ವೀ. ಅಂ. ಸಂಸಿ.
ಅ. ಮಾಸ್ತರ ಪ್ರಾ. ಸ್ಕೂಲ, ಟ್ರೇ, ಕಾ. ಧಾರವಾಡ.

ವೈಧರ್ಮ್ಯ ಮೂಲಕ ಅಲಂಕಾರಗಳು

ಪಂಡಿತ ಕೇಶವ ಕರ್ಮ್ ಗಲಗಲಿ

ವಿಭಾವನಾ

ಕಾರಣವಿಲ್ಲದಿದ್ದರೂ ಕಾರ್ಯವು ಹುಟ್ಟುವದು ಎಂದು ಹೇಳುವಲ್ಲಿ ವಿಭಾವನಾಲಂಕಾರವು. ಲಾಕ್ಷಾರಸವನ್ನು ಹೆಚ್ಚದಿದ್ದರೂ ಆಕೆಯ ಕಾಲುಗಳು ಕೆಂಪಗೆ ಇರುವವು. ಹೇತುರೂಪಕ್ರಿಯೆಯ ನಿಷೇಧವನ್ನು ಮಾಡಿದರೂ ಫಲಪ್ರಕಾಶನವಾಗುವಲ್ಲಿ ವಿಭಾವನಾಲಂಕಾರವಾಗುವದು. " ಕಾಮನ ಅಸ್ತ್ರಗಳು ತೀಕ್ಷ್ಣವಾದವೂ ಅಲ್ಲ, ಕಠೋರವಾದವೂ ಅಲ್ಲ. ಆದರೂ ಅವನಿಂದ ಮೂಲೋಕ ಗೆಲ್ಲಲ್ಪಟ್ಟಿತು. (ಪುಷ್ಪ ಬಾಣ, ಇಕ್ಷು ಚಾಪ) ರಥಕ್ಕೆ ಒಂದೇ ಗಾಲಿ. ಸಾರಥಿ ಹೇಳುವನು; ಆದರೂ ಸೂರ್ಯನು ಅನಂತ ಅಂಬರವನ್ನು ದಾಟುತ್ತಾನೆ. ಗೀತೆಯನ್ನು ಕೇಳಿದೆವು; ಉಪನಿಷತ್ತುಗಳನ್ನು ಓದಿದೆವು; ಆದರೂ ಸಾರಂಗಲೋಚನೆಯ ಧ್ಯಾನದೂರಾಗಲೊಲ್ಲದು. ಸ್ಮರದೀಪಿಕೆ ಉರಿಯುತ್ತಿದ್ದರೂ ಹೃದಯದಲ್ಲಿ ಸ್ನೇಹ (ಎಣ್ಣೆ) ಕ್ಷಯವಾಗಲಿಲ್ಲ. ಇವೆಲ್ಲ ವಿಭಾವನಾಲಂಕಾರಕ್ಕೆ ಚೆಂದವಾದ ಉದಾಹರಣೆಗಳು. ಉದಾಹರಣೆಗಳಿಂದ ಅಲಂಕಾರಗಳು ಚೆನ್ನಾಗಿ ನೆನಪಿನಲ್ಲಿ ಉಳಿಯುವವು. ಕಾರಣದ ಅಭಾವವಿದ್ದರೂ ಕಾರ್ಯೋತ್ಪತ್ತಿಯಾಗುವದು. ವಿಭಾವನಾಲಂಕಾರವೆಂದು ರಾಜಾ ನಕರಾಯ್ಯನು ಹೇಳುತ್ತಾನೆ. ಪ್ರಸಿದ್ಧ ಹೇತುವಿಲ್ಲದಿದ್ದರೂ ಕಾರ್ಯೋತ್ಪತ್ತಿಯಾಗುವದು ವಿಭಾವನೆಯೆಂದು ಏಕಾವಲಿ ಹೇಳುತ್ತದೆ. ಶ್ವೇತಾಶ್ವತರ ಉಪನಿಷತ್ತಿನಲ್ಲಿಯೂ ವಿಭಾವನಾಲಂಕಾರಕ್ಕೆ ಉದಾಹರಣೆ ಸಿಕ್ಕುವದು. ಪಾಣಿಪಾದಗಳು ಇಲ್ಲದಿದ್ದರೂ ಅವನ ವೇಗವು ಆರಿಗೂ ನಿಲುಕದು; ಕಣ್ಣುಗಳಿಲ್ಲದಿದ್ದರೂ ಅವನು ನೋಡುವನು ಕರ್ಣಗಳಿಲ್ಲದಿದ್ದಿರೂ ಅವನು ಕೇಳುವನು. ಅವನು ತಿಳಿಯಬೇಕಾದದ್ದೆಲ್ಲವನ್ನು ತಿಳಿಯುವನು. ಅವನನ್ನು ತಿಳಿದವರು ಯಾರೂ ಇಲ್ಲ. ಅವನೇ ಮಹಾಪುರುಷ ಪರಬ್ರಹ್ಮ "

ವಿಷಮಾಲಂಕಾರ

ಎರಡು ಅನುರೂಪವಲ್ಲದ ವಸ್ತುಗಳಲ್ಲಿ ಘಟನೆಯುಂಟಾಯಿತೆಂದು ಹೇಳುವದು ವಿಷಮಾಲಂಕಾರವು. ಉದಾ : ಶಿರೀಷಪುಷ್ಪದಂತೆ ಮೃದುಶರೀರವುಳ್ಳ ಈಕೆಯೆತ್ತ ? ಈ ಕಾಮಜ್ವರವೆತ್ತ ? ಎರಡು ವಸ್ತುಗಳಲ್ಲಿ ಉಂಟಾಗುವ ಯೋಗವು ಅತ್ಯಂತ ಅಯೋಗ್ಯವಿದ್ದದ್ದು (ಯಾಕಂದರೆ ಅವೆರಡು ವಸ್ತುಗಳಲ್ಲಿ ಅತ್ಯಂತ ವೈಧರ್ಮ್ಯವಿರುವದರಿಂದ) ವರ್ಣಿಸಲ್ಪಟ್ಟರೆ ವಿಷಮಾಲಂಕಾರ.

ಕರ್ತನು ಒಂದನ್ನು ಆರಂಭಿಸಹೋಗಿ ಕ್ರಿಯೆಯ ನಾಶದಿಂದ ಅಭೀಷ್ಟವನ್ನು ಪಡೆಯುವದಿಲ್ಲ; ಇಷ್ಟೇ ಅಲ್ಲ. ಬಯಸದೇ ಇದ್ದ ಅನರ್ಥವೂ ಉಂಟಾದಲ್ಲಿ ವಿಷಮಾಲಂಕಾರ. ಕಾರ್ಯವು ಕಾರಣರೂಪವನ್ನು ಧರಿಸಬೇಕಾಗಿದ್ದರೂ ಕಾರಣಕಾರ್ಯಗಳ ಗುಣಕ್ರಿಯೆಗಳು ಪರಸ್ಪರ ವಿರುದ್ಧತೆಯನ್ನು ಪಡೆದಲ್ಲಿ ವಿಷಮಾಲಂಕಾರವಾಗುವದು.

ಶಿರೀಷ ಕುಸುಮದಂತೆ ಮೃದ್ವಂಗಿಯಾದ ಈ ತರುಣಿಯೆತ್ತ ? ಕಾಕುಳ್ಳನ ಬೆಂಕಿಯಂತೆ ಸುಡುವ ಈ ಕಾಮಜ್ವರವೆತ್ತ ? ಸಿಂಹಿಕೆಯ ಮಗನಿಂದ (ಸಿಂಹೆದ ಮರಿ) ಸಂತ್ರಸ್ತನಾಗಿ ಮೊಲವು ಚಂದ್ರನನ್ನು ಆಶ್ರಯಿಸಿತು. ಆದರೆ ಅಲ್ಲಿ ಸಿಂಹಿಕಾಸುತನು (ರಾಹು) ಮೊಲಕ್ಕೆ

ಆಶ್ರಯ ಕೊಟ್ಟ ಚಂದ್ರನನ್ನು ಕೂಡ ನುಂಗಿಬಿಟ್ಟನು. ರಾಜನೆ ನಿನ್ನ ನೀಲವಾದ ಕತ್ತಿಯು ನಿನ್ನ ಕೈ ಮುಟ್ಟಿದರೆ ಸಾಕು. ತಾನು ಕಪ್ಪು ಇದ್ದರೂ ತ್ರಿಲೋಕಕ್ಕೆ ಅಲಂಕಾರಭೂತವಾದ ನಿನ್ನ ಶುಭ್ರಕೀರ್ತಿಯನ್ನು ಪಸರಿಸಿ ಬಿಡುವದು.

ಕಮಲನಯನೆಯೇ ನೀನು ಆನಂದದಾನವನ್ನು ಕೊಡುವಿ ನಿಜ; ಆದರೆ ನಿನ್ನಿಂದಲೇ ಜನಿಸಿದ ವಿರಹವು ನನ್ನ ಶರೀರಕ್ಕೆ ತಾಪವನ್ನು ಕೊಡುತ್ತದೆ. ಆನಂದದಾಯಕ ಶರೀರವು ತಾಪವನ್ನು ಕೊಡುತ್ತದೆ. ಇದು ವಿರುದ್ಧವಾದದ್ದು.

ಅಪ್ಪಯ್ಯದೀಕ್ಷಿತರೂ ಜಗನ್ನಾಥರೂ ಎರಡನೇ ಪ್ರಕಾರದ ವಿಷಯದಲ್ಲಿ ಮೂರು ವಿಭಾಗಗಳನ್ನು ಮಾಡಿರುವರು. (೧) ಅಭಿಲಷಿತ ಕಾರ್ಯವು ಘಟಿಸದ ಅನಿಷ್ಟಪ್ರಾಪ್ತಿ (೨) ಕೇವಲ ಇಚ್ಛಿತಕಾರ್ಯ ಸಿದ್ಧಿಸದಿರುವದು (೩) ಕೇವಲ ಅನಿಷ್ಟ ಪ್ರಾಪ್ತಿ. ಉದಾಹರಣೆಗಳು— ಲೋಕದಲ್ಲಿ ಕಲಂಕವನ್ನು ಕಳೆದುಕೊಳ್ಳುವದಕ್ಕಾಗಿ ಚಂದ್ರನು ರಮಣಿಯೇ ನಿನ್ನ ಮುಖ ರೂಪದಿಂದ ಅವತರಿಸಿದನು. ಅಲ್ಲಿಯೂ ನೀನು ತಿಲಕದ ನೆವದಿಂದ ಅವನನ್ನು ಕಲಂಕಿಸುವಿ. ನಾರಿಯರು ಆಶ್ರಿತ ಜನರನ್ನು ಕಲಂಕಿಸುವರು. ಯಾವನನ್ನು ಕರೆದುಕೊಂಡುಬರಲಿಕ್ಕೆ ಮಾಲೆಯನ್ನು ಕಳಿಸಿದೆನೋ ಅವಳು ಅವನಲ್ಲಿಯೇ ರಮಿಸುವಾಣಳು. ಸಖಿಗಳೇ ನನ್ನ ದಡ್ಡತನ ನೋಡಿರಿ. ಇದು ನನ್ನ ದೈವ ಪಾಕ. ಮನಸ್ಸೆ ನಪುಂಸಕಲಿಂಗವೆಂದು ತಿಳಿದು ಪ್ರಿಯಳ ಹೆತ್ತರ ಕಳಿಸಿದೆ. ಅದು ಅಲ್ಲಿಯೇ ರಮಿಸಹತ್ತಿದೆ. ಅಯ್ಯೋ! ಪಾಣಿನಿ (ವ್ಯಾಕರಣಕಾರ) ಯು ನಮ್ಮನ್ನು ವಂಚಿಸಿದನು. ಕಮಲದ ಛತ್ರ ಬೇಕೆಂದು ರಮಣಿಯೇ ನೀನು ವಾಪಿಯಲ್ಲಿ ಕಮಲದ ಬೀಜಗಳನ್ನು ಬಿತ್ತುವಿ. ಆದರೆ ಇದು ಕಲಿಕಾಲ. ಈ ಜಗತ್ತು ಕೃತಜ್ಞವಲ್ಲ. ಆ ಕಮಲದಲ್ಲಿ ಬೆಳೆದು ನಿನ್ನ ಮುಖದ ಸಿರಿಯನ್ನೇ ಹರಣ ಮಾಡುವದು.

ಮುಕುಲಿತನಯನದಿಂದ ಆನೆ ತನ್ನ ಗಂಡದ್ರುತಿಂಡಿಯನ್ನು ತೀರಿಸಿಕೊಳ್ಳಲು ವಿಷವೃಕ್ಷಕ್ಕೆ ತಿಕ್ಕಲು ದಿವ್ಯಾಗ್ನಿ ಹೊರಟಿತು.

ಉದಾಹರಣೆಗಳು—ರೂಪವಿದೆತ್ತ, ಈ ಸುದಾರುಣವಾದ ದುಃಖವೆತ್ತ? ಎಂದು ಅರಣ್ಯದಲ್ಲಿ ನಿನ್ನ ವೈರಿ ವಧುಗಳನ್ನು ನೋಡಿ ದಾರಿಕಾರರು ಚಿಂತಿಸುತ್ತಾರೆ. ಉತ್ಕಂಠಾ, ಪರಿತಾಪ, ರಣಾರಣಿಕೆ, ಜಾಗರಕೃಶತ್ವ ಸುಖಕ್ಕಾಗಿ ಮೃಗಲೋಚನೆಯನ್ನು ಹುಡುಕತಕ್ಕ ನನಗೆ ಇವೆಲ್ಲ ಸಿಕ್ಕವು. ಇವನು ಕ್ಷೀರಸಾಗರದ ಪತಿಯೆಂದು ಗೋಗಳ ಪಾಲಕನೆಂದು (ಹಾಲು ಕುಡಿಯಲಿಕ್ಕೆ ಸಿಗುತ್ತವೆಂದು) ಕೃಷ್ಣನನ್ನು ಆಶ್ರಯಿಸಿದೆವು. ಆದರೆ ಇವನು ನಮಗೆ ಮಾತೃಸ್ತನದ ಹಾಲು ಕೂಡ ನಮಗೆ ದುರ್ಲಭ ಮಾಡಿಬಿಟ್ಟನು. (ಮೋಕ್ಷ ಕೊಟ್ಟನು ಎಂಬರ್ಥ) ಇಷ್ಟಸಿದ್ಧಿಯಾಗದೆ ಅನಿಷ್ಟವೊಂದು ಒದಗಿಬರುವ ವಿಷಯಕ್ಕೆ ಸಾಹಿತ್ಯದರ್ಪಣಕಾರನ ಉದಾಹರಣೆ ಚೆನ್ನಾಗಿರುವದು. "ಇದು ರತ್ನಾಕರವೆಂದು ಸಮುದ್ರವನ್ನು ಧನದ ಆಸೆಯಿಂದ ಆಶ್ರಯಿಸಿದೆವು. ದುಡ್ಡು ದೂರ ಇರಲಿ, ಬಾಯಲ್ಲಿ ಉಪ್ಪಿನ ನೀರನ್ನು ತುಂಬಿಕೊಂಡೆವು. ಕವಲಯಾನಂದ ಕಾರನ ಉದಾಹರಣವೂ ಚೆನ್ನಾಗಿರುವದು. ಏನಾದರೂ ತಿನ್ನಲಿಕ್ಕೆ ಸಿಗಲೆಂದು ಹಾವಿನ ಪೆಟ್ಟಿಗೆಯಲ್ಲಿ ಇಲಿ ಹೊಕ್ಕಿತು. ಭಕ್ಷ್ಯವು ಸಿಗುವದು ಒತ್ತಟ್ಟಿಗೆ ಉಳಿಯಿತು. ಇಲಿಯನ್ನು ಹಾವು ನುಂಗಿತು. ವ್ಯವಹಾರಿಕ ಉದಾಹರಣೆ—ನಮಾಜು ಮಾಡುವಾಗ ಮಸೂತಿ ಕೊರಳಿಗೆ ಬಿದ್ದಿತು. ಇಷ್ಟ ಕಾರ್ಯ ನಮಾಜ ಸಿದ್ಧಿಸಲಿಲ್ಲ. ಅನಿಷ್ಟವೊಂದು ಪ್ರಾಣಹಾರಕ ಮಸೂತಿ ಪಾತಕ"

ವಿಷಮಾಲಂಕಾರವು ವಿರೋಧ-ಅಸಂಗತಿಗಳಲ್ಲಿ ಸೇರುವದೆಂದು ಭಾವಿಸಕೂಡದು. ವಿರೋಧದಲ್ಲಿ ಎರಡು ವಿರುದ್ಧ ವಸ್ತುಗಳಲ್ಲಿರುವ ಸಮಾನಾಧಿಕರಣದಲ್ಲಿ ಅಸಂಗತಿಯಲ್ಲಿ

ಕಾರ್ಯ ಕಾರಣಗಳ ವೈಯಧಿಕರಣ್ಯಕ್ಕೆ ಚಮತ್ಕಾರ ಪ್ರಯೋಜಕತೆ ಕಂಡುಬರುವದು. ವಿಷಮದಲ್ಲಿ ಕಾರ್ಯಕಾರಣದಲ್ಲಿರುವ ವಿಜಾತೀಯ ಗುಣಕ್ರಿಯೆಗಳ ಯೋಗದಲ್ಲಿ ಚಮತ್ಕಾರ ಕಂಡುಬರುವದು. **ವಿಷಾದನ:**– ಅಪ್ಪಯ್ಯದೀಕ್ಷಿತರೂ ಜಗನ್ನಾಥರೂ ವಿಷಾದನ ಎಂಬ ಅಲಂಕಾರವನ್ನು ಹೇಳಿರುವರು. ವಿಷಾದನ:-- ಇಷ್ಟಮಾಣ ವಿರುದ್ಧಾರ್ಥ ಸಂಪ್ರಾಪ್ತಿಯಿಂದ ವಿಷಾದನಾಲಂಕಾರವಾಗುವದು. ದೀಪವನ್ನು ಹಚ್ಚುವಷ್ಟರಲ್ಲಿ ಅದು ಆರಿಹೋಯಿತು. ಅಭೀಷ್ಟಾರ್ಥವಿರುದ್ಧ ಲಾಭದಿಂದ ವಿಷಾದನ. ರಾತ್ರಿ ಹೋಗುವದು. ಬೆಳಗುವದು. ಸೂರ್ಯನು ಉದಯಹೊಂದುವನು. ಹೀಗೆ ಕಮಲದಲ್ಲಿ ಸಿಕ್ಕ ಭ್ರಮರವು ಚಿಂತಿಸುತ್ತಿರುವಾಗ ಆ ಕಮಲ ಆ ಕಮಲಿನಿಯನ್ನು ಗಜವು ಕಿತ್ತಿ ಒಗೆದುಬಿಟ್ಟಿತು. ಜನರೆಲ್ಲ ಬೇಗನೆ ಹೋಗುವರು. ನನ್ನ ಚಂಚು ಪುಟದಿಂದ ಸಲಾಕೆಯನ್ನು ತೆಗೆದು ಹೊರಗೆ ಹಾರಿಹೋಗುವೆನು ಎಂದು ಗಿಳಿಯು ಚಿಂತಿಸುವಷ್ಟರಲ್ಲಿ, ಅಷ್ಟರಲ್ಲಿ ಒಂದು ಸರ್ಪವು ಪಂಜರದಲ್ಲಿ ಹೊಕ್ಕುಬಿಟ್ಟಿತು. ವಿಷಮಕ್ಕೂ ವಿಷಾದನಕ್ಕೂ ಭೇದವಿದೆ, ವಿಷಾದನದಲ್ಲಿ ಪ್ರಯತ್ನವಿಲ್ಲ; ಬರಿ ಚಿಂತೆ. ಇಲ್ಲಿ ಕೇವಲ ಇಚ್ಛಾಮಾತ್ರ. ವಿಷಮದಲ್ಲಿ ಪ್ರಯತ್ನವಿರುವದು. ಉದ್ಯೋತಕಾರನು ವಿಷಾದನವನ್ನು ಒಪ್ಪದೆ ಅದನ್ನು ವಿಷಮದಲ್ಲಿಯೇ ಸೇರಿಸಿಬಿಡುವನು ಇಷ್ಟಮಾಣವಿರುದ್ಧಾರ್ಥ ಪ್ರಾಪ್ತಿ ವಿಷಮವೆ. ಅಂತಹ ಇಚ್ಛೆಯಿಂದ ಅಂತಹ ಲಾಭವಾಗುವದು ವಿಷಮವೇ

ನಮ್ಮನ್ನಗಲಿದ ಬಾಪೂ.

ಶ್ರೀ. ಗುರುನಾಥ ಜೋಶಿ.

೧೯೪೮ ಜನೇವರಿ ೩೦ನೆಯ ತಾರೀಖು ಭಾರತೀಯರಿಗೆ ವರ್ಣಿಸಲಸದಳವಾದ ದುಃಖದ ದಿನ. ಅಂದು ಮಹಾತ್ಮಾಜಿಯವರು ಸಾಯಂಕಾಲ ಪ್ರಾರ್ಥನಾ ಸಭೆಯಲ್ಲಿ ನಿಂತಿರುವಾಗ ಒಬ್ಬ ಹಿಂದೂ ಯುವಕ. ಅವರನ್ನು ಗುಂಡಿಕ್ಕಿ ಕೊಂದ. ಸುದ್ದಿ ಮಿಂಚಿನ ವೇಗದಿಂದ ಜಗತ್ತಿನ ತುಂಬ ಹಬ್ಬಿತು. ಅವರಿಗಾಗಿ ಕಂಬನಿಗರೆಯದ ದೇಶವಿಲ್ಲ, ಮಾನವನಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸರ್ವರ ಅಂತಃಕರಣವೂ ಅಂದು ಮರುಗಿರಬೇಕು. ಕೊಲೆಪಾತಕಿಯ ಅಂತಃಕರಣವೂ (ಅವನಿಗದು ಇದ್ದರೆ) ಅದೂ ಮರುಗದೆ ಇದ್ದಿರಲಿಕ್ಕಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಕೊಡಿಸಿದ ಬಾಪೂ, ಭಾರತದ ಬಾಪೂ ನಮ್ಮನ್ನಗಲಿ ಹೋದರೂ ಅವರು ಉಪದೇಶಿಸಿದ ತತ್ವಗಳು ಎಂದೂ ನಮ್ಮ ಅಂತಃಕರಣದಿಂದ ದೂರಾಗವು. ಅವರು ತೀರಿಲ್ಲವೆಂದೇ ಇಂದಿಗೂ ಅದೆಷ್ಟೋ ಜನಕೆ ಅನಿಸುತ್ತದೆ. ಅವರ ದನಿ ಇಂದಿಗೂ ಕೇಳಿಬರುತಿದೆ. ಅವರ ಮಾತು ಇಂದಿಗೂ ಹೃದಯದಲ್ಲಿ ಮಿಡಿಯುತಿದೆ. ಅವರ ನೆನಹು ಬಂದಾಗ ಕಣ್ಣುಗಳು ಹಸಿಯಾಗುತ್ತವೆ. ಅಷ್ಟು ಬೇಕಾಗಿದ್ದರು ಬಾಪೂ.

ಸುಪ್ರಸಿದ್ಧ ಐನಸ್ಟೈನರು ನಾಲ್ಕು ವರುಷಗಳ ಹಿಂದೆ 'ಭಾರತದ ಸೇವೆಯನ್ನು ಮಾಡುತ್ತ ಮಾನವಕುಟುಂಬದ ಸೇವೆ ಮಾಡುತ್ತಿದ್ದ ಇಂಥ ಅಸ್ಥಿಮಾಂಸ ತ್ವಚಯುಕ್ತ ಮಾನವ ಈ ಪೃಥ್ವಿಯ ಮೇಲೆ ಅಡ್ಡಾಡಿದ್ದನೆಂಬುದನ್ನೂ ನೂರಾರು ವರುಷಗಳ ನಂತರ ಇವರ ಹೆಸರನ್ನೂ ಕೇಳಿದವರು ಬಹುಶಃ ನಂಬಲಿಕ್ಕಿಲ್ಲ' ಎಂದು ಬರೆದಿದ್ದರು. ಇಂಥ ಬಾಪೂನನ್ನು ನೋಡಿದ ನಾವು ಧನ್ಯರು, ನಮ್ಮ ಕಾಲ ಧನ್ಯದು. ಶ್ರೀ ಕೃಷ್ಣ, ಬಸವ, ಏಸೂ ಕ್ರಿಸ್ತ, ಅಬ್ರಹಂ

ಲಿಂಕನ್, ಸಾಕ್ರೆಟಿಸ್ ಮುಂತಾದ ಮಾನವ ಪುಂಗವರ ಮಾಲೆಗೆ ಸೇರಿದ ಬಾಪೂ—ಮಹಾತ್ಮಾ ಗಾಂಧಿ—ಅವರನ್ನು, ಇಂದು ಅವರ ಅತ್ಯಂತ ಅವಶ್ಯಕತೆ ಇದ್ದ ಕಾಲದಲ್ಲಿ ಕಳೆದುಕೊಂಡ ಭಾರತ ಹಾಗೂ ಭಾರತೀಯರು ದುರ್ಭಾಗ್ಯರು. ಯಾವ ಪಾಪದ ಫಲವಾಗಿ ಈ ದುರ್ಭಾಗ್ಯ ನಮ್ಮ ಪಾಲಿಗೆ ಬಂತೊ ಏನೊ.

ಕಳೆದುಕೊಂಡ ಬಾಪೂ ಸಶರೀರ ನಮ್ಮ ಮಧ್ಯದಲ್ಲಿರದಿದ್ದರೂ ತಮ್ಮ ಅಹಿಂಸೆ, ಸತ್ಯ, ಮಾನವಮಾತ್ರರ ಪ್ರೇಮದ ತತ್ವಗಳ ರೂಪದಲ್ಲಿ ಕೀರ್ತಿ ಆತ್ಮರಾಗಿ ನಮ್ಮಲ್ಲಿಯೆ ಇದ್ದಾರೆ. ಅವರು ತೋರಿದ ದಾರಿಯಲ್ಲಿ ನಾವು ನಡೆದರೆ ಬಾಪೂ ಅವರ ಆತ್ಮಕ್ಕೆ ಶಾಂತಿ; ನಮಗೂ, ನಮ್ಮ ನಾಡಿಗೂ ಹಿತ. ಅವರ ಇಡಿ ಜೀವನ ನಮಗೆ ಮಾರ್ಗದರ್ಶಕವಾಗಲಿ ಎಂಬ ಉದ್ದೇಶದಿಂದ ನಾವು ಅವರ ಜೀವನದ ಮುಖ್ಯ ಘಟನೆಗಳನ್ನು ನಮ್ಮ ಮುಂದೆ ಸದಾ ಇಟ್ಟುಕೊಳ್ಳುವುದು ಅಗತ್ಯ. ಅವರ ಜೀವನದ ಮುಖ್ಯ ಘಟನೆಗಳು ಇಂತಿವೆ.

ಗಾಂಧೀಜಿಯವರ ಜೀವನ-ದರ್ಶನ

೧೮೬೯— ೧೯ನೆಯ ಶತಮಾನದ ಸಾಯಂಕಾಲ. ೧೮೬೯ ಅಕ್ಟೋಬರ ೨ನೆಯ ತಾರಿಖಿನ ದಿನ ಪೋರಬಂದರದ ದಿವಾಣರ ಕೋಣೆಯಲ್ಲಿ ಯುಗಯುಗಗಳ ಮಹಾತ್ಮನ ವ್ಯಕ್ತಿತ್ವ ಮೊದಲಬಾರಿ ತನ್ನ ಕಣ್ದೆರೆಯಿತು. ಈ ನವಜಾತ ಶಿಶುವಿನ ಹೆಸರೇ **ಮೋಹನದಾಸ.**

೧೮೮೬— ಈ ಶಿಶುವು ಬೆಳೆದು ದೊಡ್ಡದಾಗಿ ಕಿಶೋರವಾಯಿತು. ೧೩ನೆಯ ವಯಸ್ಸಿನಲ್ಲಿ ಕಸ್ತೂರಬಾ ಅವರೊಡನೆ ಪರಿಣಯ. ೧೭ನೆಯ ವಯಸ್ಸಿನಲ್ಲಿ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡುವ ಕಾಲಕ್ಕೆ ಒಬ್ಬ ಮಗನ ತಂದೆಯಾಗಿದ್ದರು.

೧೮೮೦— ಇಂಗ್ಲಂಡದಲ್ಲಿ ತಮನ್ನು ಪವಿತ್ರವಾಗಿಟ್ಟುಕೊಂಡರು. ಥಿಯಾಸಫಿ, ಕ್ರಿಸ್ಟಿಯನ್ ಧರ್ಮ, ವೈಷ್ಣವ ಮತ್ತು ಜೈನಧರ್ಮದ ಪ್ರಭಾವದಿಂದ ಜೀವನ ವಿಕಾಸವಾಯಿತು. ಬ್ಯಾರಿಸ್ಟರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂಬೈಗೆ ಬಂದಾಗ ತಾಯಿ ತೀರಿದ್ದರು. ಮುಂಬಯಿಯಲ್ಲಿ ವಕೀಲಿ ಪ್ರಾರಂಭಿಸಿದರು. ಯಶಸ್ಸು ಸಿಗಲಿಲ್ಲ. ಅವರು ವಿಶ್ವದ ಕೋರ್ಟಿನಲ್ಲಿ ಪ್ರೇಮ ಮತ್ತು ಅಹಿಂಸೆಯ ವಕೀಲಿಯನ್ನು ಮಾಡಬೇಕಾಗಿತ್ತು.

೧೮೯೩— ಮುಸ್ಲಿಂ ಕಂಪನಿಯ ವಕೀಲರಾಗಿ ದಕ್ಷಿಣ ಆಫ್ರಿಕೆಗೆ ತೆರಳಿದರು. ಭಾರತೀಯರನ್ನು ಅಪಮಾನದ ವಿರುದ್ಧ ಎಬ್ಬಿಸಿದರು. ಇಟ್ಟಂಗಿ, ಕಲ್ಲುಗಳು ಅವರ ಆತ್ಮವನ್ನು ಎಚ್ಚರಿಸಿದವು. ದಾಸ್ಯ, ಶೋಷಣವನ್ನು ನಿಲ್ಲಿಸಿದ ಮೇಲೆ ಅವರಿಗೆ ಶಾಂತಿಯಾಯ್ತು.

೧೮೯೪— ನೇಟಾಲ ಇಂಡಿಯನ್ ಕಾಂಗ್ರೆಸ್ಸಿನ ಸ್ಥಾಪನೆಮಾಡಿದರು. ಅನ್ಯಾಯ, ತಿರಸ್ಕಾರ, ಅಮಾನುಷತೆಯೊಡನೆ ನ್ಯಾಯ, ಪ್ರೀತಿ ಮತ್ತು ಮಾನವತೆಯಿಂದ ಹೋರಾಡುವುದು ಅದರ ಗುರಿ.

೧೮೯೬— ಭಾರತಕ್ಕೆ ಹಿಂತಿರುಗಿ ಭಾರತದಲ್ಲಿರುವ ಭಾರತೀಯರ ಸ್ಥಿತಿಯ ಅಧ್ಯಯನ ಮಾಡಿ, ಅವರು ಹೋರಾಟದ ಹೊಸ ಸಾಧನದ ವ್ಯಾಖ್ಯೆಯನ್ನು ಮಾಡಿದರು.

೧೮೯೯— ಪುನಃ ದಕ್ಷಿಣ ಆಫ್ರಿಕೆಗೆ ಪ್ರಯಾಣ ಮಾಡಿದರು. ಇಂಗ್ಲೀಷರ ವಿರುದ್ಧ ಮಹಾನ್ ಕ್ರಾಂತಿ ಎದ್ದಿತ್ತು. ಅದಕ್ಕೆ ಬೋರ ಯುದ್ಧವೆನ್ನುವರು. ಮಾನವತೆಯ ದೃಷ್ಟಿಯಿಂದ ಅವರು ಶುಶ್ರೂಷಾ ಪಥಕದಲ್ಲಿ ಸೇರಿ ಇಂಗ್ಲಿಷರಿಗೆ ನೆರವಾದರು. ಇಟ್ಟಿಗೆಗಳಿಂದ ಹೊಡೆದ ಜಾತಿಗೇ ನೆರವಾದರು.

೧೯೦೧ರಿಂದ ೧೯೧೩—ಭಾರತಕ್ಕೆ ಬಂದು ಪುನಃ ದಕ್ಷಿಣ ಆಫ್ರಿಕಾಗೆ ಪ್ರಯಾಣ ಮಾಡಬೇಕಾಯಿತು. ಭಾರತೀಯರ ಮೇಲೆ ಪುನಃ ಅತ್ಯಾಚಾರಗಳು ಸುರುವಾಗಿದ್ದವು. 'ಇಂಡಿಯನ್ ಒಪಿನಿಯನ್' ವೃತ್ತಪತ್ರ ನಡೆಸಿದರು. 'ಕಪ್ಪು ಕಾಯಿದೆ'ಗಳ ವಿರುದ್ಧ ಹೋರಾಟ ಹೊಡಿದರು. ಫಿನಿಕ್ಸದಲ್ಲಿ ಆಶ್ರಮ ಸ್ಥಾಪಿಸಿದರು. ಸತ್ಯಕ್ಕಾಗಿ ಹೋರಾಟ ಸುರುವಾಯಿತು. ಈ ಹೋರಾಟ ಕಂಡು ಜಗತ್ತು ಬೆರಗುಗೊಂಡಿತು.

೧೯೧೪— ಸತ್ಯಕ್ಕೆ ಗೆಲುವಾಯಿತು. ಭಾರತೀಯ ವಿವಾಹಗಳು ಕಾಯಿದೆಶೀರ ಆಗಿ ಕಪ್ಪು ಕಾಯಿದೆಗಳು ಹೋದವು. ಜನರಲ್ ಸ್ಮಟ್ಸರು ತಲೆಬಾಗಿದರು.

ಈ ಕಾಲದಲ್ಲಿ ಮಹಾಯುದ್ಧ ಪ್ರಾರಂಭವಾಯಿತು. ಇದರಲ್ಲೂ ಗಾಂಧೀಜಿಯವರು ಭಾರತೀಯರು ಸಹಾಯ ಮಾಡಬೇಕೆಂದು ಹೇಳಿದರು.

೧೯೧೫— ಭಾರತಕ್ಕೆ ಬಂದರು. ಜನತೆ ಇವರನ್ನು ಅಂತಃಕರಣದಿಂದ ಸ್ವಾಗತಿಸಿತು. ಇಡಿ ಹಿಂದುಸ್ತಾನದ ಪ್ರವಾಸ ಮಾಡಿದ ನಂತರ ಸಾಬರಮತಿ ನದಿಯ ತಟದ ಮೇಲೆ ಆಶ್ರಮ ಸ್ಥಾಪಿಸಿದರು. ಮಹಾತ್ಮರೆಂದು ಜನರು ಕರೆಯತೊಡಗಿದರು.

೧೯೧೭— ಸಾಬರಮತಿಯ ಶಾಂತಿಯನ್ನು ಬಿಹಾರದ ನೀಲದ ಹೊಲಗಳಲ್ಲಿ ದುಡಿಯುವವರ ಆರ್ತನಾದವು ಭಂಗಿಸಿತು. ಅವರು ಚಂಪಾರಣ್ಯಕ್ಕೆ ಹೋದರು. ಆಂದೋಲನ ಮಾಡಿ ಯಶಸ್ವಿಯಾದರು.

ಅಮದಾಬಾದದಲ್ಲಿ ಕೂಲಿಕಾರರ ಅಂದೋಲನ ಪ್ರಾರಂಭವಾಯಿತು. ಮೊಟ್ಟ ಮೊದಲು ಉಪವಾಸವನ್ನು ಪ್ರಾರಂಭಿಸಿದರು.

೧೯೧೮— ಯುದ್ಧಕ್ಕೆ ಸೈನಿಕರನ್ನು ಒಟ್ಟುಗೂಡಿಸುವ ಕಾರ್ಯ ಕೈಕೊಂಡರು. ಪ್ರಕೃತಿ ಕೆಟ್ಟಿತು. ಆಕಳ ಹಾಲು ಬಿಟ್ಟು ಆಡಿನ ಹಾಲನ್ನು ಸೇವಿಸತೊಡಗಿದರು.

೧೯೧೯— ಸತ್ಯಾಗ್ರಹದ ಸಿದ್ಧಾಂತದ ಪ್ರಚಾರಮಾಡಿ ಗಾಂಧೀಜಿಯವರು ರೌಲೆಟ್ ಕಾಯಿದೆಯ ವಿರುದ್ಧವಾಗಿ ಈ ಸತ್ಯಾಗ್ರಹದ ಅಸ್ತ್ರವನ್ನು ಉಪಯೋಗಿಸಲು ಹೇಳಿದರು.

ಜಾಲಿಯನ್‌ವಾಲಾ ಬಾಗದಲ್ಲಿ ಹತ್ಯಾಕಾಂಡವಾಯಿತು. ಅದರ ಹೊಣೆಯನ್ನು ತಮ್ಮ ಮೇಲೆ ತೆಗೆದುಕೊಂಡು, ಮೂರು ದಿನ ಉಪವಾಸಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡರು. ಎಪ್ರಿಲ್ ೧೯ಕ್ಕೆ ಸತ್ಯಾಗ್ರಹ ನಿಲ್ಲಿಸಿದರು.

೧೯೨೦— ೧-೮-೧೯೨೦ಕ್ಕೆ ಅಸಹಕಾರದ ಘೋಷಣೆ. ಖಿಲಾಫತ್ ಮತ್ತು ಸ್ವರಾಜ್ಯದ ಕೂಗು ಎದ್ದವು. ಪದವಿ, ಸಾಲೆ, ಕೋರ್ಟುಗಳಿಗೆ ಶರಣು ಹೊಡೆಯುವುದು, ವಿದೇಶಿ ವಸ್ತ್ರ ಬಹಿಷ್ಕಾರ ಮುಂತಾದವು ನಡೆದವು. ಪ್ರಿನ್ಸ ಆಫ್ ವೇಲ್ಸರಿಗೆ ಸಹ ಬಹಿಷ್ಕಾರ ಬಿತ್ತು.

ಮುಂಬಯಿಯಲ್ಲಿ ಗೋಳಿಬಾರಾಯಿತು. ಚೋರಾ ಚೋರಿಯಲ್ಲಿ ಜನತೆ ಪೋಲಿಸರ ಮೇಲೆ ಏರಿ ಹೋಗಿದ್ದರಿಂದ ಹಿಂಸಾಚಾರವಾಯಿತು. ಜನತೆ

ಅಹಿಂಸಾತ್ಮಕ ಯುದ್ಧಕ್ಕೆ ಇನ್ನೂ ಸಿದ್ಧವಾಗಿಲ್ಲವೆಂದು ಸತ್ಯಾಗ್ರಹವನ್ನು ನಿಲ್ಲಿಸಿದರು.

೧೯೨೨— ಮಾರ್ಚ ೧೦ಕ್ಕೆ ಬಂಧನ ಮತ್ತು ಯರವಡಾ ಕಾರಾಗ್ರಹವಾಸ. ಕಾಯಿಲೆಯಾಯಿತು. ಅಪರೇಶನ್ ಆಯಿತು. ಬಿಡುಗಡೆ ಮಾಡಲ್ಪಟ್ಟರು. ದಿಲ್ಲಿಯಲ್ಲಿ ಜಾತೀಯ ದಂಗೆಯಾಯಿತು. ಅದರ ವಿರುದ್ಧವಾಗಿ ಉಪವಾಸ ಮಾಡಿದರು.

೧೯೨೪— ಬೆಳಗಾಂವಿ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸಿದರು.

(ಜಯಕರ್ನಾಟಕ (ವಾರಪತ್ರಿಕೆ) ದ ಕೃಪೆಯಿಂದ)

೧೯೨೭— ಶಾಸನ ಸುಧಾರಣೆಯ ಸಲುವಾಗಿ ಸೈಮನ್ ಕಮೀಶನ್ ಭಾರತಕ್ಕೆ ಬಂತು. ಅದರಲ್ಲಿ ಒಬ್ಬನೂ ಭಾರತೀಯನಿರಲಿಲ್ಲ. ಅದರ ವಿರುದ್ಧ ಗಾಂಧೀಜಿಯವರು ಹರತಾಳ ಸೂಚಿಸಿದರು. 'ಸಾಯಮನ್ ಹಿಂತುರಿಗಿರಿ' ಎಂಬ ಕೂಗು ಪ್ರತಿಧ್ವನಿತವಾಯಿತು. ಬ್ರಿಟಿಶ್ ಸಾಮ್ರಾಜ್ಯ ನಡುಗಿತು.

೧೯೨೮— ದೇಶಕ್ಕೆ ಶಕ್ತಿಯನ್ನು ತಂದು ಕೊಟ್ಟರು. ಔಪನಿವೇಶಿಕ ಸ್ವರಾಜ್ಯವನ್ನು ಭಾರತ ಬೇಡಿತು. ಅದು ಒಂದು ವರುಷದೊಳಗಾಗಿ ಕೊಡಲ್ಪಡದಿದ್ದರೆ ಸಂಪೂರ್ಣ ಸ್ವಾತಂತ್ರ್ಯವೇ ಭಾರತದ ಗುರಿ ಎಂದು ಸಾರಲಾಯಿತು. ಆಂದೋಲನದ ಸಿದ್ಧತೆ ನಡೆಯಿತು.

೧೯೩೦— ಮಾರ್ಚ ೧೨ಕ್ಕೆ ಪ್ರಸಿದ್ಧ ದಾಂಡೀ ಯಾತ್ರೆಯನ್ನು ಗಾಂಧೀಜಿಯವರು ಕೈಕೊಂಡರು. ಎಪ್ರಿಲ್ ೬ನೆಯ ತಾರೀಖಿಗೆ ಉಪ್ಪಿನ ಕಾಯಿದೆ ಮುರಿದರು. ಮೇ ೫ಕ್ಕೆ ಬಂಧಿತರಾದರು.

೧೯೩೧— ಜನೇವರಿ ೨೬ಕ್ಕೆ ಬಂಧಮುಕ್ತರಾದರು. ಮಾರ್ಚದಲ್ಲಿ ಗಾಂಧಿ-ಇರ್ವಿನ್ ಒಪ್ಪಂದವಾಯಿತು. ನಂತರ ೨ನೆಯ ದುಂಡು ಮೇಜಿನ ಪರಿಷತ್ತಿಗಾಗಿ ಇಂಗ್ಲೆಂಡಿಗೆ ಹೋದರು.

೧೯೩೨— ಭಾರತಕ್ಕೆ ಹಿಂತುರಿಗಿದರು. ಯರವಡಾ ಮಂದಿರಕ್ಕೆ ಪುನಃ ತೆರಳಿದರು. ಹರಿಜನರ ಪ್ರಶ್ನೆಯ ಬಗ್ಗೆ 'ಕಮ್ಯೂನಲ್ ಅವಾರ್ಡದ' ವಿರುದ್ಧ ಆಮರಣ ಉಪವಾಸ ಕೈಕೊಂಡರು. ಇದರ ನಂತರ 'ಪೂನಾ ಪ್ಯಾಕ್ಟ' ಪುಣೆ ಒಪ್ಪಂದವಾಯಿತು. ನಂತರ ಕ್ರಿಯಾತ್ಮಕ ರಾಜಕಾರಣದಿಂದ ದೂರ ಸರಿಯತೊಡಗಿದರು. ಕಾಂಗ್ರೆಸ್ಸಿಗೆ ರಾಜೀನಾಮೆಯನ್ನು ಕೊಟ್ಟರು.

೧೯೩೯— ರಾಜಕೋಟದ ಪ್ರಶ್ನೆಯನ್ನು ಎತ್ತಿಕೊಂಡು ಉಪವಾಸ ಮಾಡಿದರು. ವ್ಹಾಯಿಸರಾಯರು ಕೈಹಾಕಿದರು. ಫೆಡರಲ್ ಕೋರ್ಟು ಗಾಂಧೀಜಿಯವರ ಮತಕ್ಕೆ ಅನುಸಾರವಾಗಿ ನಿರ್ಣಯ ಕೊಟ್ಟಿತು.

ದ್ವಿತೀಯ ಮಹಾಯುದ್ಧವು ಪ್ರಾರಂಭವಾಯಿತು. ಭಾರತದ ಒಪ್ಪಿಗೆಯಿಲ್ಲದೆ, ಅದು ಯುದ್ಧದಲ್ಲಿ ಭಾಗಿಯಾಗಿದೆಯೆಂದು ಸಾರಲಾಯಿತು.

೧೯೪೧— ಗಾಂಧೀಜಿಯವರು ಕೆಲ ಜನರನ್ನು ಆಯ್ದುಕೊಂಡು ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಿಸಿದರು. ಕೂಡಲೇ ಅದನ್ನು ನಿಲ್ಲಿಸಿ ಕಾಂಗ್ರೆಸ್ಸಿನ ಮುಂದಾಳುತನದಿಂದ ದೂರ ಸರಿದರು.

ಇದೇ ವರುಷ ಕ್ರಿಪ್ಸ ಕೊಡುಗೆ ಬಂತು. ಆದರೆ ಗಾಂಧೀಜಿಯವರು ಅದಕ್ಕೆ 'ನಿರರ್ಥಕ ಚೆಕ್ಕು' ಎಂದರು ಮತ್ತು ಅದಕ್ಕೆ ಒಪ್ಪಲಿಲ್ಲ. ನಂತರ ಅವರು 'ಭಾರತದಿಂದ ತೊಲಗಿರಿ' ಹೋರಾಟ ಹೂಡಿದರು. ಇದರಿಂದ ಬ್ರಿಟಿಶ್ ಸಾಮ್ರಾಜ್ಯ ನಡುಗಿತು.

೧೯೪೨— ಕಾಂಗ್ರೆಸ್ಸು 'ಕ್ವಿಟ್ ಇಂಡಿಯಾ' ಚಳವಳಿಯನ್ನು ಮಾನ್ಯಮಾಡಿತು. ಆಗಸ್ಟ ೧೧ಕ್ಕೆ ಎಲ್ಲ ಮುಖಂಡರೂ ಬಂಧಿತರಾದರು. ಜ್ವಾಲಾಮುಖಿಯು ಒಡೆಯಿತು. ಹಿಂದುಸ್ತಾನ ಪ್ರಜ್ವಲಿಸತೊಡಗಿತು. ನಂತರ ಮಹಾನ್ ಆಗಸ್ಟ ಕ್ರಾಂತಿಯ ಆಂದೋಲನ ಪ್ರಾರಂಭವಾಯಿತು. ಸರಕಾರ ಅದನ್ನು ಮೆಟ್ಟತೊಡಗಿತು. ಇದರ ಎಲ್ಲ ತಪ್ಪನ್ನು ಕಾಂಗ್ರೆಸ್ ಹಾಗೂ ಗಾಂಧೀಜಿಯವರ ಮೇಲೆ ಹೊರಿಸಿತು.

೧೯೪೩— ಗಾಂಧೀಜಿಯವರು ಆಗಾಖಾನರ ಅರಮನೆಯಲ್ಲಿ ೨೧ ದಿನದ ಉಪವಾಸ ಮಾಡಿದರು; ಆದರೆ ಅವರನ್ನು ಬಿಡಲಾಗಲಿಲ್ಲ.

೧೯೪೪— ಮೃತ್ಯುವು ಅವರಿಂದ ಮಹಾದೇವಭಾಯಿ ದೇಸಾಯಿ ಅವರನ್ನೂ ಫೆಬ್ರುವರಿ ೨೨ಕ್ಕೆ ಕಸ್ತೂರಬಾ ಅವರನ್ನೂ ಕಸಿದುಕೊಂಡಿತು. ಮೇ ೬ಕ್ಕೆ ಗಾಂಧೀಜಿಯವರು ಬಿಡಲ್ಪಟ್ಟರು. ಮುಂಬಯಿಗೆ ಹೋಗಿ ಕಾಯಿದೆ ಆಜಂ ಅವರನ್ನು ಭೆಟ್ಟಿಯಾದರು.

೧೯೪೪ರಿಂದ ೪೬— ಕಾನ್ಫರನ್ಸುಗಳ ಸುರಿಮಳೆ. ೧೯೪೬ ಮೇ ೧೫ಕ್ಕೆ ಮೇ ಯೋಜನೆ ಬಂತು. ಮಧ್ಯಂತರ ಅಥವಾ ತಾತ್ಪೂರ್ತಿಕ ಸರಕಾರ ಬಂತು. ನಂತರ ಆಗಸ್ಟ ೧೬ಕ್ಕೆ ಬಂಗಾಲದಲ್ಲಿ ಭಯಂಕರ ಹತ್ಯಾಕಾಂಡ ಸುರುವಾಯಿತು. ಇದರಿಂದ

ಗಾಂಧೀಜಿಯವರ ಮನಸ್ಸು ಬಹಳ ನೊಂದಿತು. ಅವರು ಪಾದಚಾರಿಯಾಗಿ ಹಳ್ಳಿಹಳ್ಳಿ ತಿರುಗಿ ಶಾಂತಿ ನೆಲೆಸಲೆತ್ನಿಸಿದರು. ಪುನಃ ಹತ್ಯಾಕಾಂಡವು ಬಿಹಾರ ದಲ್ಲಿ ನಡೆಯಿತು.

೧೯೪೭— ಮಾರ್ಚ್‌ತಿಂಗಳಲ್ಲಿ ಬಿಹಾರಕ್ಕೆ ಹೋದರು. ಅಲ್ಲಿ ದಂಗೆಯನ್ನು ಶಾಂತ ಮಾಡಿದರು.

ಆಗಸ್ಟ ೧೫ಕ್ಕೆ ಸ್ವಾತಂತ್ರ್ಯೋತ್ಸವ ನಡೆದಾಗ ಗಾಂಧೀಜಿಯವರು ಬಂಗಾಲ ದಲ್ಲಿ ಜಾತೀಯ ದೊಂಬೆಯನ್ನು ಶಾಂತಪಡಿಸುವ ಕಾರ್ಯದಲ್ಲಿ ತೊಡಗಿದ್ದರು. ಕಲಕತ್ತೆಯಲ್ಲಿಯೂ ಉಪವಾಸ ಮಾಡಬೇಕಾಯಿತು. ಕಲಕತ್ತಾ ಶಾಂತ ವಾಗುವುದರೊಳಗಾಗಿ ದಿಲ್ಲಿ ಉರಿಯತೊಡಗಿತು. ಸಪ್ಟಂಬರ ೮ಕ್ಕೆ ದಿಲ್ಲಿಗೆ ಹೋದರು. ಅನೇಕ ಸಾಮ್ರಾಜ್ಯಗಳು ಅಳಿದು ಹೋದ ದಿಲ್ಲಿಯಲ್ಲಿಯೆ ಈ ದೇವತ್ವಕ್ಕೂ ಸಾವು ಬರುವುದೆಂಬುದು ಯಾರಿಗೆ ಗೊತ್ತಿತ್ತು?

೧೯೪೮— ಜನೇವರಿ ೧೩ಕ್ಕೆ ಶಾಂತಿ ಸ್ಥಾಪನೆಗಾಗಿ ಉಪವಾಸ ಕೈಕೊಂಡರು. ದೇಶವು ನಡುಗಿತು. ಮುಖಂಡರು ಶಾಂತಿ ಸ್ಥಾಪನೆಯ ಆಶ್ವಾಸನ ಕೊಟ್ಟರು. ೫ ದಿನ ಗಳ ನಂತರ ಉಪವಾಸವನ್ನು ಮುರಿದರು. ಜನೇವರಿ ೨೦ಕ್ಕೆ ಅವರನ್ನು ಕೊಲ್ಲುವ ಪ್ರಯತ್ನ ನಡೆಯಿತು. ಅಪರಾಧಿಯನ್ನು ಬಂಧಿಸಲಾಯಿತು. ಗಾಂಧೀಜಿಯವರು ಅವನಿಗೆ ಕ್ಷಮೆ ಮಾಡಲು ಹೇಳಿದರು. ಜನೇವರಿ ೩೦ಕ್ಕೆ ಸಾಯಂಕಾಲ ೫ ಗಂಟೆ, ೫ ನಿಮಿಷಕ್ಕೆ ಪ್ರಾರ್ಥನಾ ಬಯಲಿನಲ್ಲಿ ಹಿಂದೂ ತರು ಣನ ಪಿಸ್ತೂಲಿನ ಗುಂಡಿಗೆ ಬಲಿಯಾಗಿ ೩೫ ನಿಮಿಷಗಳ ತರುವಾಯ ಮೃತರಾದರು. ಅವರ ಮಹಾನ್ ಆತ್ಮ ಅವರ ನಶ್ವರ ಶರೀರವನ್ನು ಬಿಟ್ಟು ಹೋಯಿತು.

ಇದ್ದಾಗಲೂ ಮಾನಪಡೆದ ಹಾಗೂ ತೀರಿದ ಮೇಲೂ ತಮ್ಮ ಅಸ್ಥಿ-ಚಿತಾ ಭಸ್ಮಕ್ಕೂ ಗೌರವ, ಆದರ, ಮಾನ ಪಡೆದ ಮಹಾತ್ಮಾ ಗಾಂಧಿಯವರು ನಿಜ ವಾಗಿಯೂ ಅವತಾರಿ ಪುರುಷರಲ್ಲವೇ? ಅವರ ಮರಣದಿಂದ ಇಂದು ಭಾರತ ಅನಾಥವಾಗಿದೆ, ತಬ್ಬಲಿಯಾಗಿದೆ. ಅವರ ಆತ್ಮ ಭಾರತವನ್ನು ಮುನ್ನಡೆಸಲಿ. ಅವರ ಉಪದೇಶದಂತೆ ನಡೆದು ಭಾರತೀಯರು ಅವರ ಆತ್ಮಕ್ಕೆ ಶಾಂತಿಯನ್ನು ತಂದುಕೊಟ್ಟು ತಾವೂ ಶಾಂತಿಸುಖವನ್ನು ಅನುಭವಿಸುವಂತಾಗಲೆಂದು ಆ ಪರಮಾತ್ಮನಲ್ಲಿ ಬೇಡಿಕೆ.

ಹೊಸ ಅಭ್ಯಾಸ ಪತ್ರಿಕೆಯಂತೆ

೧೯೪೮ ಎಪ್ರಿಲ ತಿಂಗಳಲ್ಲಿ ನಡೆಯುವ ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ

ಪ್ರಾ. ಶಾ. ಪ್ರ. ಪತ್ರ (ಮುಲ್ಕಿ) ಪರೀಕ್ಷೆಯ ಕಾರ್ಯಕ್ರಮ

ದಿನ ಮತ್ತು ತಾರೀಖು	ವೇಳೆ ಇಂದ/ವರೆಗೆ	ವಿಷಯ	ಗುಣಗಳು
ಸೋಮವಾರ	೧೦-೩೦—೧೧-೧೫	ಉಮೇದವಾರರ ಹಾಜರಿ ತಕ್ಕೊಳ್ಳುವದು.	
೫-೪-೧೯೪೮	೧೧-೩೦—೨-೦	೧ನೆಯ ಸದರು:- ಪ್ರಾದೇಶಿಕ ಭಾಷೆ— ೨ನೆಯ ಕಾಗದ-ಪ್ರಬಂಧ ಹಾಗು ಕೈಬರೆಹ.	೧೦೦
	೩-೦—೬-೦	೪ನೆಯ ಸದರು :- ವಿಜ್ಞಾನ (ಶಾಸ್ತ್ರೀಯ ವಿಷಯ)—	೧೦೦
		(೧) ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ, ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ ಮತ್ತು ಸಾಮಾನ್ಯ ಪ್ರಾಥಮಿಕ ವಿಜ್ಞಾನ (ಸಾಮಾನ್ಯ ಶಾಲೆಗಳ ಗಂಡು ಮಕ್ಕಳಿಗಾಗಿ)	
		(೨) ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ ಹಾಗೂ ಗೃಹ ವಿಜ್ಞಾನ (ಸಾಮಾನ್ಯ ಶಾಲೆಗಳ ಹೆಣ್ಣು ಮಕ್ಕಳಿಗಾಗಿ)	೧೦೦
		(೩) ಶರೀರ ಶಾಸ್ತ್ರ ಮತ್ತು ಆರೋಗ್ಯ ಮತ್ತು ಕೃಷಿ ಶಾಸ್ತ್ರ (ಶೇತ್ಕಿ ಶಾಲೆಗಳ ಉಮೇದವಾರರಿಗಾಗಿ.)	೧೦೦
		(೪) ಶರೀರಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ. ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ. ನೂಲುವ ಹಾಗೂ ನೇಯುವ ಉದ್ಯೋಗಗಳಿಗೆ ಸಂಬಂಧ ಪಟ್ಟ ಯಂತ್ರಜ್ಞಾನವನ್ನೊಳಗೊಂಡ ಸಾಮಾನ್ಯ ವಿಜ್ಞಾನ (ಬೇಸಿಕ್ ಶಾಲೆಗಳ ಉಮೇದವಾರರಿಗಾಗಿ)	
ಮಂಗಳವಾರ ೬-೪-೧೯೪೮	೧೧-೦—೨-೦	೨ನೆಯ ಸದರು:- ಗಣಿತ— ೧ನೆಯ ಕಾಗದ: ಅಂಕಗಣಿತ	೧೦೦
	೩-೦—೬-೦	೩ನೆಯ ಸದರು:-ಇತಿಹಾಸ ಮತ್ತು ಭೂಗೋಲ	೧೦೦

ಬುಧವಾರ ೭-೪-೧೯೪೯	೧೧-೦—೨-೦	೧ನೆಯ ಪದರು:—ಪ್ರಾದೇಶಿಕ ಭಾಷೆ—೧ನೆಯ ಕಾಗದ : ಗದ್ಯ, ಪದ್ಯ, ವ್ಯಾಕರಣ	೧೦೦
	೩-೦—೬-೦	೨ನೆಯ ಪದರು:— ಗಣಿತ— ೨ನೆಯ ಕಾಗದ : ಭೂಮಿತಿ ಮತ್ತು ಸಾದಾ ಜಮಾಖರ್ಚು	೧೦೦
ಗುರುವಾರ ೮-೪-೧೯೪೯	೧೧-೦—೨-೦	೬ನೆಯ ಪದರು:— (ಐಚ್ಛಿಕ)—ಹೆಚ್ಚಿನ ಸ್ಥಾನಿಕ ಭಾಷೆ ಅಥವಾ ಹಿಂದುಸ್ತಾನಿ	೧೦೦
		೭ನೆಯ ಪದರು:— ಅನಿವಾರ್ಯ ಉರ್ದು (ಜಿಲ್ಲೆಯ ಸ್ಥಾನಿಕ ಭಾಷೆಯ ಮುಖಾಂತರ ಎಲ್ಲ ಪ್ರಶ್ನೆ ಕಾಗದಗಳಿಗೆ ಉತ್ತರ ಬರೆಯುವ ಉರ್ದು ಉಮೇದವಾರರಿಗಾಗಿ)	೧೦೦
	೩-೦—೬-೦	೫ನೆಯ ಪದರು:— ಸೂಚಿಗೆಲಸ, ರೇಖನ ಕಲೆ (ಡ್ರಾಯಿಂಗ). ಪ್ರಾಯೋಗಿಕ ಕೃಷಿ, ನೂಲುವದು ಹಾಗೂ ನೇಯುವದು. (ಬೇಸಿಕ್ ಶಾಲೆಗಳ ಉಮೇದವಾರರಿಗೆ ಲೇಖಿ ಪರೀಕ್ಷೆಯ ಮೊದಲು ನೂಲುವದು ಮತ್ತು ನೇಯುವದರಲ್ಲಿ ನಡೆಯುವ ಪ್ರಾಯೋಗಿಕ ಪರೀಕ್ಷೆಯ ಅನುಕೂಲ ನಿಶ್ಚಿತ ತಾರೀಖನ್ನು ಗೊತ್ತುಪಡಿಸಲಾಗುವದು.)	೧೦೦
ಶುಕ್ರವಾರ ೯-೪-೧೯೪೯	೧೧-೦—೨-೦	೬ನೆಯ ಪದರು:— (ಐಚ್ಛಿಕ) ಸಂಗೀತ	೧೦೦
		೬ನೆಯ ಪದರು:— (ಐಚ್ಛಿಕ) ಹೊಲಿಗೆ	೧೦೦

ಸೂಚನೆ:— ಪರೀಕ್ಷೆಯ ಮೊದಲನೆಯ ದಿನ ಪ್ರತಿಯೊಬ್ಬ ಉಮೇದವಾರನು ಪರೀಕ್ಷಾ ಸಮಯಕ್ಕೆ ೧ ತಾಸು ಮುಂಚಿತವಾಗಿ ಪರೀಕ್ಷಾಸ್ಥಳದಲ್ಲಿ ಹಾಜರರಿರಲೇಬೇಕು.

ತಾ. ೨೦-೨-೧೯೪೯

(Sd) ಬಿ. ಯಂ. ಶಿಂತ್ರೆ
ದ. ಭಾ. ಎಜ್ಯುಕೇಶನಲ್ ಇನಸ್ಪೆಕ್ಟರರ ಪರವಾಗಿ

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು (ಹಳೆ ಅಭ್ಯಾಸ ಪತ್ರಿಕೆಯಂತೆ)	ಗುಣಗಳು
ಸೋಮವಾರ	೧೦॥	೧೧-೧೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
೫-೪-೧೯೪೮				
ಸದರ	೧೧॥	೨	ನಿಬಂಧ ಅಥವಾ ರಿಪೋರ್ಟು ಪತ್ರ ಬರಹ ಮುಂತಾದವು	೧೦೦
ಸದರ	೩	೬	ಆರೋಗ್ಯವಿಜ್ಞಾನ ಅಥವಾ ಶಾರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಆರಂಭದ ಶಾಸ್ತ್ರಿಯ ವಿಷಯ.	೧೦೦
ಮಂಗಳವಾರ ೬-೪-೧೯೪೮	೧೧	೨	ಅಂಕಗಣಿತ	೧೦೦
ಸದರ	೩	೬	(ಅ) ಇತಿಹಾಸ ಮತ್ತು (ಬ) ಭೂಗೋಲ.	(ಅ) ೫೦ (ಕ) ೫೦
ಬುಧವಾರ	೧೧	೨	(ಅ) ಮತ್ತು (ಬ) ಪ್ರಾದೇಶಿಕ ಭಾಷಾವಿಷಯಗಳು	(ಅ) ೭೫ (ಬ) ೨೫.
೭-೪-೧೯೪೮				
ಸದರ	೩	೬	(ಬ) ಮತ್ತು (ಕ) ಭೂಮಿತಿ ಮತ್ತು ಹಿಂದಿ ಜನಮಾಹಿತಿ.	(ಬ) ೫೦ (ಕ) ೫೦

ಟಿ. ಸೂ :— ಪರೀಕ್ಷೆಯ ಮೊದಲನೆಯ ದಿನ ಉಮೇದವಾರನು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಬೇಕು.

೧೯೪೮ ಎಪ್ರಿಲ ತಿಂಗಳಲ್ಲಿ ನಡೆಯುವ ಗಂಡುಮಕ್ಕಳ ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪುರವಣಿ ಪರೀಕ್ಷೆಯ ಕಾರ್ಯಕ್ರಮ

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು (ಹಳೆ ಅಭ್ಯಾಸ ಪತ್ರಿಕೆಯಂತೆ)	ಗುಣಗಳು
ಸೋಮವಾರ	೧೦॥	೧೦-೧೫	ಪರೀಕ್ಷೆಗೆ ಕುಳಿತುಕೊಳ್ಳವಿ ಉಮೀದವಾರರ ಹಾಜರಿ ತೆಗೆದುಕೊಳ್ಳುವದು.	
೫-೪-೧೯೪೮	೧೧॥	೨	ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು.	೧೦೦
ಸದರ	೩	೬	ಆರೋಗ್ಯವಿಜ್ಞಾನ ಅಥವಾ ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಶಾಸ್ತ್ರಿಯ ವಿಷಯದ ಆರಂಭದ ಪಾಠಗಳು.	೦೦೧
ಮಂಗಳವಾರ ೬-೪-೧೯೪೮	೨೧	೨	(ಅ) ಅಂಕಗಣಿತ	(ಅ) ೧೦೦
ಸದರ	೩	೬	(ಅ) ಇತಿಹಾಸ ಮತ್ತು (ಬ) ಭೂಗೋಲ	(ಅ) ೫೦ (ಬ) ೫೦
ಬುಧವಾರ ೭-೪-೧೯೪೮	೧೧	೨	(ಅ) ಮತ್ತು (ಬ) ಪ್ರಾದೇಶಿಕ ಭಾಷೆ.	(ಅ) ೭೫ (ಬ) ೨೫
ಸದರ	೩	೬	(ಬ) ಭೂಮಿತಿ ಮತ್ತು (ಕ) ಹಿಂದಿ ಜಮಾಖರ್ಚು	(ಬ) ೫೦ (ಕ) ೫೦
ಗುರುವಾರ ೮-೪-೧೯೪೮ ಸದರ	೧೧	೨	ಐಚ್ಛಿಕ ಪ್ರಾದೇಶಿಕ ಭಾಷೆ: ಉರ್ದುದಲ್ಲಿ-ಎಲ್ಲ ಪ್ರಶ್ನೆ ಪತ್ರಗಳನ್ನು ಉರ್ದುದಲ್ಲಿ ಬಿಡಿಸುವವರಿಗೆ ಮತ್ತು ಅನಿವಾರ್ಯ ಉರ್ದು : ಎಲ್ಲ ಪ್ರಶ್ನ ಪತ್ರಗಳನ್ನು ಜಿಲ್ಲೆಯ ಪ್ರಾದೇಶಿಕ ಭಾಷೆಯಲ್ಲಿ ಬಿಡಿಸುವವರಿಗೆ.	೧೦೦

ಟಿ. ಸೂ:-ಮೊದಲನೆಯ ದಿನ ಉಮೇದವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತಗಂತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

೧೯೪೮ ಎಪ್ರಿಲ್ ತಿಂಗಳಲ್ಲಿ ನಡೆಯುವ ಅಗ್ರಿಕಲ್ಚರಲ್ ಬಾಯಸ್ ಕೋರ್ಸನ್ನು ಆರಿಸಿಕೊಂಡ ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪುರವಣಿ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ		ವಿಷಯಗಳು ಹಳೆ ಅಭ್ಯಾಸ (ಪತ್ರಿಕೆಯಂತೆ)	ಗುಣಗಳು
	ಇಂದ	ವರೆಗೆ		
ಸೋಮವಾರ ೫-೪-೧೯೪೮	೧೦॥	೧೧-೧೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
ಸದರ	೧೧॥	೨	ನಿಬಂಧ ಅಥವಾ ರಿಪೋರ್ಟ, ಪತ್ರಬರೆಹ ಮುಂತಾದವು.	೧೦೦
ಸದರ	೩	೫	(ಅ) ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು ಮತ್ತು (ಬ) ಆರೋಗ್ಯ ಶಾಸ್ತ್ರ	(ಅ) ೨೫ (ಬ) ೨೫
ಮಂಗಳವಾರ ೬-೪-೧೯೪೮	೧೧	೨	(ಅ) ಅಂಕಗಣಿತ (ಬ) ಮಹತ್ವಮಾಪನ ಮತ್ತು (ಕ) ಹಿಂದೀ ಜಮಾಖರ್ಚು.	(ಅ) ೫೦ (ಬ) ೨೫ (ಕ) ೨೫
ಸದರ	೩	೬	(ಅ) ರಾಜ್ಯ ಕಾರಭಾರ (ಬ) ಸಹಕಾರ ಮತ್ತು (ಕ) ಭೂಗೋಲ	(ಅ) ೨೫ (ಬ) ೨೫ (ಕ) ೫೦
ಬುಧವಾರ ೭-೪-೧೯೪೮	೧೧	೨	(ಅ) ಮತ್ತು (ಬ) ಪ್ರಾಂತಿಕ ಭಾಷೆ.	(ಅ) ೭೫ (ಬ) ೨೫
ಸದರ	೩	೬	(ಅ) ಒಕ್ಕಲುತನ ಮತ್ತು (ಬ) ಪ್ರಕೃತಿ ವಿಮರ್ಶೆ	(ಅ) ೩೫ (ಬ) ೩೦
ಗುರುವಾರ ೮-೪-೧೯೪೮	*	*	ಆರನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೩೫
ಸದರ	*	*	ಏಳನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೫೦

* ವೇಳೆಯಲ್ಲಿ ಸ್ಥಾನಿಕ ಕಮೀಟಿಯ ಪ್ರೆಸಿಡೆಂಟರು ತಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಓವ್ಹರಸಿಅರರೊಡನೆ ವಿಚಾರವಿನಿಯಮ ಮಾಡಿಕೊಂಡು ಗೊತ್ತುಪಡಿಸುವರು.

ಮೊದಲನೆಯ ದಿನ ಉಮೇದವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ಹಾಜರ ಇರಲೇಬೇಕು.

೧೯೪೮ ಎಪ್ರಿಲ್ ತಿಂಗಳಲ್ಲಿ ನಡೆಯುವ ಹೆಣ್ಣುಮಕ್ಕಳ ಕನ್ನಡ, ಮರಾಠಿ ಮತ್ತು ಉರ್ದು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪುರವಣಿ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು.

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು (ಹೆಚ್ಚಿ ಅಭ್ಯಾಸ ಪತ್ರಿಕೆಯಂತೆ)	ಗುಣಗಳು
ಸೋಮವಾರ ೫-೪-೧೯೪೮	೧೦॥	೧೧-೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
ಸದರ	೧೧॥	೨	ನಿಬಂಧ ಮತ್ತು ಕೈಬರಿಹ ಮುಂತಾದವು.	೧೦೦
ಸದರ	೩	೫	ಗೃಹ ವಿಜ್ಞಾನ.....	೧೦೦
ಮಂಗಳವಾರ ೬-೪-೧೯೪೮	೧೧	೨	(ಅ) ಅಂಕಗಣಿತ (ಭೂಮಿತಿ ಸಹಿತ) ಮತ್ತು (ಬ) ಮನೆತನದ ಲೆಕ್ಕಪತ್ರ.	(ಅ) ೮೦, (ಬ) ೨೦
ಸದರ	೩	೬	(ಅ) ಇತಿಹಾಸ ಮತ್ತು (ಬ) ಭೂಗೋಲ.	(ಅ) ೫೦ (ಬ) ೫೦
ಬುಧವಾರ ೭-೪-೧೯೪೮	೧೧	೨	ಪ್ರಾದೇಶಿಕ ಭಾಷೆ..... (ಅ) ಗದ್ಯ ಮತ್ತು ಪದ್ಯ. ಮತ್ತು (ಬ) ವ್ಯಾಕರಣ.	(ಅ) ೭೫ (ಬ) ೨೫
ಸದರ	೩	೬	ಪ್ರಕೃತಿ ವಿಮರ್ಶೆ ಅಥವಾ ಡ್ರಾಯಿಂಗ ಅಥವಾ ಸಂಗೀತ	೧೦೦
ಗುರುವಾರ ೮-೪-೧೯೪೮	೩	೬	ಹೊಲಿಗೆಯ ಕೆಲಸ	೧೦೦

ವಿ ಸೂ:- ಪರೀಕ್ಷೆಯ ಮೊದಲನೆಯ ದಿನ ಉಮೇದವಾರರು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೇ ಹಾಜರ ಇರಲೇಬೇಕು.

ವಾರ	ತಾರೀಖು	ವೇಳೆ	ವಿಷಯ
ಸೋಮವಾರ	೧೯-೪-೧೯೪೮	ಮುಂಜಾನೆ ೮ರಿಂದ ೧೦॥ ಸಂಜೆ ೪ರಿಂದ ೬॥	ಶಿಕ್ಷಣ—ಕಾಗದ ೧. ಸಾಯನ್ಸ
ಮಂಗಳವಾರ	೨೦-೪-೧೯೪೮	ಮುಂಜಾನೆ ೮ರಿಂದ ೧೦॥ ಸಂಜೆ ೪ರಿಂದ ೬॥	ಗಣಿತ ಭಾಷೆ—ಕಾಗದ ೧.
ಬುಧವಾರ	೨೧-೪-೧೯೪೮	ಮುಂಜಾನೆ ೮ರಿಂದ ೧೦॥ ಸಂಜೆ ೪ರಿಂದ ೬॥	ಭೂಗೋಲ/ಬೇಸಿಕ್ ಟ್ರೇನಿಂಗ ಸಂಸ್ಥೆಗೆ:-ಇತಿಹಾಸ ಮತ್ತು ಭೂಗೋಲ) ಭಾಷೆ—ಕಾಗದ ೨
ಗುರುವಾರ	೨೨-೪-೧೯೪೮	ಮುಂಜಾನೆ ೮ರಿಂದ ೧೦॥ ಸಂಜೆ ೪ರಿಂದ ೬॥	ಭೂಮಿತಿ ಮತ್ತು ಜಮಾಖರ್ಚು ಇತಿಹಾಸ. (ಬೇಸಿಕ್ ಟ್ರೇನಿಂಗ ಸಂಸ್ಥೆಗೆ—ತಾತ್ವಿಕ.)
ಶುಕ್ರವಾರ	೨೩-೪-೧೯೪೮	ಮುಂಜಾನೆ ೮ರಿಂದ ೧೦॥	ಶಿಕ್ಷಣ — ಕಾಗದ ೨. ಐಚ್ಛಿಕ ಪ್ರಾದೇಶಿಕ ಭಾಷೆ (ಗಂಡು ಉಮೇದವಾರರಿಗೆ ಮಾತ್ರ) ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು. (ವ್ಹೊಕೇಶನಲ್ ಟ್ರೇನಿಂಗ ಸೆಂಟರ, ಅಂಕಲೇಶ್ವರದವರಿಗಾಗಿ)

ಟೀಪು:—೨ನೆಯ ವರುಷದ ಶಿಕ್ಷಕ ಶಿಕ್ಷಿಕೆಯರಿಗಾಗಿ ಕಾರ್ಯಕ್ರಮವು ಒಂದೇ ಇದೆ. ೧ನೆಯ ವರುಷದ ಸೀನಿಯರ ಶಿಕ್ಷಿಕೆಯರಿಗೆ ಶುಕ್ರವಾರ ಮಾತ್ರ ಪರೀಕ್ಷೆ ಇಲ್ಲ.

ಧಾರವಾಡ
೧೭-೧-೧೯೪೮

ಬಿ. ಯಂ. ಶಿಂತ್ರಿ,
(ಸಹಿ.) ದ. ಭಾ. ಎಜ್ಯುಕೇಶನಲ್ ಇನಸ್ಪೆಕ್ಟರರ ಪರವಾಗಿ.

ಕನ್ನಡ 'ವರ್ಧಪ್ರಾಯೋಜ' ಪರೀಕ್ಷೆ ೧೯೪೪

೧ ಪರೀಕ್ಷೆಯ ವಿಷಯಗಳು:—(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ—ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು. (ಬ) ವರ್ಧಸಾಹೇಬರು ರಚಿಸಿರುವ ಪ್ರಾಕ್ಕಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆಟಿಪ್ಪಣಿ ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. ಬಹುಮಾನ:—ಈ ಮೊದಲು ಇದ್ದ ೮೦ ರೂ. ಗಳ ಒಂದೇ ಬಹುಮಾನ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೭೫ ಅಥವಾ ಅದಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು

೩. ಅರ್ಜಿಮಾಡತಕ್ಕ ಅವಧಿ:—ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೪ನೆಯ ಇಸವಿಯ ಆಗಸ್ಟ ತಿಂಗಳ ೧ನೆಯ ತಾರೀಖಿನೊಳಗಾಗಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ ದಕ್ಷಿಣಭಾಗ ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:—ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೪ನೆಯ ಇಸವಿಯ ಆಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

ಪ್ರಶ್ನೆ ಕಾಗದಗಳು:— ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು:—ಪ್ರಾಕ್ಕಾವ್ಯಮಾಲೆ ೭೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು:—ಹಳಗನ್ನಡ ನಿಬಂಧ ೩೦; ಕನ್ನಡಬಾವುಟದಲ್ಲಿಯ ಕವಿತಾಭಾಗ ೩೦; ಹಳಗನ್ನಡ ಅಪರಿಚಿತ ಗದ್ಯಭಾಗಗಳು ೨೦

ಮೂರನೆಯದು: - ಹೊಸಗನ್ನಡ ನಿಬಂಧ ೩೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ ೨೫.

ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:—(೧) ರಾಷ್ಟ್ರಕೂಟ ರಾಜನ ಶಾಸನ. ಪುಟ ೫ (೨) ಕನ್ನಡ ನಾಡಿನ ಚೆಲುವು. ಪುಟ ೧೭–೨೦ ಪೂರ್ಣ (೩) ಬಸವಣ್ಣನವರ ಗುಣ. ಪುಟ ೪೫ (೪) ಮಹಾದೇವಿಯಕ್ಕ ಪುಟ ೪೬. ೪೯ ಪೂರ್ಣ (೫) ಕನಕದಾಸರು ಪುಟ ೫೯. ೬೨ ಪೂರ್ಣ (೬) ಅರುಣೋದಯ ಪುಟ ೯೬ (೭) ಕರ್ಣಾಲದ ವೈಭವ ಪುಟ ೧೦ (೮) ಕೊಡಗು ಪುಟ ೧೦೨ (೯) ತೊಕಣಗಾಳಯೂಟ ಪುಟ ೧೦೬ (೧೦) ಕುಮಾರವ್ಯಾಸ ಪುಟ ೧೨೧ (೧೧) ಬೇಲೂರಿನ ಶಿಲಾಬಾಲಿಕೆಯರು ಪುಟ ೧೩೬,

ಈ ಕವಿತಾ ಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೨೫ ಗುಣಗಳ ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವ್ಹರ್ನಮೆಂಟ ಟ್ರೇನಿಂಗ್ ಕಾಲೇಜ
ಫಾರ್ ಮೆನ್ ಧಾರವಾಡ, ೩೧–೩–೧೯೪೪

(Sd.) R. K. Lakkundi
ಪ್ರಿನ್ಸಿಪಾಲರು

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಪಠ್ಯೇತರ ಚಟುವಟಿಕೆಗಳು

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ಪ್ಲಾಯುವುಡ್ ಫ್ಯಾಕ್ಟರಿ, ಅಗ್ರಿಕಲ್ಚರಲ್ ಫಾರ್ಮ, ಪೋಲ್ಟ್ರಿ ಫಾರ್ಮ, ಅಗ್ರಿಕಲ್ಚರಲ್ ಕಾಲೇಜ, ಹುಬ್ಬಳ್ಳಿ ಭಾರತ ಮಿಲ್, ಕೋಆಪರೇಟಿವ್ ಕಾಟನ್ ಸೋಸಾಯಿಟಿ, ಸಂಯುಕ್ತ ಕರ್ನಾಟಕದ ಲೋಟರಿ ಮುದ್ರಣಯಂತ್ರ, ದನದ ದವಾಖಾನೆ, ಬೋರ್ಸ್ಟಲ್ ಸ್ಕೂಲ್ ಮುಂತಾದವುಗಳನ್ನು ಸಂದರ್ಶಿಸಿ ಬಂದರು. ಈ ಮೂರು ತಿಂಗಳ ಅವಧಿಯಲ್ಲಿ ಆಗಾಗ್ಗೆ ತಮ್ಮ ತಮ್ಮ ಕೋಣೆಗಳನ್ನೂ ವರಾಂಡಾ, ಕಾಲೇಜದ ವರ್ಗಗಳನ್ನೂ ಸ್ವಚ್ಛ ಮಾಡಿಕೊಂಡರು.

ವಾದ ವಿವಾದ ಮಂಡಳದ ವರದಿ

ಈ ಮೂರು ತಿಂಗಳ ಅವಧಿಯಲ್ಲಿ ಶ್ರೀ. ಡಿ. ವ್ಹಿ. ಗುಂಡಪ್ಪನವರು 'ಪ್ರಾಥಮಿಕ ಶಿಕ್ಷಕರ ಕರ್ತವ್ಯ' ವನ್ನು ಕುರಿತು, ಶ್ರೀ ಕಲ್ಯಾಣಕರರು 'ಸ್ವಪ್ನಗಳು' ಎಂಬ ವಿಷಯವನ್ನು ಕುರಿತು, ಡಿ॥ ಡಾಯರೆಕ್ಟರ ಎಲ್. ಆರ್. ದೇಸಾಯಿ ಅವರು 'ವರ್ಧಾ ಶಿಕ್ಷಣ ಯೋಜನೆ ಗೊತ್ತುಗುರಿ' ಗಳನ್ನು ಕುರಿತು. ಶ್ರೀ. ಪ್ರಭು ಅವರು 'ಚಿಕ್ಕ ಉಳಿತಾಯದ ಯೋಜನೆ' ಯನ್ನು ಕುರಿತು ಭಾಷಣ ಮಾಡಿದರು. ೧೨-೨-೪೮ನೆಯ ದಿನ ಮಹಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಅಂದು ಶ್ರೀ. ದಾಬಡೆ ನರಸಿಂಹರಾಯರು ಮಹಾತ್ಮಾಜಿಯವರ ಚರಿತ್ರೆ ಹೇಳಿದರು. ಪ್ರಿನ್ಸಿಪಾಲರು 'ಕಣ್ಣೀರು' ಎಂಬ ಕೈಬರೆಹದ ಎಂಬ ಪುಸ್ತಕ ಪ್ರಸಿದ್ಧಿಸಿದರು.

ಕಾರ್ಡ ಬೋರ್ಡ ಮಾಡೆಲಿಂಗ ಶಾರ್ಟ ಟರ್ಮ ಕೋರ್ಸ

(ಧಾರವಾಡ ಸೆಂಟರ)

ತಾ. ೧೩-೨-೧೯೪೮ನೆಯ ದಿವಸ ಮೆ॥ ಎ. ಇನ್ಸ್ಪೆಕ್ಟರ, ದಕ್ಷಿಣ ಭಾಗ ಅವರೂ ತಾ. ೧೮-೨-೧೯೪೮ನೆಯ ದಿವಸ ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರಾದ ಡಾ. ಸಯಾದ್ದೀನರೂ ಡೆಪ್ಯುಟಿ ಡಾಯರೆಕ್ಟರರಾದ ಮೆ॥ ಎಲ್. ಆರ್. ದೇಸಾಯಿ ಅವರೂ ತಾ. ೫-೩-೧೯೪೮ನೆಯ ದಿವಸ ಮುಂಬಯಿ ಪ್ರಾಂತದ ಡ್ರಾಯಿಂಗ ಇನ್ಸ್ಪೆಕ್ಟರರಾದ ಮೆ॥ ಬಡಿಗೇರ ಅವರೂ ಕೇಂದ್ರಕ್ಕೆ ಭೆಟ್ಟಿಯನ್ನಿತ್ತು ಅದರ ಕೆಲಸವನ್ನು ಮನವಾರೆ ಹೊಗಳಿದರು.

—ವಿಮರ್ಶೆ—

ವೀರರಮಣಿ ಬೆಳವಡಿ ಮಲ್ಲಮ್ಮ

(ಏಕಾಂಕ ನಾಟಕ)

ಬರೆದವರು: ಶ್ರೀ. ವೀರಪ್ಪ ಅಂದಾನಪ್ಪ ಸಂಶಿ. ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೋ, ಧಾರವಾಡ. ಕ್ರೌನ್ ಅಷ್ಟ ಪತ್ರದ ೩೩ ಪುಟಗಳು. ಬೆಲೆ ಐದು ಆಣೆ.

ಈ ಪುಟ್ಟ ಹೊತ್ತಿಗೆಗೆ ಪ್ರೊ. ಶಿ. ಶಿ. ಬಸವನಾಳರು ಮುನ್ನುಡಿಯನ್ನು ಬರೆದಿದ್ದಾರೆ. ಶ್ರೀ. ಶಿವಾಜಿ ಮಹಾರಾಜನ ಸೈನ್ಯವನ್ನೂ ದಿಟ್ಟತನವನ್ನೂ ದಿಟ್ಟತನದಿಂದ ಎದುರಿಸಿದ ಕನ್ನಡ ವೀರ ರಮಣಿ ಬೆಳವಡಿ ಮಲ್ಲಮ್ಮನ ಚರಿತ್ರೆಯನ್ನು ಲೇಖಕರು ನಾಟಕರೂಪದಲ್ಲಿ ಚಿಕ್ಕ ಮಕ್ಕಳಿಗೂ ಅಭಿನಯಿಸಲು ಬರುವ ರೀತಿಯಲ್ಲಿ ಬರೆದುದು ಅಭಿನಂದನೀಯ, ಪ್ರೋತ್ಸಾಹನಿಯ.

—ರ. ಕೃ. ಲಕ್ಕುಂಡಿ

ಶ್ರೀಮಾನ್ ಎಲ್. ಆಯ್. ಆಕಳವಾಡಿ, ಬಿ. ಎ. ಬಿ. ಕಾಮ್ ಅವರಿಂದ ರಚಿಸಲ್ಪಟ್ಟು ಸರಕಾರದಿಂದ ಮಾನ್ಯತೆ ಪಡೆದ ಪುಸ್ತಕಗಳು

ಪ್ರಾಥಮಿಕ ಶಾಲೆಗಳಿಗೆ ಪಠ್ಯ ಪುಸ್ತಕ

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	ಭಾಗ	೪
ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೫
ಸಚಿತ್ರ ಪೌರನೀತಿ ಮಾಲೆ	,,	೪
ಭೂಮಂಡಲ ಪರಿಚಯ	,,	೩
ಆಧುನಿಕ ಶೈತ	,,	೨

ಪುರವಣಿ ಪುಸ್ತಕ ಹಾಗೂ ವಾಚನಾಲಯಗಳ

ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೩
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೪
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೫
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೬

ಶಿಕ್ಷಕರ ಹಾಗೂ ಬಾಲಕರ ವಾಚನಾಲಯಕ್ಕಾಗಿ

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೧
ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೨
ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೩
ಸಚಿತ್ರ ಪೌರನೀತಿ ಮಾಲೆ	,,	೧
ಸಚಿತ್ರ ಪೌರನೀತಿ ಮಾಲೆ	,,	೨
ಸಚಿತ್ರ ಪೌರನೀತಿ ಮಾಲೆ	,,	೩
ಧಾರವಾಡ ಜಿಲ್ಲೆಯ ಭೂಗೋಲ		
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೧
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೨

ರಾಮಾಶ್ರಯ ಬುಕ್ ಡಿಪೊ, ಧಾರವಾಡ

ಪ್ರಬಂಧ ಕುಸುಮಾವಲಿ

ಶ್ರೀ. ಎಸ್. ವ್ಹಿ. ಕಲ್ಮಠ, ಎಮ್. ಎ, ಬಿ. ಟಿ. ಗದಗ ಅವರು ಬರೆದುದು:—

೧ನೇ ಭಾಗದಲ್ಲಿ:—ಬರೆಹದ ಗುಟ್ಟು, ಚಿತ್ರವಾಚನ, ಕಥೆ, ಸಂಭಾಷಣೆ, ಪತ್ರಲೇಖನ, ಕಾರ್ಯಕ್ರಮ, ಸರ್ಕ್ಯುಲರ, ಜಾಹಿರಾತು, ವೃತ್ತಪತ್ರಗಳಿಗೆ ಸುದ್ದಿಯನ್ನು ಕೊಡುವದು, ಅರ್ಜಿ ಹಾಗೂ ರಿಪೋರ್ಟುಗಳು ಇವೆ. ಪುಟ ೧೮೬, ಬೆಲೆ ೧ರೂ ೮ಆ.

೨ನೇ ಭಾಗದಲ್ಲಿ:—ಅಲಂಕಾರಕ ಭಾಷೆಯ ವಾಕ್ಯಗಳನ್ನು ಸುಲಭ ಭಾಷೆಯಲ್ಲಿ ಬರೆಯುವದು, ಸಂಕ್ಷಿಪ್ತ ಸಂಗತಿಗಳನ್ನು ವಿಸ್ತರಿಸಿ ಬರೆಯುವದು. ವರ್ಣನಪರ, ಚಿಂತನಪರ, ಕಥನಪರ (ಆತ್ಮ ಚರಿತ್ರೆ) ಚರಿತ್ರೆ, ನಿಬಂಧಗಳು, ಭಾಷಣಗಳು, ಸಂಕ್ಷಿಪ್ತನಿಬಂಧಗಳು ಇವೆ. ಪುಟ ೯೦, ಬೆಲೆ:೧ರೂ. ೮ಆ.

ಎರಡೂ ಭಾಗಗಳಲ್ಲಿ ಹೆಣ್ಣು-ಗಂಡು ಹುಡುಗರ ಮುಲ್ಕೀಪರೀಕ್ಷೆಯ ಹಾಗು ಮಾಟ್ರಿಕ್ ಮೊದಲಾದ ಪರೀಕ್ಷೆಗಳ ಪ್ರಶ್ನೆಗಳಿಗೆ ಉತ್ತರಗಳಿವೆ. ಪ್ರತಿಯೊಂದು ವಿಷಯದ ಮೇಲೆ ಹೇರಳವಾದ ಅಭ್ಯಾಸಗಳಿವೆ. ಕಲಿಸುವವರಿಗೂ ಕಲಿಯುವವರಿಗೂ ಸೂಚನೆಗಳಿವೆ. ಇಡೀ ಪುಸ್ತಕವು ಅಧುನಿಕ ಅಭ್ಯಾಸ ಪದ್ಧತಿಗನುಗುಣವಾಗಿ ಬರೆಯಲ್ಪಟ್ಟು ಶಿಕ್ಷಣ ತಜ್ಞರ ಸದಭಿಪ್ರಾಯಗಳನ್ನೊಳಗೊಂಡಿದೆ. ಗ್ರಾಹಕರು ತ್ವರೆ ಮಾಡಿರಿ:—

ಪಿ. ಸಿ ಶಾಬಾದಿಮಠ, ಬುಕ್ ಡಿಪೊ, ಗದಗ

ಸತ್ಯ ಪುಸ್ತಕವೆಂದು ಮಂಜೂರಾಗಿದೆ.

ಹೊಸ ಪದ್ಧತಿಯ

ಹಿಂದೀ ಜಮಾ ಖರ್ಚು

ಭಾಗ ೧.

(ಮನೆಯ ಮತ್ತು ವ್ಯಾಪಾರಿ ಜಮಾಖರ್ಚು)

ಸರಕಾರದಿಂದ ಈ ಪುಸ್ತಕವು ಪ್ರಾಯಮರಿ ಶಾಲೆಗಳಿಗೆ ಟೆಕ್ಸ್ಟ ಬುಕ್ ಎಂದು ಮಂಜೂರಾಗಿದೆ. ಇದರಲ್ಲಿ ಕಿರ್ದಿ, ಖತಾವಣಿ, ತೇರಿಜು ಬಾಕಿಗಳ ತಾಳೆ ಉ—ಖ. ಖಾತೆ, ಲಾ ಹಾ. ಖಾತೆ, ಆಫಾವೆ. ತೊಂ. ಮಿ ಕಿರ್ದಿ, ಹುಂಡಿ, ಚೆಕ್ಕು, ಬಡ್ಡಿ ಆಕರಣೆ, ಒಕ್ಕಲ, ತನದ ಬಲವಿನ ಶಾಲೆಯ ಜಮಾ ಖರ್ಚು, (ಕಲ್ಟಿವೇಶನ್ ಶೀಟ, ಲೇಬರ ಶೀಟ ಮುಂ.) ಪ್ರಶ್ನೆಗಳು, ಪ್ರಶ್ನ ಕಾಗದಗಳು, ಅವುಗಳ ಉತ್ತರಗಳು ಇರುವವು. ಇದು ಕನ್ನಡ ೫, ೬, ೭ನೆಯ ಇಯತ್ತೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ, ಆಗ್ರಿ ಕಲ್ಚರ ಜಾಯಸ್ ಕ್ಲಾಸಿನವರಿಗೂ, ಪ್ರಾ. ಶಾ. ಪ್ರ. ಪ ಪರೀಕ್ಷೆಯ ಉಮೇದವಾರರಿಗೂ ಟ್ರೇನಿಂಗ ಕಾಲೇಜ ಶಿಕ್ಷಕ ವಿದ್ಯಾರ್ಥಿಗಳಿಗೂ ಇದು ಬಹು ಉಪಯುಕ್ತವಿದೆ. ಬೆಲೆ: ೧ರೂ.

(೨) ಆರಂಭದ ಜಮಾ ಖರ್ಚ(೪ನೆಯ ಇಯತ್ತೆಯವರೆಗೆ) ಬೆಲೆ: ೩ಆಣೆ

(೩) ಅಂಗಸಾಧನ ಶಿಕ್ಷಕ (P. T. Book) ಬೆಲೆ: ೪ಆಣೆ

(೪) ಗಣಿತ ಸಾರಸಂಗ್ರಹ(ಹೊಸ ಪದ್ಧತಿಯ ಗಣಿತವಿರುವದರಿಂದ ಮುಲ್ಕೀ ಪರೀಕ್ಷೆಗೆ ಸಹಾಯಕವಿದೆ. ಬೆಲೆ: ೬ಆಣೆ

ವಿಳಾಸ:—ರಾ. ಸಿ. ಸಜ್ಜನ ಮಾಸ್ತರ,
ಜೋರಾಪುರಪೇಟೆ, ವಿಜಾಪುರ

---

printed by R. G. Hukkeri at the Vasant printing Works, Dharwar. published by R. K. Lakkundi Esqr., B. A. B. T. principal Training College For Men, Dharwar at his, office 7403—46—1375.

1948 – 49

ಸ್ಥಾಪನೆ : ೧೮೬೫ ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೪೯

ಶತಮಾನೋತ್ತರ ಬೆಳ್ಳಿ ಹಬ್ಬ
(ಎಪ್ರಿಲ್ ೧೯೪೯ ೨೦ನ)
ವರ್ಷ 1948

ಡಿ. ಚನ್ನಬಸಪ್ಪನವರು
(೧೮೩೩–೧೮೮೧)
ನೆಯ ಸಂಪುಟ

ಕನ್ನಡ ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೨

ಸ್ಥಾಪನೆ : ೧೮೬೫ ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ ಶತಮಾನೋತ್ಸವ ಬೆಳ್ಳಿ ಹಬ್ಬದ ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ಸವ ಬೆಳ್ಳಿ ಹಬ್ಬ
(ಅಕ್ಟೋಬರ್ ೧೯೮೯ ರಿಂದ)
ವರ್ಷ

ಡಿ. ಚನ್ನಬಸಪ್ಪನವರು
(೧೮೮೩-೧೮೮೧)
ಸಂಪಾದಕ



ಶಿಕ್ಷಣ ಸಂತನ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ - ೮

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು :

ರಂಗೋ ಕೃಷ್ಣ ಲಕ್ಕುಂಡಿ



(ಧಾರವಾಡದಲ್ಲಿಯ ಕನ್ನಡ ಸಂಶೋಧನ ಸಂಸ್ಥೆಯ ಕೃಪೆಯಿಂದ)

ಪಟ್ಟದ ಕಲ್ಲಿನ ಪಾಪನಾಥ ಮತ್ತು ವಿರುಪಾಕ್ಷ ದೇವಾಲಯಗಳ ಗೋಪುರಗಳು

ಬಿಡಿ ಸಂಚಿಕೆ
೬ ಆಣೆ

ಜೂನ ೧೯೪೮

ವಾರ್ಷಿಕ ಚಂದಾ
೪ ರೂ.



ಕನ್ನಡ ಪ್ರಾಥಮಿಕ ಶಿಕ್ಷಣ ಸಂಪಾದಕ ಮಂಡಳ

ಆರ್. ವ್ಹಿ. ದೇಸಾಯಿ, ಬಿ. ಎ. ಬಿ. ಟಿ. ಪ್ರಿನ್ಸಿಪಾಲ್, ಸರಕಾರಿ ಬೇಸಿಕ್ ಟ್ರೇನಿಂಗ ಸೆಂಟರ್ ವಿ. ಎನ್. ಸಾನೆ. ಎಜ್ಯು. ಇನಸ್ಪೆಕ್ಟರ್ (ಎಕ್ಸ್ ಆಫಿಸಿಯೊ ಚೇರಮನ್) ಆರ್. ಕೆ. ಲಕ್ಕುಂಡಿ. ಬಿ. ಎಂ, ಬಿ. ಟಿ. ಪ್ರಿನ್ಸಿಪಾಲ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ. ಮಾಯ್. ಪಿ. ನಾಡಕರ್ಣಿ. ಬಿ. ಎ., ಬಿ. ಟಿ. ಲೇಡಿ ಸುಪರಿಂಟೆಂಡೆಂಟ, ಸರಕಾರಿ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಪರಿವಿಡಿ

೧.	ಸಂಪಾದಕೀಯ		೧
೨.	ಸಂದೇಶಗಳು		೨
೩.	ಗ್ರಂಥವಿಮರ್ಶೆ		೪
೪.	ಶಿಕ್ಷಣ ತಜ್ಞ ಗಾಂಧೀಜಿಯವರು	ಡಾ. ಕೆ. ಜಿ. ಸೈಯದ್ಬೈಗ	೫
೫.	ಮುಗಿಲರಸಿ (ಕವನ)	ಶ್ರೀ. ಮಿರ್ಜ ಅಣ್ಣಾಜಾಯರು	೬
೬.	ಹಿಂದುಸ್ತಾನಿಯು ಭಾರತೀಯರ ಐಕ್ಯದ ಸಾಧನ (ಭಾಷಣ)	ಶ್ರೀ. ವಿ ಎನ್. ಸಾನೆ	೯
೭.	ಸ್ತ್ರೀಯರಿಗೆ ಮೂಲ ಶಿಕ್ಷಣ	ಶ್ರೀ. ಆರ್. ಎಲ್. ಪಾಟೀಲ	೧೦
೮.	ಭಾರತಾಂಬೆಯ ಕಂಬನಿ (ಕವನ)	ಶ್ರೀ. ಶಿ. ಭೀ. ಹುಡೇದ	೧೩
೯.	ವರ್ಧಾ ರಾಷ್ಟ್ರೀಯ ಶಿಕ್ಷಣ	ಶ್ರೀ. ಆರ್. ವ್ಹಿ. ದೇಸಾಯಿ	೧೪
೧೦.	ಅಖಿಲರಿಗೂ ದೃಷ್ಟಿಮೂಲಕ ಶಿಕ್ಷಣ	ಶ್ರೀ. ಜಿ. ಕೆ. ಅಠಲೆ	೨೦
೧೧	ಕನ್ನಡ ಟೆಕ್ಸ್ಟಬುಕ್ ಕಮೀಟಿಯಿಂದ ಮಂಜೂರಾದ ಪುಸ್ತಕಗಳು		೨೩
೧೨.	ಸಮವಾಯ ಪದ್ಧತಿಯ ಪಾಠದ ಟಿಪ್ಪಣಿ	ಶ್ರೀ. ಕ. ಜಿ. ಪಾಸಣ್ಣವರ	೨೪
೧೩.	ವರ್ಧಾ ರಾಷ್ಟ್ರೀಯ ಶಿಕ್ಷಣ ಸಮ್ಮೇಲನ (ವಿಕ್ರಮ)		೩೦
೧೪.	ಚಿತ್ರಗಳು		೩೩--೩೬

ಪ್ರಧಾನ ಸಂಪಾದಕರು: ರಂ. ಕೃ. ಲಕ್ಕುಂಡಿ

* * *

ಸಂಪುಟ ೮೮	ಜೂನ್ ೧೯೪೮	ಸಂಚಿಕೆ ೧

ಸಂಪಾದಕೀಯ

●

ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಸೇವೆಯನ್ನು ಮಾಡುತ್ತಲಿರುವ ಈ 'ಕನ್ನಡ ಪ್ರಾಥಮಿಕ ಶಿಕ್ಷಣ'ಕ್ಕೆ ೮೭ ವರುಷಗಳು ತುಂಬಿದವು. ಇದು ತನ್ನ ೮೮ನೆಯ ಹುಟ್ಟುಹಬ್ಬದ ಪ್ರಸಂಗದಲ್ಲಿ ಕನ್ನಡ ನಾಡಿನ, ಕನ್ನಡ ನುಡಿಯ, ಕನ್ನಡ ಸಂಸ್ಕೃತಿಯ ಪೋಷಣೆಗಾಗಿ ಕನ್ನಡ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹುರುಪಿನಿಂದ ಮೊದಲಿಗಿಂತಲೂ ಹೆಚ್ಚಾಗಿ ಸೇವೆ ಸಲ್ಲಿಸಲು ಬದ್ಧಕಂಕಣನಾಗಿದೆ. ಇಲ್ಲಿ ಇಂದಿನ ಈ ಸುಂದರ ರೂಪಧಾರಣೆಯ ಪೂರ್ವದಲ್ಲಿಯ ಇದರ ಹಿನ್ನೆಲೆಯನ್ನು ಓದುಗರಲ್ಲಿ ನಿವೇದಿಸುವುದು ಅಪ್ರಸ್ತುತವಾಗಲಾರದು.

ನಮ್ಮ ಕಾರ್ಯಾಲಯದಲ್ಲಿಯ ಸದ್ಯದ 'ರೆಕಾರ್ಡು'ಗಳ ಮೇರೆಗೆ, ೧೮೬೬ ಮೇ ತಿಂಗಳಲ್ಲಿ ಬೆಳಗಾಂವಿಯಲ್ಲಿ ಇದರ ಜನನವಾಯಿತೆಂದೂ ಆಗ ಇದಕ್ಕೆ **'ಮತಪತ್ರಿಕೆ'** ಎಂಬ ಹೆಸರು ಇತ್ತೆಂದೂ, ಆ ನಂತರ ಇದಕ್ಕೆ ೧೮೭೭ ಅಕ್ಟೋಬರದಿಂದ **'ಶಾಲಾಪತ್ರಿಕೆ'** ಎಂಬ ಹೆಸರು ಬಂದಿತೆಂದೂ, ೧೯೨೯ ಎಪ್ರಿಲ್ ತಿಂಗಳಲ್ಲಿ ಇದರಲ್ಲಿ **'ಕನ್ನಡ ಶಿಕ್ಷಕ'**ಯ ಸಮಾವೇಶವಾಗಿ ಇದಕ್ಕೆ **'ಕನ್ನಡ ಪ್ರಾಥಮಿಕ ಶಿಕ್ಷಣ'** ಎಂಬ ಹೊಸ ಹೆಸರನ್ನಿರಿಸಲಾಯಿತೆಂದೂ ತಿಳಿದುಬರುತ್ತದೆ. ಈ ಪತ್ರಿಕೆಯ ಹೆಸರಿನಲ್ಲಿ ಈ ರೀತಿಯಾಗಿ ಪ್ರಗತಿಯುಂಟಾಯಿತು.

೧೮೬೬ ರಿಂದ ಸಪ್ಟಂಬರ ೧೮೭೦ರವರೆಗೆ ಇದು ಲಿಥೊ ಪದ್ಧತಿಯಂತೆ ಕೈಯಿಂದ ಬರೆಯಲ್ಪಟ್ಟು ಮುದ್ರಿತವಾಗುತ್ತಿತ್ತು. ನಂತರ ೧೮೭೦ ಅಕ್ಟೋಬರದಿಂದ ಈಗಿನಂತೆ ಮುದ್ರಿತವಾಗತೊಡಗಿತು. ಈ ಪ್ರಕಾರ ಇದರ ಮುದ್ರಣದಲ್ಲಿಯೂ ಪ್ರಗತಿಯಾಗಿದೆ. ಇದರ ಪ್ರಕಾಶನ ಸ್ಥಳದಲ್ಲಿಯೂ ಪ್ರಗತಿಯಾಗಿದೆ. ಪ್ರಾರಂಭದಿಂದ ೧೮೭೭ ನವಂಬರದ ವರೆಗೆ ಬೆಳಗಾವಿಯಲ್ಲಿ ಪ್ರಕಾಶನಗೊಳ್ಳುತ್ತಿತ್ತು, ೧೮೭೭ ಡಿಸೆಂಬರದಿಂದ ಧಾರವಾಡದಲ್ಲಿ ಪ್ರಕಾಶಿತವಾಗತೊಡಗಿತು; ಹೀಗೆ ಹೆಸರು, ಮುದ್ರಣ ಹಾಗೂ ಪ್ರಕಾಶನ ಸ್ಥಳದಲ್ಲಿ ಪ್ರಗತಿಯನ್ನು ಹೊಂದಿದುದರ ಇದರ ಸಂಕ್ಷಿಪ್ತ ಹಿನ್ನೆಲೆಯನ್ನು

ಇಲ್ಲಿ ಇಂದು ನಾವು ಕೊಟ್ಟಿದ್ದೇವೆ. ಇದರ ಹೆಚ್ಚು ವಿವರವಾದ ಇತಿಹಾಸವನ್ನು ಸಮಯಾನುಸಾರ ಒಂದು ಯೋಗ್ಯ ಸಂದರ್ಭದಲ್ಲಿ ಓದುಗರ ಮುಂದಿರಿಸಿ ಅವರ ಕುತೂಹಲವನ್ನು ತಣಿಸುತ್ತೇವೆ.

೧೯೨೯ ಎಪ್ರಿಲ್ ತಿಂಗಳಿಂದ **ಕನ್ನಡ ಪ್ರಾಥಮಿಕ ಶಿಕ್ಷಣ** ಎಂಬ ಈ ಹಸರಿನಿಂದಲೇ ಇದು ಕನ್ನಡ ನಾಡಿನ ಸರ್ವಾಂಗ ಸುಂದರ ಏಳ್ಗೆಗೆ ಮೂಲಭೂತವಾದ ಪ್ರಾಥಮಿಕ ಶಿಕ್ಷಣದ ಕಾರ್ಯದಲ್ಲಿ ತನ್ನ ಶಕ್ತಿಮೀರಿ ದುಡಿಯುತ್ತ ಇಂದಿನ ಸ್ಥಿತಿಗೆ ಬಂದು ತಲ್ಪುವ ಪೂರ್ವದಲ್ಲಿ ಇದರ ಅಂದ ಚೆಂದ, ಆಕಾರ ಪ್ರಕಾರ ಅಷ್ಟೊಂದು ಮೋಹಕ ಹಾಗೂ ಚಿತ್ತಾಕರ್ಷಕವಾಗಿರಲಿಲ್ಲವೆಂದೆನ್ನಲು ಅಡ್ಡಿ ಇಲ್ಲ. ೧೯೪೩ ಮೇ ತಿಂಗಳಲ್ಲಿ ದ್ವಿತೀಯ ವಿಶ್ವಮೇಧದ ಜಳಕ್ಕೆ ಕಮರಿ ಹೋಗುವ ಸ್ಥಿತಿಯೆ ಇದಕ್ಕೆ ಬಂದಿತ್ತು. ಆದಾಗ್ಯೂ ತನ್ನ ಆಕಾರ ಬದಲಾಯಿಸಿಕೊಂಡು ತ್ರೈಮಾಸಿಕವಾಗಿಯಾದರೂ ತಾನು ಬಾಳಿ ಬಂದುದು ಸಂತೋಷದ ಸಂಗತಿಯೆ ಸರಿ.

ತನ್ನ ಈ ಮೊದಲಿನ ೮೭ ವರುಷಗಳ ಜೀವಾವಧಿಯಲ್ಲಿ ಇಷ್ಟು ವಿಶಾಲವಾಗಿ ದೃಢಕಾಯವಾಗಿ ಹೊರಡದ ಈ ಪತ್ರಿಕೆಯು ಈಗ ಈ ರೂಪ ಹಾಗೂ ಆಕಾರದಲ್ಲಿ ಪ್ರಕಟವಾಗುವ ಯೋಗವು ದೊರೆತುದು ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಮತ್ತು ಆ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಹೋಗುವುದಕ್ಕೆ **ಮೂಲಶಿಕ್ಷಣ**ವೇ ಸಾಧನವೆಂದು ಉಪದೇಶಿಸಿದ ಮಹಾತ್ಮಾ ಗಾಂಧಿಯವರಿಂದಲೇ ಎಂದು ಹೇಳಿದಲ್ಲಿ ಅತಿಶಯೋಕ್ತಿಯಾಗಲಾರದು. ಇದರ ಮೂಲ ಶ್ರೇಯಸ್ಸು ಆ ಮಹಾತ್ಮರಿಗೆ ಸಲ್ಲುವುದಾದರೂ ಅವರ ಜಗನ್ಮಾನ್ಯವಾದ ತತ್ವಗಳಿಂದ ಸ್ಫೂರ್ತಿಗೊಂಡು, ಅವುಗಳನ್ನು ಈ ಪ್ರಾಂತದಲ್ಲಿ ಕೃತಿಯ ರೂಪದಲ್ಲಿ ತರಲು ಅವಿರತ ಪ್ರಯತ್ನಗಳಲ್ಲಿ ತೊಡಗಿರುವ ಮುಂಬಯಿ ಸರಕಾರದ ಶಿಕ್ಷಣ ಖಾತೆಯ ವರಿಷ್ಠ ಅಧಿಕಾರಿಗಳಿಗೂ ಅದು ಬಹುಮಟ್ಟಿಗೆ ಸಲ್ಲುವುದು.

'ಕನ್ನಡ ಪ್ರಾಥಮಿಕ ಶಿಕ್ಷಣವು' ಇನ್ನು ಮುಂದೆ ಯಾವ ಆಕಾರ ಹಾಗೂ ರೀತಿಯಲ್ಲಿ ನಡೆಯುವುದೆಂಬುದರ ಸೂಚನೆಯನ್ನು ಇದರ ಹಿಂದಿನ ಸಂಚಿಕೆಯಲ್ಲಿ ಕೊಡಲಾಗಿತ್ತು. ಆ ಮೇರೆಗೆ ಇದು ವಿಷಯ ವೈವಿಧ್ಯಗಳೊಂದಿಗೆ ಹೊರಟಿದೆಯೊ ಇಲ್ಲವೊ ಎಂಬುದನ್ನು ನಿರ್ಣಯಿಸುವುದು ಓದುಗರಿಗೆ ಸೇರಿದ್ದು. ಆದರೆ ಆ ಸೂಚನೆಗಳು ನಮಗೆ ಮಾರ್ಗದರ್ಶಕವಾಗಿವೆಯೆಂದೂ ಅವುಗಳಂತೆ ನಾವು ನಡೆಯಲು ಯತ್ನಿಸುತ್ತೇವೆಂದೂ ಇಲ್ಲಿ ಹೇಳಬಯಸುತ್ತೇವೆ. ಮತ್ತು ಕನ್ನಡ ಪ್ರಾಥಮಿಕ ಶಿಕ್ಷಣದ ಮುನ್ನಡೆಯ ಶ್ರೇಯಸ್ಸಿಗೆ ಅಧಿಕಾರಿ ವರ್ಗದ, ಶಿಕ್ಷಕ ಬಂಧುಗಳ, ಕನ್ನಡಿಗರ, ಕನ್ನಡಾಭಿಮಾನಿಗಳ ಸಹಕಾರ, ಪ್ರೋತ್ಸಾಹಗಳು ದೊರೆಯುವವೆಂದು ಆಶಿಸುತ್ತೇವೆ.

ಕೃತಜ್ಞತೆ:

ನಮ್ಮ ಬಿನ್ನಹಕ್ಕೆ ಮನ್ನಣೆಯಿತ್ತು ಕನ್ನಡ ಪ್ರಾಥಮಿಕ ಶಿಕ್ಷಣದ ಮುನ್ನಡೆಗೆ ಶ್ರೇಯಸ್ಸನ್ನು ಕೋರುವ ಹಾಗೂ ಪ್ರೋತ್ಸಾಹ-ಸ್ಫೂರ್ತಿ-ಸಂದೇಶಗಳನ್ನು ನಮಗೆ ಕಳುಹಿದ ಮುಂಬಯಿ ಶಿಕ್ಷಣ ಖಾತೆಯ ಸಲಹೆಗಾರರಾದ ಡಾ। ಕೆ. ಜಿ. ಸಯಾದೀನ ಅವರಿಗೂ, ಮುಂಬಯಿ ಶಿಕ್ಷಣ ಖಾತೆಯ ಡೈರೆಕ್ಟರರಾದ ಶ್ರೀ. ಡಿ. ಸಿ. ಪಾವಟೆ ಅವರಿಗೂ, ನಮಗೆ ಸುಂದರ ಪಡಿಯಚ್ಚನ್ನು ಉಪಯೋಗಿಸಲು ಕೊಟ್ಟುದಕ್ಕಾಗಿ ಮತ್ತು ಇನ್ನು ಮುಂದೆಯೂ ಕೊಡುತ್ತ ಹೋಗುವ ಆಶ್ವಾಸನವಿತ್ತಿರುವದಕ್ಕಾಗಿ ಕನ್ನಡ ಸಂಶೋಧನ ಸಂಸ್ಥೆಯ ಡೈರೆಕ್ಟರರಾದ ಶ್ರೀ. ಪಂಚಮುಖಿಯವರಿಗೂ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಸಂದೇಶಗಳು

'ಕನ್ನಡ ಪ್ರಾಥಮಿಕ ಶಿಕ್ಷಣ'ಕ್ಕೆ ನಾನು ಸಕಲ ಯಶಸ್ಸನ್ನು ಕೋರುತ್ತೇನೆ. ಮತ್ತು ಅದು ತನ್ನ ಪ್ರದೇಶದ ಶಿಕ್ಷಕರಲ್ಲಿ ಹೊಸ ಅಭಿರುಚಿಯನ್ನೂ ವ್ಯಾವಸಾಯಿಕ ಜೀವನ ಶಕ್ತಿಯನ್ನೂ ಉಜ್ಜ್ವಗಿಸುವುದೆಂದು ಆಶಿಸುತ್ತೇನೆ. ಇವು ಶಿಕ್ಷಕರ ವಿಚಾರಗಳನ್ನೂ ಸಮಸ್ಯೆಗಳನ್ನೂ ಆಸೆ ಆಕಾಂಕ್ಷೆಗಳನ್ನೂ ಹೊರಹೊಮ್ಮಿಸುವಂತಹ ಜ್ಞಾನಪೂರಿತ ಪತ್ರಿಕೆಗಳಾಗಬೇಕೆಂದು ನನ್ನ ಹಂಬಲ.

ಮುಂಬಯಿ, **ಕೆ. ಜಿ. ಸಯಾದೀನ.**
೨೩-೪-೧೯೪೮ ಮುಂಬೈ ಸರಕಾರದ ಶಿಕ್ಷಣ ಸಲಹೆಗಾರರು

'ಕನ್ನಡ ಪ್ರಾಥಮಿಕ ಶಿಕ್ಷಣ'ವು ಶಿಕ್ಷಕರ ಸೇವೆಗಾಗಿ ಹೊಸ ಜೀವನವನ್ನು ತಾಳಿದೆಯೆಂಬುದನ್ನೂ ಶಿಕ್ಷಕರಿಗೆ ಬೇಕಾದ ಶಿಕ್ಷಣ ಮತ್ತು ಇತರ ಉಪಯುಕ್ತ ಜ್ಞಾನದ ಬಗ್ಗೆ ಲೇಖನಗಳನ್ನೊಳಗೊಂಡು ಪ್ರತಿ ತಿಂಗಳ ಹೊರಡುವುದೆಂಬುದನ್ನೂ ಕೇಳಿ ಸಂತೋಷವಾಗಿದೆ. ಈ ಪತ್ರಿಕೆಯ ಮುಖಾಂತರ ಕರ್ನಾಟಕದೊಳಗಿನ ಸಕಲ ಪ್ರಾಥಮಿಕ ಶಾಲೆಗಳ ಮಟ್ಟವನ್ನು ಉನ್ನತಗೊಳಿಸಲು ಸಾಧ್ಯವಾಗುವುದೆಂದು ನಾನು ಆಶಿಸುತ್ತೇನೆ. ಈ ಕಾರ್ಯದಲ್ಲಿ ನಿಮಗೆ ಯಶಸ್ಸನ್ನು ಕೋರುತ್ತೇನೆ.

ಸದ್ಯಕ್ಕೆ ಶಿಕ್ಷಣವು ಸಂಕ್ರಮಣಾವಸ್ಥೆಯಲ್ಲಿದೆ. ಶಿಕ್ಷಣದ ವಿಸ್ತಾರ ಹಾಗೂ ಯೋಗ್ಯತೆಯ ಸುಧಾರಣೆ, ಇವೆರಡರ ಸಮಸ್ಯೆಗಳನ್ನು ಏಕ ಕಾಲಕ್ಕೆ ಬಿಡಿಸಬೇಕಾಗಿದೆ. ಒತ್ತಾಯದ ಶಿಕ್ಷಣವನ್ನಂತೂ ಇಡೀ ಪ್ರಾಂತದಲ್ಲಿ ಪ್ರಾರಂಭಿಸಲಾಗಿದೆ ಮತ್ತು ಶಿಕ್ಷಕನು ಹಣದ ಅಪವ್ಯಯವಾಗದಂತೆ ನೋಡಿಕೊಳ್ಳಲು ಹೆಚ್ಚು ಜಾಗರೂಕನಾಗಬೇಕಾಗಿದೆ. ನಿಜವಾಗಿಯೂ ಶಿಕ್ಷಣದ ಧ್ಯೇಯವಾವುದು ? ಸಾಕ್ಷರತೆಯು ಸಾಲೆಯ ಧ್ಯೇಯವೇ? ಓದು ಬರೆಹಗಳನ್ನು ಕಲಿಯುವ ಅಧಿಕಾರವು ಪ್ರತಿಯೊಬ್ಬನಿಗೂ ಇರಬೇಕು. ಖಾನೆಸುಮಾರಿಯ ಪರೀಕ್ಷಣೆಯಲ್ಲಿ ಓದು ಬರೆಹ ಬಂದವರೆಲ್ಲರೂ ಸುಶಿಕ್ಷಿತರೆಂದು ಬಗೆಯುವುದು ಸಾಮಾನ್ಯವಾಗಿ ತಪ್ಪಿನ ಸಂಗತಿಯಾಗಿದೆ. ಓದಲಿಕ್ಕೂ ಬರೆಯಲಿಕ್ಕೂ ಬಾರದಂತಹ ಅನೇಕ ಜನರಿದ್ದಾರೆ; ಆದರೆ ಅವರಲ್ಲಿ ಉಪಯುಕ್ತ ಜ್ಞಾನದ ಸಂಪದ್ಭಾಂಡಾರವಿದೆ. ಅವರು ಒಳ್ಳೆ ಬೆಳೆಯನ್ನು ಬೆಳೆಯಬಲ್ಲರು ಮತ್ತು ಜೆನ್ನಾಗಿ ವ್ಯಾಪಾರವನ್ನು ಮಾಡಬಲ್ಲರು. ಅವರು ಗೃಹೋದ್ಯೋಗಗಳಲ್ಲಿ ನೈಪುಣ್ಯವನ್ನು ಪಡೆದವರಿದ್ದಾರೆ. ಸಹಕಾರ, ಆದರಾಥಿತ್ಯ, ನೈತಿಕ ಆಚರಣೆಗಳಲ್ಲಿ ಅವರು ಶಿಕ್ಷಿತರಿಗಿಂತ ಉತ್ತಮರಾಗಿರಬಹುದು. ಪ್ರತಿಯೊಂದು ಸಾಲೆಯ ಧ್ಯೇಯವು ಮಕ್ಕಳಲ್ಲಿದ್ದ ಅತ್ಯುತ್ತಮ ಗುಣಗಳನ್ನು ಪ್ರಕಟಗೊಳಿಸುವುದಾಗಿದೆ.

ಮಕ್ಕಳ ಮೆದುಳಿನ, ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯೆ ಸಾಲೆಯ ಧ್ಯೇಯವಾಗಿದೆ. ಜಾಣ ಶಿಕ್ಷಕನು ಮೊದಲು ಮಗುವಿನ ಹಾಗೂ ಅವನ ಸುತ್ತಲಿನ ಪರಿಸ್ಥಿತಿಯನ್ನು ಲಕ್ಷಿಸುತ್ತಾನೆ; ಮತ್ತು ಆ ನಂತರ ಪುಸ್ತಕಗಳ ಕಡೆಗೆ ದೃಷ್ಟಿ ಹಾಕುತ್ತಾನೆ. ವಿಶೇಷತಃ ಹಳ್ಳಿಯ ಶಾಲೆಗಳಲ್ಲಿ ಶಿಕ್ಷಕನು ಹಳ್ಳಿಯ ಸಾಮಾಜಿಕ ಹಾಗೂ ಆರ್ಥಿಕ ಆವಶ್ಯಕತೆಗಳನ್ನು ಪೂರೈಸಲು ನೆರವಾಗಬೇಕು. ಹಳ್ಳಿಯ ಜೀವನದ ಸುಧಾರಣೆಯಲ್ಲಿ ಅಭಿರುಚಿಯನ್ನು ತೋರಿಸುವ ಶಿಕ್ಷಕನು ಉತ್ತಮ ಪರೀಕ್ಷಾಪರಿಣಾಮಗಳನ್ನು ತೋರಿಸಬಲ್ಲನೆಂದು ಅನುಭವವು ತೋರಿಸಿದೆ. ಇಂಥ ಶಿಕ್ಷಕನು ಸದಾ ಜಾಗೃತನೂ ಯೋಗ್ಯತಾವಂತನೂ ಇರುತ್ತಾನೆ. ಅವನ ವರ್ಗದಲ್ಲಿಯ ಬಾಲಕರು ಸ್ಫೂರ್ತಿಯನ್ನು ಪಡೆಯುವರು ಮತ್ತು ಉತ್ತರಿಸುವರು. ಪಾಲಕರು ಶಿಕ್ಷಕನಿಗೆ ನೆರವನ್ನೀಯಲು ಮುಂದೆ ಬರುವರು. ವರ್ಗದ ಹಾಜರಿಯಲ್ಲಿ ಹೆಚ್ಚಳವು ಕಾಣುವುದು. ಶಾಲೆಯ ಪ್ರಗತಿಯು ಪ್ರತಿಯೊಬ್ಬರಿಗೂ ಸಂಬಂಧಪಟ್ಟುದಾಗುವುದು.ಆದರೆ ವಿದ್ಯಾರ್ಥಿಗಳ ಅಭಿರುಚಿಯನ್ನು ಹುರಿದುಂಬಿಸುವುದಕ್ಕಾಗಿ ಅವರ ಜೀವನಕ್ಕೆ ಜೆನ್ನಾಗಿ ಹೊಂದಿಕೊಂಡಿರುವ ಪಾಠಗಳು ವರ್ಗದಲ್ಲಿ ನಡೆಯದಿದ್ದರೆ, ಮಕ್ಕಳೂ ಶಿಕ್ಷಕನೂ ಪಾಠಗಳಲ್ಲಿಯ ಶಬ್ದಗಳ ಹಾಗೂ ಚಿಹ್ನಗಳ ಕಟ್ಟಿರುಳ ಕಾಡಿನಲ್ಲಿ ಬಹುಕಾಲ ಅಲೆಯಬಹುದು; ಆದರೆ ಪ್ರಗತಿ ಮಾತ್ರ ಸಾಧಿಸದು.

ಪುಣೆ. **ಡಿ. ಸಿ. ಪಾವಟೆ.**
೨೩-೪-೪೮. ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್,
ಮುಂಬಯಿ ಪ್ರಾಂತ.

ಗ್ರಂಥ ವಿಮರ್ಶೆ

ರಾಷ್ಟ್ರಪತಿಗಳು: ಕಾಂಗ್ರೆಸ್ಸಿನ ರನ್ನಮಹೋತ್ಸವ ಸಂಚಿಕೆ. ಬರೆದವರು: ಶ್ರೀ. ಬುರ್ಲಿ ಬಿಂದುಮಾಧವ ಅವರು. ಪ್ರಕಾಶಕರು: ಬಿ. ಜಿ. ಅವಧಾನಿ, ಮಿಂಚಿನ ಬಳ್ಳಿ ಚಾವಡಿ, ಧಾರವಾಡ. ಪ್ರಕಾಶನ ದಿನಾಂಕ, ಸ್ವಾತಂತ್ರ್ಯದಿನ ೧೯೪೭. ಕ್ರೌ. ೧ದ ೩೬೧ ಪುಟಗಳು. ಬೆಲೆ: ೪ರೂಪಾಯಿ.

ಯಾವದೊಂದು ಜನಾಂಗದ ಇತಿಹಾಸವೆಂದರೆ ಆ ಜನಾಂಗದಲ್ಲಿಯ ಸುಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆ ಎಂದು ಹೇಳಲಾಗುತ್ತದೆ. ಈ ದೃಷ್ಟಿಯಿಂದ ಈ ಪುಸ್ತಕವು ಹಿಂದುಸ್ತಾನ (ಭಾರತವು ಪಾಕಿಸ್ತಾನ ಮತ್ತು ಹಿಂದುಸ್ತಾನ ವೆಂದು ವಿಭಜಿಸಲ್ಪಡುವ ಪೂರ್ವದಲ್ಲಿಯ ಹೆಸರು)ದಲ್ಲಿಯ ೪೬ ಸುಪ್ರಸಿದ್ಧ ಸ್ತ್ರೀ ಪುರುಷರ ಸಂಕ್ಷಿಪ್ತ ಜೀವನ ಚರಿತ್ರೆಯನ್ನೊಳಗೊಂಡಿದೆ. ಇದರಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ಭಾರತ ಜನತೆಯಿಂದ ಗಳಿಸಬಹುವಾಗಿದ್ದ ಅತ್ಯಂತ ಗೌರವಯುಕ್ತ ಸ್ಥಾನವನ್ನು —ಕಾಂಗ್ರೆಸ ಅಧ್ಯಕ್ಷ ಪದವಿಯನ್ನು —ಒಮ್ಮೆ ಅಥವಾ ಅದಕ್ಕೂ ಹೆಚ್ಚುಸಲ ಅಲಂಕರಿಸಿ ರಾಷ್ಟ್ರ ಸೇವೆಯನ್ನು ಮಾಡಿರುವಂಥವರು. ಇದರಲ್ಲಿ ವರ್ಣಿಸಲಾದ ವ್ಯಕ್ತಿಗಳ ಘನತೆ, ಮಹಿಮೆಗಳ ಬಗ್ಗೆ ಯಾವ ಸಂದೇಹವೂ ಇಲ್ಲ. ಯಾಕಂದರೆ, ಅವರೆಲ್ಲರೂ ತಮ್ಮ ತನು-ಮನ-ಧನಗಳನ್ನು ಸವೆಸಿ ನಿಸ್ಸ್ವಾರ್ಥ ಬುದ್ಧಿಯಿಂದ ಅವಿರತ ಶ್ರಮ ಪಟ್ಟುದರ ಫಲವಾಗಿಯೇ ಭಾರತೀಯರಾದ ನಮಗೆ ರಾಜಕೀಯ ಸ್ವಾತಂತ್ರ್ಯವು ದೊರೆತಿರುವದು. ಅವರ ಮುಖಂಡತ್ವದಿಂದಲೇ ನಾವೆಲ್ಲರೂ ಇಂದು ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಿಸುತ್ತಿರುವದು. ಜನಾಂಗದಲ್ಲಿ ರಾಷ್ಟ್ರಪ್ರೇಮವನ್ನು ಬೆಳಿಸಲಿಕ್ಕಾಗಲಿ ಅಥವಾ ಹಿಂದಿನ ರಾಜನೀತಿಯ ಸಂಪೂರ್ಣ ಜ್ಞಾನಮಾಡಿಕೊಡಲಿಕ್ಕಾಗಲಿ ಇಂಥ ಮಹನೀಯರ ಜೀವನ ಚರಿತ್ರೆಯನ್ನು ತಿಳಿಸಿಕೊಡುವದು ಅತ್ಯವಶ್ಯವೆಂದು ಬೇರೆ ಹೇಳುವ ಕಾರಣವಿಲ್ಲ. ಇಂದಿನ ತರುಣರು ಇಂಥವರ ಚರಿತ್ರೆಯನ್ನೋದಿ ಸ್ಫೂರ್ತಿಗೊಂಡು ರಾಷ್ಟ್ರಸೇವೆಯನ್ನು ಮಾಡಲು ಇಮ್ಮಡಿ ಹುರುಪಿನಿಂದ ಮುಂದೆ ಬರಬೇಕೆಂಬುದೇ ಗ್ರಂಥಕರ್ತರ ಮುಖ್ಯ ಉದ್ದೇಶವಿದ್ದಂತೆ ತೋರುತ್ತದೆ. ಅವರ ಉದ್ದೇಶ ಫಲಿಸಬಹುದೆಂದು ಹೇಳಲು ಏನೂ ಅಭ್ಯಂತರ ಕಾಣುವದಿಲ್ಲ. ಗ್ರಂಥಕರ್ತರು ನಿಸ್ಸೀಮ ಕಾಂಗ್ರೆಸ್ಸಿಗರಲ್ಲಿ ಒಬ್ಬರು.

ಪುಸ್ತಕದ ಭಾಷೆಯು ಸರಳವಾಗಿಯೂ ತಿಳಿಯಾಗಿಯೂ ಇದೆ. ಶೈಲಿಯು ಸರಾಗವೂ, ಗಂಭೀರವೂ ಇದೆ. ಪುಸ್ತಕದ ಅಂತರ್ಬಾಹ್ಯ ರಚನೆಯು ಮನನೀಯ ಹಾಗೂ ಚಿತ್ತಾಕರ್ಷಕವಾಗಿದೆ.

ಸದ್ಯದ ಬೆಲೆಯು ಮಾತ್ರ ತುಸು ಹೆಚ್ಚೆಂದೇ ಹೇಳಬೇಕಾಗಿದೆ. ಬೆಲೆಯನ್ನು ಮೂರು ರೂಪಾಯಿಗೆ ಇಳಿಸಿದರೆ, ಪ್ರತಿಗಳು ಹೆಚ್ಚಾಗಿ ಖರ್ಚಾಗಬಹುದೆಂದೂ ಮತ್ತು ಗ್ರಂಥಕರ್ತರ ಉದಾತ್ತ ಧ್ಯೇಯವು ಹೆಚ್ಚು ಫಲಿಸಬಹುದೆಂದೂ ನಮ್ಮ ನಂಬಿಗೆ.

—ಸಂಪಾದಕರು.

ನೂತನ ಗಣಿತ: ಲೇಖಕರು: ಶ್ರೀ. ಕೆ. ಕೆ. ಗಲಗಲಿ. ಮಾರಾಟಗಾರರು: ಆಕಳವಾಡಿ ಬುಕ್ಸ ಡಿಪೋ, ಧಾರವಾಡ. ಬೆಲೆ: ೧ ರೂ. ೪ಆ.

ಶ್ರೀ. ಗಲಗಲಿ ಇವರು ಕನ್ನಡ ಐದನೆಯ ಇಯತ್ತೆಯವರ ಸಲುವಾಗಿ ಬರೆದ ಈ ಪುಸ್ತಕವು ಸ್ವಾಗತಾರ್ಹವಿರುತ್ತದೆ. ಲೇಖಕರು ಒಂದೇ ಪುಸ್ತಕದಲ್ಲಿ ಗಣಿತ, ಭೂಮಿತಿ, ಜಮಾಖರ್ಚ, ಈ ಮೂರೂ ವಿಷಯಗಳನ್ನು ತರುವ ಪ್ರಯತ್ನ ಮಾಡಿರುವರು. ಆದರೆ ಈ ಪ್ರಯತ್ನವು ಅಷ್ಟೇನು ಯಶಸ್ವಿಯಾಗಿರುವದಿಲ್ಲ. ಅವರು ಭೂಮಿತಿ ವಿಭಾಗವನ್ನು ೨೦ ಪುಟಗಳಲ್ಲಿಯೂ, ಜಮಾಖರ್ಚನ್ನು ೧೦ ಪುಟಗಳಲ್ಲಿಯೂ ಮುಗಿಸಿರುವರು. ಇದರಿಂದ ಈ ವಿಷಯಗಳ ವಿವೇಚನವು ತೀರ ಸಂಕುಚಿತವಾಗಿರುತ್ತದೆ. ಸಮಾಂತರ ರೇಷೆ, ತ್ರಿಕೋಣ ಇವನ್ನು ರಚಿಸುವದನ್ನೂ ಪ್ರಾಯೋಗಿಕ ರೀತಿಯಿಂದ ಇವುಗಳ ಗುಣಧರ್ಮಗಳನ್ನು ತಿಳಕೊಳ್ಳುವದನ್ನೂ ಈ ಪುಸ್ತಕದಲ್ಲಿ ಕೊಟ್ಟಿರುವದಿಲ್ಲ. ಭೂಮಿತಿಯ ಬಗ್ಗೆ ಈ ಪುಸ್ತಕದ ಮೇಲಿಂದ ಹುಡುಗರಿಗೆ ಸಾಕಷ್ಟು ಜ್ಞಾನವಾಗಲಾರದು. ಮೂಲ ಶಿಕ್ಷಣದ ಲೆಕ್ಕಗಳೆಂದು ಬೇರೆ ಕೊಡುವದಕ್ಕಿಂತ ಆ ಲೆಕ್ಕಗಳನ್ನು ಸಂಬಂಧಪಟ್ಟ ತ್ರೈರಾಶಿಕ, ವರ್ಗಮೂಲ, ಕ್ಷೇತ್ರಫಲ ಮುಂತಾದ ಪ್ರಕರಣಗಳಲ್ಲಿಯೇ ಕೊಟ್ಟಿದ್ದರೆ ಸಮಂಜಸವಾಗುತ್ತಿತ್ತು.

ಗಣಿತ ವಿಷಯದ ಲೆಕ್ಕಗಳು ಸಾಕಷ್ಟು ಇರುತ್ತವೆ. ಅಲ್ಲಲ್ಲಿ ಮಾದರಿಯ ಲೆಕ್ಕಗಳೂ ಇರುತ್ತವೆ. ಆದರೆ ಕೆಲವು ವಿಷಯಗಳ ವಿವೇಚನವು ತೀರ ಸಂಕುಚಿತವಾಗಿರುತ್ತದೆ. ಉದಾ: ದಶಾಂಶ, ಮೆಟ್ರಿಕ ಪದ್ಧತಿ, ಚಕ್ರಬಡ್ಡಿ. ದಶಾಂಶ ವಿಭಾಗದಲ್ಲಿ ಬರೇ ಬೇರೀಜು ವಜಾಬಾಕಿಗಳನ್ನು ಕೊಟ್ಟಿವೆ. ಗುಣಾಕಾರ ಭಾಗಾಕಾರಗಳನ್ನು ಕೊಟ್ಟು ಈ ವಿವೇಚನವನ್ನು ಪೂರ್ಣಮಾಡುವದು ಅವಶ್ಯವು. ಮೆಟ್ರಿಕ್ ಪದ್ಧತಿಯ ವಿವರಣೆಯು ಅಪೂರ್ಣವಿರುತ್ತದೆ. ಇತರ ಪದ್ಧತಿಗಳಿಗಿಂತ ಈ ಪದ್ಧತಿಯು ಹೇಗೆ ಹೆಚ್ಚು ಲಾಭಕರವೆಂಬದನ್ನು ಉದಾಹರಣೆಗಳನ್ನು ಕೊಟ್ಟು ಬಿಂಬಿಸಬೇಕು. ಚಕ್ರಬಡ್ಡಿಯನ್ನು ಕಲಿಸುವಾಗ ದಶಾಂಶ ಪದ್ಧತಿಯಿಂದ ಬಡ್ಡಿ ತೆಗೆಯುವದು ಸುಲಭವಾದದ್ದೂ, ಚಕ್ರಬಡ್ಡಿಯ ತತ್ವವನ್ನು ತಿಳಿಸಿ ಹೇಳಲಿಕ್ಕೆ ಅನುಕೂಲವಾದದ್ದೂ ಇರುವುದರಿಂದ ಇದನ್ನು ಕೂಡ ಲೇಖಕರು ವಿವರಿಸಿದ್ದರೆ, ಈ ವಿಷಯದ ಪ್ರತಿಪಾದನವು ಹೆಚ್ಚು ಉಪಯುಕ್ತವಾಗುತ್ತಿತ್ತು.

ಒಟ್ಟಿನಲ್ಲಿ, ಗಣಿತ ವಿಷಯದಲ್ಲಿ ಈ ಪುಸ್ತಕವು ಐದನೆಯ ಇಯತ್ತೆಯವರಿಗೆ ಪಠ್ಯಪುಸ್ತಕವಾಗಲಿಕ್ಕೆ ಯೋಗ್ಯವಿರುತ್ತದೆ.

—ಡಿ. ವ್ಹಿ. ಚಿಕ್ಕರಮನಿ,

ಅ. ಎಜ್ಯುಕೇಶನಲ್ ಇನ್ಸಪೆಕ್ಟರ, ೭. ಭಾ., ಧಾರವಾಡ.

ಶಿಕ್ಷಣದ ಮಾರ್ಗದರ್ಶಕರು

ಬಾಪು
ಶಾಂತಿಯ ಕೈಯಾಗಿ ಪ್ರೇರಣೆ
ಕೊಡುವವರು

ಮಾನ್ಯ ಬಿ. ಜಿ. ಖೇರ
ಶಿಕ್ಷಣ ಮಂತ್ರಿಗಳು



ಕೆ. ಜಿ. ಸಯಾದೀನ
ಮುಂಬಯಿ ಸರಕಾರ
ಶಿಕ್ಷಣ ಸಲಹೆಗಾರರು

ಗ್ರಂಥ ವಿಮರ್ಶೆ

ರಾಷ್ಟ್ರಪತಿಗಳು: ಕಾಂಗ್ರೆಸ್ಸಿನ ರನ್ನಮಹೋತ್ಸವ ಸಂಚಿಕೆ. ಬರೆದವರು: ಶ್ರೀ. ಬುರ್ಲಿ ಬಿಂದುಮಾಧವ ಅವರು. ಪ್ರಕಾಶಕರು: ಬಿ. ಜಿ. ಅವಧಾನಿ, ಮಿಂಚಿನ ಬಳ್ಳಿ ಚಾವಡಿ, ಧಾರವಾಡ. ಪ್ರಕಾಶನ ದಿನಾಂಕ, ಸ್ವಾತಂತ್ರ್ಯದಿನ ೧೯೪೭. ಕ್ರೌ. ೧ದ ೩೬೧ ಪುಟಗಳು. ಬೆಲೆ: ೪ರೂಪಾಯಿ.

ಯಾವದೊಂದು ಜನಾಂಗದ ಇತಿಹಾಸವೆಂದರೆ ಆ ಜನಾಂಗದಲ್ಲಿಯ ಸುಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆ ಎಂದು ಹೇಳಲಾಗುತ್ತದೆ. ಈ ದೃಷ್ಟಿಯಿಂದ ಈ ಪುಸ್ತಕವು ಹಿಂದುಸ್ತಾನ (ಭಾರತವು ಪಾಕಿಸ್ತಾನ ಮತ್ತು ಹಿಂದುಸ್ತಾನ ವೆಂದು ವಿಭಜಿಸಲ್ಪಡುವ ಪೂರ್ವದಲ್ಲಿಯ ಹೆಸರು)ದಲ್ಲಿಯ ೪೬ ಸುಪ್ರಸಿದ್ಧ ಸ್ತ್ರೀ ಪುರುಷರ ಸಂಕ್ಷಿಪ್ತ ಜೀವನ ಚರಿತ್ರೆಯನ್ನೊಳಗೊಂಡಿದೆ. ಇದರಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ಭಾರತ ಜನತೆಯಿಂದ ಗಳಿಸಬಹುದಾಗಿದ್ದ ಅತ್ಯಂತ ಗೌರವಯುಕ್ತ ಸ್ಥಾನವನ್ನು —ಕಾಂಗ್ರೆಸ ಅಧ್ಯಕ್ಷ ಪದವಿಯನ್ನು —ಒಮ್ಮೆ ಅಥವಾ ಅದಕ್ಕೂ ಹೆಚ್ಚುಸಲ ಅಲಂಕರಿಸಿ ರಾಷ್ಟ್ರ ಸೇವೆಯನ್ನು ಮಾಡಿರುವಂಥವರು. ಇದರಲ್ಲಿ ವರ್ಣಿಸಲಾದ ವ್ಯಕ್ತಿಗಳ ಘನತೆ, ಮಹಿಮೆಗಳ ಬಗ್ಗೆ ಯಾವ ಸಂದೇಹವೂ ಇಲ್ಲ. ಯಾಕಂದರೆ, ಅವರೆಲ್ಲರೂ ತಮ್ಮ ತನು-ಮನ-ಧನಗಳನ್ನು ಸವೆಸಿ ನಿಸ್ಸ್ವಾರ್ಥ ಬುದ್ಧಿಯಿಂದ ಅವಿರತ ಶ್ರಮ ಪಟ್ಟುದರ ಫಲವಾಗಿಯೇ ಭಾರತೀಯರಾದ ನಮಗೆ ರಾಜಕೀಯ ಸ್ವಾತಂತ್ರ್ಯವು ದೊರೆತಿರುವದು. ಅವರ ಮುಖಂಡತ್ವದಿಂದಲೇ ನಾವೆಲ್ಲರೂ ಇಂದು ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಿಸುತ್ತಿರುವದು. ಜನಾಂಗದಲ್ಲಿ ರಾಷ್ಟ್ರಪ್ರೇಮವನ್ನು ಬೆಳಿಸಲಿಕ್ಕಾಗಲಿ ಅಥವಾ ಹಿಂದಿನ ರಾಜನೀತಿಯ ಸಂಪೂರ್ಣ ಜ್ಞಾನಮಾಡಿಕೊಡಲಿಕ್ಕಾಗಲಿ ಇಂಥ ಮಹನೀಯರ ಜೀವನ ಚರಿತ್ರೆಯನ್ನು ತಿಳಿಸಿಕೊಡುವದು ಅತ್ಯವಶ್ಯವೆಂದು ಬೇರೆ ಹೇಳುವ ಕಾರಣವಿಲ್ಲ. ಇಂದಿನ ತರುಣರು ಇಂಥವರ ಚರಿತ್ರೆಯನ್ನೋದಿ ಸ್ಫೂರ್ತಿಗೊಂಡು ರಾಷ್ಟ್ರಸೇವೆಯನ್ನು ಮಾಡಲು ಇಮ್ಮಡಿ ಹುರುಪಿನಿಂದ ಮುಂದೆ ಬರಬೇಕೆಂಬುದೇ ಗ್ರಂಥಕರ್ತರ ಮುಖ್ಯ ಉದ್ದೇಶವಿದ್ದಂತೆ ತೋರುತ್ತದೆ. ಅವರ ಉದ್ದೇಶ ಫಲಿಸಬಹುದೆಂದು ಹೇಳಲು ಏನೂ ಅಭ್ಯಂತರ ಕಾಣುವದಿಲ್ಲ. ಗ್ರಂಥಕರ್ತರು ನಿಸ್ಸೀಮ ಕಾಂಗ್ರೆಸ್ಸಿಗರಲ್ಲಿ ಒಬ್ಬರು.

ಪುಸ್ತಕದ ಭಾಷೆಯು ಸರಳವಾಗಿಯೂ ತಿಳಿಯಾಗಿಯೂ ಇದೆ. ಶೈಲಿಯು ಸರಾಗವೂ, ಗಂಭೀರವೂ ಇದೆ. ಪುಸ್ತಕದ ಅಂತರ್ಬಾಹ್ಯ ರಚನೆಯು ಮನನೀಯ ಹಾಗೂ ಚಿತ್ತಾಕರ್ಷಕವಾಗಿದೆ.

ಸದ್ಯದ ಬೆಲೆಯು ಮಾತ್ರ ತುಸು ಹೆಚ್ಚೆಂದೇ ಹೇಳಬೇಕಾಗಿದೆ. ಬೆಲೆಯನ್ನು ಮೂರು ರೂಪಾಯಿಗೆ ಇಳಿಸಿದರೆ, ಪ್ರತಿಗಳು ಹೆಚ್ಚಾಗಿ ಖರ್ಚಾಗಬಹುದೆಂದೂ ಮತ್ತು ಗ್ರಂಥಕರ್ತರ ಉದಾತ್ತ ಧ್ಯೇಯವು ಹೆಚ್ಚು ಫಲಿಸಬಹುದೆಂದೂ ನಮ್ಮ ನಂಬಿಗೆ. —ಸಂಪಾದಕರು.

ನೂತನ ಗಣಿತ: ಲೇಖಕರು: ಶ್ರೀ. ಕೆ. ಕೆ. ಗಲಗಲಿ. ಮಾರಾಟಗಾರರು: ಆಕಳವಾಡಿ ಬುಕ್ಸ ಡಿಪೋ, ಧಾರವಾಡ. ಬೆಲೆ: ೧ ರೂ. ೪ಆ.

ಶ್ರೀ. ಗಲಗಲಿ ಇವರು ಕನ್ನಡ ಐದನೆಯ ಇಯತ್ತೆಯವರ ಸಲುವಾಗಿ ಬರೆದ ಈ ಪುಸ್ತಕವು ಸ್ವಾಗತಾರ್ಹವಿರುತ್ತದೆ. ಲೇಖಕರು ಒಂದೇ ಪುಸ್ತಕದಲ್ಲಿ ಗಣಿತ, ಭೂಮಿತಿ, ಜಮಾಖರ್ಚ, ಈ ಮೂರೂ ವಿಷಯಗಳನ್ನು ತರುವ ಪ್ರಯತ್ನ ಮಾಡಿರುವರು. ಆದರೆ ಈ ಪ್ರಯತ್ನವು ಅಷ್ಟೇನು ಯಶಸ್ವಿಯಾಗಿರುವದಿಲ್ಲ. ಅವರು ಭೂಮಿತಿ ವಿಭಾಗವನ್ನು ೨೦ ಪುಟಗಳಲ್ಲಿಯೂ, ಜಮಾಖರ್ಚನ್ನು ೧೦ ಪುಟಗಳಲ್ಲಿಯೂ ಮುಗಿಸಿರುವರು. ಇದರಿಂದ ಈ ವಿಷಯಗಳ ವಿವೇಚನವು ತೀರ ಸಂಕುಚಿತವಾಗಿರುತ್ತದೆ. ಸಮಾಂತರ ರೇಷೆ, ತ್ರಿಕೋಣ ಇವನ್ನು ರಚಿಸುವದನ್ನೂ ಪ್ರಾಯೋಗಿಕ ರೀತಿಯಿಂದ ಇವುಗಳ ಗುಣಧರ್ಮಗಳನ್ನು ತಿಳಕೊಳ್ಳುವದನ್ನೂ ಈ ಪುಸ್ತಕದಲ್ಲಿ ಕೊಟ್ಟಿರುವದಿಲ್ಲ. ಭೂಮಿತಿಯ ಬಗ್ಗೆ ಈ ಪುಸ್ತಕದ ಮೇಲಿಂದ ಹುಡುಗರಿಗೆ ಸಾಕಷ್ಟು ಜ್ಞಾನವಾಗಲಾರದು. ಮೂಲ ಶಿಕ್ಷಣದ ಲೆಕ್ಕಗಳೆಂದು ಬೇರೆ ಕೊಡುವದಕ್ಕಿಂತ ಆ ಲೆಕ್ಕಗಳನ್ನು ಸಂಬಂಧಪಟ್ಟ ತ್ರೈರಾಶಿಕ, ವರ್ಗಮೂಲ, ಕ್ಷೇತ್ರಫಲ ಮುಂತಾದ ಪ್ರಕರಣಗಳಲ್ಲಿಯೇ ಕೊಟ್ಟಿದ್ದರೆ ಸಮಂಜಸವಾಗುತ್ತಿತ್ತು.

ಗಣಿತ ವಿಷಯದ ಲೆಕ್ಕಗಳು ಸಾಕಷ್ಟು ಇರುತ್ತವೆ. ಅಲ್ಲಲ್ಲಿ ಮಾದರಿಯ ಲೆಕ್ಕಗಳೂ ಇರುತ್ತವೆ. ಆದರೆ ಕೆಲವು ವಿಷಯಗಳ ವಿವೇಚನವು ತೀರ ಸಂಕುಚಿತವಾಗಿರುತ್ತದೆ. ಉದಾ: ದಶಾಂಶ, ಮೆಟ್ರಿಕ ಪದ್ಧತಿ, ಚಕ್ರಬಡ್ಡಿ. ದಶಾಂಶ ವಿಭಾಗದಲ್ಲಿ ಬರೇ ಬೇರೀಜು ವಜಾಬಾಕಿಗಳನ್ನು ಕೊಟ್ಟಿವೆ. ಗುಣಾಕಾರ ಭಾಗಾಕಾರಗಳನ್ನು ಕೊಟ್ಟು ಈ ವಿವೇಚನವನ್ನು ಪೂರ್ಣಮಾಡುವದು ಅವಶ್ಯವು. ಮೆಟ್ರಿಕ್ ಪದ್ಧತಿಯ ವಿವರಣೆಯು ಅಪೂರ್ಣವಿರುತ್ತದೆ. ಇತರ ಪದ್ಧತಿಗಳಗಿಂತ ಈ ಪದ್ಧತಿಯು ಹೇಗೆ ಹೆಚ್ಚು ಲಾಭಕರವೆಂಬದನ್ನು ಉದಾಹರಣೆಗಳನ್ನು ಕೊಟ್ಟು ಬಿಂಬಿಸಬೇಕು. ಚಕ್ರಬಡ್ಡಿಯನ್ನು ಕಲಿಸುವಾಗ ದಶಾಂಶ ಪದ್ಧತಿಯಿಂದ ಬಡ್ಡಿ ತೆಗೆಯುವದು ಸುಲಭವಾದದ್ದೂ, ಚಕ್ರಬಡ್ಡಿಯ ತತ್ವವನ್ನು ತಿಳಿಸಿ ಹೇಳಲಿಕ್ಕೆ ಅನುಕೂಲವಾದದ್ದೂ ಇರುವುದರಿಂದ ಇದನ್ನು ಕೂಡ ಲೇಖಕರು ವಿವರಿಸಿದ್ದರೆ, ಈ ವಿಷಯದ ಪ್ರತಿಪಾದನವು ಹೆಚ್ಚು ಉಪಯುಕ್ತವಾಗುತ್ತಿತ್ತು.

ಒಟ್ಟಿನಲ್ಲಿ, ಗಣಿತ ವಿಷಯದಲ್ಲಿ ಈ ಪುಸ್ತಕವು ಐದನೆಯ ಇಯತ್ತೆಯವರಿಗೆ ಪಠ್ಯಪುಸ್ತಕವಾಗಲಿಕ್ಕೆ ಯೋಗ್ಯವಿರುತ್ತದೆ. —ಡಿ. ಪ್ಹಿ. ಚಿಕ್ಕರಮನಿ,

ಅ. ಎಜ್ಯುಕೇಶನಲ್ ಇನ್ಸಪೆಕ್ಟರ್, ಸ. ಭಾ., ಧಾರವಾಡ.

ಶಿಕ್ಷಣದ ಮಾರ್ಗದರ್ಶಕರು

ಬಾಪು
ಶಾಂತಿ ಕೈಯಾಗಿ ಪ್ರೇರಣೆ
ಕೊಡುವವರು



ಮಾನ್ಯ ಬಿ. ಜಿ. ಖೇರ
ಶಿಕ್ಷಣ ಮಂತ್ರಿಗಳು



ಕೆ. ಜಿ. ಸಯಾದೀನ
ಮುಂಬಯಿ ಸರಕಾರ
ಶಿಕ್ಷಣ ಸಲಹೆಗಾರರು

ಡಿ. ಸಿ. ಪಾವಟೆ
ಮುಂಬಯಿ ವಿದ್ಯಾಖಾತೆಯ ಡೈರೆಕ್ಟರರು.

ಎ. ಎನ್. ಸಾನೆ
ಎಜ್ಯುಕೇಶನಲ್ ಇನಸ್ಪೆಕ್ಟರ್, ದ. ಭಾ. ಧಾರವಾಡ

ಸರಕಾರೀ ಗಂಡುಮಕ್ಕಳ ಟ್ರೇನಿಂಗ ಕಾಲೇಜಿಗೆ
ಉಚ್ಚ ಶಿಕ್ಷಣಾಧಿಕಾರಿಗಳ ಭೆಟ್ಟಿ

ಎಡದಿಂದ ಬಲಕ್ಕೆ :
ಶ್ರೀ. ಎಲ್. ಆರ್. ದೇಸಾಯಿ,
(ಡಿ. ಡಿ. ಪಿ. ಆಯ್.)
,, ಕೆ. ಜಿ. ಕಯಾದೀನ
,, ಎ. ಎನ್. ಸಾನೆ
,, ಆರ್. ಕೆ. ಲಕ್ಕುಂಡಿ
(ಪ್ರಿನ್ಸಿಪಾಲ್, ಗಂ. ಟ್ರೇ. ಕಾ.)

ಶಿಕ್ಷಣತಜ್ಞ ಗಾಂಧೀಜಿಯವರು

ಲೇಖಕರು:— ಶ್ರೀ ಕೆ. ಜಿ ಸೆಯಾದೀನ, ಮುಂಬಯಿ ಸರಕಾರದ ಶಿಕ್ಷಣಾಧಿಕಾರಿಗಳು.

●

ಕೆಲವು ದಿನಗಳ ಹಿಂದೆ ಪ್ರಪಂಚದ ಎಲ್ಲ ಪ್ರಸಿದ್ಧಜನರು ಹಿಂದುಸ್ತಾನದ ನಲ್ಮೆಯ ಮುಖಂಡರಾದ ಮಹಾತ್ಮಾ ಗಾಂಧಿಯವರಿಗೆ ತಮ್ಮ ಪ್ರೀತಿ ಗೌರವವನ್ನು ಅರ್ಪಿಸಿದರೂ ಅದು ಅಪರ್ಯಾಪ್ತವಾಗಿದ್ದು, ಇನ್ನೂ ಹೇಳಬೇಕಾದದ್ದೂ ಹೇಳಬಹುದಾದದ್ದೂ ಇವೆ. ಮಹಾಸಾಗರದ ಆಳ ಹಾಗೂ ಅಗಲಗಳನ್ನು ತಿಳಿಯುವದು ಹೇಗೆ ದುಸ್ಸಾಧ್ಯವೋ ಹಾಗೆ ನಿಜವಾದ ಘನವಂತ ಮುಖ ಮುದ್ರೆಯೂ ಇರುವದು. ಗಾಂಧಿಜೀಯವರ ಮುಖ ಮುದ್ರೆಯು ಶ್ರೇಷ್ಠ ವಜ್ರದ ಹಾಗೆ ಬಹುಮುಖವಾಗಿದ್ದು ಎಲ್ಲ ಕ್ಷೇತ್ರಗಳನ್ನು ಬೆಳಗಿದೆ. ಆದರೆ ವಜ್ರವು ಹೊರಗಿನಿಂದ ಬೆಳಕನ್ನು ಕೊಟ್ಟರೆ, ಈ ಮುಖಚರ್ಯೆಯು ತಾನೇ ಪ್ರಭಾಮಂದಿರವಾಗಿದ್ದು ನಮ್ಮ ರಾಷ್ಟ್ರೀಯ ಜೀವನವನ್ನು ಬೆಳಗಿದೆ. ಅವರಿಂದ ಆದ ಕೃತಜ್ಞತೆಗಳು ಅನಂತವಾಗಿವೆ. ರಾಷ್ಟ್ರೀಯ ಆತ್ಮಗೌರವವನ್ನು ತಿಳಿಸಿ, ನಮ್ಮನ್ನು ಶೈಕ್ಷಣಿಕ ಪಾಶ್ಚಾತ್ಯ ಬಿಗುವಿನಿಂದ ಮುಕ್ತ ಮಾಡಿದ್ದಾರೆ. ನಮಗೆ ಹೊಸ ದೃಷ್ಟಿಯನ್ನು ನೀಡಿ ನಮ್ಮ ಆಚಾರವಿಚಾರಗಳಲ್ಲಿ ಕ್ರಾಂತಿಯನ್ನುಂಟುಮಾಡಿದ್ದಾರೆ. ಒಡನಾಡಿಗಳ ಪ್ರೀತಿ ಹಾಗೂ ಅವರ ಸೇವೆಗಳೇ ಅವರ ಧರ್ಮವಾಗಿದ್ದವು. ಯಾವ ವ್ಯಕ್ತಿಯೇ ಆಗಲಿ ಯಾವ ಪಂಗಡದವರೇ ಆಗಲಿ, ಅನ್ಯಾಯಕ್ಕೆ ಒಳಗಾದಾಗ ಅವರ ಮುಕ್ತತೆಯ ಸಲುವಾಗಿ ಹೆಣಗಾಡಿದರು. ಸಾಮಾಜಿಕ ಕಟ್ಟಳೆಗಳಿಗೊಳಗಾದ ಸ್ತ್ರೀಯರಿಗೆ ಮುಕ್ತತೆಯನ್ನು ನೀಡಿ ರಾಷ್ಟ್ರೀಯ ಸೇವೆಯನ್ನು ಕಲಿಸಿದರು. ಮುಟ್ಟಿದರೆ ಪಾಪವೆಂದನಿಸುವ ಅಸ್ಪೃಶ್ಯರೆಂದೆನಿಸುವವರನ್ನು ಹರಿಜನರೆಂದೆಣಿಸಿ ದೇವರಿಗೆ ಪ್ರೀತ್ಯಾಸ್ಪದರಾದ ಬ್ರಾಹ್ಮಣರಂತೆ ಅವರಿಗೆ ಸ್ಥಾನವನ್ನೊದಗಿಸಿ ಕೊಟ್ಟರು. ಶಾಬ್ದಿಕವಾದ ರಾಜಕಾರಣವನ್ನು ಸಾಮಾನ್ಯ ಜನತಾ ಉದ್ಧಾರಕ್ಕಾಗಿ ಹೊಂದಿಸಿದರು. ಬೇಜಾರಾದ ಹಾಗೂ ಧೈರ್ಯಗುಂದಿದ ಜನರಿಗೆ ಉತ್ತೇಜನಗೊಳಿಸಿ ಕಾರ್ಯಸಾಧನೆಗಾಗಿ ಅಹಿಂಸೆ ಹಾಗೂ ಸತ್ಯಾಗ್ರಹ ಹಾಗೂ ಸ್ವಾತಂತ್ರ್ಯ ಪ್ರೀತಿಯನ್ನು ಒದಗಿಸಿ ಕೊಟ್ಟರು. ತ್ಯಾಗದ ಆವರಣದಿಂದ, ಸತ್ಯದ ಆಯುಧದಿಂದ, ಕಿಲ್ಮಿಷರಹಿತವಾದ ಹೃದಯದಿಂದ ವ್ಯಕ್ತಿಗೋಸುಗಲ್ಲದೆ, **ಸತ್ಯ, ಅಹಿಂಸೆ, ದಾಸ್ಯ ವಿಮೋಚನೆ**ಗಾಗಿ ಬಡಿದಾಡಿರೆಂದು ಹೇಳಿದರು. ಹಿಂಸೆ ಹಾಗೂ ಅನ್ಯಾಯವೆಸಗುವ ಜನರಾದರೂ ಕಾಲ್ದೆಗೆಯ ಬೇಕಾದಾಗ ನಾವು ನಮ್ಮ ಸಹೃದಯತೆಯನ್ನು ಅಲ್ಲಗಳೆಯಲಾರೆವು. ಹಿಂಸೆಯನ್ನು ಎದುರಿಸಲು ಧೈರ್ಯದಿಂದ ಮುನ್ನುಗ್ಗಿರಿ. ಬಡಿತಗಳಿಗೆ ನಿಮ್ಮ ಎದೆಯನ್ನೀಡಿರಿ" ಎಂಬ ತತ್ವವನ್ನು ಗಾಂಧೀಜಿಯವರು ತಿಳಿಸಿ ಸಿದ್ಧಮಾಡಿ ತೋರಿಸಿದರು. ಪ್ರತಿಯೊಂದು ವಿಚಾರ ಹಾಗೂ ಪ್ರಯತ್ನಗಳು ಅವರ ಜೀವನ ಹಾಗು ತತ್ವಗಳಿಂದ ಪೂರಿತವಾಗಿವೆ. ನಿಜವಾಗಿ ಹೇಳುವದಾದರೆ, ಹಿಂದುಸ್ತಾನದ ಇತಿಹಾಸದಲ್ಲಿ ಒಂದೇ ಶತಮಾನವು ಮಹಾತ್ಮಾ ಗಾಂಧೀಯುಗವೆಂದು ಹೇಳಬಹುದು.

ಕೆಲವೇ ನಿಮಿಷಗಳಲ್ಲಿ ಈ ಮಹಾತ್ಮರ ಎಲ್ಲ ಗುಣಗಳನ್ನು ನಿಮ್ಮೆದುರಿಗೆ ನಿವೇದಿಸಲು ನಾನು ಸಮರ್ಥನಲ್ಲ. ಕಾರಣ ಮಹಾತ್ಮಾ ಗಾಂಧಿಯವರು ಶೈಕ್ಷಣತಜ್ಞರೆಂಬುದನ್ನು ನಾನು ತಿಳಿಸಲು ಪ್ರಯತ್ನಿಸುವೆ. ಶಿಕ್ಷಣತಜ್ಞನ ನಿಜವಾದ ಕಾರ್ಯವಾದುದು? ಮನುಷ್ಯನ ಮನಸ್ಸು ಹಾಗೂ ನಡತೆಗಳನ್ನು ತರಬೇತು ಗೊಳಿಸುವದೇ ಅವನ ಮುಖ್ಯ ಧ್ಯೇಯವೆಂದು ಹೇಳುವದಕ್ಕೆ ನೀವು ನನ್ನೊಡನೆ ಒಪ್ಪುತ್ತೀರೆಂದು ನಾನು ತಿಳಿಯುವೆ. ಮುಖ್ಯ ಪ್ರವೃತ್ತಿಗಳನ್ನು ಉದ್ದೀಪ್ತಗೊಳಿಸುವದೂ ಹಾಗೂ ಕಲೆ ಮತ್ತು ಕೃತಿಗಳ ಯೋಗ್ಯತೆಯನ್ನು ಬೆಳೆಯಿಸುವದೂ ಅವನ ಕರ್ತವ್ಯವಾಗಿದೆ. ಪ್ರತಿಯೊಂದು ವ್ಯಕ್ತಿಯಲ್ಲಿರುವ ದೈವಿ ಪ್ರವೃತ್ತಿಯನ್ನು ಉತ್ತೇಜನಗೊಳಿಸಿ ಕೆಳಮಟ್ಟದಿಂದ ಮೇಲೇರಲು ಹಾಗೂ ಪ್ರಕಟಗೊಳಿಸಿದ ಯೋಗ್ಯತೆಯನ್ನು ಕಂಡು ಹಿಡಿಯಲು ಅವನು ಸಹಾಯ ಮಾಡುವನು. ಗಾಂಧೀಜಿಯವರು ನಿಜವಾದ ಘನವಂತರಾದ ಶಿಕ್ಷಕರೆಂದು ನಿಃಶಂಕೆಯಿಂದ ಹೇಳ

ಬಹುದು. ಆದರೆ "ಶಿಕ್ಷಕ" ಎಂಬ ಶಬ್ದಕ್ಕೆ ವಿಶಿಷ್ಟ ಅರ್ಥವಿದೆ. ಅವನು ಜೀವನದ ಕಠಿಣ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಲು, ಬೇರೆ ಬೇರೆ ಉತ್ತಮೋಪಾಯಗಳಿಂದ ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡತ್ತಾನೆ. ಈ ವಿಚಾರದಿಂದಲೂ ಗಾಂಧೀಜಿಯವರು ಉತ್ತಮ ಶಿಕ್ಷಕರು. ಮೂಲ ಶಿಕ್ಷಣ ತತ್ವಕ್ಕೋಸುಗ ಅವರಿಗೆ ಈ ನಾಡಿನ ಶಿಕ್ಷಕರೂ ಹಾಗೂ ಶಿಕ್ಷಣತಜ್ಞರೂ ಚಿರಋಣಿಯಾಗಿದ್ದಾರೆ.

ಎಲ್ಲ ಶಿಕ್ಷಣ-ತಜ್ಞರು ಒಪ್ಪುವಂತೆ ಹಿಂದುಸ್ತಾನದಲ್ಲಿ ಅನೇಕ ಶತಮಾನಗಳಿಂದ ಶಿಕ್ಷಣವು, ಓದುವದು ಹಾಗೂ ಯಾಂತ್ರಿಕ ಪ್ರಾವೀಣ್ಯತೆ ಆಗಿತ್ತು. ಜೀವನ—ಶಿಕ್ಷಣಗಳ ಸಂಬಂಧವನ್ನು ಮರೆತು ಬಿಡಲಾಗಿತ್ತು. ಇದನ್ನು ಅನೇಕರು ವಿಮರ್ಶಿಸಿ ಸುಧಾರಣೆಗಳನ್ನು ಸೂಚಿಸಿದರು. ಆದರೆ ಪ್ರತಿಫಲವೇನೂ ದೊರೆಯಲಿಲ್ಲ. ಗ್ರಾಮೋದ್ಧಾರ, ಹರಿಜನೋದ್ಧಾರ ಮುಂತಾದವುಗಳನ್ನು ಕೈಕೊಂಡಿದ್ದರಿಂದ ಗಾಂಧೀಜಿಯವರು ರಾಷ್ಟ್ರೀಯ ಜೀವನವನ್ನು ಚನ್ನಾಗಿ ತಿಳಿದಿದ್ದರು. ಹೊಸ ಶಿಕ್ಷಣವು ಆಗದೇ ತಾನು ಕಂಡ ಸಾಮಾಜಿಕ ಜೀವನವು ಸಾಧ್ಯವಿಲ್ಲೆಂಬುದನ್ನು ಚನ್ನಾಗಿ ತಿಳಿದರು. ಈಗಿರುವ ಶಿಕ್ಷಣದಲ್ಲಿಯ ಕುಂದುಕೊರತೆಗಳನ್ನು ಕುರಿತು ೧೯೪೭ರಲ್ಲಿ 'ಹರಿಜನ' ಪತ್ರಿಕೆಯಲ್ಲಿ ಲೇಖಗಳನ್ನು ಬರೆದರು. ತೋರಿಕೆ ಹಾಗು ಮಹತ್ವವಲ್ಲದ ವಿಷಯಗಳನ್ನು ಸಾಮಾನ್ಯ ಶಿಕ್ಷಣ ತಜ್ಞರು ಚರ್ಚಿಸುತ್ತಿರುವಾಗ ಮಹಾತ್ಮಾಜೀಯವರ ದೃಷ್ಟಿಯು ಇವನ್ನೆಲ್ಲ ಬೋಧಿಸಿ ಮೂಲದ ಕಡೆಗೆ ಹೊರಳಿತು. ಸಾಮಾನ್ಯ ಜನರ ಜೀವನ ಉದ್ಯೋಗ ಮತ್ತು ಸುಖದುಃಖಗಳಲ್ಲಿ ಬೆರೆತುಕೊಂಡಿದುದರಿಂದಲೇ ಅವರಿಗೆ ಸಾಧ್ಯವಾಯಿತೇ ಹೊರತು ಪುಸ್ತಕ ಪಠಣದಿಂದಲ್ಲ. ಗಂಡು ಹಾಗು ಹೆಣ್ಣುಮಕ್ಕಳಿಗೆ ೭ ವರ್ಷ ಒತ್ತಾಯದ ಶಿಕ್ಷಣ ಕೊಡಬೇಕೆಂಬುದನ್ನೂ ಶಿಕ್ಷಣವು ಮಾತೃಭಾಷೆಯಲ್ಲಿ ಇರಬೇಕೆಂಬುದನ್ನೂ, ಪೇಟೆಯಲ್ಲಿ ಮಾರಬಹುದಾದ ವಸ್ತುಗಳನ್ನು ತಯಾರಿಸಲು ಕೃತಿಮೂಲ ಶಿಕ್ಷಣ ಪ್ರಾರಂಭವಾಗಬೇಕೆಂಬುದನ್ನೂ ರಾಷ್ಟ್ರದ ಮುಂದೆ ಇಟ್ಟರು. ಹಣದ ಕೊರತೆಯಿಂದ ಇದು ಮುಂದೂಡಲ್ಪಡಬಹುದೆಂದು ಬಗೆದು ಶಿಕ್ಷಕರ ವೇತನವನ್ನು ದೊರಕಿಸಲು ಅನುವಾಗಬೇಕೆಂದು ಅವರು ಹಾರೈಸಿದ್ದರು. ಮೂಲ ಉದ್ಯೋಗವು ಚಟುವೆಂದು ಪರಿಣಿಮಿಸಬಾರದೆಂದು ಅವರು ಗಟಿಯಾಗಿ ಹೇಳಿರುವರು. ಮೂಲ ಉದ್ಯೋಗವು ಮಕ್ಕಳನ್ನು ಉತ್ತಮ ಕಲಾವಿದರನ್ನಾಗಿ ಮಾಡಬೇಕೆಂದೂ ಹಾಗೂ ಅದರಿಂದ ಅವರ ಕೈ ಹಾಗು ಮನಸ್ಸುಗಳು ತರಬೇತುಗೊಂಡು ನಡಾವಳಿಯು ಮಾರ್ಪಾಟವಾಗಬೇಕೆಂದೂ ಹೇಳಿರುವರು. ಈ ತತ್ವಗಳನ್ನು ಮೊದಲನೇ ಬಾರಿ ಪ್ರಕಟಿಸಿದಾಗ್ಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ತೊಡರುಗಳಿದ್ದವೆಂಬದನ್ನೂ ನಾನು ಬಲ್ಲೆ. ಕಚೇರಿಯ ಕಾಗದ ಪತ್ರಗಳಲ್ಲಿ ತೊಡಗಿದ ಜನರು ಆರ್ಭಟಿಸಿದರು. ಗಾಂಧೀಜಿಯವರಿಗೆ ಕೆಲಸ ಮಾಡುವ ಹಾದಿಯು ಬೇರೆ ಗೊತ್ತಿತ್ತು. ಹೊಸ ಹಾದಿಯನ್ನು ಹೇಳುವಾಗ ಅವರ ಮನಸ್ಸು ಎಂಥ ಕ್ಲಿಷ್ಟ ಹಾಗು ಸಂತುಷ್ಟ ಮನುಷ್ಯನನ್ನೂ ಹೊಸ ದೃಷ್ಟಿಗೆ ಸೆಳೆಯುವಷ್ಟು ಬಲವಾಗಿರುತ್ತಿತ್ತು. ಅದೇ ತತ್ವವನ್ನು ಶಿಕ್ಷಣ ಕ್ಷೇತ್ರದಲ್ಲಿ ಉಪಯೋಗಿಸಿದರು. ವರ್ಧಾದಲ್ಲಿ ಶಿಕ್ಷಣ ಸಮ್ಮೇಲನವನ್ನು ಕರೆದು ಅಲ್ಲಿ ನೆರೆದ ಶಿಕ್ಷಣತಜ್ಞರ ಮುಂದೆ ಸಹಜವಾದ ನಗು ಮುಖದಿಂದ ಕೆಲಸ ಪೂರ್ತಿಗೊಳಿಸುವ ಆಶೆಯಿಂದ ತಮ್ಮ ಹೊಸ ಶಿಕ್ಷಣ ದೃಷ್ಟಿಯನ್ನು ಇಟ್ಟರು. ಅವರಿಗೆ ತಮ್ಮ ಎಲ್ಲ ವಿಚಾರಗಳನ್ನು ದೃಢೀಕರಿಸಿ ಅವರಿಂದ ಕಲಿಯುವದಿದ್ದರೆ ಕಲತುಕೊಳ್ಳಲೂ ಆತುರತೆ ತೋರಿಸಿದರು. ಯಾಕಂದರೆ ಸತ್ಯವನ್ನು ಹುಡುಕುವದೇ ಅವರ ಧ್ಯೇಯವಾಗಿತ್ತು? ತಮ್ಮ ಅಭಿಪ್ರಾಯಗಳನ್ನು ಜುಲುಮೆಯಿಂದ ಹೇರುವದಾಗಿದ್ದಿಲ್ಲ. ಸಮ್ಮೇಲನವು "ಜಾಕಿರ ಹುಸೇನ ಮಂಡಳ" ವನ್ನು ಸ್ಥಾಪಿಸಿ ಯೋಜನೆಯ ರೂಪರೇಷೆಗಳಿಗೆ ಮೂರ್ತಸ್ವರೂಪವನ್ನು ಕೊಡುವ ಹೊಣೆಯನ್ನು ಅದರ ಮೇಲೆ ಹೊರಿಸಿತು. ಜನಜೀವನಕ್ಕೆ ಹೊಂದಿಕೊಂಡಿರುವ ಅಭ್ಯಾಸ ಪತ್ರಿಕೆಯನ್ನು ತಯಾರಿಸಲು ಹೊಣೆ ಹೊರಿಸಿತು. ಪುಸ್ತಕೀಯ ವಿಚಾರಪರರಾದ ಜನರಗೋಸುಗ ಇದನ್ನು ಮಾಡಬೇಕಾಯಿತು. ಆ ಮಂಡಳದ ಸದಸ್ಯನಾಗುವ ಭಾಗ್ಯ ನನಗೆ ದೊರೆತದ್ದರಿಂದ ಗಾಂಧೀಜಿಯವರನ್ನು ಕಾಣುವ ಹಾಗು ಅವರ ಜೊತೆಯಲ್ಲಿ ಮಾತನಾಡುವ ಸಂದರ್ಭವು ಅನೇಕ ಸಲ ಸಿಗುತ್ತಿತ್ತು. ಪ್ರತಿಯೊಬ್ಬ ಶಿಕ್ಷಕನಲ್ಲಿರಬೇಕಾದ ಹಾಗು ನಾನು ಅವರಲ್ಲಿ ಕಂಡ ದೊಡ್ಡ ಗುಣವೆಂದರೆ ಯಾರು ಎಷ್ಟೇ ಸಂಣಸರಿದ್ದರೂ ಕೂಡ ಏನು ಹೇಳುವರೆಂಬದನ್ನು ಸಿಧಾನವಾಗಿ ಕಾಳಜಿಯಿಂದ ಕೇಳಿಕೊಳ್ಳುವದು. ಎರಡನೇ ಗುಣವೆಂದರೆ ಭಿನ್ನಾಭಿಪ್ರಾಯಗಳನ್ನು ನಗು ಮುಖದಿಂದ ಸ್ವೀಕರಿಸುವದು. ಈ ಸಂದರ್ಭಗಳಲ್ಲಿ ಗಹನವಾದ ವಿಷಯಗಳನ್ನು ಕುರಿತು ದೀರ್ಘ ಚರ್ಚೆಗಳಾಗುತ್ತಿದ್ದವು. ಉಪಾಃ—ಸಾಮಾಜಿಕ ಸುಧಾರಣೆಗಾಗಿ ಇಂದಿನ ಸಾಯಿಸ್ಸ ಹಾಗು ಉದ್ಯೋಗಗಳನ್ನು

ಮಾರ್ಪಡಿಸಬಹುದೋ ? ಮಕ್ಕಳ ಕೃತಿ ಫಲಗಳಿಂದ ಶಿಕ್ಷಕರ ಪಗಾರವನ್ನು ದೊರಕಿಸುವದು ಸಾಧ್ಯವೋ ? ಯೋಜನೆಯ ಆರ್ಥಿಕ ದೃಷ್ಟಿಯು ಇನ್ನು ಮಹತ್ವದ ಸ್ಥಾನವನ್ನು ಪಡೆಯಬಹುದೋ? ಅವರು ಮಾತಾಡುವದೂ ಹಾಗು ಅವರಿಂದ ಕೇಳುವದೂ ಒಂದು ತರದ ಶಿಕ್ಷಣವೇ ಸರಿ. ಅವರ ನಿರ್ಮಲ ಚಿತ್ತವು ಮುಖ್ಯ ತತ್ವವನ್ನರಿತುಕೊಳ್ಳುತ್ತಿತ್ತು. ಸಾಮಾನ್ಯ ಜನರ ಹಾಗೆ ಕಾಲ್ಪನಿಕ ಬಡೆದಾಟಕ್ಕೆ ಒಳಗಾಗುತ್ತಿದ್ದಿಲ್ಲ. ಕೆಲಸವು ಜೀವನದ ಜೀವಾಳವಾಗಿದೆಂಬದನ್ನು ಅವರು ಅರಿತಿದ್ದರು. ಆದ್ದರಿಂದ ಕೃತಿರಹಿತ ಶಿಕ್ಷಣವು ಅವರ ದೃಷ್ಟಿಯಲ್ಲಿ ನಿರುಪಯುಕ್ತವೂ ಹಾಗು ಘಾತುಕವೂ ಆಗಿದೆ. ಜೀವನಕ್ಕೆ ಜೀವಕನ್ನು ಕೊಡಲಾರದ ವಿಷಯಗಳನ್ನು ಮಕ್ಕಳು ಕಲಿಯಬೇಕಾದರೆ ಅಥವಾ 'ಯಾಕೆ'ಎಂಬದನ್ನು ತಿಳಿಯದೇ ದೈಹಿಕ ಕೆಲಸವನ್ನು ಮಾಡಬೇಕಾದರೆ ಶಾಲೆಗೆ ಹೋಗುವದು ಅವಶ್ಯವಿಲ್ಲ. ಆ ಮಕ್ಕಳು ಶೇತಕಿ, ಧಂದೆ ಮುಂತಾದ ಕೆಲಸಗಳಲ್ಲಿ ಮನೆಯವರಿಗೆ ಹಾಗು ನೆರೆ ಹೊರೆಯವರಿಗೆ ನೆರವಾಗುವದು ಒಳಿತು. ಉದ್ಯೋಗವೇ ಶಿಕ್ಷಣದಲ್ಲಿ ಕೇಂದ್ರ ಸ್ಥಾನವೆಂದು ಗಾಂಧೀಜೀಯವರು ಒತ್ತಿ ಹೇಳಿರುವರು. ಗಾಂಧೀಜಿಯವರ ಹೇಳಿಕೆಯಿಂದಲೇ ಇಂದಿನ ಶಿಕ್ಷಣ-ತಜ್ಞರು ಶಿಕ್ಷಣದಲ್ಲಿ ಮಾರ್ಪಾಟು ಮಾಡಲು ಆತುರರಾಗಿರುವರು. ಹಿಂದುಸ್ತಾನದ ಯುದ್ಧೋತ್ತರ ಪುನರ್ರಚನೆಯಲ್ಲಿ ಅವರ ದೂರದೃಷ್ಟಿಕ ತತ್ವವು ಮಾನ್ಯ ಮಾಡಲ್ಪಟ್ಟಿದೆ. ಇಷ್ಟೇ ಅಲ್ಲದೆ ಯುನೆಸ್ಕೋದ ಮೂಲ ಶಿಕ್ಷಣದಲ್ಲಿಯೂ ಸ್ಥಾನ ಪಡೆದಿದೆ.

ಆದರೆ ರಾಷ್ಟ್ರೀಯ ಮೂಲ ಶಿಕ್ಷಣವು ಗಾಂಧೀಜಿಯವರ ದೈಕ್ಷಣಿಕ ಪ್ರತಿಫಲವಲ್ಲ. ನಾನು ಮೊದಲೇ ಹೇಳಿದಂತೆ ಉದ್ದೇಶ ಶಿಕ್ಷಕನು ಶಾಲೆಯಲ್ಲಿ ಒಂದೇ ಕಲಿಸುವ ಕ್ರಮವನ್ನು ಸುಧಾರಿಸುವದಲ್ಲ, ಜನರ ಹೃದಯ ಹಾಗೂ ಮನಸ್ಸನ್ನು ಪರಿವರ್ತನೆಗೊಳಿಸುವದೂ ಅತನ ಕರ್ತವ್ಯವು. ಗಾಂಧೀಜಿಯವರು ಅಂತಹ ದೃಷ್ಟಿಯುಳ್ಳ ಋಷಿಯೂ ಪ್ರಾಯೋಗಿಕ ಮನುಷ್ಯರೂ ಆಗಿದ್ದರು. ಜನರನ್ನು ಗಟ್ಟಿಗಾದ ದುಡಿಮೆಗಾರರನ್ನಾಗಿ ಮಾಡಿ, ಉದ್ಯೋಗಸ್ಥರನ್ನಾಗಿ ಮಾಡಿ, ಜನತೆಯ ಜೀವನದ ಮಟ್ಟವನ್ನು ಸುಧಾರಿಸುವದು ಅವರ ಮನಸ್ಸಿನಲ್ಲಿತ್ತು ಹಾಗೂ ಅವರಲ್ಲಿ ನಿಜವಾದ ಮನುಷ್ಯತ್ವವನ್ನು ಒಪಮೂಡಿಸುವ ಇಚ್ಛೆಯೂ ಇದ್ದಿತು. ಈ ಎರಡೂ ಧ್ಯೇಯಗಳು ಅವರ ದೃಷ್ಟಿಯಲ್ಲಿ ಬೇರೆಯಾಗಿರದೇ ಒಂದೇ ಇದ್ದು ಅವರ ಮಾನಸಿಕ ಹಾಗು ನೈತಿಕ ಘನತೆಯ ಕುರುಹುಗಳಾಗಿವೆ. ಅವರ ವಿಚಾರ ಸರಣಿಯಲ್ಲಿ ಪ್ರತಿಯೊಂದು ಕ್ಷುಲ್ಲಕ ಮಾತೂ ಕೃತಿಯೂ ಜೀವನಕ್ಕೆ ಮಹತ್ವವನ್ನೊದಗಿಸಲು ಶಾಶ್ವತ ಕುರುಹುಗಳಾಗಿವೆ. ಅವರು ಸ್ವತಃ ಅವಿಶ್ರಾಂತ ಕೆಲಸಗಾರರಿದ್ದು ಉದ್ಯೋಗದ ಮಹತ್ವವನ್ನು ಮಕ್ಕಳಿಗೂ ವಯಸ್ಕರಿಗೂ ಕಲಿಸಬೇಕೆಂದಿದ್ದರು. ಯಾಕಂದರೆ, ಶಾಬ್ದಿಕ ಪೋಷಕ್ಕೊಳಗಾಗದೇ ಪ್ರತ್ಯಕ್ಷ ಜ್ಞಾನವನ್ನೂ ಪ್ರಾಮಾಣಿಕತೆಯನ್ನೂ, ನಮ್ರತೆಯನ್ನೂ ದೊರಕಿಸಲು ಇದರಿಂದಲೇ ಜನರಿಗೆ ಸಹಾಯವಾಗುವದು. ಶಿಕ್ಷಣದ ಮುಖಾಂತರ ಅಹಿಂಸೆಯ ತತ್ವವನ್ನೂ ಹಾಗೂ ಶಾಂತಿಯನ್ನೂ ಹಬ್ಬಿಸಬೇಕೆಂದಿದ್ದರು. ಹಾಗೂ ಜನರಲ್ಲಿ ತಳವೂರಿದ ಭೇದ ಭಾವವನ್ನು ದೂರ ಮಾಡಬೇಕೆಂದಿದ್ದರು. ಹಿಂದೂಗಳೂ, ಮುಸ್ಲಿಮರೂ, ಉಚ್ಚ ಹಾಗೂ ನೀಚ ಜಾತಿಯವರೂ, ಶ್ರೀಮಂತ ಹಾಗೂ ಬಡವರ ಮಕ್ಕಳೂ ಉದ್ಯೋಗಕ್ಕೆ ಸರಿಸಮಾನರಾಗಿ ನಿಲ್ಲಬೇಕೆಂದೂ ಹಾಗೂ ಇದರಿಂದ ಸಾಮಾಜಿಕ ಸಮಾನತೆಯನ್ನೂ, ನಿಃಸ್ವಾರ್ಥ ಜನಸೇವೆ ಮಾಡುವದನ್ನೂ, ಜಗತ್ತಿನ ಸೇವೆಯನ್ನೂ ಸಹ ಮಾಡುವದನ್ನೂ ಕಲಿಯಲು ಅಣಿಯಾಗಬೇಕೆಂದು ಬಯಸಿದ್ದರು. ಈ ಉಚ್ಚ ಧ್ಯೇಯವು ಅವರ ರಾಜಕಾರಣವನ್ನು ಮುಂದರಿಸಿತು. ಶಿಕ್ಷಣ, ಧರ್ಮ, ಹಾಗೂ ಸಾಮಾಜಿಕ ಚಟುವಟಿಕೆಗಳೂ ಮುಂದೆ ಬಂದವು. ಇಡೀ ಜಗತ್ತು ನೀಚ ಹಾಗೂ ಅನ್ಯಾಯದ ವಜ್ರಾಳಿಕೆಗೆ ಒಳಗಾಗಿದಂಬುದನ್ನು ಅವರು ತುಂಬಾ ಅರಿತಿದ್ದರು. ಆದ್ದರಿಂದ ಹಿಂದುಸ್ತಾನವನ್ನು ಆರಾ-ಗೃಹವನ್ನಾಗಿ ಮಾಡಿ ಎಲ್ಲರೂ ಶಾಂತ ರೀತಿಯಿಂದ, ಮಿತ್ರತ್ವ ಭಾವದಿಂದ ಇರುವ ಹಾಗೂ ಸಾಮಾಜಿಕ ನ್ಯಾಯ ದೊರೆಯುವ ಆಗರವನ್ನಾಗಿ ಮಾಡಬೇಕೆಂದು ಬಯಸಿದ್ದರು. ಲಾಯಶಕ್ತಿಯನ್ನು ಪ್ರೀತಿಯ ಅಸಾಧಾರಣ ಶಕ್ತಿಯಿಂದ ಎದುರಿಸಬೇಕೆಂದಿದ್ದರು. ಉರ್ದು ಕವಿಯು ಹೇಳುವ ಹಾಗೆ " ಪ್ರೇಮವು ಸೋಲನ್ನು ಒಪ್ಪಿಲ್ಲ ಆದ್ದರಿಂದ ನಿರಾಶನಾಗಬೇಡ " ಎಂಬುದನ್ನು ಅರಿತಿದ್ದರು. ಆದರೆ ಹಿಂದೂಗಳು, ಮುಸ್ಲಿಮರು, ಸಿಖರು ತಾತ್ಕಾಲಿಕ ಪ್ರೀತಿ, ಶಿಸ್ತು, ಹಾಗೂ ಸತ್ಯದಯತೆಗಳನ್ನು ಮರೆತಾಗ್ಗೆ, ತಮ್ಮ ಆಜ್ಞೆಯನ್ನುಲ್ಲಂಘಿಸಿದಾಗ್ಗೆ-ಸತ್ಯದ ದಾರಿಯನ್ನು ತಪ್ಪಿದಾಗ್ಗೆ ಮತ್ತು ಹಿಂಸಾತ್ಮಕ ಕ್ರೂರ ಕೃತಿಗಳಲ್ಲಿ ತೊಡಗಿದಾಗ್ಗೆ ಮಹಾತ್ಮಾಜಿಯವರ ಅಂತಃಕರಣವು ಕರಗಿ ನೀರಾಯಿತು. ತನ್ನ ದೇಶವು ಅಹಿಂಸೆಯಿಂದ ಸಾಧಿಸೊಂದುವದೇ ? ಇಲ್ಲ. ಎಂದಿಗೂ ಇಲ್ಲ. ಆದರೆ ಈ ನಿಃಸ್ವಾರ್ಥ ಸತ್ಯದಲ್ಲಿ ಹೆಚ್ಚು ನಂಬಿಗೆಯಿದ್ದ ಮಹಾತ್ಮಾಜಿಯವರಲ್ಲಿ ಬೋಧನೆ ಹಾಗೂ ಬರಹಗಳು ಆಯುಧಗಳಾಗಿದ್ದವು. ಈ ಹಿಂದುಸ್ತಾನ ಹಾಗೂ ಪಾಕಿಸ್ತಾನಗಳ ಕೊನೆಯ ನಿರ್ಣಯದಲ್ಲಿ ತಮ್ಮ

ಪ್ರಾಣಾದಿ ಸರ್ವಸ್ವವನ್ನೆಲ್ಲ ಧಾರೆಯೆರೆದರು. "ಅಕ್ಕಂದಿರಾ, ಅಣ್ಣ-ತಮ್ಮಂದಿರಾ" ಎಂದು ಸಂಬೋಧಿಸುವ ಅವರ ಪ್ರಾರ್ಥನೋತ್ತರ ಭಾಷಣಗಳು ಅಮರವಾಗಿವೆ. ಪ್ರಸಿದ್ಧ ಪುರುಷರು ಸಹಿತ, ಸುತ್ತಲಿನ ಹಿಂಸಾತ್ಮಕ ಕೃತಿಗಳಿಂದ ದಿಙ್ಮೂಢರಾಗಿದ್ದರು. ಆದರೆ ಅಸಾಮಾನ್ಯ ಧೈರ್ಯವಂತರಾದ ಮಹಾತ್ಮಾಜಿಯವರು ಎದೆಗುಂದದೆ ಎಲ್ಲರಿಗೂ ದಾರಿಯನ್ನು ತೋರಿಸುತ್ತಿದ್ದರು. ಕೆಲವು ದಿನಗಳ ಹಿಂದೆ ಒಂದು ಶಿಕ್ಷಣ ಸಮ್ಮೇಲನದಲ್ಲಿ ಗಾಂಧೀಜಿಯವರು ಒಬ್ಬ ಉತ್ತಮ ಪ್ರೌಢಶಿಕ್ಷಣದ ಕಾರ್ಯನಿರ್ವಾಹಕರೆಂದು ನಾನು ಹೇಳಿದ್ದೇನೆ. ಕವಿ ಇಕ್ಬಾಲನು ಹೇಳುವಂತೆ ಎಂತಹ ಬಿರುಗಾಳಿ ಬೀಸಿದರೂ, ದೈವಿಕ ಮನುಷ್ಯನು ನಿಧಾನವಾಗಿ ತನ್ನ ಕೆಲಸಗಳನ್ನು ಈಡೇರಿಸುತ್ತಾನೆ. ಇಂತಹ ಬಿರುಗಾಳಿಯನು ಎದುರಿಸಿದ ಈ ದೀಪವು ಇಷ್ಟು ಬೇಗನೇ ನಂದುವದೆಂದು ಯಾರು ನಂಬಿದ್ದರು? ದೀಪವು ಆರಿದರೂ, ವೈಚಿತ್ರ್ಯವೆಂದರೆ, ಬೆಳಕನ್ನು (ತೇಜ) ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ! ಕೀಳರು ಉತ್ತಮರನ್ನು ನಾಂಪಾಡಲುದ್ಯುಕ್ತರಾದರೂ ಉತ್ತಮರ ಕೃತಿಗಳು ಬೆಳಗುತ್ತಲೇ ಇರುತ್ತವೆ. ಒಬ್ಬ ಉತ್ತಮ ಮನುಷ್ಯನು ದೇವರಲ್ಲಿ ವಿಶ್ವಾಸವಿಟ್ಟು, ತನ್ನ ಬಂಧುಗಳ ಸೇವೆಯನ್ನು ಮಾಡಬೇಕೆಂದಾಗ ಅವನ ವ್ಯಕ್ತಿತ್ವವು ಬೆಳಗುತ್ತಲೇ ನಡೆಯುತ್ತದೆ. ಅವರು ತಮ್ಮ ಬೋಧನೆಯಿಂದ ಭಾರತನವನ್ನಷ್ಟೇ ಅಲ್ಲದೆ ಸಮಸ್ತ ಜಗತ್ತನ್ನೇ ಬೆಳಗಿದ್ದಾರೆ. ನಮ್ಮ ದೇಶಬಾಂಧವರು ಅವರನ್ನು ಹೃದಯಲ್ಲಿರಿಸಿ, ಶಾಲೆಯ ಮಕ್ಕಳು ಅವರ ಬೋಧನೆಯನ್ನು ಪ್ರಚಾರಗೊಳಿಸುವರು. ಇದುವೇ ಗಾಂಧೀಜಿಯವರ ಸ್ಮಾರಕ.

ಮುಗಿಲರಸಿ

ಒಂದು ಸಂಜೆಯಲ್ಲಿ:
ಕೆಂದಳಿರಿನ ತೋರಣವನು
ಕಟ್ಟಿಹಳು ನಭವಧು.
ಬಾನಂಚಿನೊಳಿಳಿ ಬಿಡ್ಡಿದೆ
ಚೆಂಬಣ್ಣದೊಳದು.
ದಿಗ್ವನಿತೆಯ ಆರತಿಯಾ
ಕುಡಿದೀಪದ ಬೆಳಕು.
ಕನ್ನೆಯ ಕೆನ್ನೆಯ ಹೊಂಬ-
ಣ್ಣವು ಸಂಧೆಯ ಥಳಕು.
ತಾಮರ ತನುವಿಗೆ ಮೇಲುದು
ಗುಲಾಬಿ ಬಣ್ಣದ್ದು.
ನೀಲಿಯ ಕುಸುಮ ಬಳ್ಳಿಯ
ಕಸೂತಿ ತೆಗೆದದ್ದು.
ನಲ್ಲನು ಬಂದರೆ ಧರಿಸುತ
ನಿಂತಳು ಮುಗಿಲರಸಿ.
ವಿಹಗಂಗಳ ಕಲರವವಾ
ಮೃದುಗಾನವಗೈಸಿ.

—ಮಿರ್ಜಿ ಅಣ್ಣಾರಾಯ.

ಹಿಂದುಸ್ತಾನಿಯೆ ಭಾರತೀಯರ ಐಕ್ಯದ ಸಾಧನ

ಲೇಖಕರು : **ಶ್ರೀ. ಎ. ಎನ್. ಸಾನೆ,** ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

●

ಸೋದರ ಸೋದರಿಯರೇ,

ತಾವು ನನಗೆ ನಲ್ಲಿಸಿದ ಅಧ್ಯಕ್ಷಸ್ಥಾನಕ್ಕಾಗಿ ನಾನು ತಮ್ಮೆಲ್ಲರಿಗೂ ಅತ್ಯಂತ ಕೃತಜ್ಞನಾಗಿದ್ದೇನೆ. ತಾವು ಈ ಸ್ಥಾನಕ್ಕೆ ಹಿಂದೀ ಭಾಷಾತಜ್ಞರಾದವರನ್ನು ಆರಿಸಿದ್ದರೆ ಅತ್ಯಂತ ಚೆನ್ನಾಗುತ್ತಿತ್ತು. ಆದರೆ ನನ್ನನ್ನೇ ಇದಕ್ಕೆ ಆರಿಸುವುದರಲ್ಲಿ ಈ ಭಾಷೆಯ ಪ್ರಗತಿ ಹಾಗೂ ಇದರ ಅಭ್ಯಾಸದ ಪ್ರಚಾರ ಮಾಡುವುದರ ಕಡೆಗೆ ನನ್ನ ದೃಷ್ಟಿಯನ್ನು ಸೆಳೆಯಬೇಕೆಂಬ ದೃಷ್ಟಿ ತಮ್ಮದಿದೆಯೆಂದು ನನಗನಿಸುತ್ತದೆ. ಈತಮ್ಮ ದೃಷ್ಟಿಯನ್ನನುಲಕ್ಷಿಸಿ, ತಮ್ಮ ಸದ್ಭಾವನೆಯಿಂದ ಪ್ರೇರಿತನಾಗಿ ಈ ಸ್ಥಾನವನ್ನು ಗ್ರಹಿಸಿದ್ದೇನೆ.

ನಿಕಟ ಭವಿಷ್ಯದಲ್ಲಿ ಹಿಂದುಸ್ತಾನಿಯು ಈ ದೇಶದ ರಾಷ್ಟ್ರಭಾಷೆಯಾಗಿಯೆ ತೀರುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವು ಮಾತೃಭಾಷೆಯ ಮುಖಾಂತರ ಸಾಗಿದಾಗ್ಯೂ ನಿಕಟ ಭವಿಷ್ಯದಲ್ಲಿ ಉಚ್ಚ ಶಿಕ್ಷಣವು ಹಿಂದುಸ್ತಾನಿಯ ಮುಖಾಂತರ ಕೊಡಲ್ಪಡುವುದೆಂಬುದರಲ್ಲಿಯೂ ಯಾವ ಸಂದೇಹವೂ ಇಲ್ಲ. ಈ ದೃಷ್ಟಿಯಿಂದ ಹಿಂದುಸ್ತಾನಿಯನ್ನು ಎಷ್ಟು ಲಗುಬಗೆಯಿಂದ ಕಲಿಯುವುದು ಸಾಧ್ಯವೋ ಅಷ್ಟು ಬೇಗ ಕಲಿಯುವುದು ಒಳ್ಳೆಯದು. ಹಿಂದೀ ಅಥವಾ ಹಿಂದುಸ್ತಾನಿಯನ್ನು ಕಲಿಯುವುದು ಕಠಿನವಾದ ಕಾರ್ಯವಲ್ಲ. ಪ್ರತಿದಿನ ಅರ್ಧ ಗಂಟೆಯನ್ನು ಇದನ್ನು ಕಲಿಯಲು ವೆಚ್ಚ ಮಾಡಿದರೆ, ಒಂದೆರಡು ವರುಷಗಳಲ್ಲಿ ಈ ಭಾಷೆಯಲ್ಲಿ ಪ್ರಗತಿಯನ್ನು ಮಾಡಿಕೊಳ್ಳಬಹುದೆಂದು ನನ್ನ ನಂಬಿಗೆ. ನಮಗೆ ತಿಳಿಯದಂತೆ ನಮ್ಮ ಮಾತಿನಲ್ಲಿ ಎಷ್ಟೋ ಹಿಂದುಸ್ತಾನಿ ಶಬ್ದಗಳು ಬಂದು ಹೋಗುತ್ತವ. ಅವು ಹಿಂದುಸ್ತಾನಿಯ ಶಬ್ದಗಳೆಂಬುದು ನಮಗೆ ಗೊತ್ತಿರುವುದಿಲ್ಲ. ಈ ಭಾಷೆಯನ್ನು ನಾವು ಕಲಿತಲ್ಲಿ ನಮಗೆ ಇದರ ಉಚ್ಚತರ ಗತಿಯ ಸಾಹಿತ್ಯದ ಬಾಗಿಲೂ ತೆರೆಯುವುದು. ಇದಕ್ಕೂ ಹೆಚ್ಚಾಗಿ ನಮ್ಮ ನಾಡಿನ ಐಕ್ಯದ ದೃಷ್ಟಿಯಿಂದ ಈಭಾಷೆಯ ಲಾಭವು ನಮಗೆ ದೊರೆಯುವುದು ಹೆಚ್ಚು ಅಗತ್ಯವಿದೆಯೆಂದು ನನಗೆ ತೋರುತ್ತದೆ.

ಇದು ಪ್ರಾಂತೀಯತೆ, ಭಾಷೆ, ಮತ್ತು ಜಾತೀಯತೆಯ ಕಾಲ. ಇಂಥ ಕಾಲದಲ್ಲಿ **ನಾವು ಭಾರತೀಯರೆಲ್ಲರೂ ಒಂದೇ** ಎಂಬ ಭಾವನೆಯನ್ನು ಸರ್ವ ಪ್ರಾಂತಗಳಲ್ಲಿ ಹುಟ್ಟಿಸುವ ಒಂದೇ ಒಂದು ಸಾಧನವೆಂದರೆ ಹಿಂದುಸ್ತಾನಿ ಭಾಷೆಯ ಅಧ್ಯಯನ ಮತ್ತು ಅದನ್ನಾಡುವುದು. ಒಂದು ವೇಳೆ ಈ ಮರ್ಮವನ್ನು ಅರಿತು, ಇದರಂತೆ ಆಚರಿಸದೆ ಹೋದಲ್ಲಿ, ನಮ್ಮ ರಾಷ್ಟ್ರೀಯ ಜೀವನಕ್ಕೆ ಹುಳಗಳು ಹತ್ತಿ, ರಾಷ್ಟ್ರವೇ ನಾಶವಾದೀತು.

ಆದ್ದರಿಂದ ತಾವೆಲ್ಲರೂ ಈ ರಾಷ್ಟ್ರಭಾಷೆಯನ್ನು ಕಲಿತು ರಾಷ್ಟ್ರವನ್ನು ಬಲಗೊಳಿಸುವ ಕಾರ್ಯದಲ್ಲಿ ನಿರತವಾಗಬೇಕೆಂದು ತಮ್ಮೆಲ್ಲರಿಗೂ ನನ್ನ ಹಾರ್ದಿಕ ಪ್ರಾರ್ಥನೆ.

ಇಂದು ಪ್ರಮಾಣ ಪತ್ರಗಳನ್ನು ಪಡೆದವರನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಏಕೆಂದರೆ ಹಿಂದುಸ್ತಾನಿಗೆ ಸರಕಾರದ ಮಾನ್ಯತೆ ಇಲ್ಲದಿರುವಾಗ ಇವರು ಹಿಂದೀ ಅಥವಾ ಹಿಂದುಸ್ತಾನಿಯನ್ನು ಕಲಿಯಲು ಪ್ರಾರಂಭಿಸಿದರು. ಮತ್ತು ಅದರಲ್ಲಿ ಯಶಸ್ಸನ್ನು ಸಂಪಾದಿಸಿದರು. ಇದೊಂದು ನಿಷ್ಕಾಮ ಕರ್ಮದ ಅಂಗ.

ಕೊನೆಯಲ್ಲಿ, ಹಿಂದೀ ಅಥವಾ ಹಿಂದುಸ್ತಾನಿ ಭಾಷಾಭ್ಯಾಸಿಗಳ ಸಂಖ್ಯೆ ಉತ್ತರೋತ್ತರವಾಗಿ ಭರದಿಂದ ಬೆಳೆಯಲೆಂದೂ ಹಿಂದೀ ಪ್ರಚಾರ ಸಭೆಯ ಕಾರ್ಯ ಯಶಸ್ವಿಯಾಗಲೆಂದೂ ಹಾರೈಸುತ್ತೇನೆ.*

---

*ತಾ ॥ ೪–೪ –೧೯೪೪ ರಂದು ಧಾರವಾಡದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರಗಳನ್ನು ಹಂಚುವ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಶ್ರೀ. ಸಾನೆ ಅವರು ಮಾಡಿದ ಭಾಷಣವಿದು.

ಸ್ತ್ರೀಯರಿಗೆ ಮೂಲ ಶಿಕ್ಷಣ

ಲೇಖಕರು : **ಶ್ರೀ. ಆರ್. ಎಲ್. ಪಾಟೀಲ,** ಬಿ. ಎಸ್‌ಸಿ., ಬಿ. ಟಿ.
ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

●

ಶಿಕ್ಷಣವು ಭಾವೀ ಜೀವನದ ಪೂರ್ವ ಸಿದ್ಧತೆ ಎಂದು ತಿಳಿದುಕೊಂಡರೆ, ಶಿಕ್ಷಣದ ಧ್ಯೇಯವು ಭಾವೀ ಜೀವನಕ್ಕನುಸರಿಸಿದುದೇ ಇರಬೇಕು. ಶಿಕ್ಷಣವು ಒಂದು ಸಂಸ್ಕೃತಿಯನ್ನು ಒದಗಿಸಿಕೊಡುವದೆಂದರೆ, ನಾಡಿನ ಅಥವಾ ಸಮಾಜದ ಸಂಸ್ಕೃತಿಯನ್ನು ಕಟ್ಟಿ ಬೆಳೆಯಿಸುವದೇ ಶ್ರೇಷ್ಠ ಧ್ಯೇಯವಾಗಿರಬೇಕು. ಶಿಕ್ಷಣದ ಧ್ಯೇಯವು ಮೇಲಿಂದ ಮೇಲೆ ಬದಲಾಗುತ್ತಿದೆ. ಶಿಕ್ಷಣದ ಧ್ಯೇಯವು ಪುರುಷನನ್ನು ಉತ್ತಮ ನಾಗರಿಕನನ್ನಾಗಿ ಮಾಡುವುದಾದರೆ, ಅದು ಸ್ತ್ರೀಯನ್ನು ಉತ್ತಮ ನಾಗರಿಕಳನ್ನಾಗಿ ಮತ್ತು ಉತ್ತಮ ಗೃಹಿಣಿಯನ್ನಾಗಿ ಮಾಡಬೇಕು. ಸಮಾಜದಲ್ಲಿ ಸ್ತ್ರೀಯ ಸ್ಥಾನವಾವುದು ? ಸ್ತ್ರೀಗೆ ಪುರುಷನ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕೊಟ್ಟಾಗ್ಯೂ ಅವಳು ಉತ್ತಮ ಗೃಹಿಣಿಯಾಗಬೇಕೆಂಬುದನ್ನು ಯಾರೂ ಅಲ್ಲಗಳೆಯಲಾರರು. ಗೃಹಿಣಿಯ ಕಾರ್ಯಕ್ಷೇತ್ರವು ಬಹುಮಟ್ಟಿಗೆ ಗೃಹಕೃತ್ಯಗಳಿಗೆ ಸಂಬಂಧಪಟ್ಟದ್ದು. ಸ್ತ್ರೀಗೆ ಮಕ್ಕಳನ್ನು ಹೆರುವದು, ಅವುಗಳ ಲಾಲನೆ-ಪಾಲನೆ ಮಾಡುವದು, ಕುಟುಂಬದ ಜನರಿಗೆ ಆಹಾರವನ್ನೊದಗಿಸಿಕೊಡುವದು, ಜೀನೆಯವರ ಆರೈಕೆ ಮಾಡುವದು, ಮನೆಯ ಮತ್ತು ಉಡುಪುಗಳ ಸ್ವಚ್ಛತೆಯನ್ನು ಕಾಯುವದು, ಮನೆಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನಿಡುವದು ಇವು ಸ್ವಾಭಾವಿಕ ಕಾರ್ಯಗಳು. ಈ ಕಾರ್ಯಗಳಿಗೆ ಪುರುಷನು ಸಾಕಷ್ಟು ಲಕ್ಷ್ಯ ಪೂರೈಸಲಾರನು; ಆದರೆ ಅವನು ಈ ಕಾರ್ಯಗಳಲ್ಲಿ ಅವಳಿಗೆ ಸಹಾಯಕನು ಮಾತ್ರ ಆಗಬಲ್ಲನು. ಇನ್ನಿತರ ಕಾರ್ಯಗಳಲ್ಲಿ ಸ್ತ್ರೀಯು ಪುರುಷನಿಗೆ ಸಹಾಯಕಳಾಗಬೇಕು.

ಬರೀ ಓದು ಬರೆಹ ಕಲಿಯುವದೇ ಶಿಕ್ಷಣವೆಂದರೆ ತಪ್ಪಾಗುವದು. ಅದು ಶಿಕ್ಷಣವಲ್ಲ; ಆದರೆ ಶಿಕ್ಷಣದ ಒಂದು ಸಾಧನವು. ಆದ್ದರಿಂದ ಮಕ್ಕಳನ್ನು ಸಾಕ್ಷರರನ್ನಾಗಿ ಮಾಡಿದರೆ ಪಾಲಕರ ಕರ್ತವ್ಯ ಮುಗಿಯಲಿಲ್ಲ. ಶಿಕ್ಷಣವು ಹುಟ್ಟಿದಂದಿನಿಂದ ಸಾಯುವವರೆಗೆ ನಡೆದಿರುತ್ತದೆ. ಅದು ಮನೆಯಲ್ಲಿ, ಸಮಾಜದಲ್ಲಿ ಮತ್ತು ಶಾಲೆಯಲ್ಲಿ ಹೀಗೆ ತ್ರಿಮುಖವಾಗಿ ಸಾಗಿರುತ್ತದೆ. ಶಾಲೆಯಲ್ಲಿ ಕೊಡುವ ಶಿಕ್ಷಣವು ಮನೆಯಲ್ಲಿ ಮತ್ತು ಸಮಾಜದಲ್ಲಿ ನಡೆಯುವ ಶಿಕ್ಷಣಕ್ಕೆ ಪೂರಕವಾಗಿದೆ.

ಮೇಲೆ ಹೇಳಿದ ಶಿಕ್ಷಣ ಧ್ಯೇಯಕ್ಕನುಸರಿಸಿ ಸ್ತ್ರೀಗೆ ಶಾಲೆಯಲ್ಲಿ ಕೊಡುವ ಶಿಕ್ಷಣವು ಹೇಗಿರಬೇಕೆಂಬುದನ್ನು ವಿಚಾರಿಸೋಣ. ಪುರುಷ ಮತ್ತು ಸ್ತ್ರೀಯಲ್ಲಿ ಸ್ವಾಭಾವಿಕವಾದ ದೈಹಿಕ ಮತ್ತು ತುಸುಮಟ್ಟಿಗೆ ಮಾನಸಿಕ ಭೇದಗಳಿರುತ್ತವೆ. ಈ ಭೇದಗಳಲ್ಲದೆ ಸ್ತ್ರೀಗೆ ಕೊಡುವ ಶಿಕ್ಷಣದ ಉದ್ದೇಶವಾದರೂ ಬೇರೆ ಇರುತ್ತದೆ. ಆದ್ದರಿಂದ ಬಾಲಕರ ಮತ್ತು ಬಾಲಿಕೆಯರ ಶಿಕ್ಷಣವು ತುಸುಮಟ್ಟಿಗಾದರೂ ಬೇರೆ ಸಾಗಬೇಕೆಂಬುದನ್ನು ಎಲ್ಲರೂ ಒಪ್ಪುವರು. ಈ ಶಿಕ್ಷಣ ಕ್ರಮವನ್ನು ವಿವರಿಸುವದಕ್ಕಿಂತ ಮೊದಲು ಸದ್ಯಕ್ಕೆ ಕರ್ನಾಟಕದಲ್ಲಿ (ದಕ್ಷಿಣ ಭಾಗದಲ್ಲಿ) ಸ್ತ್ರೀ ಶಿಕ್ಷಣದ ಪರಿಸ್ಥಿತಿ ಏನಿದೆಯೆಂಬುದನ್ನು ಅವಲೋಕನ ಮಾಡೋಣ.

೧೯೬೫ನೆಯ ಮಾರ್ಚ ತಿಂಗಳಲ್ಲಿ ಶಾಲೆಗೆ ಹೋಗುವ ಗಂಡು ಮತ್ತು ಹೆಣ್ಣು ಹುಡುಗರ ಸಂಖ್ಯೆ ಇಯತ್ತೆ ಪ್ರಕಾರ ಕೆಳಗಿನಂತೆ ಇತ್ತು.

ಬಾ. ವರ್ಗ	೧	೨	೩
ಗ.	೩೩೬೩೪	೩೬೬೯೦	೩೦೬೭೨	೨೫೪೭೬
ಹೆ.	೩೩೧೧೯	೧೬೧೩೨	೧೧೪೧೮	೮೩೪೪

	೪	೫	೬	೭
ಗ.	೨೨೨೬೭	೧೦೮೪೦	೭೯೪	೭೪೦೩
ಹೆ.	೫೮೪೪	೨೩೪೩	೧೩೫	೯೯೪

ಇದು ಹಾಜರಿ ಪಟದ ಮೇಲಿನ ಸಂಖ್ಯೆ. ಆದರೆ ನಿಜವಾಗಿಯೂ ಹೆಣ್ಣು ಹುಡುಗರ ಸಂಖ್ಯೆ ಗಂಡು ಹುಡುಗರ ಸಂಖ್ಯೆಗಿಂತ ಬಹಳ ಕಡಿಮೆ ಇರುತ್ತದೆ. ಮೇಲಿನ ಸಂಖ್ಯೆಗಳಿಂದ ನಮಗೆ ಕಂಡುಬರುವದೇನಂದರೆ ಬಾಲಕ ವರ್ಗದಲ್ಲಿ ಹೆಂಣು ಹುಡುಗರ ಸಂಖ್ಯೆ ಗಂಡು ಹುಡುಗರ ಸಂಖ್ಯೆಗಿಂತ ಅರ್ಧವಷ್ಟಿದ್ದರೂ ೭ನೆಯ ಇಯತ್ತೆಯಲ್ಲಿ ಅದು ಸುಮಾರು ಒಂದೆಂಟಾಶದಷ್ಟು ಇರುತ್ತದೆ. ಇದಕ್ಕೆ ಕಾರಣಗಳು ಕೆಳಗಿನಂತಿವೆ:—

೧. ಸ್ತ್ರೀ ಶಿಕ್ಷಣದ ಬಗ್ಗೆ ಪಾಲಕರಲ್ಲಿನ್ನ ಅನಾಸ್ಥೆ.

೨. ಎಲ್ಲ ಕಡೆಗೆ ಪ್ರತ್ಯೇಕ ಹೆಣ್ಣು ಹುಡುಗರ ಶಾಲೆಗಳಿಲ್ಲದಿರುವಿಕೆ.

೩. ಹೆಣ್ಣುಮಕ್ಕಳ ಶಾಲೆಗಳಿದ್ದರೂ ಸ್ತ್ರಿ ಶಿಕ್ಷಿಕೆಯರಿಲ್ಲದಿರುವದು.

೪. ಹಳ್ಳಿಗಳಲ್ಲಿಯ ಆರ್ಥಿಕ ಪರಿಸ್ಥಿತಿಯ ಮೂಲಕ ಅವಳನ್ನು ಮನೆಗೆಲಸಗಳಲ್ಲಿ ತೊಡಗಿಸುವ ಪರಿಪಾಠ.

೫. ಹೆಣ್ಣುಮಕ್ಕಳಿಗೆ ತಕ್ಕಂತೆ ಶಿಕ್ಷಣ-ಕ್ರಮವಿಲ್ಲದಿರುವದು.

ಇನ್ನು ಒತ್ತಾಯದ ಪ್ರಾಥಮಿಕ ಶಿಕ್ಷಣ ಕಾಯಿದೆಯಿಂದ ಈ ಎಲ್ಲ ಸಮಸ್ಯೆಗಳು ಬಿಡಲಾರವು. ಪ್ರತಿಯೊಂದು ದೊಡ್ಡ ಹಳ್ಳಿಯಲ್ಲಿಯೂ ೫, ೬, ೭ನೆಯ ಇಯತ್ತೆಗಳಲ್ಲಿಯಾದರೂ — ಅಂದರೆ ಬಾಲಿಕೆಯರು ೧೦ ರಿಂದ ೧೩ ವರ್ಷದ ವರೆಗೆ— ಪ್ರತ್ಯೇಕವಾಗಿದ್ದ ಹೆಣ್ಣು ಹುಡಿಗೆಯರ ಶಾಲೆಗೆ ಹೋಗಬೇಕು. ೧ರಿಂದ ೪ನೆಯ ಇಯತ್ತೆಯವರೆಗೆ ಅಂದರೆ ೫ ರಿಂದ ೯-೧೦ ವರ್ಷದ ವಯಸ್ಸಿನವರೆಗೆ ಪ್ರತ್ಯೇಕ ಶಾಲೆಗಳ ಅವಶ್ಯಕತೆ ಇಲ್ಲದಿದ್ದರೂ ಸ್ತ್ರೀ ಶಿಕ್ಷಿಕೆಯರ ಅವಶ್ಯಕತೆ ಇದೆ.

ಸರ್ವಾ ಶಿಕ್ಷಣ ಯೋಜನೆಯಿಂದ ಈ ಮೇಲಿನ ಕೆಲವು ಸಮಸ್ಯೆಗಳು ಬಿಡಬಹುದು. ಸರ್ವಾ ಶಿಕ್ಷಣ ಯೋಜನೆಯಲ್ಲಿಯ ತತ್ವಗಳು ಇಂತಿವೆ. — ಮಕ್ಕಳ ಶಿಕ್ಷಣವು ಮನಶ್ಶಾಸ್ತ್ರದ ತತ್ವಗಳಿಗನುಗುಣವಾಗಿ ಸಾಗಬೇಕು. ಮಗುವಿನ ಉತ್ಪಾದನ ಶಕ್ತಿಯನ್ನು ಪ್ರೋತ್ಸಾಹಿಸಬೇಕು. ಮತ್ತು ಆತ್ಮ ಪ್ರಕಾಶನಕ್ಕೆ (Self expression) ಅವಕಾಶ ಕೊಡಬೇಕು. ನೋಡಿ ಅಥವಾ ಕೇಳಿ ಕಲಿಯುವದಕ್ಕಿಂತ ಮಾಡಿ ಕಲಿತರೆ ಸ್ವಾನುಭವ ಉಂಟಾಗುವದು. ಮತ್ತು ಕಲಿತದ್ದು ಚನ್ನಾಗಿ ಸ್ಮೃತಿಯಲ್ಲಿ ಉಳಿಯುವುದಲ್ಲದೆ ಕಲಿತ ಜ್ಞಾನವನ್ನು ಉಪಯೋಗಿಸಲು ಅವಕಾಶ ಸಿಗುವದು. ಮಕ್ಕಳಿಗೆ ರಚನೆಯ ಆನಂದವೂ ದೊರೆಯುವದು. ಸರ್ವಾ ಯೋಜನೆಯು ಮನುಷ್ಯನನ್ನು ಸ್ವಾವಲಂಬಿಯನ್ನಾಗಿ ಮಾಡುವದು; ಮಕ್ಕಳಲ್ಲಿ ಬಂಧುಭಾವ, ಹಸನಾದ ಪ್ರೇಮ ಈ ಗುಣಗಳನ್ನು ಬೆಳಿಸುವದು.

ಕೃತಿ ಪ್ರಾಧಾನ್ಯವಾದ ಶಿಕ್ಷಣದಲ್ಲಿ ಕೃತಿಯು ಜೀವನೋಪಾಯವಾಗಿಯೂ, ಜ್ಞಾನಪ್ರದವೂ ಇರಬೇಕು. ಪ್ರೊಜೆಕ್ಟ (ಯೋಜನಾ) ಪದ್ಧತಿಯಲ್ಲಿ ವಿವಿಧ ಕೃತಿಗಳಿದ್ದರೂ, ಆ ಕೃತಿಗಳ ಆರ್ಥಿಕ ಉತ್ಪನ್ನದ ಕಡೆಗೆ ಹೆಚ್ಚಾಗಿ ಲಕ್ಷ್ಯವಿರುವದಿಲ್ಲ. ಆದರೆ ಸರ್ವಾ ಯೋಜನೆಯಲ್ಲಿ ಉತ್ಪಾದಿತ ವಸ್ತುಗಳಿಗೆ ಬೆಲೆ ಬರುತ್ತದೆ. ಮತ್ತು ಆ ಕೃತಿಯು ಭಾವೀ ಜೀವನದಲ್ಲಿ ಉಪಜೀವನದ ಒಂದು ಸಾಧನವಾದರೂ ಆಗಬಹುದು. ಈ ಕೃತಿಯು ಆ ಭಾಗದ ಜನರ ಉದ್ಯೋಗಗಳಿಗೆ ಸಂಬಂಧಿಸಿರಬೇಕೆಂದು ಮಹಾತ್ಮಾ ಗಾಂಧಿಯವರು ಹೇಳಿರುತ್ತಾರೆ.

ಹಿಂದುಸ್ತಾನವು ಹಳ್ಳಿಗಳ ದೇಶ. ನೂರಕ್ಕೆ ೯೦ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ನೂರಕ್ಕೆ ೭೦ರಷ್ಟು ಜನರು ಒಕ್ಕಲತನದಿಂದ ಉಪಜೀವಿಸುತ್ತಾರೆ. ಮನುಷ್ಯ ಪ್ರಾಣಿಯ ಪ್ರಾಥಮಿಕ ಅವಶ್ಯಕತೆಯೆಂದರೆ. ಆಹಾರ ಆದ್ದರಿಂದ ಒಕ್ಕಲತನವು ಒಂದು ಮುಖ್ಯ ಉದ್ಯೋಗವಾಗಬೇಕು. ಮತ್ತು ಶಿಕ್ಷಣವೆಲ್ಲ ಇದರ ಮುಖಾಂತರ ಸಾಗಬೇಕು. ೬-೧೦ ವಯಸ್ಸಿನವರೆಗೆ ತೋಟದ ಕೆಲಸ ಮತ್ತು ೧೦-೧೩ ವರ್ಷದ ವರೆಗೆ ಒಕ್ಕಲತನವನ್ನು ಒಂದು ಮೂಲ ಉದ್ಯೋಗವನ್ನಾಗಿ ಇಟ್ಟುಕೊಳ್ಳಬೇಕು. ಇದರ ಬದಲಾಗಿ ನೂಲುವದರಿಂದ ನೇಯುವದಕ್ಕೆ ಅಥವಾ ರಟ್ಟಿನ ವಸ್ತುಗಳನ್ನು ಮಾಡುವದರಿಂದ ಬಡಿಗತನಕ್ಕೆ ಸಾಗಬಹುದು. ಇವುಗಳಲ್ಲಿ ಸ್ತ್ರೀಯರಿಗೆ ಯಾವದು ಉಪಯೋಗವಾದುದು? ೬-೧೦ ವರ್ಷದ ವರೆಗೆ ಯಾವ ಉದ್ಯೋಗವನ್ನಾದರೂ ಇಟ್ಟುಕೊಳ್ಳಬಹುದು. ಅದನ್ನು ಆ ಪ್ರದೇಶದ ಉದ್ಯೋಗರೇ ನಿರ್ಣಯಿಸಬೇಕು. ಆದರೆ ಈ ಮೊದಲೆ ಹೇಳಿದಂತೆ ಸ್ತ್ರೀಯ ಉತ್ತಮ ಗೃಹಿಣಿಯಾಗಬೇಕಾಗಿದೆ. ಆದ್ದರಿಂದ ಅವಳಿಗೆ ಮನೆಗೆಲಸ (House Craft) ಮತ್ತು ತಾಯ್ತನ (Mother Craft) ಇವುಗಳೇ ಯೋಗ್ಯ ಉದ್ಯೋಗಗಳಾಗಿವೆ. ಸ್ತ್ರೀಯರಿಗೆ ೧೦-೧೩ವಯಸ್ಸಿನ ವರೆಗೆ ಈ ಉದ್ಯೋಗಗಳನ್ನೇ ಮೂಲವಾಗಿ ಇಟ್ಟುಕೊಳ್ಳಬೇಕು. ಇದರಿಂದ

ಶಾಲೆಯ ಬಗ್ಗೆ ಪಾಲಕರಲ್ಲಿರುವ ಅನಾಸ್ಥೆಯು ದೂರವಾಗುವದು. ಆದ್ದರಿಂದ ತೋಟದ ಕೆಲಸ, ನೂಲುವದು ಅಥವಾ ರಟ್ಟಿನ ಕೆಲಸದಿಂದ ತಾಯ್ತನ ಮತ್ತು ಮನೆಗೆಲಸಗಳಿಗೆ ಸಾಗಬೇಕು.

ಈ ಮೇಲಿನ ತತ್ವಗಳಿಗನುಸರಿಸಿ, ನೂಲುವದು ಮತ್ತು ತೋಟದ ಕೆಲಸ ಧಾರವಾಡದ ಹೆಣ್ಣುಮಕ್ಕಳ ಕಾಲೇಜಿನಲ್ಲಿ ಮೊದಲನೇ ಸಾರೆ ಅಭ್ಯಾಸ ಕ್ರಮದಲ್ಲಿ ಸೇರಿಸಲ್ಪಟ್ಟಿವೆ. ಈ ಕಾರ್ಯ ಸುಗಮವಾಗಿ ಸಾಗಿತು. ವಿದ್ಯಾರ್ಥಿನಿಯರು ನೂಲುವದರಲ್ಲಿ ಒಳ್ಳೇ ಆಸ್ಥೆಯನ್ನು ಮತ್ತು ಚಟುವಟಿಕೆಯನ್ನು ತೋರಿಸಿದರು. ತೋಟದಲ್ಲಿ ಉತ್ತಮ ಕಾಯಿಪಲ್ಲೆಯನ್ನು ಬೆಳೆಯಲಾಯಿತು. ಅವರು ತೆಗೆದ ನೂಲು ಉತ್ತಮ ತರಗತಿಯದು ಇತ್ತು. ನೂಲುವದರಲ್ಲಿ ಅವರಿಗೆ ಹೆಚ್ಚು ಆಸ್ಥೆ ಇತ್ತೆಂಬುದು ಅವರು ವಿರಾಮ ಕಾಲದಲ್ಲಿಯೂ ಕೂಡಾ ಟಕಳಿಯಿಂದ ನೂಲು ತೆಗೆಯುತ್ತಿದ್ದರೆಂಬುವದರಿಂದ ಕಂಡು ಬರುತ್ತದೆ. ನೂಲುವದು ಮತ್ತು ತೋಟದ ಕೆಲಸ ಇವು ಸ್ತ್ರೀಯರಿಗೆ ಸ್ವಾಭಾವಿಕವಾಗಿ ಒಪ್ಪುವಂಥ ಉದ್ಯೋಗಗಳೆಂದು ಗೊತ್ತಾಗುತ್ತದೆ. ಹಳ್ಳಿಯಲ್ಲಿ ನೂಲುವದು ಮತ್ತು ಹಿತ್ತಲಲ್ಲಿ ಕಾಯಿಪಲ್ಲೆ ಬೆಳೆಯುವದನ್ನು ಮುಖ್ಯವಾಗಿ ಹೆಣ್ಣುಮಕ್ಕಳೇ ಮಾಡುವ ರೂಢಿಯುಂಟು.

ಇನ್ನು ೫, ೬,೭ನೆಯ ಇಯತ್ತೆಗಳಲ್ಲಿ ಹೊಲಿಗೆಯ ಕೆಲಸ, ಮನೆಗೆಲಸ ಮತ್ತು ತಾಯ್ತನ ಈ ಉದ್ಯೋಗಗಳನ್ನು ಕೇಂದ್ರವಾಗಿಟ್ಟುಕೊಂಡು ಹೇಗೆ ವಿಷಯಗಳನ್ನು ಸಾಗಿಸಬೇಕೆಂಬುದನ್ನು ತುಸು ವಿಚಾರಿಸೋಣ. ಶಾಲೆಯು ಒಂದು ಕುಟುಂಬವೆಂದು ತಿಳಿದು ಅದರ ವ್ಯವಸ್ಥೆಯನ್ನು ಮಕ್ಕಳಿಗೆ ಒಪ್ಪಿಸಬೇಕು. ಪ್ರತಿಯೊಬ್ಬಳಿಗೆ ಅಥವಾ ಒಂದೊಂದು ಗುಂಪಿನ ಬಾಲಿಕೆಯರಿಗೆ ಒಂದೊಂದು ಕೆಲಸವನ್ನು ಒಪ್ಪಿಸಿ ಕೊಡಬೇಕು. ಶಾಲೆಗೆ ಹೊಂದಿ ಒಂದು ಶಿಶು-ಶಾಲೆ ಇರಬೇಕು; ಅಲ್ಲಿ ಇದ್ದ ಚಿಕ್ಕ ಮಕ್ಕಳ ಜೋಪಾನದ ಬಗ್ಗೆ ಪ್ರತ್ಯಕ್ಷ ಕಾರ್ಯ ಮಾಡಬೇಕು. ಈ ಶಿಶು-ಶಾಲೆಯು ದಾದಿಯ ಶಿಕ್ಷಣವನ್ನು ಪಡೆದ ಒಬ್ಬ ಶಿಕ್ಷಕಿಯ ಕೈಯಲ್ಲಿ ಇರಬೇಕು. ಶಾಲೆಯ ತೋಟದಲ್ಲಿ ಹೂ, ಕಾಯಿಪಲ್ಲೆ ಮುಂತಾದವುಗಳನ್ನು ಬೆಳೆಯಿಸಬೇಕು. ಶಾಲೆಯಲ್ಲಿ ಹಬ್ಬಗಳನ್ನೂ ಮಹಾಪುರುಷರ ಜಯಂತ್ಯುತ್ಸವಗಳನ್ನೂ ಆಚರಿಸಬೇಕು. ಅಡಿಗೆ ಮಾಡುವ ಕಾರ್ಯವು ಶಾಲೆಯಲ್ಲಿಯೇ ಅನೇಕ ಸಲ ನಡೆಯಬೇಕು. ಈ ಶಾಲೆಯೆಂಬ ಕುಟುಂಬದ ಆಯವ್ಯಯದ ಲೆಕ್ಕವನ್ನು ಬಾಲಿಕೆಯರೇ ಇಡಬೇಕು.

ಈ ಉದ್ಯೋಗಗಳ ಮುಖಾಂತರ ಇತರ ವಿಷಯಗಳನ್ನು ಸಾಗಿಸಬೇಕು. ಅದು ಬಿಡಿಬಿಡಿಯಾಗಿ ಇತಿಹಾಸ, ಭೂಗೋಲ, ಗಣಿತ, ಭಾಷೆ ಮುಂತಾದ ವಿಷಯಗಳೆಂದು ವಿಭಾಗಿಸಲ್ಪಡಬಾರದು. ಮೂಲ ಉದ್ಯೋಗಕ್ಕೆ ಸಂಬಂಧೀಕರಿಸಿ ಹೇಗೆ ವಿಷಯಗಳನ್ನು ಸಾಗಿಸಬೇಕೆಂಬುದು ಒಂದೆರಡು ಉದಾಹರಣೆಗಳಿಂದ ಸ್ಪಷ್ಟವಾಗುವದು.

ಉದಾ:— ೧. ಚಪಾತಿ, ಪಲ್ಲೆ ಮಾಡುವದು ಒಂದು ಉದ್ಯೋಗ.

ಭೂಗೋಲ:—ಗೋದಿಯ ಬೆಳೆ, ಅದಕ್ಕೆ ಬೇಕಾಗುವ ಹವೆ ಮತ್ತು ಭೂಮಿ, ಜಗತ್ತಿನಲ್ಲಿ ಗೋದಿ ಬೆಳೆಯುವ ಪ್ರದೇಶಗಳು.

ಸಾ. ವಿಜ್ಞಾನ:— ಸ್ಫೋಟ್ಟ ಹಚ್ಚುವದು ಅಥವಾ ಬೇರೆ ಬೇರೆ ಪ್ರಕಾರದ ಉರುವಲುಗಳು. ಉಷ್ಣತೆಯಿಂದ ಅಹಾರ ಪದಾರ್ಥದ ಪೋಷಕ ದ್ರವ್ಯಗಳ ಮೇಲೆ ಆಗುವ ಪರಿಣಾಮ. ಮಂದವಾಹಕಗಳು, ತೀವ್ರ ವಾಹಕಗಳು. ತೂಗುವ ತಕ್ಕಡಿ ಮತ್ತು ಸೊನ್ನೆಯ ತತ್ವ ಮುಂತಾದವುಗಳು.

ಗಣಿತ:— ಆಹಾರ ಸಾಮಗ್ರಿಗಳನ್ನು ಕೊಳ್ಳುವ ಮತ್ತು ಮಾರುವ ಲೆಕ್ಕಪತ್ರಗಳನ್ನಿಡುವದು.

ಭಾಷೆ:— ಚಪಾತಿ ಮಾಡುವ ವಿಧಾನವನ್ನು ವರ್ಣಿಸುವದು.

ಉದಾ:— ೨. ಹಬ್ಬದಲ್ಲಿ, ಇರುವ ಮನೆಯನ್ನು (ಶಾಲೆಯನ್ನು) ಸ್ವಚ್ಛ ಮಾಡುವದು ಮತ್ತು ಅದರ ವ್ಯವಸ್ಥೆ, ಈ ಚಟುವಟಿಕೆಯ ಮುಖಾಂತರ.

ಇತಿಹಾಸ, ಭೂಗೋಲ :—ಇತಿಹಾಸ ಪೂರ್ವಕಾಲದ ಜನರ ಮನೆ, ಬೇರೆ ಬೇರೆ ದೇಶದ ಜನರ ಮನೆ. ಅಲ್ಲಿಯ ಹವಾಮಾನಕ್ಕನುಸರಿಸಿ ಮನೆಗಳ ವ್ಯವಸ್ಥೆ.

ಹೊಲಿಗೆ, ಡ್ರಾಯಿಂಗ, ಕೈಕೆಲಸ:— ಇರುವ ಮನೆಯನ್ನು ಶೃಂಗರಿಸುವದು.

ಭಾಷೆ :— ಬೇರೆ ಬೇರೆ ಜನರನ್ನು ಆಮಂತ್ರಿಸುವದಕ್ಕಾಗಿ ಆಮಂತ್ರಣ ಪತ್ರಿಕೆಗಳನ್ನು ಬರೆಯುವದು. ಹಬ್ಬದ

ನೂಲುವ ಚಟುವಟಿಕೆಗಳು

(ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ)



೧. ಹತ್ತಿಯನ್ನು ಸ್ವಚ್ಛ ಮಾಡುವುದು



೨. ಹತ್ತಿಯನ್ನು ಹರೆಯುವದು.

ಗಂಡುಮಕ್ಕಳ ಟ್ರೇನಿಂಗ ಕಾಲೇಜದ ತೋಟದಲ್ಲಿ ಮುಂಬಯಿ ಸರಕಾರದ ಶಿಕ್ಷಣ ಖಾತೆಯ ಕಲಿಸಿಗಾರರು ಮತ್ತು ನಮ್ಮ ಶಿಕ್ಷಣಾಧಿಕಾರಿಗಳು ಮಾತನಾಡುತ್ತಿರುವರು.

೩. ನೂಲುವುದು.

ಚಿತ್ರಲತನ

(ಗಂಡುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ)

೧ ಪ್ರಾರಂಭೋತ್ಸವ —ಆರತಿ (ಯುಗಾದಿ ದಿನ)

೨. ಶಿಕ್ಷಕ ವಿದ್ಯಾರ್ಥಿಗಳು ರಂಟೆ ಹೊಡೆಯುವ ಸಿದ್ಧತೆಯಲ್ಲಿರುವರು.

೩. ಶಿಕ್ಷಕ ವಿದ್ಯಾರ್ಥಿಗಳ ರಂಟೆಹೊಡೆ ಯುವಾಗ

ವರ್ಣನೆಯನ್ನು ನೆರೆಹಳ್ಳಿಯ ಗೆಳತಿಯರಿಗೆ ಅಥವಾ ಬಂಧುಗಳಿಗೆ ಪತ್ರದ ಮುಖಾಂತರ ತಿಳಿಸುವದು.

ಆರೋಗ್ಯಶಾಸ್ತ್ರ: ಹವೆಯಾಡುವಿಕೆ, ಚಳಿ ಮತ್ತು ಹೊಲಸುಗಳಿಂದ ಬರುವ ರೋಗಗಳು ಮತ್ತು ಅಲ್ಲಿ ಬೆಳೆಯುವ ರೋಗ ಜಂತುಗಳು.

ಉದಾ:— ೨. ಶಿಶು-ಸಂಗೋಪನದಲ್ಲಿ —ಮಕ್ಕಳಿಗೆ ಪೋಷಾಕು ತಯಾರಿಸುವದು; ಆಹಾರ ಒದಗಿಸಿಕೊಡುವದು, ಆರೈಕೆ ಮಾಡುವದು ಈ ಚಟುವಟಿಕೆಯ ಮುಖಾಂತರ ಇತರ ವಿಷಯಗಳನ್ನು ಕಲಿಸಬಹುದು. ಈ ರೀತಿಯಿಂದ ಕಲಿಸಿದರೆ ಶಾಲೆಯೇ ಒಂದು ಜೀವನವಾಗುವದು.

ಭಾಷೆ ಮತ್ತು ಇತಿಹಾಸ ಇವು ಸಾಂಸ್ಕೃತಿಕ ವಿಷಯಗಳಿರುವದರಿಂದ ಇವುಗಳಲ್ಲಿ ಬರುವ ಕೆಲವು ಸಂಗತಿಗಳನ್ನು ಸಂಬಂಧೀಕರಿಸಲಿಕ್ಕೆ ಸಾಧ್ಯವಾಗದಿದ್ದರೆ ಬೇರೆ ಕಲಿಸಬೇಕು.

ಬಾಲಿಕೆಯರು ಸಮಾಜದಲ್ಲಿ ವ್ಯಕ್ತಿಯ ಸ್ಥಾನ, ಸಮಾಜದ ವ್ಯವಸ್ಥೆ, ಸಹಕಾರ, ಪೌರನೀತಿ, ಇವುಗಳನ್ನು ಶಾಲೆಯ ಜೀವನದಲ್ಲಿ ಸ್ವಾಭಾವಿಕವಾಗಿ ಕಲಿಯುತ್ತಾರೆ. ನೀತಿ ಬೋಧೆಗಿಂತ ಸಾಮಾಜಿಕ ಹೊಗಳುವಿಕೆ ಮತ್ತು ತೆಗಳುವಿಕೆಯಿಂದ ಶೀಲ ಸಂವರ್ಧನೆಯಾಗುತ್ತದೆ. ಪ್ರತಿಯೊಬ್ಬಳೂ ತನ್ನ ಹೊಣೆಗಾರಿಕೆಯನ್ನರಿತು ಕೆಲಸ ಮಾಡುತ್ತಾಳೆ. ಹೀಗಾಗುವದರಿಂದ ವ್ಯಕ್ತಿಯಲ್ಲಿಯ ಸಂಕುಚಿತ ದೃಷ್ಟಿಯು ಮಾಯವಾಗಿ ಸಹಕಾರದ ಧೋರಣೆ ಬೆಳೆಯುತ್ತದೆ. ಇದೇ ಸಮಾಜದ ಉನ್ನತಿಗೆ ಸಾಧನ. ಪ್ರಾಥಮಿಕ ಶಿಕ್ಷಣವು ಇದಕ್ಕಿಂತ ಹೆಚ್ಚಿನದೇನನ್ನು ಒದಗಿಸಿ ಕೊಡಬೇಕು ?

ಭಾರತಾಂಬೆಯ ಕಂಬನಿ

ರಾಗ:- ದರಬಾರೀ ಕಾನಡಾ. ತಾಲ:-ದೀಪಚಂದಿ.

ಹತ ಭಾಗ್ಯಳು ನಾನು । ಹಾಯ್ ಹಾಯ್ ದುರ್ದೈವಾ ॥ ಪಲ್ಲ ॥
ಮೀರಿದ ದುಃಖ । ವಾರಿಧಿಯಲ್ಲಿ । ಬಿದ್ದೆನು ನಾನು ।
ಮಹಾಕಾರ್ಯದಲಿ । ಮಗು ನಿನ್ನದೂಡಿ ।
ಮರುಳಕ್ಕೆ ಗುರಿಯಾದೆ ನಾನು । ಮಗು ಮಹಾತ್ಮಾ ॥ ೧ ॥

ಅಂಧಕಾರದಲಿ । ನಿಂದು ಬಳಲುತಿದೆ । ಬಂಧುಗಳನು ಹೊಂದಿ ।
ಬಂದಿಯ ನಹಿಸಿ । ದಂಡುಗ ಸಹಿಸಿ ।
ಬಂಧನ ಬಿಡಿಸಿದೆ ಗಾಂಧಿ । ಮುದ್ದು ಮೋಹನಾ ॥ ೨ ॥

ಹಿಂದ ಮಾತೆಯ । ಕಂದರನೆಲ್ಲ । ಒಂದು ಗೂಡಿಸಲು ಹೊಂದಿ ।
ಹಂದಿ ಮಾನವರ ।ಇಂದ್ರಯೋಜನೆಗೆ ।
ಹೊಂದಿದೆ ಕಟುಫಲ ಗಾಂಧಿ । ವಂದ್ಯ ಪರಾತ್ಮಾ । ೩

ಕುಲದಭಿಮಾನದ । ಖೂಳ ಕುನ್ನಿಗಳ ಕುಪಕ ಬುದ್ಧಿಯನು ಕೆಡಿಸಿ ।
ಕರುಣ ರಹಿತರ । ಕರದಲಿ ಶಿಲುಕಿದ ।
ಕುರಿ ಮಾಸ ನವರನುಳಿಸಿದಿ । ಕರುಣ ಕುಲಾಧಾರಾ ॥ ೪ ॥

ಹರಿಜನ ಹಿತಕ್ಕಾಗಿ । ಹಗಲಿರುಳೆನ್ನದೆ । ಹಗರಣ ದೊಂದಿದೆ ಕಂದಾ ।
ಹಂಸೆ ಅಜ್ಞಾನಾ । ಇರಿಸೆ ಸಮಾನಾ ।
ಪಣವಾಗಿ ಇರಿಸಿದೆ ಪ್ರಾಣಾ । ಕಸ್ತೂರಿ ರಮಣಾ ॥ ೫ ॥

ನಿನ್ನಯ ನಿಧನದ । ವಾರ್ತೆಯು ಸೇರಿ । ಹಾಹಾರ ಹೋಯಿತು ಜಗದಿ ।
ಹರಣ ಹಾರಿದುವು । ಶರಣ ಸೇರಿದುವು ।
ತರುಣರ ತನುಗಳು ಕಂದಾ ।ಕಳವಳದಿಂದಾ ॥ ೬ ॥

ನಿತ್ಯ ನಾಡಿನಲಿ । ಸತ್ಯ ಸ್ವರ್ಗದಲಿ । ಬೆಳಗಿತು ನಿನ್ನಯ ಕೀರ್ತಿ ।
ಸತ್ಯದ ಮೂರ್ತಿ । ಅಹಿಂಸೆಯ ಮೂರ್ತಿ ।
ನಂದಿತು ಜಗದ್ವಂದ್ಯ ಜ್ಯೋತಿ । ಶಾಂತಿಯ ಸದನಾ ॥ ೭ ॥

ಶಿ. ಭೀ. ಹುಡೇದ,
ಅಸಿ. ಮಾ., ಪ್ರಾ. ಸ್ಕೂ. ಟ್ರೇ. ಕಾ.,
ಧಾರವಾಡ.

ಚಿತ್ರಾವಳಿ

(ಗಂಡುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ)

೧ ಪ್ರಾರಂಭೋತ್ಸವ —ಆರತಿ (ಯುಗಾದಿ ದಿನ)

೨. ಶಿಕ್ಷಕ ವಿದ್ಯಾರ್ಥಿಗಳು ರಂಬೆ ಹೊಡೆಯುವ ಸಿದ್ಧತೆಯಲ್ಲಿರುವರು.

೩. ಶಿಕ್ಷಕ ವಿದ್ಯಾರ್ಥಿಗಳ ರಂಬೆಹೊಡೆತ ಯುವಾಗ

ವರ್ಣನೆಯನ್ನು ನೆರೆಹೊರೆಯ ಗೆಳತಿಯರಿಗೆ ಅಥವಾ ಬಂಧುಗಳಿಗೆ ಪತ್ರದ ಮುಖಾಂತರ ತಿಳಿಸುವದು.

ಆರೋಗ್ಯಶಾಸ್ತ್ರ: ಹವೆಯಾಡುವಿಕೆ, ಜಳಿ ಮತ್ತು ಹೊಲಸುಗಳಿಂದ ಬರುವ ರೋಗಗಳು ಮತ್ತು ಅಲ್ಲಿ ಬೆಳೆಯುವ ರೋಗ ಜಂತುಗಳು.

ಉದಾ:— ೨. ಶಿಶು-ಸಂಗೋಪನದಲ್ಲಿ —ಮಕ್ಕಳಿಗೆ ಪೋಷಾಕು ತಯಾರಿಸುವದು; ಆಹಾರ ಒದಗಿಸಿಕೊಡುವದು, ಆರೈಕೆ ಮಾಡುವದು ಈ ಚಟುವಟಿಕೆಯ ಮುಖಾಂತರ ಇತರ ವಿಷಯಗಳನ್ನು ಕಲಿಸಬಹುದು. ಈ ರೀತಿಯಿಂದ ಕಲಿಸಿದರೆ ಶಾಲೆಯೇ ಒಂದು ಜೀವನವಾಗುವದು.

ಭಾಷೆ ಮತ್ತು ಇತಿಹಾಸ ಇವು ಸಾಂಸ್ಕೃತಿಕ ವಿಷಯಗಳಿರುವದರಿಂದ ಇವುಗಳಲ್ಲಿ ಬರುವ ಕೆಲವು ಸಂಗತಿಗಳನ್ನು ಸಂಬಂಧೀಕರಿಸಲಿಕ್ಕೆ ಸಾಧ್ಯವಾಗದಿದ್ದರೆ ಬೇರೆ ಕಲಿಸಬೇಕು.

ಬಾಲಿಕೆಯರು ಸಮಾಜದಲ್ಲಿ ವ್ಯಕ್ತಿಯ ಸ್ಥಾನ, ಸಮಾಜದ ವ್ಯವಸ್ಥೆ, ಸಹಕಾರ, ಪೌರನೀತಿ, ಇವುಗಳನ್ನು ಶಾಲೆಯ ಜೀವನದಲ್ಲಿ ಸ್ವಾಭಾವಿಕವಾಗಿ ಕಲಿಯುತ್ತಾರೆ. ನೀತಿಬೋಧೆಗಿಂತ ಸಾಮಾಜಿಕ ಹೊಗಳುವಿಕೆ ಮತ್ತು ತೆಗಳುವಿಕೆಯಿಂದ ಶೀಲ ಸಂವರ್ಧನೆಯಾಗುತ್ತದೆ. ಪ್ರತಿಯೊಬ್ಬಳೂ ತನ್ನ ಹೊಣೆಗಾರಿಕೆಯನ್ನರಿತು ಕೆಲಸ ಮಾಡುತ್ತಾಳೆ. ಹೀಗಾಗುವದರಿಂದ ವ್ಯಕ್ತಿಯಲ್ಲಿಯ ಸಂಕುಚಿತ ದೃಷ್ಟಿಯು ಮಾಯವಾಗಿ ಸಹಕಾರದ ಧೋರಣೆ ಬೆಳೆಯುತ್ತದೆ. ಇದೇ ಸಮಾಜದ ಉನ್ನತಿಗೆ ಸಾಧನ. ಪ್ರಾಥಮಿಕ ಶಿಕ್ಷಣವು ಇದಕ್ಕಿಂತ ಹೆಚ್ಚಿನದೇನನ್ನು ಒದಗಿಸಿ ಕೊಡಬೇಕು ?

ಭಾರತಾಂಬೆಯ ಕಂಬನಿ

ರಾಗಃ- ದರಬಾರೀ ಕಾನಡಾ. ತಾಲಃ-ದೀಪಚಂದಿ.

ಹತ ಭಾಗ್ಯಳು ನಾನು । ಹಾಯ್ ಹಾಯ್ ದುರ್ದೈವಾ ॥ ಪಲ್ಲ ॥
ಮೀರಿದ ದುಃಖ । ವಾರಿಧಿಯಲ್ಲಿ । ಬಿದ್ದೆನು ನಾನು ।
ಮಹಾಕಾರ್ಯದಲಿ । ಮಗು ನಿನ್ನದೊಡಿ ।
ಮರುಳಕ್ಕೆ ಗುರಿಯಾದೆ ನಾನು । ಮನು ಮಹಾತ್ಮಾ ॥ ೧ ॥

ಅಂಧಕಾರದಲಿ । ನಿಂದು ಬಳಲುತಿದೆ । ಬಂಧುಗಳನು ಹೊಂದಿ ।
ಬಾಂಧಿಯ ಸಹಿಸಿ । ದಂಡುಗ ಸಹಿಸಿ ।
ಬಂಧನ ಬಿಡಿಸಿದೆ ಗಾಂಧಿ । ಮುದ್ದು ಮೋಹನಾ ॥ ೨ ॥

ಹಿಂದ ಮಾತೆಯ । ಕಂದರನೆಲ್ಲ । ಒಂದು ಗೂಡಿಸಲು ಹೊಂದಿ ।
ಹಂದಿ ಮಾನವರ ।ನಿಂದ್ಯಯೋಜನೆಗೆ ।
ಹೊಂದಿದೆ ಕಹಿಫಲ ಗಾಂಧಿ । ವಂದ್ಯ ವರಾತ್ಮಾ । ॥ ೩ ॥

ಕುಲದಭಿಮಾನದ । ಕೂಳ ಕುನ್ನಿಗಳ ಕುಹಕ ಬುದ್ಧಿಯನು ಕೆಡಿಸಿ ।
ಕರುಣ ರಹಿತರ । ಕರದಲಿ ಶಿಲುಕಿದ ।
ಕುರಿ ಮಾಸ ನವರನುಳಿಸಿದಿ । ಕರುಣ ಕುಮಾರಾ ॥ ೪ ॥

ಹರಿಜನ ಹಿತಕ್ಕಾಗಿ । ಹಗಲಿರುಳೆನ್ನದೆ । ಹಗರಣ ಹೊಂದಿದೆ ಕಂದಾ ।
ಹಂಸೆ ಅಜ್ಞಾನಾ । ಇರಿಸೆ ಸಮಾನಾ ।
ಪಣವಾಗಿ ಇರಿಸಿದೆ ಪ್ರಾಣಾ । ಕಸ್ತೂರಿ ರಮಣಾ ॥ ೫ ॥

ನಿನ್ನಯ ನಿಧನದ । ವಾರ್ತೆಯು ಸೇರಿ । ಹಾಹಾರ ಹೋಯಿತು ಜಗದಿ ।
ಹರಣ ಹಾರಿದುವು । ಶರಣ ಸೇರಿದುವು ।
ತುಣಿರ ತನುಗಳು ಕಂದಾ ।ಕಳವಳದಿಂದಾ ॥ ೬ ॥

ನಿತ್ಯ ನಾಡಿನಲಿ । ಸತ್ಯ ಸ್ವರ್ಗದಲಿ । ಬೆಳಗಿರು ನಿನ್ನಯ ಕೀರ್ತಿ ।
ಸತ್ಯದ ಮೂರ್ತಿ । ಅಹಿಂಸೆಯ ಮೂರ್ತಿ ।
ನಂದಿತು ಜಗದ್ವಂದ್ಯ ಜ್ಯೋತಿ । ಶಾಂತಿಯ ಸದನಾ ॥ ೭ ॥

ಶಿ. ಭೀ. ಹುಚೇದ,
ಅಸಿ. ಮಾ., ಪ್ರಾ. ಸ್ಕೂ. ಟ್ರೇ. ಕಾ.,
ಧಾರವಾಡ.

ವರ್ಧಾ ರಾಷ್ಟ್ರೀಯ ಶಿಕ್ಷಣ

ಲೇಖಕರು: ಶ್ರೀ. ಆರ್. ವ್ಹಿ.. ದೇಸಾಯಿ, ಬಿ. ಎ, ಬಿ. ಟಿ.,
ಪ್ರಿನ್ಸಿಪಾಲ, ಬೇಸಿಕ್ ಟ್ರೇನಿಂಗ ಸೆಂಟರ್, ಧಾರವಾಡ

ನಮ್ಮ ದೃಷ್ಟಿ ಹಳ್ಳಿಯ ಕೈಗಾರಿಕೆಗಳ ಕಡೆಗೆ ಹೊರಳಲಿ. ಗ್ರಾಮ-ಕೈಗಾರಿಕೆಗಳ ಪುನರುದ್ಧಾರ ವಾಗಲಿ. ಗ್ರಾಮ ಕೈಗಾರಿಕೆಗಳ ಮೂಲಕ ನಡೆಯುವ ಶಿಕ್ಷಣದಿಂದ ಶಾಂತಿಮಯ ಮಹಾ ಕ್ರಾಂತಿಯನ್ನೇ ಎಬ್ಬಿಸಬಹುದು.

—ಗಾಂಧೀಜಿ

ವರ್ಧಾ ರಾಷ್ಟ್ರೀಯ ಶಿಕ್ಷಣವು ಈಗ ತನ್ನ ಬಾಲ್ಯಾವಸ್ಥೆಯನ್ನು ಕಳೆದು ಕೌಮಾರಾವಸ್ಥೆಯಲ್ಲಿ ಕಾಲಿಡುತ್ತದೆ. ಇದು ಅದರ ೧೧ನೆಯ ವರುಷ. ಯಾವದೇ ಶಿಕ್ಷಣ ಯೋಜನೆಯು ತನ್ನ ಪ್ರಯೋಗಾವಸ್ಥೆಯನ್ನು ಕಳೆದು ಅದರ ಮಹತ್ವವು ಜನರಿಗೆ ತಿಳಿಯಬೇಕಾದರೆ ಕನಿಷ್ಟ ಹತ್ತಿಪ್ಪತ್ತು ವರುಷಗಳು ಬೇಕಾಗುವವು. ಹಳೆಯ ಶಿಕ್ಷಣವು ತನ್ನ ವರ್ಚಸ್ಸನ್ನು ನೂರಾರು ವರುಷಗಳಿಂದ ಜನರ ಮನಸ್ಸಿನ ಮೇಲೆ ಒತ್ತಿದೆ. ತನ್ನದೇ ಆದ ವಿಚಾರ ಪ್ರಣಾಲಿಯನ್ನು ದೇಶದ ತುಂಬೆಲ್ಲ ಮೂಡಿಸಿ ಬಿಟ್ಟಿದೆ ಹಳೇ ವಿಚಾರದ ಹೊದಿಕೆಯನ್ನು ಸರಿಸಿ ಕೇವಲ **ಹನ್ನೊಂದು ವರುಷದ ಈ ಸರಿಸ್ಥೆಯ ಬಾಲರವಿಯ** ಎಳೆ ಕಿರಣಗಳಂತಿರುವ ಹೊಸ ಶಿಕ್ಷಣದ ವಿಚಾರಗಳು ಬೆಳಕನ್ನುಂಟು ಮಾಡಬೇಕೆಂಬುದು ಸಾಹಸದ ಮಾತೇ ಸರಿ. ಬಹುಕಾಲದಿಂದಲೂ ನೆಲೆಯುಂದ ವಿಚಾರಗಳನ್ನು ಬದಲಿಸುವುದೆಂದರೆ ಬ್ರಹ್ಮನಿಗೂ ಅಸಾಧ್ಯವಾದ ಮಾತು. ಹೀಗಿರಬೇಕಾದರೆ ಹಳೆಯ ವಾತಾವರಣದಲ್ಲಿ ಜನ್ಮವೆತ್ತಿದ ವರ್ಧಾ ಶಿಶುವು ತಲೆಯೆತ್ತಿ ನಿಂತದ್ದೇ ಹಿಂದು ಪರವಾಗಿರುವ ಸಂಗತಿಯಾಗಿದೆ. ಇದರ ಅಸ್ತಿತ್ವಕ್ಕೆ ಸ್ವಲ್ಪವೂ ಇದರಲ್ಲದೆಯಾಗಿರ ವಲ್ಲಾರ್ವ ಅಂದರೆಕ್ಕೆಯೇ ಮೂಲಕಾರಣವಲ್ಲದೆ ಸುತ್ತೇನೂ ಅಲ್ಲ. ನೈಜವಾದ ಯೋಗ್ಯತೆಯಿಂದ ಕೂಡಿದ ಯೋಜನೆಯು ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಅಳಿಯದೆ ಉಳಿಯುವುದೆಂಬುದಕ್ಕೆ ವರ್ಧಾ ರಾಷ್ಟ್ರೀಯ ಶಿಕ್ಷಣವೇ ಸಾಕ್ಷಿಯಾಗಿದೆ.

ವರ್ಧಾ ಶಿಕ್ಷಣವು ಜನ್ಮ ತಾಳಿದ್ದು ಆಂಗ್ಲರ ಆಳಿಕೆಯ ಶೈಕ್ಷಣಿಕ ಉದಾಸೀನತೆಯ ಕಾಲದಲ್ಲಿ. ಕಾಂಗ್ರೆಸ್ಸಿನ ಸಂಬಂಧದಿಂದ ಈ ಶಿಕ್ಷಣಯೋಜನೆ ಯಮೇಲೆ ಪರದೇಶೀ ಅಧಿಕಾರಿಗಳ ಹಾಗು ಅವರನ್ನವಲಂಬಿಸಿದ್ದ ಸ್ವದೇಶಿಗರ ವಕ್ರ ದೃಷ್ಟಿಯು ಸಂಪೂರ್ಣವಾಗಿ ಬಿತ್ತು. ೧೯೩೯ರಲ್ಲಿ ಕಾಂಗ್ರೆಸ ಮಂತ್ರಿ ಮಂಡಳಗಳು ರಾಜೀನಾಮೆ ಕೊಟ್ಟ ನಂತರ ವರ್ಧಾಶಿಕ್ಷಣವು ತಬ್ಬಲಿ ಮಗುವಿನಂತಾಗಿ ಅತ್ಯಂತ ಅನಾದರಕ್ಕೂ ಪಾತ್ರವಾಯಿತು ಆಗ ಈ ಶಿಕ್ಷಣ-ಯೋಜನೆಯ ಪ್ರಯೋಗವನ್ನೇ ಮುಕ್ತಾಯಗೊಳಿಸಿ ಬಿಡಬೇಕೆಂಬ ಘೋರಣೆಯೂ ಪ್ರಕಟವಾಯಿತು. ೧೯೩೧ರಲ್ಲಿ ನಡೆದ ರಾಷ್ಟ್ರೀಯ ಸಾಲೆಗಳ ಗತಿಯೇ ವರ್ಧಾ ರಾಷ್ಟ್ರೀಯ ಸಾಲೆಗಳಿಗೂ ಉಂಟಾಗುವದೋ ಏನೋ ಎಂಬ ಬೇಗೆಯ ಝಳ ತಾಗಿತ್ತು. ಆದರೆ ಈ ಕೆಲಸದಲ್ಲಿ ತೊಡಗಿದವರಲ್ಲಿ ರಾಷ್ಟ್ರೀಯ ವೃತ್ತಿಯೂ ಶಿಕ್ಷಣಾಭಿಮಾನವೂ ಬಲವತ್ತರವಾಗಿದ್ದದರಿಂದ ಈ ಪ್ರಯೋಗಕ್ಕೆ ಪ್ರತಿಕೂಲ ಪರಿಸ್ಥಿತಿಗಳು ಹೆಚ್ಚು ಹೆಚ್ಚಾಗಿ ಬಂದೊದಗಿದಂತೆ ಅವರಲ್ಲಿ ಈ ರಾಷ್ಟ್ರೀಯ ಯೋಜನೆಯನ್ನು ಯಶಸ್ವಿಯನ್ನಾಗಿ ಮಾಡಿಯೇ ತೀರಬೇಕೆಂಬ ದೃಢ ನಿಶ್ಚಯವೂ ಹೆಚ್ಚಾಗುತ್ತ ಬಂದಿತು ಇದರ ಪರಿಣಾಮವಾಗಿ ವರ್ಧಾ ಯೋಜನೆಯು ಒಲ ವರ್ಷಗಳ ಅಜ್ಞಾತವಾಸವನ್ನನುಭವಿಸಿದರೂ ನಂತರ ಬೆಳಕು ಕಂಡಿತು.

ಈ ಯೋಜನೆಯ ಕಲ್ಪನೆಯು ಮೂರ್ತಸ್ವರೂಪಕ್ಕೆ ಬಂದದ್ದು ೧೯೩೭ರಲ್ಲಾದರ, ಇದರ ಬಗ್ಗೆ ಚರ್ಚೆ, ವಾದ ವಿವಾದ, ಊಹಾಪೋಹಗಳು ದೇಶದ ತುಂಬೆಲ್ಲ ನಡೆದದ್ದು ೧೯೩೮ರಲ್ಲಿ. ಇವುಗಳನ್ನನುಲಕ್ಷಿಸಿ ಒಂಬತ್ತು ಕಾಂಗ್ರೆಸ್ ಪ್ರಾಂತಗಳು ಒಟ್ಟುಗೂಡಿ ಡಾಕ್ಟರ ಜಾಕಿರ ಹುಸೇನರವರ ಅಧ್ಯಕ್ಷತೆಯಲ್ಲಿ "ಹಿಂದುಸ್ತಾನೀ ತಾಲೀಮೀ ಸಂಘ"ವೆಂಬ

ಹೊಸ ಸಂಸ್ಥೆಯನ್ನು ಸೇವಾಗ್ರಾಮದಲ್ಲಿ ಸ್ಥಾಪಿಸಿ ಅದರ ಮೂಲಕ ಈ ಯೋಜನೆಗೊಂದು ಸ್ವರೂಪವನ್ನು ಕೊಟ್ಟು ಕಾರ್ಯರೂಪಕ್ಕಿಳಿಸಬೇಕೆಂದು ನಿಶ್ಚಯಿಸಿ ಪ್ರಯೋಗವನ್ನು ಕೈಕೊಂಡದ್ದು ೧೯೩೯ರಲ್ಲಿ. ಅದರ ನಂತರ ಈ ಪ್ರಯೋಗಗಳ ವಿಮರ್ಶೆಗಾಗಿ ಆಗಾಗ್ಗೆ ಈ ಸಮಿತಿಯವರಿಂದ ಏರ್ಪಡಿಸಿದ ಸಭೆ ಸಮ್ಮೇಲನಗಳಲ್ಲಿ ವರ್ಧಾ ರಾಷ್ಟ್ರೀಯ ಶಿಕ್ಷಣದ ಸಮಸ್ಯೆಗಳನ್ನೂ ಅಭ್ಯಾಸ ಕ್ರಮಗಳನ್ನೂ ಚರ್ಚಿಸಿ ವರದಿಗಳನ್ನೊಪ್ಪಿಸಿದ್ದಲ್ಲದೆ ಈ ಪ್ರಯೋಗದ ವಿವಿಧಾಂಗಗಳಲ್ಲಿ ಕಂಡು ಬಂದ ಪ್ರಗತಿಯನ್ನು ಪರಿಶೀಲಿಸುತ್ತ ಬಂದದ್ದಾಗಿದೆ. ಇದರ ಪರಿಣಾಮವಾಗಿ ಈ ಯೋಜನೆಯ ಉತ್ಕರ್ಷ ಕಾಲವು ಪುನಃ ಬಂದಿತು. ಪರದೇಶದ ಶೈಕ್ಷಣಿಕ ತಜ್ಞರಿಂದ ಮಾನ್ಯತೆ ಪಡೆದ ಆಧುನಿಕ ಶೈಕ್ಷಣಿಕ ಹಾಗು ಮಾನಸಿಕ ತತ್ವಗಳೇ ಈ ಯೋಜನೆಯ ಜೀವಾಳವಾಗಿವೆಯೆಂಬುದನ್ನು ಮನಗಂಡ ನಂತರ ನಮ್ಮ ಜನರೂ ಇದರ ಕಡೆಗೆ ಕಣ್ಣೆತ್ತಿ ನೋಡಲಾರಂಭಿಸಿದರು,—ಸಾವಧಾನವಾಗಿ ಇದರ ಬಗ್ಗೆ ವಿಚಾರ ಮಾಡಲಾರಂಭಿಸಿದರು. ಇವೆಲ್ಲಕ್ಕಿಂತ ಹೆಚ್ಚಿನದಾಗಿ ಕೇಂದ್ರ ಶೈಕ್ಷಣಿಕ ಮಂಡಲದವರು ಅರ್ಥಾತ್ ಸಾರ್ಜಂಟ್ ಕಮಿಟಿಯವರು ಪೂರ್ಣ ಪರಿಶೀಲನೆ ಮಾಡಿದ ನಂತರ ಈ ಯೋಜನೆಗೆ ಮಾನ್ಯತೆ ಕೊಟ್ಟರು. ಅಲ್ಲಿಂದ ಮುಂದೆ ವರ್ಧಾ ಯೋಜನೆಯ ಭಾಗ್ಯೋದಯ ಕಾಲವು ಪ್ರಾರಂಭವಾಯಿತೆನ್ನಬಹುದು.

ಇಲ್ಲಿಯವರೆಗೆ ಶೈಕ್ಷಣಿಕ ಪ್ರಪಂಚದಲ್ಲಿ ಬೇರೆ ಬೇರೆ ತಜ್ಞರು ಅನೇಕ ತತ್ವಗಳನ್ನು ಪ್ರತಿಪಾದನೆ ಮಾಡುತ್ತ ಬಂದಿದ್ದರು. ಬರಿಯ ಪುಸ್ತಕೀಯ ವಿದ್ಯೆಯು ನಿರುಪಯೋಗಿಯೆಂದೂ ಪ್ರತ್ಯಕ್ಷ್ಯ ಅನುಭವ ಜನ್ಯವಾದ ಜ್ಞಾನವೇ ಯೋಗ್ಯವೆಂದೂ ಒಪ್ಪಿಕೊಂಡಿದ್ದರು. ಈ ಪ್ರಜಾಪ್ರಭುತ್ವದ ಯುಗದಲ್ಲಿ ಕೋಟಿಗಟ್ಟಲೆ ಜನರಲ್ಲಿರುವ ನಿರಕ್ಷರತೆಯನ್ನು ನಿರ್ಮೂಲನಮಾಡಬೇಕಾದುದು ಅತ್ಯವಶ್ಯವೆಂಬುದನ್ನು ನಿರ್ಣಯಿಸಿದ್ದರು. ಶಿಕ್ಷಣದಲ್ಲಿ ಕೈಗಾರಿಕೆಯ ಮಹತ್ವವನ್ನು ಕಂಡು ಹಿಡಿದಿದ್ದರು. ಆದರೆ ಭಾರತದ ಏಳು ಕೋಟಿ ಹಳ್ಳಿಗಳಲ್ಲಿ ವಾಸಿಸುತ್ತಿರುವವರ ಬಾಳನ್ನೇ ಕಣ್ಣಮುಂದೆ ಇಟ್ಟುಕೊಂಡು ಹಳ್ಳಿಗರ ಜೀವನಕ್ಕೆ ಸರಿಯಾಗಿ ಹೊಂದಿಕೆಯಾಗುವಂತೆ ಶಿಕ್ಷಣ ಯೋಜನೆಯನ್ನು ತಯಾರಿಸಬೇಕೆಂಬ ಸಮನ್ವಯ ದೃಷ್ಟಿಯು ಬೇರೆ ಯಾವ ಶೈಕ್ಷಣಿಕ ತತ್ವದಲ್ಲಿಯೂ ಕಂಡು ಬಂದಿರಲಿಲ್ಲ. ಅಲ್ಲದೆ ಸತ್ಯ ಮತ್ತು ಅಹಿಂಸೆಯ ತಳಹದಿಯ ಮೇಲೆ ಯೋಜಿಸಿದ ಶ್ರಮ ಜೀವನದ ಸ್ವಾವಲಂಬೀ ಶಿಕ್ಷಣದ ದೂರ ದೃಷ್ಟಿಯು ಮಹಾತ್ಮಾ ಗಾಂಧಿಯವರಲ್ಲಲ್ಲದೆ ಬೇರೆ ಯಾರಲ್ಲಿಯೂ ಸುಳಿದಿರಲಿಲ್ಲ.

ಭಾರತವು ಹಳ್ಳಿಗಳ ನಾಡು. ಪಾಶ್ಚಾತ್ಯಸಂಸ್ಕೃತಿಯಂತೆ ನಮ್ಮ ಸಂಸ್ಕೃತಿಯು ದೊಡ್ಡ ಪಟ್ಟಣಗಳಲ್ಲಿ ಉಗಮವಾಗದೆ ಹಳ್ಳಿಗಳಿಂದ ಹರಿದು ಬಂದದ್ದಾಗಿದೆ. ನಮ್ಮ ಪೂರ್ವಜರಾದ ಋಷಿಗಳಿಂದ ರೂಪುಗೊಂಡು ಪ್ರಾಚೀನ ಕಾಲದಿಂದ ಬಂದಿರುವ ಭಾರತೀಯ ಸಂಸ್ಕೃತಿಯ ಜನ್ಮಸ್ಥಾನವು ನಿಸರ್ಗದ ನೆರೆಯಲ್ಲಿನ ಶಾಂತ ವಾತಾವರಣದಲ್ಲಲ್ಲದೆ ಕೃತ್ರಿಮವಾದ ಯಂತ್ರಮಯ ವಾತಾವರಣದ ದೊಡ್ಡ ದೊಡ್ಡ ಶಹರಗಳಲ್ಲಲ್ಲ. ಆದರೂ ಒಂದಾನೊಂದು ಕಾಲದಲ್ಲಿ ನಮ್ಮ ಸಂಸ್ಕೃತಿಗೆ ಜನ್ಮಕೊಟ್ಟು ಅದನ್ನು ರಕ್ಷಣೆ ಮಾಡಿಕೊಂಡು ಬಂದಂಥ ನಮ್ಮ ಹಳ್ಳಿಗಳು ಇಂದು ಕಾಲಪುರುಷನ ದವಡೆಯಲ್ಲಿ ಸಿಕ್ಕು ಹಸಿವು, ಅಜ್ಞಾನ, ರೋಗ ಮತ್ತು ಜಗಳ ಇವುಗಳ ತವರುಮನೆಯಾಗಿದೆ. ಮಹಾತ್ಮಾಗಾಂಧಿಯವರು ನುಡಿದಿರುವಂತೆ "ನಮ್ಮ ಹಳ್ಳಿಗಳಲ್ಲಿನ ನಿರುತ್ಸಾಹವು ಹೋಗಿ ಉತ್ಸಾಹವುಂಟಾಗಬೇಕು. ದಾರಿದ್ರ್ಯದ ಸ್ಥಳದಲ್ಲಿ ಅನ್ನವು ನಿರ್ಮಾಣವಾಗಬೇಕು. ನಿರುದ್ಯೋಗದ ಎಡೆಯಲ್ಲಿ ಉದ್ಯೋಗವು ಬೇರೂರಬೇಕು. ಜಗಳಗಳು ಮಾಯವಾಗಿ ಐಕ್ಯವು ನೆಲೆಗೊಳ್ಳಬೇಕು." ಹಳ್ಳಿಗರಿಗೆಲ್ಲ ಹೊಟ್ಟೆ ತುಂಬ ರೊಟ್ಟಿ, ಮೈತುಂಬ ಬಟ್ಟೆ, ವಾಸಕ್ಕೆ ಬೆಚ್ಚಗಿನ ಮನೆ, ಪೌರಜೀವನಕ್ಕೆ ಅತ್ಯಗತ್ಯವಾದ ವಿದ್ಯೆ, ಆರೋಗ್ಯ ಸಂವರ್ಧನೆಗೆ ಬೇಕಾದ ಔಷಧೋಪಚಾರಗಳ ವ್ಯವಸ್ಥೆ ಇವುಗಳನ್ನು ಸಾರ್ವತ್ರಿಕವಾಗಿ ದೊರಕಿಸಿ ಕೊಡಬೇಕಾಗಿದೆ. ಹಳ್ಳಿಯ ಸಂಪತ್ತು ಹೊರಗೆ ಹರಿದು ಹೋಗುತ್ತಿರುವದನ್ನು ತಡೆಗಟ್ಟಿ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬನ ಹಾಗು ಸ್ವಯಂಪೂರ್ಣತೆ ಎಂಬೆರಡು ಕಾಲುಗಳ ಮೇಲೆ ಭದ್ರವಾಗಿ ನಿಲ್ಲುವಂತೆ ಮಾಡಬೇಕಾಗಿದೆ. ನಾಡಿನ ಜನರೆಲ್ಲರಿಗೂ ಅನ್ನ ನೀಡುವ ನೇಗಿಲಯೋಗಿಯ ಸ್ಥಿತಿ ಕರುಣಾಜನಕವಾಗಿದೆ. ಹಳ್ಳಿಯ ಶಾಂತ ವಾತಾವರಣವು ಪಕ್ಷ ಪಂಗಡಗಳ್ಳಿಬಡಿದಾಟದಲ್ಲಿ ಸಿಕ್ಕು ನಾಶವಾಗುತ್ತಿದೆ. ಇವನ್ನೆಲ್ಲ ತಡೆಗಟ್ಟಿ ಹಳ್ಳಿಗರು ತಮ್ಮ ಸ್ವಂತ ಶ್ರಮ ಜೀವನದಿಂದಲೂ ಸ್ವಾವಲಂಬನದಿಂದಲೂ; ಜೀವನ ಸಾಗಿಸುತ್ತ ಪರಶೋಷಣದ ಪಾತಕದ ಮಾರ್ಗಕ್ಕೆ ಬಲಿ ಬೀಳದೆ ಸತ್ಯ ಹಾಗು ಅಹಿಂಸೆಯ ರಾಜಮಾರ್ಗವನ್ನನುಸರಿಸುತ್ತ ಜಗತ್ತಿಗೆ ಮಾರ್ಗದರ್ಶಕವಾದ ಹೊಸ ಸರ್ವೋದಯ ಸಮಾಜವನ್ನು ನಿರ್ಮಾಣ ಮಾಡುವದೇ ವರ್ಧಾ ಶಿಕ್ಷಣ ಯೋಜ

ನೆಯ ಗುರಿ. ಹೊಸ ಸಮಾಜದ ಆಧಾರಭೂತವಾದ ತತ್ವಗಳೆಂದರೆ ಸಾದಾಸರಲ ಜೀವನ, ಸ್ನೇಹಭಾವ, ಸಮಾನತೆ, ಸಹಕಾರ, ಸರ್ವಧರ್ಮ ಸಮನ್ವಯ, ಪ್ರಜಾಪ್ರಭುತ್ವದ ತತ್ವಗಳನ್ನೊಳಗೊಂಡಂಥ ಸುಖಮಯ ಜೀವನ ಮುಂತಾದವು. ಇಂಥ ಸಮಾಜದಿಂದ ಸ್ವಸಂಸ್ಕೃತಿಯ ರಕ್ಷಣವಾಗುವದಲ್ಲದೆ ಲೋಕಕಲ್ಯಾಣವೂ ಆಗುವದು.

ಪ್ರತಿಯೊಬ್ಬ ಮನುಷ್ಯನು ಯಾವದಾದರೊಂದು ಜೀವನೋದ್ಯೋಗವನ್ನು ಕೈಕೊಂಡು ತನ್ನ ವೈಯಕ್ತಿಕ ಜೀವನವನ್ನು ಸ್ವಾವಲಂಬನದಿಂದ ಸಾಗಿಸುತ್ತತನ್ನ ಸಮಾಜದ ಉತ್ಕರ್ಷವನ್ನು ಸಾಧಿಸಲು ಹವಣಿಸಬೇಕೆಂಬ ಜೀವನ ತತ್ವವನ್ನೇ ನಮ್ಮ ಪೂರ್ವಜರು ಮೊದಲಿನಿಂದಲೂ ಆಚರಿಸಿಕೊಂಡು ಬಂದಿರುತ್ತಾರೆ. ಆದುದರಿಂದಲೇ ನಮ್ಮ ದೇಶದಲ್ಲಿ "ಸರ್ವೇಜನಾಃ ಸುಖಿನೋಭವಂತು" ಎಂಬ ನುಡಿಯು ಪ್ರಚಲಿತವಾಗಿತ್ತು. ಈ ಕಾರಣದಿಂದ ನಮ್ಮ ಸಂಸ್ಕೃತಿಯು ಜಗತ್ತಿನ ಮನ್ನಣೆಗೆ ಪಾತ್ರವಾಗಿತ್ತು. ಜಗತ್ತಿನಲ್ಲಿ ಸೃಷ್ಟಿಯಾಗುದ ಅನೇಕ ಜೀವರಾಶಿಗಳಲ್ಲಿ ಮಾನವ ಜನ್ಮವು ಶ್ರೇಷ್ಠವಾದುದು. ಈ ಶ್ರೇಷ್ಠ ಜನ್ಮ ತಾಳಿ ಭೂಮಿಯಲ್ಲಿ ಜನಿಸಿದ ನಂತರ ಮಾನವನು ಮಾನವನಾಗಿಯೇ ಉಳಿಯಬೇಕು; ಪಶುಕೋಟಿಯಲ್ಲಿ ಸಮಾವೇಶವಾಗಬಾರದು. ಅಷ್ಟೇ ಅಲ್ಲ, ಮಾನವನು ಮಾನವೋತ್ತಮ (ಪುರುಷೋತ್ತಮ) ನಾಗಲು ಪ್ರಯತ್ನ ಮಾಡುಬೇಕೆಂಬುದೇ ಸೃಷ್ಟಿಕರ್ತನ ಸಂಕಲ್ಪವೆಂದು ನಮ್ಮ ಜನರ ನಂಬಿಗೆ. ಆದರೆ ಸದ್ಯದ ಜಾಗತಿಕ ಪರಿಸ್ಥಿತಿಯನ್ನು ಈ ಒರೆಗಲ್ಲಿಗೆ ಹಚ್ಚಿ ನೋಡಿದರೆ ಎಲ್ಲವೂ ವಿಪರೀತವಾಗಿ ಕಾಣುವದು. ಇಂದು ಕಾಲ ಚಕ್ರಗತಿಯಿಂದಲೋ ಅಥವಾ ಮಾನವನ ಅಮಾನುಷ ಜೀವನದ ಪರಿಣಾಮದಿಂದಲೋ ಇಡೀ ಜಗತ್ತಿನ ಎಲ್ಲ ದೇಶಗಳಲ್ಲಿ ಜೀವನದ ಸ್ವರೂಪವು ಹದಗೆಟ್ಟು ಸಾಮಾಜಿಕ, ನೈತಿಕ ಮತ್ತು ಆರ್ಥಿಕ ದೃಷ್ಟಿಯಿಂದ ವಿಷಮ ವಾತಾವರಣವು ಇಡೀ ವಿಶ್ವವನ್ನೇ ಆವರಿಸಿ ಬಿಟ್ಟಿದೆ. ಮನುಷ್ಯನ ನೈತಿಕ ಮಟ್ಟವು ತೀರ ಕೀಳು ದರ್ಜೆಗಿಳಿದಿದೆ. ಬಡವನನ್ನು ಬಲ್ಲಿದನು ಸುಲಿದು ತಿನ್ನುತ್ತಿರುವನು. ಅಜ್ಞಾನಿಯನ್ನು ನೆಲಕ್ಕೆ ತುಳಿದು ಅಲ್ಪಜ್ಞಾನಿಯು ತಲೆಯೆತ್ತಿ ನಿಂತಿರುವನು. ಒಂದೆಡೆಯಲ್ಲಿ ಬಂಡವಳ ಶಾಹೀ ವ್ಯಾಪಾರಿಗಳ ಸತ್ತೆ, ಮತ್ತೊಂದೆಡೆಯಲ್ಲಿ ಸರ್ವಾಧಿಕಾರಿಗಳ ಪಾಶವೀ ಶಕ್ತಿ ಇವುಗಳ ದವಡೆಯಲ್ಲಿ ಜನತೆಯ ಜೀವನವು ಸಿಕ್ಕು ನ್ಯಾಯಾನ್ಯಾಯಗಳ ವಿಚಾರವಿಲ್ಲದಂತಾಗಿದೆ. ಇದರ ಪರಿಣಾಮವಾಗಿ ಅಶಾಂತ ವಾತಾವರಣವು ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿದೆ. ಇಂಥ ದಾರುಣ ಸಮಯದಲ್ಲಿ ಜಗತ್ತಿನ ಪ್ರಮುಖ ರಾಷ್ಟ್ರಗಳೆಲ್ಲವೂ ಮುಂದುಗಾಣದವರಾಗಿ ಸಾಗುತ್ತಿದ್ದಾಗ, ಮಾನವ ಸಂಸ್ಕೃತಿಯು ಈ ಕಾಲ ಪ್ರವಾಹದ ಮಡುವಿನಲ್ಲಿ ಸಿಲುಕಿ ನಾಶವಾಗಿ ಹೋಗದಂತೆ ಉಳಿಯಬೇಕಾದರೆ "ಸತ್ಯ ಮತ್ತ ಅಹಿಂಸೆಯೇ" ದಿವ್ಯಾಸ್ತ್ರವೆಂಬುದನ್ನು ಮಹಾತ್ಮಾಜಿಯವರು ಜಗತ್ತಿಗೆ ತೋರಿಸಿ ಕೊಟ್ಟರು.

ವರ್ಧಾ ಶಿಕ್ಷಣ ಯೋಜನೆಯಾದರೂ ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆಯೇ ರಚಿಸಲ್ಪಟ್ಟಿದೆ. ಈಗಿದ್ದ ಸಮಾಜವನ್ನು ಪುನರ್ಘಟಿಸಿ ಸತ್ಯ ಮತ್ತು ಅಹಿಂಸೆಯ ಮೇಲೆ ಹೊಸ ಸಮಾಜವನ್ನು ನಿರ್ಮಾಣ ಮಾಡುವದೇ ವರ್ಧಾ ಶಿಕ್ಷಣ ಯೋಜನೆಯಲ್ಲಿ ಅಡಕವಾಗಿರುವ ಕ್ರಾಂತಿಕಾರಕ ತತ್ವವು. ಮಾನವ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯೂ ಸುಖವಾಗಿ, ಸಮಾಧಾನದಿಂದ ಗೌರವದಿಂದ ಆರೋಗ್ಯ ಜೀವನ ನಡೆಸುವಂತಾಗಬೇಕಾದರೆ ಮಾನವ ವ್ಯವಹಾರದಲ್ಲಿ ಹಿಂಸೆ ಸಂಪೂರ್ಣವಾಗಿ ಲಯವಾಗಬೇಕು. ಅತಿವೇಗ, ಅತಿ ಭೋಗಗಳಿಂದ ಕೂಡಿದ ವಿಲಾಸ ಜೀವನವು ವರ್ಜವಾಗಬೇಕು. ಅದು ನಿಜವಾದ ನಾಗರಿಕತೆ, ಸಂಸ್ಕೃತಿಯ ಲಕ್ಷಣ. ಸಂಯಮಪೂರ್ಣವಾದ ಸರಲ ಜೀವನವೇ ಸರ್ವೋದಯದ ನಾಗರಿಕತೆ. ಎಲ್ಲರ ಹಿತದ ಈ ನಾಗರಿಕತೆಗೆ ಅಹಿಂಸೆಯೊಂದೇ ದಾರಿ. ಪ್ರತಿಯೊಬ್ಬನೂ ತನ್ನ ವಿಶಿಷ್ಟ ಗುಣ ಸಾಮರ್ಥ್ಯವನ್ನು ಮಾನವ ಕುಟುಂಬದ ಹಿತಕ್ಕಾಗಿ ಅರ್ಪಿಸುವದೇ ವ್ಯಾವಹಾರಿಕ ಅಹಿಂಸೆಯು. ಮಾನವ ಕುಟುಂಬವು ತನಗೆ ತಿಳಿದೋ ತಿಳಿಯದೆಯೋ ಸಾಗುತ್ತಿರುವದು ಅಹಿಂಸೆಯ ದಿಶೆಯಲ್ಲಿ. ಏಕೆಂದರೆ ಮನುಷ್ಯನು ಸ್ವಾಭಾವಿಕವಾಗಿ ಹಿಂಸಾಪ್ರಿಯನಲ್ಲ. ಶಾಂತಿಪ್ರಿಯ. ಆದುದರಿಂದ ಜೀವನದ ನಿಯಮ ಹಿಂಸೆಯಲ್ಲ; ಅಹಿಂಸೆ. ಹಿಂದು, ಬೌದ್ಧ, ಶೀಖ. ಪಾರಸೀ, ಯೆಹೂದಿ, ಕ್ರೈಸ್ತ, ಇಸ್ಲಾಮ ಮೊದಲಾದ ಜಗತ್ತಿನ ಎಲ್ಲ ಧರ್ಮಗಳ ಶರಣರೂ ಅಹಿಂಸೆ, ನ್ಯಾಯ ಮತ್ತು ಸಮಾನತೆಗಳ ಸಂಸ್ಕೃತಿಯನ್ನೇ ಕಟ್ಟಿ ಹರಡಲು ಹೆಣಗುತ್ತ ಬಂದಿದ್ದಾರೆ. ಅಹಿಂಸೆಯ ಮುಖ್ಯ ಲಕ್ಷಣಗಳು ಸರ್ವ ಧರ್ಮ ಸಮಾನತೆ, ಅಸ್ಪೃಶ್ಯತಾನಿವಾರಣೆ, ಸಾಮಾಜಿಕ ಸ್ವಾತಂತ್ರ್ಯ ಮುಂತಾದವು. "ಆತ್ಮವತ್ ಸರ್ವ ಭೂತಾನಿ' ಎಂಬಂತೆ ಅಹಿಂಸೆಯ ಗುರಿ ಇಡೀ ವಿಶ್ವದೊಡನೆ ತಾದಾತ್ಮ್ಯ ಭಾವವನ್ನು ಹೊಂದುವದಾಗಿರುವದು "ಸತ್ಯಂಬ್ರೂಯಾತ್ ಪ್ರಿಯಂಬ್ರೂಯಾತ್ ನಬ್ರೂಯಾತ್ ಸತ್ಯಮಪ್ರಿಯಂ '

ಎಂಬಂತೆ ಸತ್ಯವನ್ನು ನುಡಿಯಬೇಕು, ಪ್ರಿಯವಾದ ಮಾತನ್ನು ನುಡಿಯಬೇಕು. ಆದರೆ ಸತ್ಯವನ್ನು ನುಡಿಯುವದರಿಂದ ಒಂದು ಪ್ರಾಣಿಗೆ ತೊಂದರೆಯುಂಟಾಗುವಂತಿದ್ದರೆ ಅಂತಹ ಸತ್ಯವನ್ನು ನುಡಿಯಬಾರದು. ಎಂದ ಮೇಲೆ ಅಹಿಂಸೆಗೆ ಮೀರಿದ ಧರ್ಮವಿಲ್ಲ, ಆದುದರಿಂದಲೇ "ಅಹಿಂಸಾ ಪರಮೋ ಧರ್ಮಃ" ಎಂಬ ಹೇಳಿಕೆಯು ನಮ್ಮ ಭಾರತ ಸಂಸ್ಕೃತಿಯಲ್ಲಿ ಬೆರೆತು ಬಳಕೆಯ ಮಾತಾಗಿದೆ.

ಈ ಯೋಜನೆಯ ಮತ್ತೊಂದು ವೈಶಿಷ್ಟ್ಯವೆಂದರೆ— ಇದರಲ್ಲಿ ದೈಹಿಕ ಶ್ರಮದ ಕೆಲಸಕ್ಕೆ ಇರುವ ಮಹತ್ವ. ಆಧುನಿಕ ಜಗತ್ತಿನ ನಾಗರಿಕತೆಯಲ್ಲಿ ದುಡಿಮೆಯಿಲ್ಲದೆ ವಿರಾಮದಿಂದಿರುವದು ಶ್ರೀಮಂತಿಕೆಯ ಹೆಗ್ಗುರುತಾದರೆ, ವರ್ಧಾ ಶಿಕ್ಷಣಯೋಜನೆಯಲ್ಲಿ ಬಡವ-ಬಲ್ಲಿದನೆಂಬ ಭೇದವಿಲ್ಲದೆ ಪ್ರತಿಯೊಬ್ಬ ಮನುಷ್ಯನೂ ದಿನಾಲು ೮–೧೦ ತಾಸುಗಳವರೆಗೆ ದೇಹಶ್ರಮದ ಕೆಲಸವನ್ನು ಮಾಡದೆ ಉಂಡರೆ ಅದು ಸಮಾಜದ್ರೋಹವೆನಿಸುವದು. ದೈಹಿಕ ಶ್ರಮದ ದುಡಿತವು ಶರೀರಕ್ಕೂ ಮನಸ್ಸಿಗೂ ಶ್ವಾಸೋಚ್ಛ್ವಾಸ ಇಲ್ಲವೆ ರಕ್ತಚಲನೆಯಷ್ಟೇ ಅತ್ಯಾವಶ್ಯಕವೆಂದೂ ಇದರಿಂದ ಮನುಷ್ಯನ ಕಾರ್ಯಶಕ್ತಿಯೂ ನೈತಿಕ ಆಧ್ಯಾತ್ಮಿಕ ಶಕ್ತಿಗಳೂ ಬಲಗೊಳ್ಳುವವೆಂದೂ ಈ ಯೋಜನೆಯಲ್ಲಡಕವಾಗಿರುವ ವಿಶಿಷ್ಟ ಸಿದ್ಧಾಂತ. ಇಂದಿನ ಸಮಾಜದಲ್ಲಿ ದುಡಿಯುವವರು ದುಡಿಯದವರು, ಶ್ರೀಮಂತರು–ಬಡವರು, ಜಮೀನದಾರರು-ಒಕ್ಕಲಿಗರು, ಬಂಡವಲಗಾರರು—ಕೂಲಿಕಾರರು, ಮೇಲು–ಕೀಳೆಂಬ ದ್ವಂದ್ವಗಳು ಸಮಾಜದ ಸಮತೋಲವನ್ನೇ ಬುಡಮೇಲು ಮಾಡಿಬಿಟ್ಟಿವೆ. ಈ ಯೋಜನೆಯ ದೃಷ್ಟಿಯಿಂದ ದುಡಿಯುವವರೇ ಸುಸಂಸ್ಕೃತರು. ದುಡಿಯದೆ ಪರಾವಲಂಬಿಗಳಾಗಿರುವವರೇ ಅಸಂಸ್ಕೃತರು, ಅನಾಗರಿಕರು. ಪರಪುಷ್ಟ ಜೀವನಕ್ಕೂ ಪರಾಕ್ರಮಣ ಬುದ್ಧಿಗೂ ಈ ಯೋಜನೆಯಲ್ಲಿ ಎಡೆಯಿಲ್ಲ. ಗ್ರಹಮಾಲೆಯಲ್ಲಿ ಯಾವ ಪ್ರಕಾರ ಪೃಥ್ವಿಯು ತನ್ನ ಮೈಸುತ್ತ ತಿರುಗುತ್ತ ಸೂರ್ಯನ ಸುತ್ತಲೂ ಪ್ರದಕ್ಷಿಣೆ ಹಾಕುವಾಗ ಇಡೀ ಗ್ರಹಮಾಲೆಯಲ್ಲಿನ ಯಾವ ಗ್ರಹಕ್ಕೂ ಯಾವದೇ ರೀತಿಯಿಂದ ಅಡೆತಡೆಗಳನ್ನುಂಟು ಮಾಡದೆ ಅವ್ಯಾಹತವಾಗಿ ಮಾರ್ಗಕ್ರಮಣ ಮಾಡಿಕೊಂಡು ಹೋಗುತ್ತಿರುವದೋ, ಅದರಂತೆಯೇ ಈ ಹೊಸ ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ತಾನು ತನ್ನ ಸ್ವಹಿತವನ್ನು ಸಾಧಿಸಿಕೊಂಡು ತನ್ನ ಕುಟುಂಬವನ್ನೂ ಸಮಾಜದ ಹಿತವನ್ನೂ ರಕ್ಷಿಸಲು ಸುಸಮರ್ಥನಾಗಬೇಕೆಂಬುದೇ ಈ ಶಿಕ್ಷಣ ಯೋಜನೆಯ ಹೆಗ್ಗುರಿ.

ಮಾನವನ ಜೀವನದ ಮೂಲ ಬೇಡಿಕೆಗಳು ಮುಖ್ಯವಾಗಿ ಆಹಾರ. ಆಶ್ರಯ, ಆಚ್ಛಾದನ. ಈ ಮೂರು ಮೂಲ ಬೇಡಿಕೆಗಳನ್ನು ಮನುಷ್ಯನು ತನ್ನ ಸಾಮಾಜಿಕ, ನೈಸರ್ಗಿಕ ಹಾಗು ಆರ್ಥಿಕ ಪರಿಸ್ಥಿತಿಗಳ ಸಹಾಯದಿಂದ ಪೂರೈಸಿಕೊಳ್ಳುವನು. ಆದುದರಿಂದ ವ್ಯಕ್ತಿಯನ್ನು ಅವನ ಸುತ್ತುಮುತ್ತಲಿನ ಪರಿಸ್ಥಿತಿಗೆ ಹೊಂದಿಕೆಯಾಗುವಂತೆಯೂ ಅವನು ತನ್ನ ಪರಿಸ್ಥಿತಿಯ ಸದುಪಯೋಗ ಮಾಡಿಕೊಂಡು ಸುಖಿಯಾಗಿ ಬದುಕಿ ಬಾಳುವಂತೆಯೂ ಏರ್ಪಡಿಸುವದೇ ನಿಜವಾದ ಜೀವನ ಶಿಕ್ಷಣ. ಇಂಥ ಜೀವನ ಶಿಕ್ಷಣದಲ್ಲಿ ಜೀವನಾವಶ್ಯಕವಾದ ಉದ್ಯೋಗ ಶಿಕ್ಷಣಕ್ಕೆ ಅಗ್ರಸ್ಥಾನವಿರುವದು ಸಹಜವಾದುದು. ಜೀವನದ ಮೂಲ ಬೇಡಿಕೆಗಳಾದ ಆಹಾರ ಹಾಗು ಆಚ್ಛಾದನ ಇವುಗಳನ್ನು ಪೂರೈಸುವ ಒಕ್ಕಲತನ, ನೂಲುವದು ಹಾಗು ನೇಯುವದು ಇವು ಗ್ರಾಮಗಳ ಮೂಲ-ಉದ್ಯೋಗಗಳೆನಿಸಿಕೊಳ್ಳುತ್ತವೆ. ಆದುದರಿಂದಲೇ ಮೂಲ ಉದ್ಯೋಗಗಳ ಹಾಗು ಮಗುವಿನ ಮೂಲ ಶಕ್ತಿಗಳ ಮೂಲಕ ಶಿಕ್ಷಣಕೊಡುವ ವರ್ಧಾ ಯೋಜನೆಗೆ "ಮೂಲ ಶಿಕ್ಷಣ ಯೋಜನೆ" ಯೆಂದೂ ಹೆಸರು ಬಿದ್ದಿದೆ. ಈ ಮೂಲ ಉದ್ಯೋಗವೇ ಜ್ಞಾನದ ಮೂಲವಾಗಿರಬೇಕೆಂಬುದು ಮೂಲ ಶಿಕ್ಷಣದ ಜೀವಾಳ. ಮಗುವು ಯಾವದಾದರೊಂದು ಉತ್ಪಾದಕ ಉದ್ಯೋಗವನ್ನು ಮಾಡುವದರಿಂದ ಅದರ ವಯೋಗುಣವಾದ ಚಟುವಟಿಕೆ ಹಾಗು ಚಪಲತೆಗೆ ಸಂಪೂರ್ಣ ಅವಕಾಶವಿರುವದರಿಂದಲೂ ಮಗುವಿನ ಕೈಚಳಕವೂ ಮಾನಸಿಕ ವಿಕಾಸವೂ ಸಾಧಿಸುವದರಿಂದಲೂ ಈ ಕ್ರಮ ಸಶಾಸ್ತ್ರೀಯವಾಗಿದೆ. ಚಿಕ್ಕಂದಿನಿಂದಲೂ ಮಗುವು ಯಾವದಾದರೊಂದು ಉದ್ಯೋಗ ಮಾಡುತ್ತ ಶಿಕ್ಷಣ ಪಡೆಯುವದರಿಂದ ಮುಂದೆ ತನ್ನ ಜೀವನದಲ್ಲಿ ಯಾವ ಕೆಲಸವನ್ನು ಕೈಕೊಂಡರೂ ಸ್ವಾವಲಂಬಿಯಾಗಿರುವೆನೆಂಬ ಆತ್ಮವಿಶ್ವಾಸವು ಅವನಲ್ಲುಂಟಾಗುವದು. ಅಲ್ಲದೆ ಶರೀರ ಶ್ರಮದ ಹಾಗು ರಚನಾತ್ಮಕ ಕೆಲಸದಲ್ಲಿ ತೊಡಗುವ ಮನೋಭಾವವೇ ಬೆಳೆಯುವದು. ಸಾಮಾಜಿಕ ದೃಷ್ಟಿಯಿಂದ ಈಗಿರುವ ಉತ್ತಮ—ಕೀಳು ದರ್ಜೆಯ ಕೆಲಸಗಳೆನ್ನದೆ ಎಲ್ಲ ಕೆಲಸಗಳ ಬಗ್ಗೆಯೂ ಮಕ್ಕಳಲ್ಲಿ ಗೌರವ ಉಂಟಾಗಿ ಸಮತಾಭಾವಕ್ಕೂ ಅವಕಾಶವಾಗುವದು. ಹೀಗೆ ಉದ್ಯೋಗ ಪ್ರಿಯತೆ, ಸಹ

ಕಾರೀ ಸಮಾನತಾಭಾವನೆ, ನ್ಯಾಯ, ಶಾಂತಿ ಈ ಗುಣಗಳು ನೂತನ ಸಮಾಜದ ನಾಗರಿಕರಾದ ಮಕ್ಕಳಲ್ಲಿ ವಿಕಾಸವಾಗುವವು. ಇದನ್ನು ಸ್ವಪ್ರತಿಭೆಯಿಂದಲೂ ಆತ್ಮವಿಶ್ವಾಸದಿಂದಲೂ ಪ್ರತಿಪಾದಿಸುವವರು ಮಹಾತ್ಮರೇ. ಇದರಿಂದ ಇಡೀ ಶಿಕ್ಷಣ ಪ್ರಪಂಚಕ್ಕೆಲ್ಲ ಒಂದು ಹೊಸ ಬೆಳಕು ತಂದು ಕೊಟ್ಟಂತಾಗಿದೆ. ಇತ್ತೀಚಿನ ಅಂತರ್ರಾಷ್ಟ್ರೀಯ ಪರಿಷತ್ತುಗಳಲ್ಲಿ ಸಹ ಈ ತತ್ವವನ್ನೇ ಎತ್ತಿ ಹಿಡಿದಿದ್ದಾರೆ.

ವರ್ಧಾ ಯೋಜನೆಯಲ್ಲಿರುವ ಮೂರನೆಯ ಕ್ರಾಂತಿಕಾರಕ ತತ್ವವೆಂದರೆ, ನಮ್ಮ ಬಡ ದೇಶದ ಹಳ್ಳಿಗಳಲ್ಲಿ ಈ ಶಿಕ್ಷಣ ಕ್ರಮವು ಪ್ರಸಾರವಾಗಬೇಕಾದರೆ ಮಕ್ಕಳು ಗುಡಿಯುತ್ತ, ಗಳಿಸುತ್ತ ಜ್ಞಾನ ಸಂಪಾದನೆ ಮಾಡಿಕೊಳ್ಳದೆ ಗತ್ಯಂತರವಿಲ್ಲವೆಂಬುದು. ಆದುದರಿಂದ ಆಯಾ ಹಳ್ಳಿಗಳಲ್ಲಿ ವಿಶೇಷವಾಗಿ ನಡೆಯುವ ಉದ್ಯೋಗ—ಧಂದೆಗಳನ್ನೇ ಅವಲಂಬಿಸಿಕೊಂಡು ಮಕ್ಕಳ ಜ್ಞಾನಾರ್ಜನೆಯ ಕಾರ್ಯವು ಸಾಗಬೇಕು. ಮಕ್ಕಳು ಉತ್ಪಾದಕ ಉದ್ಯೋಗ ಮಾಡುತ್ತಲೇ ವಿದ್ಯೆ ಕಲಿಯಬೇಕು. ಈ ಸಂಬಂಧದಲ್ಲಿ ಬಾಪೂಜಿಜಿಯವರು ಹೀಗೆ ಹೇಳಿದ್ದಾರೆ:— " ನೂಲುವದು ಮತ್ತು ನೇಯುವದು ಇಂಥ ಹಳ್ಳಿಯ ಕೈಗಾರಿಕೆಗಳ ಮೂಲಕ ಮಕ್ಕಳಿಗೆ ಶಿಕ್ಷಣ ಕೊಡುವ ನನ್ನ ಯೋಜನೆಯು ಕೇವಲ ಶಿಕ್ಷಣವೇ ಅಲ್ಲದೆ ಬರ್ಚಿಯ ತುದಿಯಂತಿದ್ದು ಇದು ಇಂದಿನ ಸಮಾಜ ವ್ಯವಸ್ಥೆಯ ಒಳನುಗ್ಗಿ ಅದರ ಮೂಲ ಬೇರನ್ನೇ ಬದಲಾಯಿಸಬಲ್ಲ ಶಾಂತಿಮಯಿ ಕ್ರಾಂತಿಯ ಒಂದು ಸಾಧನೆಯಾಗಿದೆ." ನಮ್ಮ ದೇಶದ ಶಿಕ್ಷಣ ಕಾರ್ಯವು ಸರಕಾರದ ಹಣದ ಪೂರೈಕೆಯ ಮೇಲೆಯೇ ಅವಲಂಬಿಸುವುದಾದರೆ ನಮ್ಮ ರಾಷ್ಟ್ರದ ಶಿಕ್ಷಣ ಸಮಸ್ಯೆಯನ್ನು ನಾವು ಶತಮಾನಗಳಾದರೂ ಬಗೆಹರಿಸಲಾರೆವು. ಆದುದರಿಂದಲೇ ನಮ್ಮ ಶಿಕ್ಷಣ ಸ್ವಾವಲಂಬಿಯಾಗಬೇಕೆಂದು ಗಾಂಧೀಜಿಯವರ ನಿಶ್ಚಿತ ಮತ. ಮಕ್ಕಳು ಮಾಡುವ ಮೂಲ ಉದ್ಯೋಗದಿಂದ ತಯಾರಾದ ವಸ್ತುಗಳ ಮಾರಾಟದಿಂದ ಒಟ್ಟು ಆ ವರ್ಷಗಳಲ್ಲಿ ಶಿಕ್ಷಕರ ಸಂಬಳದ ಖರ್ಚನ್ನು ಪೂರೈಸುವಷ್ಟು ಮೂಲ ಶಿಕ್ಷಣವು ಸ್ವಾವಲಂಬಿಯಾಗಬೇಕೆಂದು ಅವರ ಉದ್ದೇಶ. ಆದರೆ ಉದ್ಯೋಗವನ್ನು ಕೇವಲ ಉತ್ಪಾದನದ ದೃಷ್ಟಿಯಿಂದ ಕಲಿಸುವದು ಇವರ ಉದ್ದೇಶವಲ್ಲ. ವಿದ್ಯಾರ್ಥಿಯ ಬುದ್ಧಿವಿಕಾಸದ ದೃಷ್ಟಿಯಿಂದ ಕಲಿಸಬೇಕು. ಡಾಕ್ಟರ್ ಜಾಕೀರ ಹುಸೇನರವರು ಹೇಳಿರುವಂತೆ " ಕೆಲಸ ಪ್ರಾರಂಭಿಸುವ ಮೊದಲು ವಿಚಾರ ಮಾಡುವದು, ಕೆಲಸದ ಪೂರ್ವಯೋಜನೆ ತಯಾರಿಸುವದು ಹಾಗು ಕೆಲಸ ಮುಗಿದ ನಂತರ ಮಾಡಿದ ಕೆಲಸವನ್ನು ಪರಿಶೀಲಿಸುವದು, ವಿಮರ್ಶಿಸುವದು ಈ ರೂಢಿಯು ಮಕ್ಕಳಿಗೆ ಬರಬೇಕು. ಮಕ್ಕಳು ತಾವು ಮಾಡುವ ಯಾವದೇ ಕೆಲಸದಲ್ಲಿ ಕೈ ಅಥವಾ ಬುದ್ಧಿಯನ್ನು ಪೂರ್ಣವಾಗಿ ಉಪಯೋಗಿಸಬಲ್ಲವರಾದರೆ ಅದೇ ನಿಜವಾದ ಕೆಲಸದ ಸಾಲೆ ಅಥವಾ ಮೂಲ ಶಿಕ್ಷಣ ಸಾಲೆ. ಆಚಾರ್ಯ ವಿನೋಬಾರವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೂಲ ಶಿಕ್ಷಣದ ವಿಷಯವಾಗಿ ಒಂದೆಡೆ ಹೀಗೆ ಹೇಳಿರುವರು. " ನಮ್ಮ ಉದ್ದೇಶ ಕೇವಲ ಕೆಲಸಕ್ಕಾಗಿ ಕೆಲಸಗಾರರನ್ನು ತಯಾರ ಮಾಡುವದಲ್ಲ. ನಾನು ಬಯಸುವದು ವ್ಯಕ್ತಿಯ ಪೂರ್ಣ ವಿಕಾಸ. ನೂತನ ಶಿಕ್ಷಣದಲ್ಲಿ ಶಿಕ್ಷಕರೂ ವಿದ್ಯಾರ್ಥಿಗಳೂ ಕೂಡಿ ಕೆಲಸ ಮಾಡುತ್ತ ತಮ್ಮ ಗುಣ ವಿಕಾಸವನ್ನು ಮಾಡಿಕೊಳ್ಳಬೇಕು. ಅವರು ಕೇವಲ ಜ್ಞಾನವಂತರು ಅಥವಾ ಕುಶಲರು ಆದ ಮಾತ್ರಕ್ಕೆ ಸಾಲದು. ಇವೆರಡೂ ಸಾಧಿಸಿದರೂ ಅದು ಒಮ್ಮುಖವೇ ಆಗುವದು. ಕರ್ಮಶಕ್ತಿ ಮತ್ತು ಜ್ಞಾನಶಕ್ತಿ ಇವೆರಡೂ ಬಲಗೊಳ್ಳಬೇಕು. ಆದರೆ ಇದರ ಕೂಡ ಆಂತರಿಕ ವಿಕಾಸವಾಗಬೇಕು. ಆತ್ಮಶಕ್ತಿಯೂ ಬೆಳೆಯಬೇಕು. ಆತ್ಮದ ಅರಿವೇ ಶಿಕ್ಷಣದ ಪರಮ ಧ್ಯೇಯ. "

ಹೀಗೆಂದ ಮಾತ್ರಕ್ಕೆ ಈ ಶಿಕ್ಷಣ ಕ್ರಮವು ಬರಿಯ ಉದ್ಯೋಗಮಯವಾದದ್ದೆಂದು ತಿಳಿಯಬಾರದು. ಮೂಲ ಉದ್ಯೋಗ ಮಾತ್ರವಲ್ಲದೆ ಮಗುವಿನ ಸಹಜ ಪ್ರವೃತ್ತಿಗಳಿಗೂ ಒಲವುಗಳಿಗೂ ಅನುಸರಿಸಿ ಮಗುವಿನ ನೈಸರ್ಗಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಲ್ಲಿ ಒದಗುವ ವಿವಿಧ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಈ ಶಿಕ್ಷಣ ಕ್ರಮವು ಮುಂದುವರಿಯುವದು. ಆದುದರಿಂದ ಮಕ್ಕಳಲ್ಲಿರುವ ಆಟ ಪ್ರವೃತ್ತಿ, ಅನುಕರಣ ಪ್ರವೃತ್ತಿಗಳಿಗೆ ಪೂರ್ಣ ಪ್ರೋತ್ಸಾಹನೆ ದೊರೆಯುವಂತೆ ವಿವಿಧ ಪ್ರಕಾರದ ಸಾಮಾಜಿಕ ಕಾರ್ಯಕ್ರಮಗಳನ್ನು ಹಬ್ಬ-ಹುಣ್ಣಿಮೆ, ಜಾತ್ರೆ—ಉತ್ಸವ ಮುಂತಾದವುಗಳ ಸಂಬಂಧವಾಗಿ ಕೈಕೊಳ್ಳಬಹುದು. ನೈಸರ್ಗಿಕ ಪರಿಸ್ಥಿತಿಯಲ್ಲಿ ಸಹಜ ಸಂದರ್ಭ ಪೊದಗಿದಾಗ ಆಕಾಶದೊಳಗಿನ ಅದ್ಭುತ ಚಮತ್ಕಾರಗಳನ್ನೂ ಋತುಮಾನಕ್ಕನುಸಾರವಾಗಿ ಗಿಡ-ಮರ, ಪಶು—ಪಕ್ಷಿ, ಹಾಗು ಮನುಷ್ಯರ ಜೀವನದ ಮೇಲಾಗುವ ಪರಿಣಾಮಗಳನ್ನೂ ನಿರೀಕ್ಷಣೆ-ಪರೀಕ್ಷಣೆ ಮಾಡಲು ಅನುವು ಮಾಡಿಕೊಡಬಹುದು. ಈ ರೀತಿಯಾಗಿ ವಿವಿಧೋನ್ಮುಖವಾದ ಚಟುವಟಿಕೆಗಳಿಂದ ಕೂಡಿ ಸಾಗುವದರಿಂದ ಮೂಲ

ಶಿಕ್ಷಣವು ಏಕಮುಖಿಯಾಗದೆ ಆರ್ಥಿಕ, ಸಾಮಾಜಿಕ. ಹಾಗು ನೈಸರ್ಗಿಕ ಈ ಮೂರೂ ಪರಿಸ್ಥಿತಿಗಳನ್ನೊಳಗೊಂಡಿರುವದರಿಂದ ಇದು ಸರ್ವಾಂಗ ಸುಂದರ ಶಿಕ್ಷಣವಾಗುವದು. ಈ ರೀತಿಯ ಬೋಧನಾಕ್ರಮದಿಂದ ಶಿಕ್ಷಣವನ್ನು ಸಹಜ, ಸರಲ ಹಾಗು ಪರಿಣಾಮಕಾರಕವಾಗಿ ನಡೆಸಬಹುದೆಂದು ಪ್ರತ್ಯಕ್ಷ ಅನುಭವದಿಂದ ಕಂಡು ಬಂದಿದೆ.

ಈ ಯೋಜನೆಯಲ್ಲಿ ಹಳೆಯ ಶಿಕ್ಷಣದ ಇನ್ನೂ ಹಲ ಕೆಲವು ದೋಷಗಳನ್ನು ಪರಿಹಾರ ಮಾಡಲಾಗಿದೆ. ಅವುಗಳಲ್ಲಿ, ಪುಸ್ತಕಗಳೇ ಶಿಕ್ಷಣದ ಆಧಾರವಲ್ಲ. ಸಾಧನಮಾತ್ರವೆಂಬುದು, ಶಿಕ್ಷಣವು ತಾಯ್ನುಡಿಯ ಮೂಲಕವೇ ಸಾಗಬೇಕೆಂಬುದು, ಮುಖ್ಯವಾಗಿವೆ. ಈ ಯೋಜನೆಯಲ್ಲಿ ಶಿಕ್ಷಣದ ಕೇಂದ್ರವೆಂದರೆ ಪುಸ್ತಕವಾಗಿರದೆ ಚೈತನ್ಯರೂಪಿಯಾದ ಮಗುವೇ ಆಗಿರುತ್ತದೆ. ಜ್ಞಾನದ ಮೂಲವೆಂದರೆ ಪುಸ್ತಕವಲ್ಲ; ಮಗುವು ಮಾಡುವ ಕೃತಿ. ಪುಸ್ತಕ ಪ್ರಧಾನವಾದ ಶಿಕ್ಷಣದಿಂದ ನಮ್ಮ ದೇಶದ ಯುವಕರಲ್ಲಿ ಸ್ವಂತ ವಿಚಾರ ಶಕ್ತಿಯೂ ಹೇಗೆ ಕಮರಿ ಹೋಗಿದೆಯೆಂಬುದನ್ನು ಪುನಃ ಹೇಳಬೇಕಾಗಿಲ್ಲ. ಆದುದರಿಂದ ಪುಸ್ತಕಗಳು ಶಿಕ್ಷಣದ ಸಾಧನಗಳಲ್ಲಿ ಒಂದಾಗಿರಬೇಕಲ್ಲದೆ ಪುಸ್ತಕಗಳೇ ಶಿಕ್ಷಣದ ಆಧಾರ ವಸ್ತುಗಳಲ್ಲ. ಶಿಕ್ಷಣಶಾಸ್ತ್ರದಲ್ಲಿ 'ನೋಡಿ ಕಲಿ, ಮಾಡಿ ಕಲಿ' ಎಂಬ ತತ್ವಗಳಿರುವವೇ ಹೊರತು 'ಓದಿ ಕಲಿ'ಯೆಂಬ ತತ್ವವು ಎಲ್ಲಿಯೂ ಇಲ್ಲ. ನೋಡಿ ಹಾಗು ಮಾಡಿ ಪಡೆದುಕೊಂಡ ಜ್ಞಾನವನ್ನು ದೃಢಪಡಿಸಿಕೊಳ್ಳಲಿಕ್ಕೂ ಅಭಿವೃದ್ಧಿ ಮಾಡಿಕೊಳ್ಳುವದಕ್ಕೂ ಪುಸ್ತಕಗಳಲ್ಲಿ ಓದುವದು ಸಹಾಯಕವಾಗುವದೇ ಹೊರತು ಪುಸ್ತಕಗಳನ್ನೋದುವದೇ ಶಿಕ್ಷಣವಾಗಲಾರದೆಂಬ ಮಾತನ್ನು ಯಾರಾದರೂ ಒಪ್ಪಬಹುದಾಗಿದೆ.

ಇನ್ನು ಪರಭಾಷೆಯ ಮೂಲಕ ನಮ್ಮ ಶಿಕ್ಷಣವು ಇಷ್ಟು ಕಾಲ ನಡೆದದ್ದರಿಂದ ನಮ್ಮ ದೇಶದ ವಿದ್ಯಾರ್ಥಿಗಳ ನೇಕೆಯೂ ಬುದ್ಧಿ ಶಕ್ತಿಯೂ ವಿಶೇಷವಾಗಿ ವ್ಯರ್ಥವಾಗುತ್ತಿತ್ತು. ಜಗತ್ತಿನ ಯಾವ ದೇಶದಲ್ಲಿಯೂ ತಮ್ಮ ಸ್ವಭಾಷೆಯನ್ನು ಬಿಟ್ಟು ಪರದೇಶದ ಭಾಷೆಯ ಮೂಲಕ ಶಿಕ್ಷಣ ಕೊಡುತ್ತಿರುವದಿಲ್ಲ. ಚೀನ ದೇಶದಲ್ಲಿ ಚೀನೀ ಭಾಷೆಯಲ್ಲಿಯೇ ಶಿಕ್ಷಣ ಸಾಗುವದು. ರಶಿಯಾ ದೇಶದ ಸಾಲೆಗಳಲ್ಲಿ ರಶಿಯನ ಭಾಷೆಯಿಂದಲೇ ಕಲಿಸುವರು. ಆದರೆ ಹಿಂದುಸ್ತಾನದ ಸಾಲೆಗಳಲ್ಲಿ ಮಾತ್ರ ಪರಭಾಷೆಯಾದ ಇಂಗ್ಲೀಷದಿಂದಲೇ ವಿದ್ಯಾರ್ಥಿಗಳು ಕಲಿಯಬೇಕಾಗಿತ್ತು. ಈ ಅನ್ಯಾಯವನ್ನು ಪರಿಹಾರ ಮಾಡಲೋಸುಗವೇ ವರ್ಧಾ ಶಿಕ್ಷಣ ಯೋಜನೆಯಲ್ಲಿ ತಾಯ್ನುಡಿಯ ಮೂಲಕವೇ ಶಿಕ್ಷಣ ಸಾಗಬೇಕೆಂದೂ ದೇಶದಾದ್ಯಂತ ಪರಸ್ಪರ ವ್ಯವಹಾರಕ್ಕಾಗಿಯೂ ಕೋರ್ಟು ಕಚೇರಿಗಳಲ್ಲಿಯೂ ಇನ್ನು ಮುಂದೆ ರಾಷ್ಟ್ರ ಭಾಷೆಯಾದ ಹಿಂದುಸ್ತಾನಿಯನ್ನೇ ಉಪಯೋಗಿಸಲನುವಾಗುವಂತೆ ತಾಯ್ನುಡಿಯ ನಂತರ ಇಂಗ್ಲೀಷಿನ ಬದಲಾಗಿ ರಾಷ್ಟ್ರಭಾಷೆಯನ್ನು ಎಲ್ಲರೂ ಕಲಿಯಬೇಕೆಂದೂ ಏರ್ಪಾಡು ಮಾಡಲಾಗಿದೆ.

ಇವೆಲ್ಲಕ್ಕಿಂತ ವರ್ಧಾ ಯೋಜನೆಯ ಜೀವ ಜೀವಾಳದ ಉಸಿರೆಂದರೆ "ಸಮವಾಯ ಪದ್ಧತಿ." ಜೀವನಕ್ಕೂ ಶಿಕ್ಷಣಕ್ಕೂ ನಿಕಟ ಸಂಬಂಧವಿರಬೇಕು. ಅಲ್ಲದೆ ಕೆಲಸಕ್ಕೂ ಜೀವನಕ್ಕೂ ಸಂಬಂಧವಿರಬೇಕು. ಜ್ಞಾನವೆಂದರೆ ಪ್ರತ್ಯೇಕ ವಿಷಯಗಳ ಪೆಟ್ಟಿಗೆಗಳಲ್ಲ. ಜ್ಞಾನವು ಅಖಂಡವಾದುದು. ಆದುದರಿಂದ ಜ್ಞಾನ ಸಾಧನಗಳಾದ ಸಾಲೆಯ ಅಭ್ಯಾಸದ ವಿಷಯಗಳನ್ನು ಮಗುವಿನ ಆರ್ಥಿಕ, ಸಾಮಾಜಿಕ, ನೈಸರ್ಗಿಕ ಪರಿಸ್ಥಿತಿಯೊಳಗಿನ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿ, ಅನುಬಂಧಿಸಿ, ಕಲಿಸಬೇಕು, ಹಾಗು ವಿವಿಧ ವಿಷಯಗಳ ಪರಸ್ಪರ ಸಂಬಂಧದ ಅರಿವನ್ನುಂಟು ಮಾಡಿಕೊಡಬೇಕು. ಹೀಗೆ ಜೀವನದ ವ್ಯವಹಾರಗಳ ಜ್ಞಾನದ ಸಂಗತಿಗಳನ್ನು ಅವಲಂಬಿಸಿದ್ದರಿಂದ, ಶಿಕ್ಷಣಕ್ಕೂ ಜೀವನಕ್ಕೂ ಒಂದು ನಿಕಟ ಸಂಬಂಧವುಂಟಾಗಿದೆ. ಸಾರಾಂಶವೇನಂದರೆ ಶಿಕ್ಷಣವೇ ಜೀವನವಾಗಬೇಕು, ಜೀವನವೇ ಶಿಕ್ಷಣರಂಗವಾಗಬೇಕು.

ಈ ಪ್ರಕಾರ ಏಳು ವರ್ಷಗಳ ವರೆಗೂ ಶಿಕ್ಷಣ ಪಡೆದ ಬಾಲಕನಲ್ಲಿ ಸದ್ಯದ ಮ್ಯಾಟ್ರಿಕ್ಯುಲೇಷನ್‌ದವರಷ್ಟು ಜ್ಞಾನದ ಮಟ್ಟವು ಸಾಧಿಸುವದಂತಹದಿರಬೇಕು.

ನಾವು ಇಷ್ಟು ದಿನಗಳ ವರೆಗೆ ಪರದೇಶದವರು ವಿಧಿಸಿದ ಶಿಕ್ಷಣ ಪದ್ಧತಿಗಳನ್ನು ಅನುಸರಿಸಬೇಕಾಗಿತ್ತು. ಆದರೆ ನಮ್ಮ ದೇಶದ ಜನರ ಹಿತವನ್ನನುಲಕ್ಷಿಸಿ ನಮ್ಮವರೇ ತಯಾರಿಸಿದ ಮೊದಲನೆಯ "ಸ್ವದೇಶೀ" ಶಿಕ್ಷಣ ಯೋಜನೆಯ ಉದಾಹರಣೆಯೆಂದರೆ ವರ್ಧಾ ರಾಷ್ಟ್ರೀಯ ಶಿಕ್ಷಣ. ಇಂಥ ಶಿಕ್ಷಣದಿಂದ ನಮ್ಮ ಭಾರತೀಯ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವದಲ್ಲದೆ ನಮ್ಮ ರಾಷ್ಟ್ರವನ್ನು ಇಡೀ ಜಗತ್ತಿನಲ್ಲೇ ಆದರ್ಶ ರಾಷ್ಟ್ರವನ್ನಾಗಿ ಮಾಡಲು ಸಾಧ್ಯವಾಗುವದು. ಆದರೆ ಮಹಾತ್ಮಾಜಿಯವರ ಈ ಉದಾತ್ತ ಕಲ್ಪನೆಯನ್ನು ಈಡೇರಿಸುವ ಹೊಣೆಯು ಶಿಕ್ಷಕರವಾಗಿದೆ. ಅಂಥ ಉಚ್ಚ ತರಗತಿಯ ಶಿಕ್ಷಕರು ಸ್ವತಂತ್ರ ಭಾರತದಲ್ಲಿ ಉಂಟಾಗಲೆಂಬುದೇ ನಮ್ಮ ಉತ್ಕಟೇಚ್ಛೆ.

ಜೈ ಹಿಂದ !

ಅಖಿಲರಿಗೂ ದೃಷ್ಟಿಮೂಲಕ ಶಿಕ್ಷಣ

ಲೇಖಕರು : ಶ್ರೀ. ಜಿ. ಕೆ- ಅಶಲೆ
[ಇನಸ್ಪೆಕ್ಟರ್ ಫಾರ್ ವ್ಹಿಜುಅಲ್ ಇನ್‌ಸ್ಟ್ರಕ್ಶನ್, ಮುಂಬೈ ಪ್ರಾಂತ, ಮುಂಬಯಿ.]

ದೃಷ್ಟಿ ಮೂಲಕ ಶಿಕ್ಷಣವು ನಮ್ಮ ಪ್ರಾಂತದಲ್ಲಿ ಹೊಸ ವಿಷಯವಲ್ಲ. ಅದು ೧೯೧೮ನೆಯ ಇಸವಿಯಲ್ಲಿ ಮಾಯಾಲಾಂದರವು ಶೈಕ್ಷಣಿಕ ಉಪಕರಣವೆಂದು ಪ್ರಾರಂಭಿಸಲ್ಪಟ್ಟಾಗ್ಗೆ, ಬಳಕೆಯಲ್ಲಿ ಬಂತು. ಮತ್ತು ದೃಷ್ಟಿಮೂಲಕ ಶಿಕ್ಷಣದ ಕಚೇರಿಯು (Visual Education Office) ಅಸ್ತಿತ್ವದಲ್ಲಿ ಬಂತು. ಮುಂಬಯಿ ಸರಕಾರವು ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚೆಗೆ ೧೬ ಮಿಮಿ. ಗಳ ಫಿಲ್ಮುಗಳನ್ನು ಪ್ರಾರಂಭಿಸಿರುವದು ನಮಲ್ಲಿಯ ಎಷ್ಟೋ ಜನರಿಗೆ ತುಂಬಾ ಸಮಾಧಾನಕರವಾದ ಸಂಗತಿ. ಇಲ್ಲಿಯ ವರೆಗೆ, ಚಲತ್ ಚಿತ್ರ (ಮಂದಿರ) ಮತ್ತು ಶಾಲೆಗಳು ಪರಸ್ಪರ ವೈರಭಾವದಿಂದ ಇದ್ದವು, ಮತ್ತು ಈಗಲೂ ಸಹ, ಹಳೆಯ ವಿಚಾರ ಸರಣಿಯ ಎಷ್ಟೋ ಶಿಕ್ಷಕರು ಶಿಕ್ಷಣದಲ್ಲಿಯ ಈ ನೂತನೋಪಕರಣದ ಸುಪರಿಣಾಮಗಳ ಬಗ್ಗೆ ಸಾಶಂಕರಿರುವರು. ಶಾಲೆಯ ತರಗತಿಯಲ್ಲಿ, ಚಲಚ್ಚಿತ್ರದ ಫಿಲ್ಮಿನ ಶೈಕ್ಷಣಿಕ ಬೆಲೆಯನ್ನು ಕುರಿತು ಅವರು ಬಹಿರಂಗವಾಗಿ ವಾದಿಸುತ್ತಾರೆ. ಯಾಕಂದರೆ, ಅವರ ಅಭಿಪ್ರಾಯದಂತೆ ಈ ಚಲಚ್ಚಿತ್ರದ ಹುಚ್ಚು ಬೇಕಾದಷ್ಟು ಶೈಕ್ಷಣಿಕ ಬೆಲೆಯುಳ್ಳದ್ದೆಂದು ಪ್ರತಿಪಾದಿಸಲ್ಪಡುತ್ತಿದ್ದರೂ ಸಹ, ಅದು ಶಾಲೆಯಲ್ಲಿ ಶಿಕ್ಷಕನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಬಹುದೆಂದು ಅವರ ಮತ. ಮಾತನಾಡುವ ಶೈಕ್ಷಣಿಕ ಚಲಚ್ಚಿತ್ರವು ಹಳೆಯ ಪದ್ಧತಿಯ ಮಾಯಾಲಾಂದರ ಅಥವಾ ಮೌನ ಚಲಚ್ಚಿತ್ರಗಳಿಗಿಂತ ಶಿಕ್ಷಕನ ಅಸ್ತಿತ್ವಕ್ಕೆ ಹೆಚ್ಚು ಭಂಗವನ್ನುಂಟುಮಾಡುವಂಥ ಗಂಡಾಂತರ ಸ್ವರೂಪದ್ದೆಂದು ಇತರರ ಮತ. ಮಾತನಾಡುವ ಚಲಚ್ಚಿತ್ರವು ತರಗತಿಯಲ್ಲಿ ಪ್ರವೇಶ ದೊರೆಕಿಸಿದಂದಿನಿಂದ, ದೃಷ್ಟಿಮೂಲಕ ಶಿಕ್ಷಣದ ಇತರ ಶೈಕ್ಷಣಿಕ ಸಾಧನಗಳು ಬಳಕೆಯಿಂದ ಹೊರಹೋಗಿರುವವೆಂದು ಅಭಿಪ್ರಾಯ ಪಡುವ ಕೆಲವು ಶಿಕ್ಷಕರೂ ಕಂಡು ಬರುವದುಂಟು. ದೃಷ್ಟಿಮೂಲಕ ಶಿಕ್ಷಣದ ಬೇರೆ ಬೇರೆ ಉಪಕರಣಗಳಿಂದ ಬೇರೆ ಬೇರೆ ಪ್ರಸಂಗಗಳಲ್ಲಿ ಹೇಗೆ ಪರಮಾವಧಿ ಉಪಯುಕ್ತತೆಯನ್ನು (ಲಾಭವನ್ನು) ಪಡೆಯಬಹುದೆಂಬುದು, ಕಲಿಸಲಿಕ್ಕೆಂದು ಆರಿಸಿಕೊಳ್ಳಲ್ಪಟ್ಟ ಯಾವದೊಂದು ವಿಶಿಷ್ಟ ವಿಷಯಕ್ಕೆ ಅವುಗಳಲ್ಲಿಯ ಪ್ರತಿಯೊಂದರ ವಿಶಿಷ್ಟ ಉಪಯುಕ್ತತೆ ಯಾವದೆಂಬುದನ್ನು ಮತ್ತು ಚಲಚ್ಚಿತ್ರದ ಯಂತ್ರದಿಂದೊಡಗೂಡಿ ಸುಸಜ್ಜಿತನಾದ ಶಿಕ್ಷಕನು ತರಗತಿಯಲ್ಲಿ ತನ್ನ ಅಗತ್ಯತೆಯನ್ನು ಹೇಗೆ ನಿರ್ಮಿಸಿಕೊಳ್ಳಬಲ್ಲನೆಂಬುದೂ ಕೆಲವೇ ವಿಚಾರಯುಕ್ತ ಶಿಕ್ಷಕರಿಗೆ ಗೊತ್ತುಂಟು.

ಆಧುನಿಕ ಶಿಕ್ಷಣ ರೂಢಿಯಲ್ಲಿ ತರಗತಿಯಲ್ಲಿಯ ಶಿಕ್ಷಣವು ದ್ವಿಮುಖಿಯಾಗಿದೆ. ಜ್ಞಾನವನ್ನು ಪಡೆಯುವವನ ವಿಚಾರ ಶಕ್ತಿಯನ್ನು ಪ್ರಚೋದನಗೊಳಿಸುವಂತೆ ವಿಷಯ ಜ್ಞಾನವನ್ನೀಯುವದು ಅದರ ಒಂದು ವಿಭಾಗ. ಪ್ರಾಪ್ತ ಮಾಡಿಕೊಂಡ ಜ್ಞಾನವನ್ನು ಉಳಿಸಿಕೊಳ್ಳಲಿಕ್ಕೆ ಉತ್ತೇಜನ ಕೊಡುವದು ಮತ್ತೊಂದು ವಿಭಾಗ. ಸ್ವಾಭಾವಿಕವಾಗಿ ಇಡೀ ಜ್ಞಾನಾರ್ಜನೆಯ ಕ್ರಮದಲ್ಲಿ, ಇಂದ್ರಿಯಗಳನ್ನು ಪರಮಾವಧಿ ಉಪಯೋಗಿಸಿಕೊಳ್ಳುವದು ಮಹತ್ವದ ಅಂಗವಾಗಿರತಕ್ಕದ್ದು. ನೇತ್ರೇಂದ್ರಿಯದಿಂದ ಇದು ಶ್ರೇಷ್ಠವಾಗಿ ಸಾಗಬಲ್ಲದು. ಬಹು ಪುರಾತನ ಕಾಲದಿಂದಲೂ ರೂಢಿಯಲ್ಲಿರುವ "ನೋಡುವದೆಂದರೆ ನಂಬುವ"ದೆಂಬ ಗಾದೆಯ ಮಾತು ಈ ವಿಷಯದಲ್ಲಿ ಅತ್ಯಂತ ನಿಜವಾದುದು. ಮಕ್ಕಳು ಯಾವದನ್ನು ನೋಡುವರೊ ಅದನ್ನು ನಂಬಲು ಅವರಿಗೆ ಸುಲಭವಾಗುವದು; ಅದರಂತೆಯೆ ಅವರು ಯಾವದನ್ನು ಪ್ರತ್ಯಕ್ಷ ನೋಡದೆ ಶಿಕ್ಷಕರ ಬಾಯಿಯಿಂದ ಮಾತ್ರ ಕೇಳುತ್ತಾರೊ ಅಂಥದನ್ನು ಅವರು ಸುಲಭವಾಗಿ ಮರೆಯುವರು. ಅದನ್ನು ನಂಬಲು ಕೂಡ ಅವರಿಗೆ ಕಠಿಣವಾಗಬಹುದು. ಮಕ್ಕಳಿಗೆ ಚಿತ್ರಗಳಿಲ್ಲದ ವ್ಯಾಕರಣ ಅಥವಾ ಗಣಿತ ವಿಷಯಗಳ ಪಠ್ಯ ಪುಸ್ತಕಗಳಿಗಿಂತ ಉತ್ತಮ ಚಿತ್ರಗಳಿಂದ ಕೂಡಿದ

ಪಠ್ಯಪುಸ್ತಕಗಳು ಹೆಚ್ಚು ರುಚಿಸುತ್ತವೆಂಬ ಸಂಗತಿಯಿಂದಲೆ ನೇತ್ರೇಂದ್ರಿಯಕ್ಕೆ ಸಹಾಯಕವಾದ ಉಪಕರಣವು ಅವುಗೆ ಎಷ್ಟು ಚಿತ್ತಾಕರ್ಷಕವಾದುದೆಂಬುದನ್ನು ಸಿದ್ಧಗೊಳಿಸುತ್ತದೆ. ಆದ್ದರಿಂದ, ಶಿಕ್ಷಣದಲ್ಲಿ ಮೊಟ್ಟಮೊದಲಾಗಿ ಉಪಯೋಗಿಸಲ್ಪಡಲು ಪ್ರಾರಂಭವಾದ ಪ್ರತ್ಯಕ್ಷೋಪಕರಣಗಳೆಂದರೆ, ಅಚ್ಚು ಹಾಕಲ್ಪಟ್ಟ ಚಿತ್ರಗಳು. ನಂತರ, ಮಾಯಾಲಾಂದರದಿಂದ ಚಿತ್ರಗಳನ್ನು ಪಡದೆಯ ಮೇಲೆ ತೋರಿಸುವ ನವಕಲ್ಪನೆಯ ಆಧುನಿಕ ಚಲಚ್ಚಿತ್ರ ಪ್ರದರ್ಶಕ ಪದ್ಧತಿಗಳ ದಿಶೆಯಲ್ಲಿ ದೊಡ್ಡ ಪ್ರಗತಿಯಾಯಿತು. ಆ ತರದ ಚಿತ್ರಗಳು ಚಲಚ್ಚಿತ್ರಗಳಷ್ಟು ನಿಜಾಂಶಯುಕ್ತವಲ್ಲವಾದರೂ ಸಹ ಅವುಗಳಿಂದ ಒಂದು ವಿಶಿಷ್ಟ ತರದ ಲಾಭಗಳುಂಟು.

ಆದರೆ ಶಿಲ್ಪಕಲೆಯಂಥ ಕೆಲವೊಂದು ವಿಷಯಗಳ ವಿವರಗಳನ್ನು ತಿಳಿಸಿ ಹೇಳುವ ಪ್ರಶ್ನೆಯು ಉದ್ಭವಿಸಿದಾಗ ಮಾಯಾಲಾಂದರದಿಂದ ಪಡದೆಯ ಮೇಲೆ ಚಿತ್ರಗಳನ್ನು ಪ್ರದರ್ಶಿಸುವದೇ ಎಲ್ಲಕ್ಕೂ ಯೋಗ್ಯವಾದ ಯೋಜನೆ. ಇತ್ತಲಾಗಿ "ಫಿಲ್ಮಸ್ಟ್ರಿಪ ಪ್ರೊಜೆಕ್ಟರ" ಪದ್ಧತಿಯು ನಮ್ಮ ನೆರವಿಗೆ ಬಂದಿದೆ. ಈ ಉಪಕರಣವು ಕೈಯಲ್ಲಿ ಹಿಡಿದು ಒಯ್ಯಲು ಸುಲಭವಾದುದು ಮತ್ತು ನೋಡಲು ಅಂದವಾದುದು. ಆದ್ದರಿಂದ ಇದು ತನ್ನ ಉಪಯುಕ್ತತೆಯ ಅವಧಿಯನ್ನು ಮೀರಿ ಬದುಕಿರುವಂತೆ ತೋರುತ್ತಿರುವ ಮಾಯಾಲಾಂದರದ ಸ್ಥಾನವನ್ನು ಆಕ್ರಮಿಸುವದೆಂಬುದರ ಚಿಹ್ನೆಗಳು ಸಂಪೂರ್ಣವಾಗಿ ಕಂಡು ಬರುತ್ತಿವೆ. ಆದರೂ ಸರ, ಈ ಬದಲಾವಣೆಯು ಸಾವಕಾಶವಾಗಿಯೂ ಮತ್ತು ಕ್ರಮೇಣವಾಗಿಯೂ ಬರುವಂಥದು. ಯಾಕಂದರೆ, ವ್ಯಾವಹಾರಿಕ ಕಾರಣಗಳ ಸಲುವಾಗಿ ನಾವು ನಮ್ಮಲ್ಲಿ ಸಂಗ್ರಹವಾಗಿರುವ ಮಾಯಾಲಾಂದರಗಳನ್ನೆಲ್ಲ ಒಮ್ಮೆ ಕಿತ್ತೊಗೆದು ಫಿಲ್ಮಸ್ಟ್ರಿಪ್ಪುಗಳನ್ನು ಸ್ವೀಕರಿಸುವದು ಸಾಧ್ಯವಿಲ್ಲ. ಹೀಗಾಗಿ ಆರ್ಥಿಕ ಮಿತವ್ಯಯ ದೃಷ್ಟಿಯ ಸಲುವಾಗಿಯೇ ನಾವು ಫಿಲ್ಮಸ್ಟ್ರಿಪ" ಪ್ರೊಜೆಕ್ಟರದ ಒಡಲಾಗಿ ಮಾಯಾಲಾಂದರವನ್ನು ಉಪಯೋಗಿಸಬೇಕಾಗುವದು. ನಮ್ಮ ಹಳೆಯ ಮಾಯಾಲಾಂದರವನ್ನು ಬಿಟ್ಟು ಬಿಡದಿರಲಿಕ್ಕೆ ಮತ್ತೊಂದು ಕಾರಣ ಉಂಟು. ಅದೇನಂದರೆ, ಫಿಲ್ಮಸ್ಟ್ರಿಪ ಪ್ರೊಜೆಕ್ಟರಕ್ಕೆ ಪ್ರಕಾಶನೆಗಾಗಿ ವಿದ್ಯುತ್ ಪ್ರವಾಹವು ಬೇಕು. ಆದರೆ ಮಾಯಾಲಾಂದರಕ್ಕೆ ವಿದ್ಯುದ್ದೀಪ, ಅಸೆಟಲೀನ ಗ್ಯಾಸಜ್ವಾಲೆ ಅಥವಾ ಪೆಟ್ರೊಮ್ಯಾಕ್ಸ ಈ ನಮೂನೆಯ ಪ್ರಕಾಶನಗಳಲ್ಲಿ ಯಾವದಾದರೂ ಸಾಕು. ಹಳ್ಳಿಗಳಲ್ಲಿ ಪೆಟ್ರೊಮ್ಯಾಕ್ಸ ಅತ್ಯಂತ ಯೋಗ್ಯ (ತಕ್ಕುದಾದ) ಪ್ರಕಾಶನ ಸಾಧನವು.

ಇನ್ನು ಮೇಲೆ, ತುಸು ಅವಧಿಯಲ್ಲಿ ನಮಗೆ ಸಿನೇಮಾ ಉಪಕರಣಗಳು ಉಪಲಬ್ಧವಾಗುವವು ಮತ್ತು ಫಿಲ್ಮುಗಳ ಮುಖಾಂತರ ಶಿಕ್ಷಣವು ಎಲ್ಲರೂ ಬಯಸಬಹುದಾದಷ್ಟು ವಿಶಾಲವಾಗಿ ಹಬ್ಬುವದು. ಈ ವಿಷಯದಲ್ಲಿ, ಹಿಂದುಸ್ತಾನದಲ್ಲಿ ಉತ್ತಮ ವರ್ಗದ ಶೈಕ್ಷಣಿಕ ಫಿಲ್ಮವು ಇಲ್ಲಿಯ ವರೆಗೆ ನಿರ್ಮಿತವಾಗಿಲ್ಲವೆಂಬ ಸಂಗತಿಯನ್ನು ಎಲ್ಲರೂ ನೆನಪಿನಲ್ಲಿಡತಕ್ಕದ್ದು. ನಮ್ಮ ಶೈಕ್ಷಣಿಕ ಫಿಲ್ಮಗಳು ತಯಾರಾಗಲು ಇನ್ನೂ ತುಸು ಅವಧಿ ಬೇಕು. ಈ ಮಧ್ಯ, ನಾವು ಫಿಲ್ಮ ಮುಖಾಂತರ ಶಿಕ್ಷಣವನ್ನು ಪ್ರಾರಂಭ ಮಾಡುವದೇ ಇರುವದರಿಂದ, ಪರದೇಶಗಳಲ್ಲಿ ತಯಾರಿಸಿದ ಫಿಲ್ಮುಗಳನ್ನು ಅವಲಂಬಿಸಬೇಕು. ಭೂಗೋಲ, ವಿಜ್ಞಾನ, ಸೃಷ್ಟಿವಸ್ತು ಪರಿಚಯ ಮೊದಲಾದ ವಿಷಯುಗಳಿಗೆ ಸಂಬಂಧಿಸಿದ ಫಿಲ್ಮುಗಳು ಅವು ಯಾವದೇ ಭಾಷೆಯಲ್ಲಿಯಾಗಲಿ-ಒಂದೇ ಇರುವವು. ಫಿಲ್ಮುಗಳು ಪ್ರದರ್ಶಿಸಲ್ಪಡುವ ಸ್ಥಳಿಕ ಭಾಷೆಯ ವಿಷಯವನ್ನು ವಿವರಿಸಿ ಹೇಳಲು ಮಾತ್ರ ಬೇಕಾಗುವದು. ಪ್ರೊಜೆಕ್ಟರನ್ನು ಉಪಯೋಗಿಸುತ್ತಿರುವ ಶಿಕ್ಷಕನು ಇದನ್ನು ಮಾಡಬಲ್ಲನು. ಒಮ್ಮೆ ನಾವು ಪ್ರೊಜೆಕ್ಟರವನ್ನು ಪಡೆದುಕೊಂಡು ನಿಯಮದಿಂದ ಪ್ರದರ್ಶನಗಳನ್ನು ಏರ್ಪಡಿಸಿದ್ದಾದರೆ, ಶೈಕ್ಷಣಿಕ ಫಿಲ್ಮುಗಳನ್ನು ತಯಾರಿಸಲು ಖಾಸಗಿ ಫಿಲ್ಮ ಕಂಪನಿಗಳು ಮನಸ್ಸು ಮಾಡಲಿಕ್ಕಿಲ್ಲವೆಂದು ಯಾರು ತಾನೆ ಹೇಳಬಲ್ಲರು ? ಶೈಕ್ಷಣಿಕ ಫಿಲ್ಮುಗಳಿಗೆ ಈಗ ಸಾಕಷ್ಟು ಬೇಡಿಕೆ ಇಲ್ಲವೆಂಬ ಸಂಗತಿ ಅವುಗಳಿಗೆ ಗೊತ್ತಿರುವದರಿಂದಲೆ, ಅವುಗಳು ಈಗ ಹಾಗೆ ಮಾಡುತ್ತಿರುವದಿಲ್ಲ. ಬಹುಶಃ ಕೆಲವು ತಿಂಗಳ ಅವಧಿಯಲ್ಲಿಯೇ, ಶಿಕ್ಷಕರು ತಾವಾಗಿಯೇ ತಮಗೆ ಮನಸ್ಸಿಗೆ ಬಂದ ವಿಷಯುಗಳಿಗೆ ಸಂಬಂಧಪಟ್ಟ ಫಿಲ್ಮುಗಳನ್ನು ತಯಾರಿಸುವದರಲ್ಲಿ ಅಭಿರುಚಿಯನ್ನು ತೋರಿಸಬಹುದು.

ಶಾಲೆಗಳಲ್ಲಿ ಉಪಯೋಗಿಸಬಹುದಾದ ಪ್ರೊಜೆಕ್ಟರಗಳ ಯಾಂತ್ರಿಕ ಜ್ಞಾನವಿಲ್ಲದ ಜನರಿಗೆ ನಾನು ತಿಳಿಸುವದೇನಂದರೆ—ಆಧುನಿಕ ಶೈಕ್ಷಣಿಕ ಫಿಲ್ಮುಗಳು ಸಿನೇಮಾ ಥೇಟರ (ಚಲಚ್ಚಿತ್ರ ಮಂದಿರ) ಗಳಲ್ಲಿ ಪ್ರಯೋಗಕ್ಕಾಗಿ ಉಪಯೋಗಿಸಲ್ಪಡುವ ಫಿಲ್ಮುಗಳಿಗಿಂತ ಗಾತ್ರದಲ್ಲಿ ಹೆಚ್ಚು

ಅಖಿಲರಿಗೂ ದೃಷ್ಟಿಮೂಲಕ ಶಿಕ್ಷಣ

ಲೇಖಕರು : ಶ್ರೀ. ಜಿ. ಕೆ. ಅಠಲೆ
[ಇನಸ್ಪೆಕ್ಟರ್ ಫಾರ್ ವ್ಹಿಜುಅಲ್ ಇನ್‌ಸ್ಟ್ರಕ್ಶನ್, ಮುಂಬೈ ಪ್ರಾಂತ, ಮುಂಬಯಿ.]

ದೃಷ್ಟಿ ಮೂಲಕ ಶಿಕ್ಷಣವು ನಮ್ಮ ಪ್ರಾಂತದಲ್ಲಿ ಹೊಸ ವಿಷಯವಲ್ಲ. ಅದು ೧೯೧೮ನೆಯ ಇಸವಿಯಲ್ಲಿ ಮಾಯಾಲಾಂದರವು ಶೈಕ್ಷಣಿಕ ಉಪಕರಣವೆಂದು ಪ್ರಾರಂಭಿಸಲ್ಪಟ್ಟಾಗ್ಗೆ, ಬಳಕೆಯಲ್ಲಿ ಬಂತು. ಮತ್ತು ದೃಷ್ಟಿಮೂಲಕ ಶಿಕ್ಷಣದ ಕಚೇರಿಯು (Visual Education Office) ಅಸ್ತಿತ್ವದಲ್ಲಿ ಬಂತು. ಮುಂಬಯಿ ಸರಕಾರವು ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚೆಗೆ ೧೬ ಮಿಮಿ. ಗಳ ಫಿಲ್ಮುಗಳನ್ನು ಪ್ರಾರಂಭಿಸಿರುವದು ನಮಲ್ಲಿಯ ಎಷ್ಟೋ ಜನರಿಗೆ ತುಂಬಾ ಸಮಾಧಾನಕರವಾದ ಸಂಗತಿ. ಇಲ್ಲಿಯ ವರೆಗೆ, ಚಲತ್ ಚಿತ್ರ (ಮಂದಿರ) ಮತ್ತು ಶಾಲೆಗಳು ಪರಸ್ಪರ ವೈರಭಾವದಿಂದ ಇದ್ದವು, ಮತ್ತು ಈಗಲೂ ಸಹ, ಹಳೆಯ ವಿಚಾರ ಸರಣಿಯ ಎಷ್ಟೋ ಶಿಕ್ಷಕರು ಶಿಕ್ಷಣದಲ್ಲಿಯ ಈ ನೂತನೋಪಕರಣದ ಸುಪರಿಣಾಮಗಳ ಬಗ್ಗೆ ಸಾಶಂಕರಿರುವರು. ಶಾಲೆಯ ತರಗತಿಯಲ್ಲಿ, ಚಲಚ್ಚಿತ್ರದ ಫಿಲ್ಮಿನ ಶೈಕ್ಷಣಿಕ ಬೆಲೆಯನ್ನು ಕುರಿತು ಅವರು ಬಹಿರಂಗವಾಗಿ ವಾದಿಸುತ್ತಾರೆ. ಯಾಕಂದರೆ, ಅವರ ಅಭಿಪ್ರಾಯದಂತೆ ಈ ಚಲಚ್ಚಿತ್ರದ ಹುಚ್ಚು ಬೇಕಾದಷ್ಟು ಶೈಕ್ಷಣಿಕ ಬೆಲೆಯುಳ್ಳದ್ದೆಂದು ಪ್ರತಿಪಾದಿಸಲ್ಪಡುತ್ತಿದ್ದರೂ ಸಹ, ಅದು ಶಾಲೆಯಲ್ಲಿ ಶಿಕ್ಷಕನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಬಹುದೆಂದು ಅವರ ಮತ. ಮಾತನಾಡುವ ಶೈಕ್ಷಣಿಕ ಚಲಚ್ಚಿತ್ರವು ಹಳೆಯ ಪದ್ಧತಿಯ ಮಾಯಾಲಾಂದರ ಅಥವಾ ಮೌನ ಚಲಚ್ಚಿತ್ರಗಳಿಗಿಂತ ಶಿಕ್ಷಕನ ಅಸ್ತಿತ್ವಕ್ಕೆ ಹೆಚ್ಚು ಭಂಗವನ್ನುಂಟುಮಾಡುವಂಥ ಗಂಡಾಂತರ ಸ್ವರೂಪದ್ದೆಂದು ಇತರರ ಮತ. ಮಾತನಾಡುವ ಚಲಚ್ಚಿತ್ರವು ತರಗತಿಯಲ್ಲಿ ಪ್ರವೇಶ ದೊರೆಕಿಸಿದಂದಿನಿಂದ, ದೃಷ್ಟಿಮೂಲಕ ಶಿಕ್ಷಣದ ಇತರ ಶೈಕ್ಷಣಿಕ ಸಾಧನಗಳು ಬಳಕೆಯಿಂದ ಹೊರ ಹೋಗಿರುವವೆಂದು ಅಭಿಪ್ರಾಯ ಪಡುವ ಕೆಲವು ಶಿಕ್ಷಕರೂ ಕಂಡು ಬರುವದುಂಟು. ದೃಷ್ಟಿಮೂಲಕ ಶಿಕ್ಷಣದ ಬೇರೆ ಬೇರೆ ಉಪಕರಣಗಳಿಂದ ಬೇರೆ ಬೇರೆ ಪ್ರಸಂಗಗಳಲ್ಲಿ ಹೇಗೆ ಪರಮಾವಧಿ ಉಪಯುಕ್ತತೆಯನ್ನು (ಲಾಭವನ್ನು) ಪಡೆಯಬಹುದೆಂಬುದು, ಕಲಿಸಲಿಕ್ಕೆಂದು ಆರಿಸಿಕೊಳ್ಳಲ್ಪಟ್ಟ ಯಾವದೊಂದು ವಿಶಿಷ್ಟ ವಿಷಯಕ್ಕೆ ಅವುಗಳಲ್ಲಿಯ ಪ್ರತಿಯೊಂದರ ವಿಶಿಷ್ಟ ಉಪಯುಕ್ತತೆ ಯಾವದೆಂಬುದನ್ನು ಮತ್ತು ಚಲಚ್ಚಿತ್ರದ ಯಂತ್ರದಿಂದೊಡಗೂಡಿ ಸುಸಜ್ಜಿತನಾದ ಶಿಕ್ಷಕನು ತರಗತಿಯಲ್ಲಿ ತನ್ನ ಅಗತ್ಯತೆಯನ್ನು ಹೇಗೆ ನಿರ್ಮಿಸಿಕೊಳ್ಳಬಲ್ಲನೆಂಬುದೂ ಕೆಲವೇ ವಿಚಾರಯುಕ್ತ ಶಿಕ್ಷಕರಿಗೆ ಗೊತ್ತುಂಟು.

ಆಧುನಿಕ ಶಿಕ್ಷಣ ರೂಢಿಯಲ್ಲಿ ತರಗತಿಯಲ್ಲಿಯ ಶಿಕ್ಷಣವು ದ್ವಿಮುಖಿಯಾಗಿದೆ. ಜ್ಞಾನವನ್ನು ಪಡೆಯುವವನ ವಿಚಾರ ಶಕ್ತಿಯನ್ನು ಪ್ರಚೋದನಗೊಳಿಸುವಂತೆ ವಿಷಯ ಜ್ಞಾನವನ್ನೀಯುವದು ಅದರ ಒಂದು ವಿಭಾಗ. ಪ್ರಾಪ್ತ ಮಾಡಿಕೊಂಡ ಜ್ಞಾನವನ್ನು ಉಳಿಸಿಕೊಳ್ಳಲಿಕ್ಕೆ ಉತ್ತೇಜನ ಕೊಡುವದು ಮತ್ತೊಂದು ವಿಭಾಗ. ಸ್ವಾಭಾವಿಕವಾಗಿ ಇಡೀ ಜ್ಞಾನಾರ್ಜನೆಯ ಕ್ರಮದಲ್ಲಿ, ಇಂದ್ರಿಯಗಳನ್ನು ಪರಮಾವಧಿ ಉಪಯೋಗಿಸಿಕೊಳ್ಳುವದು ಮಹತ್ವದ ಅಂಗವಾಗಿರತಕ್ಕದ್ದು. ನೇತ್ರೇಂದ್ರಿಯದಿಂದ ಇದು ಶ್ರೇಷ್ಠವಾಗಿ ಸಾಗಬಲ್ಲದು. ಬಹು ಪುರಾತನ ಕಾಲದಿಂದಲೂ ರೂಢಿಯಲ್ಲಿರುವ "ನೋಡುವದೆಂದರೆ ನಂಬುವ"ದೆಂಬ ಗಾದೆಯ ಮಾತು ಈ ವಿಷಯದಲ್ಲಿ ಅತ್ಯಂತ ನಿಜವಾದುದು. ಮಕ್ಕಳು ಯಾವದನ್ನು ನೋಡುವರೊ ಅದನ್ನು ನಂಬಲು ಅವರಿಗೆ ಸುಲಭವಾಗುವದು; ಅದರಂತೆಯೆ ಅವರು ಯಾವದನ್ನು ಪ್ರತ್ಯಕ್ಷ ನೋಡದೆ ಶಿಕ್ಷಕರ ಬಾಯಿಯಿಂದ ಮಾತ್ರ ಕೇಳುತ್ತಾರೊ ಅಂಥದನ್ನು ಅವರು ಸುಲಭವಾಗಿ ಮರೆಯುವರು. ಅದನ್ನು ನಂಬಲು ಕೂಡ ಅವರಿಗೆ ಕಠಿಣವಾಗಬಹುದು. ಮಕ್ಕಳಿಗೆ ಚಿತ್ರಗಳಿಲ್ಲದ ವ್ಯಾಕರಣ ಅಥವಾ ಗಣಿತ ವಿಷಯಗಳ ಪಠ್ಯ ಪುಸ್ತಕಗಳಿಗಿಂತ ಉತ್ತಮ ಚಿತ್ರಗಳಿಂದ ಕೂಡಿದ

ಪಠ್ಯಪುಸ್ತಕಗಳು ಹೆಚ್ಚು ರುಚಿಸುತ್ತವೆಂಬ ಸಂಗತಿಯಿಂದಲೆ ನೇತ್ರೇಂದ್ರಿಯಕ್ಕೆ ಸಹಾಯಕವಾದ ಉಪಕರಣವು ಅವರಿಗೆ ಎಷ್ಟು ಚಿತ್ತಾಕರ್ಷಕವಾದುದೆಂಬುದನ್ನು ಸಿದ್ಧಗೊಳಿಸುತ್ತದೆ. ಆದ್ದರಿಂದ, ಶಿಕ್ಷಣದಲ್ಲಿ ಮೊಟ್ಟಮೊದಲಾಗಿ ಉಪಯೋಗಿಸಲ್ಪಡಲು ಪ್ರಾರಂಭವಾದ ಪ್ರತ್ಯಕ್ಷೋಪಕರಣಗಳೆಂದರೆ, ಅಚ್ಚು ಹಾಕಲ್ಪಟ್ಟ ಚಿತ್ರಗಳು. ನಂತರ, ಮಾಯಾಲಾಂದರದಿಂದ ಚಿತ್ರಗಳನ್ನು ಪಡದೆಯ ಮೇಲೆ ತೋರಿಸುವ ನವಕಲ್ಪನೆಯ ಆಧುನಿಕ ಚಲಚ್ಚಿತ್ರ ಪ್ರದರ್ಶಕ ಪದ್ಧತಿಗಳ ದಿಶೆಯಲ್ಲಿ ದೊಡ್ಡ ಪ್ರಗತಿಯಾಯಿತು. ಆ ತರದ ಚಿತ್ರಗಳು ಚಲಚ್ಚಿತ್ರಗಳಷ್ಟು ನಿಜಾಂಶಯುಕ್ತವಲ್ಲವಾದರೂ ಸಹ ಅವುಗಳಿಂದ ಒಂದು ವಿಶಿಷ್ಟ ತರದ ಲಾಭಗಳುಂಟು.

ಆದರೆ ಶಿಲ್ಪಕಲೆಯಂಥ ಕೆಲವೊಂದು ವಿಷಯಗಳ ವಿವರಗಳನ್ನು ತಿಳಿಸಿ ಹೇಳುವ ಪ್ರಶ್ನೆಯು ಉದ್ಭವಿಸಿದಾಗ ಮಾಯಾಲಾಂದರದಿಂದ ಪಡದೆಯ ಮೇಲೆ ಚಿತ್ರಗಳನ್ನು ಪ್ರದರ್ಶಿಸುವದೇ ಎಲ್ಲಕ್ಕೂ ಯೋಗ್ಯವಾದ ಯೋಜನೆ. ಇತ್ತಲಾಗಿ "ಫಿಲ್ಮಸ್ಟ್ರಿಪ ಪ್ರೊಜೆಕ್ಟರ" ಪದ್ಧತಿಯು ನಮ್ಮ ನೆರವಿಗೆ ಬಂದಿದೆ. ಈ ಉಪಕರಣವು ಕೈಯಲ್ಲಿ ಹಿಡಿದು ಒಯ್ಯಲು ಸುಲಭವಾದುದು ಮತ್ತು ನೋಡಲು ಅಂದವಾದುದು. ಆದ್ದರಿಂದ ಇದು ತನ್ನ ಉಪಯುಕ್ತತೆಯ ಅವಧಿಯನ್ನು ಮೀರಿ ಬದುಕಿರುವಂತೆ ತೋರುತ್ತಿರುವ ಮಾಯಾಲಾಂದರದ ಸ್ಥಾನವನ್ನು ಆಕ್ರಮಿಸುವದೆಂಬುದರ ಚಿಹ್ನೆಗಳು ಸಂಪೂರ್ಣವಾಗಿ ಕಂಡು ಬರುತ್ತಿವೆ. ಆದರೂ ಸಹ, ಈ ಬದಲಾವಣೆಯು ಸಾವಕಾಶವಾಗಿಯೂ ಮತ್ತು ಕ್ರಮೇಣವಾಗಿಯೂ ಬರುವಂಥದು. ಯಾಕಂದರೆ, ವ್ಯಾವಹಾರಿಕ ಕಾರಣಗಳ ಸಲುವಾಗಿ ನಾವು ನಮ್ಮಲ್ಲಿ ಸಂಗ್ರಹವಾಗಿರುವ ಮಾಯಾಲಾಂದರಗಳನ್ನೆಲ್ಲ ಒಮ್ಮೆ ಕಿತ್ತೊಗೆದು ಫಿಲ್ಮಸ್ಟ್ರಿಪ್ಪುಗಳನ್ನು ಸ್ವೀಕರಿಸುವದು ಸಾಧ್ಯವಿಲ್ಲ. ಹೀಗಾಗಿ ಆರ್ಥಿಕ ಮಿತವ್ಯಯ ದೃಷ್ಟಿಯ ಸಲುವಾಗಿಯೇ ನಾವು ಫಿಲ್ಮಸ್ಟ್ರಿಪ" ಪ್ರೊಜೆಕ್ಟರದ ಒಡಲಾಗಿ ಮಾಯಾಲಾಂದರವನ್ನು ಉಪಯೋಗಿಸಬೇಕಾಗುವದು. ನಮ್ಮ ಹಳೆಯ ಮಾಯಾಲಾಂದರವನ್ನು ಬಿಟ್ಟು ಬಿಡದಿರಲಿಕ್ಕೆ ಮತ್ತೊಂದು ಕಾರಣ ಉಂಟು. ಅದೇನಂದರೆ, ಫಿಲ್ಮಸ್ಟ್ರಿಪ ಪ್ರೊಜೆಕ್ಟರಕ್ಕೆ ಪ್ರಕಾಶನೆಗಾಗಿ ವಿದ್ಯುತ್ ಪ್ರವಾಹವು ಬೇಕು. ಆದರೆ ಮಾಯಾಲಾಂದರಕ್ಕೆ ವಿದ್ಯುದ್ದೀಪ, ಅಸೆಟಲೀನ ಗ್ಯಾಸಜ್ವಾಲೆ ಅಥವಾ ಪೆಟ್ರೊಮ್ಯಾಕ್ಸ ಈ ನಮೂನೆಯ ಪ್ರಕಾಶನಗಳಲ್ಲಿ ಯಾವದಾದರೂ ಸಾಕು. ಹಳ್ಳಿಗಳಲ್ಲಿ ಪೆಟ್ರೊಮ್ಯಾಕ್ಸ ಅತ್ಯಂತ ಯೋಗ್ಯ (ತಕ್ಕುವಾದ) ಪ್ರಕಾಶನ ಸಾಧನವು.

ಇನ್ನು ಮೇಲೆ, ತುಸು ಅವಧಿಯಲ್ಲಿ ನಮಗೆ ಸಿನೇಮಾ ಉಪಕರಣಗಳು ಉಪಲಬ್ಧವಾಗುವವು ಮತ್ತು ಫಿಲ್ಮಗಳ ಮುಖಾಂತರ ಶಿಕ್ಷಣವು ಎಲ್ಲರೂ ಬಯಸಬಹುದಾದಷ್ಟು ವಿಶಾಲವಾಗಿ ಹಬ್ಬುವದು. ಈ ವಿಷಯದಲ್ಲಿ, ಹಿಂದುಸ್ತಾನದಲ್ಲಿ ಉತ್ತಮ ವರ್ಗದ ಶೈಕ್ಷಣಿಕ ಫಿಲ್ಮವು ಇಲ್ಲಿಯ ವರೆಗೆ ನಿರ್ಮಿತವಾಗಿಲ್ಲವೆಂಬ ಸಂಗತಿಯನ್ನು ಎಲ್ಲರೂ ನೆನಪಿನಲ್ಲಿಡತಕ್ಕದ್ದು. ನಮ್ಮ ಶೈಕ್ಷಣಿಕ ಫಿಲ್ಮಗಳು ತಯಾರಾಗಲು ಇನ್ನೂ ತುಸು ಅವಧಿ ಬೇಕು. ಈ ಮಧ್ಯ, ನಾವು ಫಿಲ್ಮ ಮುಖಾಂತರ ಶಿಕ್ಷಣವನ್ನು ಪ್ರಾರಂಭ ಮಾಡುವದೇ ಇರುವದರಿಂದ, ಪರದೇಶಗಳಲ್ಲಿ ತಯಾರಿಸಿದ ಫಿಲ್ಮಗಳನ್ನು ಅವಲಂಬಿಸಬೇಕು. ಭೂಗೋಲ, ವಿಜ್ಞಾನ, ಸೃಷ್ಟಿವಸ್ತು ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಫಿಲ್ಮಗಳು ಅವು ಯಾವದೇ ಭಾಷೆಯಲ್ಲಿಯಾಗಲಿ–ಒಂದೇ ಇರುವವು. ಫಿಲ್ಮಗಳು ಪ್ರದರ್ಶಿಸಲ್ಪಡುವ ಸ್ಥಳಿಕ ಭಾಷೆಯ ವಿಷಯವನ್ನು ವಿವರಿಸಿ ಹೇಳಲು ಮಾತ್ರ ಬೇಕಾಗುವದು. ಪ್ರೊಜೆಕ್ಟರರನ್ನು ಉಪಯೋಗಿಸುತ್ತಿರುವ ಶಿಕ್ಷಕನು ಇದನ್ನು ಮಾಡಬಲ್ಲನು. ಒಮ್ಮೆ ನಾವು ಪ್ರೊಜೆಕ್ಟರವನ್ನು ಪಡೆದುಕೊಂಡು ನಿಯಮದಿಂದ ಪ್ರದರ್ಶನಗಳನ್ನು ಏರ್ಪಡಿಸಿದ್ದಾದರೆ, ಶೈಕ್ಷಣಿಕ ಫಿಲ್ಮಗಳನ್ನು ತಯಾರಿಸಲು ಖಾಸಗಿ ಫಿಲ್ಮ ಕಂಪನಿಗಳು ಮನಸ್ಸು ಮಾಡಲಿಕ್ಕಿಲ್ಲವೆಂದು ಯಾರು ತಾನೆ ಹೇಳಬಲ್ಲರು ? ಶೈಕ್ಷಣಿಕ ಫಿಲ್ಮಗಳಿಗೆ ಈಗ ಸಾಕಷ್ಟು ಬೇಡಿಕೆ ಇಲ್ಲವೆಂಬ ಸಂಗತಿ ಅವುಗಳಿಗೆ ಗೊತ್ತಿರುವದರಿಂದಲೆ, ಅವುಗಳು ಈಗ ಹಾಗೆ ಮಾಡುತ್ತಿರುವದಿಲ್ಲ. ಬಹುಶಃ ಕೆಲವು ತಿಂಗಳ ಅವಧಿಯಲ್ಲಿಯೇ, ಶಿಕ್ಷಕರು ತಾವಾಗಿಯೇ ತಮಗೆ ಮನಸ್ಸಿಗೆ ಬಂದ ವಿಷಯಗಳಿಗೆ ಸಂಬಂಧಪಟ್ಟ ಫಿಲ್ಮಗಳನ್ನು ತಯಾರಿಸುವದರಲ್ಲಿ ಅಭಿರುಚಿಯನ್ನು ತೋರಿಸಬಹುದು.

ಶಾಲೆಗಳಲ್ಲಿ ಉಪಯೋಗಿಸಬಹುದಾದ ಪ್ರೊಜೆಕ್ಟರಗಳ ಯಾಂತ್ರಿಕ ಜ್ಞಾನವಿಲ್ಲದ ಜನರಿಗೆ ನಾನು ತಿಳಿಸುವದೇನಂದರೆ—ಆಧುನಿಕ ಶೈಕ್ಷಣಿಕ ಫಿಲ್ಮಗಳು ಸಿನೇಮಾ ಥೇಟರ (ಚಲಚ್ಚಿತ್ರ ಮಂದಿರ) ಗಳಲ್ಲಿ ಪ್ರಯೋಗಕ್ಕಾಗಿ ಉಪಯೋಗಿಸಲ್ಪಡುವ ಫಿಲ್ಮಗಳಿಗಿಂತ ಗಾತ್ರದಲ್ಲಿ ಹೆಚ್ಚು

ಚಿಕ್ಕವಿರುವವು. ಶೈಕ್ಷಣಿಕ ಫಿಲ್ಮದ ಅಗಲಳತೆಯು ೧೬ಮಿಮಿ. ಅಥವಾ ಸುಮಾರು ೧ ಇಂಚು ಇರುವದು. ಆದರೆ ಸಾಮಾನ್ಯವಾದ ಥೇಟರ ಫಿಲ್ಮ ೩೫ ಮಿಮಿ. ಗಳ ಅಗಲಳತೆಯು. ತತ್ಪರಿಣಾಮವಾಗಿ, ೧೬ ಮಿಮಿ. ಉದ್ದಳತೆಯ ಪಟ್ಟಿಯ ಮೇಲೆ, ೩೫ ಮಿಮಿ. ಉದ್ದಳತೆಯ ಪಟ್ಟಿಯಂಗಿಂತ ಹೆಚ್ಚು ಚಿತ್ರಗಳು ಕೂಡಬಲ್ಲವು. ಆದ್ದರಿಂದಲೆ, ೧೦ ನಿಮಿಷಗಳ ಅವಧಿಯವರೆಗೆ ಪ್ರದರ್ಶನ ಮಾಡಲಿಕ್ಕ ೧೬ ಮಿಮಿ. ಗಳ ೪೦೦ ಫುಟು ಮಾತ್ರ ಉದ್ದಳತೆಯ ಶೈಕ್ಷಣಿಕ ಫಿಲ್ಮಗಳು ಸಾಲಬಹುದಾದರೆ, ಇದರ ವಿರುದ್ಧವಾಗಿ ೩೫ ಮಿಮಿ. ಫಿಲ್ಮ ಉಪಯೋಗಿಸುವದಾದರೆ, ೧೦೦೦ ಫುಟು ಉದ್ದಳತೆಯ ಫಿಲ್ಮ ಹೆಚ್ಚು ಬೇಕಾಗುವದು. ಈ ಮೇಲ್ಕಾಣಿಸಿದ ಕಾರಣಗಳ ಸಲುವಾಗಿ ಶೈಕ್ಷಣಿಕ ಉದ್ದೇಶ ಸಾಧನೆಗೆ ೧೬ ಮಿಮಿ. ಫಿಲ್ಮ ಪ್ರೊಜೆಕ್ಟರದ ಉಪಕರಣಗಳನ್ನು ಸ್ವೀಕರಿಸಲಾಗಿದೆ. ಅದು ಸ್ಥಳಾಂತರಿಸಲಿಕ್ಕೆ ಅತ್ಯಂತ ಸುಲಭವಾದದ್ದೂ, ಅಡಕವಾದದ್ದೂ ಇರುವದು. ಅದಕ್ಕೂ ಸಣ್ಣ ಫಿಲ್ಮ ಪ್ರೊಜೆಕ್ಟರುಗಳುಂಟು. ಆದರೆ ಮಾತನಾಡುವ ಫಿಲ್ಮಗಳಲ್ಲಿ ಉಪಯೋಗಿಸಲು ಅವುಗಳಲ್ಲಿ ಸೌಕರ್ಯವಿಲ್ಲ. ಮಾತನಾಡುವ ಫಿಲ್ಮ (ವಾಕ್ಪಟ)ಗಳಿಗೆ, ಧ್ವನಿ ಸಂಗ್ರಹದ ಸಲುವಾಗಿ ಫಿಲ್ಮದ ಅಗಲಳತೆಯ ಕೆಲವೊಂದು ಭಾಗವು ಬೇಕಾಗುವದು. ಇದು ೧೬ ಮಿಮಿ. ಫಿಲ್ಮಿನ ಮೇಲೆ ಸಹ ತುಸು ಪ್ರಯಾಸದಿಂದ ಸಾಧ್ಯವಾಗುವದು. ಫಿಲ್ಮಿನ ಮೇಲೆ ಧ್ವನಿಯು ಹೇಗೆ ಸಂಗ್ರಹಿತವಾಗುವದೆಂಬುದನ್ನು ತಿಳಿದುಕೊಳ್ಳುವ ಕುತೂಹಲವು ಸಹಜ. ಆದರೆ ಸ್ಥಳಾಭಾವದ ಮೂಲಕ ಈ ಚಿಕ್ಕ ಲೇಖನದಲ್ಲಿ ನಾನು ಆ ವಿಷಯವನ್ನು ಕುರಿತು ಹೆಚ್ಚು ಪ್ರಸ್ತಾಪಿಸಲಾರೆ. ಇನ್ನು ಮೇಲೆ ನಮ್ಮ ಶಾಲೆಗಳಲ್ಲಿಯ ಶಿಕ್ಷಕರು ಶೈಕ್ಷಣಿಕ ಫಿಲ್ಮ ಪ್ರದರ್ಶನಗಳ ಲಾಭವಡೆಯುವವರಿರುವ ಕಾರಣ, ಚಲಚ್ಚಿತ್ರ ಮಂದಿರ ಮತ್ತು ಶಾಲೆಗಳಲ್ಲಿಯ ಪಟ (Projector) ಗಳೊಳಗಿನ ಅಂತರ (ವ್ಯತ್ಯಾಸ)ವನ್ನು ತಿಳಿದುಕೊಳ್ಳುವದು ಪ್ರಯೋಜನಕರ. ಆದ್ದರಿಂದ ಮೇಲ್ಕಾಣಿಸಿದ ವಿಷಯಗಳು ಅವರಿಗೆ ತಿಳಿದಿರಬೇಕಾದುದು ಅವಶ್ಯವೆಂದು ಎಣಿಸಲಾಗಿದೆ. ವರ್ಗ (ತರಗತಿ) ದಲ್ಲಿ ಶೈಕ್ಷಣಿಕ ಫಿಲ್ಮವನ್ನು ಕೇವಲ ದೃಷ್ಟಿಗೆ ಹಾಕಿ ಬಿಡುವದರಿಂದ, ಯಾವ ಉಪಯುಕ್ತ ಉದ್ದೇಶವೂ ಫಲಿಸುವದಿಲ್ಲ. ಹಾಗೆ ಮಾಡುವದು ಕೇವಲ ಮನರಂಜನೆಯ ಕಾರ್ಯಕ್ರಮವಾಗುವದು. ಪ್ರದರ್ಶನಕ್ಕೆ ಮೊದಲು ಯೋಗ್ಯವಾದ ಪೂರ್ವ ಪೀಠಿಕೆ ಇರಬೇಕು. (ಅದರ ಪೂರ್ವ ಪರಿಚಯವನ್ನು ಮಾಡಿ ಕೊಡಬೇಕು.) ಮತ್ತು ಅದು ಮುಗಿಯುತ್ತಲೆ ಅದರ ವಿಷಯದ ಬಗ್ಗೆ ಚರ್ಚೆ ನಡೆಯಬೇಕು. ಫಿಲ್ಮವನ್ನು ನೋಡಿದ ವಿದ್ಯಾರ್ಥಿಗಳು ಆ ವಿಷಯದ ಬಗ್ಗೆ ಹೆಚ್ಚು ಅಭ್ಯಾಸ ಮಾಡಲು ಸ್ಫೂರ್ತಿಗೊಳ್ಳಬೇಕು. ಹೀಗಾದರೇನೆ ಅವರ ಮನಸ್ಸಿನ ಮೇಲೆ ಒಂದು ವಿಧದ ನಿರಂತರ (ಶಾಶ್ವತ) ವಾದ ಪರಿಣಾಮವುಂಟಾಗುವದು.

ಶಾಲೆಯಲ್ಲಿ ಪೂರ್ಣಾವಧಿಯ ವರೆಗೆ ಉಪಯೋಗಿಸಲೋಸುಗ ಪ್ರೊಜೆಕ್ಟರವು ದೊರೆತರೂ ಸಹ, ಮೇಲೆ ಪ್ರಾರಂಭದಲ್ಲಿ ಹೇಳಿದಂತೆ ಶಿಕ್ಷಕರು ಇತರ ಪ್ರತ್ಯಕ್ಷೋಪಕರಣಗಳ ಬಳಕೆಯನ್ನು ಅಲಕ್ಷಿಸಬಾರದು. ಪಟ, ನಕಾಶ, ಚಿತ್ರ ಮತ್ತು ಕರಿಹಲಿಗೆ ಇವೆಲ್ಲವೂ ಶಿಕ್ಷಣೋಪಕರಣಗಳ ದೃಷ್ಟಿಯಿಂದ ಬೆಲೆಯುಳ್ಳ ಉಪಕರಣಗಳೆಂಬುದು ಪ್ರತಿಯೊಬ್ಬ ಒಳ್ಳೆಯ ಶಿಕ್ಷಕನಿಗೆ ಗೊತ್ತುಂಟು. ಇಂಥ ಉಪಕರಣಗಳಿಂದ ಸುಲಭವಾಗಿ ತಿಳಿಸಬಹುದಾದ ವಿಷಯದ ವಿವರಣೆಗೆ ಸಿನೇಮಾ ವಡದೆಯ ದಾರಿ ಕಾಯುತ್ತ ಕೂಡುವದು ಅನವಶ್ಯಕ. ಇದೇ ಪ್ರಕಾರ, ಮಾಯಾಲಾಂದರದ ಸ್ಲಾಯಿಡುಗಳು, ಎಪಿಡಿಯೊಸ್ಕೋಪದ ಚಿತ್ರಗಳು ಪ್ರೊಜೆಕ್ಟರಗಳ ಸಹಾಯದಿಂದ ಹೆಚ್ಚು ಪರಿಣಾಮಕಾರಿಯಾಗಿ ವಿವರಿಸಬಹುದಾದ ಇತರ ಕೆಲವು ವಿಷಯಗಳುಂಟು. ಯಾವದೊಂದು ವಿಶಿಷ್ಟ ಪ್ರಸಂಗದಲ್ಲಿ ಯಾವ ವಿಧಾನವು ಯೋಗ್ಯವಾಗುವದೆಂಬುದನ್ನು ಶಿಕ್ಷಕನು ತಾನೇ ಸ್ವತಃ ಅತ್ಯಂತ ಸಮಾಧಾನಕರವಾಗಿ ನಿರ್ಣಯಿಸಬಲ್ಲನು. ತೊಂದರೆಗಳುಂಟಾದಾಗ, "ವ್ಹಿಜುಅಲ್ ಎಜ್ಯುಕೇಶನ್ ಆಫೀಸದ" ನಲಹೆಯನ್ನು ಪಡೆಯುವದೇ ಶ್ರೇಷ್ಠಮಾರ್ಗ. ವ್ಹಿ. ಎ. ಆಫೀಸರರು ಅಗತ್ಯವಾದ ಮಾಹಿತಿಯನ್ನು ಕೊಡಲು ಯಾವಾಗಲೂ ಆನಂದಿತರಿರುವರು.

ಅ. ನಂ	ಪುಸ್ತಕಗಳ ಹೆಸರು	ಲೇಖಕರು ಮತ್ತು ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರ ಆಗಿವೆ
೧.	ಸಾಹಿತ್ಯವಿಹಾರ	ಲೇಖಕರು: ಪ್ರೊ. ಜಿ. ಜಿ. ಕುಲಕರ್ಣಿ, ಎಂ. ಎ., ಬಿ. ಟಿ., ಪಿ. ಡಿ. ಜೆ. ಹೈಸ್ಕೂಲ, ವಿಜಾಪುರ	೧—೪—೦	ಹೈಸ್ಕೂಲುಗಳಿಗೆ ಪಠ್ಯಪುಸ್ತಕ (ಆದರೆ ಮುದ್ರಣ ದೋಷ, ವಿರಾಮ ಚಿಹ್ನೆಗಳ ಬಿಡುವಿಕೆ ಪುಟಗಳ ಅಸ್ತವ್ಯಸ್ತತೆ ಸರಿಪಡಿಸಬೇಕು. ಶಿಲಾಲೇಖಗಳ ಉಲ್ಲೇಖ (ಇವು ಟಿಪ್ಪಣಿಯಾಗಿ ಕೆಳಗೆ ಬರಬೇಕು), ೬೧, ೬೨ ನೆಯ ಪುಟಗಳಲ್ಲಿಯ ಅಶುದ್ಧ ನಿರೂಪಣೆಯನ್ನು ತೆಗೆದು ಹಾಕಬೇಕು, ಬೆಲೆಯನ್ನು ೧-೮-೦ ಗೆ ಇಳಿಸಬೇಕು ಎಂಬ ಕರಾರಿನಿಂದ)
೨.	ಪ್ರಾಥಮಿಕ ಭೂಮಿತಿ (೬ನೆಯ ಮತ್ತು ೭ನೆಯ ಇಯತ್ತೆಗಳಿಗಾಗಿ)	ಲೇಖಕರು: ಶ್ರೀ. ಆರ್. ಆರ್. ಶೇಲಾರ, ಪ್ರಕಾಶಕರು: ಚೇರಮನ್ ಕರ್ನಾಟಕ ಪಬ್ಲಿಸಿಟಿ ಕಂಪನಿ, ಲಿಮಿಟೆಡ್ ಹುಬ್ಬಳ್ಳಿ.	೧—೬—೦ ೧—೮—೦	ಪಠ್ಯಪುಸ್ತಕಗಳ ಪ್ರಾ. ಶಾ. ೬ ಮತ್ತು ೭ನೆಯ ಇಯತ್ತೆಗಳಿಗೆ.
೩.	ಯುರೋಪದ ಭೂಗೋಲ	ಲೇಖಕರು: ರಾ. ಸಾ. ವ್ಹಿ. ಎಸ್. ಮಗದಾಳ ಪ್ರಕಾಶಕರು: ಸುಬೋಧ ಪ್ರಕಟನಾಲಯ, ಬೆಂಗಳೂರು.	೧—೬—೦	ಪಠ್ಯಪುಸ್ತಕ— ಪ್ರಾ. ಶಾ. ೬ನೆಯ ಇಯತ್ತೆಗೆ
೪.	ಏಳನೆ ಇಯತ್ತೆಯ ಭೂಗೋಲ	ಸದರ	೧—೮—೦	ಪಠ್ಯಪುಸ್ತಕ— ಪ್ರಾ. ಶಾ. ೭ನೆಯ ಇಯತ್ತೆಗೆ.
೫.	ಮಕ್ಕಳ ಬಸವಣ್ಣನವರು	ಲೇಖಕರು: ಶ್ರೀ. ಕೆ. ಶಮಾ ಪ್ರಕಾಶಕರು: ಶ್ರೀ. ರಂ. ರಾ. ದಿವಾಕರ, ಹುಬ್ಬಳ್ಳಿ.	೦—೬—೦	ಪ್ರಾ. ಶಾಲೆಗಳಲ್ಲಿ ಇನಾಮು ಕೊಡಲು ಮತ್ತು ವಾಚನಾಲಯಕ್ಕಾಗಿ.
೬.	ಮಕ್ಕಳ ಆಟಗಳು	ಲೇಖಕರು: ಶ್ರೀ. ವ್ಹಿ. ಕೆ. ಜವಳಿ ಪ್ರಕಾಶಕರು: ಶ್ರೀ. ವ್ಹಿ. ಕೆ. ಜವಳಿ ಧಾರವಾಡ	೩—೦—೦	ಪಠ್ಯಪುಸ್ತಕ— ಪ್ರಾಥಮಿಕ ಟ್ರೇನಿಂಗ ಕಾಲೇಜುಗಳಿಗೆ.
೭.	ವೀರರಮಣ ಬೆಳವಡಿ ಮುಲ್ಲಮ್ಮ	ಲೇಖಕರು: ಶ್ರೀ. ವ್ಹಿ. ಎ. ಸಂಶಿ ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೊ, ಧಾರವಾಡ	೦—೫—೦	ಪುರವಣಿ ವಾಚನ— ಮಾಧ್ಯಮಿಕ ಶಾಲೆಗಳ ೧ನೆಯ ಮತ್ತು ಪ್ರಾ. ಶಾ. ೪ ಮತ್ತು ೫ನೆಯ ಇಯತ್ತೆಗಳಿಗೆ.
೮.	ಸಾಮಾನ್ಯ ವಿಜ್ಞಾನ (೬, ೭ನೆಯ ಇಯತ್ತೆಗಳಿಗೆ)	ಲೇಖಕರು: ಎಂ. ಆರ್. ಮುಲ್ಕ ಶಿಕ್ಷಕರು ಜಿ. ಎ. ಹೈಸ್ಕೂಲ, ಬೆಳಗಾಂವಿ	೧—೮—೦	ಪಠ್ಯಪುಸ್ತಕ— ಪ್ರಾ. ಶಾ. ೬ ಮತ್ತು ೭ನೆಯ ಇಯತ್ತೆಗಳಿಗೆ.
೯.	ಅಂಕಗಣಿತ (೧, ೨, ೩ನೆಯ ಇಯತ್ತೆಗಳಿಗೆ)	ಲೇಖಕರು: ಪ್ರೊ. ಹರ್ಡಿಕರ ಪ್ರಕಾಶಕರು: ಪಿ. ಟಿ. ಐ. ಬುಕ್‌ಡಿಪೊ, ಬೆಂಗಳೂರು	೦-೧೧-೦, ೦-೧೩-೦, ೦- ೫-೦	ಪಠ್ಯಪುಸ್ತಕಗಳು— ಪ್ರಾ. ಶಾ. ೧, ೨, ೩ನೆಯ ಇಯತ್ತೆಗಳಿಗೆ.
೧೦.	ಸಾಮಾನ್ಯವಿಜ್ಞಾನ (೫ನೆಯ ಇಯತ್ತೆಗೆ)	ಲೇಖಕರು: ಶ್ರೀ. ಸಿ. ಎಸ್. ಕುಲಕರ್ಣಿ ಪ್ರಕಾಶಕರು: ಕೆ. ಎಸ್. ಕುಲಕರ್ಣಿ, ಹುಬ್ಬಳ್ಳಿ	೧—೮—೦	ಪಠ್ಯಪುಸ್ತಕ — ಪ್ರಾ. ಶಾ. ೫ನೆಯ ಇಯತ್ತೆಗೆ.

ಸಮವಾಯ ಪದ್ಧತಿಯ

ಳ ನೆಯ

ಶಿಕ್ಷಕ:—ಭೀ. ಜಿ. ಪಾಸಣ್ಣವರ. **ತಾರೀಖು**

[ಕೃತಿಮೂಲ ಶಿಕ್ಷಣದ ತತ್ವಗಳಿಗನುಸರಿಸಿ, ಕ. ಗಂ. ಟ್ರೇ. ಶಾ. ಧಾರವಾಡ ಈ ಸಂಸ್ಥೆಯಲ್ಲಿಯ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ೪ ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ೩—೧೨—೧೯೪೭ನೆಯ ದಿನ ಪ್ರಿನ್ಸಿಪಾಲ ಸಾಹೇಬರ ನೇತೃತ್ವದಲ್ಲಿ ಶಿಕ್ಷಕ ವಿದ್ಯಾರ್ಥಿಗಳಿಗೆ ಮಾದರಿಯ ಪಾಠವೆಂದು ಕೊಡಲ್ಪಟ್ಟ ಪಾಠದ ಟಿಪ್ಪಣಿಯನ್ನು ಇಲ್ಲಿ ಭಾಷಿಸಲಾಗಿದೆ. ಈ ಪಾಠದಲ್ಲಿ ಕುಡ—ಹಲಿಗೆಯಿಂದ ಹತ್ತೀ ಅರೆಯುವದನ್ನು ಮೂಲ ಚಟುವಟಿಕೆಯನ್ನಾಗಿ ಇಟ್ಟುಕೊಂಡು, ಅದರೊಂದಿಗೆ ಪಾಠದ ಟಿಪ್ಪಣಿಯಲ್ಲಿ ನಮೂದಿಸಿರುವ ಇತರ ಚಟುವಟಿಕೆಗಳನ್ನೂ ಸಾಗಿಸಲಾಯಿತು ಮತ್ತು ಗಣಿತ ಮತ್ತು ಭೂಗೋಲ ವಿಷಯಗಳಿಗೆ ಸಂಬಂಧಿಸಿದ ತುಸು ಹೊಸಜ್ಞಾನವನ್ನು ಸಮನ್ವಯಿಸಲಾಯಿತು.

ಕೃತಿಮೂಲ ಶಿಕ್ಷಣದ ತತ್ವಗಳಂತೆ ಪಾಠ ಕಲಿಸಬೇಕಾಗುವ ಎಲ್ಲ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಇದು ತುಂಬಾ ನೆರವಾಗುವದೆಂದು ಅಶಿಸಲಾಗಿದೆ. ಇದರ ಬಗ್ಗೆ ಯಾವವಾದರೂ (ಅಡೆ ತಡೆ) ಅಡಚಣೆಗಳಾಗಲಿ ಕಂಡುಬಂದಲ್ಲಿ ಅವುಗಳನ್ನು ನಮಗೆ ತಿಳಿಸಿದರೆ, ಅವುಗಳ ನಿವಾರಣೆಗಾಗಿ ಯತ್ನಿಸುವೆವು. —ಸಂಪಾದಕ.]

ಪರಿಸ್ಥಿತಿ ಹಾಗು ಚಟುವಟಿಕೆ:—ಮಾನವನ ಜೀವನಕ್ಕೆ ಆಹಾರ, ಆಶ್ರಯ, ಅಚ್ಛಾದನ ಇವು ಅತ್ಯಾವಶ್ಯಕ. ಅಚ್ಛಾದನವನ್ನು ತಯಾರಿಸುವ ಚಟುವಟಿಕೆಗಳು ಹತ್ತೀ ಸ್ವಚ್ಛಮಾಡುವದು, ಹತ್ತೀ ಅರೆಯುವದು, ಅರಳೆಯನ್ನು ಹಿಂಜಿ ಹಂಜೀಮಾಡುವದು, ನೂಲುವದು ಇತ್ಯಾದಿ ಇರುತ್ತವೆ. ನೂಲುವದಕ್ಕೆ ಅವಶ್ಯ ಸಂಬಂಧವಿರುವ ಹತ್ತೀ ಅರೆಯುವ ಚಟುವಟಿಕೆಯನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. (ಕುಡ ಹಲಿಗೆಗಳಿಂದ ಅರೆಯುವದು)

ಪರಿಸ್ಥಿತಿ	ಚಟುವಟಿಕೆ	ವಿಷಯ ಅಥವಾ ಸಮವಾಯಿ ಜ್ಞಾನ	ಉಪಕರಣಗಳು
		ಹತ್ತೀ ಅರೆಯುವ ವಿಧಾನಗಳು (೧) ಕೈಯಿಂದ (೨) ಕುಡ-ಹಲಿಗೆಗಳಿಂದ (೩) ಅರೆಯುವ ಕಾಟಿಯಿಂದ	ಹತ್ತೀ ಅರೆಯುವ ವಿಧಾನಗಳ ಚಿತ್ರಪಟಗಳು
ಆರ್ಥಿಕ ಜೀವನಕ್ಕೆ ಅನುಕೂಲವಾಗುವಂತೆ ನೂಲುವ ಕ್ರಿಯೆ ದಿನಾಲು ನಡೆಯುವದು. ಇದರ ಉಪಚಟುವಟಿಕೆಗಳು ಹತ್ತೀ ಸ್ವಚ್ಛಮಾಡುವದು, ಅರೆಯುವದು, ಹಿಂಜಿ ಹಂಜೀ ಮಾಡುವದು ಇರುತ್ತವೆ. ಹತ್ತೀ ಅರೆಯುವದು ಆರ್ಥಿಕ ಪರಿಸ್ಥಿತಿಯಲ್ಲಿ ಬರುವದು.	ಕುಡ-ಹಲಿಗೆಗಳಿಂದ ಹತ್ತೀ ಅರೆಯುವದು.		 ಕುಡ-ಹಲಿಗೆಗಳು*

ಒಂದು ಪಾಠದ ಟಿಪ್ಪಣಿ

ತರಗತಿ

ದಿ -೧೨—೧೯೪೭ **ವೇಳೆ ೧. ತಾ. ೩೦. ಮಿ.**

ಸಮನ್ವಯ (ಸಂಬಂಧೀಕರಣದ) ವಿಷಯಗಳು:—(೧)ಗಣಿತ:-ಬಳಮಾನಪದ್ಧತಿಯಿಂದ ಹತ್ತಿಯ ಉತ್ಪಾದ ತೆಗೆಯುವದು. (೨) ಸಮಾಜವಿಜ್ಞಾನ—ಭೂಗೋಲ— ಹಿಂದುಸ್ಥಾನದಲ್ಲಿಯ ನೂಲಿನ ಗಿರಣಿಗಳು

ಶಿಕ್ಷಕನ ಸಾಮಾನ್ಯ ಗುರಿ:-ಮಕ್ಕಳಲ್ಲಿ ಕೃತಿಪ್ರೇಮ ಬೆಳೆದು, ಮೈ-ಮನಗಳಿಗೆ ಶಿಕ್ಷಣ ದೊರೆಯಬೇಕೆಂಬುದು ವ್ಯವಹಾರಜ್ಞಾನ ಬೆಳೆಯ ಬೇಕೆಂಬುದು.

ಉಪಕರಣಗಳು:—ಹತ್ತೀ ಅರೆಯುವ ಕೆಲವು ವಿಧಾನಗಳ ಚಿತ್ರಗಳು, ಕುಡ-ಹಲಿಗೆ, ತಕ್ಕಡಿ ಹೂಕದ ಕಲ್ಲುಗಳು, ನೂಲುವ ನೇಯುವ ಚಿತ್ರಪಟಗಳು, ಹಂಜಿ ಮತ್ತು ನೂಲಿನ ಲಡಿಗಳು, ನೂಲಿನ ಗಿರಣಿಗಳುಳ್ಳ ಹಿಂದುಸ್ತಾನದ ನಕಾಶ.

ಪ್ರಸ್ತಾವನೆ:—(ಪರಿಸ್ಥಿತಿಗನುಸರಿಸಿ, ವರ್ಗವನ್ನುದ್ದೇಶಿಸಿ)— ಉಣ್ಣೆಯ ಬಟ್ಟೆಗಳನ್ನು ಯಾರು ಹಾಕಿಕೊಂಡಿರುವಿರಿ ? ಅವನ್ನು ಯಾಕೆ ಹಾಕಬೇಕು? ಮತ್ತೆ ಕೆಲವರು ಯಾತರ ಬಟ್ಟೆಗಳನ್ನು ಹಾಕಿಕೊಂಡಿರುವಿರಿ ? ಈ ನೂಲಿನ ಬಟ್ಟೆಗಳು ಯಾತರಿಂದ ಆಗಿರುತ್ತವೆ? ಹತ್ತಿಯಿಂದ ಬಟ್ಟೆಯಾಗಬೇಕಾದರೆ ಯಾವ ಯಾವ ಕೆಲಸಗಳು ನಡೆಯಬೇಕಾಗುತ್ತವೆ ?

ಉದ್ದೇಶಕಥನ (ಈ ದಿನದ ಪಾಠದಗುರಿ):— ಹತ್ತಿ ಹೋಗಿ ಬಟ್ಟೆಯಾಗಬೇಕಾದರೆ ಮಾಡಬೇಕಾದ ಕೆಲಸಗಳಲ್ಲಿ ಮೊದಲನೆಯ ಕೆಲಸವನ್ನು ಈ ದಿನ ಮಾಡಿ ಕಲಿಯೋಣ.

ಕಲಿಸುವ ಕ್ರಮ	ಕ. ಹ. ಉಪಯೋಗ
ಈ ಚಿತ್ರಪಟಗಳಲ್ಲಿ ಎಷ್ಟು ರೀತಿಗಳಿಂದ ಹತ್ತಿಯನ್ನು ಅರೆಯುವದು ? ಯಾವ ಯಾವ ರೀತಿಯಿಂದ ಅರೆಯುತ್ತಿರುವರು ? ಇವುಗಳಲ್ಲಿ ಅತ್ಯಂತ ಸುಲಭವಾದ ವಿಧಾನವು ಯಾವದು ? ಈ ಮೂರು ವಿಧಾನಗಳಲ್ಲಿ ಯಾವ ವಿಧಾನದಿಂದ ಕೆಲಸವು ತೀವ್ರವಾಗಿ ಸಾಗಬಲ್ಲದು ? ಹಾಗಾದರೆ ಉಳಿದ ವಿಧಾನವು ಯಾವದು ? (ಎಷ್ಟನೇಯದು ?) ಈ ದಿವಸ ನಾವು ಈ ೨ನೆಯ ವಿಧಾನದಿಂದ (ಕುಡ-ಹಲಿಗೆಗಳಿಂದ) ಹತ್ತೀ ಅರೆಯೋಣ. *(ಕುಡ-ಹಲಿಗೆಗಳನ್ನು ತೋರಿಸಿ)- ಈ ಸಾಧನಗಳು ಎಷ್ಟನೆಯ ವಿಧಾನದಲ್ಲಿ ಬರುತ್ತಿವೆ ? ಇವುಗಳ ಹೆಸರು ಕುಡ ಹಲಿಗೆ. **ವಿಧಾನಗಳು** (೧) ಶಿಕ್ಷಕನು ವಿದ್ಯಾರ್ಥಿಗಳಲ್ಲಿ ಮೂರು ಗುಂಪು (ಗಾಂಧಿ, ಅರ್ಜುನ, ನೆಹರು) ಮಾಡಿ, ಕುಡಹಲಿಗೆ ಮತ್ತು ತೂಗಿ ಸಿದ್ಧವಾಗಿರಿಸಿಟ್ಟ ಹತ್ತಿಯನ್ನು ಶಿಸ್ತಿ ಹಂಚುವನು. (೨) ತನಗೆ ಬೇಕಾಗುವ ಸಾಮಾನುಗಳನ್ನು ಶಿಸ್ತಿನಿಂದ ಇಟ್ಟುಕೊಂಡು ಕುಳಿತು, ಹತ್ತೀ ಅರೆಯುವ ರೀತಿಯನ್ನು ವಿದ್ಯಾರ್ಥಿಗಳಿಗೆ ಕೃತಿಯಿಂದ (ಮಾಡಿ) ತೋರಿಸುವನು. (೩) ವಿದ್ಯಾರ್ಥಿಗಳಿಂದ ಅದೇ ಕೆಲಸದ ಪ್ರಾರಂಭ. (೪) ಪ್ರತಿಯೊಂದು ಗುಂಪಿನ ವಿದ್ಯಾರ್ಥಿಗಳಿಗೆ ತೂಗಿಕೊಟ್ಟ ಹತ್ತಿಯ ತೂಕವನ್ನು ಆ, ಆ ಗುಂಪಿನ ವಿದ್ಯಾರ್ಥಿಗಳು ಕುಡಹಲಿಗೆಯ ಮೇಲೆ ಬರೆದಿಡುವರು. (೫) ೨೦ ಮಿನಿಟುಗಳವರೆಗೆ ಅರೆಯುವ ಕಾರ್ಯ (ವಿದ್ಯಾರ್ಥಿಗಳು ತಪ್ಪಿದಲ್ಲಿ ಶಿಕ್ಷಕನು ಅವರ ತಪ್ಪನ್ನು ತಿದ್ದುವದು.)	ಕುಡ-ಹಲಿಗೆ

ಪರಿಸ್ಥಿತಿ	ಚಟುವಟಿಕೆ	ವಿಷಯ ಅಥವಾ ಸಮವಾಯಿ ಜ್ಞಾನ	ಉಪಕರಣಗಳು

ಕಲಿಸುವ ಕ್ರಮ

(೬) ಪ್ರತಿಯೊಂದು ಗುಂಪಿನವರು ಅರೆದ ಅರಳೆ, ಕಾಳು ಇವುಗಳನ್ನು ಒಟ್ಟು ಗೂಡಿಸುವರು; ಇದರಂತೆ ಉಳಿದ ಹತ್ತಿಯನ್ನು ಒಟ್ಟುಗೂಡಿಸುವರು.

(೭) ಪ್ರತಿಯೊಂದು ಗುಂಪಿನವರು ತಾವು ಅರೆದ ಅರಳೆ, ಕಾಳು ಮತ್ತು ಉಳಿದ ಹತ್ತಿ ಇವುಗಳನ್ನು ತೂಗುವರು. ಈ ತೂಕಗಳನ್ನು ಕರಿಹಲಿಗೆಯ ಮೇಲೆ ಬರೆಯುವರು.

ಪ್ರಶ್ನೆಗಳು:— ಯಾವದೊಂದು ಗುಂಪನ್ನು (ಗಾಂಧಿ) ಉದ್ದೇಶಿಸಿ:— (ಕರಿಹಲಿಗೆಯ ಸಹಾಯದಿಂದ ವಿದ್ಯಾರ್ಥಿಗಳು ಉತ್ತರಿಸುವರು.)

(೧) ನಿಮ್ಮ ಗುಂಪಿಗೆ ಕೊಟ್ಟ ಹತ್ತಿ ಎಷ್ಟು ?

(೨) ಶಿಲುಕು ಉಳಿದ ಹತ್ತಿ ಎಷ್ಟು ?

(೩) ಹಾಗಾದರೆ, ಅರೆದ ಹತ್ತಿ ಎಷ್ಟು ?

(೪) ನಿಮ್ಮಲ್ಲಿ ಯಾವ ಗುಂಪಿನವರು ಹೆಚ್ಚಾಗಿ ಅರೆದಿದ್ದಾರೆ? (ಹೆಚ್ಚು ಅರೆದ ಗುಂಪನ್ನು ಪ್ರೋತ್ಸಾಹಿಸುವದು.)

(೫) ಗಾಂಧಿ ಗುಂಪಿನವರು ಅರೆದ ಹತ್ತಿ ಎಷ್ಟು ?

(೬) ಅದರಿಂದ ಹೊರಟ ಅರಳೆ ಎಷ್ಟು ?

(೭) ಹಾಗಾದರೆ ೧ ತೊಲೆ ಹತ್ತಿಗೆ ಎಷ್ಟು ಅರಳೆ ಹೊರಟಿಂತಾಯಿತು ?

(೮) ಈ ಪ್ರಮಾಣದಿಂದ, ೧೦೦ ತೊಲೆ ಹತ್ತಿಗೆ ಎಷ್ಟು ತೊಲೆ ಅರಳೆ ಹೊರಡುವದು ?

ಕ. ಹ. ಉಪಯೋಗ

ಗುಂಪು	ಅರೆದ ಹತ್ತಿ ತೊಲೆ	ಉಳಿದ ಹತ್ತಿ ತೊಲೆ	ಅರಳೆ ತೊಲೆ	ಕಾಳು ತೊಲೆ
ಗಾಂಧಿ	೧೨	೨	೧೦	೨೧
ಅಝಾದ	೧೨	೪	೮	೨
ನೆಹರು	೧೨	೦	೯	೨೧

ಪರಿಸ್ಥಿತಿ	ಚಟುವಟಿಕೆ	ವಿಷಯ ಅಥವಾ ಸಮವಾಯಿ ಜ್ಞಾನ	ಉಪಕರಣಗಳು
	ಉಪಕರಣಗಳು:- ಹತ್ತಿ, ಅರಳಿ, ಕಾಳು ಇವುಗಳನ್ನು ತೂಗಿ ತೂಕಗಳನ್ನು ಕರಿಪಲಗೆಯ ಮೇಲೆ ಬರೆದಿಡಬೇಕು. (೨) ಹತ್ತಿಯ ಉತಾರ ತೆಗೆಯುವದು.	ಪ್ರತಿಯೊಂದು ಗುಂಪಿನವರು ಎಷ್ಟೆಷ್ಟು ಹತ್ತಿಯನ್ನು ಅರೆದನೆಂಬುದನ್ನು ಕಂಡುಹಿಡಿಯುವದು **ಗಣಿತ** (೧) ಶಿಕ್ಷಕನ ಮಾರ್ಗದರ್ಶನ ಗಣಿತ ಹತ್ತಿಯ ಉತಾರ ೧೦೦ಕ್ಕೆ ೨೫ (೨) ಬಾಲಕರಿಂದ ಮಾಡಿಸುವದು. (ಆಯಾಮ, ನೆಹರು ಗುಂಪಿನವರ ಉದಾಹರಣೆಗಳು)	
	ಸೂಚಿನ ಗಿರಣಿಗಳ ನಕಾಶ ನಿರೀಕ್ಷಣೆ.	**ಭೂಗೋಲ** ಬಂದುಸ್ಥಾನದೊಳಗಿನ ಗಿರಣಿಗಳು. **ಗಿರಣಿಗಳಿರತಕ್ಕ ಮುಖ್ಯ ಸ್ಥಳಗಳು.** ಮುಂಬೈ, ಅಹಮ್ಮದಾಬಾದ, ಸೊಲ್ಲಾಪುರ, ಗೂಲ್ಕಾಳ, ನಾಗಪುರ, ಕಾನಪುರ, ಕೊಯಿಮುತ್ತೂರ, ಬೆಂಗಳೂರ ಇತ್ಯಾದಿ (ನಕಾಶದಲ್ಲಿ ತೋರಿಸಿದವು)	

ಗೃಹಪಾಠ

(೧) ನಾಲ್ಕನೆಯ ಇಯತ್ತೆಯ 'ಬ' ವರ್ಗದವರು ಒಂದು ದಿವಸ ೪೨ ತೊಲೆ ಹತ್ತಿಯನ್ನು ಅರೆದಿದ್ದಾರೆ. ಇದಕ್ಕೆ ೧೦೦ ತೊಲೆ ಅರಳೆ ಬಂದಿದೆ. ಅದರೆ, ನಾಲ್ಕನೆಯ ಇಯತ್ತೆಯ 'ಅ' ವರ್ಗದವರು ೪೪ ತೊಲೆ ಹತ್ತಿಯನ್ನು ಅರೆದಿದ್ದು ೧೧ ತೊಲೆ ಅರಳೆಯನ್ನು ಅರೆದು ತೆಗೆದಿರುವರು.

ಕಲಿಸುವ ಕ್ರಮ	ಕ. ಹ. ಉಪಯೋಗ
(ಸಕಲಮಾನಪದ್ಧತಿಯಿಂದ ಶಿಕ್ಷಕನು ಬಿಡಿಸಿ ತೋರಿಸುವದು.)	
ಹೇಳುವದು:—ಈ ಕೃತಿಗೆ "ಹತ್ತಿಯ ಉತಾರ ತೆಗೆಯುವದು" ಎನ್ನುವ ರೂಢಿ ಉಂಟು. ಮೇಲಿನಂತೆಯೇ, ಉಳಿದ ಎರಡು ಗುಂಪಿನವರಿಗೂ ಪ್ರತ್ಯೇಕವಾಗಿ ಅವೇ ಪ್ರಶ್ನೆಗಳನ್ನು ಕೇಳಿ, ಅ, ಆ ಗುಂಪಿನ ಹತ್ತಿಯ ಉತಾರ ತೆಗೆಯಿಸುವದು.	೧೦ ತೊ. ಹತ್ತಿಗೆ ೫ ತೊ. ಅರಳೆ ∴ ೧ ,, ,, ೫/೧೦ ,, ∴ ೧೦೦ ,, ,, ೫/೧೦ × ೧೦೦/೧ = ೨೫ ತೊ.
ಇಷ್ಟೇ ಕೆಲಸ ಮಾಡಿದರೆ ಅರಿವೆ ಆಗುವದಿಲ್ಲ. ಅರಿವೆ ಆಗುವದಕ್ಕಿಂತ ಮೊದಲು ಅದು ಇಜಿ, ನೂಲು ಎಂಬ ರೂಪಗೊಳ್ಳುತ್ತದೆ. ಅದರಿಂದ ಮುಂದೆ ಅದು ಅರಿವೆ ಆಗುತ್ತದೆ.	**ಹತ್ತಿಯ ಉತಾರ ೧೦೦ಕ್ಕೆ ೨೫ ತೂಲಿ**
ಪ್ರಶ್ನೆಗಳು:—(೧) ನೂಲು ತೆಗೆಯಲಿಕ್ಕೆ ಬೇಕಾಗುವ ನಿಮಗೆ ಗೊತ್ತಿರುವ ಸಾಧನಗಳು ಯಾವವು?	೮ ತೊ. ಹತ್ತಿಗೆ ೨ ತೊ. ಅ. ∴ ೧ ,, ,, ೧/೮ × ೨ ∴ ೧೦೦ ,, ,, ೧/೮ × ೨ × ೧೦೦/೧ = ೨೫ ತೊ.
(೨) ಆದರೆ ಅತಿದೊಡ್ಡ ಪ್ರಮಾಣದಲ್ಲಿ ನೂಲು ದೊರಕಬೇಕಾದರೆ, ಯಾವ ಯೋಜನೆ ಗಳಿರುವವು?	**ಉತಾರ ೧೦೦ಕ್ಕೆ ೨೫**
(೩) ಹಾಗಾದರೆ ನಮ್ಮ ಕರ್ನಾಟಕದಲ್ಲಿ ನೂಲಿನ ಗಿರಣಿಗಳು ಯಾವ ಯಾವ ಊರಲ್ಲಿ ಇವೆ?	೯ ತೊ. ಹತ್ತಿಗೆ ೩ ತೊ. ಅ. ∴ ೧ ,, ,, ೩/೯ × ೨ ∴ ೧೦೦ ,, ,, ೩/೯ × ೨ × ೧೦೦/೧ ೨೫ ತೊ. **ಉತಾರ ೧೦೦ಕ್ಕೆ ೨೫**
ಈಗ ಹಿಂದುಸ್ತಾನದಲ್ಲಿ ನೂಲುವ ಗಿರಣಿಗಳು ಎಲ್ಲೆಲ್ಲಿ ಇವೆ, ಎಂಬುದನ್ನು ಈ ನಕಾಶೆಯಲ್ಲಿ ನಿರೀಕ್ಷಿಸಿರಿ.	
(ಒಂದೊಂದೇ ಗುಂಪಿನವರಿಗೆ ನಕಾಶೆ ನಿರೀಕ್ಷಣೆ ಮಾಡಬಹುದು.)	
ಬಣ್ಣದಿಂದ ತೋರಿಸಿದ ಸ್ಥಳಗಳಲ್ಲಿಯೇ ಗಿರಣಿಗಳಿವೆ.	
ಪ್ರಶ್ನೆಗಳು:—(೧) ಬಣ್ಣದ ಗುರುತು ಯಾತರ ಸಲುವಾಗಿ ಮಾಡಿದೆ?	ಹಂಜಿ, ಲಿಜಿ
(೨) ಹಾಗಾದರೆ ನೂಲಿನ ಗಿರಣಿಗಳು ಯಾವ ಯಾವ ಪಟ್ಟಣಗಳಲ್ಲಿ ಇದ್ದಂತಾಯಿತು?	
(ಬೇರೆ ಬೇರೆಯವರಿಂದ ಹೇಳಿಸಿ ರೂಢಿ ಮಾಡಿಸುವದು)	

ಹಾಗಾದರೆ ಪ್ರತಿಯೊಂದು ಪ್ರಾಣಿಯಿಂದ ತೆಗೆದ ಹತ್ತಿಯ ಉತಾರವೇನು? ಅದಕ್ಕಾಗಿಯೂ ಪ್ರಯತ್ನಿಸಿರಿ.

(೨) ಇಷ್ಟೇ ಅಲ್ಲ ಹಿಂದುಸ್ತಾನದ ಬಾಕ್ಸೆ ರೇಖೆಯ ನಕಾಶೆಯನ್ನು ಕೊಡುತ್ತೇನೆ. ನೂಲುವ ಗಿರಣಿಗಳುಳ್ಳ ಎಲ್ಲ ಪಟ್ಟಣಗಳನ್ನು ತುಂಬಿ ಕೊಂಡು ಬನ್ನಿರಿ.

ವರ್ಧಾ ರಾಷ್ಟ್ರೀಯ ಶಿಕ್ಷಣ ಸಮ್ಮೇಲನ

ಲೇಖಕರು : ಶ್ರೀ. ಆರ್. ವ್ಹಿ. ದೇಸಾಯಿ

●

ಕಳೆದ ಎಪ್ರೀಲ ತಿಂಗಳ ೧೮ರಿಂದ ೨೨ ರ ವರೆಗೆ ವರ್ಧಾ ರಾಷ್ಟ್ರೀಯ ಶಿಕ್ಷಣ ಸಮ್ಮೇಲನವು ಪಾಟಣಾ ಜಿಲ್ಲೆಯ ವಿಕ್ರಮದಲ್ಲಿ ವಿಜೃಂಭಣೆಯಿಂದ ಸಾಗಿತು. ಈ ಸಮ್ಮೇಲನಕ್ಕೆ ಬೇರೆ ಬೇರೆ ಪ್ರಾಂತಗಳಿಂದ ಬಂದ ಪ್ರತಿನಿಧಿಗಳೂ ಶಿಕ್ಷಣ ತಜ್ಞರೂ ವರಿಷ್ಠಾಧಿಕಾರಿಗಳೂ ಸಂಸ್ಥಾನಗಳ ಶಿಕ್ಷಣ ಮಂತ್ರಿಗಳೂ ಹಿಂದುಸ್ತಾನೀ ತಾಲೀಮೀ ಸಂಘದ ಸಂಚಾಲಕರೂ ಸನ್ಮಾನ್ಯ ಬಾಬು ರಾಜೇಂದ್ರ ಪ್ರಸಾದರೇ ಮೊದಲಾದ ರಾಷ್ಟ್ರಧುರೀಣರೂ ಅದರಲ್ಲಿ ಭಾಗವಹಿಸಿದ್ದರಿಂದ ಸಭೆಗೆ ಒಂದು ಅಪೂರ್ವ ಶೋಭೆಯುಂಟಾಗಿತ್ತು.

ಸಮ್ಮೇಲನದ ಪ್ರಾರಂಭೋತ್ಸವವನ್ನು ಬಿಹಾರದ ಗವ್ಹರ್ನರರಾದ ನಾಮದಾರ ಅಣೆಯವರ ಅಮೃತಹಸ್ತದಿಂದ ಜರುಗಿಸಲಾಯಿತು. ಅವರು ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ಒಳ್ಳೇ ಆವೇಶದಿಂದ ಹೀಗೆ ಹೇಳಿದರು; " ವರ್ಧಾ ಯೋಜನೆಯು ಮಹಾತ್ಮರ ವಿಧಾಯಕ ಕಾರ್ಯಕ್ರಮ ಪಳಲ್ಲೊಂದು. ಇದನ್ನು ನಾವು ಕೃತಿಯ ರೂಪಕ್ಕಿಳಿಸುವದು ಅಗತ್ಯ. ಈ ಶಿಕ್ಷಣ ಯೋಜನೆಯ ಮುಖಾಂತರವೇ ನಮ್ಮ ರಾಷ್ಟ್ರಪತಿ ಮಹಾತ್ಮಾಜೀಯವರು ಭಾವೀ ಭವ್ಯ ಭಾರತವನ್ನೂ; ನವಸಮಾಜ ನಿರ್ಮಾಣವನ್ನೂ ಮಾಡಲಿಕ್ಕಿದ್ದರು. ನಿಜವಾದ ಸ್ವರಾಜ್ಯವೆಂದರೆ ಬ್ರಿಟಿಷರಿಂದ ಶಾಸನಾಧಿಕಾರವನ್ನು ತಕ್ಕೊಂಡು ದೇಶೀಯರ ಕೈಯಲ್ಲಿ ಕೊಡುವದೇ ಅಲ್ಲ, ಆದರೆ ಬಡ ಭಾರತಿಯರ ಜೀವನವನ್ನು ಸುಖಮಯವಾಗಿಯೂ ಪವಿತ್ರವಾಗಿಯೂ ಆಶಾದಾಯಕವಾಗಿಯೂ ಮಾಡಬೇಕಾಗಿದೆ. ಇದು ರಾಷ್ಟ್ರೀಯ ಶಿಕ್ಷಣ ಯೋಜನೆಯಿಂದ ಸಾಧಿಸುವದು. ಅದಕ್ಕಾಗಿಯೇ ಈ ಕಾರ್ಯವನ್ನು ನಾವೆಲ್ಲ ಮನಃಪೂರ್ವಕವಾಗಿ ಮಾಡುವದರಲ್ಲಿಯೇ ಶ್ರೇಯಸ್ಸಿದೆ."

ಆಮೇಲೆ ಬೇರೆ ಬೇರೆ ಶಿಕ್ಷಣ ಕೇಂದ್ರಗಳು ಮಾಡಿದ ಪ್ರಯೋಗಗಳ ವರದಿಯನ್ನು ಮುಂದಿಟ್ಟುಕೊಂಡು ಈ ಶಿಕ್ಷಣ ಕ್ರಮದ ಪ್ರಸಾರ ಮಾಡಲಿಕ್ಕೆ ಅಲ್ಲಿ ನೆರೆದ ಶಿಕ್ಷಣ ತಜ್ಞರಿಗೆ ಒತ್ತಿ ಹೇಳಿದರು.

ಇದಾದನಂತರ ಬಿಹಾರ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಪ್ರೆಸಿಡೆಂಟರಾದ ಶ್ರೀ. ಬಾಬು ರಾಜೇಂದ್ರ ಪ್ರಸಾದರು ಏಳು ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಶಿಕ್ಷಣವನ್ನು ಪೂರ್ತಿಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಹಂಚುವ ಕಾರ್ಯವನ್ನು ನೆರವೇರಿಸಿದರು. ಆಗ ಪ್ರಾರಂಭದಿಂದ ಇಲ್ಲಿಯವರೆಗೆ ಪ್ರಗತಿಹೊಂದುತ್ತ ಬಂದ ವರ್ಧಾ, ರಾಷ್ಟ್ರೀಯ ಯೋಜನೆಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಅಲ್ಲದೆ ಈ ಶಿಕ್ಷಣ ಯೋಜನೆಯ ಬಗ್ಗೆ ನಮ್ಮ ನಮ್ಮಲ್ಲಿ ಎಷ್ಟೋ ಭಿನ್ನಾಭಿಪ್ರಾಯಗಳು ಇದ್ದರೂ ಕೂಡ ಬಡ ಭಾರತದ ದೃಷ್ಟಿಯಿಂದ ಇದು ಯೋಗ್ಯವಾಗಿದೆ. ಧನಾಢ್ಯವಾದ ಪಾಶ್ಚಾತ್ಯ ರಾಷ್ಟ್ರಗಳನ್ನು ನಾವು ಅನುಕರಿಸಲಾಗುವದಿಲ್ಲ. ಇದನ್ನರಿತೇ ಮಹಾತ್ಮರು ನಮ್ಮ ದೇಶದ ಆರ್ಥಿಕ, ಸಾಮಾಜಿಕ, ನೈತಿಕ ದೃಷ್ಟಿಯಿಂದ ಯೋಗ್ಯವೆನಿಸುವ ಈ ಯೋಜನೆಯನ್ನು ಶಿಕ್ಷಣ ತಜ್ಞರ ಸಹಕಾರದಿಂದ ಸಿದ್ಧಗೊಳಿಸಿರುವರು. ಇದರಿಂದಲೇ ನಮ್ಮ ರಾಷ್ಟ್ರದ ಸರ್ವಾಂಗೀಣ ಉನ್ನತಿಯಾಗುವದು. ಇದರಲ್ಲಿ ಯಾವ ಸಂಶಯವೂ ಇಲ್ಲ.

ಅನಂತರ ದಿಲ್ಲಿಯ ಜಾಮಿಯಾ ಮಿಲಿಯಾದ ಸಂಚಾಲಕರಾದ ಡಾ. ಜಾಕೀರ ಹುಸೇನರು ತಮ್ಮ ಅನುಭವ ಅಮೋಘವಾಣಿಯಿಂದ ಮಾತನಾಡುತ್ತ, ಕಳೆದ ಹತ್ತುವರ್ಷಗಳಲ್ಲಿ ವಿವಿಧ ಪ್ರಾಂತಗಳ ರಾಷ್ಟ್ರೀಯ ಅಧ್ಯಾಪನ ಶಿಕ್ಷಣ ಕೇಂದ್ರಗಳು ಸಾಧಿಸಿದ ಪ್ರಗತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಒಂದು ವರದಿಯನ್ನು ತಯಾರಿಸಲು ಬಿಹಾರದವರಿಗೆ ವಿನಂತಿ ಮಾಡಿಕೊಂಡರು. ಇದಲ್ಲದೆ ಅವರು "ಮಹಾತ್ಮರು ಈ ಹೊಸ ಯೋಜನೆಯನ್ನು ತಮ್ಮ ಆಳವಾದ ದೃಷ್ಟಿ

ಯಿಂದ ಕಂಡು ಹಿಡಿದು, ನಮ್ಮ ಜನರ ಹಿತಕ್ಕಾಗಿಯೇ ನಮ್ಮೆಲ್ಲರ ಮುಂದೆ ಇಟ್ಟಿರುವರು. ಇಂಥ ದೂರದರ್ಶಿಗಳ ನೇತೃತ್ವದಲ್ಲಿ ಆರಂಭವಾದ ಈ ಯೋಜನೆಯಿಂದ ಭಾರತವು ಊರ್ಜಿತಾವಸ್ಥೆಗೆ ಹೋಗುವದೆಂಬುದರಲ್ಲಿ ಸಂಶಯವಿಲ್ಲ." ಎಂದು ಪ್ರತಿಪಾದಿಸಿದರು.

"ಹಿಂದುಸ್ತಾನಿ ತಾಲೀಮ ಸಂಘದವರು ಪ್ರಾರಂಭಿಸಿದ, ನಯೀ ತಾಲೀಮಿನಲ್ಲಿ ಆದರ್ಶ ಶಿಕ್ಷಕನನ್ನು ನಿರ್ಮಿಸಿ ಬಾಲಕರನ್ನು ಪ್ರೇಮ ಸಹಾನುಭೂತಿಗಳಿಂದ ಆಕರ್ಷಿಸುವಂತೆ ಕಾರ್ಯಕ್ರಮಗಳನ್ನಿಟ್ಟುಕೊಂಡು ಸಾಗಿದರಾಯಿತು. ಅಂದರೆ ಮಹಾತ್ಮರ ಆದರ್ಶ ಸಮಾಜ ರಚನೆಯ ಕನಸ ನನಸಾಗಲಿಕ್ಕೆ ಈ ನಯೀ ತಾಲೀಮುವು ಅತ್ಯಂತ ಸಹಕಾರಿಯಾಗುವದು. ಈ ಕಾರ್ಯಕ್ರಮದಲ್ಲಿ ಮೊದಲು ಯಶಾಪಯಶಗಳನ್ನು ಲಕ್ಷಿಸದೆ—ರಣಭೂಮಿಯ ಸೈನಿಕರಂತೆ—ಮುಂದರಿದಲ್ಲಿ ಯಶವನ್ನು ಸಂಪಾದಿಸಲಿಕ್ಕೆ ಎಲ್ಲರೂ ಸಮರ್ಥರಾಗುವರು. ಇಲ್ಲಿಯ ವರೆಗೆ ಬೇರೆ ಬೇರೆ ಪ್ರಾಂತಗಳ ಮೇಲಧಿಕಾರಿಗಳು ಇಂಥ ವಿಧಾಯಕ ಸಮಾಜ ರಚನೆಯ ಕಾರ್ಯಕ್ರಮದಲ್ಲಿ ಸಾಕಷ್ಟು ಮನಸ್ಸು ಹಾಕದಿರುವದು ಶೋಚನೀಯವೆಂದು ಸಾರಿ ಹೇಳಿದರು. ಕೊನೆಗೆ ಇಂಥ ಶಿಕ್ಷಣದ ಆಧಾರದಮೇಲೆ ನಿಂತಂಥ ಜಾಗೃತ ಸಮಾಜವೇ ನಮ್ಮ ಹಿಂದುಸ್ತಾನವನ್ನು ಸುಸ್ಥಿತಿಗೆ ಒಯ್ಯಬಹುದೆಂದು. ಆಶೆಯನ್ನು ವ್ಯಕ್ತ ಮಾಡಿ, ತಮ್ಮ ಭಾಷಣ ಮುಗಿಸಿದರು

ಮರುದಿನದಿಂದ ರಾಷ್ಟ್ರೀಯ ಶಿಕ್ಷಣದ ಬೆಳವಣಿಗೆಯ ಬಗ್ಗೆ ವಿಧಾಯಕ ಚರ್ಚೆ ಸಾಗಿತು. ಅದರಲ್ಲಿ ಮುಖ್ಯವಾಗಿ ಶ್ರೀ. ಮಹೇಂದ್ರ ಮೋಹನ ಚೌಧರಿ (ಪಾರ್ಲಿಮೆಂಟರಿ ಸೆಕ್ರೆಟರಿ ಆಸಾಮ), ಶ್ರೀ. ಭವನಾಥಉಪಾಧ್ಯಾಯ (ಪ್ರಿನ್ಸಿಪಾಲ ಆಧಾರ ಶಿಕ್ಷಾ ಕೆಂದ್ರ ಕಾಟಮಾಂಡೂ, ನೇಪಾಲ, ಜನಾಬ ಖ್ವಾಜಾ ಗುಲಾಮ ಸಯೊದೀನ, (ಎಜ್ಯುಕೇಶನಲ ಅಡವಾಯಜರ ಬಂಬಯಿ,) ಜಿ. ರಾಜಗೋಪಾಲರಾವ (ಮದ್ರಾಸ,) ಶ್ರೀ. ಎಲ್. ಆರ್ ದೇಸಾಯಿ (ಡೆಪುಟಿ ಡಾಯರೆಕ್ಟರ ಬಂಬಯಿ) ಶ್ರೀ ಹರಿಹರ ಮಿಶ್ರ (ಸ್ಪೆಶಲ ಆಫೀಸರ ಬೇಸಿಕ್ ಎಜ್ಯುಕೇಶನ,ಉಡಿಸಾ), ಶ್ರೀ. ಫಕೀರದಾಸ ನಂದೋಪಾಧ್ಯಾಯ; (ಪಶ್ಚಿಮ ಬಂಗಾಲ), ಶ್ರೀ. ಮಂದರಾಮ ಉದಯಪೂರ, ಶ್ರೀ. ರಾಮ ಶರಣ ಉಪಾಧ್ಯಾಯ (ಬಿಹಾರ), ಕೇಂದ್ರೀಯ ಸರಕಾರದ ಪ್ರತಿನಿಧಿ, ಮಂತ್ರಿ ಹಿಂದುಸ್ತಾನೀ ತಾಲೀಮ ಸಂಘ ಮೊದಲಾದವರು ಭಾಗವಹಿಸಿದರು. ಬೇರೆ ಬೇರೆ ಪ್ರಾಂತದವರು ತಮ್ಮ ಪ್ರಾಂತಗಳ ಪ್ರಗತಿಯ ವರದಿಯನ್ನು ಸಾದರ ಪಡಿಸಿದರು.

ಶಿಕ್ಷಕರ ಟ್ರೇನಿಂಗಿನ ವಿಷಯಕ್ಕೆ ಶ್ರೀಮತಿ ಆಶಾದೇವಿ, ಸೇವಾಗ್ರಾಮ ಇವರು ಮಾಡಿದ ಭಾಷಣವು ತುಂಬ ಮನನೀಯವೂ ಮಾರ್ಗದರ್ಶಕವೂ ಆಗಿದ್ದಿತು. ಅವರು ಶಿಕ್ಷಕನು ಪ್ರೇಮ ವಾತ್ಸಲ್ಯ ಉಳ್ಳವನಿರಬೇಕು. ಅವನು ಮಗು ಚೈತನ್ಯಮೂರ್ತಿ, ಸಮಾಜದ ಉದಯಕ್ಕೆ ಘಟಕವೆಂದರಿತಿರಬೇಕು. ಸತ್ಯ ಅಹಿಂಸೆಗಳಲ್ಲಿ ಶ್ರದ್ಧೆಯಿಟ್ಟು ಗ್ರಾಮೋದ್ಯೋಗಿಯಾಗಿರಬೇಕು. ಬಾಲಕರ ಕೃತಿಯ ಬೆಲೆ ದುಡ್ಡಿನ ನೋಲ್ಲ. ಅವರು ಮಾಡುವ ಆಸೆಯನ್ನವಲಂಬಿಸಿದೆ ಎಂದು ಹೇಳಿದರು. ಅದರಂತೆ ಪ್ರೌಢ ಶಿಕ್ಷಣ ವಿಷಯವನ್ನು ಕುರಿತು ಆಚಾರ್ಯ ಬದರೀನಾಥ ಶರ್ಮ, ಶ್ರೀಮತಿ ಶಾಂತಾ ನಾರೂಲಕರ ಇವರು ಮಂಡಿಸಿದ ವಿಚಾರಗಳು ಅತ್ಯಂತ ಮಹತ್ವವಾಗಿದ್ದುವು.

ಈ ಶಿಕ್ಷಣ ಸಮ್ಮೇಲನದಲ್ಲಿ ವ್ಯಾಖ್ಯಾನ ಚರ್ಚೆಗಳಾದವಲ್ಲದೆ ಇದರ ಅಂಗವಾಗಿ ಒಂದು ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು. ಅಲ್ಲಿ ಇಟ್ಟ ವಸ್ತುಗಳೆಲ್ಲ ಭಾರತದ ವಿವಿಧ ಪ್ರಾಂತಗಳ ಶಿಕ್ಷಣ ಕೇಂದ್ರಗಳಲ್ಲಿ ಕಾರ್ಯದ ದ್ಯೋತಕಗಳಾಗಿದ್ದವು. ಅವುಗಳಲ್ಲಿ ಕರ್ನಾಟಕದ ಬೇಸಿಕ್ ಕೇಂದ್ರದ-ಧಾರವಾಡ ಸೆಂಟರದ--ಕೌಶಲ್ಯ ಪೂರ್ಣವಾದ ಕೃತಿಗಳು ಲೌಕಿಕ ದೃಷ್ಟಿಯಿಂದ, ಪ್ರಾಯೋಗಿಕ ದೃಷ್ಟಿಯಿಂದ ತಮ್ಮದೇ ಆದ ವೈಶಿಷ್ಟ್ಯದಿಂದ ಕೂಡಿ ಎಲ್ಲ ಶಿಕ್ಷಣ ತಜ್ಞರ ಮನಸ್ಸು ಸೆಳೆದವೆಂಬುದರಲ್ಲಿ ಸಮಗೊಂದು ಹೆಮ್ಮೆ. ಈ ಪ್ರದರ್ಶನದ ಉದ್ಘಾಟನೆಯನ್ನು ಮಾಡುತ್ತ ಮಾನನೀಯ ಬಿಹಾರ ಕೇಸರಿ ಡಾ. ಶ್ರೀ. ಕೃಷ್ಣಸಿಂಹ, ಪ್ರಧಾನ ಮಂತ್ರಿ ಬಿಹಾರ ಇವರು ಕೈಕೆಲಸಗಳ ಮಹತ್ವವನ್ನು, ಅದಕ್ಕೆ ಪ್ರಧಾನ ಶಿಕ್ಷಣದಲ್ಲಿರುವ ಸ್ಥಾನವನ್ನು ವಿವರಿಸಿ ಹೇಳಿದರು.

ದಿನಾಲು ಸಾಯಂಕಾಲ ಮನರಂಜನೆಯ ಕಾರ್ಯಕ್ರಮ ಇರುತ್ತಿದ್ದಿತು. ಭಜನೆ, ನಾಟಕ, ನೃತ್ಯ, ಜೀವನದೃಶ್ಯಗಳು ಅತಿಥಿಗಳ ಮನಸ್ಸನ್ನು ಸೂರೆಗೊಳ್ಳುತ್ತಿದ್ದವು. ಅವುಗಳಲ್ಲಿ ವಿಕ್ರಮ ಬೇಸಿಕ ಟ್ರೇನಿಂಗ ಸ್ಕೂಲಿನವರು ಆಡಿದ "ಬಿಹಾರ ಗೌರವ" ಎಂಬ ನಾಟಕ ಮನೋಹರವಾಗಿತ್ತು.

ಇವೆಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲರ ಮನಸ್ಸನ್ನು ಸೆಳೆದ ವಿಷಯವೆಂದರೆ ಸ್ವಯಂಸೇವಕರ ಶಿಸ್ತು. ಸಮಾರು

೨೦೦–೪೦೦ ಜನ ಸ್ವಯಂ ಸೇವಕರು ಸಮ್ಮೇಲನದ ವ್ಯವಸ್ಥೆಯಲ್ಲಿ ತೊಡಗಿರುತ್ತಿದ್ದರು. ಅವರು ಬೆಳಗಿನ ೪॥ ಘಂಟೆಗೆ ಎದ್ದು ಮಂಟಪವನ್ನು ಸ್ವಚ್ಛಮಾಡುತ್ತಿದ್ದರು. ಆಗ ಅವರ ಕಾರ್ಯಕ್ಕೆ ಆರಂಭವಾದುದು ರಾತ್ರಿಗೇನೇ ಅವರಿಗೆ ವಿಶ್ರಾಂತಿ. ಅವರ ನಗುಮುಖ, ಕಾರ್ಯಾಸಕ್ತಿಗಳು ಬೇಸಿಕ್ ಶಿಕ್ಷಣದ ಫಲವಾಗಿದ್ದುವೆಂಬುದಕ್ಕೆ ಎಳ್ಳಷ್ಟೂ ಸಂದೇಹವಿಲ್ಲ.

ಹೀಗೆ ವಿಕ್ರಮದ ಅಖಿಲ ಭಾರತೀಯ ೪ನೆಯ ವರ್ಧಾ ರಾಷ್ಟ್ರೀಯ ಶಿಕ್ಷಣ ಸಮ್ಮೇಲನವು ಸ್ವತಂತ್ರ ಭಾರತದ ಶಿಕ್ಷಣದ ಪ್ರಗತಿಯ ಪಥದಲ್ಲಿ ಒಂದು ಮೈಲುಗಂಬವಾಗಿಗಲೂ ನಿಲ್ಲುವದೆಂಬುವದರಲ್ಲಿ ಸಂಶಯವಿಲ್ಲ.

ತಿದ್ದುಪಡಿ

●

ಕನ್ನಡ ಪ್ರಾಥಮಿಕ ಶಾಲೆಗಳ ಹೆಡಮಾಸ್ತರರಲ್ಲಿ ಮತ್ತು ಅವುಗಳಲ್ಲಿಯ ಮುಲ್ಕಿ ಪರೀಕ್ಷೆಯ ತರಗತಿಗಳಿಗೆ ಗಣಿತ ವಿಷಯವನ್ನು ಕಲಿಸುವ ಶಿಕ್ಷಕರಲ್ಲಿ ಅರಿಕೆ:—

೧೯೪೮ ಜಾನೆವಾರಿ ತಿಂಗಳಲ್ಲಿ, ಪ್ರಾಥಮಿಕ ಶಾಲೆಗಳ ವಿಷಯವಾದ ಅಭ್ಯಾಸಪತ್ರಿಕೆ ಎಂಬ ಹೆಸರಿನಿಂದ ಪ್ರಕಟಿಸಲಾದ 'ಪ್ರಾಥಮಿಕ ಶಿಕ್ಷಣ' ದ ವಿಶೇಷ ಸಂಚಿಕೆಯಲ್ಲಿಯ ೨೯ನೆಯ ಪುಟದಲ್ಲಿ ಕಂಡುಬರುವ ಗಣಿತ ಅಭ್ಯಾಸದ ಪಟ್ಟಿಯಲ್ಲಿಯ ೩ನೆಯ ಸಾಲಿನಲ್ಲಿ "ಸಂಯುಕ್ತ ಪಾಲುಗಾರಿಕೆ" ಎಂಬ ಶಬ್ದಗಳ ಪೂರ್ವದಲ್ಲಿ "ವೇಳೆ ಕೆಲಸ ಮತ್ತು ವೇಗದ ಸುಲಭ ಉದಾಹರಣೆಗಳು" ಎಂಬ ಶಬ್ದಗಳು ಅಚ್ಚಾಗದೆ ಉಳಿದಿರುವವು. ಆದ್ದರಿಂದ ಈ ಶಬ್ದಗಳನ್ನು ಸೇರಿಸಿಕೊಂಡು ಗಣಿತ ಅಭ್ಯಾಸ ಸಾಗಿಸಬೇಕೆಂದು ಈ ಮೂಲಕ ಸೂಚನೆ ಮಾಡಲಾಗಿದೆ.

—ಸಂಪಾದಕರು.

ayasth, at Ravindra Press, U. B. Hill, (House No. 8936) Dharwar
d by R. K. Lakkundi, Principal, T. C. M., R. V. Desai Principal
d Lady Superintendent T. C. W. Dharwar jointly at the Kannada
, Govt. Training College for Men, Dharwar. 7403—46—1975

ತ್ವರೆಮಾಡಿರಿ

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗಾಗಿ ಹೊಸ ಪುಸ್ತಕಗಳು

ಚಿ. ಶ್ರೀ ಕುಲಕರ್ಣಿಯವರು ತಮ್ಮ ಹದಿನೈದು ವರುಷದ ಅನುಭವದಿಂದ ಹೊಸ ಅಭ್ಯಾಸ ಪತ್ರಿಕೆಯಂತೆ ಅನುಸರಿಸಿ ಇದೀಗ ತಯಾರಿಸಿದ್ದಾರೆ. ಕಾರಣ ಅವನ್ನೇ ಉಪಯೋಗಿಸಿರಿ

ಕೆಳಗಿನ ವರ್ಗಗಳಿಗಾಗಿ

೧ರಿಂದ ೫ನೆಯ ವರ್ಗದ ವರೆಗೆ ಸಾಮಾನ್ಯ ವಿಜ್ಞಾನಗಳು ೧ ರಿಂದ ೬ನೆಯ ವರ್ಗದ ವರೆಗೆ ಭೂಗೋಲ ಪುಸ್ತಕಗಳು. ೧ ರಿಂದ ೭ನೆಯ ವರ್ಗದ ವರೆಗೆ ಪೌರನೀತಿಯ ಪುಸ್ತಕಗಳು.

ಕಥೆಯ ಪುಸ್ತಕಗಳು

೧—೨—೩ ತರಗತಿಯ ಕಥೆಗಳು, ಧ್ರುವ, ಪ್ರಲ್ಹಾದ, ಮಹಾತ್ಮಾಗಾಂಧಿ, ಜವಾಹರಲಾಲ ನೆಹರು, ಸುದಾಮ ಚರಿತ್ರೆ, ಗಜೇಂದ್ರ ಮೋಕ್ಷ, ಕುಮಾರ ರಾಮಣ್ಣ, ಕುಮಾರ ಕಿಟ್ಟಣ್ಣ, ಶ್ರೀಕೃಷ್ಣ ಚರಿತ್ರೆ, ರಾಮಕೃಷ್ಣ ನೀತಿಯ ಕಥೆಗಳು, ಪುರಂದರ ದಾಸರ ಪದಗಳು, ಬದರೀ ಯಾತ್ರೆ ಮುಂತಾದವು.

ಮುಲ್ಕೀಪರೀಕ್ಷೆಗಾಗಿ

ಗಣಿತಸಂಗ್ರಹ
ಇತಿಹಾಸ ಪ್ರಶ್ನೋತ್ತರಮಾಲೆ
ಭೂಗೋಲ ಪ್ರಶ್ನೋತ್ತರಮಾಲೆ
ಭೂಮಿತಿ ಪ್ರಶ್ನೋತ್ತರಮಾಲೆ
ಜಮಾಖರ್ಚ ಪ್ರಶ್ನೋತ್ತರಮಾಲೆ
ಸಾಮಾನ್ಯ ವಿಜ್ಞಾನ ಪ್ರಶ್ನೋತ್ತರಮಾಲೆ
ಆರೋಗ್ಯವಿಜ್ಞಾನ ಪ್ರಶ್ನೋತ್ತರಮಾಲೆ
ವಾಕ್ಯರಚನೆ
ಭಾಷಾಭ್ಯಾಸ
ಸ್ಕಾಲರಷಿಪ್ ಮಾರ್ಗದರ್ಶಿಕೆ
ಪ್ರಶ್ನೋತ್ತರ ಸಂಗ್ರಹ ಮೊದಲಾದ ಅತ್ಯುಪಯುಕ್ತ ಪುಸ್ತಕಗಳಿವೆ.

ಎಲ್ಲ ಪುಸ್ತಕಗಳು ರೋಕಾಗಿಯೂ, ಚಿಲ್ಲರೆಯಾಗಿಯೂ ಸಿಗುವ ಒಂದೇ ಸ್ಥಳ.

ಕೆ. ಎಸ್. ಕುಲಕರ್ಣಿ, ಬುಕ್‌ಡಿಪೋ, ಸ್ಟೇಶನ್‌ರೋಡ ಹುಬ್ಬಳ್ಳಿ.

ಶ್ರೀ. ಪಾವಟೆ ಚೆನ್ನಪ್ಪನವರು ವ್ಯಾಯಾಮ ಸ್ಕೂಲ ಶಿಕ್ಷಕರು ಧಾರವಾಡ ಅವರಿಂದ ರಚಿತವಾದ

ಹೊತ್ತಗೆಗಳು

೧) ಮಕ್ಕಳ ಪದ್ಯಾವಲಿ	೦-೫-೦
೨) ಶಾಂತಿಸಮರ	೦-೪-೦
೩) ಕಿರಣ (ಗದ್ಯಸಂಗ್ರಹ)	೧-೮-೦
೪) ವಿವೇಕ (ಏಕಾಂಕ ನಾಟಕ)	೦-೪-೦

ನಿರಕ್ಷರ ಪ್ರೌಢರ ಸಲುವಾಗಿ ಹೊತ್ತಗೆಗಳು

೫) ಅಶಿಕ್ಷಿತರ ಗೋಳು (ಏಕಾಂಕ ನಾಟಕ)	೦-೩-೦

(ಇದು ಸರಕಾರದಿಂದ ಲಾಯಬ್ರರಿ ಪುಸ್ತಕವೆಂದು ಮಂಜೂರಾಗಿದೆ.)

೬) ವಯಸ್ಕರ ಪದ್ಯಾವಲಿ	೦-೮-೦

ಅಚ್ಚಾಗಲಿರುವ ಪುಸ್ತಕಗಳು

೭) ವಯಸ್ಕರ ಸುರಸ್ಕತೆಗಳು

೮) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ

ನವೀನ ಚೆನ್ನಪ್ಪ ಪಾವಟೆ

ಜಮನಿಲಯ ಪ್ರಕಾಶನ ಸಮಿತಿ, ಲೈನಬಜಾರ ಧಾರವಾಡ

ನೂತನ ಗಣಿತ

ಲೇಖಕರು: ಶ್ರೀ. ಕೆ. ಕೆ. ಗಲಗಲಿ.

ಇದರಲ್ಲಿ ಗಣಿತ ವಿಷಯವಲ್ಲದೆ ೫ನೆಯ ಇಯತ್ತೆಯ ಭೂಮಿತಿ ಮತ್ತು ದೇಶಿ ಜಮಾಖರ್ಚಿನ ವಿಷಯಗಳೂ ಇವೆ. ಬೆಲೆ ೧—೪—೦ ಇದಲ್ಲದೆ ನಮ್ಮಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಎಲ್ಲ ತರದ ಪುಸ್ತಕಗಳೂ ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ರೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆಳಗಿನ ಪತ್ತೆಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ

ವಿಜಯರೋಡ, ಧಾರವಾಡ

కవి సమ్రాట్ విశ్వనాథ



ಪರಿವಿಡಿ

ವಾರ್ಷಿಕ ಚಂದಾ: ೪ ರೂಪಾಯಿ] [ಜುಲೈ ೧೯೪೮] [ಬಿಡಿ ಸಂಚಿಕೆ: ಆರು ಆಣೆ

*

೧. ಸಂಪಾದಕೀಯ	....	೧
೨. ಇಂದಿನ ರಾಷ್ಟ್ರೀಯ ಶಿಕ್ಷಕನ ಮುನ್ನೋಟ....	.... ಶ್ರೀಮತಿ ಚ. ಶೀ. ಶಕುಂತಲಾಬಾಯಿ	೫
೩. ಪದವೀಧರ ರಾಷ್ಟ್ರೀಯ ಶಿಕ್ಷಣ ಕೇಂದ್ರದ ಒಂದು ದಿನದ ಕಾರ್ಯಕ್ರಮ	....	೧೧
೪. ಬಾಲ್ಕನ್-ಜಿ-ಬಾರಿ	....	೧೨
೫. ಪ್ರೌಢನೇ ಮೋಜು ನೋಡು (ಕವನ)	.... ಶ್ರೀ. ಪಾವಟೆ ಚಿನ್ನಪ್ಪನವರು	೧೭
೬. ಶಿಕ್ಷಣವೂ ಧರ್ಮಗಳೂ	.... ಶ್ರೀ. ಎಂ. ಎಸ್. ದೂದಿಹಳ್ಳಿ	೧೮
೭. ಶಿಕ್ಷಣದಲ್ಲಿ ಪಠ್ಯೇತರ ಚಟುವಟಿಕೆಗಳು	.... ಶ್ರೀ. ಶಿ. ಭಿ. ಹುಡೇದ	೨೦
೮. ಪ್ರೌಢ ಶಿಕ್ಷಣ ಮತ್ತು ಶಿಕ್ಷಕ	.... ಶ್ರೀ. ಶಿವಶಂಕರ ಹಿಳ್ಳಿ	೨೨
೯. ಪದವೀಧರ ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರದಲ್ಲಿಯ ನನ್ನ ಅನುಭವಗಳು	.... ಶ್ರೀ. ವೀರೇಶ ಹಿರೇಮಠ	೨೫
೧೦. ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಚಟುವಟಿಕೆಗಳು	....	೨೭
೧೧. ಬಾನುಲಿಯ ಮೂಲಕ ಮಕ್ಕಳ ಶಿಕ್ಷಣ	.... ಶ್ರೀ. ರಾಜಕುಮಾರಿ ಅಮೃತ ಕೌರ	೨೮
೧೨. ನಾನು ಶಿಕ್ಷಿಕೆಯಾದುದು ಏಕೆ?	.... ಓರ್ವ ಶಿಕ್ಷಕ ವಿದ್ಯಾರ್ಥಿನಿ	೩೦
೧೩. ಹಿಂದುಸ್ಥಾನ ಸ್ಕೌಟ ಮತ್ತು ಬಾಯಸ್ಕೌಟ ಸಂಸ್ಥೆಗಳ ಏಕೀಕರಣ	.... ಶ್ರೀ. ಕೆ. ಜಿ. ಹಲಸಿಗಿ	೩೨
೧೪. ಶೈಕ್ಷಣಿಕ ಚಟುವಟಿಕೆಗಳು ಮತ್ತು ಗ್ರಂಥಾವಲೋಕನ.	.... ರಕ್ಷಾ ಪತ್ರದ ೩ನೆಯ ಪುಟ	

ಶ್ರೀ. ವಿರುಪಾಕ್ಷಪ್ಪ ಕೊಟ್ರಪ್ಪ ಜವಳಿ ಅವರ ಅಮೇರಿಕೆಯ ಪ್ರಯಾಣ.



ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಮಾನಸಶಾಸ್ತ್ರದ ಅಧ್ಯಾಪಕರಾಗಿದ್ದ ಶ್ರೀ ಮಾನ್ ವಿ. ಕೊ. ಜವಳಿ ಅವರಿಗೆ ಕೇಂದ್ರಸರಕಾರದವರು ಶಿಷ್ಯವೃತ್ತಿಯನ್ನುಕೊಟ್ಟು ನ್ಯೂಯಾರ್ಕದಲ್ಲಿರುವ ಕೋಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಎರಡು ವರುಷ ಇದ್ದು ಮಕ್ಕಳಿಗೆ ಓದು ಕಲಿಸುವುದರ ಸಂಬಂಧದಲ್ಲಿ ಪಿ. ಎಚ್. ಡಿ. ಪದವಿಯನ್ನು ಸಂಪಾದಿಸಿಕೊಂಡು ಬರಲು ಅಮೇರಿಕೆಗೆ ಕಳಿಸುವ ನಿರ್ಧಾರವನ್ನು ಮಾಡಿದ್ದಾರೆ. ಈ ನಿರ್ಧಾರದ ಮೇರೆಗೆ ಶ್ರೀಮಾನ್ ಜವಳಿಯವರು ಇದೇ ಅಗಸ್ಟ ೨೩ಕ್ಕೆ ಕಲಕತ್ತೆಯಿಂದ ವಿಮಾನ ಮಾರ್ಗವಾಗಿ ಅಮೇರಿಕೆಗೆ ತೆರಳುವರು. ಅವರು ಕಲಕತ್ತೆಯಿಂದ ಹಾಂಕಾಂಗದ ವರೆಗೆ ವಿಮಾನದಿಂದ, ನಂತರ ಅಲ್ಲಿಂದ ಶಾಂಘಾಯಿ, ಹೊನೊಲುಲು ಮಾರ್ಗವಾಗಿ ಸ್ಯಾನ್ ಫ್ರಾನ್ಸಿಸ್ಕೋಕ್ಕೆ ಹಡಗದಿಂದ, ಸ್ಯಾನ್ ಫ್ರಾನ್ಸಿಸ್ಕೋದಿಂದ ನ್ಯೂಯಾರ್ಕಕ್ಕೆ ರೈಲು ಮಾರ್ಗದಿಂದ ಹೋಗಿ ಸಪ್ಟಂಬರ ೧೧ಕ್ಕೆ ಕೋಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಹಾಜರಾಗುವರೆಂದು ತಿಳಿಯುತ್ತದೆ.

ಶ್ರೀ. ಜವಳಿ ಅವರ ಜೀವನ ಮೊದಲು ಕಷ್ಟ ಪರಂಪರೆಯಲ್ಲಿ ಕಳೆದುದು. ಅನೇಕ ಎಡರು-ತೊಡರುಗಳನ್ನು ಎದುರಿಸಿ ಬಿ. ಎ., ಬಿ. ಟಿ., ಡಿಪ್. ಇಡಿ., ಎಂ. ಇಡಿ. ಆಗಿದ್ದಾರೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಇವರಿಗೆ ಅಭಿರುಚಿ ಬಹಳ. ಮಕ್ಕಳ ಬುದ್ಧಿಮಾಪನಮಾಡಿ ಮುಂಬಯಿ ವಿಶ್ವವಿದ್ಯಾಲಯದ ಎಂ. ಇಡಿ. ಡಿಗ್ರಿಯನ್ನು ಪಡೆದರು. ಮಕ್ಕಳಿಗೆ ಓದು ಕಲಿಸುವ ಸಂಬಂಧವಾಗಿ ಸಂಶೋಧನೆಯನ್ನೂ ಮಾಡುತ್ತಿದ್ದರು. ಒಂದು ಬಾರಿ ಕೈಯಲ್ಲಿ ಹಿಡಿದ ಕೆಲಸವನ್ನು ಮುಗಿಸಿ ಬಿಡುವಂಥ ಸ್ವಭಾವ ಇವರದು. ಸಾದಾ ಜೀವಿಗಳು; ಕನ್ನಡ, ಕನ್ನಡ ಸಂಸ್ಕೃತಿ ಮತ್ತು ಕರ್ನಾಟಕ ಎಂಬ ಮೂರು ನುಡಿಗಳು ಇವರ ಉಸಿರಾಗಿವೆ. ಈ ಉಸಿರಿನ ಪರಿಣಾಮವಾಗಿ ಕನ್ನಡದಲ್ಲಿ ಶೈಕ್ಷಣಿಕ ಮಾನಸಶಾಸ್ತ್ರ ಎಂಬ ಪುಸ್ತಕವನ್ನೂ ಬರೆದಿರುವರು.

ಟ್ರೇನಿಂಗ ಕಾಲೇಜಿನಿಂದ—ಪ್ರಾಥಮಿಕ ಶಿಕ್ಷಣ ಕ್ಷೇತ್ರದಿಂದ ಉಚ್ಚ ವಿದ್ಯಾಧ್ಯಯನಕ್ಕಾಗಿ ವಿದೇಶಕ್ಕೆ ಹೋಗುವವರಲ್ಲಿ ಇವರೇ ಮೊದಲಿಗರು. ಇವರನ್ನು ೧೦-೭-೪೮ನೆಯ ದಿನಾಂಕದಲ್ಲಿ ಟ್ರೇನಿಂಗ ಕಾಲೇಜದ ಮತ್ತು ಪ್ರ್ಯಾಕ್ಟಿಸಿಂಗ ಸ್ಕೂಲಿನ ಅಧ್ಯಾಪಕರೂ, ಟ್ರೇನಿಂಗ ಕಾಲೇಜಿನ ಶಿಕ್ಷಕ ವಿದ್ಯಾರ್ಥಿಗಳೂ ಹೃತ್ಪೂರ್ವಕವಾಗಿ ಬೀಳ್ಕೊಂಡು ಇವರಿಗೆ ಯಶಸ್ಸನ್ನೂ ಸುಖ ಪ್ರಯಾಣವನ್ನೂ ಕೋರಿದರು.

—ಸಂಪಾದಕರು.

(೪ನೆಯ ಪುಟದಿಂದ ಬಂದದ್ದು)

ಶಿಕ್ಷಣ ಸುಧಾರಣೆಯ ಯೋಜನೆಯಲ್ಲಿ ಮುಂಬಯಿ ಸರಕಾರವು ಲಲಿತ ಕಲೆ, ಸಂಗೀತ ಹಾಗೂ ಸಾಂಸ್ಕೃತಿಕ ಶಿಕ್ಷಣಕ್ಕಾಗಿ ೨೧ ಲಕ್ಷ ರೂಪಾಯಿಗಳನ್ನು ಮೀಸಲಾಗಿರಿಸಿದೆಯೆಂದು ಸಾರಿರುವರು. ಕಲೆಯು ಮಾನವನ ನೈಸರ್ಗಿಕ ಆತ್ಮವನ್ನು, ಶಕ್ತಿಯನ್ನು ಹೊರಹೊಮ್ಮಿಸುವ ಶ್ರೇಷ್ಠ ಸಾಧನವು. ಇದರಿಂದ ಮಾನವನ ಜೀವನವು ಸಮೃದ್ಧಗೊಳ್ಳುವದು ಎಂದು ಶ್ರೀಮಾನ್ಯ ಖೇರರು ನುಡಿದರು. ಮುಂಬಯಿ ಸರಕಾರದ ಈ ಕಲಾ-ಶಿಕ್ಷಣ ಪ್ರೇಮವು ಪ್ರಶಂಸನೀಯವೂ ಅಭಿನಂದನೀಯವೂ ಆಗಿದೆ.

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು: ರ. ಕೃ. ಲಕ್ಕುಂಡಿ.

ಸಂ. ೮೮.	ಜುಲೈ ೧೯೪೮.	ಸಂಚಿಕೆ ೨.

ಸಂಪಾದಕೀಯ

ಮೂಲಶಿಕ್ಷಣದ ಮುನ್ನಡೆ :

ಪೂಜ್ಯ ಬಾಪೂಜಿಯವರಿಂದ ಜನ್ಮನೆತ್ತಿದ ಮೂಲ ಶಿಕ್ಷಣವು ದಿನ ದಿನಕ್ಕೆ ದೇಶದ ಮೂಲೆ ಮೂಲೆಗಳಲ್ಲಿಯೂ ಹರಡಹತ್ತಿರುವದು ಈ ದೇಶದ ಉತ್ಕರ್ಷದ ಸೂಚನೆಯಾಗಿದೆ. ವಿವಿಧ ಪ್ರಾಂತಗಳಲ್ಲಿ ಅದರ ಪ್ರಯೋಗಾವಸ್ಥೆಯು ಮುಗಿದು ಹೊಸ ಶಿಕ್ಷಣ ಯೋಜನೆಯು ಕ್ರಮೇಣ ವಿಸ್ತಾರ ಹೊಂದುತ್ತಲಿದೆ. ಮುಂಬಯಿ ಪ್ರಾಂತದಲ್ಲಿಯೂ, ವಿಶೇಷತಃ ಕರ್ನಾಟಕದಲ್ಲಿ, ಈ ಯೋಜನೆಯ ಕಾರ್ಯಕ್ರಮವು ಹೆಚ್ಚು ಆಸ್ಥೆಯಿಂದಲೂ ಭರದಿಂದಲೂ ಮುಂದೆ ಸಾಗುತ್ತಲಿದೆ. ಮೂಲ ಶಿಕ್ಷಣವು ೧೯೩೯ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ಮೂಲ ಶಿಕ್ಷಣ ಕೇಂದ್ರದಲ್ಲಿಯೂ ಅದರ ಪ್ರಾಯೋಗಿಕ ಕ್ಷೇತ್ರದಲ್ಲಿಯೂ (Compact Area) ಮೊದಲು ಪ್ರಾರಂಭವಾಗಿ ನಂತರ ಒಕ್ಕಲತನದ ಒಲವಿನ ಸಾಲೆಗಳಿಗೂ ಅದರ ಪ್ರಸಾರವಾಯಿತು. ೧೯೪೬ರಲ್ಲಿ ಒಕ್ಕಲತನದ ಒಲವಿನ ಸಾಲೆಗಳ ಮುಖ್ಯಾಧ್ಯಾಪಕರುಗಳಿಗಾಗಿ ಮೂರು ವಾರಗಳ ಮೂರು ತರಬೇತಿ ವರ್ಗಗಳು ಧಾರವಾಡದಲ್ಲಿ ನಡೆದವು ಇತ್ತೀಚಿಗೆ, ಎಲ್ಲ ಪ್ರಾಥಮಿಕ ಸಾಲೆಗಳಲ್ಲಿಯೂ ಮೂಲ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ ಉದ್ದೇಶದಿಂದ ಪ್ರಾಥಮಿಕ ಸಾಲೆಗಳ ಶಿಕ್ಷಕರಿಗೆ ನೂಲುವ ಹಾಗು ನೇಯುವ ಉದ್ಯೋಗಗಳಲ್ಲಿ ಮೂರುವರೆ ತಿಂಗಳುಗಳ ತರಬೇತಿ ವರ್ಗಗಳು ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಸರಕಾರದಿಂದ ನಡೆಯುತ್ತಿರುವವು. ಇತ್ತಿತ್ತಲಾಗಿ ದಿಲ್ಲಿಯ ಜಾಮಿಯಾ-ಮಿಲಿಯಾ-ಇಸ್ಲಾಮಿಯಾ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದ ಕೆಲವೊಂದು ಶಿಕ್ಷಕರಿಂದ ಕಾಗದದ ಹಾಗು ರಟ್ಟಿನ ಕೈಕೆಲಸದ ತರಬೇತಿ ವರ್ಗಗಳೂ ನಡೆಯುತ್ತಲಿವೆ. ಕಾಗದದ ಹಾಗು ರಟ್ಟಿನ ಕೈಕೆಲಸವನ್ನು ಪ್ರಾಥಮಿಕ ಸಾಲೆಗಳಲ್ಲಿ ಮೂಲ ಉದ್ಯೋಗವನ್ನಾಗಿ ಕೈಕೊಳ್ಳುವ ವಿಚಾರವಿದೆ. ಇದಲ್ಲದೆ, ಮೂಲ ಶಿಕ್ಷಣವನ್ನು ಎಲ್ಲ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರ ಟ್ರೇನಿಂಗ ಕಾಲೇಜಗಳಲ್ಲಿ ಪ್ರಾರಂಭಿಸಬೇಕೆಂದಿರುವ ಸರಕಾರದವರ ಧೋರಣೆಯು ಪ್ರಶಂಸನೀಯವಾಗಿದೆ.

ಪ್ರಾಥಮಿಕ ಶಿಕ್ಷಕರಿಗಷ್ಟೇ ಅಲ್ಲದೆ ಪದವೀಧರರಿಗೂ ವರ್ಧಾ ಶಿಕ್ಷಣ ಯೋಜನೆಯ ಪರಿಚಯವಾಗಬೇಕೆಂಬ ದೃಷ್ಟಿಯಿಂದ ಪುಣೆಯಲ್ಲಿ ಐದು ವಾರಗಳ ತರಬೇತಿ ವರ್ಗಗಳನ್ನು ಒಂದು ವರುಷ ಕಾಲ ಸಾಗಿಸಿ, ನಂತರ ಬೆಳಗಾವಿಯ ಬಿ. ಟಿ. ಕಾಲೇಜದಲ್ಲಿ ಕಳೆದ ವರುಷ ಒಂದು ಪೂರ್ಣ ವರ್ಷದ ತರಬೇತಿಯ ವ್ಯವಸ್ಥೆಯನ್ನು ಮಾಡಲಾಯಿತು. ಅದರೆ ಈ ವರ್ಷ, ಈ ಪ್ರಾಂತದ ಮೂರು ಪ್ರಾದೇಶಿಕ ಭಾಷೆಗಳಿಗನುಸರಿಸಿ ಗುಜರಾಥ (ಅಹಮ್ಮದಾಬಾದ), ಮಹಾರಾಷ್ಟ್ರ (ಬೋರ್ಡಿ), ಕರ್ನಾಟಕ (ಧಾರವಾಡ) ಈ ವಿಭಾಗಗಳಲ್ಲಿ ಇದೇ ಜೂನ ತಿಂಗಳಿಂದ ಪದವೀಧರರ ಮೂಲ ಶಿಕ್ಷಣ ಕೇಂದ್ರಗಳನ್ನು ಸರಕಾರದವರು ತೆರೆದಿದ್ದಾರೆ. ಈ ಕೇಂದ್ರಗಳಿಗೆ ಬಿ. ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾದಂಥವರನ್ನು ಆರಿಸಿ ಅವರಿಗೆ ಹೊಸ ಶಿಕ್ಷಣಕ್ಕೆ ಅವಶ್ಯವಾದ ಹೆಚ್ಚಿನ ತರಬೇತಿಯನ್ನು ಪ್ರಾದೇಶಿಕ ಭಾಷೆಗಳ ಮೂಲಕ ಕೊಡಲಾಗುವದು.

ಈ ಪ್ರಕಾರವಾಗಿ ಪ್ರಾಥಮಿಕ ಸಾಲೆಗಳ ವಿದ್ಯಾರ್ಥಿಗಳಿಂದ ಪದವೀಧರರ ವರೆಗೂ ಮೂಲ ಶಿಕ್ಷಣವು ಮುಂದಡಿಯನ್ನಿಡುತ್ತಿರುವದು ಆನಂದದಾಯಕವಾದ ಸಂಗತಿಯಾಗಿದೆ.

ಪದವಿಧರರ ಮೂಲ ಶಿಕ್ಷಣ ಕೇಂದ್ರ, ಧಾರವಾಡ.

ಧಾರವಾಡದಲ್ಲಿ ಸ್ಥಾಪಿತವಾದ ಪದವೀಧರರ ಮೂಲ ಶಿಕ್ಷಣ ಕೇಂದ್ರದ ಪ್ರಿನ್ಸಿಪಾಲರ ಸ್ಥಳಕ್ಕೆ ಶ್ರೀ. ಕೆ. ಬಿ. ತೇರಗಾಂವಕರ ಅವರು ನೇಮಕ ಹೊಂದಿದ್ದಾರೆ. ಇವರು ಅಚ್ಚುಗನ್ನಡಿಗರಿದ್ದು ಈ ಮೂಲಶಿಕ್ಷಣ ಕೇಂದ್ರದಲ್ಲಿ ತುಂಬ ಸುರಿತವರು. ಇವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಪದವೀಧರರ ಮೂಲ ಶಿಕ್ಷಣ ಕೇಂದ್ರವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಪ್ರಥಮ ಭಾರತೀಯ ಗವ್ಹರ್ನರ ಜನರಲ್:

ಇಂದಿನ ಜೂನ್ ೨೧ನೆಯ ತಾರೀಖು ಹಿಂದುಸ್ತಾನದ ಇತಿಹಾಸದಲ್ಲಿ ಮಹತ್ವಪೂರ್ಣವಾದ ದಿನ. ಅಂದು ಭಾರತೀಯ ಸುಪುತ್ರರಲ್ಲೊಬ್ಬರಾದ ಮಾನ್ಯ ಶ್ರೀ. ಚಕ್ರವರ್ತಿ-ರಾಜಗೋಪಾಲಾಚಾರಿಯವರು ಹಿಂದುಸ್ತಾನದ ಗವ್ಹರ್ನರ-ಜನರಲ್ ಪಟ್ಟವನ್ನು ಅಲಂಕರಿಸಿದುದು ಭಾರತೀಯರಿಗೆಲ್ಲ ಅತ್ಯಂತ ಹೆಮ್ಮೆಯ ಹಾಗೂ ಆನಂದದಾಯಕವಾದ ಸಂಗತಿಯಾಗಿದೆ. ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರಿಯವರು ರಾಜನೀತಿಪಟುಗಳಲ್ಲದೆ ಒಳ್ಳೆಯ ಶಿಕ್ಷಣತಜ್ಞರೂ ಸಾಹಿತಿಗಳೂ, ಸಾದಾ ನಿರ್ಮಲ ಜೀವಿಗಳೂ ಆಗಿರುವರು. ಗವ್ಹರ್ನರ-ಜನರಲ್ಲರ ಸ್ಥಳವನ್ನು ಅಲಂಕರಿಸಿದ ಕೂಡಲೇ ಅವರು ಹೇಳಿದ ಮಾತುಗಳು ಮನನೀಯವಾಗಿವೆ. ಅವು ಇಂತಿವೆ:

"ಇನ್ನು ಹಿಂದುಸ್ತಾನದಲ್ಲಿ ಅರಸೊತ್ತಿಗೆಯ ಮತ್ತು ಮುಂಗೈ ಜೋರಿನ ಆಳಿಕೆಯ ದಿನಗಳುಕಳೆದುವು. ಪ್ರಾದೇಶಿಕ ಅಥವಾ ಜಾತೀಯ ಅಥವಾ ಧಾರ್ಮಿಕ ಸಮಾಜಗಳ ಜನತೆಯ ಸಂಪೂರ್ಣ ಬೆಂಬಲ ಮತ್ತು ಸಹಕಾರವಿಲ್ಲದ ಮುಂಗೈ ಜೋರಿನ ಬಲದಿಂದ ಸುಖವಾಗಿ ಬಾಳುವ ಆಶೆಯನ್ನು ಇಟ್ಟುಕೊಳ್ಳಲಾರವು. ಆದ್ದರಿಂದ ಜಾತೀಯ ಮತ್ತು ಪ್ರಾದೇಶಿಕ ಸಂಕುಚಿತ ಭಾವವನ್ನು ತೊರೆಯುವುದು ಅವಶ್ಯಕವಾದುದು. ಪ್ರತಿಯೊಂದು ಸಮಾಜದಲ್ಲಿಯ ಅತ್ಯುತ್ತಮ ಬುದ್ಧಿಮತ್ತೆಯುಳ್ಳವರು ಇಡಿ ದೇಶದ ಸೇವೆ ಮಾಡಲು ಉದ್ಯುಕ್ತರಾಗಬೇಕು. ಸಮಾಜಗಳು ತಾವಾಗಿಯೆ ಹರಡಬೇಕೆ ಹೊರತು ನಾಲ್ಕು ಗೋಡೆಗಳ ನಡುವೆ ತಮ್ಮನ್ನು ಬಂಧಿಸಿಟ್ಟುಕೊಳ್ಳಬಾರದು."

ಈ ಅತ್ಯುತ್ತಮ ಸಂದೇಶದ ಮಾತುಗಳನ್ನು ನೋಡಿದರೆ ಪ್ರಥಮ ಭಾರತೀಯ ಗವ್ಹರ್ನರ-ಜನರಲ್ಲರ ಆಳಿಕೆಯ ಹಿಂದುಸ್ತಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹದಾಗುವುದರಲ್ಲಿ ಸಂದೇಹವಿಲ್ಲ. ಇವರ ಕಾಲದಲ್ಲಿ ಭಾರತದ ಶಿಕ್ಷಣದ ಮಟ್ಟವು ಏರಿ, ಭಾರತವು ಜಗತ್ತಿನ ಸದ್ಗುರು ಪದವನ್ನು ಪಡೆದು, ಪ್ರಾಚೀನ ಭಾರತದ ಕೀರ್ತಿಧ್ವಜವನ್ನು ಎತ್ತಿ ಹಿಡಿಯುವುದೆಂದು ಆಶಿಸಲಾಗಿದೆ. ಪ್ರಥಮ ಭಾರತೀಯ ಗವ್ಹರ್ನರ-ಜನರಲ್ಲರನ್ನು ನಾವು ಅಭಿನಂದಿಸುತ್ತೇವೆ ಮತ್ತು ಅವರಿಗೆ ಪರಮಾತ್ಮನು ಭಾರತದ ಸರ್ವಾಂಗ ಸುಂದರ ಕಲ್ಯಾಣ ಮಾಡುವ ಶಕ್ತಿಯನ್ನು ಮತ್ತು ಆಯುರಾರೋಗ್ಯವನ್ನು ಕೊಡಲೆಂದು ಹಾರೈಸುತ್ತೇವೆ.

ಕಲಾ ಶಿಕ್ಷಣ:

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳೂ ಶಿಕ್ಷಣ ಮಂತ್ರಿಗಳೂ ಆದ ಶ್ರೀಮಾನ್ಯ ಬಿ. ಜಿ. ಖೇರ ಅವರು ಮುಂಬಯಿಯಲ್ಲಿ ಸೇರಿದ ಮೂರನೆಯ ಅಖಿಲ ಭಾರತ ಕಲಾ ಪ್ರದರ್ಶನವನ್ನು ಉದ್ಘಾಟಿಸುತ್ತ ಯುದ್ಧೋತ್ತರ

ಇಂದಿನ ರಾಷ್ಟ್ರೀಯ ಶಿಕ್ಷಕನ ಮುನ್ನೋಟ

ಲೇಖಿಕೆಯರು: **ಶ್ರೀಮತಿ ಚ. ಶೇ. ಶಕುಂತಲಾಬಾಯಿ,** ಬಿ. ಎ. (ಆನರ್ಸ್)., ಬಿ. ಟಿ.
ಅಧ್ಯಾಪಿಕೆಯರು ವರ್ಧಾರಾಷ್ಟ್ರೀಯ ಅಧ್ಯಾಪನ ಕೇಂದ್ರ, ಧಾರವಾಡ.

●

" ಗುರು ಉಪದೇಶವಿಲ್ಲದ ಜ್ಞಾನ
ಗುರು ಉಪದೇಶವಿಲ್ಲದ ಯೋಗ
ಗುರು ಉಪದೇಶವಿಲ್ಲದ ಕ್ರಿಯೆಗಳು
ಉರಗನ ಉರವಾಸದಂತೆ ಕಾಣಿರೋ. "

ಶ್ರೀ ಪುರಂಧರ ವಿಠಲ.

ನವಯುಗದ ನವಸಮಾಜ.

ಇಲ್ಲಿಯವರೆಗೆ ಪರಕೀಯರ ಆಳಿಕೆಯಿಂದ ಹೇಗೆ ಮುಕ್ತಿಯನ್ನು ಹೊಂದಿ, ಸ್ವಾತಂತ್ರ್ಯ ಪಡೆಯಬೇಕೆಂಬುದೇ ನಮ್ಮ ರಾಷ್ಟ್ರದ ಮುಂದಿರುವ ಸಮಸ್ಯೆಯಾಗಿದ್ದಿತು. ಅನೇಕ ಜನರನ್ನು ಬಲಿಗೊಟ್ಟು ರಾಷ್ಟ್ರದ ಸ್ವಾತಂತ್ರ್ಯವನ್ನು ಈಗ ಪಡೆದಿದ್ದಾಗಿದೆ. ಇನ್ನು, ಸಿಕ್ಕಿರುವ ಈ ಸ್ವಾತಂತ್ರ್ಯವನ್ನುಳಿಸಿಕೊಂಡು ನಮ್ಮ ಆಡಳಿತೆಯನ್ನು ನಾವೇ ನಡೆಸಿಕೊಂಡು ಹೋಗುವದಕ್ಕೆ ಎಂಥ ಶಿಕ್ಷಣ ಬೇಕೆಂಬುದೇ ಈಗಿನ ಸಮಸ್ಯೆಯಾಗಿದೆ. ಇದು ಮೊದಲಿನ ಸಮಸ್ಯೆಗಿಂತಲೂ ಹೆಚ್ಚು ಕಠಿಣವಾದುದು. ಏಕೆಂದರೆ ಸ್ವಾತಂತ್ರ್ಯ ಸಿಕ್ಕನಂತರ ದೇಶದಲ್ಲಿ ಎಂದೂ ಇಲ್ಲದ ಕೊಲೆ, ಸುಲಿಗೆ, ಅನ್ಯಾಯಗಳು ತಲೆ ಎತ್ತಿ ನಿಂತಿವೆ. ಈ ವಿಷಮ ವಾತಾವರಣವು ಪರಕೀಯರು ತಮ್ಮ ಹಿಂದೆ ಬಿಟ್ಟು ಹೋದ ಬೇಣಗೆ. ಈ ವಾತಾವರಣವು ಶುದ್ಧವಾಗಿ ಜನತೆಯು ಸುಖ ಸಮಾಧಾನಗಳಿಂದ ಬಾಳಬೇಕಾದರೆ ಈಗಿದ್ದ ಸಮಾಜದಲ್ಲಿ ಅನೇಕ ಬದಲಾವಣೆಗಳು ಆಗಬೇಕಾದುದು ಅವಶ್ಯವಿದೆ. ಶಾಂತಿ ಮಂತ್ರವನ್ನು ಅವಲಂಬಿಸಿದ ನೂತನ ಸಮಾಜದ ರಚನೆಯು ಆಗಬೇಕಾಗಿದೆ. ಈ ಕಾರ್ಯವು ಶಿಕ್ಷಕರಿಂದಲೇ ಸಾಧ್ಯವಾಗಬಲ್ಲದೆಂಬುದನ್ನು ಮಹಾತ್ಮಾ ಗಾಂಧಿಯವರು ಮನಗಂಡು ತಮ್ಮ ಎಲ್ಲ ವಿಧಾಯಕ ಕಾರ್ಯ ಕ್ರಮಗಳಲ್ಲಿ ಅತ್ಯಂತ ಮಹತ್ವದ ರಾಷ್ಟ್ರೀಯ ಶಿಕ್ಷಣದ ಯೋಜನೆಯನ್ನು ಸೇರಿಸಿದರು.

ಆಂಗ್ಲರ ಆಳಿಕೆಯಲ್ಲಿ ಸರಕಾರದ ಬೆನ್ನೆಲಬು ಸೈನ್ಯ ಹಾಗೂ ಪೋಲೀಸ ಪಡೆಯಾಗಿದ್ದರೆ, ಮ. ಗಾಂಧಿಯವರ ಕನಸಿನ ರಾಮರಾಜ್ಯದ, ಸ್ವತಂತ್ರ ಭಾರತದ ಬೆನ್ನೆಲಬು ರಾಷ್ಟ್ರೀಯ ಶಿಕ್ಷಕರಾಗಿದ್ದಾರೆ. ಏಳು ಲಕ್ಷ ಹಳ್ಳಿಗಳಲ್ಲಿರುವ ಜನರು ತಮ್ಮ ಆಡಳಿತೆಯನ್ನು ತಾವೇ ಸಾಗಿಸಿಕೊಳ್ಳುವಂತೆ ಸ್ವಾವಲಂಬಿಗಳಾಗಬೇಕಾದರೆ, ಹಳ್ಳಿಗಳಲ್ಲಿಯೇ ವಾಸ ಮಾಡಿಕೊಂಡಿದ್ದು ಹಳ್ಳಿಗರ ಕಷ್ಟ ನಷ್ಟಗಳನ್ನು ಅರಿತುಕೊಳ್ಳಬಲ್ಲ ಹಾಗೂ ಅವರ ಸೇವೆಗೆ ಟೊಂಕ ಕಟ್ಟಿ ನಿಂತಿರುವ ಶಿಕ್ಷಕರ ಕಡೆಗೇ ಇಂದಿನ ಸರಕಾರವೂ ಜನತೆಯೂ ಆಶಾಪೂರ್ಣ ದೃಷ್ಟಿಯಿಂದ ನೋಡುತ್ತಿವೆ. ಶಿಕ್ಷಕ ಕುಲವೇ ಸ್ವತಂತ್ರ ಭಾರತದ ಹಳ್ಳಿಗಳಲ್ಲಿಯ ನಂದಾ ದೀಪ. ಇದು ಎಂದೂ ನಂದದ ದೀಪ. ಹಿಂದೆಯೂ (ರಾಜಕಾರಣಿಗಳ ಸ್ವಾರ್ಥ ಹಾಗೂ ವ್ಯಾಪಾರಿಗಳ ಲೋಭದ ಪ್ರಕ್ಷುಬ್ಧ ವಾತಾವರಣದಲ್ಲಿಯೂ) ಶಿಕ್ಷಕರು ಅತ್ಯಲ್ಪ ವೇತನವನ್ನು ಪಡೆಯುತ್ತ ನೇಗಿಲ ಯೋಗಿಯಂತೆಯೇ ಇವರೂ ಸಹ ಜ್ಞಾನ ಯೋಗಿಗಳಾಗಿ ದೇಶದ ಸೇವೆ ಮಾಡಿದ್ದಾರೆ. ಇಂದೂ ಮಾಡುತ್ತಲಿದ್ದಾರೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ನವ ಜಾಗೃತಿಯುಂಟಾಗಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅವರೂ ಈಗ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ. ಆದರೆ ಇನ್ನು ಮುಂದೆ ಆಗಬೇಕಾಗಿರುವ ರಾಷ್ಟ್ರ ನಿರ್ಮಾಣ ಕಾರ್ಯವು ಇದಕ್ಕಿಂತ ಸಾವಿರ ಪಟ್ಟು ಗುರುತರವಾಗಿರುವದು

ಶಿಕ್ಷಕನು ಮೊದಲಿನಂತೆ ಈಗ ಕೇವಲ ಪುಸ್ತಕೀಯ ಜ್ಞಾನವನ್ನು ಕೊಡುವ ಶಿಕ್ಷಕನಷ್ಟೇ ಅಲ್ಲ; ಅವನೀಗ ಗ್ರಾಮ

ಸೇವಕನೂ ಗ್ರಾಮಸುಧಾರಕನೂ ಆಗಿರುವನು. ಭಾವಿ ಗ್ರಾಮ-ಸಮಾಜವು ಸ್ವಾವಲಂಬನದಿಂದ ಕೂಡಿರಬೇಕಾದರೆ ಈಗಿನಂತೆ ಹಳ್ಳಿಗರು ತಮ್ಮ ಜೀವನಾವಶ್ಯಕ ವಸ್ತುಗಳಿಗಾಗಿ ನಗರಗಳನ್ನವಲಂಬಿಸಿ ಕೂಡಬಾರದು. ಮತ್ತು ಅವರು ತಮ್ಮ ಪ್ರಾಣಧಾರಣೆಗೆ ಅವಶ್ಯಕವಾದ ಆಹಾರ, ಉಡಿಗೆ ಮುಂತಾದವುಗಳನ್ನು ತಾವೇ ನಿರ್ಮಾಣ ಮಾಡಿಕೊಳ್ಳಲು ಕಲಿಯಬೇಕು. ಇವುಗಳ ಉತ್ಪಾದನೆಯಿಂದಲೇ ಹಳ್ಳಿಗರ ಶಕ್ತಿಯು ಅಭಿವೃದ್ಧಿಯಾಗುವದು. ಈ ಶಕ್ತಿಯನ್ನೇ ಆಂಗ್ಲರು ಇಲ್ಲಿಯ ವರೆಗೆ ನಮ್ಮ ಹಳ್ಳಿಗರಿಂದ ಕಸಿದುಕೊಂಡಿದ್ದರು. ಆಂಗ್ಲರ ಆಳಿಕೆಯ ಪೂರ್ವದಲ್ಲಿದ್ದಂತೆಯೇ ಹಳ್ಳಿಗಳನ್ನು 'ಪಂಚಾಯತ'ರ ಆಡಳಿತೆಯಲ್ಲಿ ಪುನಃ ಸ್ವಯಂಪೂರ್ಣತೆ ಹಾಗೂ ಸ್ವಾವಲಂಬನದ ಕಾಲುಗಳ ಮೇಲೆ ನಿಲ್ಲಿಸಬೇಕಾಗಿದೆ. ಈದೃಷ್ಟಿಯಿಂದ ನೋಡಲಾಗಿ, ಶಿಕ್ಷಕನು ಹಳ್ಳಿಗರಿಗೆ ಆದರ್ಶ ವ್ಯಕ್ತಿಯಾಗಬೇಕಾದರೆ ಸ್ವತಃ ತಾನು ಉದ್ಯೋಗ ಮಾಡುವವನಾಗಬೇಕು. ಅರ್ಥಾತ್ ಅನ್ನ-ವಸ್ತ್ರ ಸ್ವಾವಲಂಬನವನ್ನು ಪಡೆದು ವೈಯಕ್ತಿಕ ಸಂಪೂರ್ಣತೆಯನ್ನು ಹೊಂದಿರಬೇಕು. ಇದರಿಂದ ಉಟಾಗುವ ಆತ್ಮ ವಿಶ್ವಾಸವು ಅನ್ನ-ವಸ್ತ್ರ ಸ್ವಾವಲಂಬಿಗಳಿಗೇ ಗೊತ್ತು. ಶಿಕ್ಷಕರ ಅನೇಕ ಪ್ರಾಪಂಚಿಕ ಅಡಚಣೆಗಳಿಗೂ ಹಾಗೂ ನಿಃಸಹಾಯತೆಯ ಪರಿಸ್ಥಿತಿಗೂ ಅನ್ನ-ವಸ್ತ್ರ ಸ್ವಾವಲಂಬನವು ರಾಮಬಾಣದಂತಿದೆ.

ಪ್ರತಿಯೊಬ್ಬ ವ್ಯಕ್ತಿಯನ್ನೂ ಉತ್ಪಾದಕನನ್ನಾಗಿ ಮಾಡುವದರಿಂದ ಇದುವರೆಗೆ ಸಮಾಜದಲ್ಲಿದ್ದ ಬೇರೆ ಬೇರೆ ವರ್ಗಗಳು (ಶ್ರೀಮಂತರು, ಮಧ್ಯಮ ವರ್ಗದವರು, ಬಡವರು) ಇಲ್ಲದಂತಾಗಿ ಶೋಷಣರಹಿತ ಸಮಾಜವು ನಿರ್ಮಾಣವಾಗುವದು. ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ಇತಿಹಾಸದಲ್ಲಿ ಇಂದಿನ ವರೆಗೆ ಗಾಂಧೀ ತತ್ವದ ಪ್ರಕಾರ ಶ್ರೀಮಂತ ವರ್ಗವು ಭೋಗಲಾಲಸೆಗಳನ್ನು ತ್ಯಾಗಮಾಡಿ, ಮಧ್ಯಮ ವರ್ಗದವರಲ್ಲಿ ಸಮರಸವಾಗಿದೆ. ಲಂಡನದಲ್ಲಿದ್ದ ಭಾರತಾಂಬೆಯ ಜೀವನಶಕ್ತಿಯನ್ನು ಹಿಂದುಸ್ತಾನದಲ್ಲಿ ತಂದು, ದಿಲ್ಲಿ, ಮುಂಬಯಿಯಂಥ ದೊಡ್ಡ ಪಟ್ಟಣಗಳಲ್ಲಿ ಇಟ್ಟಿದ್ದಾಗಿದೆ. ಇನ್ನು ಮುಂದೆ ಆ ನಗರಗಳಿಂದ ಅದನ್ನು ಪ್ರತಿ ಹಳ್ಳಿಗೂ ಒಯ್ಯಬೇಕಾಗಿದೆ. ಇದಕ್ಕಾಗಿಯೆ ಮಧ್ಯಮ ವರ್ಗದವರು ಬಡ ಹಳ್ಳಿಗರ ಜೀವನ ಮಟ್ಟವನ್ನು ಏರಿಸಲು ಈಗ ದುಡಿಯಬೇಕಾಗಿದೆ. ಬಡ ಹಳ್ಳಿಗರು ಉಳಿದೆರಡು ವರ್ಗಗಳ ಜನರನ್ನವಲಂಬಿಸಿ ಕೂಡದೆ ತಮ್ಮ ಸಮಸ್ಯೆಗಳನ್ನು ತಾವೇ ಬಿಡಿಸಿಕೊಳ್ಳಬೇಕಾಗಿದೆ. ಆದುದರಿಂದ ಈ ನೂತನ ಸಮಾಜ ರಚನೆಯ ಮರ್ಮವನ್ನು ಶಿಕ್ಷಕನು ಅರಿತಿರಬೇಕಾದುದು ಅವಶ್ಯ.

ಈ ಪ್ರಕಾರವಾಗಿ ಬಹು ಮಟ್ಟಿಗೆ ಬಹು ಜನರ ಹಿತವನ್ನು ಸಾಧಿಸುವಂಥ ಒಂದು ಉತ್ತಮವಾದ ಸಾಮಾಜಿಕ ಆದರ್ಶವನ್ನು ಕಣ್ಣ ಮುಂದೆ ಇಟ್ಟುಕೊಂಡು ಅದಕ್ಕನುಗುಣವಾದ ರಾಜನೀತಿಯನ್ನು ಅನುಸರಿಸುತ್ತ ನಾವು ಮುನ್ನಡೆಯಬೇಕಾಗಿದೆ. ಈ ತತ್ವಗಳಿಗನುಗುಣವಾಗಿ ನಮ್ಮ ಶಿಕ್ಷಣದ ಕೆಲಸ ಸಾಗಬೇಕಾಗಿದೆ. ಶಿಕ್ಷಕರು ತಮ್ಮ ಜೀವನದ ರೀತಿ,ನೀತಿಗಳನ್ನು ಈ ಆದರ್ಶಕ್ಕನುಗುಣವಾಗಿ ತಮ್ಮ ಮುಂದಿಟ್ಟುಕೊಳ್ಳಬೇಕು. ಶಿಕ್ಷಕನು ಈ ಸುವರ್ಣ ಸಂಧಿಯಲ್ಲಿ ತನ್ನ ಮೇಲಿನ ಹೊಣೆಯನ್ನು ಯೋಗ್ಯ ರೀತಿಯಿಂದ ನಿರ್ವಹಿಸಿದ್ದಾದರೆ ನಮ್ಮ ರಾಷ್ಟ್ರದ ಉತ್ಕರ್ಷವಾಗುವದು. ಇಲ್ಲದೆಹೋದರೆ, ಉದಾಸೀನತೆ ತೋರಿಸಿದಲ್ಲಿ ರಾಷ್ಟ್ರದ ವತನವಾಗುವದು ನಿಶ್ಚಯ .ಸಿಕ್ಕ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವಿಲ್ಲದವರಾದೆವೆಂಬ ಅಪರಾಧಕ್ಕೆ ಗುರಿಯಾಗಿ, ನಮ್ಮ ಮುಂದಿನ ಪೀಳಿಗೆಯು ನಮ್ಮನ್ನು ನೋಡಿ ನಗುವಂತಾಗುವದು. ಸ್ವತಂತ್ರ ಭಾರತದಲ್ಲಿ ಒಬ್ಬ ಸಾಧಾರಣ ಶಿಕ್ಷಕನಾಗಿರುವವನು ತನ್ನ ಅಚಲ ಶ್ರದ್ಧೆಯಿಂದಲೂ ಹಳ್ಳಿಗರ ಸೇವೆಯಿಂದಲೂ ನಾಳೆ ಶಿಕ್ಷಣ ಮಂತ್ರಿಯ ಪದವಿಗೆ ಏರಬಹುದು. ಆದುದರಿಂದ ಈ ವೇಳೆಯಲ್ಲಿ ಶಿಕ್ಷಕರಲ್ಲಿ ನವ ಜಾಗೃತಿ, ನವ ಚೈತನ್ಯಗಳು ಹೊರಹೊಮ್ಮಬೇಕಾಗಿವೆ. ಅದರಿಂದ ಹೆಚ್ಚಿನ ಕೆಲಸಗಳು ಆಗಬೇಕಾಗಿವೆ.

ಹೊಸ ಶಿಕ್ಷಣದಲ್ಲಿಯ ಹೊಸ ದೃಷ್ಟಿ

ಕಾಲಕಾಲಕ್ಕೆ ಪರಿಸ್ಥಿತಿಯು ಬದಲಾದಂತೆ ಶಿಕ್ಷಣ ಕ್ರಮದ ವಿಚಾರವೂ ಬದಲಾಗುತ್ತ ಹೋಗುವದು. ಪೂರ್ವ ಕಾಲದಲ್ಲಿ ಬೌದ್ಧಿಕ ಶಿಕ್ಷಣವು [illegible] ಇದ್ದರೆ, ಈಗ ವೃತ್ತಿ ಶಿಕ್ಷಣ ಹಾಗು ಅದರ ಮೂಲಕ ಬೌದ್ಧಿಕ ಶಿಕ್ಷಣಕ್ಕೂ ಪ್ರಾಧಾನ್ಯತೆ ದೊರೆತಿದೆ. ಈಗಿನ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಶಿಕ್ಷಣದಲ್ಲಿ ವ್ಯಕ್ತಿಸ್ವಾವಲಂಬನವೂ ಮಹತ್ವದ ಭಾಗವಾಗಿದೆ. ಇಂಥ ಜೀವನ ದೃಷ್ಟಿಯುಳ್ಳ ಶಿಕ್ಷಣ, ಜ್ಞಾನ, ಹಾಗು ಧನ ಇವುಗಳ ಜೊಗೆ ಇರಬೇಕಾದ ದೃಷ್ಟಿಕೋನವನ್ನು ಶಿಕ್ಷಕರು ಸ್ಪಷ್ಟವಾಗಿ ತಿಳಿದುಕೊಳ್ಳುವದವಶ್ಯ. ಎಂದೂ ಶಾಲೆಗಳಲ್ಲಿ ಶಿಕ್ಷಣ ಪಡೆಯದಿದ್ದರೂ ವ್ಯವಹಾರವನ್ನು ಜಾಗರೂಕತೆಯಿಂದ ಸಾಗಿಸಿ

ಕೊಂಡು ಹೋಗುವಂಥವರು ತಮ್ಮ ಜ್ಞಾನವನ್ನೂ ಮತ್ತು ಕಾರ್ಯಕುಶಲತೆಯನ್ನೂ ಕೇವಲ ವ್ಯವಹಾರದ ಅನುಭವದಿಂದಲೇ ವೃದ್ಧಿಪಡಿಸಿಕೊಳ್ಳುತ್ತಿರುತ್ತಾರೆ. ಈ ಪ್ರಕಾರದ ಜನರಲ್ಲಿ ಸ್ಫೂರ್ತಿ, ಸಮಯಸೂಚಕತೆ ಮತ್ತು ಆತ್ಮವಿಶ್ವಾಸ ಇವು ಕಂಡು ಬರುವವು. ಇದರ ಕಾರಣವೇನಂದರೆ—ಅವರು ಕೇವಲ ಜ್ಞಾನದ ಬೆನ್ನುಹತ್ತಿರುವದಿಲ್ಲ. ಅವರು ಬಾಳಿನ ಗುಟ್ಟನ್ನು ಅರಿತುಕೊಂಡು ಜೀವನ ನೌಕೆಯನ್ನು ಸುಗಮವಾಗಿ ಸಾಗಿಸುತ್ತಿರುತ್ತಾರೆ. ನಿರೋಗಿಯಾಗಿರುವದು, ಕರ್ತೃತ್ವ ಶಕ್ತಿಯನ್ನು ಬೆಳೆಯಿಸುವದು, ನೇರಯವರಲ್ಲಿ ಅಂತಃಕರಣವನ್ನು ಇಡುವದು, ತಮ್ಮ ವ್ಯಕ್ತಿತ್ವದ ವಿಕಾಸ ಮಾಡಿಕೊಂಡು ಜೀವನವನ್ನು ಸಮೃದ್ಧವಾಗಿ ಮಾಡುವದು ಇವೇ ಅವರ ಜೀವನದ ಜೀವಾಳವಾಗಿರುತ್ತವೆ. ಇವರೊಡನೆ ತುಲನೆ ಮಾಡಲಾಗಿ ಕೇವಲ ಧನ ಸಂಗ್ರಹವನ್ನು ಹೆಚ್ಚಿಸುವ ಇಚ್ಛೆಯುಳ್ಳವರ, ಕೇವಲ ಸಾಧನ ಸಾಮಗ್ರಿಗಳನ್ನು ಸಂಗ್ರಹ ಮಾಡುವ ಹವ್ಯಾಸವುಳ್ಳವರ ಮತ್ತು ಜ್ಞಾನದ ಹೊರೆಯನ್ನು ತಮ್ಮ ಮೇಲೆ ಹೇರಿಕೊಳ್ಳಲುದ್ಯುಕ್ತರಾದವರ ಜೀವನವು ನಿಜವಾಗಿಯೂ ಅಸಮರ್ಥವೂ ಕರುಣಾಜನಕವೂ ಆಗಿರುವುದೆಂದು ಒಡೆದು ಕಾಣುವದು. ಹಸಿವೆ ಇದ್ದಷ್ಟಕ್ಕಿಂತ ಹೆಚ್ಚು ಉಣ್ಣುವದರಿಂದ ಮನುಷ್ಯನ ಪ್ರಕೃತಿಯು ಕೆಡುವದು. ಅವನು ದುರ್ಬಲನಾಗುವನು. ಅವನ ಉತ್ಸಾಹವು ನಷ್ಟವಾಗುವದು. ಮತ್ತು ಅವನು ಯಾವ ಮೂಲಭೂತ ಇಚ್ಛೆಯಿಂದ ಉಣ್ಣುತ್ತಿರುವನೋ ಅದರ ತೀವ್ರತೆ ಮತ್ತು ಅಭಿರುಚಿಗಳು ಕ್ಷೀಣವೂ ವಿಕೃತವೂ ಆಗುವವು. ಹಸಿವೆಗಿಂತ ಹೆಚ್ಚು ತಿನ್ನುವವನಿಗೆ ಮತ್ತು ಹಸಿವೆ ಇಲ್ಲದೆ ತಿನ್ನುವವನಿಗೆ ಖಾದ್ಯ ವಸ್ತುಗಳ ಪೂರ್ಣ ಸ್ವಾದವು ಸಿಗಲಾರದು. ಅವನ ನಾಲಿಗೆಯ ಶಕ್ತಿಯು ಕಡಿಮೆಯಾಗುವದು. ರುಚಿಯಲ್ಲಿಯ ಸೂಕ್ಷ್ಮ ಭೇದವಂತೂ ಅವನಿಗೆ ತಿಳಿಯಲು ಶಕ್ಯವೇ ಇಲ್ಲ. ಅವನ ಉಸಿರಿನಲ್ಲಿ ದುರ್ಗಂಧವು ಹೊರಗೆ ಬರುವದು. ಹಲ್ಲುಗಳು ಅಶಕ್ತವಾಗುವವು. ಮುಖವು ಕಾಂತಿಹೀನವಾಗುವದು; ಕೊನೆಗೆ ಅಪಚನ, ಮಲಬದ್ಧತೆ, ಅತಿಸಾರ ಮುಂತಾದ ಅನೇಕ ರೋಗಗಳಿಗೆ ಅವನು ಬಲಿಯಾಗುವನು. ಹೀಗೆ ತಿನ್ನುವದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಳ್ಳದೆ ಜೀವನ ಸಾಫಲ್ಯಕ್ಕಾಗಿ ಪ್ರಯತ್ನಿಸಬೇಕು. ನೆಲ ಅಗಿಯುವದು, ಕಟ್ಟಿಗೆ ಕಡಿಯುವದು, ಈಸುವದು, ಓಡುವದು, ಒಜ್ಜೆ ಹೊರುವದು, ಕುದುರೆ ಸವಾರಿ ಮಾಡುವದು ಮುಂತಾದ ಆನಂದದಾಯಕ ಜೀವನ ಕಾರ್ಯಗಳಲ್ಲಿ ಮಗ್ನರಾಗಿರುವದು ವಿಹಿತ. ಕೇವಲ ಹಸಿವೆಯ ನಿವಾರಣೆಗೋಸುಗ ಊಟ ಮಾಡುವ ವಿಚಾರವುಳ್ಳವನಿಗಿಂತ ಉದ್ಯೋಗ ಮಾಡಿ ಹೆಚ್ಚು ಊಟ ಮಾಡಬಲ್ಲವನಿಗೆ ಊಟದಲ್ಲಿ ಹೆಚ್ಚು ರುಚಿ ಅನಿಸುವದು. ಮತ್ತು ಅವನು ಯಥೇಚ್ಛವಾಗಿ ತಿಂದರೂ ಸಹ ಆಹಾರವು ಅವನ ಹೊಟ್ಟೆಗೆ ಭಾರವೆನಿಸುವದಿಲ್ಲ. ಪಶು ಪಕ್ಷಿಗಳು ನಿಸರ್ಗ ನಿಯಮದಂತೆ ಸರಿಯಾಗಿ ವರ್ತಿಸುತ್ತಿರುವದರಿಂದ ಅವಕ್ಕೆ ಎಂದೂ ಅಪಚನವಾಗುವದಿಲ್ಲ. ಆರಣ್ಯದೊಳಗಿನ ಪಶುಪಕ್ಷಿ ಮತ್ತು ಮಂಗಗಳು ಹಗಲೆಲ್ಲ ತಿರುಗಾಡುತ್ತಿರುತ್ತವೆ ಮತ್ತು ಆಹಾರವನ್ನು ತಿನ್ನುತ್ತಲಿರುತ್ತವೆ. ಅವಕ್ಕೆ ಎಂದೂ ಅಪಚನವಾಗುವದಿಲ್ಲ. ಹೀಗೆ ಆಹಾರದ ವಿಷಯಕ್ಕೆ ಅನ್ವಯಿಸುವ ಮಾತೇ ಜ್ಞಾನದ ವಿಷಯಕ್ಕೂ ಅನ್ವಯಿಸುತ್ತದೆ. ನಾವು ಊಟದ ಬೆನ್ನು ಹತ್ತದೆ, ಜೀವನದ ಬೆನ್ನು ಹತ್ತುವದು ಉಚಿತ. ಜೀವಿಸಲು ಎಷ್ಟು ಆಹಾರದ ಅವಶ್ಯಕತೆ ಉಂಟಾಗುವದೋ ಅಷ್ಟೇ ಆಹಾರವನ್ನು ತೆಗೆದುಕೊಳ್ಳುವ ನಿಯಮವನ್ನು ಜ್ಞಾನಕ್ಕೂ ಅನ್ವಯಿಸಿದರೆ ಅರ್ಥಾತ್ ನಿರರ್ಥಕ ಜ್ಞಾನ ಸಂಗ್ರಹ ಮಾಡದೆ ಇದ್ದರೆ, ಜ್ಞಾನದ ಅಪಚನದಿಂದ ಬರುವ ಬುದ್ಧಿಯ ಕ್ಷೀಣತೆ, ನೈತಿಕ ಅನಿಶ್ಚಿತತೆ ಈ ದೋಷಗಳು ಜೀವನವನ್ನು ಪ್ರವೇಶಿಸಲಾರವು. ದೇಹ ಶ್ರಮದಿಂದ ಹಸಿವೆಯು ತೀಕ್ಷ್ಣವಾಗುವಂತೆ, ನಾವು ಉದ್ದೇಶ ಹಾಗು ಯೋಜನೆಯಿಂದೊಡಗೂಡಿದ ಬುದ್ಧಿಯ ಉಪಯೋಗದಿಂದ ಜೀವನ ವ್ಯಾಪಾರವನ್ನು ಸಾಗಿಸಿದಾಗ ಜಿಜ್ಞಾಸೆ ಮತ್ತು ಕಾರ್ಯ ಪ್ರವೃತ್ತಿ ಎಂಬ ಹಸಿವೆಯು ಅತ್ಯಂತ ಪ್ರಖರವಾಗುವದು. ಇಂಥ ಅನುಭವಜನ್ಯ ಜ್ಞಾನವು ಭಾರವೆನಿಸುವದಿಲ್ಲ. ಆದುದರಿಂದ ಶಿಕ್ಷಣ ಪಡೆಯುವದರಲ್ಲಿಯೂ ಶಿಕ್ಷಣ ಕೊಡುವದರಲ್ಲಿಯೂ ನಾವು ಕೇವಲ ಜ್ಞಾನ ದೃಷ್ಟಿಯುಳ್ಳವರಾಗದೆ ಜೀವನದೃಷ್ಟಿಯುಳ್ಳವರಾಗಬೇಕು. ಜೀವನದ ಸಾಮ [illegible] ದೃಷ್ಟಿಯನ್ನಿಡದೆ ಜೀವನ ಪರಾಯಣರಾದರೆ ನಮ್ಮ ಜೀವನವು ಸಮರ್ಥವೂ ಸಮೃದ್ಧವೂ ಆಗುವದಲ್ಲದೆ, ನಾವು ಶಾರೀರಿಕ, ಬೌದ್ಧಿಕ ಮತ್ತು ಸಾಮಾಜಿಕ ರೋಗಗಳಿಂದ ಬಳಲುವ ಪ್ರಸಂಗ ಬರುವದಿಲ್ಲ. ನಾವು ಜೀವನ ಸಾಫಲ್ಯಕ್ಕಾಗಿ ಜೀವಿಸಲಕ್ಕೆ ಉತ್ಕಟೇಚ್ಛೆಯಿಂದ ಪ್ರಯತ್ನಿಸಬೇಕು. ಜೀವನದ ಪ್ರತಿಯೊಂದು ಭಾಗದ ವಿಕಾಸವನ್ನು ಮಾಡಿಕೊಳ್ಳುತ್ತ ಹೋದಂತೆ, ಜೀವನದ ಆರ್ಥಿಕ, ಸಾಮಾಜಿಕ ನೈತಿಕ ಮುಂತಾದ ವಿಭಾಗಗಳ ಜ್ಞಾನದ ಮತ್ತು ಕುಶಲತೆ,

ಸೇವಕನೂ ಗ್ರಾಮಸುಧಾರಕನೂ ಆಗಿರುವನು. ಭಾವಿ ಗ್ರಾಮ-ಸಮಾಜವು ಸ್ವಾವಲಂಬನದಿಂದ ಕೂಡಿರಬೇಕಾದರೆ ಈಗಿನಂತೆ ಹಳ್ಳಿಗರು ತಮ್ಮ ಜೀವನಾವಶ್ಯಕ ವಸ್ತುಗಳಿಗಾಗಿ ನಗರಗಳನ್ನವಲಂಬಿಸಿ ಕೂಡಬಾರದು. ಮತ್ತು ಅವರು ತಮ್ಮ ಪ್ರಾಣಧಾರಣೆಗೆ ಅವಶ್ಯಕವಾದ ಆಹಾರ, ಉಡಿಗೆ ಮುಂತಾದವುಗಳನ್ನು ತಾವೇ ನಿರ್ಮಾಣ ಮಾಡಿಕೊಳ್ಳಲು ಕಲಿಯಬೇಕು. ಇವುಗಳ ಉತ್ಪಾದನೆಯಿಂದಲೇ ಹಳ್ಳಿಗರ ಶಕ್ತಿಯು ಅಭಿವೃದ್ಧಿಯಾಗುವದು. ಈ ಶಕ್ತಿಯನ್ನೇ ಆಂಗ್ಲರು ಇಲ್ಲಿಯ ವರೆಗೆ ನಮ್ಮ ಹಳ್ಳಿಗರಿಂದ ಕಸಿದುಕೊಂಡಿದ್ದರು. ಆಂಗ್ಲರ ಆಳಿಕೆಯ ಪೂರ್ವದಲ್ಲಿದ್ದಂತೆಯೇ ಹಳ್ಳಿಗಳನ್ನು 'ಪಂಚಾಯತ'ರ ಆಡಳಿತೆಯಲ್ಲಿ ಪುನಃ ಸ್ವಯಂಪೂರ್ಣತೆ ಹಾಗೂ ಸ್ವಾವಲಂಬನದ ಕಾಲುಗಳ ಮೇಲೆ ನಿಲ್ಲಿಸಬೇಕಾಗಿದೆ. ಈದೃಷ್ಟಿಯಿಂದ ನೋಡಲಾಗಿ, ಶಿಕ್ಷಕನು ಹಳ್ಳಿಗರಿಗೆ ಆದರ್ಶ ವ್ಯಕ್ತಿಯಾಗಬೇಕಾದರೆ ಸ್ವತಃ ತಾನು ಉದ್ಯೋಗ ಮಾಡುವವನಾಗಬೇಕು. ಅರ್ಥಾತ್ ಅನ್ನ-ವಸ್ತ್ರ ಸ್ವಾವಲಂಬನವನ್ನು ಪಡೆದು ವೈಯಕ್ತಿಕ ಸಂಪೂರ್ಣತೆಯನ್ನು ಹೊಂದಿರಬೇಕು. ಇದರಿಂದ ಉಟಾಗುವ ಆತ್ಮ ವಿಶ್ವಾಸವು ಅನ್ನ-ವಸ್ತ್ರ ಸ್ವಾವಲಂಬಿಗಳಿಗೇ ಗೊತ್ತು. ಶಿಕ್ಷಕರ ಅನೇಕ ಪ್ರಾಪಂಚಿಕ ಅಡಚಣೆಗಳಿಗೂ ಹಾಗೂ ನಿಃಸಹಾಯತೆಯ ಪರಿಸ್ಥಿತಿಗೂ ಅನ್ನ-ವಸ್ತ್ರ ಸ್ವಾವಲಂಬನವು ರಾಮಬಾಣದಂತಿದೆ.

ಪ್ರತಿಯೊಬ್ಬ ವ್ಯಕ್ತಿಯನ್ನೂ ಉತ್ಪಾದಕನನ್ನಾಗಿ ಮಾಡುವದರಿಂದ ಇದುವರೆಗೆ ಸಮಾಜದಲ್ಲಿದ್ದ ಬೇರೆ ಬೇರೆ ವರ್ಗಗಳು (ಶ್ರೀಮಂತರು, ಮಧ್ಯಮ ವರ್ಗದವರು, ಬಡವರು) ಇಲ್ಲದಂತಾಗಿ ಶೋಷಣರಹಿತ ಸಮಾಜವು ನಿರ್ಮಾಣವಾಗುವದು. ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ಇತಿಹಾಸದಲ್ಲಿ ಇಂದಿನ ವರೆಗೆ ಗಾಂಧೀ ತತ್ವದ ಪ್ರಕಾರ ಶ್ರೀಮಂತ ವರ್ಗವು ಭೋಗಲಾಲಸೆಗಳನ್ನು ತ್ಯಾಗಮಾಡಿ, ಮಧ್ಯಮ ವರ್ಗದವರಲ್ಲಿ ಸಮರಸವಾಗಿದೆ. ಲಂಡನದಲ್ಲಿದ್ದ ಭಾರತಾಂಬೆಯ ಜೀವನಶಕ್ತಿಯನ್ನು ಹಿಂದುಸ್ತಾನದಲ್ಲಿ ತಂದು, ದಿಲ್ಲಿ, ಮುಂಬಯಿಯಂಥ ದೊಡ್ಡ ಪಟ್ಟಣಗಳಲ್ಲಿ ಇಟ್ಟಿದ್ದಾಗಿದೆ. ಇನ್ನು ಮುಂದೆ ಆ ನಗರಗಳಿಂದ ಅದನ್ನು ಪ್ರತಿ ಹಳ್ಳಿಗೂ ಒಯ್ಯಬೇಕಾಗಿದೆ. ಇದಕ್ಕಾಗಿಯೆ ಮಧ್ಯಮ ವರ್ಗದವರು ಬಡ ಹಳ್ಳಿಗರ ಜೀವನ ಮಟ್ಟವನ್ನು ಏರಿಸಲು ಈಗ ದುಡಿಯಬೇಕಾಗಿದೆ. ಬಡ ಹಳ್ಳಿಗರು ಉಳಿದೆರಡು ವರ್ಗಗಳ ಜನರನ್ನವಲಂಬಿಸಿ ಕೂಡದೆ ತಮ್ಮ ಸಮಸ್ಯೆಗಳನ್ನು ತಾವೇ ಬಿಡಿಸಿಕೊಳ್ಳಬೇಕಾಗಿದೆ. ಆದುದರಿಂದ ಈ ನೂತನ ಸಮಾಜ ರಚನೆಯ ಮರ್ಮವನ್ನು ಶಿಕ್ಷಕನು ಅರಿತಿರಬೇಕಾದುದು ಅವಶ್ಯ.

ಈ ಪ್ರಕಾರವಾಗಿ ಬಹುಮಟ್ಟಿಗೆ ಬಹುಜನರ ಹಿತವನ್ನು ಸಾಧಿಸುವಂಥ ಒಂದು ಉತ್ತಮವಾದ ಸಾಮಾಜಿಕ ಆದರ್ಶವನ್ನು ಕಣ್ಣ ಮುಂದೆ ಇಟ್ಟುಕೊಂಡು ಅದಕ್ಕನುಗುಣವಾದ ರಾಜನೀತಿಯನ್ನು ಅನುಸರಿಸುತ್ತ ನಾವು ಮುನ್ನಡೆಯಬೇಕಾಗಿದೆ. ಈ ತತ್ವಗಳಿಗನುಗುಣವಾಗಿ ನಮ್ಮ ಶಿಕ್ಷಣದ ಕೆಲಸ ಸಾಗಬೇಕಾಗಿದೆ. ಶಿಕ್ಷಕರು ತಮ್ಮ ಜೀವನದ ರೀತಿ,ನೀತಿಗಳನ್ನು ಈ ಆದರ್ಶಕ್ಕನುಗುಣವಾಗಿ ತಮ್ಮ ಮುಂದಿಟ್ಟುಕೊಳ್ಳಬೇಕು. ಶಿಕ್ಷಕನು ಈ ಸುವರ್ಣ ಸಂಧಿಯಲ್ಲಿ ತನ್ನ ಮೇಲಿನ ಹೊಣೆಯನ್ನು ಯೋಗ್ಯ ರೀತಿಯಿಂದ ನಿರ್ವಹಿಸಿದ್ದಾದರೆ ನಮ್ಮ ರಾಷ್ಟ್ರದ ಉತ್ಕರ್ಷವಾಗುವದು. ಇಲ್ಲದೆಹೋದರೆ, ಉದಾಸೀನತೆ ತೋರಿಸಿದಲ್ಲಿ ರಾಷ್ಟ್ರದ ಪತನವಾಗುವದು ನಿಶ್ಚಯ .ಸಿಕ್ಕ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವಿಲ್ಲದವರಾದೆವೆಂಬ ಅಪರಾಧಕ್ಕೆ ಗುರಿಯಾಗಿ, ನಮ್ಮ ಮುಂದಿನ ಪೀಳಿಗೆಯು ನಮ್ಮನ್ನು ನೋಡಿ ನಗುವಂತಾಗುವದು. ಸ್ವತಂತ್ರ ಭಾರತದಲ್ಲಿ ಒಬ್ಬ ಸಾಧಾರಣ ಶಿಕ್ಷಕನಾಗಿರುವವನು ತನ್ನ ಅಚಲ ಶ್ರದ್ಧೆಯಿಂದಲೂ ಹಳ್ಳಿಗರ ಸೇವೆಯಿಂದಲೂ ನಾಳೆ ಶಿಕ್ಷಣ ಮಂತ್ರಿಯ ಪದವಿಗೆ ಏರಬಹುದು. ಆದುದರಿಂದ ಈ ವೇಳೆಯಲ್ಲಿ ಶಿಕ್ಷಕರಲ್ಲಿ ನವ ಜಾಗೃತಿ, ನವ ಚೈತನ್ಯಗಳು ಹೊರಹೊಮ್ಮಬೇಕಾಗಿವೆ. ಅದರಿಂದ ಹೆಚ್ಚಿನ ಕೆಲಸಗಳು ಆಗಬೇಕಾಗಿವೆ.

ಹೊಸ ಶಿಕ್ಷಣದಲ್ಲಿಯ ಹೊಸ ದೃಷ್ಟಿ

ಕಾಲಕಾಲಕ್ಕೆ ಪರಿಸ್ಥಿತಿಯು ಬದಲಾದಂತೆ ಶಿಕ್ಷಣ ಕ್ರಮದ ವಿಚಾರವೂ ಬದಲಾಗುತ್ತ ಹೋಗುವದು. ಪೂರ್ವ ಕಾಲದಲ್ಲಿ ಬೌದ್ಧಿಕ ಶಿಕ್ಷಣವು [illegible] ಇದ್ದರೆ, ಈಗ ವೃತ್ತಿ ಶಿಕ್ಷಣ ಹಾಗು ಅದರ ಮೂಲಕ ಬೌದ್ಧಿಕ ಶಿಕ್ಷಣಕ್ಕೂ ಪ್ರಾಧಾನ್ಯತೆ ದೊರೆತಿದೆ. ಈಗಿನ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಶಿಕ್ಷಣದಲ್ಲಿ ವ್ಯಕ್ತಿಸ್ವಾವಲಂಬನವೂ ಮಹತ್ವದ ಭಾಗವಾಗಿದೆ. ಇಂಥ ಜೀವನ ದೃಷ್ಟಿಯುಳ್ಳ ಶಿಕ್ಷಣ, ಜ್ಞಾನ, ಹಾಗು ಧನ ಇವುಗಳ ಬಗ್ಗೆ ಇರಬೇಕಾದ ದೃಷ್ಟಿಕೋನವನ್ನು ಶಿಕ್ಷಕರು ಸ್ಪಷ್ಟವಾಗಿ ತಿಳಿದುಕೊಳ್ಳುವದವಶ್ಯ. ಎಂದೂ ಶಾಲೆಗಳಲ್ಲಿ ಶಿಕ್ಷಣ ಪಡೆಯದಿದ್ದರೂ ವ್ಯವಹಾರವನ್ನು ಜಾಗರೂಕತೆಯಿಂದ ಸಾಗಿಸಿ

ಕೊಂಡು ಹೋಗುವಂಥವರು ತಮ್ಮ ಜ್ಞಾನವನ್ನೂ ಮತ್ತು ಕಾರ್ಯಕುಶಲತೆಯನ್ನೂ ಕೇವಲ ವ್ಯವಹಾರದ ಅನುಭವದಿಂದಲೇ ವೃದ್ಧಿಪಡಿಸಿಕೊಳ್ಳುತ್ತಿರುತ್ತಾರೆ. ಈ ಪ್ರಕಾರದ ಜನರಲ್ಲಿ ಸ್ಫೂರ್ತಿ, ಸಮಯಸೂಚಕತೆ ಮತ್ತು ಆತ್ಮವಿಶ್ವಾಸ ಇವು ಕಂಡು ಬರುವವು. ಇದರ ಕಾರಣವೇನಂದರೆ—ಅವರು ಕೇವಲ ಜ್ಞಾನದ ಬೆನ್ನು ಹತ್ತಿರುವದಿಲ್ಲ. ಅವರು ಬಾಳಿನ ಗುಟ್ಟನ್ನು ಅರಿತುಕೊಂಡು ಜೀವನ ನೌಕೆಯನ್ನು ಸುಗಮವಾಗಿ ಸಾಗಿಸುತ್ತಿರುತ್ತಾರೆ. ನಿರೋಗಿಯಾಗಿರುವದು, ಕರ್ತೃತ್ವ ಶಕ್ತಿಯನ್ನು ಬೆಳೆಯಿಸುವದು, ನೆರೆಯವರಲ್ಲಿ ಅಂತಃಕರಣವನ್ನು ಇಡುವದು, ತಮ್ಮ ವ್ಯಕ್ತಿತ್ವದ ವಿಕಾಸ ಮಾಡಿಕೊಂಡು ಜೀವನವನ್ನು ಸಮೃದ್ಧವಾಗಿ ಮಾಡುವದು ಇವೇ ಅವರ ಜೀವನದ ಜೀವಾಳವಾಗಿರುತ್ತವೆ. ಇವರೊಡನೆ ತುಲನೆ ಮಾಡಲಾಗಿ ಕೇವಲ ಧನ ಸಂಗ್ರಹವನ್ನು ಹೆಚ್ಚಿಸುವ ಇಚ್ಛೆಯುಳ್ಳವರ, ಕೇವಲ ಸಾಧನ ಸಾಮಗ್ರಿಗಳನ್ನು ಸಂಗ್ರಹ ಮಾಡುವ ಹವ್ಯಾಸವುಳ್ಳವರ ಮತ್ತು ಜ್ಞಾನದ ಹೊರೆಯನ್ನು ತಮ್ಮ ಮೇಲೆ ಹೇರಿಕೊಳ್ಳಲುದ್ಯುಕ್ತರಾದವರ ಜೀವನವು ನಿಜವಾಗಿಯೂ ಅಸಮರ್ಥವೂ ಕರುಣಾಜನಕವೂ ಆಗಿರುವುದೆಂದು ಒಡೆದು ಕಾಣುವದು. ಹಸಿವೆ ಇದ್ದಷ್ಟಕ್ಕಿಂತ ಹೆಚ್ಚು ಉಣ್ಣುವದರಿಂದ ಮನುಷ್ಯನ ಪ್ರಕೃತಿಯು ಕೆಡುವದು. ಅವನು ದುರ್ಬಲನಾಗುವನು. ಅವನ ಉತ್ಸಾಹವು ನಷ್ಟವಾಗುವದು. ಮತ್ತು ಅವನು ಯಾವ ಮೂಲಭೂತ ಇಚ್ಛೆಯಿಂದ ಉಣ್ಣುತ್ತಿರುವನೋ ಅದರ ತೀವ್ರತೆ ಮತ್ತು ಅಭಿರುಚಿಗಳು ಕ್ಷೀಣವೂ ವಿಕೃತವೂ ಆಗುವವು. ಹಸಿವೆಗಿಂತ ಹೆಚ್ಚು ತಿನ್ನುವವನಿಗೆ ಮತ್ತು ಹಸಿವೆ ಇಲ್ಲದೆ ತಿನ್ನುವವನಿಗೆ ಖಾದ್ಯ ವಸ್ತುಗಳ ಪೂರ್ಣ ಸ್ವಾದವು ಸಿಗಲಾರದು. ಅವನ ನಾಲಿಗೆಯ ಶಕ್ತಿಯು ಕಡಿಮೆಯಾಗುವದು. ರುಚಿಯಲ್ಲಿಯ ಸೂಕ್ಷ್ಮ ಭೇದವಂತೂ ಅವನಿಗೆ ತಿಳಿಯಲು ಶಕ್ಯವೇ ಇಲ್ಲ. ಅವನ ಉಸಿರಿನಲ್ಲಿ ದುರ್ಗಂಧವು ಹೊರಗೆ ಬರುವದು. ಹಲ್ಲುಗಳು ಅಶಕ್ತವಾಗುವವು. ಮುಖವು ಕಾಂತಿಹೀನವಾಗುವದು; ಕೊನೆಗೆ ಅಪಚನ, ಮಲಬದ್ಧತೆ, ಅತಿಸಾರ ಮುಂತಾದ ಅನೇಕ ರೋಗಗಳಿಗೆ ಅವನು ಬಲಿಯಾಗುವನು. ಹೀಗೆ ತಿನ್ನುವದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಳ್ಳದೆ ಜೀವನ ಸಾಫಲ್ಯಕ್ಕಾಗಿ ಪ್ರಯತ್ನಿಸಬೇಕು. ನೆಲ ಅಗಿಯುವದು, ಕಟ್ಟಿಗೆ ಕಡಿಯುವದು, ಈಸುವದು, ಓಡುವದು, ಒಜ್ಜೆ ಹೊರುವದು, ಕುದುರೆ ಸವಾರಿ ಮಾಡುವದು ಮುಂತಾದ ಆನಂದದಾಯಕ ಜೀವನ ಕಾರ್ಯಗಳಲ್ಲಿ ಮಗ್ನರಾಗಿರುವದು ವಿಹಿತ. ಕೇವಲ ಹಸಿವೆಯ ನಿವಾರಣೆಗೋಸುಗ ಊಟ ಮಾಡುವ ವಿಚಾರವುಳ್ಳವನಿಗಿಂತ ಉದ್ಯೋಗ ಮಾಡಿ ಹೆಚ್ಚು ಊಟ ಮಾಡಬಲ್ಲವನಿಗೆ ಊಟದಲ್ಲಿ ಹೆಚ್ಚು ರುಚಿ ಅನಿಸುವದು. ಮತ್ತು ಅವನು ಯಥೇಚ್ಛವಾಗಿ ತಿಂದರೂ ಸಹ ಆಹಾರವು ಅವನ ಹೊಟ್ಟೆಗೆ ಭಾರವೆನಿಸುವದಿಲ್ಲ. ಪಶು ಪಕ್ಷಿಗಳು ನಿಸರ್ಗ ನಿಯಮದಂತೆ ಸರಿಯಾಗಿ ವರ್ತಿಸುತ್ತಿರುವದರಿಂದ ಅವಕ್ಕೆ ಎಂದೂ ಅಪಚನವಾಗುವದಿಲ್ಲ. ಅರಣ್ಯದೊಳಗಿನ ಪಶುಪಕ್ಷಿ ಮತ್ತು ಮಂಗಗಳು ಹಗಲೆಲ್ಲ ತಿರುಗಾಡುತ್ತಿರುತ್ತವೆ ಮತ್ತು ಆಹಾರವನ್ನು ತಿನ್ನುತ್ತಲಿರುತ್ತವೆ. ಅವಕ್ಕೆ ಎಂದೂ ಅಪಚನವಾಗುವದಿಲ್ಲ. ಹೀಗೆ ಆಹಾರದ ವಿಷಯಕ್ಕೆ ಅನ್ವಯಿಸುವ ಮಾತೇ ಜ್ಞಾನದ ವಿಷಯಕ್ಕೂ ಅನ್ವಯಿಸುತ್ತದೆ. ನಾವು ಊಟದ ಬೆನ್ನು ಹತ್ತದೆ, ಜೀವನದ ಬೆನ್ನು ಹತ್ತುವದು ಉಚಿತ. ಜೀವಿಸಲು ಎಷ್ಟು ಆಹಾರದ ಅವಶ್ಯಕತೆ ಉಂಟಾಗುವದೋ ಅಷ್ಟೇ ಆಹಾರವನ್ನು ತೆಗೆದುಕೊಳ್ಳುವ ನಿಯಮವನ್ನು ಜ್ಞಾನಕ್ಕೂ ಅನ್ವಯಿಸಿದರೆ ಅರ್ಥಾತ್ ನಿರರ್ಥಕ ಜ್ಞಾನ ಸಂಗ್ರಹ ಮಾಡದೆ ಇದ್ದರೆ, ಜ್ಞಾನದ ಅಪಚನದಿಂದ ಬರುವ ಬುದ್ಧಿಯ ಕ್ಷೀಣತೆ, ನೈತಿಕ ಅನಿಶ್ಚಿತತೆ ಈ ದೋಷಗಳು ಜೀವನವನ್ನು ಪ್ರವೇಶಿಸಲಾರವು. ದೇಹ ಶ್ರಮದಿಂದ ಹಸಿವೆಯು ತೀಕ್ಷ್ಣವಾಗುವಂತೆ, ನಾವು ಉದ್ದೇಶ ಹಾಗು ಯೋಜನೆಯಿಂದೊಡನೂಡಿದ ಬುದ್ಧಿಯ ಉಪಯೋಗದಿಂದ ಜೀವನ ವ್ಯಾಪಾರವನ್ನು ಸಾಗಿಸಿದಾಗ ಜಿಜ್ಞಾಸೆ ಮತ್ತು ಕಾರ್ಯ ಪ್ರವೃತ್ತಿ ಎಂಬ ಹಸಿವೆಯು ಅತ್ಯಂತ ಪ್ರಖರವಾಗುವದು. ಇಂಥ ಅನುಭವಜನ್ಯ ಜ್ಞಾನವು ಭಾರವೆನಿಸುವದಿಲ್ಲ. ಆದುದರಿಂದ ಶಿಕ್ಷಣ ಪಡೆಯುವದರಲ್ಲಿಯೂ ಶಿಕ್ಷಣ ಕೊಡುವದರಲ್ಲಿಯೂ ನಾವು ಕೇವಲ ಜ್ಞಾನ ದೃಷ್ಟಿಯುಳ್ಳವರಾಗದೆ ಜೀವನದೃಷ್ಟಿಯುಳ್ಳವರಾಗಬೇಕು. ಜೀವನದ ಸಾಮ [illegible] ದೃಷ್ಟಿಯನ್ನಿಡದೆ ಜೀವನ ಪರಾಯಣರಾದರೆ ನಮ್ಮ ಜೀವನವು ಸಮರ್ಥವೂ ಸಮೃದ್ಧವೂ ಆಗುವದಲ್ಲದೆ, ನಾವು ಶಾರೀರಿಕ, ಬೌದ್ಧಿಕ ಮತ್ತು ಸಾಮಾಜಿಕ ರೋಗಗಳಿಂದ ಬಳಲುವ ಪ್ರಸಂಗ ಬರುವದಿಲ್ಲ. ನಾವು ಜೀವನ ಸಾಫಲ್ಯಕ್ಕಾಗಿ ಜೀವಿಸಲಿಕ್ಕೆ ಉತ್ಕಟೇಚ್ಛೆಯಿಂದ ಪ್ರಯತ್ನಿಸಬೇಕು. ಜೀವನದ ಪ್ರತಿಯೊಂದು ಭಾಗದ ವಿಕಾಸವನ್ನು ಮಾಡಿಕೊಳ್ಳುತ್ತ ಹೋದಂತೆ, ಜೀವನದ ಆರ್ಥಿಕ, ಸಾಮಾಜಿಕ ನೈತಿಕ ಮುಂತಾದ ವಿಭಾಗಗಳ ಜ್ಞಾನದ ಮತ್ತು ಕುಶಲತೆ,

ಗಳ ಬೇಡಿಕೆಯ ಅರಿವು ತಾನಾಗಿಯೇ ಆಗುವದು. ವಸ್ತುಗಳ ಬೇಡಿಕೆಯು ನೈಸರ್ಗಿಕವಾಗಿರದಿದ್ದರೆ ಅದರ ಸಂಗ್ರಹವು ವ್ಯರ್ಥವೆಂದೆಣಿಸಿ ಲೋಭವೆನಿಸುವದು. ಸರ್ವ ಸಾಧಾರಣವಾಗಿ ಶಿಕ್ಷಣದೊಳಗಿನದೇ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಗುಣಾಕಾರದ ಹೊರತಾಗಿ ಗಣಿತ ವ್ಯವಹಾರವೇ ನಡೆಯಲಾರದು; ಗುಣಾಕಾರಗಳನ್ನು ತೀವ್ರವಾಗಿ ಮಾಡಲು ಬರಬೇಕೆಂದೇ ನಾವು ಮಗ್ಗಿಗಳನ್ನು ಕಲಯುವೆವು. ಜ್ಞಾನ ದೃಷ್ಟಿಯುಳ್ಳ ಜನರು ಒಂದರಿಂದ ಸಾವಿರದ ವರೆಗೆ, ಲಕ್ಷ ಅಥವಾ ಕೋಟಿಯವರೆಗೆ ಮಗ್ಗಿಗಳನ್ನು ರಚಿಸಿ ಅವನ್ನು ಕಂಠಪಾಠ ಮಾಡುತ್ತ ಕೂಡುವರು. ಮತ್ತು ಆ ದೀರ್ಘ ಪ್ರಯತ್ನದಲ್ಲಿಯೇ ಮಗ್ನರಾಗಿ ಕೊನೆಗ ಅವಸಾನ ಹೊಂದುವರು. ಇದಕ್ಕೆ ವಿರುದ್ಧವಾಗಿ ಜೀವನ ವ್ಯವಹಾರಕ್ಕೆ ಪ್ರಾಧಾನ್ಯ ಕೊಡುವವರಿಗೆ ೨೦ ಅಥವಾ ೩೦ ರಿಂದ ಮುಂದಿನ ಮಗ್ಗಿಗಳು ನಿರುಪಯುಕ್ತವಿರುತ್ತವೆಂದು ಗೊತ್ತಿರುತ್ತದೆ. ಇದರಲ್ಲಿಯೂ ಸಹ ಜ್ಞಾನ ಸಂಪಾದನೆಯ ದೃಷ್ಟಿಯನ್ನೇ ಮುಖ್ಯವಾಗಿಟ್ಟುಕೊಂಡವರು ೧ರಿಂದ ೨೦ರ ವರಗಿನ ಮಗ್ಗಿಗಳನ್ನು ಬಾಯಿಪಾಠ ಮಾಡುತ್ತ ಹೋಗುವರು. ಮತ್ತು ಮುಂದೆ ವ್ಯವಹಾರದಲ್ಲಿ ಉಪಯೋಗ ಬೀಳುವ ಮಗ್ಗಿಗಳನ್ನು ಮರೆತು ಬಿಡುವರು. ಆದರೆ ಗಣಿತ ದೃಷ್ಟಿ ಇಲ್ಲದೆ ಕೇವಲ ವ್ಯವಹಾರದೃಷ್ಟಿಯಿದ್ದವರು ೧೧, ೧೩, ೧೪, ೧೭, ೧೮, ೧೯ ಈ ಮಗ್ಗಿಗಳನ್ನು ಪಾಠ ಮಾಡುವದಿಲ್ಲ. ವಾರದ ದಿನಗಳನ್ನು ಎಣಿಸಬೇಕಾಗುವದರಿಂದ ೭ ರ ಮಗ್ಗಿಯು ಉಪಯುಕ್ತವಿದೆ. ಡಜನ್ನಿನ ಹಾಗು ರೂಪಾಯಿ ಆಣೆಗಳ ವ್ಯವಹಾರಗಳಲ್ಲಿ ಮೇಲಿಂದಮೇಲೆ ೧೨-೧೬ ರ ಮಗ್ಗಿಗಳು ಉಪಯೋಗ ಬೀಳುವವು. ಬ್ರೆಡ್ಡಿನ ಭಟ್ಟಿಯಲ್ಲಿ ೧೩ ಬ್ರೆಡ್ಡಗಳ ಒಂದು ಡಜನ್ ಆಗುವದರಿಂದ ಆ ಜನರು ೧೨ ರ ಜೊತೆಗೆ ೧೩ ರ ಮಗ್ಗಿಯನ್ನೂ ಕಲಿಯಬೇಕಾಗುತ್ತದೆ. ಸಾರಾಂಶ, ವ್ಯವಹಾರದಲ್ಲ ಅವಶ್ಯವಿರುವ ಜ್ಞಾನವನ್ನು ಹುಡುಕುತ್ತಿದ್ದರೆ ಆ ಜ್ಞಾನವು ತನ್ನಿಂದ ತಾನೇ ಸ್ಥಿರವಾಗುವದು. ಆವಶ್ಯಕ ವಸ್ತುಗಳ ಸಂಗ್ರಹ ಮಾಡುವದು ಮತ್ತು ನಿರರ್ಥಕ ವಸ್ತುಗಳ ತ್ಯಾಗ ಮಾಡುವದು ಈ ಸಿದ್ಧಾಂತವು ಪ್ರತಿಯೊಂದು ಸಂಗ್ರಹಾಲಯದಲ್ಲಿ ಅವಶ್ಯವಿದ್ದಂತ ಜ್ಞಾನ ಸಂಗ್ರಹದ ವಿಷಯದಲ್ಲಿಯೂ ಸಹ ಅವಶ್ಯವಿದೆ ಮತ್ತು ಧನದ ವಿಷಯದಲ್ಲಿಯಂತೂ ಈ ಸಿದ್ಧಾಂತದ ಅವಶ್ಯಕತೆ ಎಷ್ಟಿರುವದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕೇವಲ ಜ್ಞಾನದ ಬೆಳವಣಿಗೆಯ ಅವಶ್ಯಕತೆ ಇಲ್ಲ. ಆದರೆ ಜೀವನ ಸಮೃದ್ಧಿಯ ಅವಶ್ಯಕತೆಯುಂಟು. ಜೀವನವು ಸಮೃದ್ಧವಾಗುತ್ತ ಹೋದಂತೆ ಜ್ಞಾನದ ಹಸಿವೆಯು ಬೆಳೆಯುತ್ತ ಹೋಗುವದು. ಹೀಗೆ ಜ್ಞಾನದ ಹಸಿವೆಗನುಗುಣವಾಗಿ ಜೀವನ ಸಮೃದ್ಧಿಗೊಳಿಸುಗ ಜ್ಞಾನ ಸಂಪಾದನೆ ಮಾಡಿದರೆ ಅದು ಭಾರವಾಗದೆ ಜೀವನವನ್ನು ಪುಷ್ಟ ಮತ್ತು ಸಂತುಷ್ಟವಾಗಿ ಮಾಡಿ ಪುರುಷಾರ್ಥವನ್ನು ಸಾಧಿಸುವದು.

ಶಿಕ್ಷಣದ ಉದ್ದೇಶವು ಜ್ಞಾನದ ವೃದ್ಧಿ ಮಾಡುವದು ಎಂದು ಈ ವರೆಗೆ ಶಿಕ್ಷಣ ಶಾಸ್ತ್ರಜ್ಞರು ತಿಳಿಯುತ್ತಿದ್ದರು. ನಂತರ ಈ ಉದ್ದೇಶದಲ್ಲಿ ಸುಧಾರಣೆ ಮಾಡಿ ಜ್ಞಾನವನ್ನು ಸಮೃದ್ಧಗೊಳಿಸುವದಲ್ಲದೆ ಅದರ ಜೊತೆಗೆ ಸಂಸ್ಕಾರವನ್ನು ಸಹ ಉಂಟು ಮಾಡುವದು ಇದರ ಉದ್ದೇಶವಿದೆ ಎಂದು ಅನ್ನಹತ್ತಿದರು. ಹೀಗೆ ಆದಾಗಲೇ ಮನುಷ್ಯರು ಪ್ರಭಾವಶಾಲಿಗಳಾಗುವರಲ್ಲದೆ ಅವರಲ್ಲಿ ಮುಖಂಡತ್ವದ ಗುಣಗಳು ಬೇರೂರುತ್ತವೆ. ರಾಜಸತ್ತೆಯ ದಿನಗಳು ಮುಗಿಯುತ ಬಂದು ಪ್ರಜಾಸತ್ತೆಯ ದಿನಗಳು ಉದಯಿಸಿದಂತೆ ಈ ಶಿಕ್ಷಣದಲ್ಲಿ ಮತ್ತೊಂದು ಮಾತು ಸೇರಿಸಲ್ಪಟ್ಟಿತು. ಅದಾಪುದೆಂದರೆ, ಶಿಕ್ಷಣದ ಮುಖಾಂತರ ಕುಶಲತೆ ಬೆಳೆಯಬೇಕು ಹಾಗು ಧನ ಸಂಪಾದನೆಯ ಯೋಗ್ಯತೆಯು ಸಹ ಬರಬೇಕು ಎನ್ನುವದು. ಈ ಬದಲಾವಣೆಯ ಕಡೆಗೆ ಶಿಕ್ಷಕರಾದ ನಾವು ಲಕ್ಷ್ಯ ಕೊಡಬೇಕು. ಶಿಕ್ಷಣದ ಉದ್ದೇಶದಲ್ಲಿ ಈ ಹೊಸ ಸುಧಾರಣೆಯಾದಕೂಡಲೆ ಕಲಿತವರೆನ್ನಿಸಿಕೊಳ್ಳುವವರ-ದೈಹಿಕ ಶ್ರಮವನ್ನು ಮಾಡದೆ ಬುದ್ಧಿ ಬಲದ ಮೇಲೆ ಇತರರನ್ನು ಶೋಷಿಸುವ ಜನರ-ಪ್ರತಿಷ್ಠೆಯು ಸ್ವಲ್ಪ ಕಡಿಮೆಯಾಯಿತು. ಆದರೆ ಶಿಕ್ಷಣದ ಉದ್ದೇಶವು ಮುಖ್ಯವಾಗಿ ಜೀವನದ ಶುದ್ಧಿ ಸಮೃದ್ಧಿಗಳೇ ಆಗಿರುವದು. ಯೋಗ್ಯವಿದೆ ಎಂಬ ಮಾತನ್ನು ನಾವು ತಿಳಿದುಕೊಳ್ಳಬೇಕು. ಜೀವನದ ಸಲುವಾಗಿ ಶಿಕ್ಷಣವಲ್ಲ; ಆದರೆ **ಜೀವನದ ಮುಖಾಂತರ ಶಿಕ್ಷಣ ಮತ್ತು ಶಿಕ್ಷಣದ ಮುಖಾಂತರ ಜೀವನ, ಇದೇ ನಮ್ಮ ಸೂತ್ರವಾಗಬೇಕು.** ಶಾಲೆಯಲ್ಲಿ ಏನು ಕಲಿಸಲ್ಪಡುವದು? ಎಂಬ ಪ್ರಶ್ನೆಗಿಂತ ಶಾಲೆಯಲ್ಲಿ ಜೀವನವು ಹೇಗೆ ನಾಗಿನಲ್ಪಡುವದು ಎಂಬ ಪ್ರಶ್ನೆಯು ಬಹಳ ಮಹತ್ವದ್ದಿರುತ್ತದೆ. ನಾವು ಆರಿಸಿಕೊಂಡ ಮೂಲ ಉದ್ಯೋಗವು ನಮ್ಮ ಜೀವನದೊಡನೆ ಸಮರಸವಾದರೆ ನಮ್ಮ ಶಿಕ್ಷಣ ಮತ್ತು ಜೀವನ ಎರಡೂ

ಸಾರ್ಥಕವಾಗುವುವು. ಉದ್ಯೋಗದಿಂದ ಎಷ್ಟು ಜೀವನದ ವ್ಯವಹಾರಗಳೊಡನೆ ಅನುಬಂಧ ಮಾಡಲಿಕ್ಕೆ ಬರುವದೆಂಬದನ್ನು ನೋಡಬೇಕು. ಅಂದರೆ, ಆ ಜೀವನದ ವ್ಯವಹಾರಗಳೇ ಏನು ಕಲಿಯಬೇಕು ಮತ್ತು ಎಷ್ಟು ಕಲಿಯಬೇಕು ಎಂಬದನ್ನು ತಿಳಿಸಬಲ್ಲವು. ಒಂದೇ ಸೂತ್ರದಲ್ಲಿ ಹೇಳುವದೆಂದರೆ—**"ಶಿಕ್ಷಣದಲ್ಲಿ ನಾವು ಜ್ಞಾನ ದೃಷ್ಟಿಯನ್ನು ಬಿಟ್ಟು ಜೀವನ ದೃಷ್ಟಿಯನ್ನು ಇಟ್ಟುಕೊಳ್ಳಬೇಕು."** ಯಾವ ಶಿಕ್ಷಕರ ಜೀವನವು ಉಚ್ಚ ಆಚಾರ ವಿಚಾರಗಳಿಂದ ಕೂಡಿಲ್ಲವೋ ಅವರು ವರ್ಧಾ ಯೋಜನೆಯ ಯಶಸ್ವಿ ಶಿಕ್ಷಕರಾಗಲು ಸಮರ್ಥರಾಗುವದಿಲ್ಲ. ಅವರು ಎಷ್ಟೇ ವಿದ್ವಾಂಸರಿರಲಿ, ಕುಶಲರಿರಲಿ, ಅವರು ಜೀವನದಲ್ಲಿ ಧೈರ್ಯ, ಕುಶಲತೆ, ಸಮೃದ್ಧಿಯನ್ನು ಪಡೆಯದಿದ್ದರೆ ಅವರ ವರ್ಚಸ್ಸು ಸಮಾಜದ ಮೇಲೆ ಬೀಳುವದಿಲ್ಲ; ಮತ್ತು ಅವರಿಂದ ಕೊಡಲ್ಪಟ್ಟ ಶಿಕ್ಷಣವು ಬಾಲಕರ ಜೀವನದ ಜಾಗೃತಿಗೆ ಕಾರಣೀಭೂತವಾಗುವದಿಲ್ಲ. ಆದರೆ ಆನಂದದ ಸ್ವಭಾವದವರೂ ಸಮಾಜ-ಜೀವಿಗಳೂ ಪ್ರತಿಭಾವಂತರೂ ಆದ ಶಿಕ್ಷಕರು ಕೇವಲ ಪರೀಕ್ಷೆಗೆ ಪ್ರಾಮುಖ್ಯತೆ ಕೊಡದೆ ಅವಶ್ಯವಿದ್ದ ಜ್ಞಾನ ಭಾಗಗಳನ್ನು ಆಯಾ ಸಹಜ ಸಂದರ್ಭಗಳಲ್ಲಿ ಕೀರ್ತನಕಾರರು ತಮ್ಮ ಶ್ರೋತೃ ವೃಂದದ ಮೇಲೆ ಬಿಂಬಿಸುವಂತೆ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಅಪ್ರತ್ಯಕ್ಷವಾಗಿ ಪರಿಣಾಮವನ್ನುಂಟು ಮಾಡುವರು. ಕೀರ್ತನಕಾರರ ಕಥೆಯನ್ನು ಕೇಳಿ ಆ ಶ್ರೋತೃಗಳಿಗೆ ಅನೇಕ ವಿಧವಾದ ವಿಷಯಗಳ ಜೀವನ ಸ್ಫೂರ್ತಿಯಾದ ಜ್ಞಾನ ಉಂಟಾಗುತ್ತದೆ. ಒಬ್ಬ ವಿದ್ವಾಂಸನಾದ ಕೀರ್ತನಕಾರನ ಸಹಾಯದಿಂದ ಯಾವತ್ತೂ ಸಮಾಜವು ಬಹು ಶ್ರುತವೂ ಧರ್ಮಜ್ಞವೂ ಮತ್ತು ರಸಿಕವೂ ಆಗುವದು. ಶ್ರೋತೃ ವೃಂದದಲ್ಲಿ ಶಿಕ್ಷಣ ದೃಷ್ಟಿಯು ಗೌಣರೂಪವಾಗಿರುತ್ತದೆ. ಜೀವನ ದೃಷ್ಟಿಯೇ ಪ್ರಧಾನವಾಗಿರುತ್ತದೆ. ಇದೇ ಪ್ರಕಾರ ಶಾಲೆಗಳಲ್ಲಿಯಾದರೂ ಶಿಕ್ಷಕರ ದೃಷ್ಟಿ ಇದ್ದರೆ ಜೀವನ ಶಿಕ್ಷಣವು ಯಶಸ್ವಿಯಾಗಿ ಹೊಸ ಸಮಾಜವು ನಿರ್ಮಾಣವಾಗುವದರಲ್ಲಿ ಏಳ್ಳಷ್ಟೂ ಸಂದೇಹವಿಲ್ಲ.

ಮಮತೆಯೇ ಶಿಕ್ಷಕನ ಮೂಲ ಮಂತ್ರ

ಈ ಶ್ರೇಷ್ಠ ಕರ್ತವ್ಯವನ್ನು ನೆರವೇರಿಸಲು ಶಿಕ್ಷಕನಿಗೆ ಬೇಕಾದ ಭಾಂಡವಲವು ಮುಖ್ಯವಾಗಿ 'ಪ್ರೇಮ'. ಶಿಕ್ಷಕನು ತನ್ನ ಸುತ್ತಲಿನ ಜನರನ್ನೂ ತನ್ನ ವಿದ್ಯಾರ್ಥಿಗಳನ್ನೂ ಪ್ರೇಮದಿಂದ ತನ್ನವರನ್ನಾಗಿ ಮಾಡಿಕೊಳ್ಳುವವನಾಗಬೇಕು. ಜಗತ್ತಿನಲ್ಲಿ ಪ್ರೇಮವು ತಾಯಿಯಲ್ಲಿ ಕರುಣಾರಸವಾಗಿ, ನಲ್ಲನಲ್ಲೆಯಲ್ಲಿ ಪ್ರೀತಿಯಾಗಿ, ಕೊಡುಗೈಯವರಲ್ಲಿ ದಾನವಾಗಿ, ದೇವರಲ್ಲಿ ಭಕ್ತಿಯಾಗಿ ಪರಿಣಮಿಸಿ ಅನೇಕ ರೂಪುಗಳನ್ನು ತಾಳಿರುವದು. ಇಂದಿನ ಸಮಾಜದಲ್ಲಿ ಜಾತಿ-ಜಾತಿಗಳಲ್ಲಿ, ಪಕ್ಷ-ಪಂಗಡಗಳಲ್ಲಿ ಪ್ರೇಮ ಸಂಸ್ಥಾಪನೆಯನ್ನುಂಟು ಮಾಡಬೇಕಾಗಿದೆ. ಈ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕಾದರೆ ಎಲ್ಲಿಯೂ ನೌಕರಿ ಸಿಗಲಿಲ್ಲವೆಂದು ಶಿಕ್ಷಕರ ಕೆಲಸವನ್ನು ಕೈಕೊಂಡಂಥವರಿಂದ ಸಾಧ್ಯವಿಲ್ಲ. ಪ್ರೇಮದ ದೀಕ್ಷೆ ಪಡೆದವರಿಂದಲೇ ಸಾಧ್ಯ. ಬಾಲಕರ ಜೀವನ ವಿಕಾಸದ ರಹಸ್ಯವನ್ನು ತಿಳಿದು ಅವರನ್ನು ಪ್ರೇಮದಿಂದ ನಡಿಸಿಕೊಳ್ಳಬಲ್ಲವರೇ ಶಿಕ್ಷಕರಾಗಲರ್ಹರು. ಒಟ್ಟಿನಲ್ಲಿ, ಶಿಕ್ಷಕನ ಜೀವನದ ಮೂಲ ಮಂತ್ರ 'ಪ್ರೇಮ' ವಾಗಿದ್ದು, ಯಾವನು ಎಳೆ ಮಕ್ಕಳನ್ನು ತನ್ನೆಡೆಗೆ ಬರಮಾಡಿಕೊಳ್ಳುವನೋ ಅವನೇ ನಿಜವಾದ ಶಿಕ್ಷಕನು. ಬಾಪೂಜಿಯವರು ಇಂಥ ಶಿಕ್ಷಕರಿದ್ದರು. ಅವರು ಇಡೀ ರಾಷ್ಟ್ರದ ಶಿಕ್ಷಕರಾಗಿದ್ದರು; ಅಷ್ಟೇ ಏಕೆ ವಿಶ್ವಗುರುವಾಗಿದ್ದರು. ಸೂರ್ಯನಂತೆ ಪ್ರತಿಭಾಶಾಲಿಗಳಾದ ಅವರ ವರ್ಚಸ್ಸು ನಾಲ್ಕೂ ದಿಶೆಗಳಲ್ಲಿ ದಿವ್ಯ ತೇಜಸ್ಸನ್ನು ಹರಡುತ್ತಿದ್ದಿತು. ನಮ್ಮೆಲ್ಲರ ಹಿರಿಯ ಶಿಕ್ಷಕರಾದ ಬಾಪೂಜಿಯವರನ್ನು ನಾವು ಕಳೆದುಕೊಂಡೆವು. ಇದಕ್ಕೆ ದೇಶದಲ್ಲಿ ತರುಣರ ಶಿಕ್ಷಣವು ಸರಿಯಾಗಿ ಸಾಗದಿದ್ದುದೇ ಮೂಲ ಕಾರಣ. ಅದನ್ನು ಈಗಲಾದರೂ ಅವರ ದಿವ್ಯ ಮಾರ್ಗದರ್ಶನದಲ್ಲಿ ಸರಿಪಡಿಸೋಣ. ಅವರು ತೋರಿಸಿದ ಮಾರ್ಗದಲ್ಲಿ 'ಹೊಸ ಶಿಕ್ಷಣ' ಕ್ಕಾಗಿ ಉತ್ತಮ ಶಿಕ್ಷಕರು ತಯಾರಾಗಲಿ. ನಮ್ಮ ಶಾಲೆಗಳಿಗೆ ಬಾಲಕರ ಸ್ವಾವಲಂಬನದ ಚಟುವಟಿಕೆಗಳಿಗೆ ಆಸ್ಪದ ಕೊಡುವ ಶಿಕ್ಷಕರು ಬೇಕಲ್ಲದೆ ವಿದ್ಯಾರ್ಥಿಗಳ ತಲೆಬುರುಡೆಗಳನ್ನು ಪುಸ್ತಕ—ಜ್ಞಾನದಿಂದ ತುಂಬಿ ಬಾಲಕರನ್ನು ಗಿಳಿಗಳನ್ನಾಗಿ ಮಾಡುವವರು ನಮಗೆ ಬೇಕಾಗಿಲ್ಲ. ಬಾಲಕರ ರಚನಾ ಪ್ರವೃತ್ತಿಗೆ ಎಡೆಗೊಡದಿದ್ದರೆ ಅವರು ವಿದ್ವಾಂಸರಾಗುವ ಬದಲು ವಿಧ್ವಂಸಕರಾಗುವರು. ಶಿಕ್ಷಕ ಬಂಧುಗಳೇ, ಬಾಲಕನು ಮಾನವನೂ ಉತ್ತಮ ನಾಗರಿಕನೂ ಆಗಬೇಕಾಗಿದೆ ಎಂಬದನ್ನು ಲಕ್ಷ್ಯದಲ್ಲಿಡಿರಿ. ನಿಮ್ಮ ಜ್ಞಾನವೆಂಬ ಅಗ್ನಿಯಲ್ಲಿ ಎಳೆಯ ಮಕ್ಕಳನ್ನು ಆಹುತಿ ತೆಗೆದುಕೊಳ್ಳಬೇಡಿರಿ. ನಿಮ್ಮ ವಿಚಾರಗಳನ್ನು ಬಲಾತ್ಕಾರದಿಂದ ಅವರ ಮೇಲೆ ಹೇರಬೇಡಿರಿ. ಮಕ್ಕಳ ಆತ್ಮವಿಕಾಸಕ್ಕೆ ಯಥೇಚ್ಛವಾಗಿ ಅವಕಾಶ ಕಲ್ಪಿಸಿಕೊಡಿರಿ. ಅವರ ಆಟ, ವಿನೋದಗಳಿಗೆ

ಪ್ರೋತ್ಸಾಹ ಕೊಡಿರಿ. ಮಕ್ಕಳ ಮೊದಲನೆಯ ಗುರು ತಾಯಿ. ತಾಯಿಯ ಒಲುಮೆಯಿಂದಲೇ ಮಕ್ಕಳ ಶರೀರದ ಹಾಗು ಬುದ್ಧಿಯ ಬೆಳವಣಿಗೆಯಾಗುವದು ಅವಶ್ಯವಿರುವದು. ಬಾಲಕರ ಮಾತೃಸ್ಥಾನವನ್ನು ಸ್ವೀಕರಿಸಲು ಯೋಗ್ಯತೆಯುಳ್ಳ ಶಿಕ್ಷಕರನ್ನು ನಾವು ಬಯಸುತ್ತೇವೆ. ಮ. ಗಾಂಧಿಯವರಿಗೆ ಮಕ್ಕಳಲ್ಲಿದ್ದ ಅವರ ಅಪಾರವಾದ ಪ್ರೇಮದಿಂದಲೇ ಅವರನ್ನು ಮಕ್ಕಳೆಲ್ಲರೂ ಬಾಪೂಜಿ ಎಂದು ಕರೆಯಲಾರಂಭಿಸಿದರು. ಅವರು ಎಲ್ಲರಿಗೂ ಬಾಪೂಜಿಯವರಾಗಿದ್ದರು. ಅವರ ಮಕ್ಕಳ ಮೇಲಿನ ಮಮತೆಯು ಒಂದು ಉದಾಹರಣೆಯಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಗಾಂಧೀಜಿಯವರು ಸೆರೆಮನೆಯಲ್ಲಿರುತ್ತಿದ್ದಾಗ ತಮ್ಮ ಆಶ್ರಮದಲ್ಲಿದ್ದ ಪ್ರತಿಯೊಂದು ಮಗುವಿಗೂ ಒಂದೊಂದು ಪತ್ರ ಬರೆಯುತ್ತಿದ್ದರಂತೆ. ಒಂದು ಪಾಕೀಟನಲ್ಲಿ ೫೦-೬೦ ಸಣ್ಣ ಸಣ್ಣ ಕಾಗದದ ತುಂಡುಗಳಿರುತ್ತಿದ್ದವಂತೆ. ಅದರಲ್ಲಿ ಒಂದೊಂದೇ ವಾಕ್ಯ ಒಂದೊಂದು ಮಗುವಿನ ಸಲುವಾಗಿ ಬರೆದಿರುತ್ತಿದ್ದರಂತೆ. "ಕಮಲಾ--ನೀನು ದಿನಾಲು ಹಾಲು ಕುಡಿಯುತ್ತಿದ್ದೀಯಾ?"— "ಮೃದುಲಾ—ನಿನಗೆ ಹೊಸ ಪರಕಾರ ಸಿಕ್ಕಿತೇ?"—"ರಾಮದಾಸ—ನಿನಗೆ ಜ್ವರ ನಿಂತಿದೆಯೇ ?" ಹೀಗೆ ಒಂದೊಂದು ಅನಾಥ ಮಗುವಿನ ಬಗ್ಗೆಯೂ ಅವರದಿಂದ ಹಿತಚಿಂತನೆ ಮಾಡುವದನ್ನು ರಾಜಕಾರಣದಲ್ಲಿ ಸತತ ತೊಡಗಿದ್ದರೂ ಮರೆಯುತ್ತಿದ್ದಿಲ್ಲ. ಇದರಂತೆ ಶಿಕ್ಷಕನೂ ಮೊದಲು ಮಾನವನಾಗಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಕಷ್ಟಸುಖಗಳನ್ನು ವೈಯಕ್ತಿಕವಾಗಿ ವಿಚಾರಿಸಿ ಪರಿಹರಿಸಬೇಕು.

ಬಾಪೂಜಿಯವರಲ್ಲಿದ್ದ ಗುಣಗಳಲ್ಲಿ ಹಾಸ್ಯರಸವು ಒಂದಾಗಿದೆ. ಕಷ್ಟದಲ್ಲಿಯೂ ಅವರು ನಗುಮೋರೆಯವರಾಗುತ್ತಿದ್ದರು. ಎಂಥ ಸಮಯದಲ್ಲಿಯೂ ಅವರು ಸಣ್ಣ ಸಣ್ಣ ಸಂಗತಿಗಳನ್ನು ಸಹ ಅಲಕ್ಷಿಸುತ್ತಿರಲಿಲ್ಲ. ಅನ್ಯರ ದೃಷ್ಟಿಯಿಂದ ಕ್ಷುಲ್ಲಕವಾಗಿ ಕಾಣುವ ಸಂಗತಿಗಳು ಅವರ ದೃಷ್ಟಿಯಲ್ಲಿ ಮಹತ್ತರವಾಗಿ ಕಾಣಿಸುತ್ತಿದ್ದವು. ನಮ್ಮ ಹೊಸ ಸಮಾಜ ರಚನೆಯ ಮಹಾಕಾರ್ಯದಲ್ಲಿ ಕಷ್ಟಗಳನ್ನು ನಗುನಗುತ್ತ ಸಹಿಸುವ ಶಿಕ್ಷಕರು ಬೇಕಾಗಿರುವರು. ಹಣವೇ ಮುಖ್ಯವೆಂದು ತಿಳಿದು ಕಾರ್ಯವಿಮುಖರಾಗುವ ಶಿಕ್ಷಕರು ನಮಗೆ ಬೇಕಾಗಿಲ್ಲ. ಒಬ್ಬನು ತನ್ನ ಜ್ಞಾನಾರ್ಜನೆಯಿಂದ ಋಷಿಯಾಗಬಲ್ಲನು, ಮಹಾತ್ಮನಾಗಬಲ್ಲನು; ಆದರೆ ಬಾಲಕರನ್ನು ಅರಿಯುವ ಹೃದಯವಿರದೆ ಆದರ್ಶಶಿಕ್ಷಕನಾಗಲಾರನು.

ಶಿಕ್ಷಣದ ಕೆಲಸಕ್ಕೆ ವಿಶಾಲವಾದ ಮನಸ್ಸು ಹಾಗೂ ಆರೋಗ್ಯಕರವಾದ ದೇಹ ಇವೆರಡೂ ಬೇಕು. ಈ ಕೆಲಸವು ತನ್ನಿಂದ ತಾನೇ ಸಹಜವಾಗಿ ನಡೆಯುತ್ತದೆಂದು ತಿಳಿಯಬಾರದು. ಶಿಕ್ಷಕರಲ್ಲಿ ಉತ್ತಮ ಸಂಸ್ಕಾರಗಳು ಮೂಡಿದರೇನೇ ಅವರ ಕೈಯಲ್ಲಿ ತರಬೇತಿ ಹೊಂದಿದ ಬಾಲಕರೂ ಉತ್ತಮ ಸಂಸ್ಕಾರಗಳನ್ನು ಪಡೆಯುವರು. "ತಂದೆಯಂತೆ ಮಗ, ಗುರುವಿನಂತೆ ಶಿಷ್ಯ" ಎಂಬ ಮಾತು ಎಂದಿನಿಂದಲೂ ಪ್ರಚಲಿತವಿದೆ. ಹೊಸ ಶಿಕ್ಷಣದ ಧ್ಯೇಯವು ವ್ಯಕ್ತಿಯ ಶಾರೀರಿಕ, ಬೌದ್ಧಿಕ ಹಾಗು ಆಧ್ಯಾತ್ಮಿಕ ವಿಕಾಸವನ್ನು ಮಾಡುವದೂ ತನ್ಮೂಲಕ ಪರಸ್ಪರ ಸಹಕಾರದ ಮೂಲ ತತ್ವದ ಮೇಲೆ ರಚಿಸಿದ ನವ ಸರ್ವೋದಯ ಸಮಾಜವನ್ನು ನಿರ್ಮಾಣ ಮಾಡುವದೂ ಇರುವದರಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಶಿಕ್ಷಕರು ಸಮ ಶಾರೀರಿಕ, ಬೌದ್ಧಿಕ ಹಾಗು ಆಧ್ಯಾತ್ಮಿಕ ವಿಕಾಸವನ್ನು ಸಮರಸವಾಗಿ ಪಡೆದು ಸಮತೋಲನವಾದ ವ್ಯಕ್ತಿತ್ವವುಳ್ಳವರೂ ಹೊಸ ಶಿಕ್ಷಣದ ಸಾಮಾಜಿಕ ಆದರ್ಶಗಳನ್ನು ಚನ್ನಾಗಿ ತಿಳಿದವರೂ ಅದರಂತೆ ಆಚರಣೆಯುಳ್ಳವರೂ ಸಾಂಘಿಕ ಜೀವನವನ್ನು ಸಾಗಿಸಬಲ್ಲವರೂ ಆಗಿರಬೇಕು. ಶಿಕ್ಷಕರೇ, ಇಂದು ನಮ್ಮ ಪ್ರತಿಯೊಂದು ಹಳ್ಳಿಯ ಶಾಲೆಯು ಒಂದು ಸಣ್ಣ ಸಮಾಜವಾಗಬೇಕು. ಅದು ಸಮಾಜದ ಮಾದರಿಯಂತೆ ಸರ್ವ ತರದಲ್ಲಿ ಉತ್ಸಾಹವರ್ಧಕ ವಾತಾವರಣದಿಂದ ಕೂಡಿರಬೇಕು. ಅಂದರೇನೇ ಮುಂದೆ ತಮ್ಮ ಸಮಾಜಕ್ಕೆ ಸರಿಯಾಗಿ ಹೊಂದಿಕೊಳ್ಳಬಲ್ಲ ಮಕ್ಕಳು ಇಲ್ಲಿ ತರಬೇತಿ ಹೊಂದುವರು. ಇಂಥ ಶಾಲೆಗಳಲ್ಲಿ ಕಲಿತ ಮಕ್ಕಳು ಕೇವಲ ಪ್ರಾಣಿಗಳಂತೆ ಉಪಜೀವಿಸುವದರ ಬದಲು ಆದರ್ಶ ನಾಗರಿಕರಾಗಿ ಬದುಕಿ ಬಾಳುವರಲ್ಲದೆ ರಾಷ್ಟ್ರದ ಮುಂದಾಳತನವನ್ನು ಸಹ ವಹಿಸಲಿಕ್ಕೆ ಯೋಗ್ಯರಾಗುವರು. ನಮ್ಮ ಭಾವೀ ಪೀಳಿಗೆಯು ಸಮತಾವಾದಿ ಪ್ರಜಾಪ್ರಭುತ್ವವುಳ್ಳ ಸಮಾಜದ ಘಟಕಗಳೂ ಹೊಣೆಗಾರರಾದ ನಾಗರಿಕರೂ ಆಗಬೇಕಾಗಿರುವದರಿಂದ ಶಿಕ್ಷಕನು ಶಾಲೆಯನ್ನು ವಿದ್ಯಾರ್ಥಿಗಳ ಆಡಳಿತೆಯ ಸಹಾಯದಿಂದಲೇ ನಡೆಸುವ ಸಾಮರ್ಥ್ಯವುಳ್ಳವನಿರಬೇಕು. ಹಳೆಯ ಶಿಕ್ಷಕರಂತೆ ತಮ್ಮ ಅಧಿಕಾರವನ್ನು ಬಾಲಕರ ಮೇಲೆ ನಡಿಸಲೆತ್ನಿಸದೆ ಬಾಲಕರು ತಮ ಶಾಲೆಯಲ್ಲಿಯ ಆಡಳಿತೆಯನ್ನು ತಾವೇ ಸಾಗಿಸುವ ಪದ್ಧತಿಯನ್ನು ಪರಿಚಯ ಮಾಡಿಕೊಡುವವರೂ ಆ ದಿಶೆಯಲ್ಲಿ ಅವರನ್ನು ಹುರಿದುಂಬಿಸುವವರೂ ಇರಬೇಕು. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಬೆರೆತು ದುಡಿಯುತ್ತ ಪರಸ್ಪರ ಸಹಕಾರ

ದಿಂದ ಸ್ವಾವಲಂಬಿ ಸಮಾಜವನ್ನು ನಿರ್ಮಾಣ ಮಾಡಬಲ್ಲ ಪರಾಗಬೇಕು. ಸಮತೋಲವಾದ ಆಹಾರ, ಸಾಕಷ್ಟು ಆಚ್ಛಾದನ ಹಾಗು ಸುಸಂಸ್ಕೃತ ಜೀವನಕ್ಕೆ ಆವಶ್ಯಕವಾದ ಎಲ್ಲ ಅನುಕೂಲತೆಗಳನ್ನು ಈ ಸ್ವಾವಲಂಬೀ ಸಮಾಜವು ತನ್ನ ಸ್ವಂತ ದುಡಿತದಿಂದ ಉತ್ಪತ್ತಿ ಮಾಡಿಕೊಳ್ಳುವ ಶಕ್ತಿಯುಳ್ಳದ್ದಾಗಬೇಕು.

ಒಟ್ಟಿನಲ್ಲಿ, ರಾಷ್ಟ್ರೀಯ ಶಿಕ್ಷಕನು ಸಾಲೆಯ ಅಭ್ಯಾಸ ಕ್ರಮದ ಯೋಜನೆ ಮಾಡಿಕೊಳ್ಳುವಾಗ ಮುಖ್ಯವಾಗಿ ಎರಡು ದೃಷ್ಟಿಗಳನ್ನು ಮುಂದೆ ಇಟ್ಟುಕೊಂಡು ಸಾಗಬೇಕು. ಮೊದಲನೆಯದು, ನಿಸರ್ಗದಲ್ಲಿ ಆಗಿಂದಾಗ್ಗೆ ಆಗುತ್ತಿರುವ ಬದಲಾವಣೆಗಳು; ಪಶು, ಪಕ್ಷಿ, ಜನಜೀವನ ಹಾಗು ಜನರ ಉದ್ಯೋಗಗಳ ಮೇಲೆ ಅವುಗಳಿಂದುಟಾಗುವ ಪರಿಣಾಮಗಳು; ಎರಡನೆಯದು, ಗ್ರಾಮಸ್ಥರ ಸಾಮಾಜಿಕ ಜೀವನದಲ್ಲಿ ಆಗಿಂದಾಗ್ಗೆ ಒದಗುವ ಹಬ್ಬ—ಹುಣ್ಣಿವೆ, ಜಾತ್ರೆ ಮುಂತಾದ ಸಾಮಾಜಿಕ, ಧಾರ್ಮಿಕ, ರಾಷ್ಟ್ರೀಯ ಹಾಗು ಸಾಂಸ್ಕೃತಿಕ ಉತ್ಸವಗಳು ಮುಂತಾದವು. ಈ ಎರಡೂ ಪರಿಸ್ಥಿತಿಯಲ್ಲಿ ಒದಗುವ ಸಂಗತಿಗಳಿಗೆ ನಿಕಟವಾಗಿ ಸಂಬಂಧಿಸಿ ಸಾಲೆಯ ಕಾರ್ಯಕ್ರಮವನ್ನು ಯೋಜನೆ ಮಾಡಿಕೊಂಡಲ್ಲಿ ಸಾಲೆಗೂ ಸಮಾಜಕ್ಕೂ ಈಗಿರುವ ಭೇದವು ಅಳಿದು ಪರಸ್ಪರ ಸಂಬಂಧವು ಹೆಚ್ಚಾಗುತ್ತ ಹೋಗುವದು. ಇದರಲ್ಲಿಯೇ ಶಿಕ್ಷಕರ ಜಾಣ್ಮೆಯು ಒಡೆದು ಕಾಣುವದು.

ಈ ದೃಷ್ಟಿಯನ್ನೇ ಎಲ್ಲ ಶಿಕ್ಷಕರು ಇಟ್ಟುಕೊಂಡು ದಕ್ಷತೆಯಿಂದ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತ ಹೋದಲ್ಲಿ, ಮುಂದಿನ ಪೀಳಿಗೆಯು ಸುಸಂಸ್ಕೃತವಾಗುವದಲ್ಲದೆ ಅದು ಹೊಸ ಸಮಾಜವನ್ನೂ ನಿರ್ಮಾಣಮಾಡಬಲ್ಲದಾಗುವದು. ಇದರ ಪರಿಣಾಮವಾಗಿ ನಮ್ಮ ರಾಷ್ಟ್ರವು ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿ ಎಣಿಸಲ್ಪಡುವದು.

ಪದವೀಧರರ ರಾಷ್ಟ್ರೀಯ ಶಿಕ್ಷಣ ಕೇಂದ್ರದ (ಒಂದು ದಿನದ ಕಾರ್ಯಕ್ರಮ)

ಈ ಸಂಸ್ಥೆಯು ತಾ—೧—೭—೧೯೪೮ ರಿಂದ ಆರಂಭವಾಗಿದೆ. ಆದುದರಿಂದ ಆರಂಭದ ವಿವಿಧ ಸಿದ್ಧತೆಗಳನ್ನು ಮಾಡಬೇಕಾಗಿದೆ. ಈಗ ಕೊಟ್ಟ ಕಾರ್ಯಕ್ರಮವನ್ನು ತಾತ್ಪೂರ್ತಿವಾಗಿ ಒಂದು ವಾರದ ಮಟ್ಟಿಗೆ ರಚಿಸಲ್ಪಾಗಿದೆ.

ತಾ;— ೧೦—೭—೧೯೪೮ ರಿಂದ ೧೭—೭—೧೯೪೮ ರವರೆಗೆ.

ಮುಂಜಾವು:	೫—೩೦	ಏಳುವ ಗಂಟೆ
	೫-೩೦—೬-೧೫	ಪ್ರಾತರ್ವಿಧಿಗಳು
	೬-೧೫—೬--೩೦	ಪ್ರಾರ್ಥನೆ
	೬--೩೦—೭--೦	ಅಲ್ಪೋಪಹಾರ
	೭--೦ —೭--೩೦	ಸಾಮೂಹಿಕ ಸಚ್ಛತೆ
	೭--೩೦—೮--೩೦	ಸ್ನಾನ ಇತ್ಯಾದಿ
	೮--೩೦—೧೧--೦	ಮೂಲ ಉದ್ಯೋಗ ಮತ್ತು ಚರ್ಚೆ
	೧೧--೦—೨--೩೦	ಊಟ, ವಿಶ್ರಾಂತಿ
ಅಪರಾಹ್ಣ:	೨ --೩೦—೩--೦	ಸಾಮೂಹಿಕವಾಗಿ ನೂಲುವದು
	೩--೦ —೫--೦	ಚರ್ಚೆ ಮತ್ತು ತೋಟದಕೆಲಸ
	೫--೦—೬--೩೦	ಆಟ, ಮನರಂಜನೆ ಕಾರ್ಯಕ್ರಮ ಮತ್ತು ವಿಶ್ರಾಂತಿ
	೬--೩೦—೭--೩೦	ಊಟ
	೭--೩೦—೮--೩೦	ಸಾಮೂಹಿಕ ಚರ್ಚೆ
	೮--೩೦—೧೦--೦	ಸ್ವ-ಅಧ್ಯಯನ
	೧೦--೦—೫--೩೦	ವಿಶ್ರಾಂತಿ

ಬಾಲ್ಕನ್-ಜಿ-ಬಾರಿ

(ಅಖಿಲ ಹಿಂದುಸ್ಥಾನದ ಬಾಲಕರ ಸಂಘ)

ಸ್ಥಾಪನೆ:—೧೯೨೬

ಅಧ್ಯಕ್ಷ:— ಶ್ರೀ. ಬಿ. ಜಿ. ಖೇರ ಅವರು.

●

ಉದ್ದೇಶ: ಶಿಕ್ಷಣ ಮತ್ತು ಮನೋರಂಜನೆ

[ಬಾಲಕನ್-ಜಿ-ಬಾರಿ (ಮಕ್ಕಳ ತೋಟ)ಯು ಮುಂಬಯಿಯಲ್ಲಿ ಮ್ಯಾರಿನ್ ಡ್ರೈವದಲ್ಲಿರುವ ಒಂದು ಆದರ್ಶ ಶಿಕ್ಷಣ ಸಂಸ್ಥೆ. ಈ ಸಂಸ್ಥೆಯ ಬಾಲಕರು-ಬಾಲಿಕೆಯರು ಪ್ರತಿ ಭಾನುವಾರ 'ಬಾರಿ'ಯ ಸಭೆಗೆ ಹೋಗುತ್ತಾರೆ, ಸಮೀಪದ ರಮ್ಯ ಪ್ರಾಕೃತಿಕ ಸ್ಥಳಗಳಿಗೆ ಹೋಗುತ್ತಾರೆ, ಸಮುದ್ರ ತೀರಕ್ಕೆ ಹೋಗುತ್ತಾರೆ, ನೌಕಾ ಕ್ರೀಡೆಯಾಡುತ್ತಾರೆ, ಇವುಗಳಿಂದ ಭಾನುವಾರ ಪಡೆದ ಆನಂದ-ನಗುವನ್ನು ಮತ್ತು ಹರ್ಷವನ್ನು ಇಡಿ ವಾರ ಕಾಯ್ದುಕೊಳ್ಳುತ್ತಾರೆ.

ಈ ಮಕ್ಕಳ ಸಂಸ್ಥೆಯು ಪ್ರೇಮ, ಸತ್ಯ, ಐಕ್ಯದ ತತ್ವಗಳನ್ನು ಮಕ್ಕಳಲ್ಲಿ ಬೇರೂರಿಸುತ್ತದೆ. ಇಲ್ಲಿಯ ಮಕ್ಕಳು ಯಾವ ಭೇದವನ್ನೆಣಿಸದೆ ಒಟ್ಟುಗೂಡಿ ಹಾಡುತ್ತಾರೆ, ಪರಸ್ಪರ ಪ್ರೀತಿಸುತ್ತಾರೆ, ಕಲಿಯುತ್ತಾರೆ. ಸಂಕ್ಷೇಪದಲ್ಲಿ, ಈ ಸಂಸ್ಥೆಯ ಮಕ್ಕಳು ಪ್ರೇಮ ಮತ್ತು ವಿಶ್ವಬಂಧುತ್ವದ ಶಿಕ್ಷಣ-ವನ್ನು—ನೈಜ ಶಿಕ್ಷಣವನ್ನು ಪಡೆಯುತ್ತಾರೆ. ಆದುದರಿಂದ ನಮ್ಮ ನಾಡಿನ ಮಕ್ಕಳಿಗೂ ಅಧ್ಯಾ-ಪಕರಿಗೂ ಇಂಥ ಸಂಸ್ಥೆಯನ್ನು ಕರ್ನಾಟಕದಲ್ಲಿಯೂ ಕಟ್ಟಲು ಪ್ರೇರಣೆ ದೊರೆಯಬೇಕೆಂಬ ಉದ್ದೇಶದಿಂದ ಇದರ ಪರಿಚಯವನ್ನು ಇಲ್ಲಿ ಕೊಡಲಾಗಿದೆ. ಈ ಲೇಖನದ ಲಾಭವನ್ನು ನಮ್ಮ ಶಿಕ್ಷಕ ಬಂಧುಗಳು ಪಡೆಯುವರೆಂದು ಆಶಿಸಲಾಗಿದೆ. —ಸಂಪಾದಕರು.]

ಅದರ ಕಾರ್ಯ ಮತ್ತು ಚಟುವಟಿಕೆಗಳು:—

ಬಾಲ್ಕನ-ಜಿ-ಬಾರಿ ಇದು ಸಿಂಧೀ ಭಾಷೆಯ ಶಬ್ದ ಸಮೂಹವಿದ್ದು, ಅದು ಕಾಕಾಸಾಹೇಬ ಕಾಲೇಕರರ ಅಭಿಪ್ರಾಯದಂತೆ ಹಿಂದುಸ್ಥಾನಿಯಲ್ಲಿ ಗ್ರಹಿಸಲ್ಪಟ್ಟಿದ್ದು; ಅದರ ಅರ್ಥವು "ಮಕ್ಕಳ ತೋಟ" ಎಂದು ಆಗುತ್ತದೆ. ಈ ಸಂಘದ ಮುಖ್ಯ ಉದ್ದೇಶವು ಮಕ್ಕಳನ್ನು ಶಕ್ಯವಿದ್ದಷ್ಟು ಸುಖಿಯಾಗಿಡುವದು; ಮತ್ತು ಅವರು ತಮ್ಮಷ್ಟಕ್ಕೆ ತಾವೇ ಬೆಳವಣಿಗೆ ಹೊಂದುವಂತೆ ಮಾಡುವದು. ನಮ್ಮ ಅಧ್ಯಕ್ಷರಾದ ಶ್ರೀ. ಬಿ. ಜಿ. ಖೇರರವರ ಇತ್ತೀಚಿನ ಹೇಳಿಕೆಯಂತೆ, ಬಾಲ್ಕನ್-ಜಿ-ಬಾರಿ ಇದು ೧೮ ವರುಷದವರೆಗಿನ ಮಕ್ಕಳಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಬಿಡಿಸಲಿಕ್ಕೆ ಸಹಾಯವನ್ನು ಮಾಡಬಲ್ಲವಾದ ಸಂಘವು ಆಗಬೇಕು. ಈ ಸಂಘ ಸಾವಕಾಶವಾಗಿ ಮತ್ತು ಸ್ಥಿರವಾಗಿ ಪ್ರಗತಿ ಹೊಂದುತ್ತಿದೆ. ಅದು ಬೇಗನೆ ತನ್ನ ಉದ್ದೇಶ ಮತ್ತು ಗುರಿಗಳನ್ನು ಸಾಧಿಸಲಿಕ್ಕೆ ಸಮರ್ಥವಾಗಬಹುದೆಂದು ಬಯಸಲಾಗಿದೆ ಮತ್ತು ಆಶಿಸಲಾಗಿದೆ.

"ಬಾಲ್ಕನ್-ಜಿ-ಬಾರಿ" ಇದು ಸಿಂಧದಲ್ಲಿ 'ದಾದಾ' (ಹಿರಿಯಣ್ಣ) ಎಂಬ ಹೆಸರಿನಿಂದ ಪ್ರಸಿದ್ಧರಾದ ನಮ್ಮ ಅಣ್ಣ ಸಮಾನರೊಬ್ಬರಿಂದ ೧೯೨೬ರಲ್ಲಿ ಸ್ಥಾಪಿಸಲ್ಪಟ್ಟಿತು. ಸಾಕಷ್ಟು ಹೆಚ್ಚು ಹೆಚ್ಚು ದೊಡ್ಡವರಾಗುತ್ತ ಹೋದಂತೆ, ಹೆಚ್ಚಿಗೆ

ಸ್ವಾರ್ಥಿಗಳಾಗಿ ನಮ್ಮ ನಿಜವಾದ ಸುಖವನ್ನು ಕಳೆದುಕೊಳ್ಳುತ್ತಿದ್ದೇನೆಂದು ಇವರಿಗೆ ಅನಿಸಿತು. ಮೊದಲಿಗೆ ಸುಖಿಯಾದ ಮಕ್ಕಳು ದೊಡ್ಡವರಾಗುತ್ತ ಸಾಗಿದಾ..! ಮತ್ತು ದೊಡ್ಡವರಾದ ಮೇಲೆ ಸಹ ತಮ್ಮ ಸುಖವನ್ನು ಕಾಯ್ದುಕೊಳ್ಳಲಿಕ್ಕೆ ಸುಸಮರ್ಥರಾಗಬೇಕೆಂದು ಅವರು ಅಭಿಪ್ರಾಯಪಟ್ಟರು. ಹೀಗೆ ಪ್ರತಿಯೊಬ್ಬರು ಬಯಸುವ ಮತ್ತು ಹಿಂಬಾಲಿಸುವ ಸುಖವು ಕೊನೆಯವರೆಗೂ ಸ್ಥಿರವಾಗಿ ಉಳಿಯುವುದು. ಆ ವಿಚಾರದಿಂದ ಅವರು ಮಕ್ಕಳ ಸಲುವಾಗಿ ಬರೆಯುವದನ್ನು ಮೊದಲು ಪ್ರಾರಂಭಿಸಿ, ಅಮೇಲೆ ಅವುಗಳಲ್ಲಿ ಕೆಲವನ್ನು ಸಂಗ್ರಹಿಸಿ, ಅದರಿಂದ ಮತ್ತು ಅವರ ಸಲುವಾಗಿ ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಅಮೇಲೆ ಪ್ರಾಂತಿಕ ಹಾಗೂ ಅಖಿಲ ಭಾರತ ಸಮ್ಮೇಲನಗಳು ಜರುಗಿ ಸಲ್ಪಟ್ಟವು. ಈ ಸಮ್ಮೇಲನಗಳಲ್ಲಿ ಒಬ್ಬರ ಭಾಷೆ ಮತ್ತೊಬ್ಬರಿಗೆ ತಿಳಿಯದಿದ್ದರೂ, ಮಕ್ಕಳಿಗೆ ಪರಸ್ಪರ ಸಹವಾಸದಲ್ಲಿ ಸುಖವೆನಿಸಿತು. ಎಲ್ಲ ಜಾತಿ ಮತ್ತು ಪಂಥಗಳ ಹುಡುಗರು ಬಾಂಧವ್ಯದಿಂದ ನಡೆದುಕೊಳ್ಳುವದನ್ನು ನೋಡಿ, ಶ್ರೀ. "ದಾದಾ"ರ ನಿರೀಕ್ಷಣೆಯು ಸತ್ಯವಾಗಿ ಪರಿಣಮಿಸ ತೊಡಗಿತು.

ಸದ್ಯಕ್ಕೆ ಬಾಲ್ಕನ್-ಜಿ-ಬಾರಿಯು ಪ್ರಾಂತೀಯ ಸಂಘಟನೆಗಳಾಗಿ, ಇವು ಮೂರು ಪ್ರಾಂತಗಳಲ್ಲಿ. ಅಂದರೆ ಮುಂಬಯಿ, ದಿಲ್ಲಿ, ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಇವೆ. ಇದರ ಶಾಖೆಗಳು ಬಂಗಾಲ, ಪಂಜಾಬ, ಸಿಂಧ, ಮಧ್ಯ ಪ್ರಾಂತ, ಬಿಹಾರ, ಮತ್ತು ದಕ್ಷಿಣ ಹಿಂದುಸ್ತಾನವನ್ನೊಂದು ಬೇರೆ ಬಹುತರ ಎಲ್ಲ ಭಾಗಗಳಲ್ಲಿಯೂ ಹರಡಿವೆ ೧೮೫ಕ್ಕೆ ಮೇಲ್ಪಟ್ಟು ಶಾಖೆಗಳಿದ್ದು, ಅದರ ಸದಸ್ಯತ್ವವು ಸುಮಾರು ೫೦೦೦ ಅದೆ. ಬಾಲಕ-ಬಾಲಕಿಯರು ಮಾತ್ರದಲ್ಲಿ ಒಮ್ಮೆಯಾದರೂ ಈ ಕೇಂದ್ರಗಳಲ್ಲಿ ಮತ್ತು ಇವಕ್ಕೂ ಹೆಚ್ಚು ಸಲ ಕೆಲವೊಂದು ವಿಶಿಷ್ಟ ಸ್ಥಳಗಳಲ್ಲಿ ನೆರೆದು ಪ್ರತಿಸಾರಿ ಬೇರೆ ಬೇರೆ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಇದಲ್ಲದೆ 'ಲೇಖನಿ ಗೆಳತನ' ವಿಭಾಗವೊಂದಿದ್ದು, ಇದು ಬೇರೆ ಬೇರೆ ಸ್ಥಳಗಳ ಬಾಲಕರ ಪರಸ್ಪರ ಸಂಪರ್ಕವನ್ನುಂಟು ಮಾಡುತ್ತದೆ.

ಬಾಲ್ಕನ್-ಜಿ-ಬಾರಿಯ ಬೇರೆ ಬೇರೆ ವರ್ಗಗಳಲ್ಲಿ ಮಕ್ಕಳ ಸ್ವಂತ ಗ್ರಂಥಾಲಯಗಳು ಇವೆ; ಮುಂಬಯಿ ಪ್ರಾಂತೀಯ ಕೇಂದ್ರದಲ್ಲಿ ಮಕ್ಕಳ ಮತ್ತು ಕೆಲಸಗಾರರ ಗ್ರಂಥಾಲಯಗಳು ಇವೆ. ಆದರೆ ಅವು ಈಗ ಚಿಕ್ಕವಿದ್ದು, ವಿಸ್ತೃತವಾಗಬೇಕಾಗಿವೆ. 'ಬಾರಿ'ಯಲ್ಲಿ ಬಡ ವಿದ್ಯಾರ್ಥಿಗಳ ನಿಧಿಯಿದ್ದು, ಅರ್ಹತೆಯುಳ್ಳ ಬಡ ಸದಸ್ಯರಿಗೆ ಅಭ್ಯಾಸ ಶಿಷ್ಯವೃತ್ತಿಗಳು ಕೊಡಲ್ಪಡುತ್ತವೆ. ಅದು ಯೋಗ್ಯ ಕಾರಣಗಳೆಂದು ತೋರುವ ದುರ್ಭಿಕ್ಷೆ, ಮಹಾಪೂರ ಮುಂತಾದವುಗಳು ಸಂಭವಿಸಿದಾಗ್ಗೆ, ಸಹಾಯಾರ್ಥವಾಗಿ ಹಣ ಕೂಡಿಸಲಿಕ್ಕೆ ಸಹಾಯ ಮಾಡುತ್ತದೆ. ಈ ಸಂಘವು ಚಾತುರ್ಮಾಸಿಕ ಪತ್ರಿಕೆಗಳನ್ನು ಇಂಗ್ಲಿಷ ಮತ್ತು ಗುಜರಾಥಿಯಲ್ಲಿ "ಪುಷ್ಪ" ಎಂಬ ಹೆಸರಿನಿಂದ, "ಹಮಾರೆ ಬಾಲಕ" ಎಂಬದನ್ನು ಹಿಂದುಸ್ತಾನಿಯಲ್ಲಿ, "ಗುಲಿಸ್ತಾನ" ಎಂಬದನ್ನು ಸಿಂಧಿಯಲ್ಲಿ ಪ್ರಸಿದ್ಧಿಸುತ್ತದಲ್ಲದೆ, "ಮಕ್ಕಳ ವಿಭಾಗ" ಮುಂಬಯಿ ಕ್ರಾನಿಕಲ್ಲದಲ್ಲಿ (ಇಂಗ್ಲಿಷ), "ಪ್ರವಾಸ" ಮತ್ತು "ಬಾಂಬೇ ಸಮಾಚಾರ" (ಗುಜರಾಥಿ), "ಸ್ವದೇಶಿ" 'ಮಿತ್ರನ್' (ತಮಿಳ) ಮತ್ತು ಇತರ ಪತ್ರಿಕೆಗಳನ್ನು ಪ್ರಸಿದ್ಧಿಸುತ್ತದೆ.

ಬಾಲ್ಕನ್-ಜಿ-ಬಾರಿಯು ನಿಯತ ಕಾಲಿಕ ಪ್ರವಾಸಗಳನ್ನು ಏರ್ಪಡಿಸುತ್ತದೆ. ಮತ್ತು ಕೆಲಸಗಾರರನ್ನು ತರಬೇತುಗೊಳಿಸುವ ಶಿಬಿರಗಳನ್ನು ನಡೆಸಿರುತ್ತದೆ. ಇಲ್ಲಿಯವರೆಗೆ ಕೆಲಸಗಾರರ ತರಬೇತಿ ವರ್ಗಗಳು ಐದು ಸಲ ನಡಿಸಲ್ಪಟ್ಟಿವೆ. ಅದರಲ್ಲಿ ಬಾಲಕರನ್ನು ದೂರಿನ ಪ್ರವಾಸಕ್ಕೆ ಕೊನೆಯ ಸಲುವಾಗಿ ಕರೆದುಕೊಂಡು ಹೋದುದು ೧೯೪೧ರಲ್ಲಿ. ಅದರಲ್ಲಿ ಮುಂಬಯಿಯ ೪೦ ಬಾಲಕರು ಸಿಂಧದವರೆಗೆ ಹೋಗಿ, ಕರಾಚಿ, ಹೈದರಾಬಾದ, ಲಾರ್ಕಾನಾ, ಮಹೇಂಜೋದಾರೋ, ಸಕ್ಕರ, ಮತ್ತು ಉಳಿದ ಸ್ಥಳಗಳನ್ನು ಸುತ್ತಿ ಬಂದರು. ಅದೇ ವೇಳೆಗೆ ಅಖಿಲ-ಹಿಂದುಸ್ತಾನ ಬಾಲ್ಕನ್-ಜಿ-ಬಾರಿಯ ಕೆಲಸಗಾರರ ಸಮ್ಮೇಲನವು ಕೂಡಿತ್ತು, ಇಂಥ ಎರಡನೆಯ ಸಮ್ಮೇಲನವು ಮುಂಬಯಿಯಲ್ಲಿ ೧೯೪೬ರಲ್ಲಿ ಕೂಡಿತ್ತು.

ಆಶೆ ಹಾಗೂ ಆಕಾಂಕ್ಷೆಗಳು

ನಮ್ಮ ಸಂಘದ ಉದ್ದೇಶ ಮತ್ತು ಗುರಿಗಳನ್ನು ಸಾಧಿಸಲಿಕ್ಕೆ ನಾವು ಯಾವ ಪ್ರತ್ಯಕ್ಷ ಕಾರ್ಯಗಳನ್ನು ಮಾಡಬಯಸುವೆವೆನ್ನುವದನ್ನು ಕೆಳಗೆ ಹೇಳಿದೆ. ಎಲ್ಲಕ್ಕೂ ಮೊಟ್ಟಮೊದಲಾಗಿ, ಮಕ್ಕಳು ಸ್ವದೇಶಾಭಿಮಾನಿಗಳೂ ಮತ್ತು ಸ್ವಾವಲಂಬಿಗಳಾದ ಹಿಂದುಸ್ತಾನದ ನಾಗರಿಕರಾಗುವಂತೆ, ಅವರಿಗೆ ಶಿಕ್ಷಣವನ್ನು ಕೊಡಬಯಸುವೆವು ಮತ್ತು ಅವರು

ಸ್ವಾರ್ಥತ್ಯಾಗ ಮತ್ತು ಸಹಿಷ್ಣುತೆಯ ಶಕ್ತಿಯುಳ್ಳವರಾಗ ಬೇಕು. ಇದನ್ನು ಸಾಧಿಸಲಿಕ್ಕೆ ನಿಸ್ಸಂಶಯವಾಗಿ ದೀರ್ಘ ಕಾಲಾವಧಿಯ ವರೆಗೆ ಕ್ರಮವು ಸಾಗಬೇಕಾಗುವದು. ಆದರೆ ನಮ್ಮ ಸಂಘವು ತನ್ನ ಪ್ರಯತ್ನಗಳನ್ನು ಮುಂದುವರಿಸು ವದು. ಅದು ಏನೇ ಮಾಡಲು ಸಮರ್ಥವಾದರೂ ಅದು ತುಸು, ಹೆಚ್ಚು ಕಡಿಮೆ ಸಾಂಕೇತಿಕ ಮಾತ್ರವಾಗುವದು. ಏಕೆಂದರೆ, ಶಿಕ್ಷಣವು ಮೊದಲನೆಯದಾಗಿ ತಾಯಿ ತಂದೆ-ಗಳಿಗೆ, ಮನೆಗಳಿಗೆ ಸಂಬಂಧಿಸಿದುದು ಇದ್ದು, ನಂತರ ಶಾಲೆ ಮತ್ತು ಪೂರ್ಣಾವಧಿಯ ಸಂಸ್ಥೆಗಳಿಗೆ ಸಂಬಂಧಿಸಿದು-ದಿರುತ್ತದೆ.

ಬಾಲ್ಕನ್-ಜಿ-ಬಾರಿಯು ಈಗ ತುಸು ಮಾತ್ರ ಕೆಲಸ ಮಾಡಲು ಸಮರ್ಥವಿದೆ. ಯಾಕಂದರೆ, ಅದು ಆದಿತ್ಯವಾರಗ ಳಲ್ಲಿ ಮಾತ್ರ ತನ್ನ ಚಟುವಟಿಕೆಗಳನ್ನು ಸಾಗಿಸುತ್ತಿರುವದ ರಿಂದ, ಮತ್ತು ಅದೂ ಕೂಡ ಆ ದಿನಗಳಲ್ಲಿ ಎರಡು ತಾಸುಗ ಳಿಗಿಂತ ಹೆಚ್ಚಲ್ಲದ್ದರಿಂದ ಅದರ ಕಾರ್ಯವು ಇದೀ ತಿಂಗಳಲ್ಲಿ ೧೦-೧೨ ತಾಸು ಮಾತ್ರ ನಡೆಯುತ್ತಿರುವದು. ಇಷ್ಟೊಂದು ಅಲ್ಪಾವಧಿಯಲ್ಲಿ ಈ ಸಂಘವು ಮಾಡತಕ್ಕ ಕೆಲಸವು ಕೇವಲ ಸಾಂಕೇತಿಕವೂ, ಮಾರ್ಗದರ್ಶಕವೂ ಮಾತ್ರ ಆಗಬಲ್ಲದು. ಈ ಸಂಸ್ಥೆಯ ಕೇಂದ್ರವಾಗಲಿ ಕಕ್ಷೆಯಾಗಲಿ ಇದ್ದಲ್ಲಿಲ್ಲ, ಮಕ್ಕಳ ಹಿತದ ಸಲುವಾಗಿ ಅವಶ್ಯವಾದ ಮತ್ತು ಆ ದಿಶೆ-ಯಲ್ಲಿ ತಾಯಿ-ತಂದೆಗಳಿಗೂ ಶಾಲೆಗಳಿಗೂ ಮಾರ್ಗದರ್ಶಕ ಸ್ವರೂಪವುಳ್ಳ ಕಾರ್ಯ ಮಾತ್ರ ಜರಗುವದು. ಇದೆಲ್ಲಕ್ಕೂ ಹೆಚ್ಚಾಗಿ, ಸ್ವಲ್ಪದರಲ್ಲಿ ಹೇಳಬೇಕಾದರೆ ಈ ಸಂಸ್ಥೆಯು ಬಾಲಕರ ಭಾವನೆಗಳಿಗೆ ಸರಿಯಾದ ಮಾರ್ಗವನ್ನು ತೋರಿ ಸುವ ದೃಷ್ಟಿಯಿಟ್ಟುಕೊಂಡು, ಶಾಲೆ ಮತ್ತು ಮನೆಯ ಚಟುವಟಿಕೆಗಳಿಗೆ ಪೂರಕವಾಗುವಂತೆ ಪ್ರಯತ್ನ ಮಾಡು-ವದು.

ಮಕ್ಕಳ ಬೌದ್ಧಿಕ ಮತ್ತು ಶಾರೀರಿಕ ಶಕ್ತಿಗಳ ಬೆಳವಣಿ-ಗೆಯನ್ನುಂಟು ಮಾಡಲು ಅಖಿಲ-ಹಿಂದುಸ್ತಾನ ಮಕ್ಕಳ ಸ್ವಯಂಸೇವಕ ದಳವನ್ನು ಪ್ರಾರಂಭಿಸಬೇಕೆಂದು ಈ ಸಂಘದ ಬಯಕೆ ಇದೆ. ಯಾವದೇ ವರ್ಗ-ಬಡವ, ಅಥವಾ ಶ್ರೀಮಂತ-ಯಾವದೇ ಧರ್ಮ-ಹಿಂದು, ಅಥವಾ ಮುಸಲ್ಮಾನ-ಯಾವದೇ ಪ್ರಾಂತ-ಮಹಾರಾಷ್ಟ್ರ ಅಥವಾ ಮದ್ರಾಸ, ಇವುಗಳಿಂದ ಅತೀತವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಐಕ್ಯಕ್ಕಾಗಿ ಅಖಿಲ ಹಿಂದುಸ್ತಾನದ ಮಕ್ಕಳಿಗೆ ಇದು ಒಂದು ಸಾಮಾನ್ಯ ವೇದಿಕೆಯಾಗಬಯಸುತ್ತದೆ. ಇದಲ್ಲದೆ ಎಲ್ಲ ಕಡೆಗಳಲ್ಲಿ ಮಕ್ಕಳ ಪರಸ್ಪರ ಸಹಾಯ ಕೇಂದ್ರವನ್ನು ಸ್ಥಾಪಿಸಲು ಇದು ಇಚ್ಛಿಸುತ್ತದೆ. ಬಾಲ್ಕನ್ ಜಿ-ಬಾರಿ, ಮಕ್ಕಳಿಗೆ ಸಂಬಂಧಿಸಿದ ಯಾವದೇ ಸಮಸ್ಯೆ ಅಥವಾ ತೊಂದರೆಗಳು ತಂದೆ-ತಾಯಿಗಳ, ಸಮಾಜದ ಅಥವಾ ಸರಕಾರದ ಮುಂದೆ ನಿಂತಾಗ ಅವುಗಳನ್ನು ಬಿಡಿ-ಸಲು ಸಿದ್ಧತೆ, ಒಪ್ಪಿಗೆ, ಮತ್ತು ಸಾಮರ್ಥ್ಯಗಳಿಂದ ಯುಕ್ತವಾದ ಶಾಖೆಗಳನ್ನು ತಾನು ಉಂಟುಮಾಡಬೇಕೆಂದು ಈ ಸಂಸ್ಥೆಯ ಗುರಿ ಇರುವದು.

ಬಾಲ್ಕನ್-ಜಿ-ಬಾರಿಯ ಮಕ್ಕಳ ಸ್ವಂತ ವಾಚನಾಲಯವು ಮಕ್ಕಳ ಸಲುವಾಗಿ ಮತ್ತು ಮಕ್ಕಳಿಗೆ ಸಂಬಂಧಿಸಿದ ಎಲ್ಲ ತರಹದ ಪುಸ್ತಕಗಳುಳ್ಳದ್ದಾಗುವದು. ಅಖಿಲ ಹಿಂದುಸ್ತಾನ ಮಕ್ಕಳ ಸ್ವಂತ ವಸ್ತು ಸಂಗ್ರಹಾಲಯದಲ್ಲಿ ಬಾಲಕ-ಬಾಲ ಕಿಯರು ತಮ್ಮ ಅಭಿರುಚಿ ಮತ್ತು ಸೌಂದರ್ಯ ಗ್ರಾಹಕ ಬುದ್ಧಿಯ ಶಕ್ತಿಯಿಂದ ಸಂಗ್ರಹಿಸಿದ ಎಲ್ಲ ವಸ್ತುಗಳುಳ್ಳ-ದ್ದಾಗುವದು. ಇದಲ್ಲದೆ, ಅವರ ಅಭಿರುಚಿಯನ್ನು ಸೆಳೆಯ ತಕ್ಕ ಮತ್ತು ಅವರಿಗೆ ಶಿಕ್ಷಣವನ್ನು ಕೊಡತಕ್ಕ ವಸ್ತು ಮತ್ತು ಸಾಧನ ಸಾಮಗ್ರಿಗಳಿಂದ ಕೂಡಿದ್ದಾಗುವದು. ಮಕ್ಕಳಿಗೆ ಮನಶ್ಶಾಸ್ತ್ರವನ್ನು ಕುರಿತು ಮತ್ತು ಈ ದೇಶದ ಹಾಗು ಉಳಿದ ದೇಶದ ಮಕ್ಕಳ ವಿಷಯವಾಗಿ ಕಾಯಿದೆಗ ಳನ್ನು ಕುರಿತು ಇದು ಅಭ್ಯಾಸ-ತರಗತಿಗಳನ್ನು ಸ್ಥಾಪಿಸು ವದು. ಅವಶ್ಯವೆನಿಸಿದಾಗ ಈ ಸಂಸ್ಥೆಯು ಮಕ್ಕಳ ಉನ್ನತಿ ಗಾಗಿ ಚಳವಳಿ ಹೂಡುವದು. ಆದರ್ಶ ತತ್ವಗಳ ತಳಹದಿಯ ಮೇಲೆ ಮಕ್ಕಳ ಶಾಲೆಗಳ ಜಾಳಿಗೆಯನ್ನು ಸ್ಥಾಪಿಸಲು ಪ್ರಯತ್ನ ಮಾಡುವದು. ಒಟ್ಟಿನಲ್ಲಿ ಇದು ಅಖಿಲ-ಹಿಂದು ಸ್ತಾನ ಮಕ್ಕಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವದು.

ಸಂಕ್ಷೇಪದಲ್ಲಿ ಹೇಳಬೇಕಾದರೆ, ಬಾಲ್ಕನ್-ಜಿ-ಬಾರಿಯು ಮೇಲೆ ಹೇಳಿದ ರೀತಿಯಲ್ಲಿ ಕೆಲಸಮಾಡಲು ಇಚ್ಛಿಸುತ್ತದೆ. ಅದು ಈ ವರೆಗೆ ವಿವರಿಸಿದ ರೀತಿಯಲ್ಲಿ, ಮುಂದೆ ಇನ್ನು ಬರಲಿರುವ ಕಠಿಣತಮವಾದ ದಿವಸಗಳಲ್ಲಿ ಮಕ್ಕಳು ಸಾಕಷ್ಟು ಸ್ವಾರ್ಥತ್ಯಾಗ,ಮತ್ತು ಸಹಿಷ್ಣುತೆಯ ಶಕ್ತಿಯು ತರಾದ, ದೇಶಾಭಿಮಾನ ಮತ್ತು ಸ್ವಾವಲಂಬನಗಳಿಂದ ಪರಿಪೂರ್ಣರಾದ ಹಿಂದುಸ್ತಾನದ ನಾಗರಿಕರಾಗಬೇಕೆಂದು ಇದು ಇಚ್ಛಿಸುತ್ತದೆ. ಸತ್ಯಕ್ಕೆ ಈ ಸಂಸ್ಥೆಯು ಗಣನೆಗೆ ತಾರದಷ್ಟು ಸಣ್ಣ ಪ್ರಮಾಣದಲ್ಲಿ—ಕಾರ್ಯಪ್ರವೃತ್ತ ವಾಗಿದೆ. ಆದರೂ ಈ ಎಲ್ಲ ಸಂಗತಿಗಳನ್ನು ಕೇವಲ ದೃಷ್ಟಿ

ಪಥದಲ್ಲಿ ಇಟ್ಟುಕೊಂಡಿರದೆ ಅವುಗಳನ್ನು ಪ್ರತ್ಯಕ್ಷ ಕಾರ್ಯ-ರಂಗದಲ್ಲಿ ಇಳಿಸಲಾಗಿದೆ ಎಂಬುದನ್ನು ನಿದರ್ಶಿಸುವದು ಬಾಲ್ಕನ್-ಜಿ-ಬಾರಿಯ ಮಹತ್ವಾಕಾಂಕ್ಷೆಯಾಗಿದೆ.

ಪತ್ರವ್ಯವಹಾರಕ್ಕಾಗಿ ಪತ್ತೆ:—

ಬಾಲ್ಕನ್-ಜಿ-ಬಾರಿ-ಅಖಿಲ ಹಿಂದೂ ಬಾಲಕ-ಸಂಘ,
ನ್ಯಾಶನಲ್ ಹೆಡ್‌ಕ್ವಾರ್ಟರ್ಸ್-" ಗುಲಿಸ್ತಾನ ", ಖಾರ-
ಮುಂಬೈ, ೨೧.

ಮಕ್ಕಳ ಪಟ್ಟಣ

(ಯು. ಎಸ್. ಆಯ್. ಎಸ್.)

ಕಲಿಯುವದರಲ್ಲಿ ಹರುಷವನ್ನು ಪ್ರದರ್ಶಿಸುವದು ಮತ್ತು ಪ್ರತ್ಯಕ್ಷಜೀವನದಲ್ಲಿ ಯಶಸ್ವಿಯಾಗಿ ಸರಿಪಡಿಸಿಕೊಳ್ಳುವದು ಇವು ಪರೀಕ್ಷೆಗೋಸುಗ ಸಾಧನಗಳೆಂದು ತಿಳಿಯುವದಾದರೆ, ನೂತನ ಶಿಕ್ಷಣದಲ್ಲಿ ಕ್ಯಾಲಿಫೋರ್ನಿಯಾದಲ್ಲಿಯ ಬ್ಲಾಕ್ಮನ ಪಟ್ಟಣವು ಉಜ್ವಲ ಯಶಸ್ಸನ್ನು ಪಡೆದು ಆದಿ ಉದಾಹರಣೆಯಾಗಿದೆ (ಮಾದರಿಯಾಗಿದೆ). ಹದಿನೈದು ವರ್ಷಗಳ ಹಿಂದೆ ಪ್ರಾರಂಭ ಮಾಡಿದ ಪ್ರಯೋಗದ ಪ್ರತಿ-ಫಲವೆಂದರೆ, ಚಿಕ್ಕ ಪ್ರಮಾಣದ ಆ ಪಟ್ಟಣವು-ಮಕ್ಕಳ ಪಟ್ಟಣವು. ಲಾಸ ಏಂಜಿಲಿಸದ ಉತ್ತರಕ್ಕೆ ಸುಮಾರು ೧೦೦ ಮೈಲು ದೂರದಲ್ಲಿ, ಸಾಂತಾ ಮೇರಿಯಾ ಪಟ್ಟಣದ ಸಮೀಪದ ಅಡವಿಗೊಂದರ ದಂಡೆಯಲ್ಲಿ ಜನರು ಹಾದಾಡುವ ದಾರಿಯ ತುಸು ದೂರವಿರುವ ಬ್ಲಾಕ್ಮನ ಪಟ್ಟಣವು ೨೦,೦೦೦ ಚೌ. ಫೂಟು ಮಾತ್ರದ ಕ್ಷೇತ್ರವುಳ್ಳದ್ದಿರುವದು. ಆದರೆ ಆ ಅಡಕವಾದ ಕ್ಷೇತ್ರದಲ್ಲಿ, ಆ ಪಟ್ಟಣವು ಎಲ್ಲ ರೀತಿಯಲ್ಲಿ ಪರಿಪೂರ್ಣವಾಗಿದೆ. ಅದರಲ್ಲಿ, ಪುಟ್ಟ ಪ್ರಮಾಣದವಾದರೂ ರೂಢಿಗನುಸಾರವಾದ ಬೀದಿಗಳು, ಮನೆಗಳು. ಉದ್ದಿಮೆಗಳು, ಅಂಚೆ ಮನೆ, ಪುಸ್ತಕಾಲಯ, ಬ್ಯಾಂಕು, ವಿವಿಧ ವಸ್ತು ಪ್ರದರ್ಶನಾಲಯ, ವೃತ್ತ ಪತ್ರ, ವಾಣಿಜ್ಯ-ಮಂದಿರ, ಪ್ರವಾಸಿಗರ ಶಾಖೆ, ಕಿರಾಣಿ ಅಂಗಡಿ, ಹೂದೋಟ, ಗಿಡ, ಕಂಟಿ, ಹುಲ್ಲುಗಾವಲು ಹಾಗೂ ಸರೋವರಗಳಿಂದ ಕೂಡಿದ ಉಪವನವೂ ಸಹ ಕಂಡು ಬರುವವು.

ಮಕ್ಕಳು ನಗರದ ಆಡಳಿತೆಯನ್ನು ಸಾಗಿಸುವರು, ನಗರಾಧ್ಯಕ್ಷನನ್ನು ಮತ್ತು ನಗರ ಸಭೆಯನ್ನು ಚುನಾವಣೆಯಿಂದ ಆರಿಸುವರು; ಬ್ಯಾಂಕು ಹಾಗೂ ಉಗ್ರಾಣ(Store) ಗಳನ್ನು ನಡೆಸಲಿಕ್ಕೆ ಬೇಕಾದ ಸಂಬಳದ ಸಲುವಾಗಿ ವಿಶಿಷ್ಟ ಚಲಾವಣೆಯ ನಾಣ್ಯವನ್ನು ಚಲಾವಣೆಯಲ್ಲಿ ತರುವರು. ಪ್ರಥಮ ಚಿಕಿತ್ಸೆಯನ್ನು ಕಲಿತು, ಸಾದಾ ಕಾಹಿಲೆ-ಕಸಾರಿಕೆಗಳಿಗೆ ತಮ್ಮದೇ ಆದ ವೈದ್ಯಶಾಲೆಯಲ್ಲಿ ಔಷಧೋಪಚಾರ ಮಾಡುವರು. ಮನೆ ಕಟ್ಟುವದು, ವ್ಯಾಪಾರ ಮಾಡುವದು, ಲೆಕ್ಕ-ಪತ್ರಗಳನ್ನಿಡುವದು, ಬಡಿಗತನ, ಒಕ್ಕಲತನ, ಹಾಗೂ ಇತರ ಎಷ್ಟೋ ಉಪಯುಕ್ತ ಉದ್ಯೋಗಗಳನ್ನು ಕಲಿತು ಅವುಗಳನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ತರುವರು.

ಈ ಮಕ್ಕಳ ಪಟ್ಟಣಕ್ಕೆ ಜನ್ಮವಿತ್ತವಳು ಶ್ರೀಮತಿ ಫುಲ್ಲರ್ ಎಂಬಾಕೆಯು. ಅವಳು " ಹುಟ್ಟಿನಿಂದ ಶಿಕ್ಷಕ "ನಲ್ಲಿರುವ ಸಹಾನುಭೂತಿಯಿಂದ ಕೂಡಿದವಳು. ಮಕ್ಕಳು ತಮಗೆ ನೀರಸ ಮತ್ತು ನಿರ್ಜೀವವೆಂದು ತೋರುವ ಶಾಲೆಯ ನಿತ್ಯ ಕ್ರಮಕ್ಕೆ ತಾವು ಹೊಂದಿಕೊಂಡು ಹೋಗಲು ಮಾಡುವ ಅವರ ಪ್ರಯತ್ನಗಳನ್ನು ಆ ಮಹಿಳೆಯು ಸಹಾನುಭೂತಿಯಿಂದ ಬಹು ವರ್ಷ ನಿರೀಕ್ಷಿಸಿದಳು. ಆಕೆಯು ಅವರ ಆನಂದಭರಿತ ಹಾಗೂ ಸತ್ವಯುಕ್ತ ಆಟಗಳನ್ನು—ಮನೆ ಕಟ್ಟುವದು, ಉಗ್ರಾಣ, ಬ್ಯಾಂಕು, ಉಗಿಬಂಡಿ ಆಟಾಡುವದು, ಆರೈಕೆ ಮಾಡುವದು, ತೋಟದ ಕೆಲಸ ಮಾಡುವದು ಮೊದಲಾದವುಗಳನ್ನು—ಸಹ ಆಕೆಯು ಕಣ್ಣಾರೆ ಕಂಡಿದ್ದಳು. ಆಕೆಯ ಮುಂದಿನ ಸಮಸ್ಯೆಯು ಸಹಜವಾಗಿ ಬಿಟ್ಟು ಹೋಯಿತು. ಶಾಲೆಯು ಚಿತ್ತಾಕರ್ಷಕ ಮತ್ತು ಯಶಸ್ವಿಯಾಗಬೇಕಾದರೆ, ಅದು ಬೇಗನೆ ತನ್ನಲ್ಲಿ ಮಕ್ಕಳಿಗೆ ದೊಡ್ಡವರಾಗಲಿಕ್ಕೆ (ದೊಡ್ಡವರಂತೆ ಆಚರಿಸಲಿಕ್ಕೆ) ಅವಕಾಶವನ್ನುಂಟುಮಾಡಿಕೊಡಬೇಕು.

ಬ್ಲಾಕ್ಮನ ಸ್ಕೂಲ ಡಿಸ್ಟ್ರಿಕ್ಟ—ಕ್ಯಾಲಿಫೋರ್ನಿಯಾದ ಎಕೆ ಕೆಲಸಗಾರರ ಮಕ್ಕಳಿಂದ ತುಂಬಿದ ಎರಡು ಕೋಣೆಗಳ ಭವನ—ದ ಸ್ಥಾಪನೆಯ ಜೊತೆಗೇ ಶ್ರೀಮತಿ ಫುಲ್ಲರಳ ಪ್ರಯೋಗವೂ ಪ್ರಾರಂಭವಾಯಿತು. ಚಿಕ್ಕದಾಗಿ ಪ್ರಾರಂಭಿಸಿ-ಮೂಲೆಯಲ್ಲಿಯ ಮೇಜು ಉಗ್ರಾಣವಾಯಿತು, ಕಟ್ಟಿಗೆಯ ಕವಾಟೊಂದನ್ನು ಬ್ಯಾಂಕು ಎಂದು ಗುರ್ತಿಸಲಾಯಿತು. ಶ್ರೀಮತಿ ಫುಲ್ಲರಳು ಆ ಉತ್ಸಾಹಭರಿತ ವಿದ್ಯಾರ್ಥಿಗಳನ್ನು ತನ್ನ ಮನದಲ್ಲಿಯ ಪೂರ್ವ ಯೋಜನೆಯ ಮಾರ್ಗದಲ್ಲಿ ಒಯ್ಯಲಾರಂಭಿಸಿದಳು.

ಮಕ್ಕಳು ಮನಮುಟ್ಟಿ ದುಡಿದರು. ಗಂಡು ಮಕ್ಕಳು ಚೀಟು ಬಟ್ಟೆಯ ಮೇಲೆ ನೀಲಿ ಬಣ್ಣದ ಅಚ್ಚು ಹಾಕಿದರು.

ಹೆಣ್ಣುಮಕ್ಕಳು ಬಟ್ಟೆಯ ಮಧ್ಯಭಾಗದಲ್ಲಿ ನಕ್ಷೆ ತೆಗೆದರು. ತಮಗೆ ಆವಶ್ಯವಿದ್ದ ವಸ್ತುಗಳನ್ನು ಬೇಡಲಿಕ್ಕೆ ಅವರೆಲ್ಲರೂ ಬೇರೆ ಬೇರೆ ವರ್ತಕರಿಗೆ ಪತ್ರ ಬರೆದರು. ಈ ಅನಿರೀಕ್ಷಿತ ಬೇಡಿಕೆಗಳಿಗೆ ಧಾರಾಳವಾಗಿ ಮಾನ್ಯತೆ ದೊರಕಿತು. ಎಣ್ಣೆ ವರ್ತಕ ಸಂಘದ ಅಧ್ಯಕ್ಷನು ಭೂಮಿಯನ್ನು ಕೊಟ್ಟನು. ಇತರ ಉತ್ಸಾಹಿಗಳು ಉಸುಕು, ಗರಸು, ಕೆಲಸಕ್ಕೆಬಾರದ ಕಟ್ಟಿಗೆ, ಸಿಮೆಂಟು, ಮತ್ತು ಬಣ್ಣಗಳನ್ನು ಕೆಳುಹಿ ಕೊಟ್ಟರು. ಎಷ್ಟೋ ಜನರು ಉದಾರ ಮನಸ್ಸಿನಿಂದ ಔದ್ಯೋಗಿಕ ಸಲಹೆಗಳನ್ನೂ ಸಹ ಕೊಟ್ಟರು.

ಇದರಿಂದ ಶಿಕ್ಷಕರು ಹಾಗು ಶಿಕ್ಷಿತರು ಇಬ್ಬರೂ ಶಿಕ್ಷಣದಲ್ಲಿ ಪ್ರೀತಿಯುಕ್ತ ಸಾಹಸವನ್ನು ಕಂಡು-ಕೊಂಡರು. ಪ್ರಾಯಶಃ ಇದಕ್ಕೂ ಮುಂಚೆ, ಮಕ್ಕಳು ಗಣಿತ ವಿಷಯವನ್ನು ತಮ್ಮತರಗತಿಗಳಲ್ಲಿ ಅಷ್ಟೇ ಅಲ್ಲದೆ, ತಮ್ಮ ಉಗ್ರಾಣದ ಲೆಕ್ಕ-ಪತ್ರಗಳನ್ನು ಇಡುವದರಲ್ಲಿ ಅಥವಾ ತಮ್ಮ ಸ್ವಂತ ಬ್ಯಾಂಕುಗಳಲ್ಲಿ ಸೊತ್ತುಗಳ ಮೇಲೆ ಸಾಲಗಳ ವ್ಯವಹಾರಗಳಲ್ಲಿ ಎಂದೂ ಕಲಿತಿದ್ದಿಲ್ಲ. ತಮ್ಮದೇ ಆದ ಅಂಚೆಕಚೇರಿಯಲ್ಲಿ ಅವರಿಗೆ ಭೂಗೋಲ ವಿಷಯವು ತರಗತಿಯಲ್ಲಿ ಹೆಸರು ಬರೆಯಲು ದುಸ್ಸಾಧ್ಯವಾದ ಊರುಗಳ ಹೆಸರಿನ ಪಟ್ಟಿಯಲ್ಲ; ಆದರೆ ಅದು-ತಮ್ಮ ಫ್ರೆಂಚ, ಬೆಲ್ಜಿಯನ, ಇಂಗ್ಲಿಷ ಅಥವಾ ಮೆಕ್ಸಿಕನ್ ಜನರ ವಾಸಸ್ಥಳಗಳ ಸಾರವತ್ತಾದ ವರ್ಣನೆ ಎಂಬ ಭಾವನೆಯು ಒಡಮೂಡಿತು. ಮತ್ತುಅವರಿಗೆ ಆ ಬೇರೆ ಬೇರೆ ದೇಶಗಳ ನಿವಾಸಿಗಳ ಸಮಸ್ಯೆ ಮತ್ತು ಅಭಿರುಚಿಗಳು ತಮ್ಮವುಗಳಂತೆಯೇ— ಅಲ್ಲಿಯ ನಿವಾಸಿಗಳು ತಮಗೆ ಚಿತ್ತಾಕರ್ಷಕ ಗೆಳೆಯರಾಗುವ ಮಟ್ಟಿಗೆ ಮಾತ್ರ ಭಿನ್ನರು-ಇರುವವೆಂಬುದೂ ಕಂಡುಬಂತು. ದೂರಿನ ಎಸ್ಕಿಮೊ ಜನರ ವಸಾಹತುಗಳಿಂದ ಹಾಗೂ ದಕ್ಷಿಣ ಸಮುದ್ರದ ನಡುಗಡ್ಡೆಗಳ ಹಳ್ಳಿಗಳಿಂದ ದೀರ್ಘ ಮತ್ತು ಹರಟೆ ಪ್ರಕಾರದ ಪತ್ರಗಳು, ಪ್ರೀತಿಯ ಉಡುಗರೆಗಳು ಅವರ ಅಂಚೆಕಚೇರಿಗೆ ಬರಲಾರಂಭಿಸಿರುವವು. ಹೀಗೆ ಅವರ ಅಂಚೆಕಚೇರಿಯು " ಸಹಿಷ್ಣುತೆ, ಪ್ರೇಮ, ನಿಜಸೌಹಾರ್ದ ಹಾಗೂ ವಿಶ್ವಜ್ಞಾನ " ಇವುಗಳ ಕೇಂದ್ರವಾಗಿರುವದು.

[* ಬಾಲ್ಕನ— ಜಿ—ಬಾರಿ ಯ ಆಶ್ರಯದಲ್ಲಿ ಪ್ರಸಿದ್ಧಿಸಲ್ಪಟ್ಟಿರುವ ಮಕ್ಕಳ ಸ್ವಂತ ಮಾಸಿಕ ಪತ್ರ " ಪುಷ್ಪ " ದಿಂದ ಆಯ್ದುಕೊಳ್ಳಲಾಗಿದೆ.

ಹಿಂದೀ ಮಕ್ಕಳ ಹಕ್ಕು-ಬಾಧ್ಯತೆಗಳ ಸನದು

ಬಾಲ್ಕನ-ಜಿ-ಬಾರಿ-ಅಖಿಲ ಹಿಂದ ಬಾಲಕ ಸಂಘದಿಂದ ರಚಿತವಾದುದು

ಅಧ್ಯಕ್ಷ—ಶ್ರೀ. ಬಿ. ಜಿ. ಖೇರ ಅವರು.

ನ್ಯಾಶನಲ್ ಹೆಡ್‌ಕ್ವಾರ್ಟರ್ಸ್: "ಗುಲಿಸ್ತಾನ",
ಖಾರ—ಮುಂಬಯಿ, ೨೧.

ತನ್ನ ಸರಿಯಾದ ಬೆಳವಣಿಗೆ ಮತ್ತು ಸಂರಕ್ಷಣೆಗೆ ಸಹಾಯವಾಗುವ ಕೆಳಗೆ ಕಾಣಿಸಿದ ಹಕ್ಕುಗಳು ಹಿಂದುಸ್ತಾನದ ಪ್ರತಿಯೊಬ್ಬ ಬಾಲಕನಿಗೆ ಇರಲಿಕ್ಕೆಬೇಕು.

೧. ಬಾಲಕನು (ಮಗುವು) ಸ್ವತಂತ್ರ ದೇಶ, ಸ್ವತಂತ್ರ ವಾತಾವರಣ ಮತ್ತು ಸ್ವತಂತ್ರ ಪರಿಸ್ಥಿತಿಯಲ್ಲಿ ವಾಸಿಸಬೇಕು; ಜಾತಿ ಅಥವಾ ಪಂಥಗಳ ನಿರ್ಬಂಧಗಳಿಗೊಳಪಡಿಸದೆ ಅವನ ಪರಿಪೂರ್ಣ ಬೆಳವಣಿಗೆಗೆ ಅವಶ್ಯವಾದ ಎಲ್ಲ ಅವಕಾಶವನ್ನು ಅವನಿಗೆ ಒದಗಿಸಿ ಕೊಡಬೇಕು.

೨. ಅಂಚಿಕೆ ಹಾಗೂ ದಂಡನೆಗಳಿಂದ ಮುಕ್ತವಾದ ಸುಖದಾಯಕ ಗೃಹ ವಾತಾವರಣವನ್ನು ಬಾಲಕನಿಗೆ ಒದಗಿಸಿಕೊಡಬೇಕು. ಅವನಿಗೆ ಸರಿಯಾದ ಆಹಾರ, ಆಚ್ಛಾದನಗಳು ದೊರೆಯಬೇಕು; ಪ್ರೀತಿ ವಿಶ್ವಾಸಗಳಿಂದ ಅವನ ಪೋಷಣೆಯು ನಡೆಯಬೇಕು.

೩. ಮಗುವಿಗೂ ಮತ್ತು ಮಗುವಿನ ತಾಯಿಗೂ ಪ್ರಸವಪೂರ್ವದಲ್ಲಿ, ಪ್ರಸವ ವೇಳೆಯಲ್ಲಿ ಮತ್ತು ಪ್ರಸವಾನಂತರದಲ್ಲಿ ಯೋಗ್ಯ ಆರೈಕೆಯ ಆಶ್ವಾಸನವಿರಬೇಕು.

೪. ಮಗುವು ತಾರುಣ್ಯಾವಸ್ಥೆಗೆ ಮುಟ್ಟುವವರೆಗೆ ಅದರ ಬೆಳವಣಿಗೆಯ ಎಲ್ಲ ಅವಸ್ಥೆಗಳಲ್ಲಿ ಅದಕ್ಕೆ ಸಾಕಷ್ಟ

ವೈದ್ಯಕೀಯ ಸಹಾಯ ದೊರೆಯಬೇಕು. ಮಗುವಿನ ಆರೋಗ್ಯ ಆರೈಕೆಗಳು ಅದರ ತಾಯಿ-ತಂದೆಗಳ ಅಥವಾ ಪಾಲಕರ ಮತ್ತು ಸರಕಾರದ ಮುಖ್ಯ ಹಂಬಲಾಗಿರಬೇಕು.

೫. ಮಗುವಿನ ಬುದ್ಧಿಬಲಕ್ಕನುರೂಪವಾಗಿ ಅದಕ್ಕೆ ಅತ್ಯುತ್ತಮವಾದ ಶಿಕ್ಷಣ ದೊರೆಯಬೇಕು-ಶಿಕ್ಷಣವು ಉದಾರವೂ ಉಪಯುಕ್ತವೂ ಮತ್ತು. ಉತ್ತಮ ನಾಗರೀಕತೆ ಮತ್ತು ಸೇವೆಗಳಿಗೆ ಸಿದ್ಧಗೊಳಿಸುವಂಥಹದೂ ಇರಬೇಕು. ಮಗುವಿನ ಶಿಕ್ಷಣದ ವೆಚ್ಚಕ್ಕೆ ಸರಕಾರದ ಉತ್ಪನ್ನ (ಆದಾಯ)ದಲ್ಲಿ ಅಗ್ರಸ್ಥಾನವಿರಬೇಕು.

೬. ಮಗುವಿಗೆ ಆಟವಾಡುವ ಹಾಗೂ ಮನೋರಂಜನೆ ಮಾಡಿಕೊಳ್ಳುವ ಅಧಿಕಾರ (ಹಕ್ಕು) ಇರುವದು. ಈ ಉದ್ದೇಶ-ಸಾಧನೆಗಾಗಿ ಶಾಲೆಗಳೂ ಹಾಗೂ ಸ್ಥಾನಿಕ ಸಂಸ್ಥೆಗಳೂ ಮಗುವಿಗೆ ಸಾಕಷ್ಟು ಅನುಕೂಲತೆಗಳನ್ನು ಒದಗಿಸಿಕೊಡಲಿಕ್ಕೆಬೇಕು.

೭. ತಾಯಿತಂದೆಗಳು ಅಥವಾ ಪಾಲಕರು ತಮ್ಮ ಪ್ರಯೋಜನಕ್ಕಾಗಿ ಮಕ್ಕಳನ್ನು ಯಾವುದೇ (ದ್ದುಷ್ಟ) ರೀತಿಯಲ್ಲಿ ಉಪಯೋಗಿಸಕೂಡದೆಂದು ಮಗುವಿಗೆ ಕಾನೂನಿನಿಂದ ಸಂರಕ್ಷಣೆ ಇರಬೇಕು.

೮. ಮಂದಬುದ್ಧಿಯ (ಹಿಂದುಳಿದ) ಅಥವಾ ನ್ಯೂನತೆಯುಳ್ಳ ಮಗುವಿನ ಆರೈಕೆ ಹಾಗೂ ಶಿಕ್ಷಣಗಳ ಸಲುವಾಗಿ ವಿಶಿಷ್ಟ ಶಿಕ್ಷಣಾಲಯಗಳಿರಬೇಕು.

೯. ಹಳ್ಳಿಯಲ್ಲಿಯ ಮಗುವಿಗೆ, ಪಟ್ಟಣದಲ್ಲಿಯ ಮಗುವಿಗೆ ದೊರೆಯಬೇಕಾದ ಎಲ್ಲ ಹಕ್ಕುಗಳೂ ಅನುಕೂಲತೆಗಳೂ ದೊರೆಯಲೇಬೇಕು.

ಪ್ರೌಢನೇ ಮೋಜು ನೋಡು

ಸಾಲಗಾರನು ಸಾವುಕಾರನ ಸಾಲ ನುಂಗಲು ಪ್ರೌಢನೇ ।
ಯುಕ್ತಿ ಹುಡುಕಲು ಕಾಯ್ದೆಗಾರನ ಮನೆಗೆ ಹೋದನು ಪ್ರೌಢನೇ ||೧||
ಕಾಯ್ದೆಗಾರ ಬ್ಯಾ, ಬ್ಯಾ, ಎನ್ನುವ ಹಂಚಿಕೆಯನು ಪ್ರೌಢನೇ।
ಹೇಳಲವನು ಹಾಗೆ ನಡೆವೆನು ಎಂದ ಋಣಕೋ ಪ್ರೌಢನೇ ||೨||
ನ್ಯಾಯಸ್ಥಾನದಲ್ಲಿ ಕುಳಿತ ನ್ಯಾಯಮೂರ್ತಿಯು ಪ್ರೌಢನೇ ।
ನಿನ್ನ ಜಗಳವ ಏನು ಪೇಳೆನೆ ಸಾಲಗಾರs ಪ್ರೌಢನೇ ||೩||
ಸಾಲಗಾರನು ಮೌನ ನಟಿಸಿ ಬ್ಯಾ,ಬ್ಯಾ, ಎಂದನು ಪ್ರೌಢನೇ !
ನ್ಯಾಯಮೂರ್ತಿಯು ಚಕಿತನಾಗಿ ಹುಚ್ಚನೆಂದನು ಪ್ರೌಢನೇ ||೪||
ಸಾವುಕಾರನ ಸಾಲವೆಲ್ಲ ಮುಳುಗಿ ಹೋಯಿತು ಪ್ರೌಢನೆ ।
ಧನಕೋ ಎದೆಯ ಬಡಿದುಕೊಳ್ಳುತ ಮನೆಗೆ ಹೋದನು ಪ್ರೌಢನೇ ||೫||
ನಂದದಿಂದ ಕಾಯ್ದೆಗಾರ ಅಂದನಿರುವನು ಪ್ರೌಢನೇ ।
ಮಾರನೆ ದಿನ ಸಾಲಗಾರನ ಮೆಚ್ಚು ಕೇಳಿದ ಪ್ರೌಢನೇ ||೬||
ಬ್ಯಾ, ಬ್ಯಾ, ಎನ್ನುವ ರವವನು ತಾನಿಂದು ಕೇಳಲು ಪ್ರೌಢನೇ ।
ತನ್ನ ಮಂತ್ರವು ತನಗೆ ತಿರುಗಿತು ಎಂದ ಕಾನುನಿ ಪ್ರೌಢನೇ ||೭||

— ಪಾವಟೆ ಚಿನ್ನಪ್ಪನವರು
ಪ್ರೌಢ ಶಿಕ್ಷಣ ಶಿಕ್ಷಕರು, ಪ್ರ್ಯಾಕ್ಟಿಸಿಂಗ ಸ್ಕೂಲ,
ಧಾರವಾಡ.

ಶಿಕ್ಷಣವೂ ಧರ್ಮಗಳೂ

ಲೇಖಕರು: **ಶ್ರೀ. ಎಮ್. ಎಸ್. ದೂದಿಹಳ್ಳಿ** ಬಿ. ಎ., ಬಿ. ಟಿ., ಧಾರವಾಡ

●

ಬ್ರಿಟಿಶರ ಆಳಿಕೆಯಲ್ಲಿ, ಶಿಕ್ಷಣಕ್ಕೂ ಧರ್ಮಗಳಿಗೂ ಸಂಬಂಧ ಬರದಂತೆ, ಬಹಳ ಎಚ್ಚರಿಕೆಯಿಂದ ಶಿಕ್ಷಣ ಕಾರ್ಯವನ್ನು ಸಾಗಿಸಿದರು. ಯಾಕಂದರೆ, ೧೮೫೭ರ ಯುದ್ಧವು ಧರ್ಮ ಸಂಕರದ ಪ್ರಯತ್ನದ ಕಟು ಪರಿಣಾಮವೆಂಬುದನ್ನು ಆಗಿನ ಆಡಳಿತೆಗಾರರು ಮನಗಂಡದ್ದಾಯಿತು ಮತ್ತು ಹಿಂದುಗಳು ಕಟ್ಟಾ ಧರ್ಮಾಭಿಮಾನಿಗಳೆಂದು ತಿಳಿದು, ಯಾವ ರೀತಿಯಿಂದಲೂ ಹಿಂದುಗಳ ಧರ್ಮ ಬುದ್ಧಿಗೆ-ನೋವಾಗದಂತೆ ಆಳಿಕೆಯನ್ನು ಸಾಗಿಸಬೇಕೆಂದು ಬ್ರಿಟಿಶರು ನಿರ್ಧರಿಸಿದ್ದಾಯಿತು. ೧೮೫೭ ಕ್ಕಿಂತ ಮೊದಲು ಮಿಶನರಿಗಳ ಉಪಟಳವು ನಮ್ಮ ದೇಶದಲ್ಲಿ ಮಿತಿ ಮೀರಿ ಹೋಗಿತ್ತು. ನಾನಾ ತರದ ಆಶೆ ಆಕಾಂಕ್ಷೆಗಳನ್ನು ತೋರಿ ವಿದೇಶೀಯರು ಹಿಂದೀಯರನ್ನು ಕ್ರಿಶ್ಚನ್ನರಾಗಿ ಮಾಡುವ ಪರಿಪಾಠವು ಬೆಳೆದಿತ್ತು. ಏನಿದ್ದರೂ ಶಿಕ್ಷಣ ಕ್ಷೇತ್ರದಲ್ಲಿ ಧರ್ಮಬೋಧೆಯನ್ನು ತಿಲಮಾತ್ರವೂ ಸೇರಗೊಡದೆ ಇಂಗ್ಲಿಷ ವಿದ್ಯಾಭ್ಯಾಸ ಕ್ರಮವು ಮೊನ್ನೆ ಮೊನ್ನೆಯ ವರೆಗೆ ನಡೆದು ಬಂದಿತು, ಅದೇಕೆ! ಇಂದಿಗೂ ಸಾಗಿದ್ದು ಕಂಡು ಬರುತ್ತದೆ. ಈ ಪರಿಪಾಠದಿಂದ ಜನರಿಗೆ ತಮ್ಮ ಧರ್ಮವು ತಿಳಿಯದೇ ಹೋಯಿತು. ಅನ್ಯ ಧರ್ಮಗಳ ವಿಷಯವಾಗಿ ಆದರವೂ ಹುಟ್ಟದೇ ಹೋಯಿತು. ಈ ರೀತಿಯಲ್ಲಿ ಸುಶಿಕ್ಷಿತ "ಧರ್ಮಲಂಡರ"ನ್ನು ನಿರ್ಮಾಣ ಮಾಡುವದರಲ್ಲಿ ಆಂಗ್ಲ ವಿದ್ಯಾಭ್ಯಾಸ-ಕ್ರಮವು ಬಹಳ ಯಶಸ್ಸನ್ನು ಪಡೆಯಿತೆನ್ನಬಹುದು. ಜನತೆಯಲ್ಲಿಯ ಈ ತರದ ನಡಾವಳಿಯಿಂದ ಕ್ರಿಶ್ಚನ್ ಜನರ ರೂಪ, ವೇಷ, ವಿಚಾರಗಳಿಂದ ಕೂಡಿದ ಹಿಂದೂ ಹೃದಯಗಳು ತಲೆದೋರಿದವೆಂದರೆ ತಪ್ಪಾಗಲಾರದು.

ಹಿಂದುಸ್ತಾನವು ಪುಣ್ಯ ಭೂಮಿಯೆನಿಸುವದು. ಇಲ್ಲಿಯ ಜನರು ಧರ್ಮಬುದ್ಧಿಯುಳ್ಳವರು. ಹೆಚ್ಚೇನು? ಇಲ್ಲಿ ಉದಯಿಸಿದಷ್ಟು ಧರ್ಮಗಳೂ, ಧರ್ಮ ಸಂಸ್ಥಾಪಕರೂ ಇನ್ನಾವ ದೇಶಗಳಲ್ಲಿಯೂ ಕಂಡುಬರುವದಿಲ್ಲವೆಂಬುದು ಅಬಾಧಿತವು. ಮನುಷ್ಯನ ಹಿತಕ್ಕಾಗಿ ತಲೆದೋರಿದ ಈ ಧರ್ಮಕಲ್ಪನೆಗಳನ್ನು, ಅಂತಃಕಲಹದ ಬೀಜಗಳನ್ನಾಗಿ ಮಾಡಿದ್ದು ನಿಜಕ್ಕೂ ಶೋಚನೀಯವಲ್ಲವೆ? ಒಟ್ಟಿನಲ್ಲಿ, ಮನುಷ್ಯನಿಗೆ "ಧರ್ಮ"ವು—ಅಂದರೆ ಆತನದೇ ಆದ ಧರ್ಮವು—ಹಿತಕಾರಿಯೋ ಅಹಿತಕಾರಿಯೋ? ಈ ಪ್ರಶ್ನೆಯ ಉತ್ತರವು ಧರ್ಮದ ವ್ಯಾಖ್ಯೆಯ ಮೇಲೆ ಅವಲಂಬಿಸಿದೆ. 'ತತ್ವ, ಕರ್ತವ್ಯ, ಗುಣ' ಮುಂತಾದವು 'ಧರ್ಮ' ಶಬ್ದದ ಕೆಲವು ಅರ್ಥಗಳಿವೆ. ಈ ದೃಷ್ಟಿಯಿಂದ ನೋಡಿದರೆ, ಮನುಷ್ಯನು ಹುಟ್ಟಿದಂದಿನಿಂದ ಸಾಯುವ ವರೆಗೆ ಒಂದಿಲ್ಲೊಂದು ಧರ್ಮವನ್ನು ಪಾಲಿಸುತ್ತಲೇ ಇರುತ್ತಾನೆ ಎನ್ನಬಹುದು. ಬೆಳೆದು ದೊಡ್ಡವನಾಗಿ ಪ್ರಪಂಚದ ಕಹಿ ಅನುಭವಗಳನ್ನುಂಡವರಿಗೆ 'ಧರ್ಮ'ವು ಹೆಜ್ಜೆಹೆಜ್ಜೆಗೂ ನೆನಪಾಗುತ್ತದೆ ಮತ್ತು ಇದನ್ನು ಯಥಾರ್ಥವಾಗಿ ಪಾಲಿಸಿದಾಗ ಮನುಷ್ಯನ ಮನಸ್ಸು ಕೆಲಮಟ್ಟಿಗೆ ಶಾಂತತೆಯನ್ನು ಪಡೆಯುತ್ತದೆ. ಮನಃಶಾಂತಿಯು ಮನುಷ್ಯನ ಸಾಂಭಿತಗಳಲ್ಲೊಂದು. ಮುಪ್ಪಿನಲ್ಲಂತೂ ಮನುಷ್ಯನು ಇದನ್ನೇ ಬೇಡುವನು. ವಸ್ತುಸ್ಥಿತಿಯು ಹೀಗಿರುವಾಗ, ಧರ್ಮಗಳನ್ನು ತೆಗಳಿ, ದುರ್ಲಾಭ ಪಡೆದು, ಭಿನ್ನ ಧರ್ಮಗಳ ಅನುಯಾಯಿಗಳಲ್ಲಿ ಜಗಳ ಹುಟ್ಟಿಸುವದು ಒಂದು ತರದಿಂದ ಗುನ್ಹೆಗಾರ ಮನಸ್ಸಿನ ಲಕ್ಷಣವೆಂದು ಹೇಳಬಹುದು.

ಬೇರೆ ಬೇರೆ ಧರ್ಮ ಸಂಸ್ಥಾಪಕರು ಜನತೆಗೆ ಹಿತವನ್ನು ಮಾಡುವದಕ್ಕೋಸ್ಕರವೇ ತಮ್ಮ ತತ್ವಗಳನ್ನು ಉಪದೇಶಿಸಿದರು. ಅರಬರಲ್ಲಿಯ ಪಶುಬಲಿ, ನರಬಲಿ, ಶಿಶುಹತ್ಯೆಗಳನ್ನು ಅಲ್ಲಗಳೆಯುವದಕ್ಕಾಗಿ ಹಜರತ ಮಹಮ್ಮದ ಪೈಗಂಬರರು ತಮ್ಮ ಉಪದೇಶಗಳನ್ನು ಮುಂದೆ ಮಾಡಿದರು.

ಜನರ ನಂಬಿಗೆಯನ್ನು ಗಳಿಸಲಿಕ್ಕೆ ತಮ್ಮನ್ನು ದೇವದೂತರೆಂದು ಕರೆದುಕೊಂಡರು. ಹಿಂದುಸ್ತಾನದಲ್ಲಿ ಯಜ್ಞಗಳೆಂದಾಗುವ ಅನಾಹುತಗಳನ್ನು ಕಣ್ಣಿನಿಂದ ನೋಡಲಾರದೆ ಜಿನ, ಬುದ್ಧ ಮುಂತಾದವರು ಸತ್ಯ, ಪ್ರೇಮ, ಅಹಿಂಸೆಗಳನ್ನು ಜನರಿಗೆ ಬೋಧಿಸಿದರು. ಒಂದು ಮಾತಿನಲ್ಲಿ ಹೇಳುವದಾದರೆ, ಧರ್ಮ ಸಂಸ್ಥಾಪಕರೆಲ್ಲ ಸಮಾಜದ ಕೊಳೆಯನ್ನು ತೊಳೆಯಲು ಪ್ರಯತ್ನ ಮಾಡಿದರೆನ್ನಬಹುದು. ಕೊಳೆರಹಿತವಾಗಿ ಹೊಳೆಹೊಳೆಯುವ ನೂತನ ಸಮಾಜವು, ಇವರ ಪ್ರಯತ್ನದ ಫಲವಾಗಿ ಹೊರಹೊಮ್ಮಿತು.

ಸ್ವತಂತ್ರ ಹಿಂದುಸ್ತಾನದ ಮಹತ್ವದ ಸಮಸ್ಯೆಗಳಲ್ಲಿ, ನಮ್ಮ ದೇಶದ ನೂತನ ಸಮಾಜ ನಿರ್ಮಾಣವೂ ಒಂದಾಗಿದೆ. ಇಂದಿನ ಬಾಲಕರು–ನಾಳಿನ ನಮ್ಮ ದೇಶದ ನಾಗರಿಕರಲ್ಲವೆ? ನೂತನ ಸಮಾಜದ ಘಟಕಗಳಾಗುವ ಇಂದಿನ ನಮ್ಮ ಬಾಲಕರಿಂದ ಧರ್ಮದ ವಿಚಾರಗಳನ್ನು ಬಚ್ಚಿಡುವದರಲ್ಲಿ ಅರ್ಥವಿಲ್ಲೆಂದು ಧಾರಾಳವಾಗಿ ಹೇಳಬಹುದು. ಪ್ರತಿಯೊಬ್ಬ ಹಿಂದುವಿನ ಮನೆಯು ಒಂದಿಲ್ಲೊಂದು ಧರ್ಮ ತತ್ವಗಳಿಗನುಸಾರವಾಗಿಯೇ ಸಾಗಿರುತ್ತದೆಂಬುದೂ ಕಂಡುಬಂದಾಗಿದೆ. ಶಿಕ್ಷಣವು "ಮನೆಯನ್ನೊಳಗೊಂಡು" ಸಾಗಬೇಕೆಂಬುದರ ಅರ್ಥವು "ಧರ್ಮವನ್ನೊಳಗೊಂಡು" ಸಾಗಬೇಕೆಂದು ಹೇಳಿದಂತೆಯೆ. ಶಾಲೆಯಲ್ಲಿ ಧರ್ಮಬೋಧೆಯು ಜಾತೀಯ ಜಗಳಗಳಿಗೆ ಮೂಲವಾಗುವದೆಂದು ಹೇಳುವದು ಬ್ರಿಟಿಶರಿಗೆ ಮಾತ್ರ ಒಪ್ಪಿತು. ಯಾಕಂದರೆ, ಜಾತಿಯ ಭೂತವನ್ನೆಬ್ಬಿಸಿ ತಮ್ಮ ಸ್ವಾರ್ಥ ಸಾಧಿಸುವದೇ ಅವರ ಹೆಗ್ಗುರಿಯಾಗಿತ್ತು. ಧರ್ಮಗಳು ಅಸಂಖ್ಯವಾಗಿರತ್ತವೆಂಬ ವಾದದಲ್ಲಿಯೂ ಹುರುಳಿಲ್ಲ. ಯಾಕಂದರೆ, ಎಲ್ಲ ಧರ್ಮಗಳು ಮಾನವ ಸಂಸ್ಕೃತಿಯ ಮುನ್ನಡೆಯ ಮಾರ್ಗದಲ್ಲಿ ಮೈಲುಗಲ್ಲುಗಳಾಗಿವೆ. ಆಯಾ ಕಾಲಕ್ಕೆ ಜನಹಿತವನ್ನು ಸಾಧಿಸುವದಲ್ಲದೆ, ವಿಶ್ವಬಾಂಧವ್ಯವನ್ನು ಜನರಿಗೆ ಕಲಿಸುವದೂ ಪ್ರತಿಯೊಬ್ಬ ಧರ್ಮ ಸಂಸ್ಥಾಪಕನ ಉಪದೇಶಗಳ ತಿರುಳಾಗಿದೆ. ಇಂದಿನ ಜಾತೀಯ ದೊಂಬಿಗಳಲ್ಲಿ ಕಂಡು ಬರುವ ಜಾತಿಮತ್ಸರವು, ಅನ್ಯ ಜಾತಿಯರ ತತ್ವಗಳು ತಿಳಿದಾಗ ಎಷ್ಟೋಮಟ್ಟಿಗೆ ಕುಗ್ಗಬಹುದು. ಕೊನೆಯದಾಗಿ, ಹಿಂದೀಯರು ಪರಧರ್ಮ ಸಹಿಷ್ಣುಗಳೆಂದು ಹೆಸರಾಗಿದ್ದಾರೆ. ಆದ್ದರಿಂದ ಪರಧರ್ಮದ ತತ್ವಗಳನ್ನು ಕಲಿಯಲು ಹಿಂದೀ ಬಾಲಕನು ಯಾವರೀತಿಯಿಂದಲೂ ಹಿಂಜರಿಯಲಾರನು. ಈ ರೀತಿಯಲ್ಲಿ, ಸರ್ವ ಧರ್ಮ ಸಮನ್ವಯ ಪಾಠಗಳನ್ನು ಶಾಲೆಯಲ್ಲಿ ಕಲಿಸುವದು ಅವಶ್ಯವಾಗಿರುವದಲ್ಲದೆ, ಕಾಲಗತಿಯಲ್ಲಿ ಅನಿವಾರ್ಯವೂ ಆಗಬಹುದು.

ಇನ್ನು, ಧರ್ಮಬೋಧೆಯ ಪಾಠಗಳನ್ನು ಕಲಿಸುವಾಗ ಸುತ್ತಲಿನ ಜಾತ್ರೆ, ಉತ್ಸವ, ಪೂಜೆ, ಮುಂತಾದವುಗಳಿಗೆ ಹೊಂದಿಸಿ, ಧರ್ಮದ ತಿರುಳನ್ನು ತಿಳಿಸಬಹುದು. ಅಲ್ಲದೆ ವಿದ್ವಾಂಸರೂ ನಿಷ್ಪಕ್ಷಪಾತಿಗಳೂ ಆದ ಆಯಾ ಧರ್ಮಗುರುಗಳನ್ನು ಶಾಲೆಗೆ ಆಮಂತ್ರಿಸಿ ಕೆಲವು ಭಾಷಣಗಳನ್ನು ಕೊಡಿಸಬಹುದು. ದಿನದಿನವೂ ಇದ್ದ ಶಿಕ್ಷಕನು ತನಗೆ ತಿಳಿದಷ್ಟು ಧರ್ಮಗಳ ತತ್ವಬೋಧೆಯನ್ನು ಕಲಿಸುವದಂತೂ ಇದ್ದೇ ಇದೆ. ಒಟ್ಟಾರೆ, ಒಂದು ವಿಶಿಷ್ಟ ಧರ್ಮದ ತತ್ವಗಳ ಆಚರಣೆಯನ್ನು ನಾವು ಕಲಿಸಲಾರೆವು. ಇದನ್ನು ಆಯಾ ಧರ್ಮದ 'ಮಠ, ಮನೆ'ಗಳು ಮಾಡಬಹುದು. ಆದರೆ ಪರಧರ್ಮ ಸಹಿಷ್ಣುತೆ, ವಿಶ್ವ ಬಾಂಧವ್ಯ, ಪರಧರ್ಮ-ಸಂಸ್ಥಾಪಕರ ಮೂಲ ಉದ್ದೇಶಗಳನ್ನು ಬಾಲಕರಿಗೆ ಕಲ್ಪಿಸಿದರೇ ಹಾನಿ ಏನು? ಪ್ರತಿಯಾಗಿ ಲಾಭವೇ ಆಗುವದಿಲ್ಲವೆ?

ಶಿಕ್ಷಣದಲ್ಲಿ ಪಠ್ಯೇತರ ಚಟುವಟಿಕೆಗಳು

ಲೇಖಕರು: **ಶ್ರೀ. ಶಿ. ಭೀ. ಹುಡೇದ** ಪ್ರಾ. ಸ್ಕೂ. ಗ. ಟ್ರೇ. ಕಾ. ಧಾರವಾಡ.

●

ಪಂಡಿತ ಜವಾಹರಲಾಲ ನೆಹರು ಅವರು ನುಡಿದಂತೆ "ಚಟುವಟಿಕೆಯು ಜೀವಂತ ಮನುಷ್ಯನ ಲಕ್ಷಣ" ಎಂಬ ವಾಕ್ಯವು ಅತ್ಯಂತ ಯೋಗ್ಯವಾಗಿದೆ. ಸಾಮಾನ್ಯವಾಗಿ ಚಟುವಟಿಕೆ ಎಂಬ ಶಬ್ದವನ್ನು ನಾವು ಜೀವವಿದ್ದ ಸಚೇತನವಾದ ಪ್ರಾಣಿಗಳ ಅಂದರೆ ಪಶು-ಪಕ್ಷಿ, ಕ್ರಿಮಿ-ಕೀಟಕ ಹಾಗು ಮನುಷ್ಯ ವರ್ಗಕ್ಕೆ ಅನ್ವಯಿಸಿ ಉಪಯೋಗಿಸುತ್ತೇವೆ. ಚಟುವಟಿಕೆಯು ಒಮ್ಮೊಮ್ಮೆ ಶಾರೀರಿಕ ಚಟುವಟಿಕೆಯಾಗಬಹುದು; ಕೆಲವು ಸಲ ಬೌದ್ಧಿಕ ಚಟುವಟಿಕೆಯಾಗಬಹುದು; ಮತ್ತೆ ಹಲಕೆಲವು ಸಲ ನೈತಿಕ ಚಟುವಟಿಕೆಯಾಗಬಹುದು. ಕೂಸು ಕೈ-ಕಾಲು ಅಲ್ಲಾಡಿಸುವದು, ಬಾಲಕರು ಚಂಡಿನಾಟವಾಡುವದು, ತರುಣರು ಕುಸ್ತೀ ಆಡುವದು, ಬೇರೆ ಬೇರೆ ಆಟಗಳನ್ನಾಡುವದು, ಇವೆಲ್ಲವುಗಳನ್ನು ಸಾಮಾನ್ಯವಾಗಿ ಶಾರೀರಿಕ ಚಟುವಟಿಕೆಗಳೆಂದು ಕರೆಯಬಹುದು; ಬಾಯಿಂದ ಲೆಕ್ಕಮಾಡುವದು, ಧನಿಯಿಂದ ಜನರನ್ನು ಗುರುತಿಸುವದು, ಸ್ಪರ್ಧೆಗಳನ್ನು ಬಿಡಿಸುವದು, ತರ್ಕ ಮಾಡುವದು, ಪದ್ಯಗಳನ್ನು ರಚಿಸುವದು, ಕಥೆಗಳನ್ನು ಕಟ್ಟುವದು, ಇತ್ಯಾದಿಗಳೆಲ್ಲವು ಬೌದ್ಧಿಕ ಚಟುವಟಿಕೆಗಳು; ಪ್ರಾಣಿಗಳಲ್ಲಿ ದಯೆ ತೋರಿಸುವದು, ಸಮಾನಸ್ಕಂಧರೊಡನೆ ಸಹಕಾರದಿಂದ ವರ್ತಿಸುವದು, ಸತ್ಯ ಅಹಿಂಸೆ, ಮುಂತಾದ ಗುಣಗಳನ್ನು ಸಾಧಿಸಿ ಜೀವನ ಪಥದಲ್ಲಿ ಮುನ್ನಡೆಯಿಡುವುದು ಇತ್ಯಾದಿ ನೈತಿಕ ಚಟುವಟಿಕೆಗಳು.

ಯಾವದೇ ಜನಾಂಗದ ಯಾವದೇ ಕಾಲದ ಮನುಷ್ಯನ, ಪರಿಪೂರ್ಣತ್ವವನ್ನು ಪಡೆಯಬೇಕಾದರೆ, ಶಾರೀರಿಕ, ಬೌದ್ಧಿಕ, ಮಾನಸಿಕ, ತ್ರಿಕರ್ಣ ಶುದ್ಧಿಯನ್ನು ಪಡೆಯಬೇಕಾಗುವದು; ಈ ಪವಿತ್ರವಾದ ತ್ರಿವೇಣೀ ಸಂಗಮದಲ್ಲಿ ಮಿಂದು ಹೊರ-ಹೊರಟವನೇ ನಿಜವಾದ ನಾಗರಿಕನು. ಜ್ಞಾನ ಸಂಗ್ರಹವಷ್ಟೇ ಶಿಕ್ಷಣದ ಗುರಿಯಲ್ಲ; ಹಲವಾರು ವಿಷಯಗಳ ಸಂಗ್ರಹ ಮಾಡಿ ಮಿದುಳಿನಲ್ಲಿ ತುಂಬಿ-ತುಳುಕುವದಷ್ಟೇ ಶಿಕ್ಷಣದ ನಿಜವಾದ ಧ್ಯೇಯವಲ್ಲ; ಇಲ್ಲವೆ ಬುದ್ಧಿಹೀನನಾಗಿ ಜ್ಞಾನ ರಹಿತನಾಗಿ ಗುಣಹೀನನಾಗಿ ಶರೀರವನ್ನು ಬೆಳೆಯಿಸಿ ಶಕ್ತಿ ಪ್ರದರ್ಶನ ಮಾಡುವದಷ್ಟೇ ಶಿಕ್ಷಣದ ನಮ್ಮ ಇಚ್ಛೆ ಗುರಿಯಲ್ಲ. ಆದರ್ಶ ನಾಗರಿಕನನ್ನಾಗಿ ಮಾಡುವದು ಅಂದರೆ ಮನುಷ್ಯನ ನೀತಿಯನ್ನು ಬೆಳೆಯಿಸಿ ದೇಹಕಾಂತಿಯನ್ನು ಬೆಳಗಿಸಿ ಬುದ್ಧಿಯು ಥಳಥಳನೆ ಹೊಳೆಯುವಂತೆ ಮಾಡುವದೇ ನಿಜವಾದ ಶಿಕ್ಷಣವು. ಶಾಲೆಗಳಲ್ಲಿ ಬರೇ ಅಭ್ಯಾಸ ಪತ್ರಿಕೆಯ ಯೋಜನೆಯಂತೆ ಗಣಿತ, ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮುಂತಾದವುಗಳನ್ನು ಕಲಿಸಿದರೆ ಸಾಲದು; ಅದರ ಜೊತೆಗೆ ಸಮಾಜದಲ್ಲಿ ಸಹಕಾರ, ಸಂಘಟನೆ, ಪ್ರೀತಿ, ವಿಶ್ವಾಸ, ಸತ್ಯ, ಪ್ರೇಮ ಮೊದಲಾದ ಗುಣಗಳನ್ನು ಮನುಷ್ಯನು ಕಲಿಯಬೇಕಾಗುವದು, ಇವೆಲ್ಲ ಗುಣಗಳನ್ನು ಕಲಿಯಬೇಕಾದರೆ ಬಾಲ್ಯಾವಸ್ಥೆಯೇ ಹದವಾದ ಕಾಲ. ಮಣ್ಣಿನ ಮುದ್ದೆಯಂತಿದ್ದ ಮಗುವನ್ನು ಜೀವಂತ ಮೂರ್ತಿಯನ್ನಾಗಿ ಮಾಡುವ ಹೊಣೆಗಾರಿಕೆ ಶಿಕ್ಷಕರದು, ಬಾಲಕನ ಶಕ್ತಿ, ಪ್ರವೃತ್ತಿಗಳಿಗನುಗುಣವಾಗಿ ಕಾರ್ಯನಿರ್ವಹಣವನ್ನೊಪ್ಪಿಸುವ ಜವಾಬುದಾರಿಯು ಶಿಕ್ಷಕರದು; ಬಾಲಕರ ಒಲವು-ನಿಲವುಗಳನ್ನೂ ಶಕ್ತಿ-ಪ್ರವೃತ್ತಿಗಳನ್ನೂ ಶಿಕ್ಷಕರು ಅರಿತುಕೊಳ್ಳಬೇಕಾದರೆ, ಬಾಲಕರು ಪಠ್ಯೇತರ ಚಟುವಟಿಕೆಗಳಲ್ಲಿ ನಿರತರಾದಾಗ ಮಾತ್ರ ಅದು ಸುಲಭ ಸಾಧ್ಯ.

ಪಠ್ಯೇತರ ಚಟುವಟಿಕೆಗಳ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳಲು ಬರುವದಿಲ್ಲ. ಸಭೆ ಸಮ್ಮೇಲನಗಳನ್ನು ನೆರವೇರಿಸುವದು, ಚರ್ಚಾಕೂಟಗಳನ್ನು ಸ್ಥಾಪಿಸುವದು, ಸಂಗೀತ, ನಾಟಕ, ಅಭಿನಯಗಳನ್ನು ಏರ್ಪಡಿಸುವದು. ಪ್ರೌಢ ಶಿಕ್ಷಣ ದಿನಾಚರಣೆ, ವಾಚನಾಲಯ ದಿನಾಚರಣೆ, ಮಹಾತ್ಮರ ಹಾಗೂ ಕವಿಗಳ ದಿನಾಚರಣೆ, ಧ್ವಜಾರೋಹಣ

ಇತ್ಯಾದಿ ಅನೇಕ ಚಟುವಟಿಕೆಗಳನ್ನು ಸರಕಾರದವರು ಅಭ್ಯಾಸೇತರ ಚಟುವಟಿಕೆಗಳೆಂದು ಗಣಿಸಿದ್ದು ಯೋಗ್ಯವೇ ಸರಿ. ಬೇರೆ ಬೇರೆ ಹಳ್ಳಿಗಳ ವಾತಾವರಣಕ್ಕನುಗುಣವಾಗಿ ಅಲ್ಲಿಯ ಸ್ಥಿತಿಗತಿ, ಅನುಕೂಲತೆ ಮೊದಲಾದವುಗಳನ್ನು ನೋಡಿಕೊಂಡು ಈ ತರದ ಶೈಕ್ಷಣಿಕ ಚಟುವಟಿಕೆಗಳನ್ನು ಬಾಲಕರಿಂದ ನಿರ್ವಹಿಸಬಹುದು. ಶಿಕ್ಷಣವೇ ಸಂಸ್ಕಾರವೆಂದು ನಾವು ಒಪ್ಪಿದರೆ, ಇವೆಲ್ಲ ಚಟುವಟಿಕೆಗಳಿಂದ ಬಾಲಕರಲ್ಲಿ ಸಂಸ್ಕಾರ ಉಂಟಾಗುವದು, ಈ ತರದ ಸಂಸ್ಕಾರ ಪಡೆಯುವದರಿಂದ ಅಪ್ರತ್ಯಕ್ಷವಾಗಿ ಬಾಲಕರಿಗೆ ಉಚ್ಚ ತರಗತಿಯ ಶಿಕ್ಷಣ ದೊರೆತಂತಾಗುವದು.

ಬೇರೆ ಬೇರೆ ಪಠ್ಯೇತರ ಚಟುವಟಿಕೆಗಳನ್ನು ಯಾವ ರೀತಿಯಿಂದ ನಿರ್ವಹಿಸಬೇಕೆಂಬುದರ ವಿಷಯವಾಗಿ ಸಮಗ್ರವಾಗಿ ಹೇಳುವ ಅವಶ್ಯಕತೆಯಿಲ್ಲ. ತರಬೇತಿ ಹೊಂದಿ ಅರಿತ ಹಾಗೂ ನುರಿತ ಶಿಕ್ಷಕರ ಕಾರ್ಯನಿರ್ವಹಣ ಶಕ್ತಿ, ವಿಶಾಲ ದೃಷ್ಟಿ, ಜೀವನದ ಅನುಭವ, ಸಹಕಾರ, ಸಂಘಟನೆ, ಮೊದಲಾದ ಗುಣಗಳ ಮೇಲೆ ಚಟುವಟಿಕೆಗಳ ಉಪಯುಕ್ತತೆ, ಯಶಸ್ಸು, ಪರಿಣಾಮ, ಅವಲಂಬಿಸಿವೆ. ಚರ್ಚಾಕೂಟ ಮಂಡಲದಿಂದ ಬಾಲಕರ ಆತ್ಮಪ್ರತಿಷ್ಠಾ-ಪ್ರವೃತ್ತಿಯು ಅರಳಿದಂತಾಗುವದು; ಸಭೆ, ಸಮ್ಮೇಲನ, ಪ್ರದರ್ಶನ, ವಸ್ತುಸಂಗ್ರಹಾಲಯ, ಮೊದಲಾದವುಗಳ ನಿರೀಕ್ಷಣೆಯಿಂದ ಬಾಲಕರ ಅನುಕರಣ ಶಕ್ತಿಯು ಬೆಳೆದು ಅವರ ಜೀವನದ ಸರ್ವಾಂಗಗಳ ಅಭಿವೃದ್ಧಿಯು ಅಪ್ರತ್ಯಕ್ಷವಾಗಿ ಆಗುವದು; ಬನಸಿರಿಯ ಕೂಟ, ಶೀಗೀ ಹುಣ್ಣಿವೆಯ ಊಟ, ತೋಟ-ಪಟ್ಟಿಗಳ ನೋಟ ಮುಂತಾದ ಚಟುವಟಿಕೆಗಳ ಮುಖಾಂತರ ಬಾಲಕರಲ್ಲಿದ್ದ ಸಂಕುಚಿತ ದೃಷ್ಟಿಯು ಸ್ವಾಭಾವಿಕವಾಗಿ ಅಳಿದುಹೋಗಿ, ಅವರ ಸಾಮಾಜಿಕ ಜೀವನವು ಅಭಿವೃದ್ಧಿ ಹೊಂದಿ, ವಿಶಾಲದೃಷ್ಟಿ ಹಾಗೂ ದೂರದೃಷ್ಟಿ ಬೆಳೆಯಲನುವು ದೊರೆಯುವದು. ಕವಿ-ದಿನ, ಜಯಂತಿ, ವಿಜ್ಞಾನ-ದಿನ, ಪಾಲಕರ ದಿನಾಚರಣೆ, ವಾಚನಾಲಯ ದಿನಾಚರಣೆ ಮುಂತಾದವುಗಳನ್ನು ನಮ್ಮ ಶಿಕ್ಷಣಾಲಯಗಳಲ್ಲಿ ಕೈಕೊಳ್ಳುವದರಿಂದ ಬಾಲಕರಲ್ಲಿ ಹುದುಗಿಕೊಂಡಿದ್ದ ಅಗೋಚರವಾದ ಅದೃಶ್ಯವಾದ ಅಗಮ್ಯವಾದ ದೇವದತ್ತವಾದ ವಿಶಿಷ್ಟ ಶಕ್ತಿಗೆ ಚಾಲನೆ ಕೊಟ್ಟಂತಾಗಿ ಅವರ ಶಕ್ತಿ, ಪ್ರವೃತ್ತಿ ಮೊದಲಾದವು ಕೆರಳಿ, ಅವರ ಬುದ್ಧಿ, ಹಾಗು ನೀತಿ ಅರಳಿ, ಅವರನ್ನು ಒಳ್ಳೇ ನಾಗರಿಕರನ್ನಾಗಿ ಮಾರ್ಪಡಿಸಲು ನಾಕಷ್ಟು ಅವಕಾಶ ಏದೆ. ಆದುದರಿಂದ ಶಿಕ್ಷಣಾಲಯಗಳಲ್ಲಿ ಅಭ್ಯಾಸೇತರ ಚಟುವಟಿಕೆಗಳು ಬಾಲಕರಲ್ಲಿ ತ್ರಿಕರಣ ಶುದ್ಧಿಯನ್ನುಮಾಡಿ ನೈತಿಕ ದೀಕ್ಷೆಯನ್ನು ಕೊಟ್ಟು ರಾಷ್ಟ್ರದ ಸಾಮಾಜಿಕ ಜೀವನಕ್ಕೆ ಪೋಷಕವಾಗುವವೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಾಥಮಿಕ ಶಾಲೆಗಳ ಹೊಸ ಅಭ್ಯಾಸ-ಪತ್ರಿಕೆಯನ್ನೊಳಗೊಂಡ

"ಕನ್ನಡ ಪ್ರಾಥಮಿಕ ಶಿಕ್ಷಣ"ದ ಸಂಚಿಕೆಗಳು ತೀರಿ ಹೋಗಿವೆ.

ನಮ್ಮ ಕಡೆಗೆ ಹೊಸ ಅಭ್ಯಾಸ—ಪತ್ರಿಕೆಯನ್ನೊಳಗೊಂಡ ಸಂಚಿಕೆಗಳನ್ನು ಕಳಿಸಿಕೊಡುವದರ ಸಲುವಾಗಿ ಅನೇಕ ಪತ್ರಗಳು ಇನ್ನೂ ಬರತೊಡಗಿವೆ. ಆದರೆ ಅಂಥ ಸಂಚಿಕೆಗಳು ತೀರಿಹೋಗಿದ್ದರಿಂದ ಅವುಗಳನ್ನು ಕಳಿಸಿ ಕೊಡಲು ಇನ್ನು ಮೇಲೆ ಸಾಧ್ಯವಿಲ್ಲವೆಂದು ಈ ಮೂಲಕ ತಿಳಿಸಲಪೇಕ್ಷಿಸುತ್ತೇವೆ. ಆದ್ದರಿಂದ ಈ ಸಂಬಂಧವಾಗಿ ಪತ್ರವ್ಯವಹಾರ ಮಾಡಬಾರದಾಗಿ ಬಿನ್ನಹ. ಸರಕಾರದವರೇ ಹೊಸ ಅಭ್ಯಾಸ ಪತ್ರಿಕೆಯನ್ನು ನೇರವಾಗಿ ಶೀಘ್ರದಲ್ಲಿಯೇ ಕನ್ನಡದಲ್ಲಿ ತಯಾರಿಸುತ್ತಿರುವರು.

—ಸಂಪಾದಕರು.

ಶಿಕ್ಷಣದಲ್ಲಿ ಪಠ್ಯೇತರ ಚಟುವಟಿಕೆಗಳು

ಲೇಖಕರು: **ಶ್ರೀ. ಶಿ. ಭೀ. ಹುಡೇದ** ಪ್ರಾ. ಸ್ಕೂ. ಗ. ಟ್ರೇ. ಕಾ. ಧಾರವಾಡ.

ಪಂಡಿತ ಜವಾಹರಲಾಲ ನೆಹರು ಅವರು ನುಡಿದಂತೆ "ಚಟುವಟಿಕೆಯು ಜೀವಂತ ಮನುಷ್ಯನ ಲಕ್ಷಣ" ಎಂಬ ವಾಕ್ಯವು ಅತ್ಯಂತ ಯೋಗ್ಯವಾಗಿದೆ. ಸಾಮಾನ್ಯವಾಗಿ ಚಟುವಟಿಕೆ ಎಂಬ ಶಬ್ದವನ್ನು ನಾವು ಜೀವವಿದ್ದ ಸಚೇತನವಾದ ಪ್ರಾಣಿಗಳ ಅಂದರೆ ಪಶು-ಪಕ್ಷಿ, ಕ್ರಿಮಿ-ಕೀಟಕ ಹಾಗು ಮನುಷ್ಯ ವರ್ಗಕ್ಕೆ ಅನ್ವಯಿಸಿ ಉಪಯೋಗಿಸುತ್ತೇವೆ. ಚಟುವಟಿಕೆಯು ಒಮ್ಮೊಮ್ಮೆ ಶಾರೀರಿಕ ಚಟುವಟಿಕೆಯಾಗಬಹುದು; ಕೆಲವು ಸಲ ಬೌದ್ಧಿಕ ಚಟುವಟಿಕೆಯಾಗಬಹುದು; ಮತ್ತೆ ಹಲಕೆಲವು ಸಲ ನೈತಿಕ ಚಟುವಟಿಕೆಯಾಗಬಹುದು. ಕೂಸು ಕೈ-ಕಾಲು ಅಲ್ಲಾಡಿಸುವದು, ಬಾಲಕರು ಚಂಡಿನಾಟವಾಡುವದು, ತರುಣರು ಕುಸ್ತೀ ಆಡುವದು, ಬೇರೆ ಬೇರೆ ಆಟಗಳನ್ನಾಡುವದು, ಇವೆಲ್ಲವುಗಳನ್ನು ಸಾಮಾನ್ಯವಾಗಿ ಶಾರೀರಿಕ ಚಟುವಟಿಕೆಗಳೆಂದು ಕರೆಯಬಹುದು; ಬಾಯಿಂದ ಲೆಕ್ಕಮಾಡುವದು, ದನಿಯಿಂದ ಜನರನ್ನು ಗುರುತಿಸುವದು, ಸ್ಪರ್ಧೆಗಳನ್ನು ಬಿಡಿಸುವದು, ತರ್ಕ ಮಾಡುವದು, ಪದ್ಯಗಳನ್ನು ರಚಿಸುವದು, ಕಥೆಗಳನ್ನು ಕಟ್ಟುವದು, ಇತ್ಯಾದಿಗಳೆಲ್ಲವು ಬೌದ್ಧಿಕ ಚಟುವಟಕೆಗಳು; ಪ್ರಾಣಿಗಳಲ್ಲಿ ದಯೆ ತೋರಿಸುವದು, ಸಮಾನಸ್ಕಂಧರೊಡನೆ ಸಹಕಾರದಿಂದ ವರ್ತಿಸುವದು, ಸತ್ಯ ಅಹಿಂಸೆ, ಮುಂತಾದ ಗುಣಗಳನ್ನು ಸಾಧಿಸಿ ಜೀವನ ಪಥದಲ್ಲಿ ಮುನ್ನಡೆಯಿಡುವುದು ಇತ್ಯಾದಿ ನೈತಿಕ ಚಟುವಟಿಕೆಗಳು.

ಯಾವದೇ ಜನಾಂಗದ ಯಾವದೇ ಕಾಲದ ಮನುಷ್ಯನ, ಪರಿಪೂರ್ಣತ್ವವನ್ನು ಪಡೆಯಬೇಕಾದರೆ, ಶಾರೀರಿಕ, ಬೌದ್ಧಿಕ, ಮಾನಸಿಕ, ತ್ರಿಕರ್ಣ ಶುದ್ಧಿಯನ್ನು ಪಡೆಯಬೇಕಾಗುವದು; ಈ ಪವಿತ್ರವಾದ ತ್ರಿವೇಣೀ ಸಂಗಮದಲ್ಲಿ ಮಿಂದು ಹೊರ-ಹೊರಟವನೇ ನಿಜವಾದ ನಾಗರಿಕನು. ಜ್ಞಾನ ಸಂಗ್ರಹವಷ್ಟೇ ಶಿಕ್ಷಣದ ಗುರಿಯಲ್ಲ; ಹಲವಾರು ವಿಷಯಗಳ ಸಂಗ್ರಹ ಮಾಡಿ ಮಿದುಳಿನಲ್ಲಿ ತುಂಬಿ-ತುಳುಕುವದಷ್ಟೇ ಶಿಕ್ಷಣದ ನಿಜವಾದ ಧ್ಯೇಯವಲ್ಲ; ಇಲ್ಲವೆ ಬುದ್ಧಿಹೀನನಾಗಿ ಜ್ಞಾನ ರಹಿತನಾಗಿ ಗುಣಹೀನನಾಗಿ ಶರೀರವನ್ನು ಬೆಳೆಯಿಸಿ ಶಕ್ತಿ ಪ್ರದರ್ಶನ ಮಾಡುವದಷ್ಟೇ ಶಿಕ್ಷಣದ ನಮ್ಮ ಇಚ್ಛಿತ ಗುರಿಯಲ್ಲ. ಆದರ್ಶ ನಾಗರಿಕನನ್ನಾಗಿ ಮಾಡುವದು ಅಂದರೆ ಮನುಷ್ಯನ ನೀತಿಯನ್ನು ಬೆಳೆಯಿಸಿ ದೇಹದ ಕಾಂತಿಯನ್ನು ಬೆಳಗಿಸಿ ಬುದ್ಧಿಯು ಥಳಥಳನೆ ಹೊಳೆಯುವಂತೆ ಮಾಡುವದೇ ನಿಜವಾದ ಶಿಕ್ಷಣವು. ಶಾಲೆಗಳಲ್ಲಿ ಬರೇ ಅಭ್ಯಾಸ ಪತ್ರಿಕೆಯ ಯೋಜನೆಯಂತೆ ಗಣಿತ, ಇತಿಹಾಸ, ಭೂಗೋಲ, ಶಾಸ್ತ್ರೀಯ ವಿಷಯ ಮುಂತಾದವುಗಳನ್ನು ಕಲಿಸಿದರೆ ಸಾಲದು; ಅದರ ಜೊತೆಗೆ ಸಮಾಜದಲ್ಲಿ ಸಹಕಾರ, ಸಂಘಟನೆ, ಪ್ರೀತಿ, ವಿಶ್ವಾಸ, ಸತ್ಯ, ಪ್ರೇಮ, ಮೊದಲಾದ ಗುಣಗಳನ್ನು ಮನುಷ್ಯನು ಕಲಿಯಬೇಕಾಗುವದು, ಇವೆಲ್ಲ ಗುಣಗಳನ್ನು ಕಲಿಯಬೇಕಾದರೆ ಬಾಲ್ಯಾವಸ್ಥೆಯೇ ಹದವಾದ ಕಾಲ. ಮಣ್ಣಿನ ಮುದ್ದೆಯಂತಿದ್ದ ಮಗುವನ್ನು ಜೀವಂತ ಮೂರ್ತಿಯನ್ನಾಗಿ ಮಾಡುವ ಹೊಣೆಗಾರಿಕೆ ಶಿಕ್ಷಕರದು, ಬಾಲಕನ ಶಕ್ತಿ, ಪ್ರವೃತ್ತಿಗಳಿಗನುಗುಣವಾಗಿ ಕಾರ್ಯನಿರ್ವಹಣವನ್ನೊಪ್ಪಿಸುವ ಜವಾಬುದಾರಿಯು ಶಿಕ್ಷಕರದು; ಬಾಲಕರ ಒಲವು-ನಿಲವುಗಳನ್ನೂ ಶಕ್ತಿ-ಪ್ರವೃತ್ತಿಗಳನ್ನೂ ಶಿಕ್ಷಕರು ಅರಿತುಕೊಳ್ಳಬೇಕಾದರೆ, ಬಾಲಕರು ಪಠ್ಯೇತರ ಚಟುವಟಿಕೆಗಳಲ್ಲಿ ನಿರತರಾದಾಗ ಮಾತ್ರ ಅದು ಸುಲಭ ಸಾಧ್ಯ.

ಪಠ್ಯೇತರ ಚಟುವಟಿಕೆಗಳ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳಲು ಬರುವದಿಲ್ಲ. ಸಭೆ ಸಮ್ಮೇಲನಗಳನ್ನು ನೆರವೇರಿಸುವದು, ಚರ್ಚಾಕೂಟಗಳನ್ನು ಸ್ಥಾಪಿಸುವದು, ಸಂಗೀತ, ನಾಟಕ, ಅಭಿನಯಗಳನ್ನು ಏರ್ಪಡಿಸುವದು, ಪ್ರೌಢ ಶಿಕ್ಷಣ ದಿನಾಚರಣೆ, ವಾಚನಾಲಯ ದಿನಾಚರಣೆ, ಮಹಾತ್ಮರ ಹಾಗೂ ಕವಿಗಳ ದಿನಾಚರಣೆ, ಧ್ವಜಾರೋಹಣ

ಇತ್ಯಾದಿ ಅನೇಕ ಚಟುವಟಿಕೆಗಳನ್ನು ಸರಕಾರದವರು ಅಭ್ಯಾಸೇತರ ಚಟುವಟಿಕೆಗಳೆಂದು ಗಣಿಸಿದ್ದು ಯೋಗ್ಯವೇ ಸರಿ. ಬೇರೆ ಬೇರೆ ಹಳ್ಳಿಗಳ ವಾತಾವರಣಕ್ಕನುಗುಣವಾಗಿ ಅಲ್ಲಿಯ ಸ್ಥಿತಿಗತಿ, ಅನುಕೂಲತೆ ಮೊದಲಾದವುಗಳನ್ನು ನೋಡಿಕೊಂಡು ಈ ತರದ ಶೈಕ್ಷಣಿಕ ಚಟುವಟಿಕೆಗಳನ್ನು ಬಾಲಕರಿಂದ ನಿರ್ವಹಿಸಬಹುದು. ಶಿಕ್ಷಣವೇ ಸಂಸ್ಕಾರ ವೆಂದು ನಾವು ಒಪ್ಪಿದರೆ, ಇವೆಲ್ಲ ಚಟುವಟಿಕೆಗಳಿಂದ ಬಾಲಕ ರಲ್ಲಿ ಸಂಸ್ಕಾರ ಉಂಟಾಗುವದು, ಈ ತರದ ಸಂಸ್ಕಾರ ಪಡೆ ಯುವದರಿಂದ ಅಪ್ರತ್ಯಕ್ಷವಾಗಿ ಬಾಲಕರಿಗೆ ಉಚ್ಚ ತರ ಗತಿಯ ಶಿಕ್ಷಣ ದೊರೆತಂತಾಗುವದು.

ಬೇರೆ ಬೇರೆ ಪಠ್ಯೇತರ ಚಟುವಟಿಕೆಗಳನ್ನು ಯಾವ ರೀತಿಯಿಂದ ನಿರ್ವಹಿಸಬೇಕೆಂಬುದರ ವಿಷಯವಾಗಿ ಸಮಗ್ರ ವಾಗಿ ಹೇಳುವ ಅವಶ್ಯಕತೆಯಿಲ್ಲ. ತರಬೇತಿ ಹೊಂದಿ ಅರಿತ ಹಾಗೂ ನುರಿತ ಶಿಕ್ಷಕರ ಕಾರ್ಯನಿರ್ವಹಣ ಶಕ್ತಿ, ವಿಶಾಲ ದೃಷ್ಟಿ, ಜೀವನದ ಅನುಭವ, ಸಹಕಾರ, ಸಂಘಟನೆ, ಮೊದಲಾದ ಗುಣಗಳ ಮೇಲೆ ಚಟುವಟಿಕೆಗಳ ಉಪಯು ಕ್ತತೆ, ಯಶಸ್ಸು, ಪರಿಣಾಮ, ಅವಲಂಬಿಸಿವೆ. ಚರ್ಚಾ ಕೂಟ ಮಂಡಲದಿಂದ ಬಾಲಕರ ಆತ್ಮಪ್ರತಿಷ್ಠಾ-ಪ್ರವೃತ್ತಿಯು ಅರಳಿದಂತಾಗುವದು; ಸಭೆ, ಸಮ್ಮೇಲನ, ಪ್ರದರ್ಶನ, ವಸ್ತುಸಂಗ್ರಹಾಲಯ, ಮೊದಲಾದವುಗಳ ನಿರೀಕ್ಷಣೆಯಿಂದ ಬಾಲಕರ ಅನುಕರಣ ಶಕ್ತಿಯು ಬೆಳೆದು ಅವರ ಜೀವನದ ಸರ್ವಾಂಗಗಳ ಅಭಿವೃದ್ಧಿಯು ಅಪ್ರತ್ಯಕ್ಷವಾಗಿ ಆಗುವದು; ಬನಸಿರಿಯ ಕೂಟ, ಶೀಗೀ ಹುಣ್ಣಿವೆಯ ಊಟ, ತೋಟ-ಪಟ್ಟಿಗಳ ನೋಟ ಮುಂತಾದ ಚಟುವಟಿಕೆಗಳ ಮುಖಾಂ ತರ ಬಾಲಕರಲ್ಲಿದ್ದ ಸಂಕುಚಿತ ದೃಷ್ಟಿಯು ಸ್ವಾಭಾವಿಕವಾಗಿ ಅಳಿದುಹೋಗಿ, ಅವರ ಸಾಮಾಜಿಕ ಜೀವನವು ಅಭಿವೃದ್ಧಿ ಹೊಂದಿ, ವಿಶಾಲವೃಷ್ಟಿ ಹಾಗೂ ದೂರದೃಷ್ಟಿ ಬೆಳೆಯಲನುವು ದೊರೆಯುವದು. ಕವಿ-ದಿನ, ಜಯಂತಿ, ವಿಜ್ಞಾನ-ದಿನ, ಪಾಲಕರ ದಿನಾಚರಣೆ, ವಾಚನಾಲಯ ದಿನಾಚರಣೆ ಮುಂ-ತಾದವುಗಳನ್ನು ನಮ್ಮ ಶಿಕ್ಷಣಾಲಯಗಳಲ್ಲಿ ಕೈಕೊಳ್ಳುವದ-ರಿಂದ ಬಾಲಕರಲ್ಲಿ ಹುದುಗಿಕೊಂಡಿದ್ದ ಅಗೋಚರವಾದ ಅದೃಶ್ಯವಾದ ಅಗಮ್ಯವಾದ ದೇವದತ್ತವಾದ ವಿಶಿಷ್ಟ ಶಕ್ತಿಗೆ ಚಾಲನೆ ಕೊಟ್ಟಂತಾಗಿ ಅವರ ಶಕ್ತಿ, ಪ್ರವೃತ್ತಿ ಮೊದಲಾದವು ಕೆರಳಿ, ಅವರ ಬುದ್ಧಿ, ಹಾಗು ನೀತಿ ಅರಳಿ, ಅವರನ್ನು ಒಳ್ಳೇ ನಾಗರಿಕರನ್ನಾಗಿ ಮಾರ್ಪಡಿಸಲು ಸಾಕಷ್ಟು ಅವಕಾಶ ಏದೆ. ಆದುದರಿಂದ ಶಿಕ್ಷಣಾಲಯಗಳಲ್ಲಿ ಅಭ್ಯಾಸೇತರ ಚಟುವಟಿಕೆಗಳು ಬಾಲಕರಲ್ಲಿ ತ್ರಿಕರಣ ಶುದ್ಧಿಯನ್ನು ಮಾಡಿ ನೈತಿಕ ದೀಕ್ಷೆಯನ್ನು ಕೊಟ್ಟು ರಾಷ್ಟ್ರದ ಸಾಮಾಜಿಕ ಜೀವನಕ್ಕೆ ಪೋಷಕವಾಗುವವೆಂದು ಬೇರೆ ಹೇಳಬೇಕಾಗಿಲ್ಲ.

---

(೦)

ಪ್ರಾಥಮಿಕ ಶಾಲೆಗಳ ಹೊಸ ಅಭ್ಯಾಸ-ಪತ್ರಿಕೆಯನ್ನೊಳಗೊಂಡ

"ಕನ್ನಡ ಪ್ರಾಥಮಿಕ ಶಿಕ್ಷಣ"ದ ಸಂಚಿಕೆಗಳು ತೀರಿ ಹೋಗಿವೆ.

ನಮ್ಮ ಕಡೆಗೆ ಹೊಸ ಅಭ್ಯಾಸ—ಪತ್ರಿಕೆಯನ್ನೊಳಗೊಂಡ ಸಂಚಿಕೆಗಳನ್ನು ಕಳಿಸಿಕೊಡುವದರ ಸಲು ವಾಗಿ ಅನೇಕ ಪತ್ರಗಳು ಇನ್ನೂ ಬರತೊಡಗಿವೆ. ಆದರೆ ಅಂಥ ಸಂಚಿಕೆಗಳು ತೀರಿಹೋಗಿದ್ದರಿಂದ ಅವುಗಳನ್ನು ಕಳಿಸಿ ಕೊಡಲು ಇನ್ನು ಮೇಲೆ ಸಾಧ್ಯವಿಲ್ಲವೆಂದು ಈ ಮೂಲಕ ತಿಳಿಸಲಪೇಕ್ಷಿಸುತ್ತೇವೆ. ಆದ್ದರಿಂದ ಈ ಸಂಬಂಧವಾಗಿ ಪತ್ರವ್ಯವಹಾರ ಮಾಡಬಾರದಾಗಿ ಬಿನ್ನಹ. ಸರಕಾರದವರೇ ಹೊಸ ಅಭ್ಯಾಸ ಪತ್ರಿಕೆಯನ್ನು ನೇರವಾಗಿ ಶೀಘ್ರದಲ್ಲಿಯೇ ಕನ್ನಡದಲ್ಲಿ ತಯಾರಿಸುತ್ತಿರುವರು.

—ಸಂಪಾದಕರು.

(೦)

ಪ್ರೌಢ ಶಿಕ್ಷಣ ಮತ್ತು ಶಿಕ್ಷಕ

ಬರೆದವರು: **ಶ್ರೀ. ಶಿವಶಂಕರ. ಮ. ಹಿಳ್ಳಿ,** ಶಿಕ್ಷಕ ವಿದ್ಯಾರ್ಥಿ, ಗಂಡುಮ್ಮಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

●

ನಮ್ಮೀ ಭಾರತವು ಪಾರತಂತ್ರ್ಯದ ಮೂಲಕ ನೂರಿನ್ನೂರು ವರ್ಷಗಳಿಂದ ಬಳಲುತ್ತ ಬಂದ ಮೂಲಕ, ತಮುಗನುಕೂಲವಾಗುವ ಶಿಕ್ಷಣವನ್ನು ಕೊಟ್ಟು ತಾವು ಬಹುಕಾಲ ಬೇರೂರುವ ಹಿತವನ್ನೇ ಸಾಧಿಸಿದ ಬ್ರಿಟಿಷರು ಭಾರತೀಯರಾದ ನಮಗೆ ಕೇವಲ ಅಕ್ಷರೀ ಜ್ಞಾನ ಮಾಡಿ ಕೊಟ್ಟು, ಪರಾವಲಂಬಿಯಾಗಿ ಕೇವಲ ನೌಕರಿಯ ಮೇಲೆ ಜೀವಿಸುವಂತೆಯೆ ಮಾಡಿದರೇ ಹೊರತು ಸ್ವಾವಲಂಬಿ ಶಿಕ್ಷಣ ಕೊಟ್ಟು ಉದ್ಧರಿಸಲಿಲ್ಲ. ಅದೂ ಕೂಡ ೧೦೦ಕ್ಕೆ ೮೫-೯೦ರಷ್ಟು ಇರುವ ಹಳ್ಳಿಗಳಲ್ಲಿ ಮಾಡದೆ ಕೇವಲ ಪಟ್ಟಣಗಳಲ್ಲಿ ಮಾತ್ರ ಸಾಧಿಸಿ ಕೊಟ್ಟರು. ಅದು ಅವರ ರಾಜಕಾರಣ-ಧುರೀಣ ಲಾರ್ಡ ಮೆಕಾಲೆಯವರದು. ಈ ಯೋಜನೆಯಿಂದ ನಮ್ಮ ಭಾರತವು ಅತ್ಯಂತ ಅಧೋಗತಿಗಿಳಿಯಿತು.

ಇದನ್ನು ಜಗದ್ವಂದ್ಯ ಮಹಾತ್ಮಾಗಾಂಧಿಯವರೇ ಮೊದಲಾದ ಭಾರತೀಯ ಶಿಕ್ಷಣ ತಜ್ಞರು ಕಂಡುಹಿಡಿದು ಶೈಕ್ಷಣಿಕ ಕ್ಷೇತ್ರದಲ್ಲಿ ಕಾಲಿಟ್ಟು ಮಾನವನು ಸ್ವಾವಲಂಬಿಯಾಗುವ ಧೋರಣೆಯೊಂದಿಗೆ ಮೊದಲಿನ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ಮಾಡಿ ಅದಕ್ಕೆ "ರಾಷ್ಟ್ರೀಯ ಶಿಕ್ಷಣ" ಎಂಬ ಅಭಿಧಾನವನ್ನಿಟ್ಟರು. "ಮಗುವು ನಾಗರಿಕನಾಗಬೇಕು." ಎಂಬುವುದು ಇದರ ಗುರಿ. ಮಗುವು ನಾಗರಿಕನಾದರೆ ಮಾತ್ರ ಇದರ ಕೆಲಸ ನಮ್ಮೀ ಭಾರತದ ದೃಷ್ಟಿಯಿಂದ ತೀರದು. ಕಾರಣವೆಂದರೆ, ಇಂದಿನ ಮಗುವು ನಾಳಿನ ನಾಗರಿಕನಷ್ಟೇ ಆದರೆ ನಮ್ಮೀ ಭಾರತದಲ್ಲಿ ನೂರಕ್ಕೆ ೮೫-೯೦ ರಷ್ಟು ಹಳ್ಳಿಗಳ ಪ್ರಮಾಣ; ಅಂದರೆ ಸುಮಾರು ಏಳು ಲಕ್ಷ ಹಳ್ಳಿಗಳಲ್ಲಿ ಶಿಕ್ಷಣ ಪಡೆಯದೆ ಇದ್ದ ಪ್ರೌಢರಿದ್ದಾರೆ, ಅವರ ಗತಿ ಏನು? ಅದಕ್ಕಾಗಿ ರಾಷ್ಟ್ರೀಯ. ಶಿಕ್ಷಣದ ವಿಧಾಯಕ ಕಾರ್ಯಗಳಲ್ಲಿ ಪ್ರೌಢ ಶಿಕ್ಷಣಕ್ಕೂ ವಿಶೇಷ ಮಹತ್ವ ಕೊಟ್ಟು ಸ್ಥಾನಮಾನ ಕಾಯ್ದಿಟ್ಟರು. ರಾಷ್ಟ್ರೀಯ ಶಿಕ್ಷಣವು ವ್ಯಾಪಕಾರ್ಥದ್ದಾಗಿದೆ. "ಶಿಕ್ಷಣವೇ ಜೀವನ, ಜೀವನವೇ ಶಿಕ್ಷಣ" ಎಂಬುದು ಇದರ ನಿಜ ಗುರಿ.

ಪ್ರೌಢ ಶಿಕ್ಷಣವೆಂದರೆ, ಶಿಕ್ಷಣ ಪಡೆಯದೆ ಇದ್ದ ಪ್ರೌಢರಿಗೆ ಕೊಡುವ ಶಿಕ್ಷಣವೆಂದು ಸಾಮಾನ್ಯವಾಗಿ ಅನ್ನಬಹುದು. ಹಳ್ಳಿಯು-ಡುಳ್ಳಿಯಾಗಬೇಕು, ಡುಳ್ಳಿ-ಹಳ್ಳಿಯಾಗಬೇಕು.

ಹಳ್ಳಿಯ ಜೀವಿ ರಾಷ್ಟ್ರದ ಸುಸಂಸ್ಕೃತ ಘಟಕವಾಗಬೇಕು. ರಾಷ್ಟ್ರವು ಹಳ್ಳಿಯ ಜೀವಿಯ ಘಟ್ಟಿಯಾಗಬೇಕು. ಬಗೆಬಗೆಯ ವಿಶಾಲಾರ್ಥದಿಂದ ಇದರ ಗುರಿಯನ್ನು ನಾವು ಕಾಣಬಹುದು.

ಇನ್ನು ಈ ಶಿಕ್ಷಣದ ಗುರಿ ಸಾಧಿಸಿಕೊಳ್ಳಲು ಅದಾವ ಮಾರ್ಗದಿಂದ ಹೋಗಬೇಕು ಎಂಬುದನ್ನು ವಿಚಾರಿಸುವಾ. ಪ್ರೌಢರಿಗೆ ಬರೀ ಓದು-ಬರೆಹ ಸಹಿ-ಸೂತ್ರ ಇಷ್ಟು ಬಂದರೆ ತೀರಿತೆಂತಲ್ಲ-ನನ್ನ ದೃಷ್ಟಿಯಲ್ಲಿ ಈ ಶಿಕ್ಷಣ ಕೊಡುವದು ಅತ್ಯಂತ ಕಠಿಣವೂ ಅಹುದು, ಸುಲಭವೂ ಅಹುದು. ಯಾಕೆಂಬುದನ್ನು ಮುಂದೆ ನೋಡುವಾ

"ಪ್ರವೃತ್ತಿಗಳ ಉದಾತ್ತೀಕರಣವೇ ಶಿಕ್ಷಣದ ಗುರಿ. "ವ್ಯಕ್ತಿತ್ವ-ವಿಕಾಸವೇ ಶಿಕ್ಷಣದ ಗುರಿ." ಈ ಪ್ರಕಾರ ಶಿಕ್ಷಣದ ಧ್ಯೇಯವಿದೆ. ಅಂದಬಲೀಕ ಈ ಗುರಿಯನ್ನು ಮಾನಸಶಾಸ್ತ್ರ ದೃಷ್ಟಿಯಿಂದ ಸಾಧಿಸಿದರೇನೇ "ರಾಷ್ಟ್ರೀಯ ಶಿಕ್ಷಣ"ವೆಂದೆ ನಿಸಿಕೊಳ್ಳುವದು; ಇಲ್ಲವಾದರೆ, ಬ್ರಿಟಿಷ ಕಾಲದ ಪರಾವಲಂಬಿ ಶಿಕ್ಷಣವಾದೀತು. ಬರೀ ಅಕ್ಷರ ಜ್ಞಾನದಿಂದ ಒಮ್ಮೊಮ್ಮೆ ಲಾಭದ ಬದಲು ಅತ್ಯಂತ ಹಾನಿ ತಟ್ಟುವ ಸಂಭವ ಇರುತ್ತದೆ. ಯಾಕಂದರೆ, ಅಕ್ಷರ-ಜ್ಞಾನದಿಂದ ಪ್ರವೃತ್ತಿಗಳು ಉದಾತ್ತೀಕರಣ ಹೊಂದಬಹುದೆಂದು ಹೇಳಲು ಬಾರದು. ಅಕ್ಷರ-ಜ್ಞಾನವು ಶಿಕ್ಷಣದಲ್ಲಿ ಪ್ರಗತಿ ಹೊಂದಲು ಸಾಧನವು ಮಾತ್ರವಾಗುವದೇ ಹೊರತು

ಢರಿಗೆ ಕೊಡತಕ್ಕ ಸಂಪೂರ್ಣ ಶಿಕ್ಷಣವಾಗಿ ಗುರಿ ಸಾಧಿ-
ಸುದೆಂದು ಹೇಳಲು ಬಾರದು.

ಮತ್ತಿಷ್ಟು ಸ್ಪಷ್ಟಮಾಡುವದಾದರೆ, ಒಂದು ಮಾತನ್ನು
ಹರಿಸುವಾ— ಅಲ್ಪ-ಸ್ವಲ್ಪ ಕಲಿತು ಅಂದರೆ, ಅಕ್ಷರ-
ನವಷ್ಟೇ ಪಡೆದು, ಅಲ್ಪ ಸುಶಿಕ್ಷಿತರೆನ್ನಿಸಿಕೊಳ್ಳುವವರಿ-
ಕಲಿಯದೆ ಇದ್ದ ಪ್ರೌಢ ಜನಾಂಗದಲ್ಲಿ ತಮ್ಮ ಸಂಸಾ-
ನ್ನು ಸುಗಮವಾಗಿ ಕಾಯ್ದುಕೊಂಡು, ಸದೃಢಕಾಯ-
, ಸರಕಾರ ನಿಷ್ಠರಾಗಿ, ನೀತಿ ಆದರ್ಶರಾಗಿ ಉಳಿದು
ದವರೇ ಹೆಚ್ಚು ಇದ್ದ ಸಂಖ್ಯೆ ಎಲ್ಲರ ದೃಷ್ಟಿಪಥದಲ್ಲಿ
ದ ಮಾತಾಗಿದೆ. ಇಲ್ಲಿ ತಿಳಿದುಬರುವದೇನಂದರೆ—
ರ-ಜ್ಞಾನದಿಂದ ಪ್ರೌಢರು ಸರ್ವ ರೀತಿಯಿಂದ ಸಬಲ-
ವರೆಂದು ಹೇಳಲು ಬಾರದೆಂದು ಸಿದ್ಧ.

ಕ್ಷರ-ಜ್ಞಾನದ ಸಾಧನದಿಂದ ಪ್ರವೃತ್ತಿಗಳನ್ನು ಸುಮಾ-
ಕ್ಕಿಳಿಸಿ, ತಾನು–ಮನೆ–ಮಾರು–ಪ್ರಾಂತ–ಸ್ವದೇಶಾದಿ–
ಹಿತಾಹಿತ ಕ್ರಮದಿಂದ ಕೆಳಗಿನಿಂದ ಮೇಲಕ್ಕೆ ಅಂದರೆ
ಲದಿಂದ ತುತ್ತತುದಿ ಸೇರುವದನ್ನು ಸಾಧಿಸಿಕೊಳ್ಳ
ಬೆ.

ಮಕ್ಕಳಿಗೆ ಶಿಕ್ಷಣ ಕೊಡುವುದಾದರೆ, ಅವರ ಅವಸ್ಥೆ-
ಯ ಪ್ರವೃತ್ತಿಗಳನ್ನು ಕಂಡು ಹಿಡಿದು, ಅವರ ಒಲವಿ-
ನಾಗುತ್ತ ಅವರ ಪ್ರವೃತ್ತಿಗಳನ್ನು ಹೇಗೆ ಉದಾತ್ತೀ-
ಗೊಳಿಸುತ್ತೇವೆಯೋ ಹಾಗೆಯೇ ಪ್ರೌಢರ ಪ್ರಾಥಾ-
ಯಲ್ಲಿಯ ಪ್ರವೃತ್ತಿಗಳನ್ನು ಕಂಡು ಹಿಡಿದು, ಅವರಿಗೆ
ಸನ್ನಿವೇಶ– ಸಂದರ್ಭಗಳನ್ನು ಕಲ್ಪಿಸಿಕೊಟ್ಟು, ಅವು
ಮುಖಾಂತರ ಅವರ ವ್ಯಕ್ತಿತ್ವ ವಿಕಾಸಗೊಳಿಸಲು
ತ್ತರಾಗಬೇಕು.

ದಕ್ಕಾಗಿ ಅವರನ್ನು ನಿತ್ಯವೂ ಒತ್ತಟ್ಟಿಗೆ ನಿಯಮಿತ
ಗೆ ಕೂಡಿಸಲೂ ಅವರ ಒಲವಿಗನುಸರಿಸಿ ಯೋಜನೆ
ಳ್ಳಬೇಕು.

ಳ್ಳಿಗರಿಗೆ (ಪ್ರೌಢರಿಗೆ) ಭಜನ–ಕೀರ್ತನ–ಪುರಾಣ–
ಚನ–ನಾಟಕ–ನೃತ್ಯ–ಬೈಲಾಟ ಇವೇ ಮೊದಲಾದವು-
ಮೇಲೆ ಬಲು ಪ್ರೇಮ. ಇವುಗಳಲ್ಲೊಂದು ಯಾವದೇ
ದ್ದರೆ, ತಮ್ಮ ಎಲ್ಲ ಕೆಲಸ ಬದಿಗೊತ್ತಿ ಮನೆಯ
ಯಲ್ಲದೆಯೇ ಬಂದು ನೆರೆಯುವರು. ಹೀಗೆ ನೆರೆಸುವ-
ದರಲ್ಲಿ ಅವರ ನಿತ್ಯ ಜೀವನಕ್ಕೆ ಧಕ್ಕೆ ಬಾರದಂತೆ, ಅತಿ ದೀರ್ಘಾವಧಿಯದಾಗದಂತಹ ಒಂದು ಕಾಲ-ಪ್ರಮಾಣ ಗೊತ್ತುಪಡಿಸಬೇಕು. ಆ ಸನ್ನಿವೇಶವನ್ನು ನಮ್ಮ ಗುರಿಯ ಸಾಧನಕ್ಕಾಗಿ ಉಪಯೋಗಿಸಬೇಕೇ ಹೊರತು ಅದರಲ್ಲಿ ಶಿಕ್ಷಕನು ಭಾವಪರವಶನಾಗಿ ಗುರಿ ತಪ್ಪಕೂಡದು.

ಶಿಕ್ಷಕನು ಅವರ ಸಹಕಾರ ಬಯಸುವದಾದರೆ, ಅವರ ಉಡುಪು–ತೊಡುಪಿನಲ್ಲಿ, ಅವರ ರೀತಿ-ನೀತಿಯಲ್ಲಿ, ಅವರ ಭಾಷೆ–ವಿನೋದದಲ್ಲಿ ಬೆರೆತವನಾಗಬೇಕು. ಅಂದರೆ ಅವರು ಅವರಾಗಿಯೇ ಉಳಿಯಬೇಕು. ಆ ಪ್ರೌಢರು ಈ ಶಿಕ್ಷಕನನ್ನು ಹಿಂಬಾಲಿಸಲು ಶಿಕ್ಷಕನಲ್ಲಿ ನೀತಿ ಆದರ್ಶತ್ವ ಅತ್ಯವಶ್ಯ. ಹೀಗಿದ್ದಲ್ಲಿ, ಅವರ ಪೂಜ್ಯ ಭಾವನೆ ಆ ಶಿಕ್ಷಕನ ಮೇಲೆ ಭಾವಿಕವಾಗಿ ತಲೆದೋರುವದು.

ಈ ರೀತಿಯಾಗಿ ಪಡಕೊಂಡ ನಂಬಿಗೆಯನ್ನು ಸದುಪ-ಯೋಗ ಮಾಡಿಕೊಂಡು ಗುರಿ ಸಾಧಿಸಿಕೊಳ್ಳಲು ಶಿಕ್ಷಕನು ಅವರಿಗೆ ತಾನೆಂದರೆ ಯಾರು, ಮನೆಯಂದರೇನು, ಪ್ರಾಂತ ವೆಂದರೇನು, ಸ್ವದೇಶವೆಂದರೇನು, ಅದರಿಂದಾಗುವ ಹಿತಾಹಿತಗಳಾವವು ಇವೆಲ್ಲವನ್ನು ಕಥೆ-ಪುರಾಣ-ಪ್ರವಚನ-ಬೋಧೆ-ಬೈಲಾಟ-ಕೀರ್ತನ-ಭಜನ ಇತ್ಯಾದಿಗಳೊಂದಿಗೆ ಬೆರಿಸಿ ಅಭಿರುಚಿಗೊಳಿಸಿ ಅವರ ಮನೋಭೂಮಿಯನ್ನು ಹದಗೊ-ಳಿಸಬೇಕು. ಮುಂದೆ ಸ್ವಜನಾಭಿಮಾನ- ಸ್ವದೇಶಾಭಿಮಾ-ನಾದಿಗಳ ಬೋಧೆ ಬೆಳಿಸಿ ಹೇಳಬೇಕು. ಇದುವೇ ಅವರ ಪ್ರಾಥಮಿಕ ಪ್ರೌಢ ಶಿಕ್ಷಣಾರಂಭ. ಆಗ ಅವರು ಕತ್ತಲೆ-ಯೊಳಗಿನ ಕಾಲನ್ನು ಕಿತ್ತಿ ಬೆಳಕಿನಲ್ಲಿಡಲು ಪ್ರವೃತ್ತರಾಗಿ ತಾವೆ ತಾವು ಇದನ್ನು ಸಾಧಿಸಿಕೊಳ್ಳಲು ಅಕ್ಷರ ಜ್ಞಾನದ ಬೇಡಿಕೆಯನ್ನು ಭರದಿಂದ ಒಡ್ಡುವರು. ಆಗ ಅಕ್ಷರಜ್ಞಾನ ದಿಂದ ಸ್ವಾವಲಂಬಿಯಾಗಿ ಇಂತಹ ವಿಚಾರ ಪಡೆದುಕೊ-ಳ್ಳಲು ಶಿಕ್ಷಣವು ಒಳ್ಳೇ ಸಾಧನವೆಂದು ಮತ್ತಿಷ್ಟು ಅವ-ರನ್ನು ಪ್ರೋತ್ಸಾಹಿಸಬೇಕು.

ಬಳಿಕ ಅವರ ಈ ಕ್ಷಣಿಕ ವೈರಾಗ್ಯವನ್ನು ಸ್ಥಿರತೆಗೊಳಿ-ಸಲು ಅಕ್ಷರಾಭ್ಯಾಸ ಪ್ರಾರಂಭಿಸಿ ಓದು-ಬರೆಹದ ಅಭಿರು-ಚಿಗೆ ಪುಷ್ಟಿ ಕೊಡಬೇಕು.

ಅಕ್ಷರಾಭ್ಯಾಸವನ್ನು ಕೇವಲ ಪಾಟಿಯಮೇಲೆ ಪ್ರಾರಂಭಿಸುತ್ತಹೋದರೆ ಒಮ್ಮೊಮ್ಮೆ ಬೇಸರ, ಅನಾದರ

ಹುಟ್ಟಿ ಗುರಿಗೆ ಕಲಂಕ ಬಂದು, ಹಾನಿ ತಟ್ಟಬಹುದು. ಅವರಿಗೆ ನೈಸರ್ಗಿಕವಾಗಿ ಅಕ್ಷರಜ್ಞಾನಮಾಡಿಕೊಡುತ್ತ ಹೋಗಬೇಕು. ಅಂದರೆ ಬಗೆ ಬಗೆಯ ಚಿತ್ರಗಳ ಸಹಾಯದಿಂದ ಓದು ಮೊದಲು ಪ್ರಾರಂಭಿಸಿ, ಅದರ ಮುಖಾಂತರ ಅಕ್ಷರಗಳ ರೂಢಿ ಬೆಳಿಸಿ ಬರೆಯಿಸಹಚ್ಚುವದು ತೀರ ಸುಲಭವಾಗಿ ಸಾಧಿಸುತ್ತದೆ. ಯಾಕಂದರೆ, ಅವರಲ್ಲಿ ಸ್ಮರಣಶಕ್ತಿ ಬಹಳ ಇರುತ್ತದೆಂಬುದನ್ನು ಹಳ್ಳಿಯ ಜೀವಿಯಾದ ನಾನು ಅವರೊಡನೆ ಭಜನ-ಬೈಲಾಟಾದಿಗಳ ಕಾರ್ಯಗಳಲ್ಲಿ ಕಂಡುಕೊಂಡಿದ್ದೇನೆ. ನಿಯಮಿತತನದಿಂದ ಅವರು ಬಂದದ್ದಾದರೆ ಕೇವಲ ಅಕ್ಷರಾಭ್ಯಾಸ ಒಂದೆರಡು ತಿಂಗಳಲ್ಲಿಯೇ ಸಾಧಿಸಬಹುದೆಂದು ಅನಿಸುತ್ತದೆ.

ಮೊದಲು-ಮೊದಲು ತರಗತಿಯ ಪ್ರಾರಂಭದಲ್ಲಿ ವಿನೋದ, ಚಿಕ್ಕ-ಚಿಕ್ಕ ಹಾಸ್ಯಲಹರಿ, ಕಥೆ—ಕವನಗಳನ್ನು ಅವರ ಭಾಷೆಯಲ್ಲಿ ಅವರ ನಿತ್ಯ ಜೀವನಕ್ಕೆ ಹೊಂದಿಸಿ ಹಾಡುವದನ್ನಾಗಲಿ ಹಾಡಿಸುವದನ್ನಾಗಲಿ ಮಾಡುತ್ತಾ ಪ್ರೋತ್ಸಾಹನೆ ಕೊಡಬೇಕು. ಹೀಗೆ ನಡೆದರೆ ಅವರು ದಿನಾಲು ನಮ್ಮ ದಾರಿಯನ್ನೇ ಕಾದುಕೊಂಡು ಕೂಡುವದರಲ್ಲಿ ಅವ ಸಂದೇಹವೂ ಇಲ್ಲ.

ಯಾವಾಗಲೂ ಕ್ಲಾಸಿನಲ್ಲಿದ್ದವರ ಹೃದಯದ ಕಡೆಗೆ ನಮ್ಮ ಲಕ್ಷವಿರಬೇಕು. ಒಲವು ಗೊತ್ತಾಗಿ ಬೆರೆತುಕೊಳ್ಳುವ ಕಲೆ ನಮಗೆ ತಿಳಿದರೆ, ನಮ್ಮ ಕಾರ್ಯ ಬಲು ಸುಲಭ. ಇಲ್ಲವಾದರೆ, ಅನಿಷ್ಟ ಫಲ ಕಟ್ಟಿಟ್ಟದ್ದು. ಶಿಕ್ಷಕನು ಸಮಯೋಚಿತ ಜನಪದ ಧಾಟಿಯಲ್ಲಿ ಕವನ ಕಟ್ಟುವವನೂ, ಸಂದರ್ಭಾನುಸಾರ ಕತೆ ಕಟ್ಟಿ ಹೇಳುವವನೂ ಆದರಂತೂ ಕಾರ್ಯ ಬಲು ಕೈವಶ.

ಪ್ರೌಢರ ಪ್ರವೃತ್ತಿಗಳು ಮಾರ್ಗದರ್ಶಕರಿಲ್ಲದೆ ಬೆಳೆದಿರುವದರಿಂದ ಕಾಳಕತ್ತಲೆಯಲ್ಲಿ ಬಹಳ ಆಳವಾಗಿ ಸಿಕ್ಕು ಬಿದ್ದು ಆತನು ದುರ್ಬಲನಾಗಿರೋಣದರಿಂದ ಕುಶಲತನದಿಂದ ಪ್ರವೃತ್ತಿಗಳನ್ನು ಸುವೃತ್ತಿಗಳನ್ನಾಗಿ ಮಾಡಲು ಮಾರ್ಗ ಬದಲಾಯಿಸಿ ಬೆಳಕಿನೆಡೆಗೆ ಮೆಲ್ಲನೆ ಹಿಡತಂದು ಹಿತಾಹಿತ, ಸ್ವಾತಂತ್ರ—ಪಾರತಂತ್ರ್ಯ, ಸ್ವದೇಶ-ಪರದೇಶ ತಾನು—ತನ್ನವನೆಗಳ ಅರಿವು ಮಾಡಿಕೊಟ್ಟು ನಾ ಮಾರ್ಗಾವಲಂಬಿಯಾದ ಪ್ರೌಢನನ್ನು ಪಾಶದಿಂದ ಬಿಡುಗಡೆ ಮಾಡಬೇಕು.

ಈ ಮೊದಲು ಹೇಳಿದಂತೆ ಪ್ರಾರಂಭಕ್ಕೆ ಬಾಯಿಬೋಧೆ ಬಗೆಬಗೆಯಿಂದ ಮಾಡಿ, ಅರಿವು ಹುಟ್ಟಿಸಿ, ಅಕ್ಷರ-ಜ್ಞಾನಕ್ಕೆ ಕೈನೀಡಿ ಕೈವಶಮಾಡಿಕೊಂಡರೆ ಪ್ರೌಢಶಿಕ್ಷಣ ಸುಲಭವಾದು.

ಪ್ರೌಢ ಶಿಕ್ಷಣವನ್ನು ಕಲಿಸುವ ಶಿಕ್ಷಕನು ಇನ್ನೂ ಅನೇಕ ಬಗೆಬಗೆಯಿಂದ ತನ್ನ ವ್ಯಕ್ತಿತ್ವ ಉಪಯೋಗಿಸಿ ಸಾಧಿಸಬಹುದು.

ಈ ಕಾರ್ಯ ಸಿದ್ಧಿಗಾಗಿ ಸರಕಾರವು ತಕ್ಕ ಪ್ರೋತ್ಸಾಹನೆ ಕೊಡಲು ತನ್ನ ಕಾರ್ಯಕ್ರಮದಲ್ಲಿ ಅದಕ್ಕೆ ಅಗ್ರಸ್ಥಾನ ಕೊಟ್ಟಿದೆ. ಶ್ರಮದ ಫಲವಾಗಿ ತಕ್ಕ ವೇತನ, ಕಲಿಸುವದಕ್ಕೆ ತಕ್ಕ ಉಪಕರಣಾದಿಗಳನ್ನು ಕೊಡಲು ಸದಾಸಿದ್ಧವಿದೆ.

ಜಯ ಹಿಂದ

ಪದವೀಧರ ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರದಲ್ಲಿಯ ನನ್ನ ಅನುಭವಗಳು

ಅನುಭವಿಸಿದವ ಶ್ರೀ. ವೀರೇಶ ಹಿರೇಮಠ ಬಿ. ಎ., ಬಿ. ಟಿ.

●

[ತರಬೇತಿ ಹೊಂದಿದ ಪದವಿಧರ ಶಿಕ್ಷಕರ ಬೇಸಿಕ್ ಟ್ರೇನಿಂಗ ಸಂಸ್ಥೆಯ ಒಂದು ವಾರದ ದೈನಿಕ ಕಾರ್ಯಕ್ರಮವನ್ನು ಈ ಪತ್ರಿಕೆಯಲ್ಲಿ ಇನ್ನೊಂದೆಡೆಗೆ ಕೊಡಲಾಗಿದೆ. ಈ ಕಾರ್ಯಕ್ರಮವು ಹವಾಮಾನಕ್ಕೆ ಅನುಸಾರವಾಗಿ ಅಲ್ಪ ಸ್ವಲ್ಪ ಬದಲಾವಣೆ ಹೊಂದುತ್ತ ಸಾಗುವುದು. ಅದರ ಪರಿಚಯವನ್ನು ಆಗಾಗ್ಗೆ ಈ ಪತ್ರಿಕೆಯ ಮುಖಾಂತರ ಮಾಡಿ ಕೊಡಲಾಗುವದು. ಇದು ಎಲ್ಲ ಬೇಸಿಕ್ ಶಾಲೆಗಳಿಗೂ ಮಾರ್ಗದರ್ಶಕವಾಗುವದೆಂದು ನಂಬಿಗೆ. —ಸಂಪಾದಕರು.]

ಪ್ರಾಥಮಿಕ ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರದಲ್ಲಿ ನಾನು ೧೯೪೫ನೇ ಜೂನ ತಿಂಗಳಿನಿಂದ ಅಧ್ಯಾಪನ ವೃತ್ತಿಯನ್ನು ಹೇಗೋ ಸಾಗಿಸುತ್ತ, ವರ್ಧಾ ರಾಷ್ಟ್ರೀಯ ಶಿಕ್ಷಣದ ರೂಪರೇಷೆಗಳನ್ನು ತಕ್ಕ ಮಟ್ಟಿಗೆ ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದೆನು. ಆದರೆ ಹೊಸ ಶಿಕ್ಷಣದ ಜ್ಞಾನ, ಅನುಭವ ನನಗೆ ಸಾಕಷ್ಟು ಸಶಾಸ್ತ್ರೀಯವಾಗಿ ಆಗಿರಲಿಲ್ಲ. ನನ್ನಲ್ಲಿ ಹುದುಗಿಕೊಂಡ ವಿಚಾರಗಳಿಗೆ ಒಂದು ವೈಜ್ಞಾನಿಕ ದೃಷ್ಟಿ ಬಂದಿರಲಿಲ್ಲ. ಸ್ವಪ್ರೇರಿತನಾಗಿ ಸ್ವಸ್ಫೂರ್ತಿಯಿಂದ ಭಾವಿಸಿದ್ದೇ ತತ್ವವೆಂದು ತಿಳಿದುಕೊಳ್ಳುವ ಹೆಮ್ಮೆ ಮಾತ್ರ ದಿನದಿನಕ್ಕೆ ಬೆಳೆಯುತ್ತಲಿತ್ತು.

ಈ ಜೀವನ-ಶಿಕ್ಷಣದ ಆಗುಹೋಗುಗಳನ್ನೂ, ಗಮ್ಯಗುರಿಗಳನ್ನೂ, ಆಶೆ-ಆಕಾಂಕ್ಷೆಗಳನ್ನೂ ಹೆಚ್ಚು ಮೂರ್ತ ಸ್ವರೂಪವಾಗಿ ತಿಳಿದುಕೊಳ್ಳುವ ಲವಲವಿಕೆಯಿಂದ ವರ್ಧಾಯಾತ್ರೆಗೆ ಹೊರಡಬೇಕೆಂಬ ಹವಣಿಕೆಯಲ್ಲಿದ್ದೆ. ಅಷ್ಟರಲ್ಲಿಯೇ ಜೂನ ೨೦ನೇ ತಾರೀಖಿನ ಸುಮಾರು ಮಧ್ಯಾಹ್ನ, ನಮ್ಮ ಶಿಕ್ಷಣಾಧಿಕಾರಿಗಳಿಂದ ಒಂದು ಅಪ್ಪಣೆ ಬಂದಿತು. ಇದೇ ಧಾರವಾಡದಲ್ಲಿ ವರ್ಧಾ ಯೋಜನೆಯ ಶಿಕ್ಷಣವನ್ನು (ಸೇವಾಗ್ರಾಮ ಪದ್ಧತಿಯಲ್ಲಿಯೇ) ತರಬೇತಿ ಹೊಂದಿದ ಪದವೀಧರರಿಗೆ ಕೊಡುವ ಯೋಜನೆ ಮಾಡಿದ್ದುದು ತಿಳಿದು ಬಂದಿತು. ಅದೂ ಅಲ್ಲದೆ, ಆ ಶಿಕ್ಷಣ ಪಡೆಯುವ ಭಾಗ್ಯ ನನಗೂ ಬಂದಿದೆಯೆಂದು ಗೊತ್ತಾದ ಮೇಲೆ ಕೊಂಚ ಶೋಕ ವಿಸ್ಮಿತನಾದೆ. ಅನುಭವಿಯಾದ ನನಗೆ ಇಂತಹ ತರಬೇತಿ ಅವಶ್ಯಕವೇ ಎಂಬ ಪ್ರಶ್ನೆಯು ನನ್ನನ್ನು ಕೆರಳಿತು. ಬಿ. ಟಿ ಪದವಿಯನ್ನು ೧೯೪೨ನೇ ವರುಷದಲ್ಲಿಯೇ ಪಡೆದಿದ್ದು ೭-೮ ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ದುಡಿದು ಅನುಭವ ಪಡೆದ ನಾನು ಈ ತರಬೇತಿಗೆ ಹೋಗುವದೆಂದರೆ ಅವಮಾನಕಾರಕವೆಂದು ಭಾವಿಸಿ, ಕೊಂಚ ವಿಚಾರ ಮಗ್ನನಾದೆ. ಭಾವಲಹರಿ ಹರಿದು, ದೀರ್ಘ ವಿಚಾರ ಮಾಡಿದ ನಂತರ, ನಿಜವಾಗಿಯೂ ಈ ಆಯ್ಕೆ ನನ್ನನ್ನು ಹೆಚ್ಚಿನ ಜ್ಞಾನ ದೀವಟಿಗೆಗೆ ಮುಟ್ಟಿಸುವದೆಂಬ ನಿಶ್ಚಿತ ನಿರ್ಧಾರಕ್ಕೆ ಬಂದೆ. ಯಾವದೋ ಒಂದು, ನನ್ನದೇ ಆದ ಒಂದು ವಿಶಿಷ್ಟ ಕಲ್ಪನೆಯನ್ನು ತಿದ್ದಿ ತೀಡಿ ರಾಷ್ಟ್ರೀಯ ಶಿಕ್ಷಣದ ನಿಜವಾದ ತಿರುಳನ್ನು ತಿಳಿದುಕೊಳ್ಳಲು ಒಂದು ಸುಸಂಧಿ ಹಾಗೂ ಅನುವು ದೊರೆಯಿತಲ್ಲಾ ಎಂಬ ಹುಮ್ಮಸದಿಂದ ಹಿಗ್ಗಿದೆ. ಕೊನೆಗೊಮ್ಮೆ ಜುಲೈ ೧ನೇ ತಾರೀಖಿಗೆ ಗಂಟು-ಗದಡಿಗಳನ್ನೆಲ್ಲ ಕಟ್ಟಿಕೊಂಡು ಹೊಸ ಕೇಂದ್ರವನ್ನು ಸೇರಿದೆ.

ಕನ್ನಡ ನಾಡಿನ ಸಾಂಸ್ಕೃತಿಕ ಕೇಂದ್ರವಂತಿದ್ದ, ಅನೇಕರಿಗೆ ವಿದ್ಯಾಮಂದಿರವಾದ, ಕನ್ನಡ ಕಹಳೆಯನ್ನೂದಿದ ಪವಿತ್ರ ಸಂಸ್ಥೆಯಾದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಆವರಣದಲ್ಲಿಯೇ ಜುಲೈ ಒಂದನೇ ತಾರೀಖಿನ ದಿನ ಮಧ್ಯಾಹ್ನ ಮೂರು ಗಂಟೆಗೆ ಕೇಂದ್ರವು ಪ್ರಾರಂಭವಾಯಿತು. ಅಲ್ಲಿಯ ಹೊಸ ಮುಖ್ಯಾಧ್ಯಾಪಕರು ಯಾವ ಅಧಿಕಾರ-ಠೀವಿಯಿಂದಲೂ ಅಲ್ಲಿ ನಮ್ಮನ್ನು ಸ್ವಾಗತಿಸಲಿಲ್ಲ. ಅಧಿಕಾರ ವಾಣಿಯಿಂದ ಸುಗ್ರೀವಾಜ್ಞೆ ಹೊರಡಿಸಲಿಲ್ಲ. ನಯ-ವಿನಯದಿಂದ, ಹಿತವಾದ-ಮಿತವಾದ ಮೃದುನುಡಿಗಳಿಂದ ಚಿಕ್ಕದಾವರೂ ಜೊಕ್ಕವಾದ ಭಾಷಣ ಮಾಡಿ ನನ್ನನ್ನು ಆಕರ್ಷಿಸಿಕೊಂಡರು. ಮೌನ ಮಾಡುತ್ತ ಕಲಿಯುವದೇ ರಾಷ್ಟ್ರೀಯ ಶಿಕ್ಷಣದ ಗುರಿ ಎಂದೂ, ಪ್ರತ್ಯಕ್ಷ ಅನುಭವವೇ ಅದರ ಸಾರವೆಂದೂ, ಕೃತಿ ಮೂಲಕವಾಗಿ ಹಾಗೂ ಪ್ರಾಸಂಗಿಕವಾಗಿ ಪಡೆಯುವ ಅನುಭವವೇ ಜ್ಞಾನವೆಂದೂ ತಿಳಿಹೇಳಿ ಈ ಹೊಸ ಕೇಂದ್ರವು "ವಿಚಾರ ಹಾಗೂ ಅನುಭವ

ವಿನಿಮಯ ಸಂಸ್ಥೆ'' ಎಂದು ಹೇಳಿದರು. ಇಲ್ಲಿ ಅಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿಗಳು ಎಂಬ ಭೇದ-ಭಾವವಿರ ಕೂಡದೆಂದೂ ಹೇಳಿದರು. ಹಾಗೂಶಿಕ್ಷಣದ ಬಗ್ಗೆ ಜನರಲ್ಲಿ ಸಾಕಷ್ಟು ಜಾಗ್ರತೆಯುಂಟಾಗದಿದ್ದುದಕ್ಕೆ ಆ ಕ್ಷೇತ್ರದಲ್ಲಿ ದುಡಿಯುವವರೂ ಕೂಡ ತುಸು ಮಟ್ಟಿಗೆ ಕಾರಣರು, ಹೊರತು ಆ ಶಿಕ್ಷಣದ ಮೂಲತತ್ವಗಳಲ್ಲಿ ಯಾವ ದೋಷ ವಿಲ್ಲವೆಂದು ಪ್ರತಿಪಾದಿಸಿದರು. ಈ ಶಿಕ್ಷಣವು ರಭಸದಿಂದ ಪ್ರಚಾರದಲ್ಲಿ ಬರಬೇಕಾದರೆ ಆಸ್ಥೆ ಅಚಲವಿದ್ದ ಕಾರ್ಯಕರ್ತರ ಅವಶ್ಯಕತೆ ಇದೆ, ಎಂದು ಹೇಳಿದರು. ಈ ಹೊಸ ಶಿಕ್ಷಣದ ಸಂಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯಿಂದ ಬೇರೆ ಬೇರೆ ಖಾತೆಗಳನ್ನು ನಿರ್ಮಿಸಿ ವಿವಿಧ ಮಂತ್ರಿಗಳ ಆಯ್ಕೆ ಮಾಡಿ ಕೊಂಡೆವು. ಮುಖ್ಯಾಧ್ಯಾಪಕರು ಇಡೀ ಸಂಸ್ಥೆಯನ್ನು ವಿದ್ಯಾರ್ಥಿಗಳಿಗೆ ಒಪ್ಪಿಸಿದರು. ಮುಖ್ಯಾಧ್ಯಾಪಕರು ಹಾಗೂ ಉಳಿದ ಅಧ್ಯಾಪಕರು ಕೇವಲ ಮಾರ್ಗದರ್ಶಿಗಳಾಗಿ ಪರಿಣಮಿಸಿದರು, ಅಷ್ಟೇ ಅಲ್ಲ, ಸಾಮಾನ್ಯ ಸದಸ್ಯರಾಗಿ ನಮ್ಮ ವಿವಿಧ ಚಟುವಟಿಕೆಗಳಲ್ಲಿ, ನಮ್ಮ ಕೂಡ ಕೆಲಸಗಳಲ್ಲಿ ತೊಡಗಿ ಕೊಳ್ಳುವದಕ್ಕಾಗಿ ಅಂದಿನಿಂದ ವಸತಿಗೃಹ, ಒಕ್ಕಲುತನ ವರ್ಗದ ಕೊಠಡಿ, ಬಚ್ಚಲ ಮನೆ, ಮೂಲ ಉದ್ಯೋಗಗಳ ಸಾಧನ ಸಾಮಗ್ರಿಗಳನ್ನೆಲ್ಲ ನಮಗೆ ಒಪ್ಪಿಸಿದರು. ನಮ್ಮಲ್ಲಿಯ ಕೆಲವರನ್ನು ಆರೋಗ್ಯಖಾತೆ, ಒಕ್ಕಲತನ ಖಾತೆ, ಸ್ವಚ್ಛತೆ ಖಾತೆ, ಭೋಜನ ಖಾತೆ, ಹಾಗೂ ಇತರ ವಿವಿಧ ಖಾತೆಗಳ ಮಂತ್ರಿಗಳನ್ನಾಗಿ ಆರಿಸಿದ್ದೇವೆ. ನಮ್ಮಲ್ಲಿ ಒಬ್ಬರನ್ನು ಮುಖ್ಯ ಮಂತ್ರಿಯನ್ನಾಗಿ ಆರಿಸಿದ್ದೇವೆ.

ದಿನಾಲು ಮುಂಜಾನೆ ನಾವೆಲ್ಲರೂ ೫-೩೦ ಘಂಟೆಗೆ ಎದ್ದು ವೈಯಕ್ತಿಕ ಸ್ವಚ್ಛತೆ ಮುಗಿಸಿಕೊಂಡು ಪ್ರಾರ್ಥನಾ ಮಂದಿರಕ್ಕೆ ಸರಿಯಾಗಿ ೬-೩೦ ಘಂಟೆಗೆ ಹೋಗುವೆವು. ಪ್ರಾರಂಭದಲ್ಲಿ ಮೌನವನ್ನಾಚರಿಸಿ, ಇಷ್ಟ ದೇವತೆಯ ಮಾನಸ ಪೂಜೆ ಮುಗಿಯಿಸಿ, ಹಿಂದುಸ್ತಾನಿ, ಸಂಸ್ಕೃತ, ಕನ್ನಡ ಹೀಗೆ ಮೂರು ಭಾಷೆಗಳಲ್ಲಿಯ ಪ್ರಾರ್ಥನೆಯ ಗೀತಗಳನ್ನು ಪಠಿಸುವೆವು. ಪ್ರಾರ್ಥನೋತ್ತರ ವೇಳೆಯಲ್ಲಿ ಮುಖ್ಯಾಧ್ಯಾಪಕರಾಗಲಿ ಉಳಿದ ಅಧ್ಯಾಪಕರಾಗಲಿ ಇಲ್ಲವೆ ಬೇರೆ ಬೇರೆ ಖಾತೆಯ ಮಂತ್ರಿಗಳಾಗಲಿ ಅವರಿಗೆ ತೋರಿದ ಕೆಲವು ಸೂಕ್ತ ಸಲಹೆಗಳನ್ನು, ಸುಧಾರಣೆಯ ಮಾರ್ಗಗಳನ್ನು ಹಾಗೂ ದೋಷಗಳನ್ನು ಹಾಗೂ ಅವುಗಳ ನಿವಾರಣೋಪಾಯಗಳನ್ನು ಸೂಚಿಸುವರು. ಪ್ರಾರ್ಥನೆಯ ನಂತರ ಸಾಮೂಹಿಕ ಸ್ವಚ್ಛತೆಯ ಕೆಲಸವನ್ನು ಪ್ರಾರಂಭಿಸುವೆವು. ವಸತಿಗೃಹ, ಬಚ್ಚಲ ಮನೆ, ವರ್ಗದ ಸ್ವಚ್ಛತೆ, ಸುತ್ತು ಮುತ್ತಲಿನ ಅಂಗಳು, ಓಣಿಗಳ ಸ್ವಚ್ಛತೆಯು ಸಾಮೂಹಿಕ ಸ್ವಚ್ಛತೆಯಲ್ಲಿ ಬರುವವು. ಮುಕ್ಕಾಲು ಘಂಟೆಯ ವರೆಗೆ ಈ ಕಾರ್ಯವನ್ನು ಒಳ್ಳೇ ಹುಮ್ಮಸದಿಂದ ಮಾಡಿ ಅಲ್ಪೋಪಹಾರ ಕ್ಕಾಗಿ ವಸತಿ ಗೃಹಕ್ಕೆ ಹೋಗುವೆವು. ಅಲ್ಲಿ ನಮ್ಮ ಕೆಲವು ಗೆಳೆಯರು ಉಪಹಾರಗಳನ್ನು ತಯಾರಿಸುವದರಲ್ಲಿ, ಅದನ್ನು ಸರಿಯಾಗಿ ಹಂಚುವದರಲ್ಲಿ ನಿರತರಾಗಿರುವರು. ಅಲ್ಲಿ ನಾವೆಲ್ಲರೂ ಕೂಡಿ ನಕ್ಕು-ನಲಿದು, ಅಲ್ಪೋಪಹಾರ ಮುಗಿಯಿಸಿ ಸರಿಯಾಗಿ ೮-೩೦ ಘಂಟೆಗೆ ಕೃಷಿ ಕರ್ಮಕ್ಕೆ ಹೋಗುವೆವು. ಅಂದಿನ ಹವೆ-ಭೂಮಿ-ಮಳೆಗಳಿಗನುಗುಣವಾಗಿ ನಮ್ಮ ಚಟುವಟಿಕೆಗಳನ್ನು ನಮ್ಮ ಒಕ್ಕಲತನದ ಮಂತ್ರಿಗಳು ನಿರ್ಣಯಿಸಿ ನಮ್ಮ ನಮ್ಮ ಕಾರ್ಯವಿವರಗಳನ್ನು ತಿಳಿಸುವರು. ನಾವು ೨ನೇ ತಾರೀಖಿನಿಂದ ಹೊಲದಲ್ಲಿ ದುಡಿಯಲಾರಂಭಿಸಿದೆವು. ಪಡಖೂಮಿಯನ್ನೆಲ್ಲ ಅಗಿದು ಹದ ಮಾಡಿ, ಕಸ ತೆಗೆದು, ಗೊಬ್ಬರ ಕೂಡಿಸಿ ಮಡಿಗಳನ್ನು ತಯಾರಿಸುವ ಕೆಲಸವು ಕ್ರಮೇಣ ಸಾಗುತ್ತಲಿದೆ.

ಒಕ್ಕಲತನದ ಕೆಲಸವನ್ನು ಪ್ರತ್ಯಕ್ಷವಾಗಿ ನೆರವೇರಿಸುವಾಗ ಒಕ್ಕಲತನದ ಶಿಕ್ಷಕರು ಆ ವಿಷಯದ ವಿಷಯವಾಗಿ ಉದ್ಭವಿಸುವ ಶಂಕೆಗಳನ್ನು ಚರ್ಚಿಸಿ ಪ್ರಾಸಂಗಿಕವಾಗಿ ಜ್ಞಾನ ನೀಡಲು ಪ್ರಾರಂಭಿಸಿದ್ದಾರೆ. ಹೊಲದಲ್ಲಿ ಹರಗುವದು, ಕಸ ತೆಗೆಯುವದು, ಮಡಿ ಮಾಡುವದು ಇತ್ಯಾದಿ ಕಾರ್ಯ ಮಾಡಿ ಸ್ನಾನಗೃಹಕ್ಕೆ ಹೋಗಿ, ೧೦-೩೦ರ ವರೆಗೆ ತಣ್ಣೀರಿನ ಸ್ನಾನ ಮುಗಿಯಿಸಿ ಅಡಿಗೆಯ ಮನೆಗೆ ಊಟಕ್ಕೆಂದು ಹೋಗುವೆವು. ಅಲ್ಲಿ ನಮಗೆ ನೀಡುವವರು ಅಡಿಗೆಯ ಭಟ್ಟರಲ್ಲ, ಕೂಲಿಯ ಆಳುಗಳಲ್ಲ, ನಮ್ಮವರೇ ಆದ ನಿರ್ದಿಷ್ಟ ಗೆಳೆಯರು. ಊಟ ಮುಗಿಯಿಸಿ ೨-೧೫ರ ವರೆಗೆ ವಿಶ್ರಾಂತಿ ತೆಗೆದುಕೊಳ್ಳುವೆವು. ಸರಿಯಾಗಿ ೨-೩೦ ಘಂಟೆಗೆ ಸೂತ್ರಯಜ್ಞವನ್ನು ಪ್ರಾರಂಭಿಸುವೆವು. ಮನಸ್ಸಿನ ಮಾಲಿನ್ಯವನ್ನೆಲ್ಲ ತೊಳೆದು, ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸಿ, ಗಂಭೀರ ಮೌನದಿಂದ ಸಶಾಸ್ತ್ರೀಯವಾಗಿ ಅರ್ಧ ಗಂಟೆಯ ವರೆಗೆ ನೂಲುವೆವು. ನಂತರ ಮೂರು ಘಂಟೆಯಿಂದ ೫ ಘಂಟೆಯ ವರೆಗೆ ಒಕ್ಕಲುತನದ ಪ್ರಾಯೋಗಿಕ ಚಟುವಟಿಕೆಗಳನ್ನು ಕೈಕೊಳ್ಳುವೆವು. ಸಾಯಂಕಾಲ ಸ್ವಲ್ಪ ಹೊತ್ತು ವಾಯುವಿಹಾರಕ್ಕಾಗಿ ಹೋಗಿ ಪುನಃ ವಸತಿಗೃಹಕ್ಕೆ ಬಂದು ಸಂಜೆಯ ಊಟವನ್ನು ೮-೩೦ ರೊಳಗಾಗಿ ಮುಗಿಯಿಸುವೆವು. ನಂತರ ೧೦ ಘಂಟೆಯ ವರೆಗೆ ವೈಯಕ್ತಿಕ

ವಿನಿಮಯ ಸಂಸ್ಥೆ'' ಎಂದು ಹೇಳಿದರು. ಇಲ್ಲಿ ಅಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿಗಳು ಎಂಬ ಭೇದ-ಭಾವವಿರ ಕೂಡದೆಂದೂ ಹೇಳಿದರು. ಹಾಗೂಶಿಕ್ಷಣದ ಬಗ್ಗೆ ಜನರಲ್ಲಿ ಸಾಕಷ್ಟು ಜಾಗ್ರತಿಯುಂಟಾಗದಿದ್ದುದಕ್ಕೆ ಆ ಕ್ಷೇತ್ರದಲ್ಲಿ ದುಡಿಯುವವರೂ ಕೂಡ ತುಸು ಮಟ್ಟಿಗೆ ಕಾರಣರು, ಹೊರತು ಆ ಶಿಕ್ಷಣದ ಮೂಲತತ್ವಗಳಲ್ಲಿ ಯಾವ ದೋಷ ವಿಲ್ಲವೆಂದು ಪ್ರತಿಪಾದಿಸಿದರು. ಈ ಶಿಕ್ಷಣವು ರಭಸದಿಂದ ಪ್ರಚಾರದಲ್ಲಿ ಬರಬೇಕಾದರೆ ಆಸ್ಥೆ ಅಚಲವಿದ್ದ ಕಾರ್ಯಕರ್ತರ ಅವಶ್ಯಕತೆ ಇದೆ, ಎಂದು ಹೇಳಿದರು. ಈ ಹೊಸ ಶಿಕ್ಷಣದ ಸಂಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯಿಂದ ಬೇರೆ ಬೇರೆ ಖಾತೆಗಳನ್ನು ನಿರ್ಮಿಸಿ ವಿವಿಧ ಮಂತ್ರಿಗಳ ಆಯ್ಕೆ ಮಾಡಿ ಕೊಂಡೆವು. ಮುಖ್ಯಾಧ್ಯಾಪಕರು ಇಡೀ ಸಂಸ್ಥೆಯನ್ನು ವಿದ್ಯಾರ್ಥಿಗಳಿಗೆ ಒಪ್ಪಿಸಿದರು. ಮುಖ್ಯಾಧ್ಯಾಪಕರು ಹಾಗೂ ಉಳಿದ ಅಧ್ಯಾಪಕರು ಕೇವಲ ಮಾರ್ಗದರ್ಶಿಗಳಾಗಿ ಪರಿಣಮಿಸಿದರು, ಅಷ್ಟೇ ಅಲ್ಲ, ಸಾಮಾನ್ಯ ಸದಸ್ಯರಾಗಿ ನಮ್ಮ ವಿವಿಧ ಚಟುವಟಿಕೆಗಳಲ್ಲಿ, ನಮ್ಮ ಕೂಡ ಕೆಲಸಗಳಲ್ಲಿ ತೊಡಗಿ ಕೊಳ್ಳುವದಕ್ಕಾಗಿ ಅಂದಿನಿಂದ ವಸತಿಗೃಹ, ಒಕ್ಕಲುತನ ವರ್ಗದ ಕೊಠಡಿ, ಬಚ್ಚಲ ಮನೆ, ಮೂಲ ಉದ್ಯೋಗಗಳ ಸಾಧನ ಸಾಮಗ್ರಿಗಳನ್ನೆಲ್ಲ ನಮಗೆ ಒಪ್ಪಿಸಿದರು. ನಮ್ಮಲ್ಲಿಯ ಕೆಲವರನ್ನು ಆರೋಗ್ಯಖಾತೆ, ಒಕ್ಕಲತನ ಖಾತೆ, ಸ್ವಚ್ಛತೆ ಖಾತೆ, ಭೋಜನ ಖಾತೆ, ಹಾಗೂ ಇತರ ವಿವಿಧ ಖಾತೆಗಳ ಮಂತ್ರಿಗಳನ್ನಾಗಿ ಆರಿಸಿದ್ದೇವೆ. ನಮ್ಮಲ್ಲಿ ಒಬ್ಬರನ್ನು ಮುಖ್ಯ ಮಂತ್ರಿಯನ್ನಾಗಿ ಆರಿಸಿದ್ದೇವೆ.

ದಿನಾಲು ಮುಂಜಾನೆ ನಾವೆಲ್ಲರೂ ೫-೩೦ ಘಂಟೆಗೆ ಎದ್ದು ವೈಯಕ್ತಿಕ ಸ್ವಚ್ಛತೆ ಮುಗಿಸಿಕೊಂಡು ಪ್ರಾರ್ಥನಾ ಮಂದಿರಕ್ಕೆ ಸರಿಯಾಗಿ ೬-೩೦ ಘಂಟೆಗೆ ಹೋಗುವೆವು. ಪ್ರಾರಂಭದಲ್ಲಿ ಮೌನವನ್ನಾಚರಿಸಿ, ಇಷ್ಟ ದೇವತೆಯ ಮಾನಸ ಪೂಜೆ ಮುಗಿಯಿಸಿ, ಹಿಂದುಸ್ತಾನಿ, ಸಂಸ್ಕೃತ, ಕನ್ನಡ ಹೀಗೆ ಮೂರು ಭಾಷೆಗಳಲ್ಲಿಯ ಪ್ರಾರ್ಥನೆಯ ಗೀತಗಳನ್ನು ಪಠಿಸುವೆವು. ಪ್ರಾರ್ಥನೋತ್ತರ ವೇಳೆಯಲ್ಲಿ ಮುಖ್ಯಾಧ್ಯಾಪಕರಾಗಲಿ ಉಳಿದ ಅಧ್ಯಾಪಕರಾಗಲಿ ಇಲ್ಲವೆ ಬೇರೆ ಬೇರೆ ಖಾತೆಯ ಮಂತ್ರಿಗಳಾಗಲಿ ಅವರಿಗೆ ತೋರಿದ ಕೆಲವು ಸೂಕ್ತ ಸಲಹೆಗಳನ್ನು, ಸುಧಾರಣೆಯ ಮಾರ್ಗಗಳನ್ನು ಹಾಗೂ ದೋಷಗಳನ್ನು ಹಾಗೂ ಅವುಗಳ ನಿವಾರಣೋಪಾಯಗಳನ್ನು ಸೂಚಿಸುವರು. ಪ್ರಾರ್ಥನೆಯ ನಂತರ ಸಾಮೂಹಿಕ ಸ್ವಚ್ಛತೆಯ ಕೆಲಸವನ್ನು ಪ್ರಾರಂಭಿಸುವೆವು. ವಸತಿಗೃಹ, ಬಚ್ಚಲ ಮನೆ, ವರ್ಗದ ಸ್ವಚ್ಛತೆ, ಸುತ್ತ ಮುತ್ತಲಿನ ಅಂಗಳು, ಓಣಿಗಳ ಸ್ವಚ್ಛತೆಯು ಸಾಮೂಹಿಕ ಸ್ವಚ್ಛತೆಯಲ್ಲಿ ಬರುವವು. ಮುಕ್ಕಾಲು ಘಂಟೆಯ ವರೆಗೆ ಈ ಕಾರ್ಯವನ್ನು ಒಳ್ಳೇ ಹುಮ್ಮಸದಿಂದ ಮಾಡಿ ಅಲ್ಪೋಪಹಾರ ಕ್ಕಾಗಿ ವಸತಿ ಗೃಹಕ್ಕೆ ಹೋಗುವೆವು. ಅಲ್ಲಿ ನಮ್ಮ ಕೆಲವು ಗೆಳೆಯರು ಉಪಹಾರಗಳನ್ನು ತಯಾರಿಸುವದರಲ್ಲಿ, ಅದನ್ನು ಸರಿಯಾಗಿ ಹಂಚುವದರಲ್ಲಿ ನಿರತರಾಗಿರುವರು. ಅಲ್ಲಿ ನಾವೆಲ್ಲರೂ ಕೂಡಿ ನಕ್ಕು-ನಲಿದು, ಅಲ್ಪೋಪಹಾರ ಮುಗಿಯಿಸಿ ಸರಿಯಾಗಿ ೮-೩೦ ಘಂಟೆಗೆ ಕೃಷಿ ಕರ್ಮಕ್ಕೆ ಹೋಗುವೆವು. ಅಂದಿನ ಹವೆ-ಭೂಮಿ-ಮಳೆಗಳಿಗನುಗುಣವಾಗಿ ನಮ್ಮ ಚಟುವಟಿಕೆಗಳನ್ನು ನಮ್ಮ ಒಕ್ಕಲತನದ ಮಂತ್ರಿಗಳು ನಿರ್ಣಯಿಸಿ ನಮ್ಮ ನಮ್ಮ ಕಾರ್ಯವಿವರಗಳನ್ನು ತಿಳಿಸುವರು. ನಾವು ೨ನೇ ತಾರೀಖಿನಿಂದ ಹೊಲದಲ್ಲಿ ದುಡಿಯಲಾರಂಭಿಸಿದೆವು. ಪಡಭೂಮಿಯನ್ನೆಲ್ಲ ಅಗಿದು ಹದ ಮಾಡಿ, ಕಸ ತೆಗೆದು, ಗೊಬ್ಬರ ಕೂಡಿಸಿ ಮಡಿಗಳನ್ನು ತಯಾರಿಸುವ ಕೆಲಸವು ಕ್ರಮೇಣ ಸಾಗುತ್ತಲಿದೆ.

ಒಕ್ಕಲತನದ ಕೆಲಸವನ್ನು ಪ್ರತ್ಯಕ್ಷವಾಗಿ ನೆರವೇರಿಸುವಾಗ ಒಕ್ಕಲತನದ ಶಿಕ್ಷಕರು ಆ ವಿಷಯದ ವಿಷಯವಾಗಿ ಉದ್ಭವಿಸುವ ಶಂಕೆಗಳನ್ನು ಚರ್ಚಿಸಿ ಪ್ರಾಸಂಗಿಕವಾಗಿ ಜ್ಞಾನ ನೀಡಲು ಪ್ರಾರಂಭಿಸಿದ್ದಾರೆ. ಹೊಲದಲ್ಲಿ ಹರಗುವದು, ಕಸ ತೆಗೆಯುವದು, ಮಡಿ ಮಾಡುವದು ಇತ್ಯಾದಿ ಕಾರ್ಯ ಮಾಡಿ ಸ್ನಾನಗೃಹಕ್ಕೆ ಹೋಗಿ, ೧೦-೩೦ರ ವರೆಗೆ ತಣ್ಣೀರಿನ ಸ್ನಾನ ಮುಗಿಯಿಸಿ ಅಡಿಗೆಯ ಮನೆಗೆ ಊಟಕ್ಕೆಂದು ಹೋಗುವೆವು. ಅಲ್ಲಿ ನಮಗೆ ನೀಡುವವರು ಅಡಿಗೆಯ ಭಟ್ಟರಲ್ಲ, ಕೂಲಿಯ ಆಳುಗಳಲ್ಲ, ನಮ್ಮವರೇ ಆದ ನಿರ್ದಿಷ್ಟ ಗೆಳೆಯರು. ಊಟ ಮುಗಿಯಿಸಿ ೨-೧೫ರ ವರೆಗೆ ವಿಶ್ರಾಂತಿ ತೆಗೆದುಕೊಳ್ಳುವೆವು. ಸರಿಯಾಗಿ ೨-೩೦ ಘಂಟೆಗೆ ಸೂತ್ರಯಜ್ಞವನ್ನು ಪ್ರಾರಂಭಿಸುವೆವು. ಮನಸ್ಸಿನ ಮಾಲಿನ್ಯವನ್ನೆಲ್ಲ ತೊಳೆದು, ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸಿ, ಗಂಭೀರ ಮೌನದಿಂದ ಸಶಾಸ್ತ್ರೀಯವಾಗಿ ಅರ್ಧ ಗಂಟೆಯ ವರೆಗೆ ನೂಲುವೆವು. ನಂತರ ಮೂರು ಘಂಟೆಯಿಂದ ೫ ಘಂಟೆಯ ವರೆಗೆ ಒಕ್ಕಲುತನದ ಪ್ರಾಯೋಗಿಕ ಚಟುವಟಿಕೆಗಳನ್ನು ಕೈಕೊಳ್ಳುವೆವು. ಸಾಯಂಕಾಲ ಸ್ವಲ್ಪ ಹೊತ್ತು ವಾಯುವಿಹಾರಕ್ಕಾಗಿ ಹೋಗಿ ಪುನಃ ವಸತಿಗೃಹಕ್ಕೆ ಬಂದು ಸಂಜೆಯ ಊಟವನ್ನು ೮-೩೦ ರೊಳಗಾಗಿ ಮುಗಿಯಿಸುವೆವು. ನಂತರ ೧೦ ಘಂಟೆಯ ವರೆಗೆ ವೈಯಕ್ತಿಕ

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಈ ಸಂಸ್ಥೆಯು ಮೂಲ ಶಿಕ್ಷಣ (Basic Education)ದ ತ್ವಗಳಲ್ಲಿಯ ಕೆಲವೊಂದನ್ನು ಆಚರಣೆಯಲ್ಲಿ ತರಲೋಸುಗ ಳೆದ ವರ್ಷವೇ ತನ್ನ ಪ್ರಥಮ ಹೆಜ್ಜೆಯನ್ನಿಟ್ಟಿತು. ತತ್ಪರಿ ಣಮವಾಗಿ ಕಾಲೇಜದ ನಿತ್ಯ ಶಿಕ್ಷಣಕ್ರಮದಲ್ಲಿ, ಪಠ್ಯೇತರ-ಟುವಟಿಕೆಗಳಲ್ಲಿ ಹಾಗು ವಸತಿಗೃಹದಲ್ಲಿದ್ದ ಶಿಕ್ಷಕ-ವಿದ್ಯಾ ರ್ಥಿಗಳ ಜೀವನಕ್ರಮದಲ್ಲಿ ಒಂದು ಹೊಸ ಗಾಳಿ ಬೀಸಿ ಂತಾಗಿ ನವಚೈತನ್ಯವು ತಲೆದೋರಲಾರಂಭಿಸಿತು. ಮೂಲ ಕ್ಷಣದ ಕೆಲವು ಮುಖ್ಯಾಂಗಗಳಾದ ಸ್ವಾವಲಂಬನ, ಚ್ಛತೆ, ಸಾಮೂಹಿಕ ಜೀವನ ಮತ್ತು ಗ್ರಾಮೋದ್ಧಾರ ಮೊದಲಾದವುಗಳ ತತ್ವಗಳನ್ನು ತಿಳಿಸಲಾಯಿತಲ್ಲದೆ, ಅವೆಲ್ಲ ನ್ನು ಆಚರಣೆಯಲ್ಲಿ ತರಲು ಆನುವು ದೊರೆಕಿಸಿ ಕೊಡ ಲಾಯಿತು. ಅಧ್ಯಾಪಕರೂ, ಶಿಕ್ಷಕ - ವಿದ್ಯಾರ್ಥಿಗಳೂ ಸ್ವಯಂ-ಸ್ಫೂರ್ತಿಯಿಂದ ಮುಂದೆ ಬಂದರಲ್ಲದೆ, ಒಳ್ಳೆ ಉತ್ಸಾಹಭರಿತರಾಗಿ ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಿ ದರಿಷ್ಠ ಸರಕಾರಿ ಅಧಿಕಾರಿಗಳ ಹಾಗೂ ಜನಸಾಮಾನ್ಯರ ಮೆಚ್ಚಣೆಯನ್ನು ಸಂಪಾದಿಸಿದರು.

ಈ ವರ್ಷವಂತೂ, ಕಳೆದ ವರ್ಷ ಬೆಳಗಾಂವಿಯಲ್ಲಿ ರ್ಪಡಿಸಿದ್ದ ಪದವೀಧರರ ಮೂಲ-ಶಿಕ್ಷಣ ತರಬೇತಿ ಕೇಂದ್ರದಲ್ಲಿ ಉಚ್ಚ ತರಗತಿಯಲ್ಲಿ ಪಾಸಾಗಿ ಹೊರಬಿದ್ದ ಎಲ್ಲ ಜನ ಅಧ್ಯಾಪಕರು ಈ ಸಂಸ್ಥೆಗೆ ದೊರೆತಿರುವರು. ಹೆಚ್ಚು ಅಧಿಕವಾಗಿ ಆ ಕೇಂದ್ರವು (Graduates' B. T. ಸಂ) ಈ ಸಂಸ್ಥೆಯ ಆವಾರದಲ್ಲಿಯೆ ಬಂದು ನೆಲಸಿರುವದು. ಸಂಸ್ಥೆಯ ಪ್ರಿನ್ಸಿಪಾಲರ ಉಪಯುಕ್ತ ಸಲಹೆ-ಸೂಚನೆ ಳು ಧಾರಾಳವಾಗಿ ಲಭಿಸುತ್ತಿರುವವಲ್ಲದೆ, ವಿಶ್ವವಿದ್ಯಾನಿಲ ಯದ ಬಿ. ಟಿ. ಪದವೀಧರರು ನಿತ್ಯವೂ ಪ್ರತ್ಯಕ್ಷ ಕಾರ್ಯ ಕ್ಕೆ ತೊಡಗಿರುವದೂ ಅನಾಯಾಸವಾಗಿ ಈ ಸಂಸ್ಥೆಯ ಆಚಾರ್ಯಾಲಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಜಾಕರರಿಗೂ ಅತ್ಯಾನುಭವದ ಸಂಗತಿಯಾಗಿದೆ. ಅಂದಮೇಲೆ, ಕೇಳು ವೇನು? ಕಳೆದವರ್ಷವೇ ಸ್ಫೂರ್ತಿಗೊಂಡಿದ್ದ ಈ ಸಂಸ್ಥೆಯ ವಿದ್ಯಾರ್ಥಿಗಳಿಗೆ ಈ ಸಲ ಮತ್ತೂ ಹೆಚ್ಚು ಸ್ಫೂರ್ತಿಯುಂಟಾಗಿರುವದರಲ್ಲಿ ಆಶ್ಚರ್ಯವೇನು? ಪ್ರತಿ ನಿತ್ಯ ಬೆಳಗಿನ ೫ ಗಂಟೆಯಿಂದಲೆ, ಕಾಲೇಜ ವಸತಿ ಗೃಹದ ಯ ವಿದ್ಯಾರ್ಥಿಗಳು ಹಾಸಿಗೆಯಿಂದೆದ್ದು ಹೊರಬೀಳುವರು. ಪ್ರಚಕ ಗಂಟೆಯಾಗುವದೊಂದೇ ತಡ. ೫-೦ ರಿಂದ ೬-೦ ಗಂಟೆಯ ವರೆಗೆ ತಮ್ಮ ತಮ್ಮ ಪ್ರಾತರ್ವಿಧಿಗಳನ್ನು ಮುಗಿಸಿ ಯುಕ್ತಿಕ ಕೋಣೆಗಳ ಸ್ವಚ್ಛತೆಯ ಕಾರ್ಯವನ್ನು ಕೊನೆ ಗಾಣಿಸಿ, ೬-೦ ಗಂಟೆಗೆ ಸರಿಯಾಗಿ ಸಾಮೂಹಿಕ ಪ್ರಾರ್ಥನೆಯ ಸಲುವಾಗಿ ಕಾಲೇಜದ ಜನರಲ್ ಹಾಲದಲ್ಲಿ ನೆರೆಯುವರು. ಈ ಪ್ರಾರ್ಥನೆಗೆ, ಶಿಕ್ಷಕ ವಿದ್ಯಾರ್ಥಿಗಳಷ್ಟೇ ಅಲ್ಲ, ವಸತಿ ಗೃಹದ ಚಾಕರ ವರ್ಗವೆಲ್ಲವೂ ಹಾಜರಿರುವದು. ವಿಶಿಷ್ಟಾ ರ್ಹತೆಯ (B. T. C.) ಅಧ್ಯಾಪಕರಲ್ಲಿಯ ಒಬ್ಬಿಬ್ಬರೂ ಹಾಜರಿರುವರು. ಪ್ರಿನ್ಸಿಪಾಲರೇ ಮೊದಲಿಗರಾಗಿ ಪ್ರಾತಃ ಕಾಲದ ಪ್ರಾರ್ಥನೆಯನ್ನು ಪ್ರಾರಂಭಿಸುವರು. ೧೫ನಿಮಿಷ ಗಳವರೆಗೆ ಪ್ರಾರ್ಥನೆಯು ಅನನ್ಯ ಭಾವದಿಂದಲೂ, ಭಕ್ತಿ ವಿಶ್ವಾಸಗಳಿಂದ ಯುಕ್ತವಾಗಿಯೂ ಇಂಪಾಗಿ, ಸೊಂಪಾಗಿ ಶಿಸ್ತಿನಿಂದ, ಸಾಗಿದಬಳಿಕ, ಸರತಿಯಂತೆ ಅಲ್ಲಿಂದಲೇ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ತಮ್ಮ ಭೋಜನಾಲಯ (Club) ವಿಗಳಿಗೆ ಹೋಗಿ ನಿತ್ಯದ ಕಾಳು ಹಸನ ಮಾಡುವ, ಪಲ್ಯೆ ಯನ್ನು ಆರಿಸಿ ಹೆಚ್ಚಿ ಕೊಡುವ ಮತ್ತು ಕಸಗೂಡಿಸುವ ('ಸಫಾಯಿ') ಕಾರ್ಯೋದ್ಯುಕ್ತರಾಗುವರು. ಕೊನೆ ಯಲ್ಲಿ ತಮ್ಮ ಸ್ನಾನ, ಅಲ್ಪೋಪಹಾರಗಳನ್ನು ತೀರಿಸಿ ೮-೦ ಗಂಟೆಗೆ ಸರಿಯಾಗಿ ಕಾಲೇಜದಲ್ಲಿ ನಿತ್ಯವೂ ಪ್ರಾರಂಭವಾ-ಗುವ ಶಿಕ್ಷಣ ಚಟುವಟಿಕೆಗಳಿಗೆ ಹಾಜರರಿರುವರು. ಕಾಲೇ ಜದಲ್ಲಿಯ ನಿತ್ಯ ಕಾರ್ಯಕ್ರಮವಾದರೂ ಸಾಮೂಹಿಕ ಪ್ರಾರ್ಥನೆಯಿಂದಲೆ ಆರಂಭವಾಗುವದು. ಪಠ್ಯೇತರ ಚಟು ವಟಿಕೆಗಳು, ಸ್ವಚ್ಛತೆಯ ಕಾರ್ಯ, ಸಾಂಘಿಕ ಜೀವನ, ಸಮಾಜಸೇವೆ ಮೊದಲಾದವುಗಳು ಈ ಸಲ ಮೊದಲಿಗಿಂತ ಅತ್ಯಧಿಕ ಉತ್ಸಾಹದಿಂದಲೂ ನಡೆಯುವವೆಂಬುದರಲ್ಲಿ ತಿಲ ಮಾತ್ರವೂ ಸಂಶಯವಿಲ್ಲ. ಬಿ. ಟಿ. ಸಿ., ಗ್ರ್ಯಾಜುಯೇಟ ಬಿ. ಟಿ.ಸಿ. ಸಂಸ್ಥೆಗಳಲ್ಲಿಯೂ ಪ್ರಾತಃಕಾಲದ ಪ್ರಾರ್ಥನೆ ಯಿಂದಲೇ ನಿತ್ಯ ಕಾರ್ಯಕ್ರಮಗಳು ನಡೆದಿರುವವು. ಎಲ್ಲೆ ಲ್ಲಿಯೂ ಹೊಸ ಉತ್ಸಾಹ, ಎಲ್ಲೆಲ್ಲಿಯೂ ಹೊಸ ನೇತ್ರಾನಂದ ಕರ್ಣಾನಂದಗಳು ಬೆಳಗಿನ ೫—೦ ಗಂಟೆಯಿಂದಲೆ ಅನುಭ ವಕ್ಕೆ ಬರುತ್ತಿರುವವು. ಬೆಳಗಿನ ೫ ಗಂಟೆಯಿಂದಲೇ, ಗಂಟೆಯ ನಿನಾದವು ಕರ್ಣ ಪಟಲದಮೇಲೆ ಬೀಳಹತ್ತು ವದು. ರಾತ್ರಿ ೯—೦ ಗಂಟೆಗೆ ಕಡೆಯ ಗಂಟೆಯಾಗು ವದು. ಈ ನೂತನ ಪದ್ಧತಿಯು ಶಿಕ್ಷಣಕ್ಕೆ ಜಯವಾಗಲಿ.

[೨೬ನೇ ಪುಟದಿಂದ ಬಂದದ್ದು]

ಅಭ್ಯಾಸ, ವರ್ತಮಾನಪತ್ರಗಳನ್ನು ಓದುವದು, ದಿನಚರಿ ಯನ್ನು ಬರೆಯುವದು, ಚರ್ಚೆಗಳನ್ನು ಮಾಡುವದು, ಹರಟೆ ಹೊಡೆಯುವದು ಇತ್ಯಾದಿಗಳು ನಡೆಯುವವು. ಒಂದು ವಾರದ ವಿವಿಧ ಕಾರ್ಯಕ್ರಮಗಳ ವರದಿಯನ್ನು ಇಂತು ಮುಗಿಸಿದ ಹಾಗಾಯಿತು.

ಬಾನುಲಿಯ ಮೂಲಕ ಮಕ್ಕಳ ಶಿಕ್ಷಣ

ಲೇಖಿಕೆಯರು: ಶ್ರೀ. ರಾಜಕುಮಾರಿ ಅಮೃತಕೌರ
(ಹಿಂದುಸ್ತಾನ ಸರಕಾರದ ಆರೋಗ್ಯವಿಭಾಗದ ಮಂತ್ರಿಣಿ)

ಸಾಲೆಗಳ ಮಕ್ಕಳ ಶಿಕ್ಷಣಕ್ಕಾಗಿ ಬಾನುಲಿಯ (ರೇಡಿಯೋದ) ಉಪಯೋಗವಾಗುತ್ತಿರುವುದೆಂಬುದನ್ನು ಕೇಳಿ ನನಗೆ ಸಂತೋಷವಾಯಿತು. ವಿಶಿಷ್ಟ ಅಥವಾ ಸಾಧಾರಣ ಜ್ಞಾನಪ್ರಸಾರಕ್ಕಾಗಿ ಬಾನುಲಿ ಮತ್ತು ಚಲಚ್ಚಿತ್ರಪಟ (ಫಿಲ್ಮ್)ಗಳಂಥ ಆಧುನಿಕ ಶೋಧಗಳಿಂದ ನಾವು ಸಂಪೂರ್ಣವಾಗಿ ಲಾಭವನ್ನು ಪಡೆಯಬೇಕು.

ಆವಶ್ಯಕ ಜ್ಞಾನ:

ಇಡಿ ದೇಶದ ಬಾಲಕರು ನನ್ನ ಈ ಬಾನುಲಿ ಭಾಷಣವನ್ನು ಕೇಳುತ್ತಿರಬಹುದೆಂದು ನನ್ನ ನಂಬಿಗೆ. ಅವರಿಗೆ ನನ್ನದೊಂದು ಸಂದೇಶವಿದೆ. ಅದೇನಂದರೆ, ಅವರು ಸಾಲೆಗಳಲ್ಲಿ ಓದುತ್ತಿರುವಾಗ ಜ್ಞಾನವರ್ಧನೆಯ ಪ್ರತಿಯೊಂದು ಸಂಧಿಯಿಂದ ಲಾಭವನ್ನು ಪಡೆದುಕೊಳ್ಳತಕ್ಕದ್ದು. ದಿನಾಲು ಎಷ್ಟೋ ಮನೋರಂಜಕ ಸಂಗತಿಗಳು ಜರಗುತ್ತಿರುತ್ತವೆ. ನಮ್ಮ ದೇಶದಲ್ಲಷ್ಟೇ ಅಲ್ಲ, ಇಡಿ ವಿಶ್ವದಲ್ಲಿ. ಅವುಗಳ ಬಗ್ಗೆ ನಾವು ಜ್ಞಾನವನ್ನು ಪಡೆದುಕೊಳ್ಳಬೇಕು, ಜ್ಞಾನ ಪಡೆಯುವುದಕ್ಕಾಗಿ ಕುತೂಹಲವಿರಬೇಕು. ಬೇರೆ ದೇಶಗಳಲ್ಲಿ ತಮ್ಮ ವಯಸ್ಸಿನ ಹುಡುಗರೂ ಹುಡುಗಿಯರೂ ಏನು ಮಾಡುತ್ತಿದ್ದಾರೆಂಬುದೂ ಗೊತ್ತಿರಬೇಕಲ್ಲದೆ ಆಯಾ ದೇಶಗಳ ಬಗ್ಗೆ ಜ್ಞಾನವೂ ಇರಬೇಕು. ತಮ್ಮ ದೊಡ್ಡ ದೇಶದ ಬೇರೆ ಬೇರೆ ಭಾಗಗಳ ಮತ್ತು ಅಲ್ಲಿಯ ಬೇರೆ ಬೇರೆ ತರದ ನಡತೆ-ನಡಾವಳಿಗಳ ಸಂಬಂಧವಾಗಿ ಜ್ಞಾನವನ್ನು ದೊರಕಿಸಿಕೊಳ್ಳಬೇಕೆಂಬ ಬಗ್ಗೆ ಉತ್ಸುಕತೆಯೂ ಅವರಲ್ಲಿರಬೇಕು. ಅವರಿಗೆ ಭಾರತದ ಹಾಗೂ ವಿದೇಶಗಳ ವೀರ-ವೀರಾಂಗನೆಯರ ಕತೆಗಳನ್ನು ಆಲಿಸುವ ಹಾಸು ಇರಬೇಕು. ಏಕೆಂದರೆ ಅವರಂತೆಯೆ ತಮ್ಮ ಜೀವನವನ್ನು ಮಾರ್ಪಡಿಸಿಕೊಳ್ಳಲು ಅನುಕೂಲವಾಗುವುದು. ಇದರ ಹೊರತಾಗಿ ತಮ್ಮ ದೇಶದ ಮುಖಂಡರು ಭಾರತಕ್ಕೆ ಸ್ವಾತಂತ್ರ್ಯವನ್ನು ಹೇಗೆ ಸಂಪಾದಿಸಿದರು, ಭಾರತವನ್ನು ಒಂದಾನೊಂದು ಕಾಲಕ್ಕೆ ಇದ್ದಷ್ಟು ದೊಡ್ಡ ದೇಶವನ್ನಾಗಿ ಮಾಡಲು ಏನು ಮಾಡುತ್ತಿದ್ದಾರೆ ಎಂಬುದರ ಪೂರ್ಣ ಪರಿಚಯವೂ ಅವರಿಗಿರಬೇಕು.

ಭಾರತೀಯ ಬಾನುಲಿಯ ಉದ್ದೇಶ:

ನಿಮಗಾಗಿ ಇಂಥ ವ್ಯವಸ್ಥೆಯನ್ನು ಮಾಡುವುದೇ ಭಾರತೀಯ ಬಾನುಲಿಯ ಉದ್ದೇಶವಾಗಿದೆಯೆಂದು ನನ್ನ ವಿಶ್ವಾಸ. ಎಷ್ಟೋ ಸಂಗತಿಗಳ ಮತ್ತು ಎಷ್ಟೋ ವಿಷಯಗಳ ಉಲ್ಲೇಖ ನಿಮ್ಮ ಪಠ್ಯಪುಸ್ತಕಗಳಲ್ಲಿ ಇರುವುದಿಲ್ಲ ಆದರೆ ನಿಮಗೆ ಅವುಗಳನ್ನು ನಿಮ್ಮ ಪಯಾಳು ಮಿತ್ರರು ಬಾನುಲಿಯ ಮುಖಾಂತರ ಹೇಳಬಲ್ಲರು. ಆದ್ದರಿಂದ ಬಾನುಲಿಯನ್ನು ನೀವು ನಿಮ್ಮ ಮಿತ್ರನನ್ನಾಗಿ ಮಾಡಿಕೊಳ್ಳಬೇಕು ಮತ್ತು ಬಾನುಲಿಯನ್ನು ಹಚ್ಚುವ ಅವಧಿಯನ್ನು ನೀವು ಸ್ವಾಗತಿಸಿ, ಬಾನುಲಿಯ ಮುಖಾಂತರ ನಿಮಗೆ ದೊರೆಯುವ ಶಿಕ್ಷಣವನ್ನು ಗ್ರಹಿಸಬೇಕು.

---

* ಅಖಿಲ ಭಾರತೀಯ ರೇಡಿಯೋ ಸ್ಟೇಶನದಿಂದ ಮಕ್ಕಳ ಬಗ್ಗೆ ಬಾನುಲಿಯ ಕಾರ್ಯಕ್ರಮದ ಯೋಜನೆಯನ್ನು ಉದ್ಘಾಟಿಸುವಾಗ ಮಾಡಿದ ಭಾಷಣವಿದು.

ವಿದ್ಯುತ್ತಿನ ವ್ಯವಸ್ಥೆಯಿದ್ದಲ್ಲಿಯೆ ಬಾನುಲಿಯ ಯಂತ್ರವನ್ನು ಉಪಯೋಗಿಸಲು ಸಾಧ್ಯವೆಂಬ ಮಾತನ್ನು ನೀವು ಅರಿತಿರಬಹುದು. ಕೇವಲ ಕೆಲವು ವಿದ್ಯುತ್ತಿನ ವ್ಯವಸ್ಥೆಯಿರುವ ಪಟ್ಟಣಗಳಲ್ಲಿ ಇದರ ವ್ಯವಸ್ಥೆ ಸಾಧ್ಯ ಎಂದು ಇದರ ಅರ್ಥವಾಯಿತು. ಆದರೆ ಬಾನುಲಿಯ ಯಂತ್ರವನ್ನು ಬ್ಯಾಟರಿಯಿಂದಲೂ ನಡೆಸಬಹುದು.

ನಮ್ಮ ದೇಶ ಬಹಳ ದೊಡ್ಡದು. ಆದ್ದರಿಂದ ಪ್ರತಿಯೊಬ್ಬ ಹುಡುಗನೂ ಹುಡುಗಿಯೂ ಬಾನುಲಿಯನ್ನಾಲಿಸುವಂತಾಗಬೇಕಾದರೆ ನಮಗೆ ಸಾವಿರಾರು, ಲಕ್ಷಾಂತರ ಬಾನುಲಿಯ ಯಂತ್ರಗಳು ಬೇಕಾಗುವುವು. ಸರಕಾರವು ಸಾಧ್ಯವಿದ್ದಷ್ಟು ಹೆಚ್ಚು ಬಾನುಲಿ ಯಂತ್ರಗಳನ್ನು ಕೊಳ್ಳುವ ವ್ಯವಸ್ಥೆಮಾಡಲು ಪ್ರಯತ್ನಿಸುವುದು. ಇದರೊಡನೆ ಇನ್ನೊಂದು ಸಂಗತಿಯೇನಂದರೆ, ನಮ್ಮ ದೇಶವು ಬಡದೇಶವೂ ಆಗಿದೆ. ನಮ್ಮ ದೇಶದಲ್ಲಿ ಪಟ್ಟಣಗಳಿಗಿಂತ ಹಳ್ಳಿಗಳೇ ಹೆಚ್ಚು ಇವೆ. ಇವೇ ಹಳ್ಳಿಗಳಲ್ಲಿ ನಮ್ಮ ಹೆಚ್ಚು ಜನ ಮಕ್ಕಳು ಇರುತ್ತಾರೆ. ಪಟ್ಟಣಗಳಲ್ಲಿರುವ ನಿಮ್ಮಂಥ ಮಕ್ಕಳಿಗೆ ದೊರೆಯುವಷ್ಟು ಈ ಬಗೆಯ ಅನುಕೂಲತೆಗಳು ಅವರಿಗೆ ಸಿಕ್ಕುವುದಿಲ್ಲ, ಅವರಿಗೆ ಹೆಚ್ಚು ಸಾಲೆಗಳೂ ಇರುವುದಿಲ್ಲ.

ಆದ್ದರಿಂದ ನೀವು ನಿಮ್ಮ ಸಮಯ ಮತ್ತು ಪ್ರತಿಭೆಯ ಉಪಭೋಗವನ್ನು ಬುದ್ಧಿವಂತಿಕೆಯಿಂದ ಮಾಡಿಕೊಳ್ಳುವಿರೆಂದೂ ಸಾಲೆಗಳಲ್ಲಿ ನಿಮ್ಮ ಅಧ್ಯಯನವು ಮುಗಿದ ನಂತರ ಹಳ್ಳಿಗಳಿಗೆ ಹೋಗಿ ಅಲ್ಲಿಯ ಬಾಲಕರಿಗೆ ನೀವು ಬಾನುಲಿಯ ಮುಖಾಂತರ ಮತ್ತು ಇತರ ಸಾಧನಗಳ ಮುಖಾಂತರ ಹಾಗೂ ನೀವಾಗಿಯೆ ಕಲಿತ ಎಲ್ಲ ವಿಷಯಗಳನ್ನು ಕೇಳುವಿರೆಂದು ನನ್ನ ಆಸೆ.

ಅಧ್ಯಾಪಕರ ಕರ್ತವ್ಯ :

ಬಾನುಲಿಯ ಭಾಷಣ ಮುಂತಾದವುಗಳಿಂದ ನಿಮಗೆ ನಿಮ್ಮ ವಿದ್ಯಾರ್ಥಿಗಳ ಜ್ಞಾನವರ್ಧನೆಯ ಕ್ಷೇತ್ರವನ್ನು ವಿಸ್ತೃತಗೊಳಿಸಲು ದೊಡ್ಡ ಅನುಕೂಲತೆಯು ದೊರೆಯುತ್ತದೆ; ಮಕ್ಕಳ ಸಾಮಾನ್ಯ ಜ್ಞಾನವನ್ನು ಬೆಳೆಯಿಸಲು ಬಾನುಲಿ ಹಾಗೂ ಚಲಚ್ಚಿತ್ರಗಳಿಂದ ಹೆಚ್ಚು ಸಹಾಯವೂ ದೊರೆಯುತ್ತದೆ; ಮೇಲಾಗಿ ಬಾನುಲಿ ಮತ್ತು ವೈಮಾನಿಕ ವ್ಯವಹಾರದಿಂದ ಜಗತ್ತು ಬಹಳ ಚಿಕ್ಕದಾಗಿದೆಯಾದ್ದರಿಂದ ಸಾಮಾನ್ಯ ಜ್ಞಾನವು ಇನ್ನೂ ಹೆಚ್ಚು ಅಗತ್ಯವಾಗಿದೆ. ನಾವು ಮತ್ತು ನಮ್ಮ ಮಕ್ಕಳು ಸ್ವಾತಂತ್ರ್ಯದ ಉಪಭೋಗದ ನಿಜವಾದ ರೀತಿಯನ್ನು ಅರಿಯದೆ ಹೋದರೆ, ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಮಹತ್ವವೇ ಇಲ್ಲವೆಂದು ನಾನು ತಮ್ಮಲ್ಲಿ ನಿವೇದಿಸುವೆ.

ವಿಶ್ವಾಸ ಮತ್ತು ಕಲ್ಪನಾ ಶಕ್ತಿಯ ಅಭಾವದಿಂದಲೇ ಈ ದೇಶದಲ್ಲಿ ಸಂಕುಚಿತ ಸಾಂಪ್ರದಾಯಿಕ ಮನೋವೃತ್ತಿಗಳಿಗೆ ಪ್ರೋತ್ಸಾಹನವು ಸಿಗುತ್ತದೆಂದೂ ಅವುಗಳ ಪರಿಣಾಮವಾಗಿ ಇಂದು ನಮ್ಮ ದೇಶದಲ್ಲಿ ನಾಶವು ಹೀನ ರೀತಿಯಲ್ಲಿ ಆಗುತ್ತಿದೆಯೆಂದು ನನ್ನ ನಂಬಿಕೆ. ವಿಶ್ವಾಸ ಮತ್ತು ಕಲ್ಪನಾಶಕ್ತಿಯ ಅಭಾವಕ್ಕೆ ಕಾರಣ, ಬಹ್ವಂಶದಲ್ಲಿ, ನಮ್ಮ ದೋಷಯುಕ್ತ ಶಿಕ್ಷಣ ಅಥವಾ ಅದರ ಅತ್ಯಂತ ಅಭಾವವೇ ಆಗಿದೆ. ಆದ್ದರಿಂದ ನಮ್ಮ ಈ ಅಭಾವವನ್ನು ಹೋಗಲಾಡಿಸಲು ನಾವು ಪ್ರತಿಯೊಂದು ತರದ ಪ್ರಯತ್ನವನ್ನು ಮಾಡಬೇಕು. ಮತ್ತು ಈ ಕಾರ್ಯಕ್ಕೆ ಬಾನುಲಿಯು ಅತ್ಯಂತ ಬಲಶಾಲಿಯಾದ ಸಾಧನವಾಗಿದೆ.

ನಮ್ಮ ಶಿಕ್ಷಣ ವಿಭಾಗವು ಮಕ್ಕಳ ಸಲುವಾಗಿ ಶಾಲೆಗಳ ಬಾನುಲಿ ಕಾರ್ಯಕ್ರಮದ ಬಗ್ಗೆ ಸುವಿಚಾರಮಾಡಿ ಒಂದು ಯೋಜನೆಯನ್ನು ಮಾಡತಕ್ಕದ್ದು. ಹೀಗೆ ಯೋಜನೆಯನ್ನು ಮಾಡಿದರೆ ಅದರಿಂದ ಅಧ್ಯಾಪಕರಿಗೂ ಸಹಾಯವಾಗುವದಲ್ಲದೆ ಮಕ್ಕಳ ಜ್ಞಾನವೂ ಬೆಳೆಯುವುದು. ಯಾವ ರೀತಿಯಲ್ಲಿ ನಾವು ನಮ್ಮ ಸಮಾಜದ ನಿರ್ಮಾಣವನ್ನು ಮಾಡಬಯಸುತ್ತೇವೆಯೊ ಆ ರೀತಿಯಲ್ಲಿ ನಾವು ವಿವೇಕದಿಂದ ಕಾರ್ಯ ಮಾಡಬೇಕಾಗುವುದು. ಇಂದಿನ ಬಾಲಕರು ಭವಿಷ್ಯತ್ಕಾಲದ ನಮ್ಮ ಸಮಾಜದ ಆಧಾರಸ್ತಂಭರಾಗುವರು. ಅಧ್ಯಾಪನವು ಕೇವಲ ಧಂಧೆಯಾಗಿರುವುದಿಲ್ಲ, ಆದರೆ ಒಂದು ಪವಿತ್ರ ಕರ್ತವ್ಯವಾಗಿದೆ. ಬಾನುಲಿಯಿಂದ ಅಧ್ಯಾಪಕನಿಗೆ ಪ್ರೇರಣೆಯು ದೊರೆಯುವುದಲ್ಲದೆ ಬಾಲಕನನ್ನೂ ಅದು ಆಕರ್ಷಿಸುತ್ತದೆ.

ಬಾನುಲಿಯ ಕಾರ್ಯಕ್ರಮಗಳು :

ಬಾನುಲಿಯ ಈ ಕಾರ್ಯಕ್ರಮಗಳು ಶಾಲೆಗಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ನಮ್ಮ ಸಂಸ್ಕೃತಿಯ ಸರ್ವೋತ್ತಮ ಸ್ವರೂಪವನ್ನು ಹೃದಯಂಗಮ ಮಾಡಿಕೊಳ್ಳಲು ನೆರವಾಗುವುವೆಂದೂ ಅವರಿಗೆ ಮಾನವ ಸಮಾಜದ ಐಕ್ಯದ ನಮ್ಮ ಈ ಚಿಕ್ಕ ಜಗತ್ತಿನಲ್ಲಿರುವ ಎಲ್ಲ ಜನರೊಡನೆ ಪ್ರೇಮದಿಂದ ನಡೆದುಕೊಳ್ಳುವ ಪಾಠಗಳನ್ನು ಕೊಡುವವೆಂದೂ ದಿಲ್ಲಿಯಿಂದ ಇವು ಹಿಂದುಸ್ತಾನಿಯಲ್ಲಿಯೆ ನಡೆಯುವದರಿಂದ ನಮ್ಮ ರಾಷ್ಟ್ರೀಯ ಭಾಷೆ–ಹಿಂದುಸ್ತಾನಿಯ ಪ್ರಚಾರಕ್ಕೆ ಸಹಾಯಕವಾಗುವುವೆಂದೂ ನನ್ನ ನಂಬುಗೆ. ಅದುದರಿಂದ ಈ ಕಾರ್ಯಕ್ರಮಗಳು ಯಶಸ್ವಿಯಾಗಲೆಂದು ನಾನು ಹಾರೈಸುತ್ತೇನೆ.

ನಾನು ಶಿಕ್ಷಕಿಯಾಗುವುದು ಏಕೆ?

ಎಲೆನಾ ಓಸ್ಟ್ ಶಿಕ್ಷಕ-ವಿದ್ಯಾರ್ಥಿನಿ
ಹೆಲ್ಸಿಂಕಿಯ ಟೀಚರ್ಸ್ ಕಾಲೇಜು ಫಿನ್‌ಲ್ಯಾಂಡ್

ಬೇಸಿಗೆಯ ರಜೆ ಕಳೆದು ಆ ತಾನೇ ನಮ್ಮನ್ನೆ ಕಾಲಿಟ್ಟ ಮನೆಯ ಮೋಹದಾಸೆ ಮಿಗಿಸಿ ಹೆಣ್ಣಾದ್ದರಿಂದ ಕಾಲೇಜಕ್ಕೆ ಹಿಂತಿರುಗಲು ನನಗೆ ಸ್ವಲ್ಪ ತಡವೇ ಆಯಿತು. ತಮ್ಮ ತಮ್ಮ ಸಂಸಾರದ ಸುಖದುಃಖಗಳನ್ನು ತೋಡಿಕೊಳ್ಳುವದರಲ್ಲಿ ಮಗ್ನರಾದ ನನ್ನ ಸಹಪಾಠಿಗಳನ್ನು ಕಂಡೆ. ನಾನೂ ಅವರ ಹರಟೆಯಲ್ಲಿ ಒಂದಾದೆ. ರಜೆಯಲ್ಲಿ ಮುಗಿಸಿದ ಹೊಲಿಗೆಯ ಯಾದಿಯನ್ನು ಒಬ್ಬೇ ಅಭಿಮಾನದಿಂದ ಹೇಳುತ್ತಿರುವಾಗಲೇ ಎಲ್ಲರೂ ಒಮ್ಮೆಲೇ ನಗಬಡಿಸಿ ಎದ್ದುಂತಾಯಿತು. ನಾನೂ ಎದ್ದು ನಿಂತು ಹಿಂತಿರುಗಿದೆ. ನೋಡಲಾಗಿ ವರ್ಗ-ಶಿಕ್ಷಕಿಯರು ತಮ್ಮ ಸ್ಥಳದ ಕಡೆಗೆ ಹೊರಟಿದ್ದರು. ಅವರನು ಮಾಡುವುದೇ! ಅರಸಿದ ವಲ್ಲಿ ಮಂಗಳಾರತಿ ಮತ್ತೆಯಾದ ಸಮಯ ಬಂದ ಸಮ್ಮೆ ತಾಯಿತು. ಕಲಕಲವು ಕೂಡಲು ಸ್ವಲ್ಪಕಾಲದ ನಂತರ ಶಿಕ್ಷಕಿಯರು ಒಮ್ಮೆಲೆ ಎದ್ದುನಿಂತು ತಾವು ಕೇಳುವ ಪ್ರಶ್ನೆಗಳನ್ನು ವಿದ್ಯಾರ್ಥಿನಿಯರ ಮೇಲೆ ಎಸೆದರು. ಆ ಪ್ರಶ್ನೆಗಳನ್ನು ಕೇಳಿ. ನಾನು ಸಂತೋಷಗೊಂಡೆ. ಅವರಿಗೆ ಪ್ರಶ್ನೆಯೇನೂ ಇರಲಿಲ್ಲ. ಏನು ಅಷ್ಟೆಯೂ ನಾವು ವಿದ್ಯಾರ್ಥಿನಿಯರ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿ ಬಂದಿತು. ಆ ಪ್ರಶ್ನೆಗಳನ್ನು ಕೇಳಿ. ನಾನು ಸಂತೋಷಗೊಂಡೆ. ಅವರ

[illegible]

[illegible]

[illegible]

[illegible]

ಹಿಂದುಸ್ತಾನ ಸ್ಕೌಟ ಮತ್ತು ಬಾಯಸ್ಕೌಟ ಸಂಸ್ಥೆಗಳ ಏಕೀಕರಣ

ಎರಡೂ ಸಂಸ್ಥೆಗಳ ಪ್ರಥಮ ಸಮ್ಮೇಲನದ ಫಲಶ್ರುತಿ

ಲೇಖಕರು : ಶ್ರೀ. ಕೆ. ಜಿ. ಹಲಸಿಗಿ.

[ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೂ ಅಧ್ಯಾಪಿಕೆಯರಿಗೂ ಈ ವಿಷಯದ ಜ್ಞಾನವು ಇರಬೇಕೆಂಬ ಉದ್ದೇಶದಿಂದ ಇದನ್ನಿಲ್ಲಿ ಕೊಡಲಾಗಿದೆ. —ಸಂಪಾದಕರು]

ಕಳೆದ ಮೇ ತಿಂಗಳ ೨೬ನೇ ತಾರೀಖಿಗೆ ಹೊಸ ದಿಲ್ಲಿಯಲ್ಲಿ ಮಾನ್ಯ ಅಬುಲ್ ಕಲಮ್ ಆಜಾದ ಅವರ ಅಧ್ಯಕ್ಷತೆಯಲ್ಲಿ ಮೇಲಿನ ಎರಡೂ ಸ್ಕೌಟ ಸಂಸ್ಥೆಗಳ ಸಮ್ಮೇಲನವು ಒರುಗಿ ಸ್ವಾತಂತ್ರ್ಯವನ್ನು ಗಳಿಸಿದ ನಮ್ಮ ನಾಡಿನಲ್ಲಿ ಇನ್ನು ಎರಡು ಭಿನ್ನಭಿನ್ನ ಸ್ಕೌಟ ಸಂಸ್ಥೆಗಳಿಗೆ ಸ್ಥಾನವಿಲ್ಲವೆಂದೂ ಅವುಗಳನ್ನು ಏಕೀಕರಣ ಮಾಡಿ ಒಂದೇ ಒಂದು ಸ್ಕೌಟ ಸಂಸ್ಥೆಯನ್ನು ಕಟ್ಟಬೇಕೆಂದೂ ಒಮ್ಮತದಿಂದ ನಿರ್ಣಯವಾಯಿತು. ಈ ಸಮ್ಮೇಲನದಲ್ಲಿ ಎರಡೂ ಸಂಸ್ಥೆಗಳ ಪ್ರತಿನಿಧಿಗಳಲ್ಲದೆ, ಕೇಂದ್ರ ಸರಕಾರದ ಶಿಕ್ಷಣ ಸಲಹೆಗಾರರಾದ ಡಾ. ತಾರಾಚಂದ ಅವರೂ ಶ್ರೀ. ಹುಮಾಯೂನ ಕಬೀರ ಅವರೂ ಉಪಸ್ಥಿತರಿದ್ದರು. ಹೊಸ ಸಂಸ್ಥೆಗೆ "ಹಿಂದ್ ಸ್ಕೌಟ್ಸ್" ಎಂಬ ನಾಮಕರಣವನ್ನು ಮಾಡಬೇಕೆಂದು ನಿರ್ಣಯಿಸಲ್ಪಟ್ಟಿತು.

ಏಕೀಕರಣದಿಂದ ಉದ್ಭೂತವಾಗುವ ವಿವಿಧ ವಿಷಯಗಳನ್ನು ಚರ್ಚಿಸಿ ನಿರ್ಣಯಿಸುವುದಕ್ಕಾಗಿ ಡಾ. ತಾರಾಚಂದ ಅವರ ಅಧ್ಯಕ್ಷತೆಯಲ್ಲಿ ಒಂದು ಚಿಕ್ಕ ಸಮಿತಿಯು ನಿಯಮಿಸಲ್ಪಟ್ಟಿತ್ತು. ಈ ಸಮಿತಿಯು ಕಳೆದ ಜೂನ ತಿಂಗಳ ೨ ಮತ್ತು ೩ನೇ ತಾ॥ ಗೆ ಕೂಡಿ ಕೈಕೊಂಡ ಕೆಲವು ನಿರ್ಣಯಗಳನ್ನು ಕೆಳಗೆ ಕೊಡಲಾಗಿದೆ.

೧) ತಮ್ಮ ತಮ್ಮ ಕಾರ್ಯಕಾರೀ ಮಂಡಲದವರ ಒಪ್ಪಿಗೆಯನ್ನು ಪಡೆದನಂತರ ಎರಡೂ ಸಂಸ್ಥೆಗಳು "ಹಿಂದ್ ಸ್ಕೌಟ್ಸ್" ಎಂಬ ಹೊಸ ಸಂಸ್ಥೆಯಲ್ಲಿ ಲೀನವಾಗಬೇಕು. ಮತ್ತು ಈ ಹೊಸ ಸಂಸ್ಥೆಯು ರಾಜಕೀಯತೆ ಮತ್ತು ಜಾತೀಯತೆಯಿಂದ ಅಲಿಪ್ತವಾಗಿದ್ದು ಅಂತರರಾಷ್ಟ್ರೀಯ ಸ್ಕೌಟ ಸಂಸ್ಥೆಗೆ ಜೋಡಿಸಲ್ಪಡಬೇಕು.

೨) ನ್ಯಾಶನಲ್ ಕೌನ್ಸಿಲ್‌ದವರು ಪ್ರತಿವರುಷ ಅಧಿಕಾರಿ ವರ್ಗವನ್ನು ಆರಿಸುವದು, ನಿಯಮ ಮತ್ತು ಘಟನೆಗಳನ್ನು ಮಾಡುವದು ಮತ್ತು ಸಂಸ್ಥೆಯ ಸಾಧಾರಣ ಧ್ಯೇಯ ಧೋರಣಗಳನ್ನು ನಿಶ್ಚಯಿಸುವದು ಇವುಗಳನ್ನು ಮಾಡಬೇಕು.

೩) ನ್ಯಾಶನಲ್ ಕೌನ್ಸಿಲ್‌ದವರು ಹಾಕಿಕೊಟ್ಟ ಧ್ಯೇಯ ಧೋರಣೆಗಳು ಕಾರ್ಯಕಾರಿಯಾಗುವಂತೆ ನೋಡಿಕೊಳ್ಳಲು ಮತ್ತು ಸಂಸ್ಥೆಯ ಕಾರ್ಯಕಲಾಪಗಳು ಸುಗಮವಾಗಿ ಸಾಗುವಂತೆ ಮಾಡಲು ಹೊಣೆಗಾರಿಕೆಯುಳ್ಳ ಒಂದು ಕಾರ್ಯಕಾರಿ ಮಂಡಲವನ್ನು ಆರಿಸಬೇಕು.

೪) ಕೆಳಗಿನಂತೆಯೇ ಅಧಿಕಾರಿ ವರ್ಗ ವಿರಬೇಕು. ಗೌರವ ಅಧ್ಯಕ್ಷ:— (ಚೀಫ) ನ್ಯಾಶನಲ್ ಕಮೀಶನರ— ಡೆಪುಟಿ ಚೀಫಕಮೀಶನರ— ನ್ಯಾಶನಲ್ ಕ್ಯಾಂಪ ಚೀಫ— ನ್ಯಾಶನಲ್ ಆರ್ಗನಾಯಜಿಂಗ ಕಮೀಶನರ (ಡೆಪ್ಯುಟಿ ನ್ಯಾಶನಲ್ ಕಮೀಶನರ)— ಕೋಶಾಧ್ಯಕ್ಷ— ಜನರಲ್ ಸೆಕ್ರೆಟರಿ— ಮತ್ತು ಒಬ್ಬರು ಅಥವಾ ಹೆಚ್ಚು ಉಪಕಾರ್ಯದರ್ಶಿಗಳು (ಕೊನೆಯವರಿಗೆ ವೇತನವಿರಬೇಕು.)

೫) ಎರಡೂ ಸಂಸ್ಥೆಗಳಲ್ಲಿ ಈಗ ಪ್ರಚಲಿತವಿರುವ ಧ್ಯೇಯಧೋರಣೆ — ಸ್ಕೌಟ ನಿಯಮ-ವಚನ-ಮುಂತಾದವುಗಳನ್ನು ಅವಶ್ಯವಿದ್ದ ಕೆಲವು ಬದಲಾವಣೆಗಳೊಂದಿಗೆ ಸ್ವೀಕರಿಸಬೇಕು.

೬) ಬಾಯ ಸ್ಕೌಟ ಸಂಸ್ಥೆಯೊಂದಿಗೆ ಗರ್ಲಗಾಯಿಡ್ ಸಂಸ್ಥೆಯೂ ಕೂಡಿ ನಡೆಯುತ್ತಿದ್ದವೆಂಬ ದೃಷ್ಟಿಯಿಂದ ಹೊಸ ಸಂಸ್ಥೆಯ ಘಟನಾ ಸಮಿತಿಯವರು, ಗರ್ಲಗಾಯಿಡ ಸಂಸ್ಥೆಯವರೂ ಸಹ ಇಚ್ಛಿಸಿದಲ್ಲಿ ಕೂಡಿಕೊಳ್ಳಲು ಅನುಕೂಲವಾಗುವಂತೆ ಘಟನೆಯನ್ನು ಸಿದ್ಧಪಡಿಸಬೇಕು. (ಈ ಘಟನಾ ಸಮಿತಿಯವರು ಇದೇ ತಿಂಗಳ ೨೨ ಮತ್ತು ೨೩ ಕ್ಕೆ ಪುಣೆಯಲ್ಲಿ ಸಭೆಸೇರಿ ಕೊನೆಯ ನಿರ್ಣಯಗಳನ್ನು ಕೈಕೊಳ್ಳಬೇಕೆಂದು ಗೊತ್ತಾಗಿದೆ.)

೭) ಈಗಿನ ಡೆಪ್ಯುಟಿ ಕ್ಯಾಂಪ ಚೀಫರು ಬರುವ ೩ ವರ್ಷಗಳ ವರೆಗೆ ಹಾಗೆಯೇ ಮುಂದುವರಿಯಬೇಕು. ಆದರೆ ಈ ಅವಧಿಯಲ್ಲಿ ಅವರು ಭಾರತದ ಹೊರಗಿನ ಅಧಿಕಾರ ಪತ್ರಗಳನ್ನು ಇಟ್ಟುಕೊಳ್ಳತಕ್ಕದ್ದಲ್ಲ.

೮) ಹೊಸ ಸಂಸ್ಥೆಯಾದ "ಹಿಂದ ಸ್ಕೌಟ್ಸ" ಸಂಸ್ಥೆಯ ಪದಕದ ಆಕೃತಿಯು ಮೊದಲಿನ ಪದಕದಂತೆಯೇ ಇದ್ದು ಮಧ್ಯದಲ್ಲಿ ಅಶೋಕನ ಧರ್ಮ ಚಕ್ರವಿರಬೇಕು.

೯) ಹೊಸ ಸಂಸ್ಥೆಯ ನಿರ್ಮಾಣ ಕಾರ್ಯದಲ್ಲಿ ಕೆಳಗಿನಂತೆ ಕಾರ್ಯಕ್ರಮವನ್ನು ಕೈಕೊಳ್ಳಬೇಕು.

ಅ) ಬಾಯ ಸ್ಕೌಟ ಸಂಸ್ಥೆಯವರು ಆಗಸ್ಟ ೨೮ ಮತ್ತು ೨೯ಕ್ಕೆ ತಮ್ಮ ತ್ರೈವಾರ್ಷಿಕ ಸಮ್ಮೇಲನವನ್ನು ಕರೆಯಬೇಕು.

ಆ) ಹಿಂದುಸ್ಥಾನ ಸ್ಕೌಟ ಸಂಸ್ಥೆಯವರು ತಮ್ಮ ನ್ಯಾಶನಲ್ ಕೌನ್ಸಿಲ್ಲಿನ ಸಭೆಯನ್ನು ಇದೇ ಜುಲಾಯಿ ತಿಂಗಳಲ್ಲಿ ಕರೆಯಬೇಕು.

ಇ) ಇವೆರಡೂ ತಾರೀಖುಗಳ ನಂತರ ಆದಷ್ಟು ತೀವ್ರವಾಗಿ ಎರಡೂ ಸಂಸ್ಥೆಯವರೂ ಈ ವಿಷಯದ ಮೇಲಿನ ತಮ್ಮ ನಿರ್ಣಯಗಳನ್ನು ಭಾರತ ಸರಕಾರಕ್ಕೆ ಕಳಿಸಬೇಕು.

೧೦) ಈ ಎರಡೂ ಸಂಸ್ಥೆಗಳ ಆಸ್ತಿ ಪಾಸ್ತಿಗಳು ಹೊಸ ಸಂಸ್ಥೆಯು ನಿಯಮಿಸಬಹುದಾದ ಧರ್ಮದರ್ಶಿಗಳ ಕಡೆಗೆ ಹೋಗತಕ್ಕದ್ದು. ಮತ್ತು ಎರಡೂ ಸಂಸ್ಥೆಗಳೂ ಈ ದಿಶೆಯಲ್ಲಿ ಕೆಲಸ ಮಾಡತಕ್ಕದ್ದು.

೧೧) ಎರಡೂ ಸಂಸ್ಥೆಗಳ ವೇತನ ಪಡೆಯುವ ಕೆಲಸಗಾರರು ಈಗಿನ ಕರಾರುಗಳ ಮೇಲೆಯೇ ಬರುವ ಮೂರು ವರುಷಗಳ ವರೆಗೆ ಮುಂದುವರೆಯಬೇಕು.

೧೨) ಪ್ರತ್ಯೇಕ ಸಂಸ್ಥೆಯಿಂದ ನಿಯಮಿಸಲ್ಪಟ್ಟ ನಾಲ್ಕು ನಾಲ್ಕು ಸದಸ್ಯರು (ಒಟ್ಟು ೮) ಹೊಸ ಸಂಸ್ಥೆಯ ಸದಸ್ಯರು. ಇವರು ಇದೇ ವರ್ಷದ ೧೫ನೇ ಸಪ್ಟಂಬರದೊಳಗಾಗಿ ತಮ್ಮ ಸಹಿಗಳೊಂದಿಗೆ ಹೊಸ ಸಂಸ್ಥೆಯ ನಿಯಮ ಮತ್ತು ಘಟನಾವಲಿಯನ್ನು "ಜಾಯಂಟ ಸ್ಟಾಕ್" ಕಂಪನಿಯ ರಜಿಸ್ಟ್ರಾರನಿಗೆ ಕಳಿಸಬೇಕು.

೧೩) "ಹಿಂದ ಸ್ಕೌಟ್ಸದ" ಘಟನಾ ಸಮಿತಿಯು ಹೊಸ ಸಂಸ್ಥೆಯ ನಿಯಮದಂತೆ ಕೌನ್ಸಿಲ್ ಮತ್ತು ಕಾರ್ಯಕಾರೀ ಮಂಡಳಗಳನ್ನು ಸ್ಥಾಪಿಸುವ ವರೆಗೆ ಒಂದು "ನಡುಗಾಲ" ಆಡಳಿತವು ಕಾರ್ಯ ಮಾಡುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕು.

೧೪) ಹೊಸ ಸಂಸ್ಥೆಯು ೧೯೪೮ನೇ ಇಸ್ವಿಯ ೧ನೇ ಅಕ್ಟೋಬರದ ದಿನ ಜನ್ಮವೆತ್ತಬೇಕು.

೧೫) ಹೀಗೆ ಏಕೀಕೃತವಾದ ಹೊಸ ಸಂಸ್ಥೆಯ ಮೊದಲನೇ ಕಾರ್ಯಕಾರೀ ಮಂಡಲದಲ್ಲಿ ಕೆಳಗಿನವರಿರಬೇಕು.

ಅ) ಡಾ. ಹೃದಯನಾಥ ಕುಂಜ್ರು (ನ್ಯಾಶನಲ್ ಚೀಫ್ ಕಮೀಶನರ)

ಆ) ಜಸ್ಟಿಸ ವ್ಹಿ. ವ್ಹಿ. ಯನ್. ಬೋಸ (ಡೆಪ್ಯುಟಿ ಚೀಫ ಕಮಿಶನರ)

ಇ) ಪಂ. ಶ್ರೀರಾಮ ಬಾಜಪೇಯಿ. ನ್ಯಾಶನಲ್ ಆರ್ಗನಾಯಿಜಿಂಗ ಕಮಿಶನರ (ಡೆಪ್ಯುಟಿ ನ್ಯಾಶನಲ್ ಕಮೀಶನರ)

ಈ) ಶ್ರೀ. ಜಿ. ಟಿ. ಜೆ. ಥಡಿಯಸ್ (ಜನರಲ್ ಸೆಕ್ರೆಟರಿ)

ಉ) ಶ್ರೀಮತಿ ಕ್ಯಾಪ್ಟನ್ (ಗರ್ಲಗಾಯಿಡ ಅಸೋಸಿಯೇಶನ್ನಿನವರು ಕೂಡಿಕೊಂಡರೆ ಮಾತ್ರ)

ಊ) ಬಾಯಸ್ಕೌಟ ಸಂಸ್ಥೆಯ ೯ ಜನ ಚುನಾಯಿತ ಸದಸ್ಯರು.

ಎ) ಹಿಂದುಸ್ಥಾನ ಸ್ಕೌಟ ಸಂಸ್ಥೆಯ ೯ ಜನ ಚುನಾಯಿತ ಸದಸ್ಯರು.

ಈ ಮಂಡಲವು ಹೊಸ ಸಂಸ್ಥೆಯ ಕಾರ್ಯಕಾರಿ ಮಂಡಲದಂತೆ ೧೯೪೯ನೇ ಮಾರ್ಚದ ವರೆಗೆ ಅಥವಾ ಘಟನೆಯಂತೆ ಹೊಸ ಕಾರ್ಯಕಾರೀ ಮಂಡಲವು ಆರಿಸಲ್ಪಡುವ ವರೆಗೆ ಕೆಲಸ ಮಾಡಬೇಕು.

೧೬) ಪ್ರಾಂತಿಕ ಅಥವಾ ಸಂಸ್ಥಾನಗಳ ಸಲುವಾಗಿಯಾದರೂ ಇದೇ ತರದ ವ್ಯವಸ್ಥೆಯಾಗತಕ್ಕದ್ದು. ಮತ್ತು ೧೯೪೯ನೇ ಮಾರ್ಚದ ವರೆಗೆ ಸಾಗತಕ್ಕದ್ದು.

೧೭) ಈಗ ಎರಡು ಸಂಸ್ಥೆಗಳು ಕೆಲಸ ಮಾಡುತ್ತಿರುವ ಪ್ರಾಂತ ಅಥವಾ ಸಂಸ್ಥಾನಗಳಲ್ಲಿ ಈ ನಡುಗಾಲದಲ್ಲಿ ಪ್ರಾಂತಿಕ ಕಮಿಶನರರನ್ನು ನಿಯಮಿಸುವದರ ಸಲುವಾಗಿ ಕೆಳಗಿನ ತತ್ವವನ್ನು ಅನುಸರಿಸಬೇಕು:

"ಈ ಸ್ಥಾನದಲ್ಲಿ ಇಲ್ಲಿಯ ವರೆಗೆ ಹೆಚ್ಚು ಅವಧಿಯ ವರೆಗೆ ಇದ್ದವರು ಪ್ರಾಂತಿಕ ಕಮಿಶನರರಾಗಿರತಕ್ಕದ್ದು. ಇಬ್ಬರೂ

ಅಷ್ಟೇ ಅವಧಿಯ ವರೆಗೆ ಕೆಲಸ ಮಾಡಿದ್ದಲ್ಲಿ, ಅವರೊಳಗೆ ಸ್ಕೌಟ ಕ್ಷೇತ್ರದಲ್ಲಿ ಹೆಚ್ಚಿಗೆ ಸೇವೆ ಸಲ್ಲಿಸಿದವರು ಕಮಿಶನರ ರಾಗತಕ್ಕದ್ದು.

೧೮) ಸರ್ ತೇಜ ಬಹಾದ್ದೂರ ಸಪ್ರು ಅವರು ಸ್ಕೌಟ ಡಳವಳಿಯ ಬಗ್ಗೆ ಸಲ್ಲಿಸಿದ ಸೇವೆಯನ್ನನುಲಕ್ಷಿಸಿ ಅವರಿಗೆ ಜೀವಾವಧಿಯ ವರೆಗೆ "ಗೌರವ ಚೀಫ ಕಮಿಶನರರ" ಪದವಿಯನ್ನು ಕೊಡಬೇಕು.

೧೯) ಹೊಸ ಸಂಸ್ಥೆಯ ಘಟನೆ ನಿಯಮಾವಲಿಗಳನ್ನು ಸಿದ್ಧಪಡಿಸಲು ಕೂಲಂಕಷವಾದ ವಿಚಾರವೂ ಕಾರ್ಯವೂ ಅವಶ್ಯವಿದ್ದುದರಿಂದ ಈ ಕೆಲಸವನ್ನು ಒಬ್ಬ ಕಾಯದೆ ತಜ್ಞನ ಸಲಹೆಯನ್ನು ಪಡೆದುಕೊಂಡು ಪುಣೆಯಲ್ಲಿ ಜೂನ ೩ನೇ ವಾರದಲ್ಲಿ ಮುಂದುವರಿಸಬೇಕು.

೨೦) ಕೆಳಗಿನ ಅಂಶಗಳ ಸಲುವಾಗಿ ಮಾನ್ಯ ಡಾ. ಹೃದಯನಾಥ ಕುಂಜ್ರು ಮತ್ತು ಜಸ್ಟಿಸ ಬೋಸ ಅವರಿಬ್ಬರೂ ಸೇರಿ ಚರ್ಚಿಸಿ ನಿರ್ಣಯಗಳನ್ನು ಕೊಡಬೇಕು.

ಅ) ಎರಡೂ ಮಧ್ಯವರ್ತಿ ಸ್ಕೌಟ ಸಂಸ್ಥೆಗಳ ವೇತನ ಕೆಲಸಗಾರರನ್ನು ಬರುವ ಮೂರು ವರ್ಷಗಳ ವರೆಗೆ ಇಟ್ಟುಕೊಳ್ಳುವ ನಿಶ್ಚಯದ ಮೇರೆಗೆ ಅವರ ವೇತನದ ಸಲುವಾಗಿ ಬೇಕಾಗುವ ಹಣವನ್ನು ಧರ್ಮದರ್ಶಿಗಳ ಕಡೆಗೆ ಇಡಬೇಕು.

ಆ) ಪ್ರಾಂತಗಳು ಮತ್ತು ಸಂಸ್ಥಾನಗಳು ಸಹ ಇದೇ ಯೋಜನೆಯನ್ನು ಅನುಸರಿಸಬೇಕು.

ಇ) ವೇತನ ತೆಗೆದುಕೊಳ್ಳುತ್ತಿರುವ ಇಂತಹ ಕೆಲಸಗಾರರನ್ನು ಯೋಗ್ಯತೆಯ ಅಭಾವ, ದುರ್ನಡತೆ, ಇಲ್ಲವೇ ಅವಿಧೇಯತೆ ಮುಂತಾದ ಕಾರಣಕ್ಕಾಗಿ ತೆಗೆದೊಗೆದರೆ ಅಂತಹ ಕೆಲಸಗಾರನು ಕೆಳಗೆ ಕಾಣಿಸಿದ ಪಂಚಾಯತಿಗೆ ದೂರಿಕೊಳ್ಳಬಲ್ಲನು. ಆ ಪಂಚಾಯತಿಯಲ್ಲಿ ಪ್ರತ್ಯೇಕ ಸಂಸ್ಥೆಯಿಂದ ಇಬ್ಬಿಬ್ಬರಂತೆ ಆರಿಸಲ್ಪಟ್ಟ ನಾಲ್ಕು ಜನರು, ಈ ನಾಲ್ಕು ಜನ ಸದಸ್ಯರಿಂದ ಆರಿಸಲ್ಪಟ್ಟ ಒಬ್ಬ ಹೊರಗಿನ ಸ್ವತಂತ್ರ ಅಧ್ಯಕ್ಷ ಹೀಗೆ ಐದು ಜನರಿರಬೇಕು. ಈ ಪಂಚಾಯತಿಯ ನಿರ್ಣಯವೇ ಕೊನೆಯದು ಹಾಗೂ ಎರಡೂ ಪಂಗಡಗಳ ಮೇಲೂ ಬಂಧನಕಾರಿಯು. ಈ ಪಂಚಾಯತಿಯು ಬರುವ ಮೂರು ವರ್ಷಗಳ ವರೆಗೆ ಕೆಲಸ ಮಾಡಬೇಕು.

ಹೀಗೆ ಎರಡೂ ಸಂಸ್ಥೆಗಳೂ ಒಂದೇ ಹೊಸ ಸಂಸ್ಥೆಯಲ್ಲಿ ಲೀನ ಹೊಂದಿದ್ದು ಒಂದು ಶುಭ ಚಿಹ್ನವೇ ಸರಿ. ಅನಾವಶ್ಯಕವಾಗಿ ಎರಡೂ ಸಂಸ್ಥೆಗಳಲ್ಲಿ ಬೆಳೆಯುತ್ತಿದ್ದ ವೈಮನಸ್ಸು ಇನ್ನು ಇರಲು ಅವಕಾಶವಿಲ್ಲ. ಈ ಲೀನೀಕರಣದ ವಿವಿಧ ಅಂಶಗಳನ್ನು ಒಳ್ಳೇ ಲಕ್ಷ್ಯಪೂರ್ವಕವಾಗಿ ಚರ್ಚಿಸಿ ಇಲಾಖಾ, ಜಿಲ್ಹಾ, ಸ್ಥಳಿಕ ಸಂಸ್ಥೆ ಮುಂತಾದವುಗಳಲ್ಲಿ ಇದು ಹೇಗೆ ಕಾರ್ಯಕಾರಿಯಾಗಬಲ್ಲದೆಂದು ಅದಕ್ಕೆ ಬೇಕಾಗುವ ನಿಯಮಾವಲಿಗಳನ್ನು ತಜ್ಞರು ಸಿದ್ಧಪಡಿಸುತ್ತಿದ್ದಾರೆ. ಈ ನಡುವಿನ ಅಂತರದಲ್ಲಿ ಸ್ಕೌಟ ಚಟುವಟಿಕೆಗಳ ಮೇಲೆ ವಿಶ್ವಾಸವಿದ್ದು ಅದರ ಬಗ್ಗೆ ಆಸ್ಥೆವಹಿಸಿರುವ ಪ್ರತಿಯೊಬ್ಬರೂ ಪರಸ್ಪರ ಸಖ್ಯ ಭಾವನೆಯ ವಾತಾವರಣವನ್ನು ಉತ್ಪನ್ನ ಮಾಡಲು ಪ್ರಯತ್ನಿಸಬೇಕು. ಅದರಿಂದ ಇಲ್ಲಿಯ ವರೆಗೆ ಎರಡೂ ಸಂಸ್ಥೆಗಳಲ್ಲಿ ದುಡಿದ ಕೆಲಸಗಾರರು ಪರಸ್ಪರ ಸಹಕಾರ ಮತ್ತು ಸೌಹಾರ್ದದಿಂದ ಕಾರ್ಯ ಮಾಡಲು ಅನುಕೂಲವಾಗುತ್ತದೆ.

ತ್ವರೆಮಾಡಿರಿ

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗಾಗಿ ಹೊಸ ಪುಸ್ತಕಗಳು

ಶ್ರೀ. ಚಿ. ಶ್ರೀ. ಕುಲಕರ್ಣಿಯವರು ತಮ್ಮ ಹದಿನೈದು ವರುಷದ ಅನುಭವದಿಂದ ಹೊಸ ಅಭ್ಯಾಸ ಪತ್ರಿಕೆಯನ್ನು ಅನುಸರಿಸಿ ಇದೀಗ ತಯಾರಿಸಿದ್ದಾರೆ. ಕಾರಣ ಅವರ ಪುಸ್ತಕಗಳನ್ನೇ ಉಪಯೋಗಿಸಿರಿ.

ಕೆಳಗಿನ ವರ್ಗಗಳಿಗಾಗಿ

೧ ರಿಂದ ೫ನೆಯ ವರ್ಗದ ವರೆಗೆ ಸಾಮಾನ್ಯ ವಿಜ್ಞಾನಗಳು. ೧ ರಿಂದ ೬ನೆಯ ವರ್ಗದ ವರೆಗೆ ಭೂಗೋಲ ಪುಸ್ತಕಗಳು. ೧ ರಿಂದ ೭ನೆಯ ವರ್ಗದ ವರೆಗೆ ಪೌರ ನೀತಿಯ ಪುಸ್ತಕಗಳು.

ಕಥೆಯ ಪುಸ್ತಕಗಳು

೧—೨—೩ ತರಗತಿಯ ಕಥೆಗಳು, ಧ್ರುವ, ಪ್ರಲ್ಹಾದ, ಮಹಾತ್ಮಾಗಾಂಧಿ, ಜವಾಹರಲಾಲ ನೆಹರು, ಸುದಾಮ ಚರಿತ್ರೆ, ಗಜೇಂದ್ರ ಮೋಕ್ಷ, ಕುಮಾರ ರಾಮಣ್ಣ, ಕುಮಾರ ಕಿಟ್ಟಣ್ಣ, ಶ್ರೀಕೃಷ್ಣ ಚರಿತ್ರೆ, ರಾಮಕೃಷ್ಣ ನೀತಿಯ ಕಥೆಗಳು, ಪುರಂದರ ದಾಸರ ಪದಗಳು, ಬದರೀ ಯಾತ್ರೆ ಮುಂತಾದವು.

ಮುಲ್ಕೀ ಪರೀಕ್ಷೆಗಾಗಿ

ಗಣಿತಸಂಗ್ರಹ.

ಇತಿಹಾಸ ಪ್ರಶ್ನೋತ್ತರಮಾಲೆ.

ಭೂಗೋಲ ಪ್ರಶ್ನೋತ್ತರಮಾಲೆ.

ಭೂಮಿತಿ ಪ್ರಶ್ನೋತ್ತರಮಾಲೆ.

ಜಮಾಖರ್ಚು ಪ್ರಶ್ನೋತ್ತರಮಾಲೆ.

ಸಾಮಾನ್ಯವಿಜ್ಞಾನ ಪ್ರಶ್ನೋತ್ತರಮಾಲೆ.

ಆರೋಗ್ಯವಿಜ್ಞಾನ ಪ್ರಶ್ನೋತ್ತರಮಾಲೆ.

ವಾಕ್ಯರಚನೆ.

ಭಾಷಾಭ್ಯಾಸ.

ಸ್ಕಾಲರಷಿಪ್ ಮಾರ್ಗದರ್ಶಿಕೆ.

ಪ್ರಶ್ನೋತ್ತರ ಸಂಗ್ರಹ ಮೊದಲಾದ ಅತ್ಯುಪಯುಕ್ತ ಪುಸ್ತಕಗಳಿವೆ.

ಎಲ್ಲ ಪುಸ್ತಕಗಳು ಠೋಕಾಗಿಯೂ, ಚಿಲ್ಲರೆಯಾಗಿಯೂ ಸಿಗುವ ಒಂದೇ ಸ್ಥಳ:

ಕೆ. ಎಸ್. ಕುಲಕರ್ಣಿ, ಬುಕ್ ಡಿಪೋ, ಸ್ಟೇಶನ್‌ರೋಡ, ಹುಬ್ಬಳ್ಳಿ

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ ಕಳುಹಿಸಲ್ಪಟ್ಟು

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯ ೬ ಪುಸ್ತಕಗಳು: ೧ನೆಯ ಇಯತ್ತೆಯಿಂದ ೬ನೆಯ ಇಯತ್ತೆಯ ವರೆಗೆ ಪುಸ್ತಕಗಳಲ್ಲಿಯ ವಿಷಯವು ಹೊಸ ಅಭ್ಯಾಸ ಪತ್ರಿಕೆಯಂತೆ ಅಚ್ಚಾಗಿವೆ. ಸಚಿತ್ರವಾಗಿವೆ.

ಸಚಿತ್ರ ಪೌರನೀತಿ ಮಾಲೆಯ ೭ ಪುಸ್ತಕಗಳು: (೧ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ) ಪುಸ್ತಕಗಳಲ್ಲಿಯ ವಿಷಯವು ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿದೆ. ಹಳ್ಳಿಗರ ಪಟ್ಟಣಿಗರ ಜೀವನಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಪುಸ್ತಕಗಳ ಬಾಹ್ಯಾಂಗರಚನೆಯೂ ಸೊಗಸಾಗಿದೆ.

ಭೌಗೋಲಿಕ ನಕಾಶ ಪುಸ್ತಕ ಮಾಲೆಯ ೬ ಪುಸ್ತಕಗಳು: (೨ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ) ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟ ಭೂಗೋಲ ವಿಷಯಕ ಪುಸ್ತಕಗಳು ಸಚಿತ್ರ) ಪುಸ್ತಕಗಳ ಬಾಹ್ಯಾಂಗ ರಚನೆಯು ಸೊಗಸಾಗಿದೆ.

ಭೂಮಂಡಲ ಪರಿಚಯ ೨ ಪುಸ್ತಕಗಳು: (ಭಾಗ ೩, ೬ನೆಯ ಇಯತ್ತೆಗೆ, ಭಾಗ ೪ ೭ನೆಯ ಇಯತ್ತೆಗೆ) ಪುಸ್ತಕಗಳಲ್ಲಿಯ ವಿಷಯವು ಇತ್ತೀಚಿನ ಹೊಸ ಅಭ್ಯಾಸ ಪತ್ರಿಕೆಯಂತೆ ಸುಲಭವಾಗಿ ಬೋಧಿಸಲ್ಪಟ್ಟಿದೆ. ಪುಸ್ತಕಗಳ ಬಾಹ್ಯಾಂಗ ರಚನೆಯೂ ಸೊಗಸಾಗಿದೆ.

ಧಾರವಾಡ ಜಿಲ್ಲೆಯ ಭೂಗೋಲ: (೩ನೆಯ ಇಯತ್ತೆಗೆ) ಶಂಕರಾಚಾರ್ಯ ಕೃತ ಜನಪ್ರಿಯವಾದ ಭೂಗೋಲವನ್ನು ಹೊಸ ಅಭ್ಯಾಸ ಪತ್ರಿಕೆಯಂತೆ ಸರ್ವ ವಿಷಯಗಳನ್ನು ವಿವೇಚಿಸಲಾಗಿದೆ. ಅಂದವಾದ ಚಿತ್ರಗಳು ನಕಾಶಗಳು ತುಂಬಿವೆ. ಪುಸ್ತಕ ಬಾಹ್ಯಾಂಗ ರಚನೆಯೂ ಸೊಗಸಾಗಿದೆ.

ಒಕ್ಕಲುತನದ ಪುಸ್ತಕಗಳು: (ಆಧುನಿಕ ಕೃಷಿ ೧ನೆಯ ಭಾಗ ೫ನೆಯ ಇಯತ್ತೆಗೆ ೨ನೆಯ ಭಾಗ ೬ನೆಯ ಇಯತ್ತೆಗೆ) ಈ ಪುಸ್ತಕಗಳಲ್ಲಿ ಒಕ್ಕಲುತನದ ಶಾಲೆಗಳಲ್ಲಿ ಹೊಸ ಅಭ್ಯಾಸ ಪತ್ರಿಕೆಗೆ ಅನುಸಾರವಾಗಿ ವಿಷಯ ವಿವೇಚನೆಯುಂಟು. ಪುಸ್ತಕಗಳ ಬಾಹ್ಯಾಂಗ ರಚನೆಯೂ ಸೊಗಸಾಗಿದೆ.

ಭಾರತೀಯ ರಾಜ್ಯತಂತ್ರ: ಹಿಂದುಸ್ತಾನದ ಶಾಸನ ಪದ್ಧತಿಯು ಕ್ರಮದಿಂದ ಬದಲಾವಣೆಯಾದುದನ್ನು ಸುಬೋಧವಾಗಿ ವರ್ಣಿಸಲಾಗಿದೆ.

ಇದಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ, ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ ಪುಸ್ತಕಗಳೂ ದೊರೆಯುತ್ತವೆ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ
ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತೆಗಾಗಿ)	.....	ಬೆಲೆ ೮ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತೆಗಾಗಿ)	.....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತೆಗಾಗಿ)	.....	,, ೧ ರೂ. ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತೆಗಾಗಿ)	.....	,, ೧ ರೂ. ೮ ಆ.

ಎಲ್ಲ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ಶೈಕ್ಷಣಿಕ ಚಟುವಟಿಕೆಗಳು

ಕಾರವಾರ ಟ್ರೇನಿಂಗ ಕಾಲೇಜದ ಶಿಕ್ಷಕರೂ ಶಿಕ್ಷಕ ವಿದ್ಯಾರ್ಥಿಗಳೂ ಪ್ರಿನ್ಸಿಪಾಲ್ ಶ್ರೀ. ಎಸ್. ಆರ್. ಜೋಶಿ ಅವರ ನೇತೃತ್ವದಲ್ಲಿ ವಸ್ತು ಸಂಗ್ರಹಾಲಯವನ್ನು ಏರ್ಪಡಿಸಿದ್ದಾರೆ, ನಂದನಗದ್ದೆಯ ಜಾತ್ರೆಯಲ್ಲಿ 'ಜನತಾ ಸೇವೆಯನ್ನು ಮಾಡಿದ್ದಾರೆ, 'ಕರ್ಣಪರ್ವ' ಎಂಬ ಯಕ್ಷಗಾನ ಪ್ರಸಂಗವನ್ನು ನಡೆಸಿದ್ದಾರೆ, ಚೆಂಡಿಯ ಎಂಬ ಗ್ರಾಮದ ಪ್ರವಾಸವನ್ನು ಕೈಕೊಂಡು ಜನರಿಗೆ ಪ್ರಾಥಶಿಕ್ಷಣದ ಮಹತ್ವವನ್ನು ತಿಳಿಸಿದ್ದಾರೆ, ಹಳ್ಳಿಯ ಜನರಿಗೆ ಮ್ಯೂಜಿಕ್ ಲ್ಯಾಂಟರ್ನದ ಉಪನ್ಯಾಸಗಳನ್ನು ಏರ್ಪಡಿಸಿದ್ದಾರೆ, ಶಾರೀರಿಕ ಪಂದ್ಯಾಟಗಳನ್ನು ಜರುಗಿಸಿದ್ದಾರೆ, 'ಮಾಜಾಳಿ' ಎಂಬಲ್ಲಿಗೆ ಹೋಗಿ ಗ್ರಾಮ ಸ್ವಚ್ಛತೆಯನ್ನು ಮಾಡಿದ್ದಾರೆ, ಶ್ರೀ. ಅಣ್ಣಾ ಗುರುಜಿ, ಶ್ರೀ. ಮಾಲಗಳ್ಳಿಯವರ ವ್ಯಾಖ್ಯಾನಗಳನ್ನು ಮಾಡಿಸಿದ್ದಾರೆ. ಈ ಕಾರ್ಯಕ್ರಮಗಳ ಸಂಗತಿಗಳನ್ನು ಅರಿತು ದ. ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರು ಆನಂದವನ್ನು ವ್ಯಕ್ತಮಾಡಿದ್ದಾರೆ. ಮೂಲ ಶಿಕ್ಷಣದ ತತ್ವಕ್ಕೆ ಅನುಸಾರವಾಗಿ ಈ ಟ್ರೇನಿಂಗ ಕಾಲೇಜು ಮುಂದುವರಿಯುತ್ತದೆ.

ಪದವಿಧರ ಬೇಸಿಕ್ ಟ್ರೇನಿಂಗ ಕಾಲೇಜು ಧಾರವಾಡದಲ್ಲಿ ಪ್ರಿನ್ಸಿಪಾಲ್ ಶ್ರೀ. ತೇರಗಾಂವಕರರ ನೇತೃತ್ವದಲ್ಲಿ ವರ್ಧಾಶಿಕ್ಷಣಯೋಜನೆಯನ್ನು ಯಶಸ್ವಿಯನ್ನಾಗಿ ಮಾಡಿ ತೋರಿಸಲು ಕಂಕಣ ಬದ್ಧವಾಗಿ ಕಾರ್ಯಮಾಡುತ್ತಿದೆ.

ಪ್ರಾಥಮಿಕ ಶಿಕ್ಷಕರ ಬೇಸಿಕ್ ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲ್ ಶ್ರೀ. ದೇಸಾಯಿ ಅವರ ನೇತೃತ್ವದಲ್ಲಿ ಮೂಲ ಶಿಕ್ಷಣದಲ್ಲಿ ಸಂಶೋಧನೆಯ ಕಾರ್ಯವನ್ನು ಮಾಡುತ್ತ ವರ್ಧಾಶಿಕ್ಷಣದ ಫಲವನ್ನು ರಮ್ಯವಾಗಿ ತೋರಿಸುತ್ತಲಿದೆ.

ಧಾರವಾಡ ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನಲ್ಲಿ ವಿದ್ಯಾರ್ಥಿ—ಶಿಕ್ಷಿಕೆಯರು ಲೇಡಿ ಸುಪರಿಂಟೆಂಡಂಟರಾದ ಮಿಸ್. ವಾಯ್.ಡಿ. ನಾಡಕರ್ಣಿಯವರ ನೇತೃತ್ವದಲ್ಲಿ ವರ್ಧಾಶಿಕ್ಷಣಯೋಜನೆಯ ಪ್ರಕಾರ ತರಬೇತಿಯನ್ನು ಹೊಂದುತ್ತಲಿದ್ದಾರೆ. ಇನ್ನು ಈ ಕಾಲೇಜದ ಮೂರು ವರುಷಗಳ ಶಿಕ್ಷಣಕ್ರಮವು ಎರಡೇ ವರುಷಗಳಲ್ಲಿ ಮುಗಿಸಲ್ಪಡುವುದೆಂದು ತಿಳಿದುಬರುತ್ತದೆ. ಈ ಕಾಲೇಜಿನಲ್ಲಿಯೂ ಒಕ್ಕಲತನವು ಪ್ರಾರಂಭಿಸಲ್ಪಟ್ಟಿದೆ.

ಗ್ರಂಥವಿಮರ್ಶೆ

ಅಶೋಕ ಚಕ್ರ ಬರಹಗಾರರು: ಶ್ರೀ. ಮಿರ್ಜಿ ಅಣ್ಣಾರಾಯರು. ಪ್ರಕಾಶಕರು: ಶ್ರೀ. ಭಾಲಚಂದ್ರ ಘಾಣೇಕರ, ಪ್ರತಿಭಾ ಗ್ರಂಥಭಾಂಡಾರ, ಧಾರವಾಡ. ಕ್ರೌನ್ ಅಷ್ಟಪತ್ರದ ೨೯೨ ಪುಟಗಳು ಬೆಲೆ, ರೂ. ೩-೮-೦

ಇದೊಂದು ಸ್ವಾತಂತ್ರ ಸಾಮಾಜಿಕ ಕಾದಂಬರಿ. ಹಳ್ಳಿಯ ಕುಟುಂಬವೊಂದರಲ್ಲಿಯ ಘಟನೆಗಳೆ ಈ ಕಾದಂಬರಿಯ ತಳಹದಿ. ಹಳ್ಳಿಗರ ಜೀವನದ ಚಿತ್ರಗಳನ್ನು ಇದರಲ್ಲಿ ಯಶಸ್ವಿಯಾಗಿ ಒಡಮೂಡಿಸಲಾಗಿದೆ. ಸಾಮಾನ್ಯವಾಗಿ, ಹಳ್ಳಿಯ ಜೀವನ ಪರಿಚಯಾಪೇಕ್ಷಿಗಳಿಗೆ ಇದೊಂದು ಕೈಗನ್ನಡಿಯಂತಿರುವದು. ಕತೆಯು ತುಸು ಸುದೀರ್ಘವಾಗಿ ಸಾಗಿದ್ದರೂ, ಓದುಗರಿಗೆ ಅದು ಬೇಸರ ಬರದಂತೆ ಎಚ್ಚರ ಪಡಲಾಗಿದೆ ರಚನೆಯು ಸ್ವಾರಸ್ಯ ಪೂರ್ಣವಾಗಿದೆ. ಹಳ್ಳಿಗರ ಗುಣಾವಗುಣಗಳನ್ನು ಬಣ್ಣಿಸುವದರಲ್ಲಿ ಹಾಗೂ ಹೊತ್ತಗೆಯಲ್ಲಿ ಅಲ್ಲಲ್ಲಿ ಕಂಡುಬರುವ ಸೃಷ್ಟಿಸೌಂದರ್ಯದ ವರ್ಣನೆಯಲ್ಲಿ ಕತೆಗಾರರ ಸೂಕ್ಷ್ಮದೃಷ್ಟಿ, ಪರಿಶೀಲನಾಶಕ್ತಿಗಳು ಪ್ರಕಟಗೊಂಡಿರುತ್ತವೆ. ಹೊತ್ತಗೆಯಲ್ಲಿಯ ಭಾಷಾಶೈಲಿಯೂ ಹಳ್ಳಿಗರದೇ ಆಗಿರಬೇಕೆಂಬ ಭಾವನೆಯಿಂದ ಗ್ರಂಥಕಾರರು ಈ ಗ್ರಂಥರಚನೆಯಲ್ಲಿ ಜೋದಿತರಾದಂತೆ ತೋರುತ್ತದೆ. ಉದ್ದೇಶವು ಸ್ತುತ್ಯ. ಆದರೆ ಅದು ಪರಿಣಾಮದಲ್ಲಿ ಮಾತ್ರ ಸಾಕಷ್ಟು ಕಂಡು ಬಂದಿಲ್ಲ. ಯಾಕಂದರೆ, ಹಳ್ಳಿಗರ ಬಾಯಿಂದ ಹೊರಬೀಳಿಸಿರುವ ಭಾಷೆಯು ಕಲಿಯದಿರುವ ಹಳ್ಳಿಗರ ಮತ್ತು ಸುಸಂಸ್ಕೃತಿಗಳ, ಕಲಿತವರ ಭಾಷೆಗಳ ಮಿಶ್ರಣವಿರುವದೆಂದು ಈ ಹೊತ್ತಗೆಯ ಎಲ್ಲೆಡೆಗಳಲ್ಲಿ ಕಂಡುಬರುತ್ತದೆ. ಹೀಗಾಗುವದು ಮಾತ್ರ ಬೇಡವಾಗಿದ್ದಿತು.

ಒಟ್ಟಾರೆ, ಪ್ರತಿಭಾ ಗ್ರಂಥಮಾಲೆಯ ಈ ಗ್ರಂಥವು ನಿಜವಾಗಿಯೂ ಪ್ರತಿಭಾವಂತರಿಂದ ರಚಿಸಲ್ಪಟ್ಟಿರುವದೆಂದು ಹೇಳಲು ಆತಂಕವೆನಿಸುವದಿಲ್ಲ. ಈದೃಷ್ಟಿಯಿಂದ, ಗ್ರಂಥಮಾಲೆಯ ಸಂಚಾಲಕರೂ ಮತ್ತು ಗ್ರಂಥಕರ್ತರೂ ಅಭಿನಂದನೀಯರೇ ಸರಿ.

—ಆರ್. ಕೆ. ಲಕ್ಕುಂಡಿ

Printed by : D. T. Kayasth, at Ravindra Press, U. B. Hill, (House No. 8536) Dharwar.
Edited and Published by R. K. Lakkundi Principal. T. C M , R. V. Desai Principal P. T. C., Y. D Nadakarni Lady Superintendent T. C. W. Dharwar jointly at the Kannada Prathamik Shikshan office, Govt. Training College for Men, Dharwar. 7493 —46 —1375

ಹೊಸ ಪುಸ್ತಕ ತ್ವರೆಮಾಡಿರಿ ಪ್ರತಿಗಳು ಸ್ವಲ್ಪ

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ
ಅತ್ಯುಪಯುಕ್ತವಾದುದು

ಇತಿಹಾಸ ಪ್ರಶ್ನೋತ್ತರಮಾಲೆ

ಇದರಲ್ಲಿ ಈಗಿನ ರಾಜ್ಯ ಘಟನೆ, ಹಿಂದಿನ, ಇಂದಿನ ಮಹಾ ಪುರುಷರು, ಹೊಸ ಮಾದರಿಯ ಪ್ರಶ್ನೆಗಳು ಸಮಾವೇಶವಾಗಿವೆ. ತೀರ ಹೊಸ ಅಭ್ಯಾಸ ಪತ್ರಿಕೆಯಂತೆ ಅದೆ. ಬೆಲೆ ಒಂದೇ ರೂಪಾಯಿ.

ಕೆ. ಎಸ್. ಕುಲಕರ್ಣಿ ಬುಕ್ ಡಿಪೊ
ಹುಬ್ಬಳ್ಳಿ

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ !!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯಗಳಿಗೆ ಶ್ರೇಷ್ಠ ಸಾಹಿತ್ಯ ಬೇಕಲ್ಲವೇ ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಕಿಗೆ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯಬೇಕಾಗಿ ಬಿನ್ನಹ.

ಶ್ರೀ. ಪಾವಟೆ ಚೆನ್ನಪ್ಪನವರು ಪ್ರ್ಯಾಕ್ಟಿಸಿಂಗ ಸ್ಕೂಲ ಶಿಕ್ಷಕರು ಧಾರವಾಡ ಅವರಿಂದ ರಚಿತವಾದ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ	೦–೫–೦
೨) ಶಾಂತಿಸಮರ	೦–೪–೦
೩) ಕಿರಣ (ಗದ್ಯಸಂಗ್ರಹ)	೧–೮–೦
೪) ವಿವೇಕ (ಏಕಾಂಕ ನಾಟಕ)	೦–೪–೦

ನಿರಕ್ಷರ ಪ್ರೌಢರ ಸಲುವಾಗಿ ಹೊತ್ತಿಗೆಗಳು

೫) ಅಶಿಕ್ಷಿತರ ಗೋಳು (ಏಕಾಂಕ ನಾಟಕ) ೦–೩–೦

(ಇದು ಸರಕಾರದಿಂದ ಲಾಯಬ್ರರಿ ಪುಸ್ತಕವೆಂದು ಮಂಜೂರಾಗಿದೆ.)

೬) ವಯಸ್ಕರ ಪದ್ಯಾವಲಿ	೦–೮–೦

ಅಚ್ಚಾಗಲಿರುವ ಪುಸ್ತಕಗಳು

೭) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ

ನವಿನ ಚೆನ್ನಪ್ಪ ಪಾವಟೆ
ಜಯನಿಲಯ ಪ್ರಕಾಶನ ಸಮಿತಿ, ಲೈನಬಜಾರ
ಧಾರವಾಡ

ನೂತನ ಗಣಿತ

ಲೇಖಕರು:-ಶ್ರೀ. ಕೆ. ಕೆ. ಗಲಗಲಿ.

ಇದರಲ್ಲಿ ಗಣಿತ ವಿಷಯವಲ್ಲದೆ ಶನೆಯ ಇಯತ್ತೆಯ ಭೂಮಿತಿ ಮತ್ತು ದೇಶಿ ಜಮಾಖರ್ಚಿನ ವಿಷಯಗಳೂ ಇವೆ. ಬೆಲೆ ೧—೪—೦ ಇದಲ್ಲದೆ ನಮ್ಮಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಎಲ್ಲ ತರದ ಪುಸ್ತಕಗಳೂ ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆಳಗಿನ ಪತ್ತೆಗೆ ಬರೆಯಿರಿ:—

ಆಕಳವಾಡಿ ಬುಕ್ ಡಿಪೊ
ವಿಜಯರೋಡ, ಧಾರವಾಡ

ಕನ್ನಡ ಪ್ರಾಥಮಿಕ ಶಿಕ್ಷಣ





ಅಗಸ್ಟ ೧೯೪೮

ಬಿಡಿ ಸಂಚಿಕೆ
೬ ಆಣೆ

ವಾರ್ಷಿಕ ಚಂದಾ
೪ ರೂ.

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿಗೆ
ಮಾನ್ಯ ಶ್ರೀ. ಎಂ. ಪಿ. ಪಾಟೀಲರ ಭೇಟ್ಟಿ



(೧) ಶ್ರೀ. ಚಿಕ್ಕಶೆಟ್ಟಿ (೨) ಶ್ರೀ. ಸಾಂಗ (ಇ. ಆಯಿ) (೩) ಶ್ರೀ. ಎಂ. ಪಿ. ಪಾಟೀಲ (ಜಕ್ಕಲತ ಹಾಗೂ ಅರಣ್ಯಖಾತೆಯ ಮಂತ್ರಿಗಳು), (೪) ಶ್ರೀ. ಸಾಲ್ಲಿಪ್ಪ ಹಂಚಕೇರಿ (೫) ಶ್ರೀ. ಲಕ್ಕುಂಡಿ

ಪರಿವಿಡಿ

●

೧.	ಸಂಪಾದಕೀಯ	೩	೮. ಸರ್ವಧರ್ಮಗಳಲ್ಲಿ ಸಮಭಾವ. ೧೮
೨.	ಮುಖ್ಯ ಪರೀಕ್ಷೆಯ ಹಾಜರಿ ದಿನಗಳು	೪	೯. ಮೂಲ ಶಿಕ್ಷಣದಲ್ಲಿ ಬಡಿಗತನದ ಸ್ಥಾನ. ೨೦
೩	ಶಿಕ್ಷಣದಲ್ಲಿ ಸಾಮುದಾಯಿಕ ಜೀವನದ ಸ್ಥಾನ	೫	೧೦. ನಿಸ್ವಾರ್ಥ ಕಾರ್ಯಕರ್ತರಾಗಿರಿ. ೨೩
			೧೧. ಹಾರಿಸೆ ಪಾಸವರಕೆ (ಕೂಚುಗೀತ) ೨೫

ಕನ್ನಡ ಪ್ರಾಥಮಿಕ ಶಿಕ್ಷಣ



ಪ್ರಧಾನ ಸಂಪಾದಕರು: ರ. ಕೃ. ಲಕ್ಕುಂಡಿ.

ಸಂಪುಟ ೮೮	ಅಗಸ್ಟ ೧೯೪೮	ಸಂಚಿಕೆ ೩

ಸಂಪಾದಕೀಯ

ಪ್ರಥಮ ಸ್ವಾತಂತ್ರ್ಯೋತ್ಸವ ಮತ್ತು ದೇಶಸೇವಾವ್ರತಃ

ನಮ್ಮ ಸ್ವತಂತ್ರ ಭಾರತದ ಅ ಚ್ಚುಮೆಚ್ಚಿನ, ಸರ್ವಜನಾದರಣೀಯ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಪ್ರಥಮ ಸ್ವಾತಂತ್ರ್ಯೋತ್ಸವದ ಕಾಲಕ್ಕೆ ಕೊಟ್ಟ ಸಂದೇಶವು ಸಕಾಲಿಕವೂ ಮನನೀಯವೂ ಆಗಿದೆ. ಪಂಡಿತ ಜವಾಹರಲಾಲರ ಸಂದೇಶವು ಇಂತಿದೆ—

ಅಗಸ್ಟ ೧೫ನೆಯ ದಿನವು ಬಂದಿತು; ಸ್ವಾತಂತ್ರ್ಯ ಪ್ರಾಪ್ತಿಯ ಬಗ್ಗೆ ನಮಗೆ ಸಂಕೋಷವು ಅವಶ್ಯವಾಗಿ ಆಯಿತು- ಆದರೆ ನಮ್ಮ ಮನಸ್ಸಿನಲ್ಲಿ ದೇಶದ ವಿಭಜನೆಯ ನೋವು ಮಾತ್ರ ಇತ್ತು. ನಾವು ಸ್ವಾತಂತ್ರ್ಯದ ಸುಫಲಗಳನ್ನು ಆಶಿಸತೊಡಗಿದೆವು. ಸ್ವಾತಂತ್ರ್ಯಸೂರ್ಯನನ್ನು ಆವಾಹನಮಾಡಿಕೊಂಡೆವು ಮತ್ತು ಸ್ವಾತಂತ್ರ್ಯದ ಸುಫಲಗಳನ್ನು ಆಶಿಸತೊಡಗಿದೆವು- ಸ್ವಾತಂತ್ರ್ಯ ಸೂರ್ಯನು ಉದಯಿಸಿದ, ಆದರೆ ಕೂಡಲೆ ಅವನನ್ನು ಕಾರ್ಮೋಡಗಳು ಮುತ್ತಿದವು ಹಾಗು ಅವನ ಪ್ರಕಾಶ ನಮಗೆ ಮಂದವಾಯಿತು. ಕತ್ತಲು ಇನ್ನೂ ದೂರವಾಗಿಲ್ಲ. ಸ್ವಾತಂತ್ರ್ಯದ ಸೂರ್ಯನು ನಮ್ಮ ಮೇಲೆ ಹೊಳೆಯಬೇಕಾಗಿದೆ. ಸ್ವಾತಂತ್ರ್ಯವು ರಾಜಕೀಯ ವಿಷಯ, ಹೊಸ ಕಾನೂನು ಅಥವಾ ಇದಕ್ಕೂ ಹೆಚ್ಚು ಮಹತ್ವಪೂರ್ಣವಾದ ಆರ್ಥಿಕ ಸಮಸ್ಯೆಗಳು, ಇವುಗಳ ವರೆಗೆ ಮಾತ್ರ ಸೀಮಿತವಾಗಲಾರದು ನಿಜವಾದ ಸ್ವಾತಂತ್ರ್ಯದ ಸಂಬಂಧ ಮನಸ್ಸು ಹಾಗೂ ಹೃದಯದೊಡನೆ ಇರುತ್ತದೆ. ನಮ್ಮ ಮನಸ್ಸು ಸಂಕೀರ್ಣವಿದ್ದರೆ, ಅಥವಾ ನಮ್ಮ ಹೃದಯಗಳಲ್ಲಿ ದ್ವೇಷವಿದ್ದರೆ, ನಿಜವಾದ ಸ್ವಾತಂತ್ರ್ಯವನ್ನು ನಾವು ಇನ್ನೂ ಪಡೆಯಬೇಕಾಗಿದೆ ಎಂದು ಹೇಳಬೇಕಾಗುತ್ತದೆ.

ಇಂದು ಪುನಃ ಅಗಸ್ಟ ೧೫ನೇಯ ತಾರೀಖು. ಅದರ ನಂತರ ಈ ವರ್ಷದಲ್ಲಿ ನಡೆದುದು ನಮಗೆ ಪುನೀತವಾಗಿದೆ. ಕಳೆದ ವರ್ಷದಲ್ಲಿ ನಮಗೆ ಸಾಕಷ್ಟು ಯಶಸ್ಸು ದೊರೆತಿದೆ ಮತ್ತು ನಾವು ರಾಷ್ಟ್ರ ನಿರ್ಮಾಣದ ದಾರಿಯಲ್ಲಿ ಅವಶ್ಯವಾಗಿ ಸ್ವಲ್ಪ ಮುಂದುವರೆದಿದ್ದೇವೆ. ಕಳೆದ ವರುಷವು ನಮಗೆ ಘೋರ ಸಂತಾಪದ್ದೂ ದುಃಖದ್ದೂ ಆಗಿದೆ, ಏಕೆಂದರೆನಾವು ಭಾರತದ ಗೌರವಮಯ ಪರಂಪರೆಗೆ ವಿಶ್ವಾಸಪಾತ್ರರಾಗಿ ಉಳಿಯಲಿಲ್ಲ. ಹಿಂದಿನ ವರುಷದಲ್ಲಿ ನಮ್ಮ ದೇಶದಲ್ಲಿ ರಾಕ್ಷಸನಿಗೆ ಗೆಲುವಾಯಿತು, ಅದರ ಘೋರ ದುಷ್ಪರಿಣಾಮವು ರಾಷ್ಟ್ರಪಿತಾ ಗಾಂಧೀಜಿಯ ಕೊಲೆಯಲ್ಲಿ ಗೋಚರಿಸಿತು. ನಮಗೆ ಇದಕ್ಕೂ ಹೆಚ್ಚಿನ ನಾಚಿಕೆಯ ಮತ್ತು ದುಃಖದ ವಿಷಯವು ಬೇರೊಂದಿದೆಯೆ ?

ನಾವು ಈ ಪವಿತ್ರ ದಿವಸವನ್ನು ಆಚರಿಸಬೇಕಾಗಿದೆ; ಆದರೆ ಅದನ್ನು ನಾವು ಮಿಥ್ಯಾ ಆಡಂಬರ, ಹುರುಳಿಲ್ಲದ ಘೋಷಣೆ ಅಥವಾ ಪ್ರದರ್ಶನಗಳಿಂದ ಆಚರಿಸದೆ ಸತ್ಯತನದಿಂದ ಆಚರಿಸಬೇಕು. ಇಂದಿನ ದಿನವು ನಮಗೆ ಆತ್ಮನಿರೀಕ್ಷಣೆ ಮತ್ತು ಹಿಂದಿನ ಪ್ರತಿಜ್ಞೆಗಳ ಪುನರಾವೃತ್ತಿ ಮಾಡುವ ದಿನವಾಗಬೇಕು. ನಮಗೆ ದೊರೆತ ಸಾಫಲ್ಯ ವೆಷ್ಟು ಎಂಬುದರ ಕಡೆಗೆ ಗಮನಕೊಡುವುದಕ್ಕಿಂತ ನಾವು ಏನೇನು ತಪ್ಪುಮಾಡಿದೆವು ಎಂಬುದರ ಕಡೆಗೆ ಗಮನಕೊಡುವುದು ಅವಶ್ಯವಾಗಿದೆ. ನಾವು ಇಂದು ಮನೆಮಾರು ಕಳೆದುಕೊಂಡು ಅಲೆಯುವ ಲಕ್ಷಾಂತರ ನಿರಾಶ್ರಿತರ ಶೋಚನೀಯ ದೆಸೆಯನ್ನು ಕುರಿತು ವಿಚಾರಮಾಡಬೇಕು. ಇಂದಿಗೂ ಪೀಡಿತವಾಗಿರುವ ಮತ್ತು ನಮ್ಮನ್ನು ನಂಬಿ ಕುಳಿತ ಭಾರತದ ಸಾಮಾನ್ಯ ಜನತೆಯ ಕಡೆಗೂ ಲಕ್ಷ್ಯ ಕೊಡಬೇಕಾಗಿದೆ.

ನಮ್ಮ ದೇಶದ ನಕಾಶೆಯನ್ನೇ ಬದಲಿಸುವಂಥ ಸಾರ್ವಜನಿಕ ಹಿತಗಳ ಬಗ್ಗೆ ಉಪಯೋಗಿಸಬೇಕಾದ ಶ್ರೇಷ್ಠ ಸಾಧನಗಳ ಕಡೆಗೂ ನಾವು ಲಕ್ಷ್ಯವೀಯಬೇಕಾಗಿದೆ. ಬನ್ನಿರಿ ಈ ಮಹಾನ್ ಕಾರ್ಯಕ್ಕಾಗಿ ನಾವೆಲ್ಲರೂ ಸೇವೆಯನ್ನು ಸಲ್ಲಿಸೋಣ. ಆದರೆ, ಇದರೊಡನೆಯೇ, ನಾವು ಮಹಾತ್ಮಾ ಗಾಂಧಿಯ ಶ್ರೇಷ್ಠ ಉಪದೇಶಗಳನ್ನೂ ಆದರ್ಶಗಳನ್ನೂ ಸ್ಮರಣದಲ್ಲಿಟ್ಟುಕೊಳ್ಳೋಣ. ಒಂದು ವೇಳೆ ನಾವು ಅವನ್ನು ಮರೆತರೆ ದೇಶದ ಬಗ್ಗೆ ವಿಶ್ವಾಸಘಾತಮಾಡಿದಂತಾಗುವುದು.

ಆದ್ದರಿಂದ, ಸ್ವಾತಂತ್ರ್ಯದ ಈ ಪ್ರಥಮ ವಾರ್ಷಿಕೋತ್ಸವದ ಸಮಾರಂಭದಲ್ಲಿ ನಾವೆಲ್ಲರೂ ನಮ್ಮ ದೇಶ ಮತ್ತು ದೇಶವಾಸಿಗಳ ಸೇವೆಯ ವ್ರತವನ್ನು ಪುನಃ ತೆಗೆದುಕೊಳ್ಳೋಣ, ನಾವೆಲ್ಲರೂ ಸ್ವತಂತ್ರ ಭಾರತಕ್ಕೆ ಯೋಗ್ಯರಾಗೋಣ.

ಜಯಹಿಂದ !

ನಂಬರ— ಎಸ್—೬೨ (ಜಿ)— ೨೧೬-ಡಿ.

ಪುಣೆ, ೩೦ ನೆಯ ಜುಲೈ, ೧೯೪೮.

ಎಲ್ಲ ಸ್ಕೂಲ-ಬೋರ್ಡುಗಳ ಅಡ್ಮಿನಿಸ್ಟ್ರೇಟಿವ್ ಆಫೀಸರರಿಗೆ,
(ಡಿ. ಎಸ್. ಬಿ. ಮತ್ತು ಎಲ್. ಎ. ಮುನಸಿಪಲ್). ಇತ್ಯಾದಿ.

ವಿಷಯ: **ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ.**

ಪರೀಕ್ಷೆಗೆ ಕೂಡಬಯಸುವ ಉಮೇದವಾರರ ಸಲುವಾಗಿ ಅವರು ಆ ಶಾಲಾವರ್ಷದಲ್ಲಿ ಶಾಲೆಯಲ್ಲಿ ಹಾಜರಿರಬೇಕಾದ ದಿನಗಳನ್ನು ಗೊತ್ತುಪಡಿಸುವಿಕೆ.

(ಪ್ರಾಥಮಿಕಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಕೂಡುವ ಉಮೇದವಾರರಸಲುವಾಗಿ ಅವರು ಆಶಾಲಾ ವರ್ಷದಲ್ಲಿ ಶಾಲೆಯಲ್ಲಿ ಹಾಜರಿದ್ದಿರಬೇಕಾದ ದಿನಗಳ ಸಂಖ್ಯೆಯು ೧೨೦ ಇರಬೇಕೆಂದು ಗೊತ್ತುಪಡಿಸಿರುವ ಹೊಸ ನಿಯಮವನ್ನು ಉದ್ದೇಶಿಸಿ), ಸರಕಾರದಿಂದ ಮಾನ್ಯತೆ ಪಡೆದ ಪ್ರಾಥಮಿಕ ಶಾಲೆಯ ೭ನೆಯ ಇಯತ್ತೆಯಲ್ಲಿ ಹಾಜರಿಯು ಯಾವದಿನದಿಂದ ಎಣಿಸಲ್ಪಡಬೇಕೆಂಬುದರ ವಿಷಯದಲ್ಲಿ ಪ್ರಶ್ನೆಯೊಂದನ್ನು ಎತ್ತಲಾಗಿದೆ. ಶಾಲೆಯ ಟರ್ಮು (ಅವಧಿ) ಗಳ ಬಗ್ಗೆ ಮಾಡಲಾಗಿರುವ ಹೊಸ ವ್ಯವಸ್ಥೆಗನುಸಾರವಾಗಿ, ಪ್ರಾಥಮಿಕ ಶಾಲೆಗಳಲ್ಲಿಯ ವಾರ್ಷಿಕ ಪರೀಕ್ಷೆಗಳು ಫೆಬ್ರುವರಿ ತಿಂಗಳದ ಮಧ್ಯಕ್ಕೆ ತೆಗೆದುಕೊಳ್ಳಲ್ಪಡುವವು, ಮತ್ತು ಅದೇ ತಿಂಗಳದ ಕೊನೆಯದಾದ ಶಾಲೆ ನಡೆಯುವ ದಿನದಲ್ಲಿ ಪರೀಕ್ಷೆಗಳ ಪರಿಣಾಮಗಳನ್ನು ತಿಳಿಸಿ ಬಾಲಕಬಾಲಿಕೆಯರನ್ನು ಮೇಲಿನ ಇಯತ್ತೆಗಳಿಗೆ ಹಾಕುವ ಕಾರ್ಯವು ನಡೆಯುವದು. ಹೊಸ ಶಾಲಾ-ವರ್ಷವು ಮಾರ್ಚ ತಿಂಗಳದಿಂದ ಪ್ರಾರಂಭವಾಗುವದು. ಆದ್ದರಿಂದ, ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಉದ್ದೇಶಗಳಿಗಾಗಿ ಅವಶ್ಯವಿರುವ ೧೨೦ ದಿನಗಳ ಹಾಜರಿ-ಸಂಖ್ಯೆಯನ್ನು ೭ನೆಯ ಇಯತ್ತೆಗೆ (ಮೇಲೆ) ಹಾಕಲ್ಪಟ್ಟ ತಾರೀಖಿನಿಂದ ಎಣಿಸತಕ್ಕದ್ದು. ಈಗ, ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು ಪ್ರತಿವರ್ಷ ಎಪ್ರಿಲ ತಿಂಗಳಲ್ಲಿ ನಡೆಯುತ್ತಿರುವದು- ಈ ದೃಷ್ಟಿಯಿಂದ, ಈ ಪರೀಕ್ಷೆಗೆ ಕೂಡುವ ಉಮೇದವಾರನು ಶಾಲೆಯಲ್ಲಿ ಆ ಶಾಲಾ-ವರ್ಷದಲ್ಲಿ ತುಂಬಬೇಕೆಂದು ಗೊತ್ತುಪಡಿಸಿರುವ ಹಾಜರಿ-ದಿನಗಳ ಸಂಖ್ಯೆಯನ್ನು ಆ ವರ್ಷದ ಮಾರ್ಚ ತಿಂಗಳದ ೧ನೆಯ ತಾರೀಖಿಗೇ ತುಂಬಿ ಮುಗಿಸಿರಬೇಕೆಂದು ಈ ಒಳಗಾಗಿಯೆ ಗೊತ್ತುಮಾಡಲಾಗಿದೆ. *

ನಿಮ್ಮ ವಿಶ್ವಾಸಿಗ,
ಸಹಿ|— * * *
ಡಾಯರೆಕ್ಟರ ಆಫ ಪಬ್ಲಿಕ್ ಇನಸ್ಟ್ರಕ್ಶನ
ಅವರ ಪರವಾಗಿ

---

*ಟೀಪು:— ಉದಾಹರಣೆಗಾಗಿ, ೧೯೪೮ನೆಯ ಇಸವಿ ಎಪ್ರಿಲ ತಿಂಗಳಲ್ಲಿ ನಡೆಯುವ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಕೂಡ ಬಯಸುವ ವಿದ್ಯಾರ್ಥಿಯು ಸರಕಾರದಿಂದ ಮಾನ್ಯತೆ ಪಡೆದ ಪ್ರಾಥಮಿಕ ಶಾಲೆಯಲ್ಲಿಯ ೭ನೆಯ ಇಯತ್ತೆಯಲ್ಲಿ ೧೯೪೮ನೆಯ ಇಸವಿಯ ಮಾರ್ಚ ತಿಂಗಳದ ೧ನೆಯ ತಾರೀಖಿನಿಂದ ೧೯೪೯ನೆಯ ಇಸವಿಯ ಫೆಬ್ರುವರಿ ತಿಂಗಳದ ಕೊನೆಯ ಶಾಲೆ-ನಡೆಯುವ ದಿನ, ಸಹಿತವಾಗಿ ಶಾಲಾ ವರ್ಷದಲ್ಲಿ ಹಾಜರಿರಬೇಕಾದ ೧೨೦ ದಿನಗಳ ಹಾಜರಿಯನ್ನು ತುಂಬಿ ಮುಗಿಸಿರಬೇಕು

—ಪ್ರಧಾನ ಸಂಪಾದಕರು.

ಶಿಕ್ಷಣದಲ್ಲಿ ಸಾಮುದಾಯಿಕ ಜೀವನದ ಸ್ಥಾನ

ಬರೆಹಗಾರರು: ಶ್ರೀ. ನೀ. ರೇ. ಹಿರೇಮಠ, ಅಸಿಸ್ಟಂಟ ಲೆಕ್ಚರರ,
ಗ್ರ್ಯಾಜುಯೇಟ್ಸ ಬೇಸಿಕ್ ಟ್ರೇನಿಂಗ ಕಾಲೇಜ, ಧಾರವಾಡ.

●

ಮಾನವ ಶಿಶು ತನ್ನ ಆಯುಷ್ಯದ ಬಹು ಭಾಗವನ್ನು ಕಲಿಯುವದರಲ್ಲಿ ಕಳೆಯಬೇಕೆಂದು ನಿಸರ್ಗದ ನಿಯಮವಿದೆಯೆಂದು ಶಿಕ್ಷಣ ತಜ್ಞರ ಮತವಿದೆ. ನೈಸರ್ಗಿಕ ಕ್ರಿಯೆಗಳಾದ ಶರೀರದ ಅವಯವಗಳ ಮೇಲಿನ ಪ್ರಭುತ್ವ, ಆಹಾರ ಸಂಪಾದನೆಯಂತಹ ಪ್ರಾಥಮಿಕ ಅವಶ್ಯಕತೆಗಳನ್ನು ಸಹ ಮಾನವ ಶಿಶುವು ಉತ್ಕ್ರಾಂತಿಯ ಕೆಳಮೆಟ್ಟಲುಗಳಲ್ಲಿರುವ ಕೋಳಿ, ಆಡು, ಮಂಗಗಳ ಮರಿಗಳಿಗಿಂತ ಸಾವಕಾಶವಾಗಿ ಸಾಧಿಸುತ್ತಿದೆ. ಹೀಗೆ ನಿಸರ್ಗವೂ ಮಗುವಿನ ಮೇಲೆ ಕರುಣಾರಹಿತವಾಗಿದೆಯೆಂದರೂ ನಡೆಯುವದು. ಇಷ್ಟಕ್ಕೆ ಮಗುವಿನ ಅಸಹಾಯತೆ ಮುಗಿಯಲಿಲ್ಲ. ನಿಸರ್ಗದ ನಿಯಮಗಳಿಗೆ ತಲೆಬಾಗಿ ಸೃಷ್ಟಿದೇವಿ ನೀಡಿದ ಅನುಕೂಲತೆಗಳ ಮೇಲೆಯೇ ತನ್ನ ಆಹಾರ, ಆಶ್ರಯ, ಆಚ್ಛಾದನಗಳು ಅವಲಂಬಿಸಿದ್ದರೆ ಶಾಲೆಗಳ ಮುಖಾಂತರ ಕೊಡುವ ಶಿಕ್ಷಣದ ಅವಶ್ಯಕತೆಯ ಬಗ್ಗೆ ವಿಚಾರ ಮಾಡುವ ಪ್ರಸಂಗವೇ ಬರುತ್ತಿರಲಿಲ್ಲ. ಆದರೆ ಮಾನವನು ತನ್ನ ತೀಕ್ಷ್ಣವಾದ ನಿರೀಕ್ಷಣೆ, ಸಂಶೋಧನೆ ಶಕ್ತಿಗಳನ್ನು ಉಪಯೋಗಿಸಿ ನಿಸರ್ಗದ ಗುಟ್ಟನ್ನು ಭೇದಿಸಿ ಅವಳೊಡನೆ ಸ್ಪರ್ಧಿಸಿ ತನ್ನದೇ ಆದ ಸುಖದ ಒಂದು ಚಿತ್ರವನ್ನು ಸಮಾಜದ ಮೂಲಕ ನಿರ್ಮಿಸಿದ್ದಾನೆ. ಮೊದಲೆ ಅಸಹಾಯ ಸ್ಥಿತಿಯಲ್ಲಿರುವ ಮಗುವು ಸಾಮಾಜಿಕ ಜೀವನದ ಇಂಗಿತವನ್ನೂ ಅರಿಯಬೇಕಾಗಿದೆ.

ತಂಡಗಳ ರೂಪದಲ್ಲಿದ್ದ ಸಮಾಜವು ಬರಬರುತ್ತಾ ವಿಶಾಲವಾಗುತ್ತ ನಡೆದಿದೆ. ಪರಸ್ಪರ ವಿಚಾರವಿನಿಮಯ ಸಾಧನವಾದ ಭಾಷೆ ಕ್ಲಿಷ್ಟವಾಗುತ್ತ ನಡೆದಿದೆ. ಧರ್ಮ, ನೀತಿ, ವಿವಾಹ ಮುಂತಾದ ಸಮಾಜದ ಕಟ್ಟುನಿಟ್ಟುಗಳು ಮೊದಲಿನಂತೆ ಸಾದಾ ತರಹದವಾಗಿರದೆ ತೊಡಕುಗಳಿಂದ ಕೂಡಿವೆ. ವಿಜ್ಞಾನದ ಸಂಶೋಧನೆಗಳ ಫಲವಾಗಿ ಜೀವನದ ಸೌಕರ್ಯಗಳು ಅಗಣಿತವಾಗಿ ಸುಖದ ಕಲ್ಪನೆಯೂ ಬದಲಾಗಿದೆ. ನಿತ್ಯ ವ್ಯವಹಾರದ ಕ್ಷೇತ್ರವು ವ್ಯಾಪಕವಾಗಿ ಬಹುಮುಖದ್ದಾಗಿದೆ. ಇವೆಲ್ಲವುಗಳ ಸಮನ್ವಯ ಸರಿಯಾದಲ್ಲಿ ಸುಖಕ್ಕೆ ಪಾರವಿಲ್ಲ. ಇಲ್ಲವಾದರೆ "ತೆರಣಿಯ ಹುಳು ತನ್ನ ಸ್ನೇಹದಲ್ಲೊಂದು ಮನೆಯ ಮಾಡಿ ತನ್ನ ಸಾವ ತಂದುಕೊಂಡಂತೆ."

ಮಾನವನು ಯಾವ ಸುಖದ ಸುಂದರ ಚಿತ್ರ ಕಲ್ಪಿಸಿ ಸಮಾಜವನ್ನು ರಚಿಸಿದನೋ ಅದು ಕೈಗೂಡಿದೆಯೇ? ಸಬಲರು ಬಲಹೀನರನ್ನು ರಕ್ಷಿಸಬಹುದು; ಬುದ್ಧಿಯುಳ್ಳವರು ಕಡಿಮೆ ಬುದ್ಧಿಯವರಿಗೆ ತಿಳಿಹೇಳಬಹುದು; ಕಲಾವಿದರು ರಸಿಕರನ್ನು ರಂಜಿಸಬಹುದು. ಒಬ್ಬನ ದುಃಖದಲ್ಲಿ ಎಲ್ಲರೂ ಭಾಗಿಗಳಾಗಿ, ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಪ್ರತಿಯೊಬ್ಬನೂ ದುಡಿದು ಶ್ರಮವಿಭಾಗದಿಂದ ಬಿಡುವಿನ ವೇಳೆ ಹೆಚ್ಚಿಸಿ ಚಿತ್ರಕಲೆ, ಸಾಹಿತ್ಯ, ಸಂಗೀತ, ನಾಟ್ಯ ಮುಂತಾದ ಕಲೋಪಾಸನೆಯಲ್ಲಿ ಆತ್ಮ ವಿಕಾಸವನ್ನು ಕಾಣಬಹುದು; ಸಮಾಜ ರಚನೆಯ ಮೂಲಕ ಹೆಂಡಿರು ಮಕ್ಕಳು ರಕ್ಷಣೆ ಪಡೆದು ಶಾಂತಿಯಿಂದ ಜೀವಿಸಬಹುದು; ಕೊನೆಯದಾಗಿ ತನ್ನಂತೆ ಪರರನ್ನು ತಿಳಿದು ಜನತಾ ಜನಾರ್ದನನ ಸೇವೆಗೈದು ವಿಶ್ವ ಪ್ರೇಮಿಯಾಗಿ "ಮರ್ತ್ಯ ಲೋಕವನ್ನು ಕರ್ತಾರನ ಕಮ್ಮಟವಾಗಿ" ಮಾರ್ಪಡಿಸಿ ಆತ್ಮನು ಪರಮಾತ್ಮನನ್ನು ಕಾಣಬಹುದು. ಇದೇ ಆ ಚಿತ್ರ.

ಆದರೆ ದೊರೆತುದೇನು? ಬಲಶಾಲಿಗಳು ಬಲಹೀನರನ್ನು ಮುರಿದು, ಬುದ್ಧಿಯುಳ್ಳವರು ತಿಳಿಗೇಡಿಗಳನ್ನು ವಂಚಿಸಿ, ಶೋಷಿಸಿ, ಪ್ರತಿಯೊಬ್ಬನೂ ತನ್ನ ಹಿತವನ್ನೇ ಲಕ್ಷಿಸಿ ಮೇಲಾಟ ಮಾಡಿ, ಹಿಂದುಳಿದವನನ್ನು ಭೂತಕ್ಕೆ ಬಲಿ-

ಕೊಟ್ಟು, ಕಲೋಪಾಸನೆ ವಿಲಾಸದ ಕೈಗೊಂಬೆಯಾಗಿ, "ದಯೆಯೇ ಧರ್ಮದ ಮೂಲ" ವಾದರೂ ಧರ್ಮದ ಹೆಸರಿನಿಂದ ಹಸುಗೂಸುಗಳನ್ನು ಮೊಳೆ ಜಡಿದು ಕೊಂದು, ಮಾತೆಯರ ಮಾನಭಂಗ, ಅಪಹರಣದಂತಹ ನೀಚ ಕೃತ್ಯಕ್ಕೆ ಹೇಸದೆ ಮಾನವನು ತನ್ನ ಮುಖಕ್ಕೆ ಮಸಿ ಬಳಿದುಕೊಂಡಿದ್ದಾನೆ. ಕ್ರಮವಿಭಾಗವೆ ಉತ್ಪಾದಕ-ಉಪಭೋಗಿಸುವವ, ಶ್ರೀಮಂತ-ಬಡವ, ದೊರೆ-ಕೂಲಿಕಾರ, ಕುಲವಂತ-ಕುಲಹೀನ, ಸ್ಪೃಶ್ಯ-ಅಸ್ಪೃಶ್ಯಗಳೆಂಬ ದ್ವಂದ್ವಕ್ಕೆ ಎಡೆಕೊಟ್ಟಿತು. ಎಲ್ಲಿ ನೋಡಿದಲ್ಲಿ ಅವಿಶ್ವಾಸ, ಸ್ಪರ್ಧೆ, ಶೋಷಣ, ದ್ವೇಷ, ಜಗಳ, ಕೊಲೆ, ಸುಲಿಗೆಗಳು. ಅಮೇರಿಕೆಯ ಪ್ರಸಿದ್ಧ ವ್ಯಂಗ ಚಿತ್ರಕಾರನಾದ ಲೇನು ಚಿತ್ರಿಸಿದಂತೆ ಸೇಟನನೂ (ಪಿಶಾಚಿಯೂ) ಕೂಡ ಈಗ ನಡೆಯುತ್ತಿರುವ ಘಟನೆಗಳನ್ನು ಕಲಿಯಬಹುದಾಗಿದೆ.

ಈ ರೋಗದ ಕಾರಣವನ್ನು ಹುಡುಕಲು ದೂರ ಹೋಗಬೇಕಿಲ್ಲ. ಸ್ಪರ್ಧೆ, ಶೋಷಣ, ಸ್ವೇಚ್ಛೆಗಳ ತಳಹದಿಯ ಮೇಲೆ ಆಧುನಿಕ ಜನಾಂಗ ಸಾಗಿದೆ. ತಾನು ಸುಖಿಸಿ ಇನ್ನೊಬ್ಬರನ್ನು ಸುಖವಾಗಿಡುವ ಬಂಧು ಪ್ರೇಮ, ಭೂತದಯೆಗಳು ಶಬ್ದ ಕೋಶದ ಮಾತಾಗಿವೆ. ಭೌತ ಶಾಸ್ತ್ರದ ಅಸಾಧಾರಣ ಪ್ರಗತಿಯಾಗಿ ತನ್ನ ಅಳವಿನಲ್ಲಿ ಉಳಿಯದ ಆಯುಧಗಳನ್ನು ಮತ್ತು ಯಂತ್ರಗಳನ್ನು ಮಾನವನು ರಚಿಸಿದ್ದಾನೆ. ಚಕ್ರವ್ಯೂಹ ಕೋಟೆಯನ್ನು ಭೇದಿಸಿ ಒಳಹೊಕ್ಕು ಹೊರಗೆ ಬರುವ ಉಪಾಯ ಕಾಣದ ಅಭಿಮನ್ಯುವಿನಂತಿದೆ ಅವನ ಗತಿ. ತನ್ನ ಸಂಶೋಧನೆಗೆ ಬಲಿಯಾದ ಡಾಕ್ಟರ್ ಜಂಕಿಲ್ ಮತ್ತು ಹೈಡನ ಪಾಡಾಗಿದೆ. ತನ್ನ ಸಂಶೋಧನೆಯನ್ನು ಹಿತವಾಗಿಯೂ ಮಿತವಾಗಿಯೂ ಉಪಯೋಗಿಸುವ ಸಂಯಮನ ಶಕ್ತಿ ಇಲ್ಲದಾಗಿದೆ. ಡಾ|| ಕುಮಾರಪ್ಪನವರ ಮಾತಿನಲ್ಲಿ ಹೇಳಬೇಕಾದರೆ "ಮಾನವನ ಶೀಲ ಅಥವಾ ವ್ಯಕ್ತಿ ವಿಕಾಸವು ಆ ಮಟ್ಟಕ್ಕೆ ಇನ್ನೂ ನಿಲುಕಿಲ್ಲ. ಸಂಶೋಧನೆಯಲ್ಲಿ ಅಡಕವಾದ ಪಾಶವೀ ಶಕ್ತಿಯನ್ನು ತನ್ನ ಅಳವಿನಲ್ಲಿಟ್ಟುಕೊಂಡು ಸಮಾಜಕ್ಕೆ ಹಿತವಾಗುವಂತೆ ರಚನಾತ್ಮಕ ರೀತಿಯಲ್ಲಿ ಬಳಸುವ ಆತ್ಮಶಕ್ತಿ ಮನುಷ್ಯನಲ್ಲಿ ಬಂದಿಲ್ಲ." ಸದ್ಯಃ ಪ್ರಳಯದ ಲಕ್ಷಣಗಳೇ ಎಲ್ಲೆಲ್ಲಿಯೂ ಕಾಣುತ್ತಿವೆ.

ಮಳಲನ್ನು ಬಿತ್ತಿ ಜೋಳ ಒಕ್ಕಬಹುದೇ? ಸುಲಿಗೆಗಾರಿಕೆಯ ಶಾಲೆಯಲ್ಲಿ ಕೊಲೆಗಡಕತನ ಕಲಿಯದೆ ನ್ಯಾಯಾನ್ಯಾಯದ ಪಾಠ ಕಲಿಯಬಹುದೇ? ನಮ್ಮ ಶಿಕ್ಷಣವು ಸ್ಪರ್ಧೆ, ಸರ್ವಾಧಿಕಾರ, ಸ್ವಾರ್ಥ, ಮೇಲು ಕೀಳುಗಳ ತಳಹದಿಯ ಮೇಲೆ ಕಟ್ಟಲ್ಪಡುತ್ತಿರುವಾಗ, ಸಮಾಜದ ಕಂಬಗಳಂತಿರುವ ಸಂಯಮನ, ತ್ಯಾಗ, ಪ್ರೇಮ, ಸಹಕಾರ, ಸೇವೆ ಹೇಗೆ ಕಾಣಬಹುದು? ಇಂತಹ ಆದರ್ಶಗಳನ್ನಿಟ್ಟುಕೊಂಡು ಎಳೆತನದಲ್ಲಿ ಶಿಕ್ಷಣ ಸಾಗಿದರೇನೇ ನಮ್ಮ ಮಕ್ಕಳು ದೊಡ್ಡವರಾಗಿ ರಾಷ್ಟ್ರದ ಸೂತ್ರಗಳನ್ನು ವಹಿಸಿದಾಗ ಅದರ ಫಲ ಕಾಣಬಹುದು. ಇದುವರೆಗಿನ ಶಿಕ್ಷಣದಲ್ಲಿ ಇಂತಹ ಪ್ರಯತ್ನ ಅಲ್ಪ ಪ್ರಮಾಣದಿಂದ ಸಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಸಾಮಾಜಿಕ ಜೀವನದ ಮಹತ್ವವನ್ನರಿತೇ ಬಾಪೂಜಿಯವರು ಹೊಸ ಶಿಕ್ಷಣದಲ್ಲಿ ಅದಕ್ಕೆ ಪ್ರಥಮ ಸ್ಥಾನ ಕೊಟ್ಟಿದ್ದಾರೆ. "ಮೂರು ವರುಷದ ಬುದ್ಧಿ ನೂರು ವರುಷಗಳ ವರೆಗೆ" ಎಂಬುದು ಹೊನ್ನಿನಂತಹ ಮಾತು. ಎಳೆತನದಲ್ಲಿಯೇ ಆ ಆದರ್ಶಗಳು ಬೇರೂರದೆ ಹೋದರೆ ಬಲಿತ ಮೇಲೆ ಕಲಿಸಲು ಸುಲಭ ಸಾಧ್ಯವಲ್ಲ.

ಸದ್ಗುಣಗಳು ಎಂದಿನಿಂದಲೂ ಶಿಕ್ಷಣದ ಆದರ್ಶಗಳಾಗಿವೆ. ಕಥೆ ಕಾದಂಬರಿಗಳ ಮುಖಾಂತರ ಅವುಗಳನ್ನು ಕಲಿಸುವ ಹವ್ಯಾಸ ಎಡೆ ಬಿಡದೆ ನಡೆದು ಬಂದಿದೆ. ಶಿಕ್ಷಣ ತಜ್ಞರು ಶಬ್ದಗಳ ಮುಖಾಂತರ ಈ ಗುಣಗಳನ್ನು ಮಕ್ಕಳ ಜೀವನದಲ್ಲಿ ಅಳವಡಿಸಲು ಯತ್ನಿಸಿದ್ದಾರೆ. ಆದರೆ ಶಬ್ದ ಒಂದು ಸಂಕೇತ ಮಾತ್ರ; ಅದರ ಹಿಂದೆ ಅನುಭವದ ಆಧಾರ ಇಲ್ಲದೆ ಹೋದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಪುಸ್ತಕ ಓದಿ ಈಸು ಕಲಿಯಲು ಸಾಧ್ಯವಿಲ್ಲವೆಂಬುದನ್ನು ಎಲ್ಲರೂ ನಂಬುತ್ತಾರೆ. ಇದೇ ಮಾತು ಜೀವನದ ಇತರ ವ್ಯವಹಾರಗಳಿಗೂ ಅನ್ವಯಿಸುತ್ತದೆ ಎಂಬುದನ್ನು ಶಿಕ್ಷಣ ತಜ್ಞರು ಮರೆತಂತೆ ತೋರುತ್ತದೆ. ಹಾಸಿಗೆಯಲ್ಲಿ ಕಾಲು ಬಡಿದರೆ ಈಸು ಬಾರದು. ನೀರಲ್ಲಿ ಬೀಳಬೇಕು. ಅಂದರೆ ಅದಕ್ಕೆ ತಕ್ಕುದಾದ ಸನ್ನಿವೇಶ ಬೇಕು. ಅಂತೆಯೇ ಆದರ್ಶ ಸಮಾಜ ಜೀವಿಯಾಗಬೇಕಾದರೆ ಮಗುವು ಅಂತಹ ಆದರ್ಶದಲ್ಲಿ ಬೆಳೆಯಬೇಕು. ನಮ್ಮ ಶಾಲೆ ಅಂತಹ ಶೋಷಣರಹಿತ, ವರ್ಗರಹಿತ, ಸಹಕಾರ ಪೂರಿತ ಸಮಾಜವಾಗಿ ಮಾರ್ಪಡಬೇಕು. ಮಗುವಿನಲ್ಲಿ ಅಗಾಧವಾದ ಕುತೂಹಲ ನಿರೀಕ್ಷಣಾ ಶಕ್ತಿ, ಅನುಕರಣ ಶಕ್ತಿಗಳು ಇವೆ. ಶಬ್ದ ಜಾಲವನ್ನು ಅವನು ಅರಿಯ. ಆದರೆ ಕೃತಿಯನ್ನು ಅವನು ತೂಗಬಲ್ಲ; ಅನುಕರಿಸಬಲ್ಲ.

"ಮಗುವನ್ನು ಆವರಿಸುವ ಪ್ರತಿಯೊಂದು ಸಂಗತಿಯು ಕಾರ್ಯಪ್ರವೃತ್ತನನ್ನಾಗಿ ಮಾಡಲು ಮಗುವಿಗೆ ಪ್ರೇರಕವಾಗಿ ಅವನ ಶಕ್ತಿಗಳನ್ನು ಮತ್ತು ಶೀಲವನ್ನು ಬೆಳೆಸಲು ಸಹಾಯ ಮಾಡುತ್ತದೆ." ಎಂದು ಪೆಸ್ಟಲಾಜಿಯ ಆದರ್ಶ ಶಾಲೆಯ ಸಾಮುದಾಯಿಕ ಜೀವನವನ್ನು ನಿರೀಕ್ಷಿಸಿದ ಜುಲಿಯನ್ನನು ಬರೆದಿದ್ದಾನೆ. ಶಾಲೆಯಲ್ಲಿ ಸಾಮುದಾಯಿಕ ಜೀವನದ ಮುಖ್ಯ ಉದ್ದೇಶವನ್ನು ಅದೇ ಬರೆಹಗಾರನು ಹೇಳುವಂತೆ " ಬಾಲ್ಯದಿಂದಲೂ ಸಮಾಜದ ಬಹು-ಮುಖ್ಯವಾದ ಸಂಬಂಧಗಳನ್ನು ಬೆಳೆಯಿಸಿ, ಅದರ ಮಧ್ಯದಲ್ಲಿ ಮಗುವನ್ನು ಉಮೇದವಾರನನ್ನಾಗಿ ಇರಿಸಿ, ಒಂದಿಲ್ಲೊಂದು ದಿನ ಅವನು ನಿರ್ವಹಿಸಲೇಬೇಕಾದ, ಮಾನವನ ಸೊತ್ತಾದ ಸಮಾಜ ಜೀವನದಲ್ಲಿ ಭಾಗ ವಹಿಸಲು ಅಣಿ ಮಾಡುವದು" ಇದೆ.

ಇನ್ನೊಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಕಾಲ್ಪನಿಕ ಇಲ್ಲವೆ ತೋರಿಕೆಯ, ಅಥವಾ ಮಕ್ಕಳ ಅಳವಿಗೆ ಮೀರಿದ ಸಮಾಜ ಜೀವನದಿಂದ ಯಾವ ಲಾಭವೂ ಆಗಲಾರದು. ತೋರಿಕೆ ಮತ್ತು ನಿಜತ್ವದ ಅಂತರದ ಕಲ್ಪನೆ ೩–೪ ವರುಷದ ಮಗುವಿಗೆ ಕೆಲಮಟ್ಟಿಗೆ ಆಗುತ್ತದೆಂಬುದು ಮಕ್ಕಳ ಆಡಿಗೆಯ ಆಟ, ಹೊಲಕ್ಕೆ ಹೋಗುವ ಆಟ ಮುಂತಾದವುಗಳನ್ನು ನಿರೀಕ್ಷಿಸಿದವರಿಗೆ ಹೊಸದಲ್ಲ. ಶಾಲೆಯ ಸಾಮುದಾಯಿಕ ಜೀವನದಲ್ಲಿ ಮಕ್ಕಳ ಸಮಸ್ಯೆಗಳಿಗೇ ಪ್ರಥಮ ಸ್ಥಾನವಿರಬೇಕಲ್ಲದೆ, ಅವರು ತಮ್ಮದಾದ ರೀತಿಯಲ್ಲಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಅವಕಾಶವಿರಬೇಕು. ಈ ಕಾರ್ಯ ಶಿಕ್ಷಕನ ಮಾರ್ಗದರ್ಶಕತ್ವದಲ್ಲಿ ಸಾಗಬೇಕಲ್ಲದೆ ಅವನ ಸರ್ವಾಧಿಕಾರತ್ವದಲ್ಲಿ ಅಲ್ಲ.

ಪ್ರಾಮಾಣಿಕತನ, ಶಿಸ್ತು, ಸ್ವಚ್ಛತೆಯ ಚಟ, ಸಹಕಾರ, ಪರೋಪಕಾರ ಮನೋವೃತ್ತಿ, ಮುಂದಾಳುತನ, ನಿಸ್ವಾರ್ಥ ಸೇವಾಬುದ್ಧಿ, ಭಾಷೆಯ ಸದುಪಯೋಗ ಮುಂತಾದ ಸದ್ಗುಣಗಳನ್ನು ಶಾಲೆಯ ಸಾಮುದಾಯಿಕ ಜೀವನದ ವಿವಿಧ ಸನ್ನಿವೇಶಗಳ ಮೂಲಕ ಪ್ರತ್ಯಕ್ಷ ಅನುಭವ ಮಾಡಿಕೊಡಬಹುದು. ಶಾಲೆಯ ಕಾರ್ಯಕಲಾಪಗಳನ್ನು ಸಾಗಿಸುವ ಹೊಣೆ ಹೊತ್ತ ಬಾಲ ಮಂತ್ರಿಮಂಡಳವು ಪ್ರಜಾಪ್ರಭುತ್ವದ ಮೂಲಭೂತ ತತ್ವಗಳನ್ನು ಅಳವಡಿಸಿಕೊಳ್ಳುವಲ್ಲಿ ಸಹಾಯವಾಗುತ್ತದೆ. ಎಳೆತನದಲ್ಲಿಯೇ ಇಂತಹ ಆದರ್ಶಗಳ ಮಾರ್ಗದಲ್ಲಿ ನಡೆಯುವದು ಮಗುವಿನ ಮನೋವಿಕಾಸಕ್ಕೆ ಒಗ್ಗುವದೇ? ಅದು ಮಗುವಿನ ಮಾನಸಶಾಸ್ತ್ರಕ್ಕೆ ಸಹಜವಾದುದೇ? ಎಂದು ಶಂಕಿಸಬಹುದು. ಇದಕ್ಕೆ ಉತ್ತರವಾಗಿ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ನಡೆಯುತ್ತಲಿರುವ "ಆಕ್ಟಿವ್ಹಿಟಿ ಸ್ಕೂಲ" (ಜೀವನ ಶಿಕ್ಷಣ) ಆಂದೋಲನದ ಮುಂದಾಳುವೆನಿಸಿದ ಡಾ|| ಅಡಾಲ್ಫ ಫೆರಿಯರನನ್ನು ಉದಾಹರಿಸಬಹುದು.

"ನಿಜ ಜೀವನದ ಕರ್ತವ್ಯಗಳ ಸಂಪರ್ಕದಲ್ಲಿ ಬರಲು ಮಗುವು ಅವುಗಳನ್ನು ಹೆಚ್ಚಾದ ಉತ್ಸಾಹದಿಂದಲೂ ತ್ಯಾಗಬುದ್ಧಿಯಿಂದಲೂ ಕೈಕೊಳ್ಳುತ್ತಾನೆ. ಯಾಕಂದರೆ ತನ್ನ ಪ್ರತಿಭಾ ಪೂರ್ಣವಾದ ಸ್ವಭಾವದ ಅಪ್ಪಣೆಗೆ ತಲೆಬಾಗಿ ಅವುಗಳನ್ನು ತೀವ್ರವಾಗಿ ತಿಳಿಯಲು ಅವನು ಕಲಿತಿರುತ್ತಾನೆ." ಶಿಕ್ಷಣದಲ್ಲಿ ಕೃತಿ ಪ್ರಾಧಾನ್ಯತೆಯ ಮಹತ್ವವನ್ನು ಜೇನ್ ಮೇರಿ ಗಯಸ್ ಎಂಬ ಫ್ರೆಂಚ ಬರೆಹಗಾರನು ಸ್ವಾರಸ್ಯಮಯವಾಗಿ ಹೇಳಿದ್ದಾನೆ.

" ತೋರಿಕೆಯ ಅಥವಾ ಶಾಬ್ದಿಕ ಶಿಕ್ಷಣಕ್ಕಿಂತಲೂ ಉತ್ತಮವಾದ ಶಿಕ್ಷಣ ಕ್ರಮವೊಂದಿದೆ; ಕೃತಿಯಿಂದ ಕಲಿಸುವದು. ಸದ್ಯಃ ನಾವು ಕೇವಲ ತೋರಿಸುವದರಿಂದ ತೃಪ್ತಿ ಹೊಂದಿ ಕುಳಿತಿರುವ ಸಂಗತಿಗಳನ್ನು ಮಕ್ಕಳಿಗೇ ಮಾಡಿಸಬಹುದು. ಈ ಪದ್ಧತಿಯು ಹೆಚ್ಚು ಯೋಗ್ಯವಾದುದು. ಕೃತಿಯು ಒಂದು ಪ್ರಕಾರದ ವಾಸ್ತವಿಕ ವಿಚಾರ ಸರಣಿಯು. ಕೃತಿಯ ಮೂಲಕ ವಿಚಾರಗಳು ಮನಸಿನಲ್ಲಿಯೂ ಮತ್ತು ಬೆರಳುಗಳಲ್ಲಿಯೂ ಅಳಿಯದಂತೆ ಕೆತ್ತಲ್ಪಡುತ್ತವೆ."

ಸರ್ವ ಸಾಮಾನ್ಯವಾದ ಮನೆತನದಲ್ಲಿ ಈ ತರಹದ ಶಿಕ್ಷಣದ ಅನುಕೂಲತೆಗಳಾಗಲಿ, ಉದ್ದೇಶಗಳಾಗಲಿ ಇರುವದು ತೀರ ವಿರಳ. ಅದೇ ಶಾಲೆಯಲ್ಲಿಯ ಕಾರ್ಯಕ್ಷೇತ್ರವು ವಿಶಾಲವೂ ವೈವಿಧ್ಯಪೂರ್ಣವಾದುದೂ ಇದ್ದು ಈ ತರಹದ ಚಟುವಟಿಕೆಯ ಉಪಯೋಗವು ಹೇರಳವಾಗಿ ಆಗುವದು.

ಬಂಗಲೆಯನ್ನು ಕಟ್ಟುವದು

(ಒಂದು ಇಂಗ್ಲಿಶ್ ಲೇಖದ ಅನುವಾದ)

ಲೇಖಕರು: ಶ್ರೀ. ರಂ. ರಾ. ಶೇಲಾರ

ವಿವಿಧ ಆಸಕ್ತಿಗಳಿಗಾಗಿ ಒಂದು ಕೇಂದ್ರಸ್ಥಾನ

ಇಂದು ಮಾಧ್ಯಮಿಕ ಶಾಲೆಗಳ ಶಿಕ್ಷಕರು ವಿದ್ಯಾರ್ಥಿಗಳ ಪ್ರತಿ ದಿನದ ಅನುಭವದೊಂದಿಗೆ ಶಾಲೆಯ ವಿಷಯಗಳನ್ನು ಹೆಚ್ಚು ನಿಕಟವಾಗಿ ಸಂಬಂಧೀಕರಿಸಿ ಸಾಂಪ್ರದಾಯಿಕ ಅಭ್ಯಾಸಕ್ರಮವನ್ನು ವಿಸ್ತೃತಗೊಳಿಸುವ ಕಠಿಣ ಕಾರ್ಯವನ್ನು ಎದುರಿಸಬೇಕಾಗಿದೆ. "ಸರ್ರೆ" ಯಲ್ಲಿಯ ಒಂದು ಆಧುನಿಕ ಸಹಶಿಕ್ಷಣ ಮಾಧ್ಯಮಿಕ ಶಾಲೆಯು ಈ ಬೇಡಿಕೆಗಳನ್ನು ಪೂರೈಸಲು ಯಾವ ರೀತಿಯಲ್ಲಿ ಪ್ರಯತ್ನಿಸಿರುವದೆಂಬುದರ ವೃತ್ತಾಂತವು ಇದರಡಿಯಲ್ಲಿದೆ.

ಈ ಶಾಲೆಯಲ್ಲಿ ಒಂದು ಮಾದರಿಯ ಬಂಗಲೆಯನ್ನು ರಚಿಸಬೇಕೆಂದು ನಿಶ್ಚಯಿಸಲಾಯಿತು. ಒಂದು ದಿನ ಇಳಿ ಹೊತ್ತಿನಲ್ಲಿ ಆ ಚಟುವಟಿಕೆಗಾಗಿ ಒಂದು ವಾರವನ್ನು ವಿನಿಯೋಗಿಸಬೇಕೆಂದು ಗೊತ್ತುಮಾಡಿತು; ಬಳಿಕ ಆ ಯೋಜನೆಯು ಸಾಗಿದಂತೆ ಬಂಗಲೆಗೆ ಸಂಬಂಧಿಸಿದ ಬಹಳ ಕೆಲಸವನ್ನು ಮಾಡಬೇಕಾಯಿತು. ಈ ಕೆಲಸವನ್ನು ಇತರ ವಿಷಯಗಳ ಶಿಕ್ಷಣದೊಂದಿಗೆ ಜೋಡಿಸಲಾಯಿತು. ವಾರದಲ್ಲಿಯ ಇತರ ವೇಳೆಗಳಲ್ಲಿ ಇದು ಸಾಗತೊಡಗಿತು.

ಒಂದು ಯೋಗ್ಯವಾದ ಯೋಜನೆಯ ನಕ್ಷೆಯು ಒಪ್ಪಿಗೆಯಾದ ಮೇಲೆ, ಒಬ್ಬ ಸ್ಥಾನಿಕ ವರ್ತಕನಿಂದ ಕೆಲವು ಕಟ್ಟಿಗೆಯ ಪೆಟ್ಟಿಗೆಗಳನ್ನು ಸಂಪಾದಿಸಲಾಯಿತು. ಬಂಗಲೆಯ ಸ್ಥೂಲ ಆಕೃತಿಯು ಕಣ್ಣಿಗೆ ಕಾಣುವ ಹಾಗೆ ಅವನ್ನು ಹೊಂದಿಸಿಟ್ಟ ಬಳಿಕ ಹೆಣ್ಣು ಮಕ್ಕಳ ಸಣ್ಣ ಸಣ್ಣ ಗುಂಪುಗಳಿಗೆ ಅದರಲ್ಲಿ ಆವಶ್ಯಕವಾದ ತಿದ್ದುಪಡಿಗಳನ್ನು ಮಾಡುವ ಕೆಲಸವನ್ನು ಒಪ್ಪಿಸಲಾಯಿತು.

ಈ ಮಟ್ಟದಲ್ಲಿ ಮಕ್ಕಳಿಗೆ ಶಿಕ್ಷಕನ ಕುಶಲ ಮಾರ್ಗದರ್ಶಿತ್ವದ ಆವಶ್ಯಕತೆಯಿದ್ದರೂ ವರ್ಣ ಯೋಜನೆಗಳಲ್ಲಿ ವೈಯಕ್ತಿಕ ಅಭಿರುಚಿಯನ್ನು ವ್ಯಕ್ತಗೊಳಿಸಲು ಅವರನ್ನು ಪ್ರೋತ್ಸಾಹಿಸಲಾಯಿತು. ಕಲಾ ಶಿಕ್ಷಣದ ಕೋಣೆಯಲ್ಲಿ ಆ ಯೋಜನೆಗಳ ಬಣ್ಣದ ಚಿತ್ರಗಳನ್ನು ತೆಗೆಯಿಸಿತು; ಹೆಣ್ಣು ಮಕ್ಕಳು ಕೋಣೆಗಳ ಮಾದರಿಗಳನ್ನು ಮಾಡುವದರಲ್ಲಿ ತೊಡಗಿದಾಗ ಅವರ ಅನುಭವವು ಅವರ ಗೃಹಕೃತ್ಯದ ನೈಜ ಶೃಂಗಾರಗಳಿಗೆ ಶಕ್ಯವಾದಷ್ಟು ನಿಕಟವಾಗಬೇಕೆಂದು ಅವರ ಕಾರ್ಯ ಯೋಜನೆಯನ್ನು ಸಾಧ್ಯವಿದ್ದಷ್ಟಿಗೆ ಕೆಲಸಗಾರರ ರೂಢಿಯನ್ನನುಸರಿಸುವಂತೆ ಮಾಡಲಾಯಿತು.

ಮಾನವತೆಯ ಅಭ್ಯಾಸ:

ಕೊನೆಯದಾಗಿ ಪ್ರತಿಯೊಂದು ಕೋಣೆಯನ್ನು ಕಟ್ಟುವ ಕಾರ್ಯವು ಪೂರ್ಣವಾಗಿ ಅವನ್ನು ಒಟ್ಟುಗೂಡಿಸುವ ಸಮಯವು ಬಂದಿತು. ಈ ಮಟ್ಟದಲ್ಲಿ ಅನೇಕ ಹೊಸ ಪರಿವರ್ತನೆಗಳು ಗೋಚರಿಸಿದವು; ಆ ಕೆಲಸದಲ್ಲಿ ಆಸಕ್ತಿ ಹುಟ್ಟಿದ ಬೇರೆ ಬಾಲಕ ಬಾಲಿಕೆಯರ ಗುಂಪುಗಳಿಗೆ ಇಂಬು ಗೊಡುವಂತೆ ಯೋಜನೆಯು ವಿಸ್ತೃತವಾಯಿತು; ಆ ಬಂಗಲೆಯು ಮಾನವತಾ ವಿಷಯಕ ಅಭ್ಯಾಸದ ಕೇಂದ್ರಬಿಂದುವಾಯಿತು; ರಚನಾಕ್ರಮವನ್ನು ಹೆಚ್ಚು ಸ್ಪಷ್ಟಗೊಳಿಸುವ ಜ್ಞಾನದ ಆವಶ್ಯಕತೆಯುದ್ಭವಿಸಿತು.

ಹಿರಿಯ ಹುಡುಗರ ಒಂದು ಗುಂಪು ಚಪ್ಪರವನ್ನು ರಚಿಸುವ ಕಾರ್ಯದಲ್ಲಿ ಸಹಾಯ ನೀಡುವದಕ್ಕಾಗಿ ಮುಂದೆ ಬಂದಿತು. ಚಪ್ಪರಗಳು ತೆಗೆಯುವದಕ್ಕೂ ಹಾಕುವದಕ್ಕೂ

ಬರುವಂತಿರಬೇಕೆಂದು ಗೊತ್ತುಮಾಡಲಾಯಿತು. ಸರಿಯಾದ ಬಡಿಗತನದ ಕಸಬನ್ನು ಪ್ರದರ್ಶಿಸುವ ಅದರದೊಂದು ಭಾಗವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಮುಚ್ಚದೆ ಬಿಡಬೇಕಾಗಿತ್ತು. ಚಪ್ಪರದ ರಚನಾ ವಿಧಾನದ ಅಭ್ಯಾಸವು ಆಧುನಿಕ ಕಟ್ಟಡ ಸಾಮಗ್ರಿಗಳ ಮತ್ತು ಅವುಗಳ ರಚನಾ ವಿಧಾನಗಳ ಪರೀಕ್ಷೆಯ ಕಡೆಗೆ ಒಯ್ದಿತು. ಸ್ವಾಭಾವಿಕವಾಗಿಯೇ ನೆರೆಯ ಇಟ್ಟಿಗೆಯ ಮತ್ತು ಸುಣ್ಣದ ಕಾರಖಾನೆಗಳನ್ನು ಸಂದರ್ಶಿಸಬೇಕಾಯಿತು. ಬಳಿಕ ಸ್ಥಾನಿಕ ಮಣ್ಣುಗಳ ಪರಿಶೀಲನೆಯು ಮಹತ್ವದ್ದೆನಿಸಿತು. ಅವುಗಳ ಪರೀಕ್ಷೆಯನ್ನು ಮಾಡುವಾಗ ಒಕ್ಕಲುತನದ ಚಟುವಟಿಕೆಗಳ ಅಭ್ಯಾಸವೂ ಹಳ್ಳಿಯ ಪ್ರದೇಶದ ಮೇರೆಗಳ ಶೋಧನೆಯೂ ಸಹಜವಾಗಿ ಸಾಗಿದವು. ಬದಲಾವಣೆ ಮತ್ತು ಸುಧಾರಣೆಗಳ ವಿಷಯದಲ್ಲಿ ಮಕ್ಕಳ ಅರಿವು ಬೆಳೆಯುತ್ತ ಹೋದಂತೆ ಅದರಿಂದ ಮತ್ತೊಂದು ಸ್ವಾಭಾವಿಕ ಪರಿಣಾಮವು ಕಂಡುಬಂದಿತು. ಅದಾವುದೆಂದರೆ, ಗ್ರಾಮರಚನೆ ಹಾಗು ನಗರ ರಚನೆಗಳ ವಿವಿಧಾಂಗಗಳನ್ನು ಅಭ್ಯಸಿಸುವದು. ಯೋಜನೆಯಲ್ಲಿ ಕಡೆತನಕ ಆರ್ಥಿಕ ಭಾಗದ ವಿಚಾರಕ್ಕೆ ಮಹತ್ವ ಕೊಡಲಾಗಿತ್ತು. ಬೇಕಾಗುವ ಸಾಧನ ಸಾಮಗ್ರಿಗಳ ಬೆಲೆಯ ಲೆಕ್ಕವನ್ನು ಮಾಡುವದು, ಮನೆ-ಮಾರುಗಳ ಖರೀದಿಯ ರೀತಿ ಹಾಗು ವಿವಿಧ ಸಾಮಾಜಿಕ ಸೇವೆಗಳ ವಿಷಯದಲ್ಲಿ ಸ್ಥಾನಿಕ ಸರಕಾರವು ಹೇರುವ ಹಣದ ಮೂಲ ಕ್ರಮ ಇವುಗಳನ್ನು ಕುರಿತು ಜ್ಞಾನಾರ್ಜನೆಯ ಆವಶ್ಯಕತೆ ತಲೆದೋರಿತು. ಯೋಜನೆಗಳ ಸಿದ್ಧಿಗಾಗಿ ಅಂದಾಜ ಪತ್ರಿಕೆಯನ್ನು ತಯಾರಿಸುವಾಗ ಬಾಲಿಕೆಯರು ಒಂದು ದೊಡ್ಡ ಸ್ಥಾನಿಕ ವಖಾರವನ್ನು ಸಂದರ್ಶಿಸಿ ಮುಂದೆ ಕೊಳ್ಳಲಿರುವ ಗಿರಾಕಿಗಳ ಪದ್ಧತಿಯಂತೆ ಅಲ್ಲಿ, ಅವರು ತಮಗೆ ಮಂಜೂರಾದ ವೆಚ್ಚದ ಮರ್ಯಾದೆಯನ್ನು ಮೀರದಂತೆ ವಸ್ತು ಸಾಮಗ್ರಿಗಳ ನಮೂನೆಗಳನ್ನು ಆರಿಸಿದರು.

ಸಾರ್ವಜನಿಕ ಪ್ರಯೋಜನಗಳು:

ಆಧುನಿಕ ಅನುಕೂಲತೆಗಳಿಂದ ಯುಕ್ತವಾದ ಮನೆಯಲ್ಲಿ ದೀಪವನ್ನೊದಗಿಸುವದಕ್ಕಾಗಿ ಹಾಗು ದುಡಿತವನ್ನುಳಿಸುವ ಯೋಜನೆಗಳನ್ನು ತಿಳಿದುಕೊಳ್ಳುವದಕ್ಕಾಗಿ ಕೆಲವೊಂದು ಶಾಸ್ತ್ರೀಯ ತತ್ವಗಳ ಶಿಕ್ಷಣ ಪಡೆಯುವ ಆವಶ್ಯಕತೆಯುಂಟಾಯಿತು. ಆ ತತ್ವಗಳು ನೀರಿನ ಪೂರೈಕೆ, ನೀರನ್ನು ಕಾಸುವಿಕೆ, ಮತ್ತು ಉಗಿ ಹಾಗು ವಿದ್ಯುತ್ತಿನ ಉಪಯೋಗಗಳಿಗೆ ಸಂಬಂಧಿಸಿದವು. ಯೋಜನೆಯಲ್ಲಿಯ ಕೆಲವು ಭಾಗಗಳ ಕಾರ್ಯ ಹಾಗು ಬೇರೆ ಬೇರೆ ವಿಭಾಗಗಳ ಮಾದರಿಗಳನ್ನು ಪ್ರದರ್ಶನೋದ್ದೇಶದಿಂದ ತಯಾರಿಸಲಾಗಿತ್ತು.

ಈಗ ಬಂಗಲೆಯು ಒಂದು ವಿಶಿಷ್ಟ ಮಟ್ಟಕ್ಕೆ ಮುಟ್ಟಿತು. ಒಂದು ತೋಟದ ನಕ್ಷೆಯನ್ನು ತಯಾರಿಸಲಾಯಿತು. ಸ್ಕೇಲಿಗನುಸರಿಸಿ ಅದರ ಸಿದ್ಧತೆ ಸಾಗಿತು. ಅದರ ಆಲಂಕಾರಿಕ ವಿಭಾಗವೊಂದರಲ್ಲಿ ಬಾಲಿಕೆಯರು ಆಸಕ್ತಿಯನ್ನು ತೋರಿಸಿದರು; ಹಾಗು ಸಸ್ಯಗಳನ್ನು ಊರುವದು, ಅವುಗಳ ನಡುವೆ ತಕ್ಕ ಅಂತರವನ್ನು ಬಿಡುವದು, ಸರಿಯಾದ ಪ್ರಮಾಣದಲ್ಲಿ ಅವುಗಳ ಎತ್ತರವನ್ನಿಡುವದು ಮೊದಲಾದವುಗಳನ್ನು ನಕ್ಷೆಯಲ್ಲಿ ತೋರಿಸುವ ಹೊಣೆಯನ್ನು ಬಾಲಕರ ಮೇಲೆ ಹೊರಿಸಲಾಯಿತು.

ಇಡಿಯ ಯೋಜನೆಯಲ್ಲೆಲ್ಲ ಬಾಲಿಕೆಯರ ಕೆಲಸವು ಗೃಹವಿಜ್ಞಾನ ಶಿಕ್ಷಣಕ್ಕೆ ನಿಕಟವಾಗಿ ಸಂಬಂಧಿಸಿತ್ತು. ಯಾವಾಗಲೂ ಮಕ್ಕಳಿಗೆ ತಮ್ಮ ವಿಚಾರಗಳನ್ನು ನಿರಾತಂಕವಾಗಿ ವ್ಯಕ್ತಗೊಳಿಸುವಂತೆ ಪ್ರೋತ್ಸಾಹನೆ ದೊರೆತದ್ದರಿಂದ ತಮ್ಮ ಕೆಲಸದ ವಿವಿಧಾಂಗಗಳನ್ನು ಕುರಿತು ಚರ್ಚೆ ಮತ್ತು ಸ್ಪಷ್ಟೀಕರಣಗಳನ್ನು ಮಾಡುವ ಬಗ್ಗೆ ಅವರು ಹೆಚ್ಚು ಹೆಚ್ಚಾಗಿ ಸಿದ್ಧರಾಗತೊಡಗಿದರು.

ಈ ಯೋಜನೆಯು ಎರಡು ಮುಖ್ಯ ಪರಿಣಾಮಗಳನ್ನು ಸಾಧಿಸುವದರಲ್ಲಿ ಯಶಸ್ವಿಯಾಯಿತು. ಇದು ವಿದ್ಯಾರ್ಥಿಗಳ ಆಸಕ್ತಿಯನ್ನು ಕೆರಳಿಸಿತು, ಉತ್ಪಾದಕ ಚಟುವಟಿಕೆಗಳ ಮುಖಾಂತರ ಅದನ್ನು ಕಾಯ್ದುಕೊಂಡಿತು, ವಿವಿಧ ಯೋಗ್ಯತೆಯ ಮಕ್ಕಳಿಗೆ, ಕೂಡಿ ಕೆಲಸ ಮಾಡುವ ಮತ್ತು ಅದರಿಂದ ಪರಸ್ಪರ ಸಹಾಯದ ಮಹತ್ವವನ್ನರಿತುಕೊಳ್ಳುವ ಸಂಧಿಯನ್ನೊದಗಿಸಿಕೊಟ್ಟಿತು. ಈ ಮೇರೆಗೆ ವೈಯಕ್ತಿಕ ಶಕ್ತಿಗಳ ವಿಕಾಸವಾಯಿತಲ್ಲದೆ ನಿಜವಾದ ಸಮಾಜಕ್ಕೆ ಅತ್ಯಾವಶ್ಯಕವಾದ ಸಾಮಾಜಿಕ ಅರಿವೂ ವಿಕಾಸಗೊಂಡಿತು.

ವರ್ಧಾ ರಾಷ್ಟ್ರೀಯ ಶಿಕ್ಷಣದಲ್ಲಿ ಸ್ವಚ್ಛತಾ ಕಾರ್ಯಕ್ರಮ

ಲೇಖಕರು: ಶ್ರೀ. ರತ್ನಾಕರ

ಮಾರ್ಗದರ್ಶಕ ಗಾಂಧೀಜಿ:

ಪಾರತಂತ್ರ್ಯ, ಪರಕೀಯ ಸಾಹಿತ್ಯ, ಸಂಸ್ಕೃತಿಗಳ ಪ್ರಭಾವದಿಂದ ಭಾರತದ ಭವಿತವ್ಯ ಮಸುಕಾದಾಗ, ನಿಚ್ಚಳ ನೋಟದ ಗಾಂಧೀಜಿಯವರ ನೇತೃತ್ವ ಲಭಿಸಿದ್ದು ಭಾರತದ ಮಹಾ ಭಾಗ್ಯವೆಂದೇ ಹೇಳಬೇಕು. ಗಾಂಧೀಜಿ ಸ್ವಾತಂತ್ರ್ಯ ಸಮರದ ನಾಯಕರಾಗಿ, ಭಾರತದ ಬಂಧ-ವಿಮೋಚನೆಗೆ ಕಾರಣರಾದುದು ನಿಜ. ಆದರೆ ಭಾರತದ ಜನಜಂಗುಳಿಯಲ್ಲಿ ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವಾತಂತ್ರ್ಯ ಪ್ರೇಮ, ಸ್ವಾರ್ಥತ್ಯಾಗ ಮುಂತಾದ ಸದ್ಗುಣಗಳನ್ನು ಅಂಕುರಿಸಿ, ನವಭಾರತ ನಿರ್ಮಿಸುವುದೇ ಗಾಂಧೀಜಿಯವರ ಜೀವನದ ಗುರಿಯಾಗಿತ್ತು. ಈ ಗುರಿ ಸಾಧನ ಆದ ಕಾರಣ, ಗಾಂಧೀಜಿಯವರು ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯತ್ನಿಸಿದರು, ತಮ್ಮ ಜೀವನವನ್ನೇ ಸವೆಸಿದರು. ಅವರ ಶೈಕ್ಷಣಿಕ ಪ್ರಯೋಗಗಳ ಫಲವೇ "ವರ್ಧಾ ರಾಷ್ಟ್ರೀಯ ಶಿಕ್ಷಣ." ವರ್ಧಾ ನಮ್ಮ ಶಿಕ್ಷಣ ತಜ್ಞರ ಸ್ಫೂರ್ತಿ! ಭಾರತೀಯ ಶಿಕ್ಷಣ ಗಂಗೆಯ ಗಂಗೋತ್ರಿ!

ಹೊಸ ಯೋಜನೆಯ ಅವಶ್ಯಕತೆ:

ಜನತೆಯ ಆಶೆ ಆಕಾಂಕ್ಷೆಗಳು ಬದಲಾದಂತೆ ಶಿಕ್ಷಣದಲ್ಲಿಯೂ ಬದಲಾವಣೆಯು ಕಂಡು ಬರುವದು ಸಹಜ ಆದರೆ, ಭಾರತದ ಪರಕೀಯ ಸರಕಾರವು ತಮ್ಮ ಆಳಿಕೆಯ ಭದ್ರತೆಗೆ ಲಕ್ಷ್ಯಕೊಟ್ಟಿತಲ್ಲದೆ, ದೇಶದ ಕಲ್ಯಾಣಕ್ಕಲ್ಲ. ಜೀವನಕ್ಕೂ ಶಿಕ್ಷಣಕ್ಕೂ ಸಂಬಂಧವೇ ಇಲ್ಲದ್ದರಿಂದ ಶಿಕ್ಷಣವು ಕೃತ್ರಿಮವಾಗಿತ್ತು; ಹೊರೆ ಹೊರೆ ಗ್ರಂಥಗಳನ್ನು ಓದಿ ಜಡತೆ ಜಡವಾಗಿತ್ತು. ಔದ್ಯೋಗಿಕ ಶಿಕ್ಷಣಕ್ಕೆ ಸ್ಥಾನವೇ ಇಲ್ಲದ್ದರಿಂದ, ನೌಕರಿಯೇ ಉಪಜೀವನದ ಮಾರ್ಗವಾಗಿತ್ತು. ಸ್ವಲ್ಪದರಲ್ಲಿಯೇ ಹೇಳುವದಾದರೆ, ಶಿಕ್ಷಣಾಲಯಗಳು ಕಾರಕೂನರನ್ನು ತಯಾರಿಸುವ ಕಾರಖಾನೆಗಳಾಗಿದ್ದವು. ಈ ಕೃತ್ರಿಮತೆಯನ್ನು ನೀಗಿ, ಜನರು ಸ್ವಾಭಿಮಾನ, ಸ್ವಾವಲಂಬನದಿಂದ ಜೀವಿತವನ್ನು ಸಾಗಿಸಲು ಸಹಾಯ ಮಾಡುವದಕ್ಕಾಗಿಯೇ ಕೃತಿ ಮೂಲವಾದ ವರ್ಧಾ ಶಿಕ್ಷಣವು ತಲೆಯೆತ್ತಿದುದು. ನಮ್ಮ ರಾಷ್ಟ್ರವನ್ನು ನಿರ್ಮಿಸಬಲ್ಲ ಎಲ್ಲ ವಿಷಯಗಳನ್ನು ಈ ಶಿಕ್ಷಣವು ಒಳಗೊಂಡಿದೆ. ಸ್ವಚ್ಛತಾ ಕಾರ್ಯಕ್ರಮಕ್ಕೂ ರಾಷ್ಟ್ರೀಯ ಮಹತ್ವವಿದೆ.

ಸ್ವಚ್ಛತೆಯ ವಿಚಾರ:

ವರ್ಧಾ ಶಿಕ್ಷಣದ ತುಂಬೆಲ್ಲ ಸ್ವಚ್ಛತಾ (ಸಫಾಯಿ) ಕಾರ್ಯಕ್ರಮಕ್ಕೆ ವಿಶೇಷವಾದ ಸ್ಥಾನವನ್ನು ಕೊಟ್ಟಿದ್ದು ಕಂಡುಬರುತ್ತಿದೆ. ಇದರ ಕಾರಣವನ್ನು ಹುಡುಕಲು ವಿಶೇಷ ಶ್ರಮವಹಿಸಬೇಕಾದ ಕಾರಣವಿಲ್ಲ. ಯಾಕಂದರೆ, ಸ್ವಚ್ಛತೆ ಸುಶಿಕ್ಷಣದ ಒಂದು ಬಾಹ್ಯ ಚಿನ್ಹ; ನಾಗರಿಕತೆಯ ಮೊದಲನೆಯ ಮೆಟ್ಟಲು. ಶಿಕ್ಷಣದ ಒಂದು ಮಹತ್ವದ ಧ್ಯೇಯ ನಾಗರಿಕತೆಯ ಪ್ರಚಾರ ಮತ್ತು ಪ್ರಸಾರಗಳ ಸಾಧನ. ಆದಕಾರಣ, ಯಾವ ಶಿಕ್ಷಣವೂ ಸ್ವಚ್ಛತೆಯ ಮಹತ್ವವನ್ನು ಮರೆಯಲಾರದು. ಅದರಲ್ಲಿಯೂ, ನವ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ನಮಗೆ ಇದೊಂದು ಜೀವಾಳದ ಪ್ರಶ್ನೆಯಾಗಿದೆ.

ಭಾರತವು ಹಳ್ಳಿಗಳ ದೇಶ. ಸ್ವಚ್ಛತೆಯ ಅಭಾವಕ್ಕಾಗಿ ಹಳ್ಳಿ, ಹಳ್ಳಿಯ ಜನತೆ, ಹಳ್ಳಿಯ ಜೀವನ ಅಸಹ್ಯವಾಗಿದೆ, ಅಸಹನೀಯವಾಗಿದೆ. ಮನೆ ಮಲಿನ; ಮನವೂ ಮಲಿನವೇನೊ? ಹೊಲಸಿನ ಪರಿಣಾಮವಾಗಿ ಹಳ್ಳಿಗರಿಗೆ ಆರೋಗ್ಯ ಭಾಗ್ಯವಿಲ್ಲದಾಗಿದೆ. ಹಳ್ಳಿಗರು ರೋಗರುಜಿಗಳಿಗೆ ತುತ್ತಾಗಿ ಭಾರತದ ಸಂಪತ್ತಿಗೆ, ಬಲಕ್ಕೆ ಕುತ್ತಾಗಿದ್ದಾರೆ. ಹಳ್ಳಿಗರ ಉದ್ಧಾರ ಭಾರತದ ಭದ್ರತೆಗೆ ಪ್ರಥಮ ಹೆದ್ದಾರಿ.

ಈ ಸ್ವಚ್ಛತೆಯ ಅಭಾವಕ್ಕೆ, ಸಾಧಾರಣವಾಗಿ ಮೂರು ಕಾರಣಗಳನ್ನು ಕೊಡಬಹುದು.

(೧) ಬಡತನ
(೨) ಶಿಕ್ಷಣದ ಅಭಾವ
(೩) ಸೋಮಾರಿತನ

ಬಡತನ ಮತ್ತು ಸರಿಯಾದ ಶಿಕ್ಷಣದ ಅಭಾವ ಈ ಅನಾಹುತಕ್ಕೆ ಕಾರಣವೆಂಬ ಮಾತನ್ನು ಒಪ್ಪಲೇಬೇಕು. ಆದರೂ, ನಿಧಾನವಾಗಿ ವಿಚಾರಿಸಿದರೆ, ಸೋಮಾರಿತನದ ಪ್ರಭಾವವೇ ಹೆಚ್ಚಾಗಿ ಕಂಡುಬರುತ್ತಿದೆ. ನಾಟಕ, ಸಿನೇಮಾ ಗೃಹ, ರೇಲ್ವೆ ಡಬ್ಬಿಗಳಲ್ಲಿಯ 'ಇಲ್ಲಿ ಉಗಳಬಾರದು' ಎಂದು ಬರೆದ ಫಲಕಗಳು ನಮ್ಮ ಜನತೆಯ ಸೋಮಾರಿತನದ ಸಾಕ್ಷಿಗಳು. ನಗರಗಳಲ್ಲಿಯ 'ಇಲ್ಲಿ ಮಲಮೂತ್ರಗಳನ್ನು ವಿಸರ್ಜಿಸಬಾರದು' ಎಂದು ಹೇಳುವ ಫಲಕಗಳು ಈ ಮಾತನ್ನು ದೃಢಪಡಿಸುತ್ತವೆ. ಒಟ್ಟಾರೆ ಹೇಳುವದಾದರೆ, ನಾವಿನ್ನೂ ನಾಗರಿಕತೆಯ ಪ್ರಥಮ ಪಾಠಗಳನ್ನು ಕಲಿಯಬೇಕಾಗಿದೆ. ಆದ್ದರಿಂದಲೇ, ಗಾಂಧೀಜಿಯವರು ವರ್ಧಾ ಶಿಕ್ಷಣದಲ್ಲಿ ಸ್ವಚ್ಛತಾ ಕಾರ್ಯಕ್ರಮಕ್ಕೆ ಮಹತ್ವವನ್ನು ಕೊಟ್ಟಿದ್ದಾರೆ. ನಮ್ಮ ಜನತೆಯ ಲೋಪಗಳನ್ನು ಗಾಂಧೀಜಿಯವರು ಚನ್ನಾಗಿ ಬಲ್ಲಿದರಾಗಿದ್ದರು.

ಸ್ವಚ್ಛತೆಯ ತತ್ವಜ್ಞಾನ:

ಸ್ವಚ್ಛತೆ ಬಹಿರಂಗವಾಗಿ ಕಣ್ಣಿಗೆ ಕಾಣುತ್ತಿದ್ದರೂ ಅದರ ನೆಲೆ ಅಂತರಂಗ (ಮನಸ್ಸು) ದಲ್ಲಿದೆ. ಹೊಲಸು ಕಂಡಾಗಲೆಲ್ಲ ಮನಸ್ಸು ಅಸಹ್ಯಪಟ್ಟುಕೊಳ್ಳುವದು, ಸ್ವಚ್ಛತೆ ಕಂಡಾಗಲೆಲ್ಲ ಅದು ಸಂತೋಷಗೊಳ್ಳುವದು. ಇದು ಮನಸ್ಸಿನ ಪ್ರವೃತ್ತಿ. ಸ್ವಚ್ಛತೆಯ ಸರಿಯಾದ ಕಲ್ಪನೆಯನ್ನು ಮಾಡಿಕೊಡುವದೆಂದರೆ ಒಂದು ಸರಿಯಾದ ಮನೋಭಾವನೆಯನ್ನು ಅಥವಾ ಮನೋವೃತ್ತಿಯನ್ನು ಮಕ್ಕಳಲ್ಲಿ ಬೆಳೆಯಿಸುವದು. ಮನಸ್ಸಿನ ಪ್ರವೃತ್ತಿಗಳ ಉದಾತ್ತೀಕರಣದ ಪ್ರಶ್ನೆ ಬಂದಾಗಲೆಲ್ಲ ಶಿಕ್ಷಣದ ಕಾರ್ಯ ಪ್ರಾರಂಭವಾಗುತ್ತದೆ. ಆದಕಾರಣ, ಸ್ವಚ್ಛತಾ ಕಾರ್ಯಕ್ರಮವೂ ಮಕ್ಕಳ ಶಿಕ್ಷಣಕ್ಕೆ ಇಂಬುಗೊಡುತ್ತದೆ

ಇದೂ ಅಲ್ಲದೆ, ಸ್ವಚ್ಛತೆಯು ಸಹಕಾರ ತತ್ವದ ಪ್ರಥಮ ಪಾಠವೂ ಆಹುದು. ಸ್ವಚ್ಛತೆಯು ವೈಯ್ಯಕ್ತಿಕವಿದ್ದಷ್ಟೇ ಸಾಂಘಿಕವೂ ಆಗಿದೆ. ನಮ್ಮ ಮನೆಯ ಮತ್ತು ವೈಯ್ಯಕ್ತಿಕ ಸ್ವಚ್ಛತೆಯನ್ನು ನಮ್ಮ ಮನಸ್ಸಿಗೆ ಒಪ್ಪುವಂತೆ, ನಮ್ಮ ಅನುಕೂಲತೆಯ ಪ್ರಕಾರ ಮಾಡಿಕೊಳ್ಳಬಹುದು. ಆದರೆ, ನೆರೆಹೊರೆಯ ಸ್ವಚ್ಛತೆಗೆ ನೆರೆಯವರ ಸಹಕಾರ ಅತಿ ಅವಶ್ಯ. ಈಗ ನೆರೆಹೊರೆಯ ಸ್ವಚ್ಛತೆಯೆಂದರೆ ನಮ್ಮ ಮನೆಯ ಸುತ್ತುಮುತ್ತಲಿನ ಕಸವನ್ನು ನೆರೆಯವರ ಮನೆಯ ಹತ್ತರ ದೂಡುವದು ಎಂದು ಅಥವಾ ಅದು ನಗರ ಸಭೆಯ ಕಾರ್ಯವೆಂದು ನಂಬಿ ಆ ಹೊಲಸಿನಲ್ಲಿಯೇ ಮೂಗು ಹಿಡಿದುಕೊಂಡು ಅಡ್ಡಾಡುವದು ಎಂದು ತಿಳಿದುಕೊಂಡಿದ್ದೇವೆ. ಇದಕ್ಕೂ ಹೆಚ್ಚಿಗೆಯಾದರೆ, ನಗರಸಭೆಯ ಅಧಿಕಾರಿಗಳಿಗೆ ಇಲ್ಲವೆ, ವರ್ತಮಾನಪತ್ರದ ಸಂಪಾದಕರಿಗೆ ಬರೆದು ತಿಳುಸುವದರಲ್ಲಿಯೇ ನಮ್ಮ ಕ್ರಿಯಾ ಶಕ್ತಿಯನ್ನು ವ್ಯಯ ಮಾಡುತ್ತೇವೆ. ಇದರಲ್ಲಿ ಈಗಿನ ಶಿಕ್ಷಣದ ದುಷ್ಟ ಪ್ರಭಾವವು ಎದ್ದು ಕಾಣುತ್ತದೆ. ನಮ್ಮ ಮನೆಯ ಸ್ವಚ್ಛತೆಯ ಕೆಲಸವನ್ನು ಮಾಡಿಕೊಳ್ಳುವದು ಕೂಡ ಹೀನ ಕೆಲಸವೆನ್ನುವ ವರೆಗೂ ನಮ್ಮ ಶಿಕ್ಷಣವು ನಮ್ಮನ್ನು ಅಧೋಗತಿಗಿಳಿಸಿದೆ. ಕೈಗಳ ಕೆಲಸವನ್ನು ಸರಿಯಾಗಿ ಅರಿಯದೆ ನಗೆಗೀಡಾಗಿದ್ದೇವೆ.

ವರ್ಧಾ ಶಿಕ್ಷಣವು ಈ ಭಾವನೆಯನ್ನು ಹೊಡೆದೋಡಿಸಿ, ಜನತೆಯಲ್ಲಿ ಕಾಯಕದ ಗೌರವವನ್ನು ಬೆಳೆಯಿಸುವದಕ್ಕಾಗಿಯೇ ಅವತರಿಸಿದೆ. ನಾಗರಿಕತೆಯ ದೃಷ್ಟಿಯಿಂದಲಾದರೂ ಈ ನಮ್ಮ ಮನೋಭಾವನೆಯನ್ನು ಬದಲಿಸಲೇಬೇಕು. ನಮ್ಮ ಆರೋಗ್ಯಕ್ಕಾಗಿ, ನಮ್ಮ ಪ್ರಗತಿಗಾಗಿ, ನಾವು ಮಾಡಬೇಕಾದ ಯಾವ ಕಾರ್ಯವೂ ಹೀನವಲ್ಲವೆಂದು ತಿಳಿದು ಆಚರಿಸುವ ವರೆಗೆ ನಮ್ಮ ಜನತೆ ಮುಂದರಿಯಲಾರದೆಂಬುದು ನಿಶ್ಚಿತ. ಜೀವನದ ಸೌಕರ್ಯಗಳನ್ನು ದೊರಕಿಸಿಕೊಳ್ಳಲು ಸಹಕಾರ ಅವಶ್ಯವಿರುವಂತೆ, ಸಾರ್ವಜನಿಕ ಸ್ವಚ್ಛತೆಗೂ ಸಹಕಾರ ಅಗತ್ಯವಿದೆ. ನಿಜವಾಗಿ ಸಹಕಾರದ ಪಾಠ ಇಲ್ಲಿಂದ ಪ್ರಾರಂಭವಾಗುವದರಲ್ಲಿಯೇ ಭಾರತದ ಕಲ್ಯಾಣವಿದೆ. ಬಾಲ್ಯದಿಂದಲೇ ಈ ಚಟುವಟಿಕೆ ಪ್ರಾರಂಭವಾಗಬೇಕಾದ್ದರಿಂದ ವರ್ಧಾ ಶಿಕ್ಷಣವು ಸ್ವಚ್ಛತಾ ಕಾರ್ಯಕ್ರಮಕ್ಕೆ ಅನುವು ಕೊಟ್ಟಿದೆ.

ಸ್ವಚ್ಛತಾ ಕಾರ್ಯಕ್ರಮವು ಶಿಕ್ಷಣದ ಅಂಗವಾಗಬಹುದೇ ಎಂದು ನಾವು ಸಂದೇಹಪಡಬಹುದು. ಆದರೆ ಸಂಬಂಧೀಕರಣ ತತ್ವವು ವರ್ಧಾ ಶಿಕ್ಷಣದ ಜೀವಾಳವೆಂಬ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಲೇಬೇಕು. ಸ್ವಚ್ಛತೆಯನ್ನು ಜೀವನದಿಂದ ಹೊರತುಪಡಿಸುವದು ಅಸಾಧ್ಯ,

ಸಾಲೆಯ ಸಾಂಘಿಕ ಚಟುವಟಿಕೆಗಳು

ಲೇಖಕರು: ಪ್ರೊ. ಹಕ್‌ಸ್ಲೆ. ಅನುವಾದಕ: ಶ್ರೀ. ರಂ. ರಾ. ಶೇಲಾರ

★

ತಮ್ಮ ವರ್ಗಗಳಲ್ಲಿ ಸಾಮೂಹಿಕ ಚಟುವಟಿಕೆ ಪದ್ಧತಿಗಳನ್ನು ಪ್ರಾರಂಭಿಸಬೇಕೆಂಬ ಹಂಬಲವುಳ್ಳ ಕೆಲವು ಶಿಕ್ಷಕರಿಗೆ ಅವುಗಳನ್ನು ಹೇಗೆ ನಡೆಯಿಸಬೇಕೆಂಬುದು ತಿಳಿಯದ್ದರಿಂದ ಆ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಅವರು ನನನ್ನು ಕೇಳಿಕೊಂಡರು. ಪ್ರಸ್ತುತ ಲೇಖವನ್ನು ಅವರ ವಿನಂತಿಯ ಮೇರೆಗೆ ಬರೆದುದಾಗಿದೆ. ಯುದ್ಧಕಾಲದಲ್ಲಿ ಸುವ್ಯಕ್ತವಾದ ಸಾಹಸ ವೃತ್ತಿಯನ್ನು ಕಾರ್ಯರಂಗಕ್ಕಿಳಿಸಲು ಮಾಡಿದ ಯತ್ನಗಳು ಫಲದ್ರೂಪವಾದುದನ್ನು ಕಂಡು ಅದೇ ತಳಹದಿಯ ಮೇಲೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಸಾಲೆಗಳ ಭವಿತವ್ಯತೆಯನ್ನು ಸಂಘಟಿಸಬೇಕೆಂಬುದು ಅವರ ಹಿರಿಯಾಸೆಯಾಗಿದೆ.

ನನ್ನ ಕೈಕೆಳಗಿನ ವಿದ್ಯಾರ್ಥಿ–ಶಿಕ್ಷಕರ ಪ್ರತ್ಯಕ್ಷ ಅನುಭವಕ್ಕೆ ಸಂಬಂಧಿಸಿದ ಕೆಲವು ಸಾಮೂಹಿಕ ಚಟುವಟಿಕೆಗಳ ಉದಾಹರಣೆಗಳನ್ನು ಆಯ್ದುಕೊಂಡು ವರ್ಗ ನಿಯಂತ್ರಣ ವಿಷಯಕ್ಕೆ ಅಪರಿಚಿತರಾದ ಶಿಕ್ಷಕರಿಗೆ ಉಪಯುಕ್ತವಾಗುವಂತೆ ವಸ್ತುತ ವಿಷಯವನ್ನು ವಿವೇಚಿಸಲೆತ್ನಿಸಿದ್ದೇನೆ.

ಆಧುನಿಕ ವಿಚಾರವಾಹಿನಿಯನ್ನನುಸರಿಸಿ ಸಾಮೂಹಿಕ ಚಟುವಟಿಕೆಗೆ ಯೋಜನಾ ಪದ್ಧತಿ (Project Method) ಎಂದು ಹೆಸರು ಕೊಡಬಹುದಾಗಿದೆ. ಈ ಪದ್ಧತಿಯ ಮೇರೆಗೆ ಒಂದು ವರ್ಗದ ಕೆಲಸದಲ್ಲಿ ಕೆಲವು ಸುಸಂಬದ್ಧವಾದ ಭಾಗಗಳನ್ನು ಕಲ್ಪಿಸಿ ಅವೆಲ್ಲವುಗಳ ಏಕಸೂತ್ರತೆಗೆ ಬಾಧೆ ತಟ್ಟದಂತೆ ಇಡಿಯ ಕೆಲಸವನ್ನು ಕ್ರಮಶಃ ಪೂರ್ತಿಗೊಳಿಸಬೇಕಾಗುವದು. ಇಂಥ ಕೆಲಸವು ಸಾಮೂಹಿಕ ಜೀವನಕ್ಕೆ ಸಂಬಂಧಪಟ್ಟುದಾಗಿರಬಹುದು. ಯೋಜನೆಗಳಿಗೆ ಸಾಮೂಹಿಕ ಚಟುವಟಿಕೆಗಳೇ ಅತ್ಯಾವಶ್ಯಕವೆಂದು ಹೇಳಲಿಕ್ಕಾಗದು. ವೈಯಕ್ತಿಕ ಚಟುವಟಿಕೆಗಳು ಕೆಲವು ಯೋಜನೆಗಳ ತಳಹದಿಗಳಾಗಬಹುದು. ಯೋಜನೆಗಳು, ವೈಯಕ್ತಿಕವಿರಲಿ, ಸಾಮೂಹಿಕವಿರಲಿ, ಸಸತ್ವ, ಉಜ್ವಲ ಹಾಗೂ ಯಥಾರ್ಥ ಜೀವನದ ಪ್ರತಿಬಿಂಬಗಳಾಗಿವೆ. ಉದ್ದೇಶ, ಸಾರ್ಥಕ್ಯ, ಅಭಿರುಚಿ, ಸ್ವಯಂಸ್ಫೂರ್ತಿ ಮತ್ತು ಯಥಾರ್ಥ ಜೀವನಕ್ಕೆ ಅತ್ಯಗತ್ಯವಿರುವ ಸಾಮಾಜಿಕ ಸಹಕಾರ ಇವು ಯೋಜನೆಯ ಲಕ್ಷಣಗಳಾಗಿವೆ. ಸಾಮೂಹಿಕ ಚಟುವಟಿಕೆ ಕ್ರಮಗಳಲ್ಲಿ, ಇತರ ಕ್ರಮಗಳಲ್ಲಿರುವಂತೆ ಚಿಂತೆ-ಉದ್ವೇಗಗಳಿಗೆ ಎಡೆಯಿಲ್ಲ; ತದ್ವಿರುದ್ಧವಾಗಿ ಈ ಮನೋವಿಕಾರಗಳು ಇಂಥ ಚಟುವಟಿಕೆಗಳಿಂದ ಉದಾತ್ತ ರೂಪಗಳನ್ನು ತಾಳುತ್ತವೆಂದು ಧಾರಾಳವಾಗಿ ಹೇಳಬಹುದು.

ಈ ಹೊಸ ಪದ್ಧತಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಕಾರ್ಯದಲ್ಲಿ ಶಿಕ್ಷಕನ ಪಾತ್ರವು ಬಹಳ ಮಹತ್ವದ್ದಿರುವದು. ಅವ್ಯಸ್ಥಿತ ಗದ್ದಲ ಹಾಗೂ ಅಭಿರುಚಿಜನ್ಯ ಚಟುವಟಿಕೆಯ ಪರಿಣಾಮವಾಗಿ ಸ್ವಾಭಾವಿಕವಾಗಿ ಉಂಟಾಗುವ ಸಪ್ಪಳ ಇದರಡರ ತಾರತಮ್ಯವರಿತು, ಅವನು ನಿಯಂತ್ರಣವನ್ನು

(೧೧ನೇ ಪುಟದಿಂದ ಬಂದದ್ದು)

ಅಹಿತಕರ. ಆದಕಾರಣ ಸ್ವಚ್ಛತೆಗೆ ಸಂಬಂಧಿಸಿದ ಆರೋಗ್ಯ ನಿಯಮ (ಶಾಸ್ತ್ರ), ಆಹಾರ ಶಾಸ್ತ್ರ, ಸಮಾಜ ಶಾಸ್ತ್ರ, ಅರ್ಥ ಶಾಸ್ತ್ರ ಮುಂತಾದ ಜೀವನಾವಶ್ಯಕ ಶಾಸ್ತ್ರಗಳ ಪರಿಚಯವೆನ್ನು ಮಾಡಿಕೊಡಲೇ ಬೇಕಾಗುವದರಿಂದಲೇ ಗಾಂಧೀಜಿಯವರು ಸ್ವಚ್ಛತಾ ಕಾರ್ಯಕ್ರಮಕ್ಕೆ ಇಷ್ಟೊಂದು ಉಚ್ಚಸ್ಥಾನವನ್ನು ಕೊಟ್ಟಿದ್ದಾರೆ. ಗಾಂಧೀಜಿಯವರ ಅನುಭವ ಆಳವಾದದ್ದು; ಅಗಾಧವಾದದ್ದು.

ಕೊನೆಯದಾಗಿ, ಸ್ವಚ್ಛತೆಯ ವಿಚಾರ ಸೌಂದರ್ಯ, ಅಚ್ಚುಕಟ್ಟುತನಗಳನ್ನು ಒಳಗೊಂಡಿದೆ. ಇವುಗಳಿಲ್ಲದೆ ಅದು ಪೂರ್ತಿಯಾಗಲಾರದು, ಸ್ಫೂರ್ತಿದಾಯಕವಾಗಲಾರದು. ಸ್ವಚ್ಛತೆ ನಮ್ಮ ರೂಪ, ನಿವಾಸ, ನೆರೆಹೊರೆ, ಜೀವನಕ್ಕೆ ಹೊಸ ಶೋಭೆಯನ್ನು ಕೊಡಲಿ! ಮನೆ ಹಸನವಾಗಲಿ, ಮನ ಹಸನವಾಗಲಿ!

ಅಧಿಕಾರ ಮೂಲಕವಾಗಿ ತೋರಿಸದೆ ಸಾಮಾಜಿಕ ಸನ್ನಿ-ವೇಶದಲ್ಲಿಯೇ ವ್ಯಕ್ತಪಡಿಸಬೇಕು. ಅದರಿಂದ ಅವನು ಶಿಸ್ತಿನ ಮಹತ್ವವನ್ನು ಹೊಸ ಬೆಳಕಿನಲ್ಲಿ ಕಾಣತೊಡಗು-ವನು.

ಶಿಕ್ಷಕನು ತನ್ನ ಕೆಲಸವು ಕಲಿಸುವದು ಎಂಬ ಭಾವನೆ-ಯನ್ನು ಮೊದಲು ಬಿಡಬೇಕು. ಮಕ್ಕಳ ಸ್ವಂತ ಕಲಿಯು-ವಿಕೆಗೆ ಸಾಧಕವಾದ ಪರಿಸ್ಥಿತಿಯನ್ನುಂಟು ಮಾಡುವ ಕಾಣತನದಲ್ಲಿಯೇ ಶಿಕ್ಷಕನ ನಿಜವಾದ ಕಲಿಸುವಿಕೆಯಿದೆ. ತೆರೆಯ ಮರೆಯಲ್ಲಿ ನಿಂತು ಮಕ್ಕಳಿಗೆ ಸದಾ ಸ್ಫೂರ್ತಿ-ಯನ್ನೂ ಅವಶ್ಯ ಬಿದ್ದಾಗ ಸಹಾಯವನ್ನೂ ಕೊಡುವದೇ ಶಿಕ್ಷಕನ ನಿಜವಾದ ಕೆಲಸ. ತನ್ನ ಅಜ್ಞಾನವನ್ನೊಪ್ಪುವ ಸರಳ ಮನಸ್ಸೂ ಅವನಲ್ಲಿರಬೇಕು. ಮಕ್ಕಳ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ತನಗೆ ಗೊತ್ತಿರದಿದ್ದರೂ ಅವು-ಗಳನ್ನು ಎಲ್ಲಿ ಕಂಡುಕೊಳ್ಳಬಹುದೆಂಬ ಕಲ್ಪನೆಯಾದರೂ ತಿಳಿದಿರಬೇಕು.

ನಾವೀಗ ಸಾಂಘಿಕ ಚಟುವಟಿಕೆಗಳನ್ನೊಳಗೊಂಡ ಇಂಥ ಯೋಜನೆಗಳ ಕೆಲವು ಉದಾಹರಣೆಗಳನ್ನು ಪರಿಶೀಲಿಸುವಾ.

೧. ಚಿಕ್ಕಮಕ್ಕಳ ಸಾಮೂಹಿಕ ಚಟುವಟಿಕೆ:— ಮನೆ ಕಟ್ಟುವದು

ಮೊದಲನೆಯ ಉದಾಹರಣೆಯನ್ನು ಒಂದು ಹಳ್ಳಿಯ ಶಾಲೆಯಿಂದ ತೆಗೆದುಕೊಳ್ಳಲಾಗಿದೆ. ವರ್ಗದಲ್ಲಿ ಸುಮಾರು ೩೦ ವರ್ಷದ ೨೭ ಬಾಲಕ-ಬಾಲಿಕೆಯರು ಒಬ್ಬ ತರುಣ ಹಾಗೂ ಉತ್ಸಾಹಿ ವಿದ್ಯಾರ್ಥಿ-ಶಿಕ್ಷಕಿಯ ಕೈಯಲ್ಲಿದ್ದರು. ಅವಳ ಕೆಲಸವನ್ನು ತನಗೆ ಸರಿಕಂಡಂತೆ ನಿರ್ವಹಿಸಲು ಅವಳಿಗೆ ಪೂರ್ಣ ಸ್ವಾತಂತ್ರ್ಯವಿತ್ತು. ಆ ವರ್ಗದ ಕೋಣೆ-ಯಲ್ಲಿ ಖುರ್ಚಿಗಳು, ಮೇಜುಗಳು, ಒಂದೆರಡು ಸಾಮಾನು ಇಡುವ ಕಾಷ್ಠಫಲಕ (ಶೆಲ್ಫ) ಗಳು, ಮತ್ತು ಒಂದು ಬೋರ್ಡು ಇವಿಷ್ಟೇ ಸಲಕರಣೆಗಳಿದ್ದವು. ಆದರೆ ಕೆಲವೆಡೆ-ಯಲ್ಲಿ ಕಟ್ಟಿಗೆ ತುಂಡುಗಳು, ಇಟ್ಟಿಗೆಗಳು, ಕಲ್ಲುಗಳು, ಮಣ್ಣು-ಕಟ್ಟು-ಕಾಗದಗಳ ತುಂಡುಗಳು, ದಾರ ಮೊದಲಾದ ಕೆಲವು ವಸ್ತುಗಳನ್ನು ಶಿಕ್ಷಕಿಯು ಹಾಗೆಯೆ ಹರವಿ ಬಿಟ್ಟಿ-ದ್ದಳು. ಆ ವರ್ಗದ ಕೋಣೆಯು ಮಕ್ಕಳಿಗೆ ಸ್ವರ್ಗ ವೆನಿಸಿತ್ತು. ಯಾವ ವಸ್ತುಗಳನ್ನೂ ಸುವ್ಯವಸ್ಥಿತವಾಗಿ ಇಟ್ಟಿರದಿದ್ದರೂ, ಪ್ರತಿಯೊಂದು ವಸ್ತುವು ವಿಧಾಯಕ ನಿರ್ಮಾತೃವಿನ ಕಲ್ಪನೆಯನ್ನು ಸೆರೆಹಿಡಿಯುವಂತಿತ್ತು. ಮಕ್ಕಳಿಗೆ ತಮ್ಮ ಮನಸ್ಸನ್ನಾಕರ್ಷಿಸಿದ ಬೇಕಾದ ವಸ್ತು-ವನ್ನು ಮುಟ್ಟಲಿಕ್ಕೆ ಕೆಲವು ವೇಳೆ ಕೊಡಲಾಯಿತು. ಬಳಿಕ, "ಎಲ್ಲರೂ ಕೂಡಿ ಏನಾದರೊಂದು ಚಟುವಟಿಕೆಯನ್ನು ಮಾಡುವಿರೋ" ಎಂದು ಶಿಕ್ಷಿಕೆಯು ಅವರನ್ನು ಕೇಳಿ-ದಳು. ಕೂಡಲೆ ಮಕ್ಕಳಲ್ಲಿ ಚರ್ಚೆ ಪ್ರಾರಂಭವಾಯಿತು. ಒಂದು ಮಾದರಿಯ ಮನೆಯನ್ನು ಕಟ್ಟಬಹುದೆಂದು ಒಬ್ಬ ಬಾಲಕನು ಸೂಚಿಸಲು ಅದಕ್ಕೆ ಎಲ್ಲರೂ ಸಮ್ಮತಿ-ಯನ್ನಿತ್ತರು.

ಮನೆಯ ಅಳತೆ ಮತ್ತು ಅದಕ್ಕೆ ಬೇಕಾಗುವ ಸಾಮಗ್ರಿ ಇವುಗಳ ಬಗ್ಗೆ ಮೊದಲು ಚರ್ಚೆ ನಡೆಯಿತು. ಬಳಿಕ ವರ್ಗದ ಕೋಣೆಯಲ್ಲಿ ಇಟ್ಟಿದ್ದ ಕರಿ ಹಲಗೆಗಳ ಮೇಲೆ ಅದರ ಬೇರೆ ಬೇರೆ ನಕ್ಷೆಗಳನ್ನು ಸ್ಥೂಲಮಾನದಿಂದ ತೆಗೆ-ಯಲಾಯಿತು. ಕೊನೆಗೆ ಒಬ್ಬ ಬಾಲಕನ ಸೂಚನೆಯ ಮೇರೆಗೆ ಒಂದು ಮಾದರಿಯ ಮನೆಯನ್ನು ಕಟ್ಟುವ ನಿರ್ಧಾರವಾಯಿತು. "ಏಕೆಂದರೆ, ಮನೆಯ ಅಳತೆಯನ್ನು ದೊರಕಿಸಲಿಕ್ಕೆ ನಾವು ಅರ್ಧ ಅರ್ಧ ಮಾಡುತ್ತ ಹೋದ-ರಾಯಿತು." ಎಂದು ಆ ಬಾಲಕನು ಹೇಳಿದನು. ಅದುದ-ರಿಂದ, "ವ್ಯವಹಾರಿ ಅಪೂರ್ಣಾಂಕ" ಇದು ಗಣಿತದ ಆರಂಭದ ಪಾಠವಾಯಿತು. ಕೆಲಸವು ಮುಂದೆ ಸಾಗಿದಂತೆ ಅಂಕೆಗಳಲ್ಲಿ ಸಮ ಪಾಲು ಮಾಡುವ ವಿಧಾನಗಳನ್ನು ಮಕ್ಕಳು ತಮ್ಮಷ್ಟಕ್ಕೆ ತಾವೇ ಕಂಡುಕೊಂಡರು.

ಮನೆಯನ್ನು ಇಟ್ಟಿಗೆಗಳಿಂದ ಕಟ್ಟಬೇಕಾದುದರಿಂದ ಮಕ್ಕಳು ಗಟ್ಟಿ ಅರಲಿನ ಸಣ್ಣ ಸಣ್ಣ ಇಟ್ಟಿಗೆಗಳನ್ನು ತಾವೇ ಸಿದ್ಧಪಡಿಸಿದರು. ಹಳೆಯ ಇಟ್ಟಿಗೆಯ ಹಲಗೆಗಳನ್ನು ಕೊರೆದು ಬಾಗಿಲು— ಕಿಡಿಕೆಗಳನ್ನು ತಯಾರಿಸಿದರು. ಮನೆಯ ನೆಲವನ್ನು ಅಲಂಕರಿಸುವದಕ್ಕಾಗಿ ಕೆಲವರು ನಾನಾ ಮಗ್ಗಗಳ ಮೇಲೆ ಜಮಖಾನೆಯ ತುಂಡುಗಳನ್ನು ನೇಯು-ವದರಲ್ಲಿ ಮಗ್ನರಾಗಿದ್ದರು. ಮನೆಯಿಂದ ತಂದ ಅರಿವೆಯ ತುಂಡು-ತುಣುಕುಗಳಿಂದ ಪರದೆಗಳನ್ನು ತಯಾರಿಸಲಾ-ಯಿತು. ಕಟ್ಟಿನಿಂದಾಗಲಿ ಅರಲಿನಿಂದಾಗಲಿ ನಾನಾ ತರದ ಸಲಕರಣೆ (Furniture) ಗಳನ್ನು ಮಾಡಲಾಯಿತು. ಗೋಡೆಗಳಿಗೂ ಅರಲಿನಿಂದ ಮಾಡಿದ ವಸ್ತುಗಳಿಗೂ ಅವು ಒಣಗಿದ ಬಳಿಕ ಬಣ್ಣ ಹಚ್ಚಲಾಯಿತು. ಬಣ್ಣ ಬಣ್ಣದ ಕಾಗದಗಳಿಂದ ಮನೆಯ ಹೊರಬದಿಗೆ ಹುಲ್ಲು ಹಾಸಿಗೆ

ಯನ್ನೂ ಹೂವುಗಳನ್ನೂ ಮಾಡಲಾಯಿತು; ಮೃದುವಾದ ರೊಟ್ಟಿ (Bread) ಯನ್ನು ಬಹುತರವಾಗಿ ಮೇಣದಂತೆ ಕಂಡು ಬರುವ ವರೆಗೆ ಕೈಬೆರಳುಗಳಿಂದ ಒತ್ತುತ್ತ, ನಾದುತ್ತ ಬೇರೆ ಪ್ರಕಾರದ ಹೂವುಗಳನ್ನು ಮಾಡಲಾಯಿತು.

ಸಮಯ ಸಿಕ್ಕಾಗೆಲ್ಲ ಶಿಕ್ಷಿಕೆಯು ಹೊಲಿಗೆ, ಅಡಿಗೆ ಮಾಡುವದು, ತೋಟದ ಕೆಲಸ, ಸಂಗೀತ, ಚಿತ್ರಕಲೆ, ವಾಚನ, ಕ್ರಯವಿಕ್ರಯ (ಖರೀದಿ ಹಾಗು ವಿಕ್ರಿ), ವೈಯಕ್ತಿಕ ಹಾಗು ಸಾಂಘಿಕ ಆರೋಗ್ಯ, ನೆರೆಹೊರೆ ಸಂಬಂಧದ ಸದ್ವರ್ತನೆ, ಇವೇ ಮೊದಲಾದ ಕೌಟುಂಬಿಕ ಕೆಲಸಗಳಲ್ಲಿ ಮಕ್ಕಳ ಅಭಿರುಚಿಯನ್ನು ಹುಟ್ಟಿಸುತ್ತಿದ್ದಳು. ಇದರಿಂದ, ಮನೆತನಕ್ಕೆ ಸಂಬಂಧಿಸಿದ ಆದರೆ ಪ್ರತ್ಯೇಕವಾಗಿ ಮಾಡುವಂಥ ಎಷ್ಟೋ ವ್ಯವಸಾಯಗಳು ಅಥವಾ ಯೋಜನೆಗಳು ಮಕ್ಕಳಿಗೆ ದೊರೆತವು. ಕಥೆಯಿಂದ ವಾಚನಕ್ಕೆ ಪ್ರಚೋದನೆ ದೊರೆಯುತ್ತಿತ್ತು, ಏಕೆಂದರೆ ಮನೆಯಲ್ಲಿರುವ ಜನರೆಲ್ಲರೂ ಕಥೆಗಳನ್ನು ಓದಬೇಕೆಂದು ಮಕ್ಕಳು ತಮ್ಮ ತಮ್ಮೊಳಗೆ ನಿರ್ಧರಿಸಿದ್ದರು. ವಿಶೇಷ ಪುನರಾವೃತ್ತಿಯುಳ್ಳ ಕಥೆಯೊಂದನ್ನು ಶಿಕ್ಷಿಕೆಯು ಆಯ್ದುಕೊಂಡು ಅದರ ವಾಕ್ಯಗಳನ್ನು ಒಂದೊಂದನ್ನಾಗಿ ಕರಿಹಲಗೆಯ ಮೇಲೆ ಬರೆಯುತ್ತಿದ್ದಳು. ಮನೆ, ಕೋಣೆ, ಗೋಡೆ, ನೆಲ, ಬಾಗಿಲು, ಕಿಡಿಕೆ ಮುಂತಾದ ಶಬ್ದಗಳನ್ನು ಶಿಕ್ಷಿಕೆಯು ನಕಾಶ ಇಲ್ಲವೆ ಚಿತ್ರದ ಮೇಲೆ ಬರೆಯುವದರಿಂದ ಆ ಶಬ್ದಗಳ ಆಕಾರಗಳು ಮಕ್ಕಳಿಗೆ ಮನದಟ್ಟಾಗಿ ಹೋಗಿದ್ದವು. ಈ ವೇಳೆಯಲ್ಲಿ ಗಣಿತವನ್ನು ವ್ಯವಸ್ಥಿತವಾಗಿ ಕಲಿಸದಿದ್ದರೂ ಟೇಪಿನಿಂದ ಅಳೆಯುವದರ ಪರಿಣಾಮವಾಗಿ ಹಾಗೂ ಕ್ರಯ ವಿಕ್ರಯ ವ್ಯವಹಾರಗಳನ್ನೊಳಗೊಂಡ ಯೋಜನೆಗಳ ಮೂಲಕ ಮಕ್ಕಳು ಬಹುಮಟ್ಟಿಗೆ ಆ ವಿಷಯವನ್ನು ಕಲಿತರು.

ಸಾಮಾಜಿಕ ವಾತಾವರಣದಲ್ಲಿ ಕಾರ್ಯರಂಗಕ್ಕಿಳಿಸಲ್ಪಟ್ಟ ಒಂದು ಪ್ರಯೋಗವೇ ಆ ಯೋಜನೆಯಾಗಿತ್ತು. ಪ್ರತಿಯೊಂದು ಮಗುವು ತನ್ನ ಗುಂಪಿನ ಸಂಗಡಿಗರೊಡನೆ ಸಹಕರಿಸಿ ಇಡಿಯ ಕೆಲಸವನ್ನು ಪೂರ್ತಿಗೊಳಿಸುವ ಕಾರ್ಯದಲ್ಲಿ ತನ್ನಿಂದಾದಷ್ಟು ನೆರವಾದರೂ, ಅದು ಕೆಲವು ವೈಯಕ್ತಿಕ ಕೆಲಸಗಳನ್ನು ಮಾಡಲೇಬೇಕಾಗುತ್ತಿತ್ತು. ಯೋಜನೆಯು ಸ್ವಾತಂತ್ರ್ಯಮಯ ವಾತಾವರಣದಲ್ಲಿ ನಿರ್ವಹಿಸಲ್ಪಟ್ಟರೂ ಅದರಲ್ಲಿ ಮೈದೋರಿದ ಅಭಿರುಚಿಯ ಮೂಲಕವೇ ಶಿಸ್ತನ್ನು ಕಾಯಲಾಗುತ್ತಿತ್ತು. ಮಕ್ಕಳು ಸ್ವತಃ ಬಯಸದ ಹೊರತು ವ್ಯವಸ್ಥಿತ ಶಿಕ್ಷಣವನ್ನು ಕೊಡಲಾಗುತ್ತಿರಲಿಲ್ಲ. ದೈನಂದಿನ ಸನ್ನಿವೇಶದಲ್ಲಿಯೇ ಯೋಜನೆಯ ಅಂಗಾಂಗಗಳು ಸಹಜವಾಗಿ ಸ್ವಯಂ ಸ್ಫೂರ್ತಿಯಿಂದ ವಿಕಾಸಗೊಳ್ಳುವಂತೆ ತೋರುತ್ತಿದ್ದವು.

೨. ಬ್ಯಾಂಕುಗಳ ನಿರೀಕ್ಷಣೆ:— ಹಿರಿಯ ಹುಡುಗರಿಂದ

ಈ ಉದಾಹರಣೆಯ ವಿಷಯವು 'ಬ್ಯಾಂಕುಗಳು' ಎಂದು ಇರುತ್ತದೆ ಮತ್ತು ವರ್ಗವು ಒಂದು ಹಿರಿಯ ಹುಡುಗರ ಸಾಲೆಯ ೧೪ ವರ್ಷದ ಹುಡುಗರ ಗುಂಪು ಇರುತ್ತದೆ.

ಬ್ಯಾಂಕುಗಳ ಬಗ್ಗೆ ಪ್ರಾಸ್ತಾವಿಕ ಚರ್ಚೆಯಾದ ನಂತರ, ಒಂದೊಂದು ಗುಂಪಿನಲ್ಲಿ ೮—೯ ಹುಡುಗರಾಗುವಂತೆ ತಮ್ಮೊಳಗೆ ನಾಲ್ಕು ಗುಂಪುಗಳನ್ನು ಮಾಡಬೇಕೆಂದು ಅವರು ಸೂಚಿಸಿದರು. ಈ ಸೂಚನೆಗೆ ಸಮ್ಮತಿಯು ದೊರೆತ ಕೂಡಲೆ ಅವರು ತಮ್ಮ ಕಾರ್ಯದ ಯೋಜನೆಯನ್ನು ಸಿದ್ಧಪಡಿಸಲುದ್ಯುಕ್ತರಾದರು. ಮೊದಲು ಕರಿಹಲಗೆಯ ಮೇಲೆ ಹಾಗೂ ಟಿಪ್ಪಣಿಯ ಪುಸ್ತಕಗಳಲ್ಲಿ ಮೋಟರ ಪ್ರವಾಸಿಕರ ಪ್ರಕಾಶ ಪುಸ್ತಕದ ಸಹಾಯದಿಂದ ಜಿಲ್ಲೆಯ ನಕಾಶವನ್ನು ತೆಗೆಯಲಾಯಿತು; ಸಾಲೆಯನ್ನು ಕೇಂದ್ರವಾಗಿಟ್ಟುಕೊಂಡು ಅರ್ಧ ಮೈಲು ತ್ರಿಜ್ಯವುಳ್ಳ ಒಂದು ವರ್ತುಳವನ್ನು ತೆಗೆಯಲಾಯಿತು. ಅದರಲ್ಲಿ ನಾಲ್ಕು ಸರಿಯಾದ ವರ್ತುಳ ಬಂಡಗಳನ್ನು ಕಲ್ಪಿಸಿ ಒಂದೊಂದನ್ನು ಒಂದೊಂದು ಗುಂಪಿಗೆ ಒಪ್ಪಿಸಿಕೊಡಲಾಯಿತು. ಪ್ರತಿಯೊಂದು ಗುಂಪಿನ ಬಾಲಕರು ತಮ್ಮ ಕ್ಷೇತ್ರದೊಳಗಿನ ಬ್ಯಾಂಕುಗಳನ್ನು ೨ ದಿನಗಳಲ್ಲಿ ಪ್ರತ್ಯಕ್ಷವಾಗಿ ಸಂದರ್ಶಿಸಿದರು. ತಾವು ನೋಡಿದ ಸಂಗತಿಗಳ ಬಗ್ಗೆ ಹೇರಳವಾದ ಟಿಪ್ಪಣಿಗಳನ್ನೂ, ಬ್ಯಾಂಕಿನ ಪ್ರಸಿದ್ಧಿ-ಪತ್ರಿಕೆಗಳನ್ನೂ ಮತ್ತು ಅಧಾವೆ ಪತ್ರಿಕೆಗಳನ್ನು-ತಮ್ಮ ಸಂಗಡ ತಂದರಲ್ಲದೆ, ಬ್ಯಾಂಕುಗಳಿಂದ ಸಮಾಜಕ್ಕೆ ಉಂಟಾಗುವ ಪ್ರಯೋಜನಗಳ ಬಗ್ಗೆ ಅನೇಕ ಸಂಗತಿಗಳನ್ನು ಕಲಿತರು. ಬಾಲಕರು ಸಂಗ್ರಹಿಸಿದ ಕೆಲವು ಸಂಗತಿಗಳು ಶಿಕ್ಷಕನಿಗೆ ಹೊಸವಿದ್ದುದರಿಂದ, ಬ್ಯಾಂಕುಗಳ ವಿಷಯದಲ್ಲಿ ಅವನಿಗೂ ಬಾಲಕರಷ್ಟೇ ಅಭಿರುಚಿ ಉತ್ಪನ್ನವಾಯಿತು. ವರ್ಗದಲ್ಲಿ ಪುನಃ ಎಲ್ಲ ಮಕ್ಕಳೂ ಸೇರಿದಾಗ ಸೂಕ್ತ ಸಂಗತಿಗಳನ್ನೆಲ್ಲ ಕರಿಹಲಗೆಯ ಮೇಲೆ ತಿಳಿಯಾಗಿ ಬರೆಯಲಾಯಿತು ಹಾಗೂ

ಗುಂಪುಗಳ ಹಿರಿಯ ಮಣಿಗಳು ತಾವು ಕಂಡುಕೊಂಡ ಸಂಗತಿಗಳ ವಿವರಗಳನ್ನು ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ತಿಳಿಸಿಕೊಟ್ಟರು. ಪ್ರತಿಯೊಂದು ಗುಂಪು ಸಂಗ್ರಹಿಸಿದ ವಿಷಯಗಳನ್ನು ಅವರ ಅಂಕಿತದೊಂದಿಗೆ ಒಳಗೊಂಡ ಒಂದು ಸವಿಸ್ತರ ವರದಿಯನ್ನು ಸಿದ್ಧಪಡಿಸಬೇಕೆಂದೂ ನಿರ್ಣಯವಾಯಿತು. ಇಂಥ ವರದಿಗಳನ್ನು ಮುಂದಿನ ಸಂಶೋಧಕರ ಉಪಯೋಗಾರ್ಥವಾಗಿ ಮುಖ್ಯಾಧ್ಯಾಪಕನ ಕೋಣೆಯಲ್ಲಾಗಲಿ, ರೆಕಾರ್ಡ ರೂಮಿನೊಳಗಾಗಲಿ ಕಾಯ್ದಿಡುವದು ಬಹಳ ವಿಹಿತ.

ಇಂಥ ಯೋಜನೆಗಳ ವಿಷಯದಲ್ಲಿ ತರುಣ ಶಿಕ್ಷಕನಿಗೆ ಒಂದು ಎಚ್ಚರಿಕೆ ಅವಶ್ಯ: ಮಕ್ಕಳಿಗೆ ವರ್ಗದ ಕೋಣೆಯ ಪರಿಮಿತಿಯೊಳಗಿನ ಸಾಮೂಹಿಕ ಚಟವಟಿಕೆಗಳ ಅನುಭವವು ಸಾಕಷ್ಟು ದೊರೆತ ಹೊರತು ವಿಶಾಲ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ಮಾಡಲಿಕ್ಕೆ ಮಕ್ಕಳಿಗೆ ಎಂದೂ ಅವಕಾಶ ಕೊಡಕೂಡದು. ಉಚಿತ ಹಾಗು ಅನುಚಿತ ಸಂಗತಿಗಳ ತಾರತಮ್ಯ ಭಾವವು ಮಕ್ಕಳಿಗೆ ಸರಿಯಾಗಿ ತಿಳಿದ ಹೊರತು ವಿಷಯ ಸಂಗ್ರಹಕ್ಕಾಗಿ ಅವರನ್ನು ಎಂದಿಗೂ ಹೊರಗೆ ಕಳಿಸಕೂಡದು. ಇಲ್ಲವಾದರೆ ಅವರು ತಮ್ಮ ವೇಳೆಯನ್ನಲ್ಲದೆ ಕಾರ್ಯಭರಿತರಾದ ಇತರರ ವೇಳೆಯನ್ನೂ ಹಾಳು ಮಾಡುವದರಲ್ಲಿ ಸಂದೇಹವಿಲ್ಲ.

ಸಾಮಾಜಿಕ ಅಭ್ಯಾಸಗಳು:— ಕಲಿಯುವಿಕೆಗೆ ಪ್ರಚೋದಕವಾಗಿ.

ಒಂದು ಔದ್ಯೋಗಿಕ ಪಟ್ಟಣಕ್ಕೆ ಹೊಂದಿಕೊಂಡಿರುವ ಉಪನಗರದಲ್ಲಿಯ ಹಿರಿಯ (ಅಥವಾ ನೂತನ) ಮಕ್ಕಳ-ಸಾಲೆ. ಅಲ್ಲಿ ಸ್ವಾಮುಖ್ಯವಾಗಿ ಪಟ್ಟಣದ ವಾತಾವರಣ. ಆದರೂ, ಹೊಲ-ಗದ್ದೆ ಮೊದಲಾದವುಗಳ ಸಾನ್ನಿಧ್ಯದಿಂದ ಆರೋಗ್ಯಕರ ಹಾಗು ವಿಶ್ರಾಂತಿಗೆ ತಕ್ಕುದಾದ ಸ್ಥಳ. ತಾರುಣ್ಯ ಉತ್ಸಾಹಗಳಿಂದೊಡಗೂಡಿದ ಮುಖ್ಯಾಧ್ಯಾಪಕ. ಸಾಲೆಯ ಪ್ರತಿಯೊಬ್ಬ ಬಾಲಕ-ಬಾಲಿಕೆಯ ಉತ್ಕರ್ಷವೇ ಅತನ ಕಳಕಳಿಯ ವಿಷಯ. ಸುದೈವದಿಂದ ತನ್ನಷ್ಟೇ ಉತ್ಸುಕರಿರುವ ಶಿಕ್ಷಕ ವರ್ಗವನ್ನು ಪಡೆದಿದ್ದನು. ವಿದ್ಯಾರ್ಥಿಗಳಲ್ಲಿ ಅನೇಕರು ಮೂಲ ವಿಷಯಗಳಲ್ಲಿ ಹಿಂದುಳಿದವರಾಗಿದ್ದರು; ೧೦೦ಕ್ಕೆ ಸುಮಾರು ೧೫ ರಷ್ಟು ಮಕ್ಕಳಿಗೆ ಓದು ಬರುತ್ತಲೇ ಇರಲಿಲ್ಲ. ಉದಾಸೀನತೆ, ಮೂಕ ಭಾವಗಳು ಹಿಂದುಳಿದ ಮಕ್ಕಳ ಲಕ್ಷಣಗಳಲ್ಲವೇ? ಹಾಗೆಯೆ ಅಲ್ಲಿಯ ವಿದ್ಯಾರ್ಥಿಗಳು. ಶಾಲೆಯ ಜೀವನ ಹಾಗು ಕಾರ್ಯಗಳಲ್ಲಿ ಅವರಿಗೆ ಅಭಿರುಚಿಯೇ ಇರಲಿಲ್ಲ.

ನಮಗೆ ಗೊತ್ತಿದ್ದ ಎಲ್ಲ ವಿಶ್ವಸನೀಯ ಸಾಧನಗಳಿಂದ ಈ ಮಕ್ಕಳನ್ನು ಪರೀಕ್ಷಿಸುವದರಲ್ಲಿ ಆರಂಭದ ಕೆಲವು ದಿನಗಳು ಕಳೆದು ಹೋದವು. ಕೆಲವು ಮಕ್ಕಳಲ್ಲಿ ನಿವಾರಿಸಲಿಕ್ಕೆ ಶಕ್ಯವಾದ ದೋಷಗಳಿದ್ದವು; ಕೆಲವರಲ್ಲಿ ನಿವಾರಿಸಲಶಕ್ಯವಾದ ದೋಷಗಳಿದ್ದವು. ಕೆಲವರಲ್ಲಿ ಬೌದ್ಧಿಕ ಸಾಮರ್ಥ್ಯಗಳು ಸುಪ್ತವಾಗಿದ್ದವು; ಕೆಲವರಲ್ಲಿ ಅಂಥ ಸಾಮರ್ಥ್ಯಗಳೇ ಇರಲಿಲ್ಲ. ಈ ಶೋಧಗಳು ಬಹಳ ಆಶ್ಚರ್ಯಕಾರಕವಿದ್ದವು. ಮಕ್ಕಳ ಸ್ವಭಾವ, ಶೀಲ, ಅಭಿರುಚಿ ಈ ವೈಯಕ್ತಿಕ ಗುಣವಿಶೇಷಗಳನ್ನು ಶಿಕ್ಷಕರು ಅಂದಾಜಿನಿಂದ ಕಂಡು ಹಿಡಿದರು. ಸಾಮಾಜಿಕ ಅಭ್ಯಾಸದ ತಳಹದಿಯ ಮೇಲೆ ಹೊಸ ಅಭ್ಯಾಸ ಕ್ರಮವನ್ನು ಸಿದ್ಧಪಡಿಸಬೇಕೆಂದು ಗೊತ್ತು ಮಾಡಿದರು. ಆದುದರಿಂದ ಹೊಸ ವರ್ಗಗಳೊಳಗಿನ ಮಕ್ಕಳನ್ನು ಇಡಿಯ ಜಿಲ್ಹೆಯ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಯಿತು. ಪ್ರವಾಸದಲ್ಲಿ ಅಂಗಡಿಗಳು, ಕಾರಖಾನೆಗಳು, ಆಡಳಿತದ ಕಚೇರಿಗಳು, ಚರ್ಚುಗಳು, ಸಮೀಪದಲ್ಲಿದ್ದ ಗಿಡಗಳು ಹಾಗೂ ಹೊಲಗಳು ಇವೇ ಮೊದಲಾದ ಮಹತ್ವದ ಸಾಮಾಜಿಕ ವಿಷಯಗಳ ಬಗ್ಗೆ ಟಿಪ್ಪಣಿ ಬರೆದುಕೊಂಡರು. ಮಕ್ಕಳು ಮರಳಿ ಬಂದ ಬಳಿಕ, ಜಿಲ್ಹೆಯ ನಕಾಶವನ್ನು ತೆಗೆದು ಅದರಲ್ಲಿ ತಾವು ನೋಡಿದ ಸಂಗತಿಗಳನ್ನು ತೋರಿಸಲಿಕ್ಕೆ ಶಿಕ್ಷಕರು ಮಕ್ಕಳಿಗೆ ಸೂಚಿಸಿದರು. ಇದು ಅವರಿಗೆ ಸಾಧ್ಯವಾಗಲಿಲ್ಲ. ಬಳಿಕ ಶಿಕ್ಷಕನು ಜಿಲ್ಹೆಯ ಕಚ್ಚಾ ನಕಾಶದ ಪ್ರತಿಗಳನ್ನು ತಾನೇ ಸಿದ್ಧಪಡಿಸಿ ಅದರಲ್ಲಿ ಸಾಲೆಯನ್ನೂ ಅದರ ಸುತ್ತುಮುತ್ತಲಿನ ಓಣಿಗಳನ್ನೂ ಗುರುತಿಸಿದನು. ಮಕ್ಕಳು ಚಿತ್ರ ಬರೆಯುವ ಬಣ್ಣದ ಕಡ್ಡಿಗಳಿಂದ ಅವುಗಳ ಹೆಸರುಗಳನ್ನು ಬರೆದರು. ೧೨ ವರ್ಷ ವಯಸ್ಸಿನ ಕೆಲವು ಮಕ್ಕಳು ಮಾತ್ರ "ಸಾಲೆ"(School) "ಕಟುಕ" (Butcher) "ಕಿರಾಣಿ ಅಂಗಡಿಕಾರ" (Grocer), "ಚರ್ಚು" (Church) ಇವೇ ಮೊದಲಾದ ತೀರ ಸುಲಭ ಶಬ್ದಗಳನ್ನು ಸರಿಯಾಗಿ ಬರೆದರು.

ಮರುದಿನ ಮಕ್ಕಳು ಇಡಿಯ ಜಿಲ್ಹೆಯ ಶೋಧವನ್ನು ವಿವರವಾಗಿ ನಡೆಸಿದರು. ಮೊದಲನೆಯ ಸಲ ಅವರು ರೊಟ್ಟಿಗಾರನ ಅಂಗಡಿಯಲ್ಲಿ ವಿಶ್ರಮಿಸಿದರು. ಈ ವಿಶ್ರಾಮವು ಅವರಲ್ಲಿ ಹುಟ್ಟಿದ ಅಭಿರುಚಿಯ ದ್ಯೋತಕವಾಗಿತ್ತು.

ಅಲ್ಲಿ ಅವರು ಕೆಲ ಕಾಲ ನಿಂತು ಆ ಅಂಗಡಿಯ ಸ್ಥೂಲ ವರ್ಣನೆಯನ್ನು ಸಿದ್ಧಪಡಿಸಿದರು. ಆ ಮೇಲೆ ಮಾರ್ಗದ ಎರಡನೆಯ ಬದಿಯಲ್ಲಿದ್ದ ಕುಟುಕನ ಅಂಗಡಿಯ ಕಡೆಗೆ ತೆರಳಿದರು. ಸಾಲಿಗೆ ಮರಳಿ ಬಂದ ಬಳಿಕ ಅವರು ನಕ್ಷೆಕ್ಕೆ ಯೋಗ್ಯ ಬಣ್ಣಗಳನ್ನು ಕೊಟ್ಟರು, ಆದರೆ ತಾವು ನೋಡಿದ ಸಂಗತಿಗಳನ್ನು ಕುರಿತು ಚಿಕ್ಕ ಟಿಪ್ಪಣಿಗಳನ್ನು ಬರೆಯುವದು ಅವರಿಗೆ ಶಕ್ಯವಾಗಲಿಲ್ಲ.

ಕಾಲವು ಗತಿಸಿದಂತೆ ಈ ಅಭ್ಯಾಸದಲ್ಲಿ ಮಕ್ಕಳ ಅಭಿರುಚಿಯು ಕ್ರಮೇಣ ಬೆಳೆಯತೊಡಗಿತು, ಅವರ ಸ್ಥೂಲ ಚಿತ್ರಗಳು ಸುಧಾರಿಸಿದವು, ವಿವರಣೆಗಳು ದೀರ್ಘವಾಗತೊಡಗಿದವು; ಮತ್ತು ತಾವು ನೋಡಿದ ಕೆಲವು ಅಂಗಡಿಗಳ ಮಾದರಿ (Model) ಗಳನ್ನು ಮಾಡಬೇಕೆಂಬ ಕಲ್ಪನೆಯು ಅವರಲ್ಲಿ ಅಂಕುರಿಸಿತು. ಅವರು ರಟ್ಟಿನ ಮಾದರಿಗಳನ್ನು ತಯಾರಿಸಿ ಅವುಗಳಲ್ಲಿ ಅರಲಿನಿಂದ ಮಾಡಿದ ವಿವಿಧ ಸಾಮಾನುಗಳನ್ನು ಇಟ್ಟರು. ಈ ಕೆಲಸವು ಕೆಲವು ಸಾಮೂಹಿಕ ಯೋಜನೆಗಳ ಮುಖಾಂತರ ನಿರ್ವಹಿಸಲ್ಪಟ್ಟಿತು. ಕಲಾ ಶಿಕ್ಷಕನ ಸಹಾಯದಿಂದ ಆ ಚಿತ್ರಕ್ಕೆ ಹಿನ್ನೆಲೆಯಾಗಿ ಆಕಾಶವನ್ನೂ ಮೋಡಗಳನ್ನೂ ತೆಗೆಯಲಾಯಿತು. ಬಳಿಕ, ರೊಟ್ಟಿಯ ಅಂಗಡಿ, ಕಿರಾಣಿ ಅಂಗಡಿ, ಪಖಾರ, ಕಟುಕನ ಅಂಗಡಿ, ಕಬ್ಬಿಣ ಅಂಗಡಿ, ಔಷಧಗಳ ಅಂಗಡಿ ಇವೇ ಮೊದಲಾದ ಸ್ಥಳಗಳಲ್ಲಿ ನಡಿಯುವ ಪಟ್ಟಣದ ಉದ್ಯೋಗಗಳ ಬಗ್ಗೆ ಸುಲಭ ಪುಸ್ತಕಗಳಲ್ಲಿ ದೊರೆಯದ ಮಾಹಿತಿಯನ್ನು ಕೇಳಲಾಯಿತು. ಮಾಹಿತಿಯ ಶೋಧನೆಯು ಅದರಲ್ಲಿ ಓದುವ ಕುತೂಹಲವನ್ನು ಕೆರಳಿಸಿತು. ಅಲ್ಲದೆ, ಅಂಗಡಿಗಳನ್ನು ಸಂದರ್ಶಿಸಿ ಹೆಚ್ಚಿನ ಪ್ರತ್ಯಕ್ಷ ಮಾಹಿತಿಯನ್ನು ಸಂಪಾದಿಸುವ ಕೆಲಸಕ್ಕೆ ಪ್ರಾರಂಭವಾಯಿತು. ಮಕ್ಕಳಿಗೆ ಅವರ ಎಲ್ಲ ಕೆಲಸಗಳಲ್ಲಿ ಹಾರ್ದಿಕ ಬೆಂಬಲವು ದೊರೆಯಿತು.

ಮಕ್ಕಳು ಎಷ್ಟೋ ಸ್ಥಳಿಕ ವಿಷಯಗಳನ್ನು ತಿಳಿದುಕೊಳ್ಳುವದಾದಮೇಲೆ, ಚರ್ಚಿನಲ್ಲಿ ಅನೇಕ ಕೌತುಕದ ಸಂಗತಿಗಳನ್ನು ಕಾಣಬಹುದೆಂದು ಒಬ್ಬ ಬಾಲಕನು ಸೂಚಿಸಿದನು. ಮಕ್ಕಳು ಸಂದರ್ಶಿಸಿದ ಎಲ್ಲ ಸ್ಥಳಗಳಿಗಿಂತಲೂ ಚರ್ಚು ಅತ್ಯಂತ ಕೌತುಕದ ಸ್ಥಳವೆಂದು ಮಕ್ಕಳಿಗೆ ಅನಿಸಿತು. ಆ ಚರ್ಚಿನ ಇತಿಹಾಸವು ಅಲ್ಲಿಯ ಧರ್ಮೋಪದೇಶಕನಿಗೆ ಚೆನ್ನಾಗಿ ಗೊತ್ತಿತ್ತು. ಅವನು ಮಕ್ಕಳಿಗೆ ಪರಿಚಿತವಾದ ಕುಟುಂಬಗಳ ಚರಿತ್ರೆಗಳಿಂದ ಆರಂಭ ಮಾಡಿ ನಂತರ ಚರ್ಚಿನ ಇತಿಹಾಸವನ್ನು ನಿರೂಪಿಸಿದನು. ಆ ಮೇಲೆ ಅವನು ಚರ್ಚಿನಲ್ಲಿದ್ದ ರಾಗದ ಪೆಟ್ಟಿಗೆಯನ್ನೂ ಅದನ್ನು ಬಾರಿಸುವ ವಿಧಾನವನ್ನೂ ಅವರಿಗೆ ತೋರಿಸಿದನು. ಅಲ್ಲಿಂದ ಮರಳಿ ಬಂದ ಬಳಿಕ ಚೆನ್ನಾಗಿ ಬರೆಯ ಬಲ್ಲ ಬಾಲಕನೊಬ್ಬನು ಒಂದು ಸುದೀರ್ಘವಾದ ಆಕರ್ಷಕ ವೃತ್ತಾಂತವನ್ನು ಬರೆದು ಕೊಟ್ಟನು. ಅದನ್ನು ದಿನೆ ದಿನೆ ದೊಡ್ಡದಾಗುತ್ತ ಹೋಗುತ್ತಿದ್ದ ಚಿತ್ರಗಳ ಹಾಗು ನಿರೀಕ್ಷಣೆಗಳ ಪತ್ರ ಸಂಗ್ರಹಕ್ಕೆ ಜೋಡಿಸಲಾಯಿತು.

ಮಕ್ಕಳ ಸಾಮಾಜಿಕ ಅಭ್ಯಾಸವು ಯಾವ ಕ್ರಮದಲ್ಲಿ ಅಭಿವೃದ್ಧಿ ಹೊಂದುತ್ತ ನಡೆಯಿತೆಂಬದನ್ನು ಮೇಲಿನ ವರ್ಣನೆಯಿಂದ ತಿಳಿದುಕೊಳ್ಳಬಹುದಾಗಿದೆ. ಮಕ್ಕಳು ತಮ್ಮ ಸಮೀಪದ ಸನ್ನಿವೇಶಗಳ ಬಗ್ಗೆ ಸಾಧ್ಯವಿದ್ದಷ್ಟು ಜ್ಞಾನವನ್ನು ಸಂಪಾದಿಸಿದ ನಂತರ ಹೊಲ, ಕಾರಖಾನೆ ಮೊದಲಾದ ದೂರಿನ ವಿಷಯಗಳಿಗೆ ಸಾಗಿದರು. ಮರುವರ್ಷ ಅವರು ಬೇರೆ ಬೇರೆ ಪಟ್ಟಣಗಳಿಗೆ ಪ್ರವಾಸವನ್ನು ಕೈಕೊಂಡರು.

ಮಕ್ಕಳು ತಮ್ಮ ಇಡಿಯ ವೇಳೆಯನ್ನು ತಮ್ಮ ಸುತ್ತಲಿನ (ಬಳಿಸಿರುವ) ಸನ್ನಿವೇಶಗಳ ಅಭ್ಯಾಸದಲ್ಲಿಯೇ ಕಳೆದರೆಂದು ತಿಳಿಯಕೂಡದು. ಎಷ್ಟೋ ಮಕ್ಕಳಿಗೆ ತಮ್ಮ ಸಾಮಾನ್ಯ ಶಿಕ್ಷಣದಲ್ಲಿ ಹಲಕೆಲವು ಕುಂದು-ಕೊರತೆಗಳಿರುವವೆಂದೂ ಅವುಗಳನ್ನು ತುಂಬಿಕೊಳ್ಳುವದು ಅತ್ಯಗತ್ಯವೆಂದೂ ಅನಿಸಹತ್ತಿತು. ಈ ಕುಂದು ಕೊರತೆಗಳು ಮುಖ್ಯವಾಗಿ ಇಂಗ್ಲಿಷ ಭಾಷೆ ಮತ್ತು ಗಣಿತ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ಅವುಗಳನ್ನು ನಿವಾರಿಸುವದಕ್ಕಾಗಿ ಕಲಿಸುವ ವರ್ಗಗಳನ್ನು ತೆರೆಯಲಾಯಿತು. ಮಕ್ಕಳು ಕಥೆ ಪುಸ್ತಕಗಳನ್ನು ಕೇಳದಿದ್ದುದು ಕುತೂಹಲದ ವಿಷಯವಾಗಿದೆ. ತಮಗೆ ಸಂಬಂಧಿಸಿದ ಪ್ರಪಂಚದ ಜ್ಞಾನವನ್ನು ಬೆಳಿಸಿಕೊಳ್ಳಲಿಕ್ಕೆ ಸಹಾಯಕವಾದ ಪುಸ್ತಕಗಳನ್ನೇ ಅವರು ಕೇಳುತ್ತಿದ್ದರು.

ವರ್ಷದ ಕೊನೆಗೆ ಪ್ರಾಮುಖ್ಯ ವಿಷಯಗಳ ಮೂಲ ಸಂಗತಿಗಳ ಜ್ಞಾನವು ಸರಿಯಾಗಿ ಉಂಟಾಯಿತು. ಎರಡನೆಯ ವರ್ಷದ ಅಂತ್ಯಕ್ಕೆ ಕೆಲವು ಮಕ್ಕಳನ್ನುಳಿದು ಎಲ್ಲರೂ ಸಾಮಾನ್ಯ ಮಟ್ಟಕ್ಕೆ ಬಂದರು. ಕಲಿಯಬೇಕೆಂಬ ಹಂಬಲವು ಅವರಲ್ಲಿ ಚೆನ್ನಾಗಿ ಬೆಳೆದು ಬಂದಿತ್ತು.

ಸಾಮಾನ್ಯ ನಿರ್ಣಯಗಳು.

ಸಾಮಾಜಿಕ ಚಟುವಟಿಕೆಗಳ ಮುಖಾಂತರ ಶಿಕ್ಷಣ ಕೊಡುವ ವಿಷಯದಲ್ಲಿ ನನ್ನ ಅಭಿರುಚಿಯು ಬಹುಕಾಲ-ವಿದ್ದುದರ ಪರಿಣಾಮವಾಗಿ ನಾನು ಕೆಲವು ಸಾಮಾನ್ಯ ನಿರ್ಣಯಗಳಿಗೆ ಬಂದಿರುವೆನು. ಸಾಮಾಜಿಕ ಸುಸಂಬದ್ಧತೆ-ಯಿಂದ ಬೌದ್ಧಿಕ ಆಸಕ್ತಿಯುಂಟಾಗುವದೆಂಬುದು ಮೊದ-ಲನೆಯದು. ತಮ್ಮ (ನ್ನು ಆವರಿಸಿದ) ಸುತ್ತಲಿನ ಪ್ರಪಂಚ ಮತ್ತು ತಮ್ಮ ಸಮಾಜ ಜೀವನ –ಚಟುವಟಿಕೆ– ಇವುಗ-ಳಲ್ಲಿ ಮಕ್ಕಳ ಆಸಕ್ತಿ ಬಹಳ. ಚಟುವಟಿಕೆಗಳ ಮುಖಾಂ-ತರ ಕೊಡಲಾದ ಸಾಮಾಜಿಕ ಜೀವನದ ತರಬೇತಿಯು ಸಾಲೆಯ ಪ್ರಪಂಚದಿಂದ ಈ ದೂರವಿರುವ ವಿಸ್ತೃತ ಜೀವ-ನಕ್ಕೆ ಪಸರಿಸುತ್ತದೆಂಬುದು ಎರಡನೆಯದು. ವ್ಯಾವಹಾರಿಕ ಶಿಕ್ಷಣವು ಫಲಕಾರಿಯಾಗಬೇಕಾದರೆ ಅದಕ್ಕೆ ಸಾಮಾಜಿಕ ಸುಸಂಬದ್ಧತೆಯಿರಬೇಕೆಂಬುದು ಮೂರನೆಯದು. ಕೊನೆ-ಯದಾಗಿ, ಉತ್ತಮವಾದ ಸಾಮಾಜಿಕ ಶಿಕ್ಷಣದಿಂದ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮವಾಗುವದು; ಏಕೆಂದರೆ, ಅದರಿಂದ ಮಗುವಿನ ಇಡಿಯ ವ್ಯಕ್ತಿತ್ವವೇ ವಿಕಾಸಗೊಳ್ಳುವದು. ಸಾಮಾಜಿಕ ಯೋಜನೆಗಳ ಮುಖಾಂತರ ತಮ್ಮ ಕೃತಿ ಪ್ರೇಮವನ್ನು ವ್ಯಕ್ತಗೊಳಿಸಲು ಪೂರ್ಣ ಸ್ವಾತಂತ್ರ್ಯವುಳ್ಳ ಮಕ್ಕಳಲ್ಲಿ ಚಿಂತೆ ಮೊದಲಾದ ಮಾನಸಿಕ ಜಾಡ್ಯಗಳು ತೋರಬರುವದಿಲ್ಲ.

—'ನ್ಯೂ ಈರಾ' ಪತ್ರಿಕೆಯಿಂದ.

ಸೇವೆ

[ಕೂಚು ಗೀತ]

●

ಸಾಗಿರೀಗ ಮುಂದೆ । ಕನ್ನಡಿಗರಿಂದೆ ।
ನಾಡಸೇವೆಯೊಂದೆ । ನಮ್ಮ ಗುರಿಯು ಮುಂದೆ ॥
ಗಾಂಧಿಯವರ ಗಂಧವ । ಸಂದಿಗೊಂದಿಯಲ್ಲಿ ।
ಹೊಂದ ಹಿಡಿದು ಇಂದು । ಸಾಲು ಹಿಡಿದು ಬಂದು ॥ ೧ ॥

ಜನತೆ ಸೇವೆ । ಜನಾರ್ದನ ಸೇವೆ ।
ಎಂಬ ತತ್ತ್ವದಿಂದೆ । ಸಾಗುವಾ ಮುಂದೆ ॥ ೨ ॥

ಹಾದಿಯಲ್ಲಿ ಬೆಳೆದಿಹ । ಹುಲ್ಲು ಕಸವ ಕೆತ್ತುತೆ ।
ಬುಟ್ಟಿಯಲ್ಲಿ ತುಂಬಿ ನಾವ್ । ದೂರ ಚಲ್ಲಿ ಸಾಗುವಾ ॥ ೩ ॥

ಕೆಟ್ಟ ಹೊಲಸು ನಾರುವ । ಕಾಲುವೆಯ ಹೊಲಸನು ।
ಶಿಸ್ತಿನಿಂದ ತೆಗೆದು ನಾವ್ । ಮತ್ತೆ ಮುಂದೆ ಸಾಗುವಾ ॥ ೪ ॥

ಅಂದವಾದ ಸುಂದರ । ಹಿಂದುಸ್ತಾನವನ್ನು ।
ಕಂದರೆಲ್ಲ ಕೂಡಿ । ಚಂದವಾಗಿ ಮಾಡುವಾ ॥ ೫ ॥

—ಎಸ್. ಬಿ. ಗುಡ್ಡೆಣ್ಣವರ.
೧ನೇ. ವ. ಬ.

ಸರ್ವ ಧರ್ಮಗಳಲ್ಲಿ ಸಮಭಾವ

ಲೇಖಕರು: ಶ್ರೀ. ಎಚ್. ಎಸ್. ದೂದಿಹಳ್ಳಿ, ಬಿ. ಎ., ಬಿ. ಟಿ. ಧಾರವಾಡ.

ಪ್ರತಿಯೊಂದು ವ್ಯಕ್ತಿಯಲ್ಲಿ, ದಿನಗಳು ಕಳೆದಂತೆ ಒಂದಿಲ್ಲೊಂದು ತರದ ಧರ್ಮ ಭಾವನೆಯು ತಲೆದೋರುವದೆಂದು ಧಾರಾಳವಾಗಿ ಹೇಳಬಹುದು. ಇದು ಆಯಾ ವ್ಯಕ್ತಿಯ ದೇಶ, ಕಾಲಮಾನ, ಪರಿಸ್ಥಿತಿಗಳಿಗನುಸಾರವಾಗಿ ವೃದ್ಧಿ ಪಡೆಯುತ್ತ ಹೋಗುವದು. ಈ ರೀತಿಯಲ್ಲಿ, ತನ್ನದೇ ಆದ ಧರ್ಮ ಭಾವನೆಗೆ ಬಲವಾಗಿ ಅಂಟಿಕೊಂಡಾಗ ಪರಧರ್ಮಗಳನ್ನು ಅವನು ಯಾವ ದೃಷ್ಟಿಯಿಂದ ನೋಡಬೇಕೆಂಬುದು ವಿಚಾರ ಮಾಡತಕ್ಕ ಮಾತಾಗಿದೆ. ಸದ್ಯದ ಕಾಲದಲ್ಲಿ ನಮ್ಮ ಸುತ್ತಲೂ ಜಾತೀಯತೆಯು ವಿಕೋಪಕ್ಕೆ ಹೋಗಿ ಮುಟ್ಟಿದ ಸ್ಥಿತಿಯು ಕಂಡು ಬರುತ್ತದೆ. ದಿನದಿನದ ಪತ್ರಿಕೆಗಳಲ್ಲಿ ನಾವು ಓದುವ ಕೊಲೆ, ಸುಲಿಗೆ, ಪಾತಕಗಳು ಈ ಧರ್ಮಾಂಧತನದ ನಿದರ್ಶನಗಳು. ಅರ್ಥವಿಷ್ಟೆ! ಸಾಮಾನ್ಯ ಮನುಷ್ಯನು ವಿಧರ್ಮೀಯರನ್ನು ಹೇಗೆ ಕಾಣಬೇಕೆಂಬುದನ್ನು ತಿಳಿಯದೇ ಬಾಳಹತ್ತಿದ್ದಾನೆ. ಈ ಕ್ರಮವು ಹೆಚ್ಚು ಸಾಗಿದರೆ ಪರಧರ್ಮದ ದ್ವೇಷದ ಜೊತೆಗೆ ಸ್ವಧರ್ಮದಲ್ಲಿ ಶ್ರದ್ಧೆಯೂ ಕುಂದುವದು. ಈ ಹೊತ್ತು ಹಿಂದು-ಮುಸಲ್ಮಾನರಲ್ಲಿ ದ್ವೇಷ ಭಾವವು ಕಂಡು ಬಂದರೆ, ಕಾಲಗತಿಯಲ್ಲಿ ಹಿಂದೂ ಧರ್ಮದ ಒಳಪಂಗಡಗಳಲ್ಲಿಯೂ ದ್ವೇಷದ ವಿಷವು ಇಳಿಯತೊಡಗುವದು. ಇದನ್ನು ಹೋಗಲಾಡಿಸುವದರ ಸಲುವಾಗಿ ಒಂದು ಜಾತಿಯ ಉತ್ಸವ, ಹಬ್ಬ, ಜಾತ್ರೆಗಳಲ್ಲಿ ಮತ್ತೊಂದು ಜಾತಿಯವರು ಸಂತೋಷದಿಂದ ಭಾಗವಹಿಸಬೇಕು ಎಂದಿಟ್ಟುಕೊಳ್ಳಬಹುದು. ಮೊನ್ನೆ ಮೊನ್ನೆಯ ವರೆಗೆ, ಹಿಂದೂ-ಮುಸಲ್ಮಾನರು ಈ ರೀತಿಯಲ್ಲಿ ನಡೆದುಕೊಂಡರೆಂಬುದಕ್ಕೆ ವಿಪುಲ ಉದಾಹರಣೆಗಳಿವೆ. ಹಿಂದೂ ಧರ್ಮದ ಒಳಪಂಗಡಗಳಲ್ಲಿ ಈ ತರದ ಸಮಭಾವವು ಇಂದಿಗೂ ಕಂಡುಬರುತ್ತದೆ. ನಮ್ಮ ಕರ್ನಾಟಕದಲ್ಲಿಯಂತೂ ಗಣೇಶನ ಹಬ್ಬ, ದಸರೆ, ಹೋಳೀ-ಹುಣ್ಣಿವೆಗಳು ಅಖಿಲ ಹಿಂದುಗಳಿಗಷ್ಟೇ ಅಲ್ಲದೆ, ಮುಸಲ್ಮಾನರಿಗೂ ಪ್ರಿಯವಾಗಿದ್ದವು. ಮೊಹರಂದಲ್ಲಿ ಎಷ್ಟೊ ಹಿಂದೂ "ಮೇಳ"ಗಳು ಉತ್ಸಾಹ ತೋರಿದ್ದುಂಟು. ಆದರೆ ಈ ಸೌಹಾರ್ದವೆಲ್ಲ ಈಗ ಅಳಿದು ಹೋಗಿ, ಮತ ಮತಗಳಲ್ಲಿ ತೀವ್ರ ವಿರೋಧವು ಬಂದು, ಒಂದು ಮತದ ಉತ್ಸವಗಳು ಇನ್ನೊಂದು ಮತದವರಿಗೆ ಹೇಯವಾಗಹತ್ತಿವೆ. ಇದು ಉಚಿತವೋ, ಅನುಚಿತವೊ ಎಂಬುದು ಸಾಮಾನ್ಯ ಮನುಷ್ಯರಿಗೆ ದೊಡ್ಡ ಪ್ರಶ್ನೆ.

ಮನುಷ್ಯನನ್ನು "ಧಾರಣ" ಮಾಡುವದೂ, ಉದ್ಧಾರ ಮಾಡುವದೂ ಆತನ ಧರ್ಮವೇ ಅಲ್ಲವೆ? ಒಟ್ಟಿನಲ್ಲಿ, ಮನುಷ್ಯನ ಧರ್ಮವು ಆತನನ್ನು ತಾಯಿಯಂತೆ ಸಲಹುತ್ತದೆಂದು ಬಲ್ಲವರು ಹೇಳುತ್ತಾರೆ. ತಾಯಿಯಲ್ಲಿ ತೋರಿಸುವಷ್ಟು ಅನುರಾಗ, ಆದರಗಳನ್ನು ಮನುಷ್ಯನು ತನ್ನ ಧರ್ಮದಲ್ಲಿ ತೋರಿದಾಗ ನಿಜವಾಗಿ ಆತನ ಉದ್ಧಾರವಾಗುವದು. ಈ ರೀತಿಯಲ್ಲಿ ಅವರವರ ತಾಯಂದಿರು ಅವರವರಿಗೆ ಪ್ರಿತ್ಯಾಸ್ಪದರಷ್ಟೆ! ನೀವು ನಿಮ್ಮ ತಾಯಿಗೆ ಮಾನ ಕೊಡುವಂತೆ ನಿಮ್ಮ ಗೆಳೆಯನಾದ ವಿಧರ್ಮೀಯನು ತನ್ನ ತಾಯಿಗೆ ಮಾನ ಕೊಟ್ಟರೆ ಆಶ್ಚರ್ಯವೇನು? ನೀವು ನಿಮ್ಮ ಗೆಳೆಯನ ಮನೆಗೆ ಹೋದಾಗ ಅವನ ತಾಯಿಯನ್ನು ಕಡಗಣಿಸುವದು ಹೇಯವಾದ ಕೆಲಸವೆನಿಸುವದು. ಇಷ್ಟೇ ಅಲ್ಲ! ಸೌಜನ್ಯ, ಸುಶೀಲತೆಗಳಿಂದ ಕೂಡಿದ ಮನುಷ್ಯನು ತನ್ನ ಗೆಳೆಯನ ತಾಯಿಯನ್ನು ಕಂಡಾಗ ತಲೆಬಾಗದೇ ಇರನು. ಈ ಮಾತನ್ನು ಪ್ರತಿಯೊಂದು ವ್ಯಕ್ತಿಯು ತನ್ನ ದಿನದಿನದ ಬಾಳುವೆಯಲ್ಲಿ ತಿಳಿದುಕೊಳ್ಳಬಹುದು. ಈ ಮಾತನ್ನು ಸಂಪೂರ್ಣವಾಗಿ ಮನಗಂಡಾಗ ಇಂದಿನ ಅನರ್ಥ ಪರಂಪರೆಗಳೆಲ್ಲ ತೀರ ನಿರರ್ಥಕವಾದವೆಂದೆನಿಸುವವು. ಇದಕ್ಕೆ ಅನುಸಾರವಾಗಿ ಧರ್ಮ-ಧರ್ಮಗಳನ್ನು ಪ್ರತಿಯೊಬ್ಬನು ಸಮಭಾವದಿಂದ ನೋಡಿದಾಗ, ಪರಸ್ಪರ ಪ್ರೀತಿ, ವಿಶ್ವಾಸ, ಆದರಗಳು ಬೆಳೆದು, ಧರ್ಮ ಬಾಳ್ವೆಯು ಇನ್ನೂ ರುಚಿಕಟ್ಟಾಗುವದು.

ಪರಧರ್ಮದ ತತ್ವಗಳನ್ನು ತಿಳಿದುಕೊಳ್ಳುವದರಲ್ಲಿ ಇನ್ನೊಂದು ಲಾಭ ಉಂಟು. ಒಬ್ಬನೇ ದೇವರನ್ನು ಹಲವಾರು ಹೆಸರುಗಳಿಂದ ಕರೆದ ಇತರ ಧರ್ಮ ತತ್ವಗಳ ಶ್ರವಣದಿಂದ ಮನುಷ್ಯನ ಮನಸ್ಸು ವಿಶಾಲವಾಗುತ್ತದೆ. ಅದರಂತೆ, ಧರ್ಮದ ತತ್ವಗಳು ದೇಶ, ಕಾಲಮಾನ, ಪರಿಸ್ಥಿತಿಗಳಿಗೆ ಹೊಂದಿಕೆಯಾಗಿ ಸಾಗುವದರಿಂದ ತತ್ವಗಳ ಹೊಳೆಯು ಎತ್ತ ಸಾಗಿದೆಂಬುದನ್ನೂ ಕಂಡುಹಿಡಿಯಬಹುದು. ಪರಧಮರ್ಮ ತತ್ವಗಳನ್ನು ಅರಿತರೆ, ಸ್ವಧರ್ಮದಲ್ಲಿಯ ಶ್ರದ್ಧೆಯು ಕಡಿಮೆಯಾಗುವದೆಂದು ಒಂದು ಬಲವಾದ ವಾದವಿದೆ. ಆದರೆ, ವಿಚಾರಾಂತ್ಯದಲ್ಲಿ ಇದು ಯುರುಳಿಲ್ಲದ ವಾದವೆಂದು ಕಂಡುಬರುವದು. ವಿಧರ್ಮೀಯರ ವಿಧಿ-ನಿಷೇಧ, ಯಾತ್ರೆ, ಉತ್ಸವಗಳನ್ನು ಕಂಡಾಗ ಸ್ವಧರ್ಮದಲ್ಲಿಯೂ ಇಂಥವುಗಳು ಬೇಕಷ್ಟು ಇವೆ ಎಂಬ ಕಲ್ಪನೆಗೆ ಪುಷ್ಟಿ ಬರುತ್ತದೆ. ಒಟ್ಟಿನಲ್ಲಿ ಪರಧರ್ಮಗಳ ಸಂಪರ್ಕದಿಂದ ಮನುಷ್ಯನ ಮನಸ್ಸು ವಿಶಾಲವಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಪರಧರ್ಮದಲ್ಲಿಯ ತತ್ವಗಳು ಸ್ವಧರ್ಮದ ತತ್ವಗಳಿಗಿಂತ ಉನ್ನತವಾಗಿ ಕದಾಚಿತ್ ಕಂಡುಬರುವವೆಂದು ಇಟ್ಟುಕೊಳ್ಳೋಣ. ಇದೇ ಕಾರಣದಿಂದಲೇ ಸ್ವಧರ್ಮದಲ್ಲಿಯ ಆದರವು ಹೆಚ್ಚಾಗುವದು. ಏಕೆಂದರೆ, ಮಿತ್ರನೊಬ್ಬನ ತೋಟದಲ್ಲಿ ಸ್ಪೃಹಣೀಯವಾದ ಗಿಡವೊಂದನ್ನು ಕಂಡಾಗ, ಅದನ್ನು ಎಂದಾದರೂ ನಾಶಗೊಳಿಸಲಿಕ್ಕೆ ಇಚ್ಛಿಸುವೆವೆ? ಇದಕ್ಕೆ ವಿರುದ್ಧವಾಗಿ, ಅಂಥದೊಂದು ಗಿಡವನ್ನು ನಮ್ಮ ತೋಟದಲ್ಲಿ ಬೆಳೆಸಲು ಪ್ರಯತ್ನಿಸುತ್ತೇವೆ. ಅರ್ಥವೆಂದರೆ, ಸ್ವಧರ್ಮದಲ್ಲಿಯ ಲೋಪ-ದೋಷಗಳನ್ನು ಪರಧರ್ಮದ ಅಭ್ಯಾಸದಿಂದ ತುಂಬಿಕೊಳ್ಳಬಹುದು. ದೇವರ ಪ್ರಾರ್ಥನೆಗಾಗಿ ಚರ್ಚ್, ದೇವಾಲಯ, ಮಸೀದಿಗಳಲ್ಲಿ ಕೂಡಿದ ಬೇರೆ ಬೇರೆ ಜಾತಿಯ ಜನರಲ್ಲಿ ಒಂದೇ ತರದ ಮನೋಭಾವನೆಯನ್ನು ಕಂಡುಹಿಡಿಯುತ್ತೇವೆ. ಇದೇ ಮನೋಭಾವನೆಯನ್ನು ತನ್ನ ಪಂಗಡ ಅಥವಾ ಧರ್ಮದವರು ಪ್ರಾರ್ಥನೆ ಸಲ್ಲಿಸುವಾಗ ತೋರ್ಪಡಿಸಿದರೆ, ಪರಧರ್ಮದ ಅಭ್ಯಾಸದಿಂದ ಸ್ವಧರ್ಮದಲ್ಲಿ ಅನಾವಸ್ಥೆಯು ಹೇಗೆ ಹುಟ್ಟಿದಂತಾಯಿತು? ಈ ಮಾತಿನ ಸತ್ಯಾಸತ್ಯೆಯು ಪ್ರಯೋಗ ಅನುಭವಗಳಿಂದಲೆ ಸ್ಥಾಪಿತವಾಗಬೇಕು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಇಂತಹ ಪ್ರಯೋಗಗಳಿಗೆ ಒಳ್ಳೇ ಅನುಕೂಲ ಸಂಧಿಯು ದೊರೆತಂತಾಗಿದೆ. ಒಟ್ಟಿನಲ್ಲಿ ಸರ್ವ ಧರ್ಮ ಸಮಭಾವವು ಈ ದಿನಗಳಲ್ಲಿ ಪ್ರತಿಯೊಂದು ವ್ಯಕ್ತಿಯು ಆಚರಿಸಲೇಬೇಕಾದ ವ್ರತವೆಂದು ಹೇಳಬಹುದು. ಈ ವ್ರತವು ಮುಖ್ಯವಾಗಿ ನಾಲ್ಕು ಮಾತುಗಳನ್ನೊಳಗೊಂಡಿದೆ. ಅವೆಂದರೆ, ಮೊದಲನೆಯದಾಗಿ ಸ್ವಧರ್ಮದಲ್ಲಿ ಪರಮ ಭಕ್ತಿ ಇರಬೇಕು. ಎರಡನೇ ಮಾತೆಂದರೆ, ಪರಧರ್ಮ ಸಹಿಷ್ಣುತೆಯು. ಧರ್ಮ ಧರ್ಮಗಳಲ್ಲಿಯ ಲೋಪ ದೋಷಗಳ ಕಂಡು ಅವುಗಳನ್ನು ತಿದ್ದಿಕೊಳ್ಳುವದು ಮೂರನೇ ಮಾತಾಗಿದೆ. ಈ ಎಲ್ಲ ಕೆಲಸಗಳಲ್ಲಿ ವ್ಯಕ್ತಿಯಲ್ಲಿಯ ತಾಳ್ಮೆ, ಜಾಣ್ಮೆಗಳು ನಾಲ್ಕನೆಯ ಸಂಗತಿಯಾಗಿದೆ. ನಮ್ಮ ದೇಶದಲ್ಲಿ ಸರ್ವ ಧರ್ಮ ಸಮಭಾವದ ಕುರುಹುಗಳು ಮೊದಲಿನಿಂದಲೂ ಕಂಡುಬರುತ್ತವೆ. ಸಂಸ್ಕೃತ ಸಾಹಿತ್ಯವೆಲ್ಲ ಈ ತರದ ಸಮದೃಷ್ಟಿಯಿಂದ ತುಂಬಿದೆ. ನಮ್ಮ ದೇಶದಲ್ಲಿ ಪ್ರಚಲಿತವಿದ್ದ ಷಡ್ದರ್ಶನಗಳು ಬೇರೆ ಧರ್ಮಗಳಲ್ಲಿಯ ತತ್ವಗಳನ್ನು ಗ್ರಹಿಸಿಕೊಂಡಿವೆ. ಹೀಗೆ, ನಮ್ಮಲ್ಲಿಯ ಬೋಧಾಮೃತಗಳನ್ನು ಎರಡನೇಯವರಿಗೆ ಕೊಟ್ಟು, ವಿಧರ್ಮದ ಗುಟ್ಟು ಗುರಿಗಳನ್ನು ನಾವು ಬಳಕೆಯಲ್ಲಿ ತಂದರೆ, ಅನ್ಯಾಯವೇನು? ರಾಮಕೃಷ್ಣ ಪರಮಹಂಸರು ಸರ್ವ ಧರ್ಮಗಳ ಪೂಜಾ ಪದ್ಧತಿಯನ್ನು ನಡಿಸಿ, ಎಲ್ಲ ಧರ್ಮಗಳ ತತ್ವಗಳು ಒಂದೇತೆರನಾಗಿವೆಯೆಂದು ಕಂಡುಹಿಡಿದರು. ಇದರಿಂದ ಸ್ವಧರ್ಮದಲ್ಲಿಯ ಅವರ ಶ್ರದ್ಧೆಯು ಕಡಿಮೆಯಾಗಲಿಲ್ಲ. ಆದರೆ ಇನ್ನೂ ಹೆಚ್ಚಾಗಿ ಬೆಳೆಯಿತು. ಈ ತತ್ವವನ್ನು ಶಾಲೆಗಳಲ್ಲಿ ಯೋಗ್ಯವಾದ ರೀತಿಯಲ್ಲಿ ಬೇರೂರಿಸುವದು ಹಗುರಾದ ಕೆಲಸವಾಗಿದೆ. ಬಾಲಕರು ಕುರುಡ ನಂಬಿಕೆಗೂ, ಧರ್ಮಾಂಧತನಕ್ಕೂ ಅಪರಿಚಿತರು. ಅವರಿಗೆ ಚಿಕ್ಕಂದಿನಿಂದಲೇ ವಿವಿಧ ಧರ್ಮಗಳ ಪೂಜಾ ಸ್ಥಾನ ಮತ್ತು ಪೂಜಾ ಪದ್ಧತಿಗಳನ್ನು ತೋರಿಸಿ, ಅವುಗಳ ಬಗ್ಗೆ ಆದರವನ್ನು ಹುಟ್ಟಿಸಿದರೆ, ಧರ್ಮ ವೈಷಮ್ಯವು ಬೆಳೆಯಲಿಕ್ಕಿಲ್ಲ. ಬಾಲಕನು ಬೆಳೆದಂತೆ, ಸರ್ವ ಧರ್ಮ ತತ್ವಗಳನ್ನೊಳಗೊಂಡ ವಿಶಾಲ ದೃಷ್ಟಿಯು ಅವನಲ್ಲಿ ತಲೆದೋರುವದು. ಆದ್ದರಿಂದ ಶಾಲೆಗಳಲ್ಲಿ ಎಲ್ಲ ಧರ್ಮಗಳ ಮುಖ್ಯ ಹಬ್ಬಗಳನ್ನು ಮಾಡಿದಲ್ಲಿ ಸರ್ವ ಧರ್ಮದ ದರ್ಶನವು ಬಾಲಕರಿಗೆ ತಾನಾಗಿಯೇ ಬರುವದು. ಜಾತೀಯ ಐಕ್ಯತೆ ಸೌಹಾರ್ದಗಳಿಗೆ ಕೈಕೊಟ್ಟ ಕಬೀರ, ರಮಾನಂದ, ಅಕಬರ ಮುಂತಾದವರಿಗೆ ಸಂಬಂಧಪಟ್ಟ ದಿನಾಚರಣೆಗಳೂ ಪುಣ್ಯ ತಿಥಿಗಳೂ ಶಾಲೆಯಲ್ಲಿ ಅತ್ಯಾವಶ್ಯಕ. ಸಕಲರಿಂದ ಮನ್ನಣೆ ಹೊಂದಿನ ಮಹಮ್ಮದೀಯ ಮತ್ತು ಹಿಂದು ಸಾಧುಗಳು ಪರಿಚಿತರೇ ಸರಿ! ಕಾಲ ವಿಲಂಬವು ಮತ್ತು ದೋಲಾಯಮಾನ ಮನಸ್ಸಿನ ಸ್ಥಿತಿಯು ಇಂಥಲ್ಲಿ ಉಪಯೋಗದ್ದಲ್ಲ.

ಮೂಲ ಶಿಕ್ಷಣದಲ್ಲಿ ಬಡಿಗತನದ ಸ್ಥಾನ

ಲೇಖಕರು: ಶ್ರೀ. **ಶ್ರೀ. ರಾ. ಶಿಂದಿಗಿ**

●

ಬಡಿಗತನ ಇದು ಹಳ್ಳಿಯ ಉದ್ಯೋಗ ಎಂಬುದು ಸರ್ವ ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯ. ಆದರೆ ಹಳ್ಳಿಯ ಉದ್ಯೋಗವಾದ ಈ ಬಡಿಗತನವು ಹಳ್ಳಿಗಳಲ್ಲಿ ಏಕೆ ಮುಗ್ಗರಿಸಿತು? ಇದಕ್ಕೆ ಮುಖ್ಯ ಕಾರಣಗಳೇನು? ಮತ್ತು ಈ ಬಡಿಗತನವನ್ನು ಪುನರುಜ್ಜೀವನಗೊಳಿಸಲು ಶಕ್ಯವಾದೀತೇ ಇಲ್ಲವೇ? ಮುಂತಾದ ವಿಷಯಗಳ ಸ್ಪಷ್ಟೀಕರಣವೇ ಈ ನನ್ನ ಬರವಣಿಗೆಯ ಮೂಲ ಉದ್ದೇಶ.

ಇನ್ನು ಬಡಿಗತನವನ್ನು ಕುರಿತು ಕೆಲವು ಮಾತುಗಳನ್ನು ಬರೆಯುವ ಮೊದಲು ಬಡಿಗತನಕ್ಕೆ ಮೂಲ ಶಿಕ್ಷಣದಲ್ಲಿ ದೊರೆತ ಸ್ಥಾನದ ಹಿನ್ನೆಲೆಯನ್ನು ಸ್ವಲ್ಪ ವಿವರಿಸುವದು ಅಗತ್ಯವಿರುತ್ತದೆ.

ಈ ಮೂಲ ಶಿಕ್ಷಣ ಪದ್ಧತಿಯು ಇತ್ತೀಚೆಗೆ ಅಂದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕು ಕಾಂಗ್ರೆಸ್ಸು ಸರಕಾರದ ಅಧಿಕಾರ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡನಂತರ ಹೆಚ್ಚಾಗಿ ಪ್ರಚಾರದಲ್ಲಿ ಬಂದಿರುವದರಿಂದ ಮೂಲ ಶಿಕ್ಷಣವೆಂದರೇನೆಂಬುದನ್ನೇ ತಿಳಿಯದವರು ಇನ್ನೂ ಅನೇಕರಿದ್ದಾರೆ.

ಈ ಮೂಲ ಶಿಕ್ಷಣ ಯೋಜನೆಯ ಜನಕರೆಂದರೆ ನಮ್ಮನ್ನಗಲಿದ ಪೂಜ್ಯ ಮಹಾತ್ಮಾ ಗಾಂಧಿಯವರು. ಇವರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗುವ ಪೂರ್ವದಲ್ಲಿಯೇ ಕೆಲವು ವರ್ಷಗಳ ಹಿಂದೆ ಈ ಯೋಜನೆಯನ್ನು ತರಾರಿಸಿ ನಮ್ಮಲ್ಲಿಯ ಶಿಕ್ಷಣ ತಜ್ಞರ ಮುಂದೆ ಇಟ್ಟಾಗ ಎಷ್ಟೋ ದೊಡ್ಡ ದೊಡ್ಡ ಶಿಕ್ಷಣ ತಜ್ಞರೂ ಕೂಡ ಈ ಯೋಜನೆಯನ್ನು ವಿರೋಧಿಸಿದರು. ಆದ್ದರಿಂದಲೇ ಮಹಾತ್ಮರ ಈ ಯೋಜನೆಗೆ ಸಾಕಷ್ಟು ಪ್ರೋತ್ಸಾಹನೆ ಸಿಗದೇ ಹೋದದರಿಂದ ಆಗ ಇದಕ್ಕೆ ಪುಷ್ಟಿ ದೊರೆಯಲಿಲ್ಲ. ಮುಂದೆ ಹಿಂದುಸ್ಥಾನವು ಸ್ವಾತಂತ್ರ್ಯ ಪಡೆದು ಅಧಿಕಾರ ಸೂತ್ರವು ನಮ್ಮ ಜನತಾ ಮುಖಂಡರ ಕೈಗೆ ಬಂದನಂತರ ಅವರು ಈ ಮೂಲ ಶಿಕ್ಷಣ ಯೋಜನೆಯ ಮಹತ್ವವನ್ನರಿತು ಕೆಲವೆಡೆಗಳಲ್ಲಿ ಈ ಶಿಕ್ಷಣದ ಪ್ರಯೋಗವೂ ಕೂಡ ಯಶಸ್ವಿಯಾದುದನ್ನು ಕಂಡು ಇಂಥ ಶಿಕ್ಷಣವು ನಮ್ಮ ಸ್ವತಂತ್ರ ಹಿಂದುಸ್ಥಾನದ ಮಕ್ಕಳಿಗೆ ಯೋಗ್ಯವಿದ್ದು ಇಂಥ ಶಿಕ್ಷಣವನ್ನು ನಮ್ಮ ಮಕ್ಕಳು ಪಡೆಯುವದರಿಂದ ಸ್ವಾವಲಂಬಿಗಳಾಗಿ ತಮ್ಮ ಜೀವನವನ್ನು ಸಾಗಿಸುವದಕ್ಕೆ ನಿಜವಾದ ಯೋಗ್ಯತೆಯುಳ್ಳವರಾಗುತ್ತಾರೆ ಎಂಬದನ್ನು ಮನಗಂಡನಂತರ ಈ ಶಿಕ್ಷಣವನ್ನು ಇತರ ಪ್ರಾಂತಗಳಲ್ಲಿಯೂ ಪ್ರಯೋಗ ರೂಪದಲ್ಲಿ ತಂದದ್ದಾಗಿದೆ. ನಮ್ಮ ಮುಂಬೈ ಸರಕಾರದವರು ಮೊದಲು ಮುಂದೆ ಶಿಕ್ಷಣ ಕೊಡತಕ್ಕಂಥ ಶಿಕ್ಷಕರ ತರಬೇತಿಯನ್ನು ಭರದಿಂದ ಸಾಗಿಸುತ್ತಲಿದ್ದಾರೆ. ಮುಂದೆ ಕ್ರಮೇಣ ಈ ಶಿಕ್ಷಣವು ಪ್ರಾಥಮಿಕ ಶಾಲೆಗಳಲ್ಲಿಯೂ ಮಾಧ್ಯಮಿಕ ಶಾಲೆಗಳಲ್ಲಿಯೂ ಒತ್ತಾಯದ ಶಿಕ್ಷಣವಾಗಿ ಪರಿಣಮಿಸುವದರಲ್ಲಿ ಏನೂ ಸಂಶಯವಿಲ್ಲ.

ಈ ಮೂಲ ಶಿಕ್ಷಣವು ಹಳ್ಳಿಯ ಉದ್ಯೋಗಗಳ ಮುಖಾಂತರವೇ ಕೊಡಲ್ಪಡಬೇಕು. ಮತ್ತು ಹಳ್ಳಿಯ ಉದ್ಯೋಗಗಳೂ ಕೂಡ ಅನೇಕವಿರುವದರಿಂದ ಮನುಷ್ಯನ ಜೀವನಾವಶ್ಯಕ ಪದಾರ್ಥಗಳಾದ ಅನ್ನ, ವಸ್ತ್ರ, ವಾಸಿಸಲು ಮನೆ ಈ ಮೂರು ಬೇಡಿಕೆಗಳು ಪೂರೈಕೆಯಾಗುವಂಥ ಹಳ್ಳಿಯ ಉದ್ಯೋಗಗಳ ಮುಖಾಂತರವೇ ಶಿಕ್ಷಣ ಕೊಡಬೇಕು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇನ್ನು ಅನ್ನದ ಬೇಡಿಕೆಯನ್ನು ಪೂರೈಸಬೇಕಾದರೆ ನಾವು ಒಕ್ಕಲತನವನ್ನು ಆಶ್ರಯಿಸಲೇಬೇಕು. ವಸ್ತ್ರದ ಬೇಡಿಕೆಯನ್ನು ಪೂರೈಸಬೇಕಾದರೆ ನೂಲುವ ನೇಯುವ ಉದ್ಯೋಗವನ್ನು ಆಶ್ರಯಿಸಲೇಬೇಕು. ಹಾಗೆಯೇ ಮನೆಗಳ ಬೇಡಿಕೆಯನ್ನು ಪೂರೈಸಬೇಕಾದರೆ ನಾವು ಬಡಿಗತನವನ್ನೇ ಆಶ್ರಯಿಸಬೇಕಾಗುತ್ತದೆ. ಇಲ್ಲಿ ಕೆಲವರಿಗೆ ಒಂದು ಸಂದೇಹ ಉತ್ಪನ್ನವಾಗುವ ಸಂಭವವಿದೆ. ಏಕೆಂದರೆ, ಮನೆಯ ಬೇಡಿಕೆಯನ್ನು ಪೂರೈಸಬೇಕಗದರೆ ಬಡಿಗತನವನ್ನೇ ಏಕೆ ಆಶ್ರಯಿಸಬೇಕು? ಉಪ್ಪಾರಿಕೆಯೂ ಆವಶ್ಯಕವಾದ ಉದ್ಯೋಗವಲ್ಲವೇ? ಎಂದು ಕೇಳಬಹುದು. ಉಪ್ಪಾರಿಕೆಯೂ ಆವಶ್ಯಕವಾದದ್ದಿದ್ದರೂ ಶಾಲೆ ಕಾಲೇಜುಗಳಲ್ಲಿ ಕಲಿಯುವದಕ್ಕೂ ಮತ್ತು ಕಲಿಸು-

ದಕ್ಕೂ ಇರುವ ಅನುಕೂಲತೆಯ ದೃಷ್ಟಿಯಿಂದ ಉಪ್ಪಾರಿಕೆಯು ಅಷ್ಟೊಂದು ಸುಲಭ ಸಾಧ್ಯವಾದ ಉದ್ಯೋಗವಲ್ಲದ್ದರಿಂದಲೂ ಬಡಿಗತನವು ಈ ದೃಷ್ಟಿಯಿಂದ ಬಹಳ ಅನುಕೂಲವಿರುವದರಿಂದಲೂ ಬಡಿಗತನವನ್ನೇ ಆಯ್ದುಕೊಂಡದ್ದಾಗಿದೆ. ಅಂದಮೇಲೆ ಒಕ್ಕಲತನ, ನೂಲುವನೇಯುವ ಉದ್ಯೋಗ, ಬಡಿಗತನ ಈ ಮೂರೇ ಉದ್ಯೋಗಗಳು ಮೂಲ ಉದ್ಯೋಗಗಳೆಂದು ತೀರ್ಮಾನವಾದಂತಾಯಿತು. ಈ ಮೂಲ ಉದ್ಯೋಗಗಳ ಮುಖಾಂತರ ಕೊಡತಕ್ಕ ಶಿಕ್ಷಣವೇ ಮೂಲ ಶಿಕ್ಷಣ. ಇದಕ್ಕೇ ರಾಷ್ಟ್ರೀಯ ಶಿಕ್ಷಣ, ಜೀವನ ಶಿಕ್ಷಣ, ಕೃತಿ ಮೂಲ ಶಿಕ್ಷಣ ಮುಂತಾದ ಅನೇಕ ಹೆಸರುಗಳಿವೆ.

ಈ ಮೂಲ ಉದ್ಯೋಗಗಳಲ್ಲೊಂದಾದ ಬಡಿಗತನದ ಬಗ್ಗೆಯೇ ಕೆಲವೊಂದು ಮಾತುಗಳನ್ನು ಬರೆಯುವದು ಅಗತ್ಯವೆನಿಸಿದ್ದರಿಂದ ನಾನು ಅದರಲ್ಲಿ ತಿಳಿದುಕೊಂಡ ಮಟ್ಟಿಗೆ ಬರೆಯಲು ಪ್ರಯತ್ನ ಮಾಡಿದ್ದೇನೆ.

ಬಡಿಗತನವು ಬಹು ಪುರಾತನ ಕಾಲದಿಂದಲೂ ಹಳ್ಳಿಯ ಉದ್ಯೋಗವೇ ಆಗಿದ್ದರೂ ಈ ಉದ್ಯೋಗಕ್ಕೆ ಹಳ್ಳಿಗಳಲ್ಲಿ ಪ್ರೋತ್ಸಾಹನೆ ಸಿಗದೇ ಇರುವದಕ್ಕೆ ನಾವು ಹಳ್ಳಿಗಳ ಕಡೆಗೆ ದುರ್ಲಕ್ಷ್ಯ ಮಾಡಿರುವದೇ ಸಾಕ್ಷಿ. ಹಳ್ಳಿಯ ಉದ್ಯೋಗಗಳು ಪುನರುಜ್ಜೀವನ ಹೊಂದಬೇಕಾದರೆ, ಮಹಾತ್ಮಾಜಿಯವರ Back to the village (ಮರಳಿ ಹಳ್ಳಿಗೆ ಹೋಗಿರಿ) ಈ ಚಳವಳಿಯಿಂದ ಗ್ರಾಮ ಕೈಗಾರಿಕೆ ಹಾಗೂ ಅಲ್ಲಿಯ ಉದ್ಯಮಗಳಿಗೆ ಸಾಕಷ್ಟು ಪ್ರೋತ್ಸಾಹನ ದೊರೆಯಬೇಕು. ಅಂದರೇನೇ ಹಳ್ಳಿಗಳು ಪುನರುಜ್ಜೀವನ ಹೊಂದಲು ಸಾಧ್ಯ. ಇದೂ ಅಲ್ಲದೆ ಇನ್ನೂ ಎರಡು ಮುಖ್ಯ ಸಹಾಯಗಳನ್ನು ನಮ್ಮ ಸರಕಾರದವರು ಒದಗಿಸಿ ಕೊಡಬೇಕಾಗುವದು. (೧) ಆರ್ಥಿಕ ಸಹಾಯ. (೨) ಸುರಿತ ಕೆಲಸಗಾರರ ಮತ್ತು ಶಿಕ್ಷಕರ ಪೂರೈಕೆ. ಇವೆರಡೂ ಪೂರೈಕೆಗಳು ಜನಸಾಮಾನ್ಯರಿಂದ ಸಾಧಿಸತಕ್ಕ ವಿಷಯಗಳಲ್ಲ. ಸರಕಾರದವರೇ ಇವುಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಇದರ ಆಗುಹೋಗುಗಳನ್ನು ಸರಿಪಡಿಸಬೇಕೇ ವಿನಃ ಇತರರಿಂದ ಸಾಧ್ಯವಿಲ್ಲ. ಇತ್ತೀಚೆಗೆ ಜನತೆ ಹಾಗೂ ಸರಕಾರ ಇಬ್ಬರ ದೃಷ್ಟಿಯೂ ಹಳ್ಳಿಗಳ ಕಡೆಗೆ ಓಡುತ್ತಿರುವದರಿಂದ ಇನ್ನುಮೇಲಾದರೂ ಬಡಿಗತನಕ್ಕೆ ಈ ದುಃಸ್ಥಿತಿಯು ಬಾರದಂತೆ ನೋಡಿಕೊಂಡರೆ ಒಳ್ಳೇದು. ಹಳ್ಳಿಯ ಉದ್ಯೋಗವಾದ ಈ ಬಡಿಗತನವು ಹಳ್ಳಿಗಳಲ್ಲಿ ಕುಸಿದು ಬಿದ್ದು ಶಹರಗಳಲ್ಲಿ ತಲೆ ಎತ್ತಿ ತಾಂಡವವಾಡುತ್ತಿರುವದು ನಮ್ಮೆಲ್ಲರಿಗೂ ನಿತ್ಯವೂ ನೋಡಲಿಕ್ಕೆ ಸಿಗುವ ದೃಶ್ಯವು. ಹೆಸರಿಗೆ ಮಾತ್ರ ಹಳ್ಳಿಯ ಉದ್ಯೋಗ. ಆದರೆ ಅದರ ಸುಖವನ್ನುಣ್ಣುವವನು ಶಹರದ ಬಂಡವಾಳಗಾರ. ಇದೆಲ್ಲಿಯ ನ್ಯಾಯ ?

ಹಳ್ಳಿಯ ಉದ್ಯೋಗವಾದ ಬಡಿಗತನವು ಅಭಿವೃದ್ಧಿ ಹೊಂದಬೇಕಾಗಿದ್ದರೆ ಸರಕಾರದವರು ಅಲ್ಲಲ್ಲಿ ಔದ್ಯೋಗಿಕ ಶಾಲೆಗಳನ್ನು ತೆರೆದು ಅವುಗಳ ಮುಖಾಂತರ ತರಬೇತಿ ಹೊಂದಿದ ಅನುಭವಿಕ ಕೆಲಸಕಾರರಿಂದ ಮತ್ತು ಶಿಕ್ಷಕರಿಂದ ಕೆಲಸವನ್ನು ತೆಗೆದುಕೊಂಡುದಾದರೆ ಬಡಿಗತನವು ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ. ಇತ್ತೀಚೆಗೆ ಶಾಲೆ ಕಾಲೇಜುಗಳಲ್ಲಿ ಬಡಿಗತನದ ಶಿಕ್ಷಣದ ಏರ್ಪಾಡು ಮಾಡಿರುವದೂ ಒಂದು ಬಗೆಯ ಅಭಿವೃದ್ಧಿಯ ದ್ಯೋತಕವೇ ಸರಿ. ಯಾಕಂದರೆ ಬಡಿಗತನಕ್ಕೆ ಸಹಾಯಕ ವಿಷಯಗಳಾದ ಗಣಿತ, ಭೂಮಿತಿ, ಚಿತ್ರಕಲೆ ಇವು ಒಂದೆಡೆಯಲ್ಲಿ ಕೂಡಿ ಸಾಗುತ್ತಿರುವಾಗ ಇವುಗಳ ಜೊತೆಯಲ್ಲಿ ಬಡಿಗತನವೂ ಒಂದು ಇದ್ದುದಾದರೆ ಬಡಿಗತನದ ಮಟ್ಟವು ಇನ್ನೂ ಹೆಚ್ಚುವದರಲ್ಲಿ ಅನುಮಾನವಿಲ್ಲ.

ಬಡಿಗತನವೆಂದರೆ ಏನೋ ಒಂದನ್ನು ಕೆತ್ತಿ ಯಾವದೋ ಒಂದು ಆಕಾರವನ್ನು ಹ್ಯಾಗೋ ಮಾಡಿ ಇಟ್ಟದ್ದಾದರೆ, ಅದು ಎಂದಿಗೂ ಬಡಿಗತನವೆನಿಸುವದಿಲ್ಲ. ಬಡಿಗತನದ ಶಿಕ್ಷಣಕ್ಕೂ ಒಂದು ಶಾಸ್ತ್ರವಿದೆ, ಪದ್ಧತಿಯಿದೆ, ರೀತಿಯಿದೆ. ನಿರ್ಜೀವಿಯಾದ ಕಟ್ಟಿಗೆಯನ್ನು ತನ್ನ ಕುಶಲತೆಯಿಂದ ಕೆತ್ತಿ ಅದರಲ್ಲಿ ಒಂದು ಜೀವಕಳೆ, ಚೈತನ್ಯ, ಸ್ವಾಭಾವಿಕ ಸೌಂದರ್ಯ ಇವುಗಳನ್ನು ಹುಟ್ಟಿಸಬೇಕಾದರೆ ಆ ಕಲಾವಂತನಲ್ಲಿ ಸಾಕಷ್ಟು ನೈಪುಣ್ಯ ಬೇಕು. ಶಾಸ್ತ್ರೀಯದೃಷ್ಟಿ ಬೇಕು. ಮತ್ತು ಕಲೆಯ ಸುಸ್ಪಷ್ಟ ಕಲ್ಪನೆ ಬೇಕು. ಇವೆಲ್ಲವುಗಳ ಮುಖಾಂತರವಾಗಿ ಕೆಲಸ ಮಾಡತಕ್ಕವನೇ ನಿಜವಾದ ಬಡಿಗನಾಗಬಲ್ಲನು. ಬಡಿಗತನದಲ್ಲಿಯೂ ಒಂದು ವಸ್ತುವಿನ ಅಳತೆ ಆಕಾರಗಳು ಇಂತಿಷ್ಟೇ ಇರಬೇಕು, ಹೀಗೆಯೇ ಇರಬೇಕು, ಇಂಥ ಪದ್ಧತಿಯಿಂದಲೇ ಕೆಲಸ ಮಾಡಬೇಕು, ಮುಂತಾದ ನಿಯಮಗಳಿವೆ. ಇದಕ್ಕೆ ನಾವು ಒಂದು ಚಿಕ್ಕ ಉದಾಹರಣೆಯನ್ನು ಕೊಡಬಹುದು.

ಈಗ ನಾವು ಒಂದು ಸಾದಾ ಖುರ್ಚಿಯನ್ನು ತಯಾರಿಸಿದೆವೆಂದು ತಿಳಿಯೋಣ. ಅದರ ಆಸನವನ್ನು (Seat)

ನಾವು ನೆಲದಿಂದ ೧೮" ಎತ್ತರಕ್ಕೆ ಬರುವಂತೆ ಜೋಡಿಸುತ್ತೇವೆ. ಅದನ್ನೇ ನಾವು ೧೬" ಅಥವಾ ೨೦" ಇಟ್ಟು ಜೋಡಿಸಿದ್ದಾದರೆ ಎರಡೇ ಇಂಚಿನ ಹೆಚ್ಚುಕಡಿಮೆಯನ್ನು ನಾವು ಮಾಡಿದಂತಾದರೂ ಎಷ್ಟು ಅನಾನುಕೂಲವಾಗುವದೆಂಬದನ್ನು ಗಮನಿಸೋಣ. ಸಾಧಾರಣವಾಗಿ ಈ ಸಾದಾ ಖುರ್ಚಿಗಳ ಉಪಯೋಗ ಕಚೇರಿಗಳಲ್ಲಾಗಲೀ ಶಾಲೆ ಕಾಲೇಜುಗಳಲ್ಲಾಗಲೀ ಇಲ್ಲವೇ ಖಾಸಗೀ ಬರವಣಿಗೆಯ ಕೆಲಸಕ್ಕಾಗಲೀ ಇವುಗಳ ಮೇಲೆ ಕೂತು ಮುಂದುಗಡೆ ಮೇಜನ್ನಿಟ್ಟುಕೊಂಡು ಬರೆಯುವ ವಾಡಿಕೆಯು ಬ್ರಿಟಿಶರಾಳಿಕೆಯಿಂದಲೂ ನಡೆದು ಬಂದಿದೆ, ಇರಲಿ. ಖುರ್ಚಿಯ ಮೇಲೆ ಕೂಡ್ರುವ ಎತ್ತರಕ್ಕೂ ಮತ್ತೆ ಮೇಜಿನ ಮೇಲೆ ಬರೆಯುವ ಎತ್ತರಕ್ಕೂ ಬರೆಯತಕ್ಕವನಿಗೆ ಹೊಂದಿಕೆಯಾಗುವಂತೆ ಅಂದರೆ ಅವನಿಗೆ ತ್ರಾಸವಾಗದಂತೆ ಇವುಗಳ ಎತ್ತರವು ನಿರ್ದಿಷ್ಟವಾಗಿರಬೇಕು. ಅಂದರೆ ಖುರ್ಚಿಯ ಎತ್ತರವು ೧೮" ಇದ್ದರೆ ಮೇಜಿನ ಎತ್ತರವು ೩೦" ಇಂಚೇ ಇರಬೇಕು. ಇನ್ನು ಖುರ್ಚಿಯ ಆಸನದ ಎತ್ತರವು ೧೬" ಅಥವಾ ೨೦" ನಂತೆ ಗಮನಿಸಿದರೆ ಮೇಜಿನ ಎತ್ತರವು ೨೮" ಅಥವಾ ೩೨" ಇಂಚು ಇರಬೇಕಾಯಿತು. ಈ ಅಳತೆಯಿಂದ ಬರೆಯತಕ್ಕವನಿಗೆ ಬಹಳ ತೊಂದರೆಯಾಗುವದಲ್ಲದೆ ಸೊಂಟವು ನೋಯಹತ್ತುವದು ಮತ್ತು ಬಹಳ ಬರವಣಿಗೆಯಂತೂ ಸಾಧ್ಯವೇ ಇಲ್ಲ. ಇನ್ನು ಬಡಿಗತನದಲ್ಲಿ ಒಂದು ವಸ್ತುವಿನ ಅಳತೆ ಆಕಾರಗಳೇ ಅದೇ ಜಾತಿಯ ಮತ್ತೊಂದು ವಸ್ತುವಿಗೂ ಅಪ್ಪಯಿಸುವದೆಂಬ ನಿಯಮವಿಲ್ಲ. ಇದಕ್ಕೂ ನಾವು ಒಂದು ಚಿಕ್ಕ ದೃಷ್ಟಾಂತವನ್ನು ಕೊಡಬಹುದು— ಇದೇ ಸಾದಾ ಖುರ್ಚಿಯನ್ನೇ ತೆಗೆದುಕೊಳ್ಳಿರಿ. ಈ ಖುರ್ಚಿಯ ಆಸನವನ್ನು ೧೮" ಎತ್ತರಕ್ಕೇ ಇಟ್ಟು ಕಯಾರಿಸಿ ಅದನ್ನು ಒಬ್ಬ ಮನುಷ್ಯ ಅಂಗವಿಯವನಿಗೆ ಕೊಟ್ಟರೆ ಅದು ಅವನಿಗೆ ನಿರುಪಯೋಗಿ ವಸ್ತುವಾಗುವದು. ಯಾಕಂದರೆ, ಅವನಿಗೆ ಬೇಕಾಗುವ ಖುರ್ಚಿಯ ಅಳತೆ ಆಕಾರಗಳೇ ಬೇರೆ. ಅವನಿಗೆ ೨೭" ಎತ್ತರದ ಖುರ್ಚಿಗಳೇ ಅವನ ಕೆಲಸಕ್ಕೆ ಅನುಕೂಲ. ಹೀಗೆ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ಬಡಿಗತನದಲ್ಲಿ ಶಾಸ್ತ್ರವಿದೆ. ಆದ್ದರಿಂದಲೇ ಬಡಿಗತನದ ತಜ್ಞರು ಇವೆಲ್ಲವುಗಳ ಸಾರಾಸಾರ ವಿಚಾರ ಮಾಡಿ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಆ ನಿರ್ಣಯದ ಸಾರವೇ ಶಾಸ್ತ್ರವು. ಇದನ್ನೆಲ್ಲ ಪ್ರಾಯೋಗಿಕ ಅನುಭವದಿಂದಲೇ ಕಲಿಯಲು ಸಾಧ್ಯ. ಯಾಕಂದರೆ, ಶಾಲೆ ಕಾಲೇಜುಗಳಲ್ಲಿ ವೇಳೆಯ ಅಭಾವದ ಮೂಲಕ ಪ್ರಾಯೋಗಿಕ ಅಭ್ಯಾಸಕ್ಕೆ ಹೆಚ್ಚಾಗಿ ಅವಕಾಶ ಸಿಕ್ಕುವದಿಲ್ಲ ಮತ್ತು ಬಡಿಗತನದ ಪರಿಪೂರ್ಣ ಜ್ಞಾನ ಹೊಂದಲಿಕ್ಕೂ ಸಾಧ್ಯವಿರುವದಿಲ್ಲ. ಬಡಿಗತನದಲ್ಲಿ ಪರಿಪೂರ್ಣ ಜ್ಞಾನವನ್ನು ಹೊಂದಬೇಕಾದರೆ ಕನಿಷ್ಠ ನಾಲ್ಕು ವರ್ಷಗಳಾದರೂ ಅವನು ಅದೇ ಕ್ಷೇತ್ರದಲ್ಲಿಯೇ ಸತತ ದುಡಿಯಲೇಬೇಕೆಂದು ನನ್ನ ಅಭಿಪ್ರಾಯ. ಇರಲಿ.

ಇನ್ನು ಶಾಲೆ ಕಾಲೇಜುಗಳಲ್ಲಿ ಪ್ರಾಥಮಿಕ ಜ್ಞಾನದಿಂದಲೇ ಕೆಲಸ ಮಾಡುತ್ತ ಹೋದಂತೆ ಕ್ರಮೇಣ ಹೆಚ್ಚಿನ ಅನುಭವವನ್ನು ಸಂಪಾದಿಸಬಹುದು. ಶಾಲೆ ಕಾಲೇಜುಗಳಲ್ಲಿ ಈ ಬಡಿಗತನದ ಶಿಕ್ಷಣವನ್ನು ಸರಕಾರದವರು ನಡೆಯಿಸುತ್ತಿರುವದು ನಿಜವಾಗಿಯೂ ಸ್ತುತ್ಯವಾದದ್ದು. ಯಾಕಂದರೆ ಉದ್ಯೋಗಗಳ ಕಡೆಗೆ ಒಲವು ಇದ್ದ ನಮ್ಮ ಮಕ್ಕಳಿಗೆ ತಾವಾಗಿಯೇ ಉದ್ಯೋಗಗಳಲ್ಲಿ ಮುಂದುವರಿಯಲಿಕ್ಕೆ ನಾವು ಆಸ್ಪದವನ್ನು ಕಲ್ಪಿಸಿ ಕೊಟ್ಟಂತಾಗುವದು. ಇದರಂತೆಯೇ ನೂಲುವ-ನೇಯುವ ಅಭಿರುಚಿಯುಳ್ಳವರು ಆ ಕಡೆಗೆ ಮನಸ್ಸು ಹಾಕಲೂ ಅವಕಾಶ ಉಂಟಾಗುವದು. ಇದಕ್ಕೆ ನಾವು ಕೃತಿ ಮೂಲ ಶಿಕ್ಷಣವೆಂದೂ ಕರೆಯಬಹುದು. ಎಳೆಯ ಮಕ್ಕಳಲ್ಲಿ ಬಡಿಗತನದಿಂದ ರಚನಾತ್ಮಕ ಇಲ್ಲವೇ ಕ್ರಿಯಾತ್ಮಕ ಪ್ರವೃತ್ತಿ ಬೆಳೆದಂತಾಗುವದು. ಆದ್ದರಿಂದಲೇ ಮೂಲ ಶಿಕ್ಷಣದಲ್ಲಿ [illegible] ಸ್ಥಾನವು ಮಹತ್ವವಾದದ್ದೂ ಸಮಂಜಸವಾದದ್ದೂ ಇರುವದರಲ್ಲಿ ಏನೂ ಸಂಶಯವಿಲ್ಲ. ನಮ್ಮ [illegible] ಶಿಕ್ಷಣ ಸ್ವೀಯನ್ನು ಕೈಗೂಡಿ ನನ್ನ ಮಕ್ಕಳು ಗೌರವಿಗಾಗಿ ಪಠಾಣಿಸುವದನ್ನು ಬಿಟ್ಟು ಸ್ವತಂತ್ರ ಜೀವಿಗಳಾಗಿ ತಮ್ಮ ಬಾಳನ್ನು ಸುಖಮಯ ಮಾಡಿಕೊಳ್ಳಲಿಕ್ಕೆ ಈ ಮೂಲ ಶಿಕ್ಷಣ ಯೋಜನೆಯೇ ನಮ್ಮ ಮಕ್ಕಳ ಬಾಳಿನ ಅಡಿಗಲ್ಲಾಗಲೆಂಬುದೇ ನನ್ನ ಹಿರಿಯಾಸೆ.

ನಿಸ್ವಾರ್ಥ ಕಾರ್ಯಕರ್ತರಾಗಿರಿ

ಮಾನ್ಯ ಶ್ರೀ. ಬಿ. ಜಿ. ಖೇರ.

[ನಮ್ಮ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ. ಬಿ. ಜಿ. ಖೇರ ಅವರು ಮುಂಬಯಿ ಪ್ರಾಂತದ ಯುವಕರನ್ನುದ್ದೇಶಿಸಿ ಮಾತನಾಡಿದ ಬಾನುಲಿಯ ಭಾಷಣವಿದು. ಕನ್ನಡ ನಾಡಿನ ಪ್ರಾಥಮಿಕ ಶಿಕ್ಷಕರಿಗೆ ಇದರಲ್ಲಿಯ ಮಾತುಗಳು ಮಾರ್ಗದರ್ಶಕವಾಗುವವು, ಎಂಬ ಉದ್ದೇಶದಿಂದ ಈ ಲೇಖನವನ್ನು ಇಲ್ಲಿ ಕೊಡಲಾಗಿದೆ. —ಸಂಪಾದಕರು]

ಮುಂಬಯಿ ಪ್ರಾಂತದ ಯುವಕರೇ
ಮತ್ತು ಯುವತಿಯರೇ,

ಮಹಾತ್ಮಾ ಗಾಂಧಿಯವರ ಕೊಲೆಯಿಂದ ನಿಮಗೆ ಅತ್ಯಂತ ದುಃಖವಾಗಿದೆ. ಮಹಾತ್ಮಾ ಗಾಂಧಿಯವರ ಮೇಲೆ ಮಾಡಿದ ಪ್ರಾಣಾಂತಿಕ ಹಲ್ಲೆ ಮತ್ತು ಅವರ ಅನುಯಾಯಿಗಳಿಗೆ ಕೊಡಲಾಗುತ್ತಿರುವ ಬೆದರಿಕೆಗಳ ಸೂಚಿತಾರ್ಥಗಳು ಇನ್ನೂ ನಿಮ್ಮ ಮನಸ್ಸಿಗೆ ಅಷ್ಟು ಸ್ಪಷ್ಟವಾಗಿರುವುದಿಲ್ಲ. ಅವನ್ನು ಸರಿಯಾಗಿ ಅರಿತುಕೊಳ್ಳಲು ನಾನು ನಿಮಗೆ ಸಹಾಯ ಮಾಡಲಾ? ಮಹಾತ್ಮಾ ಗಾಂಧಿಯವರು ಸಾಧುಗಳಿದ್ದರೋ ರಾಜನೀತಿಜ್ಞರಿದ್ದರೊ ಕ್ರಾಂತಿಕಾರರಿದ್ದರೊ



ಸಮಾಜ ಸುಧಾರಕರಿದ್ದರೊ ಸನಾತನಿ ಹಿಂದೂಗಳಿದ್ದರೊ ಸ್ವತಂತ್ರ ವಿಚಾರಶೀಲರಿದ್ದರೊ ಎಂಬವುಗಳನ್ನು ಕುರಿತು ನೀವು ತರ್ಕಿಸುತ್ತಿರಬೇಡಿರಿ, ವಾದಿಸುತ್ತಿರಬೇಡಿರಿ. ಈ ಒಗಟುಗಳನ್ನು ವಾದವಿವಾದದಿಂದ ಬಿಡಿಸಲೆತ್ನಿಸುವುದು ತಾರ್ಕಿಕ ಜಾಣ್ಮೆಯ ಪ್ರದರ್ಶನವು ಮಾತ್ರ ಆಗುವುದು. ವಿಚಾರಯುಕ್ತರಾಗಿ ಕಾರ್ಯಪ್ರವೃತ್ತರಾಗೋಣ.

ಮಹಾತ್ಮಾಗಾಂಧಿಯವರು ಅಸಾಮಾನ್ಯ (ಲೋಕೋತ್ತರ) ಪುರುಷರಾಗಿದ್ದರು; ಆದರೆ ಅವರು ಸಾಮಾನ್ಯ ಮಾನವನ ಹಕ್ಕು ಬಾಧ್ಯತೆ, ಸಾಮಾಜಿಕ ದರ್ಜೆ, ಗೌರವ ಮತ್ತು ಸ್ವಾಭಿಮಾನದ ಬಗ್ಗೆ ಹೋರಾಡುವ ಯೋಧರಾಗಿದ್ದರಷ್ಟೇ ಅಲ್ಲದೆ ಅವುಗಳ ಪ್ರತೀಕರಾಗಿದ್ದರು. ಅದಕ್ಕಾಗಿಯೆ ಅವರ ಕೊಲೆಯಾದುದಕ್ಕೆ ಇಡಿ ಜಗತ್ತಿನಲ್ಲಿ ಜನತೆ ವಿಳಾಪ ಮಾಡುತ್ತಿದೆ ಮತ್ತು ಕೊಲೆಯನ್ನು ಕುರಿತು ಕೋಪಿಸುತ್ತಿದೆ. ಆ ಕ್ರೋಧವು ಸ್ವಾಭಾವಿಕವಾದುದಷ್ಟೇ ಇಲ್ಲ, ಆವಶ್ಯಕವೂ ಆಗಿದೆ. ಆದರೆ ಅದು ಕೊಲೆ, ಬುದ್ಧ್ಯಾಪೂರ್ವಕ ಗೃಹದಹನ ಅಥವಾ ಲೂಟಿಯ ರೂಪವನ್ನು ತಾಳಬಾರದೆಂಬುದಕ್ಕೆ ಜಾಗರೂಕತೆಯನ್ನು ವಹಿಸಲಿಕ್ಕೆ ಬೇಕು ಮತ್ತು ಅದನ್ನು ದೂರವಿರಿಸಲೇಬೇಕು; ಏಕೆಂದರೆ ಅದು ಅದರ ಉದ್ದೇಶವನ್ನೇ ನಾಶಗೊಳಿಸುವುದು. ನನ್ನ ಅಭಿಪ್ರಾಯದ ಮೇರೆಗೆ, ಮಹಾತ್ಮಾಗಾಂಧಿಯವರ ಕೊಲೆಯು ಏಕಾಂತಿಕ, ಪ್ರತ್ಯೇಕಿತ ಕೃತಿಯಾಗಿರುವುದಿಲ್ಲ, ಆದರೆ ಅದು ತಮ್ಮ ಗುಂಪಿನ ಅಥವಾ ವರ್ಗದ ರಾಜಕೀಯ ಅಧಿಕಾರ ಪ್ರಾಪ್ತಿಯ ಮಾರ್ಗದಲ್ಲಿ ಅಡ್ಡ ಬರುವ ಸಾಮಾನ್ಯ ಮಾನವನನ್ನು ತಡೆಯುವುದಕ್ಕಾಗಿ ಮಾಡಿದ, ಅನೇಸುಸಂಘಟಿತ ಸಹಾನುಭೂತಿಗಾರರ ಮತ್ತು ಪಾಪ ಕರ್ಮಿಗಳ ಉದ್ದೇಶಪೂರ್ವಕ ನಿರ್ಣಯದ ಪರಿಣಾಮವಾಗಿದೆ. ಇದು ತಪ್ಪಿತಸ್ಥರಾದ ಕೆಲವರನ್ನು ದಂಡಿಸುವುದರಿಂದ ಇಲ್ಲ ದಂತಾಗುವಂತಹ— ಮುಗಿಯುವಂತಹ ಮನೋವೃತ್ತಿಯ ವಿಚಾರ-ದ್ಯೋತಕವಾಗಿದೆ. ಅವರ ವಿರುದ್ಧ ಮನೋವೃತ್ತಿಯನ್ನು ಬೆಳೆಸುವ ಅವರಷ್ಟೇ ದೃಢ ಸಂಕಲ್ಪದ ದೃಢನಿರ್ಣಯದ ಜನರಿಂದ ಮತ್ತು ಹಿಂಸೆ ಅಥವಾ ಅಶಾಂತಿಗೆ ಎಡೆಗೊಡದೆ ಮತ್ತು ಸ್ವಾತಂತ್ರ್ಯದ ಹಾಗೂ ಶಾಂತಿ ಪ್ರಗತಿಯ ವೈರಿಗಳ ಬಲೆಗೆ ಬೀಳದೆ ಅದ್ವಿತೀಯ

ಆದರ್ಶ ಲೋಕತಂತ್ರಾತ್ಮಕ ಶಾಸನ ಸ್ಥಾಪನೆ ಮಾಡುವ ದೃಢನಿರ್ಣಯದ ಜನರಿಂದಲೆ ಅದು ಕೊನೆಗೊಳ್ಳಬಲ್ಲದು. ಇವರಲ್ಲಿ ಹಿಂದು ಅಥವಾ ಮುಸ್ಲಿಂ, ಬ್ರಾಹ್ಮಣ ಅಥವಾ ಬ್ರಾಹ್ಮಣೇತರ, ರಾಜ ಅಥವಾ ಪ್ರಜೆ, ವ್ಯಾಪಾರಿ ಅಥವಾ ಒಕ್ಕಲಿಗ ಎಂಬ ತಳಹದಿಯ ಮೇಲೆ ಹೋರಾಡುವ ಪ್ರಶ್ನೆ ಇಲ್ಲ, ಆದರೆ ಇಲ್ಲಿ ಜೀವನಕ್ಕಾಗಿ ಸ್ವತಂತ್ರ ನಾಗರಿಕನಂತೆ ಸಮಷ್ಟಿಯ ಶಾಸನದ ವಿರುದ್ಧ, ಲೋಕತಂತ್ರವಾದಿಯಂತೆ ಸರ್ವಾಧಿಕಾರಿಯ ಮತ್ತು ನಿರಂಕುಶ ಶಾಸಕನ ವಿರುದ್ಧ, ಶಾಂತಿಯುಕ್ತ ಪ್ರಗತಿಯಂತೆ ನಿರಂಕುಶತೆ ಮತ್ತು ಅಶಾಂತಿ-ಅವ್ಯವಸ್ಥೆಯ ವಿರುದ್ಧ ಹೋರಾಟದ ಪ್ರಶ್ನೆ ಇದೆ.

ತಾನೇ ಜನ್ಮ ಕೊಟ್ಟ ಭಾರತದ ವಿಭಜನೆಯ ನಂತರ ಜಾತಿಯ ಧೈತ್ಯನು ಹಿಂದೂ ಧರ್ಮಕ್ಕೆ ಅಥವಾ ಇಸ್ಲಾಮ ಧರ್ಮಕ್ಕೆ ತೋರಿಸುವ ಭಕ್ತಿಯ ಸೋಗು ಹಾಕಿಕೊಂಡು ತಲೆ ಎತ್ತಿದನು. ಮುಸ್ಲಿಮನು ಹಿಂದೂ ಹಾಗೂ ಸಿಖ್‌ರ ಕಡೆಗೆ ತನ್ನ ಕೈ ತಿರುಗಿಸಿದನು, ಸಿಖ್ ಮತ್ತು ಹಿಂದೂ ತಮ್ಮ ಕೈಗಳನ್ನು ಮುಸ್ಲಿಮರ ಕಡೆಗೆ ತಿರುಗಿಸಿದರು. ಕೊಲೆ, ಸುಲಿಗೆ, ಸುಡುವಿಕೆ, ಮನೆ ನೆಲಸಮ ಮಾಡುವಿಕೆ ಮತ್ತು ಇವುಗಳಿಂದ ಜನತೆಗಾದ ನೋವು-ನೋವುಗಳನ್ನು ನೆನೆದರೆ ಮೈ ಮೇಲೆ ಮುಳ್ಳು ಬರುತ್ತವೆ. ದೇವರ ಕೃಪೆಯಿಂದ ನಮ್ಮ ಪ್ರಾಂತವು ತುಲನಾತ್ಮಕವಾಗಿ ಈ ಬಗೆಯ ವೇದನೆಯಿಂದ ಮುಕ್ತವಾಗಿದ್ದರೂ ನಾವೂ ಅದರ ಕೊಂಚ ಕಹಿಯನ್ನು ಸವಿಯಬೇಕಾಯಿತು. ಈ ಬಗೆಯ ಕೃತಿ ನಮ್ಮ ಪ್ರಾಂತದಲ್ಲಿ ಆಗಲೇ ಕೂಡದು. ಆದರೆ ಜಾತೀಯತೆಯನ್ನುಳಿದು ಅದೇ ದ್ವೇಷ, ಅಸೂಯೆ, ನಾಶ ಮತ್ತು ಸೇಡಿನ ಮನೋವೃತ್ತಿಯನ್ನು ಬೆಳೆಸುವ ಇತರ ಶಕ್ತಿಗಳೂ ಇವೆ. ಇವುಗಳನೊಡನೆ ನೀವು ನಾಡಿನ ಯುವಕರು ಹೋರಾಡದೆ ಹೋದರೆ ಮತ್ತಾರು ಹೋರಾಡುವರು ?

ಸಾಹಸ, ಭಾವೋದ್ರೇಕ, ಧೈರ್ಯದ ಕಾರ್ಯಗಳು ನಿಮಗೆ ಇಷ್ಟವಾದವು, ಮತ್ತು ನೀವು ಆಪಜ್ಜನಕ ವಾತಾವರಣದಲ್ಲಿ ಇರಬಯಸುವಿರಿ. ಮಹಾತ್ಮಾ ಗಾಂಧಿಯವರ ಮಾರ್ಗವು ನಿಮಗೆ ಆಕರ್ಷಕವೆನಿಸುವದಿಲ್ಲ, ಏಕೆಂದರೆ ಅದು ನಿಮಗೆ ಸಾಕಷ್ಟು ಪ್ರಮಾಣದಲ್ಲಿ ಇವನ್ನು ಒದಗಿಸುವುದಿಲ್ಲ ಎಂದು ನಿಮಗನಿಸುತ್ತದೆ. ಅವರು ತೋರಿಸಿದ ಮತ್ತು ತುಳಿದ ದಾರಿಯು ಹುರುಪಿನದಿಲ್ಲವೆಂದು ಹೇಳಲಾಗುತ್ತದೆ. ಮಹಾತ್ಮಾ ಗಾಂಧಿಯವರು ತೋರಿಸಿದ, ಬೋಧಿಸಿದ ಜೀವನದ ಹಾದಿಗೂ ಸಾಹಸ, ಧೈರ್ಯ ಹಾಗೂ ಆಪಜ್ಜನಕ ಜೀವನಕ್ಕೂ ಸಂಬಂಧವಿಲ್ಲವೇ? ಆದರೆ ಈ ಮಾತು ಸತ್ಯಕ್ಕೆ ಬಹು ದೂರವಾಗಿದೆಯೆಂಬದನ್ನು ನೀವು ನಂಬಬೇಕೆಂದು ನಾನು ಬಯಸುತ್ತೇನೆ. ಅವರು ಧೈರ್ಯಶಾಲಿಗಳಾಗಿ ಬಾಳಲಿಲ್ಲವೇ? ಅವರ ಜೀವನವು ಸಾಹಸಪೂರ್ಣವಾದುದು ಇರಲಿಲ್ಲವೇ ? ಅವರು ಆಪತ್ತಿನಲ್ಲಿ ಇದ್ದು ಆಪತ್ತಿನಿಂದಲೇ ಮೃತರಾಗಲಿಲ್ಲವೇ? ಅವರು ನಮಗೆ ಯಾವ ದಾನವರೂಪಿಗಳ ಕೂಡ ಹೋರಾಡಬೇಕಾಗುವುದೆಂಬದನ್ನೂ ಮತ್ತು ಆ ಹೋರಾಟದ ಉತ್ತಮ ದಾರಿಯನ್ನೂ ತೋರಿಸಿಲ್ಲವೇ? ಅವರು ತೋರಿಸಿದ ಈ ಹೋರಾಟದ ದಾರಿಯಲ್ಲಿ ನಿಮಗೆ ಪ್ರೀತ್ಯಾಸ್ಪದವಾದ ಸಾಹಸ, ಧೈರ್ಯ ಹಾಗೂ ಉತ್ಸಾಹಗಳಿಲ್ಲವೇ? ಈ ಹೋರಾಟವನ್ನು ಮುದುಕರಿಗೆ ಬಿಟ್ಟು ನೀವು ಅವರ ಪ್ರಯತ್ನಗಳ ಫಲವನ್ನು ಉಣ್ಣಬಯಸುತ್ತೀರಾ? ಅದು ನಿಮ್ಮ ತಾರುಣ್ಯಕ್ಕೆ, ನಿಮ್ಮ ಸ್ವಾಭಿಮಾನಕ್ಕೆ, ನಿಮ್ಮ ಕರ್ತವ್ಯ ಬುದ್ಧಿಗೆ ಮತ್ತು ಶೂರತನಕ್ಕೆ ಶೋಭಿಸುವುದೇ? ನಮ್ಮನ್ನಗಲಿ ಹೋದ ಮುಂದಾಳುವಿನ ಮತ್ತು ರಾಷ್ಟ್ರಪಿತನ ಕರೆಯನ್ನು ಮನ್ನಿಸುವುದಿಲ್ಲವೇ? ಅವರು ಹೊಗಳಿದ ಗುಣಗಳಿಗಾಗಿ ಮತ್ತು ಅವರು ತೋರಿಸಿದ ಜೀವನದ ದಾರಿಗಾಗಿ ನೀವು ನಿಮ್ಮ ಪ್ರಾಣಗಳನ್ನು ಮುಡಿಪಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತನ್ನ ಸ್ವಂತ ಕಲ್ಯಾಣಕ್ಕಾಗಿ ಆಕರ್ಷಕ ಘೋಷಣೆಗಳನ್ನು ಮಾಡುವ, ನಿಮಗೆ ಅಗ್ಗ ಸುವಂಧಿ ಮತ್ತು ಸುಲಭ ಪ್ರಸಿದ್ಧಿಯನ್ನು ಹಾಗೂ ಭೂಮಿಯ ಮೇಲೆ ಸ್ವರ್ಗವನ್ನೆ ತಂದಿಳಿಸುತ್ತೇನೆಂಬ ವಚನಗಳನ್ನು ಕೊಡುವ ಮತ್ತು ಅಜ್ಞಾನಿ ಜನರ ಮನಗಳಲ್ಲಿ ದ್ವೇಷ, ಚಿನ್ನಿರಿತ, ಅವ್ಯವಸ್ಥತೆ, ಯುದ್ಧಕ್ಕೆ ಹುರಿದುಂಬಿಸುವ ನೀತಿಯನ್ನು ಬಿತ್ತಿ, ಹಿಂಸೆಯಿಂದ ಅಧಿಕಾರವನ್ನು ಕಸಿದುಕೊಳ್ಳುವ ಯಾವುದಾದರೂ ಪಕ್ಷಕ್ಕೆ ಮಾರು ಹೋಗಲು ಇಂಬುಗೊಡುವಿರಾ? ಇದಕ್ಕಿಂತ ಪಂಡಿತ ಜವಾಹರಲಾಲ ನೆಹರೂ ಮತ್ತು ಸರದಾರ ವಲ್ಲಭಭಾಯಿಯವರಂಥ ಪರೀಕ್ಷಿತ ಹಾಗೂ ನಂಬುಗೆಯ ಮುಖಂಡರು ಅಸಾಮಾನ್ಯ ಪರಿಸ್ಥಿತಿಯಲ್ಲಿಯೂ ಶೂರತನದಿಂದ ನಡೆಯಿಸಿಕೊಂಡು ಹೋಗುತ್ತಿರುವ ನಮ್ಮ ನವಜಾತ ಸ್ವರಾಜ್ಯವನ್ನು ಬಲಗೊಳಿಸುವುದು ನಿಮ್ಮ ಉದಾತ್ತ ಕರ್ತವ್ಯವಲ್ಲವೇ ?

ತಮ್ಮ ಪಕ್ಷದ, ತಮ್ಮ ವರ್ಗದ ಅಥವಾ ಜನತೆಯ ಒಂದು ಭಾಗದ ಕಲ್ಯಾಣಕ್ಕಾಗಿ ಅಧಿಕಾರ ಕಸಿದುಕೊಳ್ಳ ಬಯಸುವ ಶಕ್ತಿಗಳನ್ನು— ಅವುಗಳ ಧ್ಯೇಯ ಫಲಕ ಎಷ್ಟೇ ಆಕರ್ಷಕವಾಗಿರಲಿ— ಎದುರಿಸಲು ಸ್ವಸಂತೋಷದಿಂದ

ಕಮ್ಮ ಮುಖಂಡರಿಗೆ ನೆರವಾಗುವುದಕ್ಕಾಗಿ ನೀವು ಗಾಂಧಿ ಸೈನಿಕರ ರೂಪದಲ್ಲಿ ಮತ್ತು ನಿಸ್ವಾರ್ಥ ಕಾರ್ಯಕರ್ತರ ರೂಪದಲ್ಲಿ ಸಂಘಟಿತರಾಗಿರಿ. ಮಹಾತ್ಮಾ ಗಾಂಧಿಯ ವಿರುದ್ಧ ಅವರ ಕೊಲೆಗೆ ಹೊಣೆಗಾರವಾದ ಮನೋವೃತ್ತಿಯನ್ನು ಅಳಿಸಲು ಮತ್ತು ಅವರು ಯಾವುದನ್ನು ಕಟ್ಟಲು ಜೀವಿಸಿದ್ದರೊ ಅದನ್ನು ನಿರ್ಮಿಸಲು ಒಟ್ಟುಗೂಡಿರಿ. ಪರಮಾತ್ಮನೂ ಮಹಾತ್ಮಾಗಾಂಧಿಯವರ ಪವಿತ್ರ ಸಂಸ್ಮರಣೆಯೂ ನಿಮಗೆ ಮಾರ್ಗದರ್ಶಕವಾಗಲಿ.

ಜಯ್ ಹಿಂದ !

ಏಳಿ ಸೇವಾ ಸಮರಕೆ

(ಕೂಜು ಗೀತ)

ಸಾಗಿರೀಗ ಮುಂದೆ । ಸಮಾಜಸೇವೆ ಗೆಂದೆ ।
ಬೇಗನೀಗಿ ಮೇಲು ಕೀಳು । ಹಿಡಿರಿ ಸಮತೆಯೊಂದೆ ।
ಪಡಿರಿ ಸುಖವನೊಂದೆ ॥ ಪ ॥

ಕರ್ಮ ಧರ್ಮದಲ್ಲಿ । ಮರ್ಮಹೀನವೆಲ್ಲಿ ।
ಧರ್ಮತನದಿ ದುಡಿಯಲಿಂದು । ತೊಡಗಿ ಸೇವೆಯಲ್ಲಿ ।
ಗಾಂಧಿ ಮಾರ್ಗದಲ್ಲಿ ॥ ೧ ॥

ಹೇಯತನವ ನೀಗಿ । ಸ್ವಾವಲಂಬಿಯಾಗಿ ।
ಕಾಯಕವೆ ಕೈಲಾಸ । ಎಂಬ ಬಸವ ತ್ಯಾಗಿ ।
ನುಡಿದಾ ಗಾಂಧಿ ಯೋಗಿ ॥ ೨ ॥

ಬಸವ ಬುದ್ಧ ಗಾಂಧಿಯ । ಎಸೆವ ತತ್ತ್ವಸೇವೆಯಾ ।
ಹಸಿದು ಮಾಡಿ ನೀಡಿ ಜನಕೆ । ಪಾಡು ಹಿಂದ ಕೀರ್ತಿಯಾ ।
ಭರತ ವರ್ಷ ಕೀರ್ತಿಯಾ ॥ ೩ ॥

ಪುಟ್ಟಿ ಸಲಿಕಿ ಶಸ್ತ್ರವಾ । ಕೆಟ್ಟವೆಂದು ಬಗೆದವಾ ।
ಶಿಷ್ಟ ಭಾರತಾಂಬೆಗಾತ । ದುಷ್ಟ ಪುತ್ರ ನೋಡುವಾ ।
ಶ್ರೇಷ್ಠ ಗಾಂಧಿ ನುಡಿದವಾ ॥ ೪ ॥

ದೇಶದ್ರೋಹಿ ಇರಿತಕೆ । ಪಾಪವಾದ ಪುಟ್ಟಿ ಸಲಿಕೆ ।
ನಾಶರಹಿತ ರಸ್ತ್ರವಿದು । ಏಳಿ ಸೇವಾ ಸಮರಕೆ ।
ಮೇಲು ಆಗಿ ನೌಖ್ಯಕೆ ॥ ೫ ॥

ರಾಮ ರಹಿಮ ಈಶ್ವರ । ಪ್ರೇಮ ಸಾಮ ಶುಭಕರ ।
ಸ್ವಾಮಿ ಗಾಂಧಿ ಶಾಂತಿಗಾಗಿ । ಕರ್ಮಕ್ಕೇಳಿ ಎಲ್ಲರ ।
ಸೇವಾ ಧರ್ಮಕ್ಕೆಲ್ಲರ ॥ ೬ ॥

—ಶಿ. ಮ. ಹಿಳ್ಳಿ.
೨ ವರ್ಷ ಡಿ. ಗಂ. ಟ್ರೇ. ಕಾಲೇಜ, ಧಾರವಾಡ.

ಆದರ್ಶ ಲೋಕತಂತ್ರಾತ್ಮಕ ಶಾಸನ ಸ್ಥಾಪನೆ ಮಾಡುವ ದೃಢನಿರ್ಣಯದ ಜನರಿಂದಲೆ ಅದು ಕೊನೆಗೊಳ್ಳಬಲ್ಲದು. ಇದರಲ್ಲಿ ಹಿಂದು ಅಥವಾ ಮುಸ್ಲಿಂ, ಬ್ರಾಹ್ಮಣ ಅಥವಾ ಬ್ರಾಹ್ಮಣೇತರ, ರಾಜ ಅಥವಾ ಪ್ರಜೆ, ವ್ಯಾಪಾರಿ ಅಥವಾ ಒಕ್ಕಲಿಗ ಎಂಬ ತಳಹದಿಯ ಮೇಲೆ ಹೋರಾಡುವ ಪ್ರಶ್ನೆ ಇಲ್ಲ, ಆದರೆ ಇಲ್ಲಿ ಜೀವನಕ್ಕಾಗಿ ಸ್ವತಂತ್ರ ನಾಗರಿಕನಂತೆ ಸಮಷ್ಟಿಯ ಶಾಸನದ ವಿರುದ್ಧ, ಲೋಕತಂತ್ರವಾದಿಯಂತೆ ಸರ್ವಾಧಿಕಾರಿಯ ಮತ್ತು ನಿರಂಕುಶ ಶಾಸಕನ ವಿರುದ್ಧ, ಶಾಂತಿಯುಕ್ತ ಪ್ರಗತಿಯಂತೆ ನಿರಂಕುಶತೆ ಮತ್ತು ಅಶಾಂತಿ-ಅವ್ಯವಸ್ಥೆಯ ವಿರುದ್ಧ ಹೋರಾಟದ ಪ್ರಶ್ನೆ ಇದೆ.

ತಾನೇ ಜನ್ಮ ಕೊಟ್ಟ ಭಾರತದ ವಿಭಜನೆಯ ನಂತರ ಜಾತಿಯ ಪ್ರೈತ್ಯನು ಹಿಂದೂ ಧರ್ಮಕ್ಕೆ ಅಥವಾ ಇಸ್ಲಾಮ ಧರ್ಮಕ್ಕೆ ತೋರಿಸುವ ಭಕ್ತಿಯ ಸೋಗು ಹಾಕಿಕೊಂಡು ತಲೆ ಎತ್ತಿದನು. ಮುಸ್ಲಿಮನು ಹಿಂದೂ ಹಾಗೂ ಸಿಖ್‌ರ ಕಡೆಗೆ ತನ್ನ ಕೈ ತಿರುಗಿಸಿದನು, ಸಿಖ್ ಮತ್ತು ಹಿಂದೂ ತಮ್ಮ ಕೈಗಳನ್ನು ಮುಸ್ಲಿಮರ ಕಡೆಗೆ ತಿರುಗಿಸಿದರು. ಕೊಲೆ, ಸುಲಿಗೆ, ಸುಡುವಿಕೆ, ಮನೆ ನೆಲಸಮ ಮಾಡುವಿಕೆ ಮತ್ತು ಇವುಗಳಿಂದ ಜನತೆಗಾದ ಸಾವು-ನೋವುಗಳನ್ನು ನೆನೆದರೆ ಮೈ ಮೇಲೆ ಮುಳ್ಳು ಬರುತ್ತವೆ. ದೇವರ ಕೃಪೆಯಿಂದ ನಮ್ಮ ಪ್ರಾಂತವು ತುಲನಾತ್ಮಕವಾಗಿ ಈ ಬಗೆಯ ವೇದನೆಯಿಂದ ಮುಕ್ತವಾಗಿದ್ದರೂ ನಾವೂ ಅದರ ಕೊಂಚ ಕಹಿಯನ್ನು ಸವಿಯಬೇಕಾಯಿತು. ಈ ಬಗೆಯ ಕೃತಿ ನಮ್ಮ ಪ್ರಾಂತದಲ್ಲಿ ಆಗಲೇ ಕೂಡದು. ಆದರೆ ಜಾತೀಯತೆಯನ್ನುಳಿದು ಅದೇ ದ್ವೇಷ, ಅಸೂಯೆ, ನಾಶ ಮತ್ತು ಸೇಡಿನ ಮನೋವೃತ್ತಿಯನ್ನು ಬೆಳೆಸುವ ಇತರ ಶಕ್ತಿಗಳೂ ಇವೆ. ಇವುಗಳನೊಡನೆ ನೀವು ನಾಡಿನ ಯುವಕರು ಹೋರಾಡದೆ ಹೋದರೆ ಮತ್ತಾರು ಹೋರಾಡುವರು ?

ಸಾಹಸ, ಭಾವೋದ್ರೇಕ, ಧೈರ್ಯದ ಕಾರ್ಯಗಳು ನಿಮಗೆ ಇಷ್ಟವಾದವು, ಮತ್ತು ನೀವು ಆಪಜ್ಜನಕ ವಾತಾವರಣದಲ್ಲಿ ಇರಬಯಸುವಿರಿ. ಮಹಾತ್ಮಾ ಗಾಂಧಿಯವರ ಮಾರ್ಗವು ನಿಮಗೆ ಆಕರ್ಷಕವೆನಿಸುವದಿಲ್ಲ, ಏಕೆಂದರೆ ಅದು ನಿಮಗೆ ಸಾಕಷ್ಟು ಪ್ರಮಾಣದಲ್ಲಿ ಇವನ್ನು ಒದಗಿಸುವುದಿಲ್ಲ ಎಂದು ನಿಮಗನಿಸಿಸುತ್ತದೆ. ಅವರು ತೋರಿಸಿದ ಮತ್ತು ತುಳಿದ ದಾರಿಯು ಹುರುಪಿನದಿಲ್ಲವೆಂದು ಹೇಳಲಾಗುತ್ತದೆ. ಮಹಾತ್ಮಾ ಗಾಂಧಿಯವರು ತೋರಿಸಿದ, ಬೋಧಿಸಿದ ಜೀವನದ ಹಾದಿಗೂ ಸಾಹಸ, ಧೈರ್ಯ ಹಾಗೂ ಆಪಜ್ಜನಕ ಜೀವನಕ್ಕೂ ಸಂಬಂಧವಿಲ್ಲವೇ? ಆದರೆ ಈ ಮಾತು ಸತ್ಯಕ್ಕೆ ಬಹು ದೂರವಾಗಿದೆಯೆಂಬದನ್ನು ನೀವು ನಂಬಬೇಕೆಂದು ನಾನು ಬಯಸುತ್ತೇನೆ. ಅವರು ಧೈರ್ಯಶಾಲಿಗಳಾಗಿ ಬಾಳಲಿಲ್ಲವೇ? ಅವರ ಜೀವನವು ಸಾಹಸ ಪೂರ್ಣವಾದುದು ಇರಲಿಲ್ಲವೇ ? ಅವರು ಆಪತ್ತಿನಲ್ಲಿ ಇದ್ದು ಆಪತ್ತಿನಿಂದಲೇ ಮೃತರಾಗಲಿಲ್ಲವೇ ? ಅವರು ನಮಗೆ ಯಾವ ದಾನವರೂಪಿಗಳ ಕೂಡ ಹೋರಾಡಬೇಕಾಗುವುದೆಂಬದನ್ನೂ ಮತ್ತು ಆ ಹೋರಾಟದ ಉತ್ತಮ ದಾರಿಯನ್ನೂ ತೋರಿಸಿಲ್ಲವೇ? ಅವರು ತೋರಿಸಿದ ಈ ಹೋರಾಟದ ದಾರಿಯಲ್ಲಿ ನಿಮಗೆ ಪ್ರೀತ್ಯಾಸ್ಪದವಾದ ಸಾಹಸ, ಧೈರ್ಯ ಹಾಗೂ ಉತ್ಸಾಹಗಳಿಲ್ಲವೇ? ಈ ಹೋರಾಟವನ್ನು ಮುಮುಕರಿಗೆ ಬಿಟ್ಟು ನೀವು ಅವರ ಪ್ರಯತ್ನಗಳ ಫಲವನ್ನು ಉಣ್ಣಬಯಸುತ್ತೀರಾ? ಅದು ನಿಮ್ಮ ತಾರುಣ್ಯಕ್ಕೆ, ನಿಮ್ಮ ಸ್ವಾಭಿಮಾನಕ್ಕೆ, ನಿಮ್ಮ ಕರ್ತವ್ಯ ಬುದ್ಧಿಗೆ ಮತ್ತು ಶೂರತನಕ್ಕೆ ಶೋಭಿಸುವುದೇ? ನಮ್ಮನ್ನಗಲಿ ಹೋದ ಮುಂದಾಳುವಿನ ಮತ್ತು ರಾಷ್ಟ್ರಪಿತನ ಕರೆಯನ್ನು ಮನ್ನಿಸುವುದಿಲ್ಲವೇ? ಅವರು ಹೊಗಳಿದ ಗುಣಗಳಿಗಾಗಿ ಮತ್ತು ಅವರು ತೋರಿಸಿದ ಜೀವನದ ದಾರಿಗಾಗಿ ನೀವು ನಿಮ್ಮ ಪ್ರಾಣಗಳನ್ನು ಮುಡಿಪಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತನ್ನ ಸ್ವಂತ ಕಲ್ಯಾಣಕ್ಕಾಗಿ ಆಕರ್ಷಕ ಘೋಷಣೆಗಳನ್ನು ಮಾಡುವ, ನಿಮಗೆ ಅಗ್ಗ ಸುಸಂಧಿ ಮತ್ತು ಸುಲಭ ಪ್ರಸಿದ್ಧಿಯನ್ನು ಹಾಗೂ ಭೂಮಿಯ ಮೇಲೆ ಸ್ವರ್ಗವನ್ನೆ ತಂದಿಳಿಸುತ್ತೇವೆಂಬ ವಚನಗಳನ್ನು ಕೊಡುವ ಮತ್ತು ಅಜ್ಞಾನಿ ಜನರ ಮನಗಳಲ್ಲಿ ದ್ವೇಷ, ಬೆನ್ನಿರಿತ, ಅವ್ಯವಸ್ಥತೆ, ಯುದ್ಧಕ್ಕೆ ಹುರಿದುಂಬಿಸುವ ನೀತಿಯನ್ನು ಬಿತ್ತಿ, ಹಿಂಸೆಯಿಂದ ಅಧಿಕಾರವನ್ನು ಕಸಿದುಕೊಳ್ಳುವ ಯಾವುದಾದರೂ ಪಕ್ಷಕ್ಕೆ ಮಾರು ಹೋಗಲು ಇಂಬುಗೊಡುವಿರಾ ? ಇದಕ್ಕಿಂತ ಪಂಡಿತ ಜವಾಹರಲಾಲ ನೆಹರೂ ಮತ್ತು ಸರದಾರ ವಲ್ಲಭಭಾಯಿಯವರಂಥ ಪರೀಕ್ಷಿತ ಹಾಗೂ ನಂಬುಗೆಯ ಮುಖಂಡರು ಅಸಾಮಾನ್ಯ ಪರಿಸ್ಥಿತಿಯಲ್ಲಿಯೂ ಶೂರತನದಿಂದ ನಡೆಯಿಸಿಕೊಂಡು ಹೋಗುತ್ತಿರುವ ನಮ್ಮ ನವಜಾತ ಸ್ವರಾಜ್ಯವನ್ನು ಬಲಗೊಳಿಸುವುದು ನಿಮ್ಮ ಉದಾತ್ತ ಕರ್ತವ್ಯವಲ್ಲವೇ ?

ತಮ್ಮ ಪಕ್ಷದ, ತಮ್ಮ ವರ್ಗದ ಅಥವಾ ಜನತೆಯ ಒಂದು ಭಾಗದ ಕಲ್ಯಾಣಕ್ಕಾಗಿ ಅಧಿಕಾರ ಕಸಿದುಕೊಳ್ಳಬಯಸುವ ಶಕ್ತಿಗಳನ್ನು — ಅವುಗಳ ಧ್ಯೇಯ ಫಲಕ ಎಷ್ಟೇ ಆಕರ್ಷಕವಾಗಿರಲಿ— ಎದುರಿಸಲು ಸ್ವಸಂತೋಷದಿಂದ

ನಮ್ಮ ಮುಖಂಡರಿಗೆ ನೆರವಾಗುವುದಕ್ಕಾಗಿ ನೀವು ಗಾಂಧಿ ಸೈನಿಕರ ರೂಪದಲ್ಲಿ ಮತ್ತು ನಿಸ್ವಾರ್ಥ ಕಾರ್ಯಕರ್ತರ ರೂಪದಲ್ಲಿ ಸಂಘಟಿತರಾಗಿರಿ. ಮಹಾತ್ಮಾ ಗಾಂಧಿಯ ವಿರುದ್ಧ ಅವರ ಕೊಲೆಗೆ ಹೊಣೆಗಾರವಾದ ಮನೋವೃತ್ತಿಯನ್ನು ಎದುರಿಸಲು ಮತ್ತು ಅವರು ಯಾವುದನ್ನು ಕಟ್ಟಲು ಜೀವಿಸಿದ್ದರೊ ಅದನ್ನು ನಿರ್ಮಿಸಲು ಒಟ್ಟುಗೂಡಿರಿ. ಪರಮಾತ್ಮನೂ ಮಹಾತ್ಮಾಗಾಂಧಿಯವರ ಪವಿತ್ರ ಸಂಸ್ಮರಣೆಯೂ ನಿಮಗೆ ಮಾರ್ಗದರ್ಶಕವಾಗಲಿ.

ಜಯ್ ಹಿಂದ !

ಏಳಿ ಸೇವಾ ಸಮರಕೆ

(ಕೂಚು ಗೀತ)

ಸಾಗಿರೀಗ ಮುಂದೆ । ಸಮಾಜಸೇವೆ ಗೆಂದೆ ।
ಬೇಗನೀಗಿ ಮೇಲು ಕೀಳು । ಹಿಡಿರಿ ಸಮತೆಯೊಂದೆ ।
ಪಡಿರಿ ಸುಖವನೊಂದೆ ॥ ಪ ॥

ಕರ್ಮ ಧರ್ಮದಲ್ಲಿ । ಮರ್ಮಹೀನವೆಲ್ಲಿ ।
ಧರ್ಮತನದಿ ದುಡಿಯಲಿಂದು । ತೊಡಗಿ ಸೇವೆಯಲ್ಲಿ ।
ಗಾಂಧಿ ಮಾರ್ಗದಲ್ಲಿ ॥ ೧ ॥

ಹೇಯತನವ ನೀಗಿ । ಸ್ವಾವಲಂಬಿಯಾಗಿ ।
ಕಾಯಕವೆ ಕೈಲಾಸ । ಎಂಬ ಬಸವ ತ್ಯಾಗಿ ।
ನುಡಿದಾ ಗಾಂಧಿ ಯೋಗಿ ॥ ೨ ॥

ಬಸವ ಬುದ್ಧ ಗಾಂಧಿಯ । ಎಸೆವ ತತ್ತ್ವಸೇವೆಯಾ ।
ಹಸಿದು ಮಾಡಿ ನೀಡಿ ಜನಕೆ । ಪಾಡು ಹಿಂದ ಕೀರ್ತಿಯಾ ।
ಭರತ ವರ್ಷ ಕೀರ್ತಿಯಾ ॥ ೩ ॥

ಪುಟ್ಟಿ ಸಲಿಕಿ ಶಸ್ತ್ರವಾ । ಕೆಟ್ಟವೆಂದು ಬಗೆದವಾ ।
ಶಿಷ್ಟ ಭಾರತಾಂಬೆಗಾತ । ದುಷ್ಟ ಪುತ್ರ ನೋಡುವಾ ।
ಶ್ರೇಷ್ಠ ಗಾಂಧಿ ನುಡಿದವಾ ॥ ೪ ॥

ದೇಶದ್ರೋಹಿ ಇರಿತಕೆ । ಪಾಶವಾದ ಪುಟ್ಟಿ ಸಲಿಕೆ ।
ನಾಶರಹಿತ ಶಸ್ತ್ರವಿದು । ಏಳಿ ಸೇವಾ ಸಮರಕೆ ।
ಮೇಲು ಆಗಿ ಸೌಖ್ಯಕೆ ॥ ೫ ॥

ರಾಮ ರಹಿಮ ಈಶ್ವರ । ಪ್ರೇಮ ನಾಮ ಶುಭಕರ ।
ಸ್ವಾಮಿ ಗಾಂಧಿ ಶಾಂತಿಗಾಗಿ । ಕರ್ಮಕ್ಕೇಳಿ ಎಲ್ಲರ ।
ಸೇವಾ ಧರ್ಮಕ್ಕೆಲ್ಲರ ॥ ೬ ॥

—ಶಿ. ಮ. ಹಿಳ್ಳಿ.
೨ ವರ್ಷ ಡಿ. ಗಂ. ಟ್ರೇ. ಕಾಲೇಜ, ಧಾರವಾ

ನಾನು ಯಾರು ?

(ಒಂದು ಒಗಟು)

★

[ಒಗಟುಗಳೆಂದರೆ ಮಕ್ಕಳಿಗೆ ಬಲು ಪ್ರೀತಿ. ಈ ಒಗಟುಗಳ ಮುಖಾಂತರ ಭಾಷಾ-ಶಿಕ್ಷಣವನ್ನು ಮನೋರಂಜಕವಾಗಿ ಕೊಡಲು ಬರುವುದು. ಪ್ರಾಥಮಿಕ ಶಾಲೆಗಳ ಶಿಕ್ಷಕರು ಈ ತರದ ಒಗಟುಗಳನ್ನು ಕಳುಹಿದರೆ ಪ್ರಾಥಮಿಕ ಶಿಕ್ಷಣದಲ್ಲಿ ಯೋಗ್ಯವಾದವುಗಳಿಗೆ ಎಡೆಯನ್ನು ಕೊಡಲಾಗುವುದು. ಈ ಒಗಟಕ್ಕೆ ಮತ್ತು ಇನ್ನು ಮುಂದೆ ಬರುವ ಒಗಟುಗಳಿಗೆ ವಿದ್ಯಾರ್ಥಿಗಳಿಂದ ಉತ್ತರ ಕಳಿಸಿದರೆ, ಸರಿಯಾಗಿ ಉತ್ತರಿಸಿದ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರಕಟಿಸಲಾಗುವುದು. ಶಿಕ್ಷಕರು ತಮ್ಮ ಶಾಲೆಯ ಹುಡುಗರಿಗೆ ಉತ್ತರಗಳನ್ನು ಕಳಿಸಲು ಪ್ರೋತ್ಸಾಹಿಸಬೇಕಾಗಿ ಬಿನ್ನಹ. —ಪ್ರಧಾನ ಸಂಪಾದಕರು.

ಯಾರೆಲೊ ನಾನು ತೋರೆಲೊ ನೀನು ।
ಶೂರರ ಕರದಲಿ ಮೆರೆಯುವೆ ನಾನು ॥ ಪಲ್ಲ ॥

ಚತುರಾಕ್ಷರಗಳ ಚದುರನು ನಾನು ।
ಚತುಷ್ಕೋಟಿ ಜನ ಹೃದಯನು ನಾನು ॥ ೧ ॥

ಹರನು ನಾನು ಹರಿಯೂ ನಾನು ।
ಧರೆಯೊಳು ಮೆರೆಯುವ ದೊರೆಯು ನಾನು ॥ ೨

ತ್ರಿಪುಂಡ್ರ ನಾನು ತ್ರಿರಂಗ ನಾನು ।
ತ್ರಿಮೂರ್ತಿ ಶ್ರೀ ದತ್ತಾತ್ರಯ ನಾನು ॥ ೩ ॥

ಚಕ್ರವು ನಾನು ವಿಕ್ರಮ ನಾನು ।
ಶಕ್ರನ ಮೀರಿದ ಚಕ್ರಿಯು ನಾನು ॥ ೪ ॥

ರಾಜನು ನಾನು ರಾಷ್ಟ್ರವು ನಾನು ।
ರಾಷ್ಟ್ರದ ರಾಜರ ಜೀವನೆ ನಾನು ॥ ೫ ॥

ಹಿಂದುವು ನಾನು ಮುಸಲಿಮ ನಾನು ।
ಎಲ್ಲಾ ಧರ್ಮಕೆ ವಂದ್ಯನು ನಾನು ॥ ೬ ॥

ಧನವೂ ನಾನು ದೌಲತ್ತು ನಾನು ।
ಘನ ಗಂಭೀರರ ಮಾನವೆ ನಾನು ॥ ೭ ॥

ದಂಡವು ನಾನು ದಾರವು ನಾನು ।
ದಂಡವನೇರಿದ ಕೋದಂಡ ನಾನು ॥ ೮ ॥

ಆದಿ ಸುಭಾಸನು ಮಧ್ಯ ಮಹಾತ್ಮನು ।
ಇದ್ದ ಜವಾಹರರ ಜಯವೇ ನಾನು ॥ ೯ ॥

— ಸಂಶಿ.

ಒತ್ತಾಯದ ಶಿಕ್ಷಣ: ತಾಂತ್ರಿಕ ತರಬೇತಿ.

ವ್ಯಕ್ತಿ ವ್ಯಕ್ತಿಗೂ ಸಕಲರಿಗೂ ಶಿಕ್ಷಣವನ್ನು ಕೊಡುವದಕ್ಕಾಗಿ ಯೋಜನೆ:

ಲೇಖಕರು:— ಶ್ರೀ. ಕೆ. ಜಿ. ಸೈಯದೈನ. ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರು.

ಆ ದಿನ ನಾವು ನಮ್ಮ ರಾಜಕೀಯ ಸ್ವಾತಂತ್ರ್ಯದ ಮೊದಲನೆಯ ವರುಷವನ್ನು ಪೂರ್ತಿಗೊಳಿಸುತ್ತೇವೆ; ಮತ್ತು ಇಲ್ಲಿಯ ವರೆಗೆ ನಾವು ನಡೆದು ಬಂದ ದಾರಿಯ ಕಡೆಗೆ ಹೊರಳಿ ನೋಡುವದು ನಮಗೆ ಸಹಜವಾದುದಾಗಿದೆ. ಅದು ಎಂತಹ ತರಕಲಾದ, ಏರಿಳಿಕೆಗಳುಳ್ಳ ಹಾಗು ಪರೀಕ್ಷಣದ ದಾರಿಯಾಗಿದೆ! ಸ್ವಾತಂತ್ರ್ಯವನ್ನು ಭಗ್ನಗೊಳಿಸುತ್ತೆಂಬಂತೆ ಭಯಸೂಚಕವಾದ ಅರಾಜಕತೆಯು ಉದ್ಭೂತವಾಗಿದುದರಿಂದಾಗಿ, ಆ ಸ್ವಾತಂತ್ರ್ಯದ ಹರುಷ ಹಾಗು ಉಲ್ಲಾಸವು ನಾಶಗೊಳಿಸಪ್ಪಟ್ಟಿತು. ಜಾತೀಯ ಮತ್ತು ಪಕ್ಷೀಯ ಸ್ಪರ್ಧೆ ದ್ವೇಷಗಳು ಸೇವೆಯ ಪ್ರಸಂಗಗಳನ್ನು ಅಣಕಿಸಿದುವು. ಮಹಾತ್ಮಾ ಗಾಂಧಿಯವರು ತಮ್ಮ ಉಪದೇಶ ಆದರ್ಶಗಳ ಮುಖಾಂತರವಾಗಿ ಕೊಡಮಾಡಿದ, ಇತಿಹಾಸ ಪ್ರಸಿದ್ಧ ಮುಂದಾಳ್ತನವಿಲ್ಲದೆ ಹೋಗಿದ್ದರೆ, ಸಂಭವಿಸಬಹುದಾಗಿದ್ದ ಎಲ್ಲ ಸಂಗತಿಗಳನ್ನು ನೆನಸುವದರಿಂದ, ಯಾರಿಗಾದರೂ ನಡುಗು ಹುಟ್ಟುತ್ತದೆ. ದೇಶವು ಚಿಂತೆ ಹಾಗು ವೃದ್ಧಿಂಗತವಾಗುತ್ತಲಿದ್ದ ಸಂಕಟಗಳಿಂದ, ಕೂಡಿದ ಸಂಗತಿಗಳನ್ನು ತಳೆದು ಬಾಟಿಯೇಕಾಗಿದ್ದವರ ಕಾರಣದಿಂದ, ಸ್ವಾಭಾವಿಕವಾಗಿ. ಇದರನ್ನು, ರಾಷ್ಟ್ರ ಪುನರ್ರಚನೆಯ ಸಮಸ್ಯೆಗಳಿಗೆ ಮಾಡಿ ಒದಗಿಸಬಹುದಾಗಿದ್ದನ್ನು ಸ್ಪರ್ಧೆಗೆ ಮೇಲೆ ಹಾಗು ಲಕ್ಷ್ಯವನ್ನು ಪೂರೈಸಲು ಸಮರ್ಥವಾಗಿದ್ದು. ಹೊಸ ರಾಷ್ಟ್ರದ ತಕ್ಕುದಿಯ ಅಂತರಾಯವನ್ನೇ ಮಾಡಿಕೊಳ್ಳುತ್ತೆಂಬಂತೆ ಭಯಸೂಚಕವಾಗಿ ಮೇರುವ, ಅತ್ಯಂತ ಗಂಭೀರ ಗಂಡಾಂತರ ಪ್ರಸಂಗವು ನಮ್ಮುಖದಲ್ಲಿ, ಸಮಾಜಕಲ್ಯಾಣ ಹಾಗು ಸಮಾಜ-ಸೇವೆಯ ಎಷ್ಟೋ ಮಹತ್ವದ ಯೋಜನೆಗಳು ಹಿಂಬದಿಯ ಸ್ಥಾನವನ್ನು ತಕ್ಕೊಳ್ಳಬೇಕಾಯಿತು.

ಮುಂಬಯಿಯಲ್ಲಿ, ಉತ್ತರ ಹಿಂದುಸ್ಥಾನದಲ್ಲಿಗಿಂತ, ಪರಿಸ್ಥಿತಿಯು, ಒಟ್ಟಿನ ಮೇಲೆ, ಹೆಚ್ಚು ಒಳ್ಳೆಯದೂ ಶಾಂತವೂ ಆಗಿರುತ್ತದೆ. ಆದ ಕಾರಣ, ಮುಂಬಯಿ ಸರಕಾರವು ತನ್ನ ಶೈಕ್ಷಣಿಕ ಪುನರ್ರಚನೆಯ ಯೋಜನೆಗಳಿಗೆ, ಬೇರೆ ಕೆಲವು ಪ್ರಾಂತಗಳಿಗಿಂತ, ಹೆಚ್ಚು ಲಕ್ಷ್ಯವನ್ನು ಪೂರೈಸಲು ಸಮರ್ಥವಾಗಿದೆ.

ಕಾರ್ಯಕ್ರಮ

ಯುದ್ಧೋತ್ತರ ಶೈಕ್ಷಣಿಕ ಬೆಳವಣಿಗೆ ಹಾಗು ಪುನರ್ರಚನೆಯ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ ಮತ್ತು ಒಳ್ಳೆಯ ಪ್ರಗತಿಯನ್ನು ಸಾಧಿಸಲಾಗಿದೆ ಕಾರ್ಯಕ್ರಮದ ಮುಖ್ಯಾಂಶಗಳು ಹೀಗಿವೆ:— (ಅ) ಐದು ವರ್ಷಗಳೊಳಗಾಗಿ, ೧೦೦೦ ಹಾಗು ಹೆಚ್ಚು ಜನವಸತಿಯುಳ್ಳ ಎಲ್ಲ ಹಳ್ಳಿಗಳಲ್ಲಿ, ಒತ್ತಾಯದ ಶಿಕ್ಷಣವನ್ನು ಅಮಲಿಸಲ್ಲಿ ತರುವ ಗುರಿಯನ್ನಿಟ್ಟುಕೊಂಡಿರುವ,—ಒತ್ತಾಯದ ಪ್ರಾಥಮಿಕ ಶಿಕ್ಷಣ ಕಾಯಿದೆಯನ್ನು ಪಾಸುಮಾಡುವದು. (ಬ) ೪೦೦ ಹಾಗು ೧೦೦೦ ದೊಳಗಿನ ಜನವಸತಿಯುಳ್ಳ, ಶಾಲೆಗಳಿಲ್ಲದ ಎಲ್ಲ ಹಳ್ಳಿಗಳಲ್ಲಿ, ಸಡಾಯುಳ್ಳ ಸಿಟಿ ಪ್ರೈಮರಿ ಶಾಲೆಗಳನ್ನು ತೆರೆಯಲು ಒಂದು [illegible] ಸೌಕರ್ಯವನ್ನು ಕೊಡುವದು. (ಕ) ಐದು ವರ್ಷಗಳಲ್ಲಿ, ೧೦೦ "ಒಕ್ಕಲುತನ ಒಲವುಳ್ಳ" ಶಾಲೆ [illegible] ಹಳ್ಳಿಗಳಲ್ಲಿ ಕೆಲವು ವಸತಿಗೃಹ ಸೌಕರ್ಯವುಳ್ಳವಾಗುವವು. (ಡ) ಗಂಡು ಹಾಗು ಹೆಣ್ಣು ಮಕ್ಕಳಿಗಾಗಿ ಪ್ರಾಥಮಿಕ ಶಿಕ್ಷಣ ತರಬೇತಿ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸುವದು. (ಇ) ಪ್ರಾಥಮಿಕ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಮೂಲ ಶಿಕ್ಷಣ ತರಬೇತಿ ಸಂಸ್ಥೆಗಳಾಗಿ ಪರಿವರ್ತಿಸುವದಕ್ಕೋಸ್ಕರ, ಅಸಮರ್ಥವಿರುವ ಶಿಕ್ಷಕವರ್ಗವನ್ನು ತರಬೇತಿಗೊಳಿಸಲು, ಮೂರು ವರ್ಷದವರೆಗ ಮೂಲ ಶಿಕ್ಷಣ ತರಬೇತಿ ವಿದ್ಯಾರ್ಥಿನಿಲಯಗಳನ್ನು ತೆರೆಯುವದು. * (ಫ) ಪ್ರಾಥಮಿಕ ಶಾಲೆ-

*ಈಗಾಗಲೇ ಇವು ಧಾರವಾಡ, ಅಮದಾಬಾದ, ಬೋರ್ಡಿಯಲ್ಲಿ ಸ್ಥಾಪಿತವಾಗಿವೆ.—ಸಂಪಾದಕರು

ಗಳನ್ನು ಮೂಲ ಶಿಕ್ಷಣ ಶಾಲೆಗಳಾಗಿ ಮಾರ್ಪಡಿಸಲು ಮಾರ್ಗವನ್ನುಂಟು ಮಾಡಿಕೊಡುವದಕ್ಕಾಗಿ, ಅವುಗಳಲ್ಲಿ ವೃತ್ತಿ ಶಿಕ್ಷಣವನ್ನು ಪ್ರಾರಂಭಿಸುವದು. (ಗ) ಶಿಕ್ಷಕರು ತಮ್ಮ ವ್ಯವಸಾಯ ಕುಶಲತೆಯನ್ನು ಸುಧಾರಿಸಿಕೊಳ್ಳಲು, ಅವರಿಗಾಗಿ "ರಿಫ್ರೆಶರ್" ತರಬೇತಿ ವರ್ಗಗಳನ್ನು ಸಂಘಟಿಸುವದು. (ಹ) ಹಳ್ಳಿ, ಪಟ್ಟಣ ಹಾಗು ಶಹರಗಳಲ್ಲಿ, ಜಾಳಿಗೆಯ ಹೆಣಿಗೆಯಂತೆ, ಪುಸ್ತಕಾಲಯಗಳನ್ನು ತೆರೆಯುವದು; ಮುಂಬಯಿಯಲ್ಲಿ ತೆರೆಯಲಾಗುವ ಒಂದು ಕೇಂದ್ರ ಪುಸ್ತಕಾಲಯವು ಈ ರಚನೆಯ ಅಗ್ರಸ್ಥಾನವನ್ನು ಹೊಂದುವದು. (ಆಯ್) ಪ್ರಾಥ ಶಿಕ್ಷಣವನ್ನು ಬಲವಂತ ಪಡಿಸುವದಕ್ಕಾಗಿ ಹೆಚ್ಚು ಪರಿಣಾಮಕಾರಿಯಾದ ಸಂಘಟನೆ: ಅದಕ್ಕೋಸುಗ, ಮೂರು ಪ್ರಾದೇಶಿಕ ಸಮಿತಿಗಳನ್ನು ನೇಮಿಸಲಾಗಿದೆ ಮತ್ತು ಅದರ ಮೇಲ್ವಿಚಾರಕ ವರ್ಗವನ್ನು ಮಂಜೂರು ಮಾಡಲಾಗಿದೆ. (ಜ) ದೃಷ್ಟಿಶಿಕ್ಷಣದ ಕಾರ್ಯಕ್ಷಮತೆ ಹಾಗು ಕಾರ್ಯ ಪರಿಮಿತಿಯನ್ನು ಹೆಚ್ಚಿಸಲು, ಅದಕ್ಕಾಗಿ ಒಬ್ಬ ಮೇಲ್ವಿಚಾರಣಾಧಿಕಾರಿಯನ್ನು (Inspector) ಮತ್ತು ಎರಡು ಸಲಹಾ ಸಮಿತಿಗಳನ್ನು (ಸಾಮಾನ್ಯ ಹಾಗು ತಾಂತ್ರಿಕ) ನೇಮಿಸುವದು. (ಖ) ಹೆಚ್ಚು ಶಾಲಾಕಟ್ಟಡಗಳನ್ನು ಒದಗಿಸಿಕೊಡುವದು. (ಲ) ಪುಣೆ, ಅಹಮ್ಮದಾಬಾದ, ಮತ್ತು ಧಾರವಾಡಗಳಲ್ಲಿ ಮೂರು ಪ್ರಾದೇಶಿಕ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವದು.

ಯೋಜನೆಯನ್ನು ಕಾರ್ಯರೂಪಕ್ಕಿಳಿಸುವದು.

ಇವುಗಳು "ಮಂಜೂರಿ"ಯನ್ನು ಪಡೆದಂಥ ಕೇವಲ "ಯೋಜನೆ"ಗಳಷ್ಟೇ ಆಗಿಲ್ಲ. ಇವುಗಳಲ್ಲಿ ಬಹುತರವಾಗಿ, ಎಲ್ಲವನ್ನೂ ಕ್ರಮೇಣ ಕಾರ್ಯರೂಪಕ್ಕಿಳಿಸಲಾಗುತ್ತಿರುತ್ತದೆ, ಮತ್ತು ಪ್ರಗತಿಯು ಕೆಲವು ವಿಷಯಗಳಲ್ಲಿ ಸಾವಕಾಶವಾಗಿಯೂ ಉಳಿಕೆವುಗಳಲ್ಲಿ ಒಳ್ಳೆ ಎದ್ದು ಕಾಣುವಂತೆಯೂ ಇದ್ದರೂ ಕೂಡ, ಒಟ್ಟಾಗಿ ನೋಡಿದಾಗ, ಅವುಗಳು ನಿಜವಾದ ಶೈಕ್ಷಣಿಕ ಮುನ್ನಡೆಯ ಪ್ರಾತಿನಿಧಿಕವಾಗಿವೆ ಮತ್ತು ಜನತೆಯ ಎಲ್ಲ ಮಟ್ಟಗಳಲ್ಲಿಯ ಶಿಕ್ಷಣವನ್ನು ಕುರಿತು ಸರಕಾರದ ತೀಕ್ಷ್ಣ ಹಂಬಲದ ಸ್ವಾಗತಾರ್ಹ ಪುರಾವೆಗಳಾಗಿವೆ.

ಶಿಕ್ಷಣಖಾತೆಯ ಅಂದಾಜಪತ್ರಿಕೆಯಲ್ಲಿ, ೧೯೪೬—೪೭ ನೆಯ ವರ್ಷದಲ್ಲಿಯ ರೂ. ೪,೫೨,೦೨,೪೮೪ಗಳ ಮೊಬಲಗು ಪ್ರಚಲಿತ ವರ್ಷದಲ್ಲಿ ರೂ. ೭,೯೩,೭೦,೦೦೦ಗಳ ಮಟ್ಟಕ್ಕೆ ಏರಿರುವದು, ಸರಕಾರವು ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತಿರುವದರ ಮತ್ತೊಂದು ಸೂಚಿಕೆಯಾಗಿದೆ.

ಮಾರ್ಗಕ್ರಮಣದಲ್ಲಿರುವ ವಿವಿಧ ಯೋಜನೆಗಳನ್ನು ಮೇಲೆ ಬಹು ಸ್ವಲ್ಪದರಲ್ಲಿ ಹೇಳಲಾಗಿದೆ. ಆದ್ದರಿಂದ ಅವುಗಳು ತುಸು ಸಂಕ್ಷಿಪ್ತಚಿತ್ರಣಗಳಂತೆ ತೋರುತ್ತವೆ. ಈ ಚಿತ್ರಣಕ್ಕೆ ಇನ್ನಷ್ಟು ಆಳ ಹಾಗು ನಿಚ್ಚಳತೆಯನ್ನುಂಟು ಮಾಡುವದಕ್ಕಾಗಿ ನಾನು ತುಸು ಮುಂದರಿಸಿ ಹೀಗೆ ಹೇಳಬಹುದು; ಏನಂದರೆ, ಸರಕಾರವು ಶೈಕ್ಷಣಿಕ ಅನುಕೂಲತೆಗಳನ್ನು ವಿಸ್ತರಿಸುವದನ್ನು ಕುರಿತು ಮಾತ್ರವಲ್ಲದೆ, ಶಿಕ್ಷಣದ ದರ್ಜೆಯನ್ನು ಕುರಿತು ಕೂಡ ಬಹಳ ಆಸ್ಥೆ ವಹಿಸಿದೆ. ಅದರ ಕಾರ್ಯನಿರ್ವಹಣದಲ್ಲಿ ಮೊಟ್ಟಮೊದಲಿನದು ಶಿಕ್ಷಕ-ವರ್ಗದ ಪ್ರಾವೀಣ್ಯತೆ, ಹಿತ ಹಾಗು ಸಂತುಷ್ಟಿಗಳನ್ನು ಸಾಧಿಸುವದೇ ಆಗಿರುತ್ತದೆ.

ಶಿಕ್ಷಕರ ವೇತನ ಪ್ರಮಾಣಗಳು

ಅದರ ಪರಿಣಾಮವಾಗಿ, ಅದು, ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಶಿಕ್ಷಕರ—ಸರಕಾರಿ ನೌಕರರು ಮತ್ತು ಖಾಸಗಿ ಸಂಸ್ಥೆಗಳಲ್ಲಿದ್ದವರು—ಸಂಬಳಪ್ರಮಾಣಗಳನ್ನು ಮತ್ತು ನೌಕರಿಯ ಶರ್ತುಗಳನ್ನು ಪುನರ್ವಿಮರ್ಶಿಸಿರುತ್ತದೆ; ಇವುಗಳು ಬಹ್ವಂಶಗಳಲ್ಲಿ, ಬೇರೆ ಪ್ರಾಂತಗಳಲ್ಲಿಯ ಪ್ರಮಾಣಗಳಿಗೆ ಅನುಕೂಲವಾಗಿ ಹೋಲಿಕೆಯಾಗುತ್ತವೆ. ಸಾಮಾನ್ಯ ಶಿಕ್ಷಣದಲ್ಲಿ ಅಲ್ಲದೆ ಮೂಲೋದ್ಯೋಗಗಳಲ್ಲಿ, ದೊಡ್ಡ ಪ್ರಮಾಣದ ಮೇಲೆ "ರಿಫ್ರೆಶರ್ ಕೋರ್ಸ್" ವರ್ಗಗಳನ್ನು ನಡೆಯಿಸಲು ವ್ಯವಸ್ಥೆಯನ್ನು ಮಾಡಲಾಗಿದೆ. ಶಿಕ್ಷಕರಲ್ಲಿ ವ್ಯವಸಾಯ ನೈಪುಣ್ಯವನ್ನು ಸುಧಾರಿಸಲು, ಶೈಕ್ಷಣಿಕ ಪತ್ರಿಕೆಗಳು ಮತ್ತು ಶಿಕ್ಷಕರ ಕೈಪಿಡಿಗಳ ಪ್ರಕಾಶನವನ್ನು ಕೈಕೊಳ್ಳಲಾಗಿದೆ ಮತ್ತು ಯೋಗ್ಯ ಸ್ಥಳಗಳಲ್ಲಿ ಶಿಕ್ಷಕರ ಪುಸ್ತಕಾಲಯಗಳನ್ನು ಸ್ಥಾಪಿಸಲು ಸಲಹೆಕೊಡಲಾಗಿದೆ. ಶಿಕ್ಷಕರ ಶಿಬಿರಗಳನ್ನು ನಡೆಯಿಸಲು, ಮತ್ತು ತಮ್ಮ ಸೂಟಿಯ ದಿನಗಳ ಕೆಲವು ಭಾಗವನ್ನು ಅವರು ಅಗ್ಗ ಖರ್ಚಿನಿಂದ ಜೀವನ ಸಾಗಿಸುತ್ತ, ಗಿರಿನಿವಾಸಗಳಲ್ಲಿ ಅಥವಾ ಸಮುದ್ರತೀರದಲ್ಲಿ ಕಳೆಯುವಂತೆ, ಶಿಕ್ಷಕರಿಗೆ, ವಾಸಸ್ಥಳಗಳನ್ನು ಒದಗಿಸಿಕೊಡಲು, ಸರಕಾರದ ಮುಂದಿರುವ ಸಲಹೆ ಸೂಚನೆಗಳನ್ನು, ಅದು ತತ್ಪರತೆಯಿಂದ ವಿಚಾರಿಸುತ್ತಿದೆ.

ಅವರ ಸ್ಥಾನಮಾನ

ಶಿಕ್ಷಕರ ಗೌರವ ಹಾಗು ಅವರ ಸಾಮಾಜಿಕ ಸ್ಥಾನಮಾನಗಳನ್ನು ಸಂರಕ್ಷಿಸುವದಕ್ಕಾಗಿ, ಸರಕಾರವು, ಎಲ್ಲ ಸರಕಾರಿ

ನೌಕರರು ಮತ್ತು ಸಾರ್ವಜನಿಕರು ಅವರ ಸ್ಥಾನಕ್ಕೆ ಸಲ್ಲತಕ್ಕ ಯೋಗ್ಯ ಸನ್ಮಾನವನ್ನು ಸಲ್ಲಿಸಬೇಕೆಂದು ಒತ್ತಿಹೇಳುವ ಪ್ರಸಿದ್ಧಿ ಪತ್ರಿಕೆಯನ್ನು ಹೊರಡಿಸಿದೆ. ಈ ಉಪಾಯಗಳ ಪರಿಣಾಮವಾಗಿ, ಶಿಕ್ಷಕರಲ್ಲಿ ಹೆಚ್ಚಾದ ಕಾರ್ಯಕುಶಲತೆ ಮತ್ತು ಸಂತುಷ್ಟಿಗಳುಂಟಾದರೆ, ಅದು ಶಿಕ್ಷಣದಲ್ಲಿ ಗುಣೋನ್ನತಿಯ ಸಾಧನೆಯಲ್ಲಿ ಮೊದಲನೆಯ ಹೆಜ್ಜೆಯು—ಮತ್ತು ಬಹು ದೊಡ್ಡದಾದ ಹೆಜ್ಜೆ—ಆಗುತ್ತದೆ. ಸರಕಾರವು, ಶಿಕ್ಷಣ ಸಲಹೆಗಾರರ ಕೈಕೆಳಗೆ, ಅಭ್ಯಾಸಪತ್ರಿಕೆ ಹಾಗು ಕಲಿಸುವ ಪದ್ಧತಿಗಳಿಗೆ ಸಂಬಂಧಿಸಿದ ಮತ್ತು ಶಿಕ್ಷಕರ ಸಲುವಾಗಿ—ಪ್ರಸಿದ್ಧಿಪತ್ರಿಕೆಗಳ ಪುಸ್ತಕಗಳು, ನಿಯತಕಾಲಿಕಗಳು ಇತ್ಯಾದಿಗಳನ್ನೊಳಗೊಂಡ—ಯೋಗ್ಯ ಸಾಹಿತ್ಯದ ಪ್ರಕಾಶನ, ಇವುಗಳಿಗೆ ಸಂಬಂಧಿಸಿದ, ಸಮಸ್ಯೆಗಳನ್ನು ಕೈಕೊಳ್ಳುವದಕ್ಕಾಗಿ, ಶಿಕ್ಷಣಖಾತೆಯ ಒಂದು ವಿಶೇಷ ವಿಭಾಗವನ್ನು ಸ್ಥಾಪಿಸಿದೆ.

ಈ ಕೈಕೊಂಡ ಉಪಾಯಗಳು ಒಂದು ವರ್ಷದಲ್ಲಿ ಫಲಕಾರಿಯಾಗಲಾರವೆಂಬದು ಸ್ಪಷ್ಟವಾಗಿದೆ; ಅವುಗಳು ಕಷ್ಟಮಯ ಹಾಗು ಪ್ರಾಮಾಣಿಕ ಉದ್ಯೋಗದಿಂದ ಕೂಡಿದ ಎಷ್ಟೋ ವರ್ಷಗಳ ಕೆಲಸದ ನಂತರವೇ ಫಲವನ್ನು ಕೊಡುವವು. ಆದರೆ ಕೊನೆಗೊಮ್ಮೆ ಶಿಕ್ಷಣದ ಮಹತ್ವದ ಅರಿವು ಉಂಟಾಗಿದೆ ಎಂಬುದೊಂದು ಸಮಾಧಾನಕಾರಕವಾದ ಸಂಗತಿಯಾಗಿದೆ. ಶಿಕ್ಷಣಕ್ಕೆ ಅಗ್ರಪ್ರಾಮುಖ್ಯತೆಯನ್ನು ಕೊಡುವ ಈಗಿನ ಧೋರಣೆಯು ಮುಂದುವರಿದದ್ದಾದರೆ, ಬಹುಶ: ನಾವು, ಸಾಧಿಸಲಾಗದಿರುವ ಶತಮಾನಗಳ ಕಾರ್ಯಗಳನ್ನು ಕೆಲವೇ ದಶಮಾನಗಳಲ್ಲಿ ಸಾಧಿಸಿ ಕೂಡಿಕೊಳ್ಳಲು ಸಮರ್ಥರಾಗಬಹುದು.

ಸ್ವಾತಂತ್ರ್ಯ ಪ್ರತಿಜ್ಞೆ

[ಕೆಳಗಿನ ಪ್ರತಿಜ್ಞೆಯನ್ನು ಸರ್ವಾರಾಷ್ಟ್ರೀಯ ಅಧ್ಯಾಪನ ಕೇಂದ್ರದಲ್ಲಿ ಸ್ವಾತಂತ್ರ್ಯ ಸರ್ವಂತ ಪ್ರಥಮ ಉತ್ಸವದ ದಿನ ಧ್ವಜವಂದನೆಯ ಕಾಲಕ್ಕೆ ಶಿಕ್ಷಕ ವಿದ್ಯಾರ್ಥಿಗಳೂ-ಅಧ್ಯಾಪಕವೃಂದದವರೂ ತೆಗೆದುಕೊಂಡರು. ಶ್ರೀ. ಹ. ಗ. ಜೋಶಿಯವರು ಓದಿ ತೋರಿಸಿ 'ನಾವಿದನ್ನು ಎಲ್ಲರೂ ಒಪ್ಪಿ ಆಚರಣೆಯಲ್ಲಿ ತರುತ್ತೇವೆ' ಎಂದು ಎಲ್ಲರೂ ಅನ್ನಲು ಬಿನ್ನವಿಸಿಕೊಂಡರು. ಎಲ್ಲರೂ ಹಾಗೆ ಉಚ್ಚರಿಸಿ ಪ್ರತಿಜ್ಞೆ ತೆಗೆದುಕೊಂಡರು.]

ರಾಜಕೀಯ ಸ್ವಾತಂತ್ರ್ಯವನ್ನು ಭಾರತವು ದೊರಕಿಸಿ ಇಂದಿಗೆ ಒಂದು ವರುಷವಾದರೂ, ಸ್ವಾತಂತ್ರ್ಯದ ಸಮಗ್ರತೆಯನ್ನು ಅದಿನ್ನೂ ಪಡೆದಿಲ್ಲ. ಆದುದರಿಂದ ನಾವಿಂದು ಅದರ ಸಮಗ್ರತೆಗಾಗಿ ಹೆಣಗಾಡಲು ಪ್ರಯತ್ನಿಸುತ್ತೇವೆ.

ಆದುದರಿಂದ ಅಹಿಂಸಾತ್ಮಕ ಪ್ರತ್ಯಕ್ಷ ಕ್ರಿಯೆಗೆ ತೊಡಗಲು ಹೆಣಗಾಡುವೆವಲ್ಲದೆ— ಮಹಾತ್ಮಾ ಗಾಂಧಿಯವರಿಂದ ಪ್ರಣೀತವಾದ ಹಾಗು ಕಾಂಗ್ರೆಸ್ಸಿನಿಂದ ಮಾನ್ಯವಾದ ಖಾದಿ, ಜಾತೀಯ ಐಕ್ಯ, ಅಸ್ಪೃಶ್ಯತಾನಿವಾರಣಗಳನ್ನೊಳಗೊಂಡ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕಾರ್ಯಕಾರಿಮಾಡಬೇಕೆಂಬುದನ್ನು ನಾವು ಒಪ್ಪುತ್ತೇವೆ. ನಾವು ನಮ್ಮ ಬಾಂಧವರಲ್ಲಿ ಜಾತಿಭೇದವನ್ನೆಣಿಸದೆ ಸೌಹಾರ್ದವನ್ನು ಬೆಳೆಸಲು ಸದಾ ಪ್ರಯತ್ನಿಸುತ್ತೇವೆ. ಜನರನ್ನು ದಾರಿದ್ರ್ಯ ಮತ್ತು ಅಜ್ಞಾನದಿಂದ ಉದ್ಧರಿಸಲು ಹೆಣಗುತ್ತೇವೆ. ದೀನದರಿದ್ರರ ಹಿತರಕ್ಷಣೆಗಾಗಿ ಪ್ರಯತ್ನಿಸುತ್ತೇವೆ.

ಸ್ವಾತಂತ್ರ್ಯ ಹೋರಾಟದಲ್ಲಿ ದಾರುಣ ಸಂಕಟಗಳನ್ನು ಸಹಿಸಿ ಸರ್ವಸ್ವವನ್ನೂ ತ್ಯಾಗಮಾಡಿ ಪ್ರಾಣಾರ್ಪಣೆ ಮಾಡಿದ ವೀರರನ್ನು ನಾವು ಅಭಿನಂದಿಸುತ್ತೇವೆ. ದೇಶದ ಸಾಂಪತ್ತಿಕ, ಸಾಂಸ್ಕೃತಿಕ ಆಧ್ಯಾತ್ಮಿಕ ಉನ್ನತಿಗಾಗಿ ಆ ದೇಶಬಾಂಧವರು ಹಾಕಿಕೊಟ್ಟ ಪಂಥದಿಂದ ನಡೆಯಲೆತ್ನಿಸುತ್ತೇವೆ.

ಸ್ವಾತಂತ್ರ್ಯಜನಕನಾಗಿ, ಅಹಿಂಸೆಯ ಮೂರ್ತಿಯಾಗಿ ಜಗದೋದ್ಧಾರಕನಾಗಿ ದೇಹವನ್ನು ಮುಡಿಪಿಟ್ಟ ಅಮರನಾದ ಮಹಾತ್ಮನಿಗೆ ನಮ್ಮ ಶ್ರದ್ಧಾಂಜಲಿಗಳನ್ನರ್ಪಿಸುತ್ತೇವೆ. ಆತನ ನಿಜವಾದ ಅನುಯಾಯಿಗಳಾಗಲು ಹೆಣಗುತ್ತೇವೆಂದು ನಾವಿಲ್ಲಿ ಪ್ರತಿಜ್ಞೆಗೈಯುತ್ತೇವೆ.

ಪ್ರಾಥಮಿಕ ಶಾಲೆಗಳಲ್ಲಿ ಸಾಯನ್ಸದ ಶಿಕ್ಷಣ

ಲೇಖಕರು: ಶ್ರೀ. ವೀ. ಬ. ಚವಣ್ಣವರ, ಬಿ. ಎಸ್. ಸಿ., ಬಿ. ಟಿ.

ಸಾಮಾನ್ಯ ಶಿಕ್ಷಣದಲ್ಲಿ ಸಾಯನ್ಸ ವಿಷಯಕ್ಕೆ ಒಂದು ಮುಖ್ಯವಾದ ಸ್ಥಾನವು ಬೇಕೆಂಬುದು ಸರ್ವಸಮ್ಮತವಾಗಿದೆ. ಆ ಪ್ರಕಾರ ಅದಕ್ಕೆ ಆ ಸ್ಥಾನವು ದೊರೆತರೂ ಅದರ ಉದ್ದೇಶವು ಮಾತ್ರ ಸಾಧಿಸದೇ ಇದ್ದುದು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆಲ್ಲ ಗೊತ್ತಾದ ಮಾತಾಗಿದೆ. ಹೀಗಾಗಲಿಕ್ಕೆ (ವಿಶೇಷತಃ ಪ್ರಾಥಮಿಕ ಶಾಲೆಗಳಲ್ಲಿ) ಯಾವ ಕೊರತೆಗಳಿವೆ ಎಂಬುದನ್ನು ಹಾಗು ಅವನ್ನು ಹೇಗೆ ನೀಗಬಹುದೆಂಬದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಈ ದಿಶೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದವರೆಲ್ಲರೂ ಪ್ರಯತ್ನಿಸಿದರೆ ಈ ಕಾರ್ಯವು ಬಹು ಮಟ್ಟಿಗೆ ಸಾಧಿಸುವದರಲ್ಲಿ ಸಂದೇಹವಿಲ್ಲ.

೧. ಪ್ರಾಥಮಿಕ ಶಿಕ್ಷಕರಿಗೆ ವಿಜ್ಞಾನ ವಿಷಯದ ಜ್ಞಾನವು ತಕ್ಕಮಟ್ಟಿಗೆ ಇಲ್ಲ. ಅದಕ್ಕೆ ಕಾರಣಗಳೇನೇ ಇರಲಿ. ದಿನೇ ದಿನೇ ಬೆಳೆಯುತ್ತಿರುವ ವಿಜ್ಞಾನದ ಅಪಾರವಾದ ಜ್ಞಾನದ ಪರಿಚಯವಾಗುವದಂತೂ ದೂರೇ; ಆ ವಿಷಯದ ಸಾಮಾನ್ಯ ಕಲ್ಪನೆಯಾಗಬೇಕಾದರೆ, ಇರಬೇಕಾದ ಅತಿ ಪ್ರಾಥಮಿಕ ವಿಷಯ-ಜ್ಞಾನವು ಕೂಡ ಇಲ್ಲದಂತಾಗಿದೆ. ಇದಕ್ಕೆ ಶಿಕ್ಷಕರದೇ ಪೂರ್ಣ ತಪ್ಪೆಂದು ಹೇಳಲಾರೆವು. ಅದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಸುಮಾರು ೨೦—೩೦ ವರ್ಷಗಳ ಹಿಂದೆ ಶಿಕ್ಷಣ ಪಡೆದು ಈಗ ಶಿಕ್ಷಕರಾಗಿರುವಂಥವರು ಈ ಹೊತ್ತಿನ ವಿಜ್ಞಾನ ಕ್ಷೇತ್ರದಲ್ಲಿ ಅತಿ ಹಳಬರು. ಅವರಿಗೆ ತಕ್ಕ ಜ್ಞಾನವು ಕಾಲಕ್ಕೆ ಸಿಕ್ಕದೆ ಹೋದುದು ಅವರ ತಪ್ಪಲ್ಲ. ಅವರ ಆ ಕಾಲದ ಜ್ಞಾನವು (ಅದು ಕೊಂಚಮಟ್ಟಿಗಾದರೂ ಯೋಗ್ಯ ರೀತಿಯಲ್ಲಿ ಕೊಡಲ್ಪಟ್ಟಿದ್ದರೂ) ಈಗ ಬೇಕಾದ ಜ್ಞಾನಕ್ಕೆ ಅದು ಅತಿ ಕಡಿಮೆಯಾಗುವದು. ಎರಡನೆಯದಾಗಿ ಈಗ ಹೊಸದಾಗಿ ಶಿಕ್ಷಕ ವೃತ್ತಿಯನ್ನು ಕೈಕೊಳ್ಳುವವರ ಶಿಕ್ಷಣದ ಮಟ್ಟವಾದರೂ ಈ ವಿಷಯದಲ್ಲಿ ಅತಿ ಕಡಿಮೆಯಾಗಿರುವದು. ಕೇವಲ ಕನ್ನಡ ಮುಲ್ಕೀ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳ ಜ್ಞಾನದ ಮಟ್ಟವು ತಕ್ಕಷ್ಟಿಲ್ಲ. ಅದನ್ನು ಇನ್ನೂ ಹೆಚ್ಚಿಸಿ ಅದಕ್ಕಿಂತಲೂ ಹೆಚ್ಚಿನ ಜ್ಞಾನವನ್ನು ಕೊಡುವ ಭಾರವನ್ನು ಲೋಕಶಾಲೆ ಹಾಗು ಟ್ರೇನಿಂಗ ಸಂಸ್ಥೆಗಳು ಹೊರಬೇಕು. ಇಷ್ಟಾದರೂ ಶಿಕ್ಷಕನು ಆ ವಿಷಯದ ಬಗ್ಗೆ ಸಾಕಷ್ಟು ಜ್ಞಾನವುಳ್ಳವನಾಗುವನೆಂದು ಹೇಳುವದಾಗಲಿಕ್ಕಿಲ್ಲ. ಅವನು ತಾನು ಸದಾಕಾಲ ವಿದ್ಯಾರ್ಥಿಯಾಗಿ ವ್ಯಾಸಂಗಪರನಾಗಿ ತನ್ನ ಜ್ಞಾನ ಭಾಂಡಾರವನ್ನು ಬೆಳೆಸಬೇಕಾಗುತ್ತದೆ. ಅಂದರೇ ನೇತನ್ನ ಕೆಲಸಕ್ಕೆ ಯೋಗ್ಯನಾಗುವನು. ಆದರೆ ಇಂದಿನ ಹಳ್ಳಿಯ ಜೀವನದಲ್ಲಿ ಶಿಕ್ಷಕನಿಗೆ ಅದು ಸಾಧ್ಯವಾಗದ ಮಾತಾಗಿದೆ. ಆದರೂ ಆತನು ಇಚ್ಛಿಸಿ ಪ್ರಯತ್ನಪಟ್ಟರೆ ಅದು ಅಸಾಧ್ಯವಾಗಲಿಕ್ಕಿಲ್ಲ. ಇನ್ನು ಕೊನೆಯದಾಗಿ ಶಿಕ್ಷಕನು ಸದಾ ವಿದ್ಯಾರ್ಥಿಯಾಗಿರಬೇಕೆಂಬ ಲವಲವಿಕೆ ಇದ್ದರೂ ಆತನ ಮಾರ್ಗದಲ್ಲಿ ಹಲವು ತೊಂದರೆಗಳಿವೆ. ಅವನ ಸುತ್ತಲು ಎತ್ತ ನೋಡಿದತ್ತ ಕಗ್ಗತ್ತಲೆ. ಅದರಲ್ಲಿ ವಿಜ್ಞಾನದ ಒಂದು ಕಿರಣವೂ ಕೂಡ ಕಾಣುವಂತಿಲ್ಲ. ಅವನಿಗೆ ಪಟ್ಟಣಗಳ ಸಂಪರ್ಕವಿಲ್ಲ. ಔದ್ಯೋಗಿಕ ಕೇಂದ್ರಗಳ ದರ್ಶನವಿಲ್ಲ. ಆಧುನಿಕ ಜ್ಞಾನವನ್ನು ಬಿತ್ತರಿಸುವ ರೇಲ್ವೆ, ರೇಡಿಯೋ, ಚಲಚ್ಚಿತ್ರಗಳ ಸೋಂಕು ಕೂಡ ಇಲ್ಲ. ವರ್ತಮಾನ ಪತ್ರಗಳು, ಮಾಸಿಕಗಳು ಮುಟ್ಟದಂಥ ಅಂಚೆಯ ವ್ಯವಸ್ಥೆಯಿಲ್ಲದ ಅನೇಕ ಹಳ್ಳಿಗಳೇ ಆತನು ಕೆಲಸ ಮಾಡುವ ಕ್ಷೇತ್ರ. ಇನ್ನು ಕೆಲವೊಂದು ಸಂಗತಿಗಳನ್ನು ಪುಸ್ತಕಗಳ ಮುಖಾಂತರವಾದರೂ ಅರಿತುಕೊಳ್ಳಬೇಕೆಂದರೆ, ಆತನಿಗೆ ತಿಳಿಯುವ ಭಾಷೆಯಲ್ಲಿ (ಕನ್ನಡದಲ್ಲಿ) ವಿಜ್ಞಾನದ ಪುಸ್ತಕಗಳ ಅಭಾವವೇ ಅಭಾವ; ನಾಲ್ಕಾರು ಪುಸ್ತಕಗಳನ್ನು ಬಿಟ್ಟಲ್ಲಿ, ಕನ್ನಡದಲ್ಲಿ ವಿಜ್ಞಾನದ ಪುಸ್ತಕಗಳು ಹೊರಟಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅದು ನಮ್ಮ ದೊಡ್ಡ ಕೊರತೆಯಾಗಿದೆ. ಆದ್ದರಿಂದ ಇಂಥ ಸಂಧಿಕಾಲದಲ್ಲ ಬಲ್ಲವರು ಮುಂದೆ ಬಂದು

ಕನ್ನಡದಲ್ಲಿ ವಿಜ್ಞಾನದ ಬಗ್ಗೆ ಪುಸ್ತಕಗಳನ್ನು ಬರೆದರೆ ಕನ್ನಡ ಭಾಷೆಯ ಸೇವೆಯಷ್ಟೇ ಅಲ್ಲ, ಶಿಕ್ಷಣಕ್ಕೂ ಒಳ್ಳೇ ಸೇವೆ ಸಲ್ಲಿಸಿದಂತಾಗುವದು. ಅದಕ್ಕೂ ಅನೇಕ ತೊಂದರೆಗಳಿರಬಹುದು. ಅವು ಕಾಲಕ್ರಮೇಣ ಕಡಿಮೆಯಾಗುತ್ತವೆ. ಆದರೂ ಪ್ರಾಥಮಿಕ ಶಿಕ್ಷಕರು ಓದಬಹುದಾದ ಕನ್ನಡದಲ್ಲಿ ವಿಜ್ಞಾನದ ಸಾಹಿತ್ಯವನ್ನು ಇಲ್ಲಿ ಸೂಚಿಸಲಾಗಿದೆ :

(೧) ಮೈಸೂರ ಪ್ರಚಾರ ಮಾಲೆಯ ಕೆಲವು ವಿಜ್ಞಾನ ವಿಷಯದ ತುಸು ಬೆಲೆಯ ಚಿಕ್ಕ ಪುಸ್ತಕಗಳು. ಉದಾ— ವಾಯುಗುಣ, ವ್ಯವಸಾಯದ ಮಣ್ಣುಗಳು, ಬೆಳಕು, ಅಲೆಗಳು, ಸಾರ್ವಜನಕದ ಮಹತ್ವ, ಆಹಾರ, ಮಲೇರಿಯಾಬೇನೆ. ಇವರು ಭೌತ ವಿಜ್ಞಾನಿಗಳು ಇತ್ಯಾದಿ.

(೨) ಶಿವರಾಮ ಕಾರಂತರ 'ಬಾಲ ಪ್ರಪಂಚ'ದ ಮೂರು ಉದ್ಗ್ರಂಥಗಳು.(ಇವು ವಿವಿಧ ವಿಷಯಗಳ ಸಂಗ್ರಹವಾಗಿವೆ.)

(೩) ವಿಜ್ಞಾನಿಗಳ ಕಥೆಗಳು, ಜೀವನ ಚರಿತ್ರೆಗಳು ಇತ್ಯಾದಿ.

(೪) ಮೈಸೂರ ಸಂಸ್ಥಾನದಲ್ಲಿ ಕನ್ನಡದಲ್ಲಿ ಬರೆಯಲ್ಪಟ್ಟ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕೆಲವೊಂದು ಪಠ್ಯಪುಸ್ತಕಗಳು.

(೫) ಮುಂಬಯಿ ಕರ್ನಾಟಕದಲ್ಲಿ ಹೊರಟಿರುವ ವೈಜ್ಞಾನಿಕ ಕೆಲವು ಪಠ್ಯಪುಸ್ತಕಗಳು.

(೬) ಆರೋಗ್ಯಖಾತೆ, ಒಕ್ಕಲತನಖಾತೆಯವರು ತಮ್ಮ ಆಡಳಿತೆಗೆ ಒಳಪಟ್ಟ ವಿಷಯಗಳ ಬಗ್ಗೆ ಹೊರಡಿಸಿದ ಪ್ರಕಟನೆಗಳು. ಇತ್ಯಾದಿ.

(೨) ಇನ್ನು ಒಳ್ಳೇ ಪುರೋಗಾಮಿ ಪ್ರಾ. ಶಿಕ್ಷಕನು ವಿಜ್ಞಾನದ ಬಗ್ಗೆ ಸಾಕಷ್ಟು ಅಭ್ಯಾಸಮಾಡಿ ಆ ವಿಷಯವನ್ನು ಯಶಸ್ವಿಯಾಗಿ ಕಲಿಸಬೇಕೆಂದರೆ ವಿಜ್ಞಾನದ ಪಾಠಗಳನ್ನು ಹೇಳಿಕೊಡುವ ಕಾಲಕ್ಕೆ ಬೇಕಾಗುವ ಸಲಕರಣೆಗಳಿಲ್ಲ ಅತಿ ಸುಲಭ ಸಂಗತಿಗಳನ್ನು ಮಕ್ಕಳಿಗೆ ತಿಳಿಸುವಾಗ್ಗೆ ಅತ್ಯವಶ್ಯವಾಗಿ ಬೇಕಾಗುವ ಉಪಕರಣಗಳಿಲ್ಲ. ಮೂರ್ತಸ್ವರೂಪದಲ್ಲಿ ಕಲಿಸಬೇಕಾದ ಸಂದರ್ಭಗಳಲ್ಲಿ ಅಗತ್ಯ ಬೇಕುವ ಕೆಲವು ವಸ್ತು ಒಡವೆಗಳಿಲ್ಲ. ಚಿತ್ರ, ಪಟಗಳು ಮುಂತಾದವುಗಳ ಮುಖಾಂತರವಾದರೂ ಕಲ್ಪನೆಯನ್ನು ಮಾಡಿಕೊಡಬೇಕೆಂದರೆ ಸಾಕಷ್ಟು ಚಿತ್ರಗಳು, ಪಟಗಳು ಕೂಡ ಇಲ್ಲ. ಒಂದೆರಡಾಣೆ ಬೆಲೆಯುಳ್ಳ ವಸ್ತುಗಳು ಪಾಠದ ನಿದರ್ಶನಕ್ಕೆ ಬೇಕಾಗುವ ಪ್ರಸಂಗದಲ್ಲಿ ಅವನ್ನು ಕೂಡ ದೊರಕಿಸುವ ಮಾರ್ಗವಿಲ್ಲ. ಒಂದು ಬಟ್ಟಲು ನೀರನ್ನಾದರೂ ಕೂಡ ಇಡಲು ಬೇಕಾಗುವಷ್ಟು ಸಲಕರಣೆಗಳಿಲ್ಲ. ಇಂಥ ದುರವಸ್ಥೆಯಲ್ಲಿ ವಿಜ್ಞಾನದ ಪಾಠಗಳನ್ನು ಸಾಗಿಸುವದೆಂದರೆ ಕನಸಿನಲ್ಲಿ ಕಡಬು ಉಂಡಂತೆ. ಇಂಥ ದುರವಸ್ಥೆಯು ಎಷ್ಟೋ ಪ್ರಾಥಮಿಕ ಶಾಲೆಗಳಲ್ಲಿ ಕಂಡು ಬರಬಹುದು. ಇದನ್ನು ನೀಗಲಿಕ್ಕೆ ಶಿಕ್ಷಣ ಸಾಗಿಸುವ ಆಡಳಿತೆಗಾರರು ಸಾಧ್ಯವಿದ್ದ ಮಟ್ಟಿಗಾದರೂ ಪ್ರಯತ್ನಪಟ್ಟರೆ ತುಂಬಾ ಉಪಯೋಗವಾಗುವದು.

ಈ ಕೊರತೆಯನ್ನು ದೂರ ಮಾಡುವ ಹೊಣೆಯು ಬಹುಮಟ್ಟಿಗೆ ಈ ಹಳ್ಳಿಯ ಶಾಲೆಗಳನ್ನು ನಡೆಯಿಸುತ್ತಿರುವ ಸಂಸ್ಥೆಗಳು ಈ ಕಾರ್ಯವನ್ನು ಕೈಕೊಳ್ಳಲಿಕ್ಕೆ ಪ್ರಯತ್ನಿಸುವದು ಉಚಿತ. ನಮ್ಮ ಈ ಶಾಲೆಗಳಿಗೆ ಶಾಸ್ತ್ರೀಯ ವಿಷಯಕ್ಕೆ ಬೇಕಾಗುವ ಕೆಲವೊಂದು ಸಾಮಗ್ರಿಗಳನ್ನಾದರೂ ಪೂರೈಸಲೇಬೇಕು. ಇನ್ನು ಎಲ್ಲ ಶಾಲೆಗಳಿಗೆ ಈ ರೀತಿ ಒಮ್ಮೆಲೆ ಪೂರೈಸುವದು ಅಸಾಧ್ಯವಾಗಿದ್ದಲ್ಲಿ, ದೊಡ್ಡ ದೊಡ್ಡ ಶಾಲೆಗಳಲ್ಲಿ (Full Primary Schools) ಮೊದಲು ಮಾಡಿಕೊಂಡು ಕ್ರಮೇಣ ಹೆಚ್ಚು ಹೆಚ್ಚು ಶಾಲೆಗಳಿಗೆ ಈ ಸಲಕರಣೆಗಳನ್ನು ಪೂರೈಸುತ್ತ ಹೋಗಬೇಕು. ಮೇಲಾಗಿ ಳನೆಯ ಇಯತ್ತೆಯ ವರೆಗಿರುವ ಶಾಲೆಗಳಲ್ಲಿ ಹೆಚ್ಚಾಗಿ ಸೃಷ್ಟಿ ನಿರೀಕ್ಷಣೆಯ ಪಾಠಗಳನ್ನು ಹೇಳಿಕೊಡಬೇಕಾಗುವದರಿಂದ ಅಂಥಲ್ಲಿ ಇಂಥ ಸಲಕರಣೆಗಳ ಅವಶ್ಯಕತೆ ಕಡಿಮೆಯಾಗಿರುವದು. ಅದರಂತೆಯೇ ಎಲ್ಲ ಅವಶ್ಯವಾಗಿರುವ ಸಾಮಾನುಗಳನ್ನು ಒಮ್ಮೆಲೆ ಪೂರೈಸುವದಾಗದಿದ್ದರೆ ಕೆಲವೊಂದು ಅತಿ ಅಗತ್ಯವಿರುವ ಸಾಮಾನುಗಳನ್ನು ಎಲ್ಲಕ್ಕೂ ಮೊದಲು ಆ ನಂತರ ಕಾಲಕ್ರಮೇಣ ಇನ್ನುಳಿದ ಅವಶ್ಯ ಸಾಮಾನು ಈ ರೀತಿ ಪೂರೈಸಬಹುದು. ಈ ದಿಶೆಯಲ್ಲಿ ಯಾರೂ ಸಾಕಷ್ಟು ಲಕ್ಷ್ಯವನ್ನು ಹಾಕಿದಂತೆ ತೋರುವದಿಲ್ಲ. ಇದು ಪ್ರಾಥಮಿಕ ಶಿಕ್ಷಣಕ್ಕೆ ನಾವು ಇಲ್ಲಿಯವರೆಗೆ ತೋರಿಸುತ್ತ ಬಂದಿರುವ ಅನಾದರವೇ ಕಾರಣವಿರಬಹುದು. ಒಳ್ಳೇ ಅಗತ್ಯವಿರುವ ಸಾಮಗ್ರಿಗಳನ್ನು ಪೂರೈಸುವ ಕ್ರಮವನ್ನು ಕೆಳಗೆ ತೋರಿಸಿದಂತೆ ಸೂಚಿಸಲಾಗಿದೆ.

(೧) ಕನಿಷ್ಠ ೫-೬ ಕಾಜಿನ ಪಾತ್ರೆಗಳು ಹಾಗೂ ತಗಡಿನ ಪಾತ್ರೆಗಳು, ಕಾಜಿನ ಕೊಳವೆಗಳು.

(೨) ಶರೀರ ರಚನೆಯ ಪಟಗಳು; ಆರೋಗ್ಯದ ಬಗ್ಗೆ ಪಟಗಳು.

(೩) ಕಾಯಿಸಲು ಬೇಕಾದ ಸ್ಪಿರಿಟ-ದೀಪದ ಸೆಲಕರಣೆಗಳು.

(೪) ತಾತ್ಕಾಲಿಕ ಉಪಾಯದ ಉಪಯೋಗಿಸುವ ಸಾಮಗ್ರಿಗಳು.

(೫) ಮಕ್ಕಳಿಗೆ ಅತ್ಯವಶ್ಯವಾಗಿ ಪರಿಚಯ ಮಾಡಿಕೊಡಬೇಕಾದ ಕೆಲವೊಂದು ರಸಾಯನಿಕ ಅಥವಾ ಇನ್ನಿತರ ವಸ್ತುಗಳು.

(೬) ಮಕ್ಕಳನ್ನು ಸ್ಫೂರ್ತಿಗೊಳಿಸುವಂಥ ಪ್ರಖ್ಯಾತ ವಿಜ್ಞಾನಿಗಳ ಚಿತ್ರಗಳು.

(೭) ಟೆಪ, ವಾರಕಟ್ಟಿಗೆ, ಚಾಕು, ಕತ್ತರಿ ಸಾದಾ ತಕ್ಕಡಿ ಕಲ್ಲು ಇತ್ಯಾದಿ ಅವಶ್ಯಕ ಉಪಕರಣಗಳು.

(೮) ಡಾ. ಉಷ್ಣಮಾಪಕ.

ಈ ಕೊರತೆಯನ್ನು ಶಿಕ್ಷಕನು ಒಳ್ಳೇ ಉತ್ಸಾಹಿಯಾಗಿದ್ದರೆ ಎಷ್ಟೋಮಟ್ಟಿಗೆ ದೂರಮಾಡಿಕೊಳ್ಳಬಹುದು ? ಶಿಕ್ಷಕನು ತನ್ನ ಕಲಿಸುವ ಕಾಲಕ್ಕೆ ಬೇಕಾಗುವ ಚಿತ್ರಗಳನ್ನೂ ತಾನೆ ತಯಾರಿಸಿಕೊಳ್ಳಬಹುದು ಅಥವಾ ವಿದ್ಯಾರ್ಥಿಗಳಿಂದಲೂ ಹಲವು ಮಟ್ಟಿಗೆ ತಯಾರಿಸಿಕೊಳ್ಳಬಹುದು. ತನ್ನ ಹಸ್ತ ಕೌಶಲ್ಯದಿಂದ ಕೆಲವೊಂದು ಸಹಜವಾಗಿ ತಯಾರಿಸಬಹುದಾದ ಉಪಕರಣಗಳನ್ನು ತಯಾರಿಸಿಕೊಳ್ಳಬಹುದು. ತನ್ನ ಸುತ್ತಲಿನ ಸಮಾಜದ ಸಹಾಯವನ್ನು ಅದರ ಸಹಕಾರವನ್ನು ಪಡಿಯಬಹುದು. ಅವರ ಕಡೆಯಿಂದ ನಿತ್ಯೂಪಯೋಗದಲ್ಲಿರುವ ಕೆಲವೊಂದು ಸಾಮಗ್ರಿಗಳನ್ನು ಪಡೆಯಬಹುದು. ಇನ್ನೂ ಕೆಲವೊಂದು ಸಲಕರಣೆಗಳನ್ನು ಶಿಕ್ಷಕನು ಪೂರ್ವಯೋಜನೆಮಾಡಿ ನಿತ್ಯ ಸಹಜವಾಗಿ ಮತ್ತು ಪುಕ್ಕಟೆಯಾಗಿ ದೊರಕುವ ಸಾಮಾನುಗಳನ್ನು ಸಂಗ್ರಹಿಸಿಡಬಹುದು. ಬಾಳಕರ ನೆರವಿನಿಂದ ಸಂಗ್ರಹಿಸಬಹುದು. ಈ ರೀತಿ ಶಿಕ್ಷಕನು ತನ್ನ ಕಾರ್ಯವನ್ನು ಸುಗಮಗೊಳಿಸಬಲ್ಲನು.

(೩) ಈ ಮೇಲ್ಕಾಣಿಸಿದ ಅನಾನುಕೂಲತೆಗಳ ಜೊತೆಗೆ ಪ್ರಾಥಮಿಕ ಶಾಲೆಗಳಿಗೆ ಸ್ಥಳದ ಅಡಚಣೆಯಂತೂ ಹೇಳಲಾಸಲ್ಲ. ಎಷ್ಟೋ ಸಾಲೆಗಳಿಗೆ ಪ್ರತ್ಯೇಕವಾಗಿ ಕಟ್ಟಡಗಳು ಇರದ್ದರಿಂದ ಗುಡಿಗುಂಡಾರಗಳಲ್ಲಿ, ಮಸೀದಿಗಳಲ್ಲಿ ಅವನ್ನು ನಡೆಯಿಸಿಕೊಂಡು ಹೋಗುವ ದೃಷ್ಟಾಂತಗಳು ಸಾಕಷ್ಟು ಇವೆ. ಇಂಥ ಅತಿ ಪ್ರಥಮ ಆವಶ್ಯಕತೆಗಳು ಅನೇಕವಿರುವ ಕಾಲಕ್ಕೆ ಶಾಸ್ತ್ರೀಯ ವಿಷಯಕ್ಕೆ ಬೇಕಾಗುವ ಸಲಕರಣಗಳ ಬಗ್ಗೆ ಮಾತಾಡುವದೆಂದರೆ ನಗೆಗೇಡು. ಅವು ದೊರೆತವೆಂದು ಕಲ್ಪಿಸಿದರೂ ಅವನ್ನು ಇಡಲಿಕ್ಕೆ ಕೂಡ ಸ್ಥಳವಿಲ್ಲ. ಮಕ್ಕಳ ಹಾಗೂ ನಾಗರಿಕನ ಆರೋಗ್ಯ ಹಾಗು ಸ್ವಚ್ಛತೆಯ ಬಗ್ಗೆ ಅನೇಕ ಪಾಠಗಳನ್ನು ಕೊಡಬೇಕಾಗಿದ್ದರೂ ಆ ತರದ ವ್ಯವಸ್ಥೆಗೆ ಸಾಕಷ್ಟು ಅನುವು ಇಲ್ಲ. ಒಂದು ಗೇಣು ಬೈಲು ಸಾಲೆಯ ಉಪಯೋಗಕ್ಕೆ ಎಷ್ಟೋ ಕಡೆಯಲ್ಲಿ ಇರದೇ ಇದ್ದ ದೃಷ್ಟಾಂತಗಳು ಅನೇಕವಿವೆ. ಹಾಗಾದರೆ ಇದಕ್ಕೆ ಉಪಾಯವೇನು ? ಒಂದೇ ಒಂದು ಶಿಕ್ಷಣಕ್ಕೆಂದು ವ್ಯಯವಾಗುವ ಹಣದಲ್ಲಿ ಯಾವದಕ್ಕೆ ಮೊದಲು ಪ್ರಾಶಸ್ತ್ಯ ಕೊಡಬೇಕೆಂಬುದನ್ನು ಕೊಂಚ ವಿಚಾರಿಸಿದರೆ ಸಾಕು. ಇನ್ನು ಎಂಥ ಇಮಾರತು ಕಟ್ಟಬೇಕೆಂಬ ವಿಚಾರ. ಯಾವ ಆಡಂಬರವಿಲ್ಲದ ಅತಿ ಸಾದಾ ಇಮಾರತು, ಅದರಲ್ಲಿ ಕೆಲವು ಕಪಾಟುಗಳು, ಕೋಣೆಗಳು; ಮುಂದೆ ಅಥವಾ ಹಿಂದೆ ಸ್ವಲ್ಪವಾದರೂ ಬಯಲು. ಇಷ್ಟಾದರೆ ಸಾಕು.

(೪) ಕೊನೆಯದಾಗಿ ಈಗಿರುವ ಪ್ರಾಥಮಿಕ ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ವಿಜ್ಞಾನ ವಿಷಯದಲ್ಲಿಯ ಕುಂದು ಕೊರತೆಗಳು. ಅಲ್ಲಿ ಸೂಚಿಸಿದ ವಿಜ್ಞಾನ ವಿಷಯಕ್ಕೂ ಹಳ್ಳಿಯ ಜನರ ಜೀವನಕ್ಕೂ ಬಹುಮಟ್ಟಿಗೆ ಹೊಂದಿಕೆಯಾಗುವಂತಿಲ್ಲ. ಕೇವಲ ತಾತ್ವಿಕ ದೃಷ್ಟಿಯಿಂದ ರಚಿಸಿದ ಅಭ್ಯಾಸಪತ್ರಿಕೆಯಾಗಿರುವದು. ಉದಾ— ಹವೆಯ ಭಾರ ಮಾಪಕಯಂತ್ರ, ಬ್ರಹ್ಮಾಪ್ರೆಸ್, ಆರ್ಕಿಮೆಡಿಸನ ಸಿದ್ಧಾಂತ, ಪರಮಾವಧಿ ಕನಿಷ್ಟ ಉಷ್ಣಮಾನ, ಪ್ರಕಾಶದ ಗುಣಧರ್ಮಗಳು, ವಿದ್ಯುತ್ಪ್ರವಾಹದ ಪರಿಣಾಮ ಇತ್ಯಾದಿ. ವಿಷಯಗಳ ಕಂಠ ಪಾಠಗಳ ಬದಲಾಗಿ ಯಾವದನ್ನು ನಿರಾಯಾಸವಾಗಿ ಪ್ರಾತ್ಯಕ್ಷಿಕೆಯಿಂದ ಕಲಿಸಬೇಕಾದದ್ದನ್ನು ಕಲಿಸಿದರೆ ಎಷ್ಟೋ ಫಲಕಾರಿಯಾಗುವದು. ಇನ್ನು ವಿಜ್ಞಾನದ ಪಾಠಗಳನ್ನು ಕೊಡುವ ರೀತಿಯಲ್ಲಿ ಎಷ್ಟೋ ಲೋಪಗಳು ಇರಬಹುದು. ಅವನ್ನು ಮುಂದಿನ ಲೇಖನದಲ್ಲಿ ಕೊಡಲಾಗುವದು. ಒಟ್ಟಿನ ಮೇಲೆ ಹೇಳುವದಾದರೆ ಈಗಿನ ಶಿಕ್ಷಣದಲ್ಲಿ ಕಲ್ಪಿಸಿದ ಉದ್ದೇಶಗಳು ಸಾಧಿಸುವವೋ ಅಥವಾ ಇಲ್ಲೋ ಎಂಬುದನ್ನು ಅಲಕ್ಷಿಸದೆ ಕಾಲಕಾಲಕ್ಕೆ ಅವು ಸಮಾಧಾನಕರವಾಗಿವೆ ಎಂಬುದನ್ನು ಒರೆಗಲ್ಲಿನಿಂದ ಪರೀಕ್ಷಿಸಿ ಮುಂದೆ ಹೆಜ್ಜೆ ಇಟ್ಟರೆ ನಮ್ಮ ಪ್ರಾಥಮಿಕ ಶಿಕ್ಷಣವು ನಿಸ್ಸಂದೇಹವಾಗಿ ಫಲಕಾರಿಯಾಗುವದು.

ಗ್ರಂಥ ವಿಮರ್ಶೆ

ಕನ್ನಡ ಕೇಸರಿ ಸಂಗೊಳ್ಳಿ ರಾಯಣ್ಣ

(ಐತಿಹಾಸಿಕ ಸಂಗೀತ ನಾಟಕ) : ಶ್ರೀ. ಬಿ. ಕಲ್ಯಾಣ ಶರ್ಮಾ. ಕಥಾಕುಂಜ ಗ್ರಂಥ ಭಾಂಡಾರ. ಬೆಳಗಾವಿ. ಕ್ರೌನ್ ಅಷ್ಟಪತ್ರದ ೮೨ ಪುಟಗಳು. ಬೆಲೆ ೧—೫—೦.

ಇದೊಂದು ಐತಿಹಾಸಿಕ ನಾಟಕ. ಆದರೆ ಸಾಮಾನ್ಯವಾಗಿ ಇಂಥ ನಾಟಕಗಳಲ್ಲಿ ರಾಜಾಧಿರಾಜರು, ಅಥವಾ ಸಮಾಜ ಸುಧಾರಣೆಗಾಗಿ, ದೇಶೋದ್ಧಾರಕ್ಕಾಗಿ ಟೊಂಕಕಟ್ಟಿ ದುಡಿದು ಕೀರ್ತಿವೆತ್ತವರೆ ಮುಖ್ಯ ಪಾತ್ರಗಳಾಗಿ ಕಂಡು ಬರುವರು. ಇದರಲ್ಲಿ ಮಾತ್ರ ಸಾಮಾನ್ಯ ಜೀವಿ ಎನಿಸಿದ ಒಬ್ಬ ಶೂರ ಬಂಟ—ಸಂಗೊಳ್ಳಿ ರಾಯಣ್ಣ—ನ ಸಾಹಸದ ವರ್ಣನೆ ಇರುವದು. ಈ ಹೊತ್ತಗೆಯ ಓದುಗರಿಗೆ, ಅದರಲ್ಲಿಯ ನಾಟಕವನ್ನು ಪ್ರತ್ಯಕ್ಷ ನೋಡುವವರಿಗೆ ತುಂಬಾ ಹುರುದುಂಬಿಸುವ ಶೈಲಿಯಲ್ಲಿ ಬರೆಯಲಾಗಿದೆ, ಈ ಪುಸ್ತಕವನ್ನು. ನಾಟಕದಲ್ಲಿಯ ನಾಯಕನ ಹಿರಿಮೆಯು ಒಡೆದುಕಾಣುವಂತೆಯೂ, ಕರ್ನಾಟಕ ನಾಡಿನ ಜನರನ್ನು ಹುರುಪುಗೊಳಿಸುವಂತೆಯೂ, ಬರೆಯುವ ಲೆಖನ-ಶಕ್ತಿ ಇದರ ಗ್ರಂಥಕಾರರಲ್ಲಿರುವದೆಂದು ಅವರು ಕನ್ನಡಿಗರಿಂದ ಅಭಿನಂದನೆಗೆ ತುಂಬಾ ಪಾತ್ರರು. ಈ ಗ್ರಂಥರೂಪವಾಗಿ ಅವರು ಕನ್ನಡ ನಾಡುನುಡಿಗಳಿಗೆ ಸೇವೆ ಸಲ್ಲಿಸಿರುವರು. ಪ್ರತಿಯೊಂದು ಅಂಕದಲ್ಲಿಯ ನೋಟಗಳನ್ನು ಜೋಡಿಸುವದರಲ್ಲಿಯೂ ಗ್ರಂಥಕಾರರು ಕುಶಲತೆಯನ್ನು ತೋರಿಸಿರುವರು. ಪುಸ್ತಕ ರಚನೆಯಲ್ಲಿ ಉಪಯೋಗಿಸಿದ ಕಾಗದ ಮತ್ತು ಅಚ್ಚು ಮೊದಲಾದವು ಅಚ್ಚುಕಟ್ಟಾಗಿವೆ.

ಬೆಲೆ ಮಾತ್ರ ತುಸು ತಗ್ಗಬಹುದಾದರೆ, ಹೆಚ್ಚು ಸಮಾಧಾನಕರ.

ವಿಜಯ ಸಾಮ್ರಾಜ್ಯ:

ಬರೆದವರು:—**ಶ್ರೀ ರ. ಶ್ರೀ. ಮುಗಳಿ.** ಸಂಪಾದಕರು: ಶ್ರೀ. ಪ್ಯಾಟಿ ಶಾಮರಾಯರು, ವಿಜಯ ಗ್ರಂಥಮಾಲೆ, ಗಣಪತಿಬೀದಿ, ಬೆಳಗಾವಿ, ಪ್ರಕಾಶನ ವರ್ಷ, ೧೯೪೮, ಬೆಲೆ, ರೂ. ೧—೮—೦

ಇದೊಂದು ಐತಿಹಾಸಿಕ ನಾಟಕವು. ಕನ್ನಡಿಗರ ಕೀರ್ತಿಪತಾಕೆಯು ಬಲು ಮೇಲೇರಿ ಮೆರೆದ ವಿಜಯನಗರ ಸಾಮ್ರಾಜ್ಯದ ಪ್ರತಿಷ್ಠಾಪನೆಯ ವರ್ಣನೆಯೆ ಇದರಲ್ಲಿ ಇಡಕವಾಗಿರುವ ವಿಷಯ. ವಿಜಯನಗರದ ಸಾಮ್ರಾಜ್ಯವೆಂದರೆ, ಕನ್ನಡಿಗರ ಇತಿಹಾಸದಲ್ಲಿ ಅತಿ ವೈಭವೋಪೇತವಾದ ಕಾಲ. ಆದರೆ, ಮುಂದೆ ವೈಭವಶಾಲಿಯಾಗಿ ಮೆರೆಯಲಿದ್ದ ಸಾಮ್ರಾಜ್ಯ ಪ್ರತಿಷ್ಠಾಪನೆಯ ಕಾಲದಲ್ಲಿ ಕನ್ನಡಿಗರು ಪಟ್ಟ ಕಷ್ಟ ಪ್ರಯಾಸಗಳು, ಅವರು ತೋರಿದ ಎದೆಗಾರಿಕೆ, ಅವರು ಚಿಮ್ಮಿ ಒಗೆದ ಎಡರುತೊಡರುಗಳು ಇವೇ ಮೊದಲಾದವುಗಳು ಶ್ರೀ. ಮುಗಳಿ ಇವರ ಲೆಕ್ಕಣಿಕೆಯಿಂದ ಬಲು ಹೃದಯಂಗಮವಾಗಿ, ಬಲು ಸರಸಾಗಿ, ಬಲು ರಸವತ್ತಾಗಿ ಈ ಪುಸ್ತಕದಲ್ಲಿ ಚಿತ್ರಿಸಲ್ಪಟ್ಟಿವೆ. ಇತಿಹಾಸದ ತಿಳುವಳಿಕೆಗೆ ನಾಟ್ಯೀಕರಣವು ಎಷ್ಟು ಉಪಯುಕ್ತತೆಯುಳ್ಳದೆಂಬದನ್ನು ಬೇರೆಯಾಗಿ ಹೇಳಬೇಕಿಲ್ಲ. ಪುಸ್ತಕದ ಭಾಷೆಯು ತಿಳಿಯಾಗಿಯೂ, ಶೈಲಿಯು ಸುಲಭವಾಗಿಯೂ, ಮತ್ತು ರಸೋಪೇತವಾಗಿಯೂ ಇರುವವು. ಎಂದೂ ಮರೆಯಲಾಗದ ವಿಜಯನಗರ ಸಾಮ್ರಾಜ್ಯದ ಪ್ರತಿಷ್ಠಾಪನೆಯ ಚಿತ್ರವು ಯಶಸ್ವಿಯಾಗಿ ಒಡಮೂಡಿರುವದು ಇದರಲ್ಲಿ. ಪುಸ್ತಕದ ಮುದ್ರಣ ಮತ್ತು ಸಾಮಾನ್ಯ ರಚನೆಗಳು ಅಂದಚಂದ—ಯುಕ್ತವಾಗಿರುವವು. ಈ ಪುಸ್ತಕವು ಕನ್ನಡ ನಾಡು-ನುಡಿಗಳ ಅಭಿಮಾನಿಗಳೆಲ್ಲರೂ ಸಂಗ್ರಹಿಸಿಡಲು ಯೋಗ್ಯವೆಂದು ನನ್ನ ಅಭಿಪ್ರಾಯ.

ರ. ಕೃ. ಲಕ್ಕುಂಡಿ

ಸ್ವಾತಂತ್ರ್ಯೋತ್ಸವ (೧೫-೯-೪೮)

ಬೆಳಗಾವಿಯ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಕಚೇರಿಯ ಅಧಿಕಾರಿಗಳು ನಗರದ ಬಾಲಕ ಬಾಲಿಕೆಯರು ಸುಶ್ರಾವ್ಯಗೀತಗಳೊಂದಿಗೆ ಹಾಡುತ್ತಲಿರುವವಾಗ ರಾಷ್ಟ್ರ ಧ್ವಜವನ್ನು ಏರಿಸಿ, ಕಚೇರಿಯ ಮುಂಭಾಗದಲ್ಲಿ ವೃಕ್ಷಾರೋಪಣ ಮಾಡಿದರು ಮತ್ತು ನೆರೆದ ಶಿಕ್ಷಕ-ಶಿಕ್ಷಿಕೆಯರಿಗೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ರಾಷ್ಟ್ರಧ್ವಜದ ಮನ್ನಣೆ ಕುರಿತು ಚಿಕ್ಕ, ಚೊಕ್ಕ ಭಾಷಣ ಮಾಡಿದರು.

ಗೋಟಿಗುಳಿ ಮತ್ತು ಬಾಳ್ನಿ (ಕಾರವಾರ) ಶಾಲೆಗಳಲ್ಲಿ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಶ್ರೀ. ಖೋತ ಇವರು ದಯಪಾಲಿಸಿದ ಮಹಾತ್ಮಾಗಾಂಧಿಯವರು ಭವ್ಯ ಛಾಯಾ ಚಿತ್ರದ ಅನಾವರಣ ಸಮಾರಂಭವೂ ಆಯಿತು. ಇತರ ಶೈಕ್ಷಣಿಕ ಚಟುವಟಿಕೆಗಳೂ ನಡೆದವು.

ಮಿಶ್ರಿಕೋಟಿಯಲ್ಲಿ ಸ್ವಾತಂತ್ರ್ಯೋತ್ಸವು ಶ್ರೀ. ಶಿ. ಶಿ ಮಗದುಮ್ ಅ. ದೆ. ಎ. ಇ. ಅವರ ಹಿರಿಯತನದಲ್ಲಿ ಶಾಲೆಯ ಶಿಕ್ಷಕ, ಶಿಕ್ಷಿಕೆ, ಬಾಲಕ, ಬಾಲಕಿಯರಿಂದ ಅತ್ಯುತ್ತಮವಾಗಿ ನೆರವೇರಿಸಲ್ಪಟ್ಟಿತು. ಅನೇಕ ಮಹನೀಯರ ಸ್ಫೂರ್ತಿದಾಯಕ ಭಾಷಣಗಳಾದವು.

ಮುಂಬಯಿ ಸರಕಾರದ ಕನ್ನಡ ಪಠ್ಯಪುಸ್ತಕ ಕಮೀಟಿ

ಕ್ರ.ನಂ.	ಪುಸ್ತಕದ ಹೆಸರು	ಲೇಖಕರು
೧.	ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ	ಶ್ರೀ. ಎಂ. ಸಿಂ. ಪೂಜಾರ
೨.	ನಮ್ಮ ಪ್ರಪಂಚ	ಶ್ರೀ. ವ್ಹಿ. ಕೆ. ಧುಮ್ಮವಾಡ
೩.	ನನ್ನ ಆರಂಭದ ಜೀವನ	—
೪.	ಭರತಖಂಡದ ಜೀವಜ್ಯೋತಿಗಳು	ಶ್ರೀ. ಹೊಸಕೆರೆ ಚಿದಂಬರಯ್ಯನವರು
೫.	ಕನ್ನಡ ಕಾವ್ಯ ಭಾಂಡಾರ	—
೬.	ತೋರಣ (೨) ಕಾವ್ಯಮಾಲೆ	—
೭.	ಪೌರನೀತಿಮಾಲೆ— ಭಾಗ ೫	—
೮.	ನೂತನ ಗಣಿತ	ಶ್ರೀ. ಕೆ. ಕೆ. ಗಲಗಲಿ
೯.	ಮುತ್ತಿನ ಸರ	—

ಧಾರವಾಡ
೨೦—೮—೧೯೪೮

(ಧಾರವಾಡ) ಅವರಿಂದ ಮುಜೂರಾದ ಪುಸ್ತಕಗಳು.

ಪ್ರಕಾಶಕರು	ಯಾವುದಕ್ಕೆ ಮಂಜೂರಾಗಿದೆ.	ಬೆಲೆ
ಶ್ರೀ. ಎಂ. ಪಿ. ಪೂಜಾರಿ, ಕನ್ನಡ ಪಂಡಿತ, ಹುಬ್ಬಳ್ಳಿ ರೋಡ, ಧಾರವಾಡ.	ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳಿಗೆ, ಹೈಸ್ಕೂಲುಗಳು ೪–೫ ನೆಯ ಇಯತ್ತೆಗಳಿಗೆ ಮತ್ತು ಟ್ರೇನಿಂಗ ಕಾಲೇಜುಗಳಿಗೆ ಪಠ್ಯ	?
ಭಾರತ ಬುಕ್‌ಡಿಪೊ, ಗಾಂಧಿಚೌಕ, ಧಾರವಾಡ.	ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೆ ಭೂಗೋಲಕ್ಕಾಗಿ ಪಠ್ಯ— ಬೆಲೆಯಲ್ಲಿಲ ಅಣೆ ಕಡಿಮೆ ಮಾಡುವ ಕರಾರಿನ ಮೇರೆಗೆ. ಆದರೆ, ಎ. ಇನಸ್ಪೆಕ್ಟರರ ೧೪–೮–೪೪ ರ ಪತ್ರದ ಪ್ರಕಾರ ನಾಮಂಜೂರು ಮಾಡಲ್ಪಟ್ಟಿದೆ.	೧—೮—೦
ಅಪಭೂತ ಗ್ರಂಥಾಲಯ, ಹುಬ್ಬಳ್ಳಿ.	ಹೈಸ್ಕೂಲುಗಳ ಮೇಲಿನ ವರ್ಗಗಳಿಗೆ ಮತ್ತು ಟ್ರೇನಿಂಗ ಕಾಲೇಜುಗಳಿಗೆ ಪುರವಣಿ ಪಠ್ಯ. ಹೊಸ ಪುಸ್ತಕಗಳ ಬೆಲೆಯನ್ನು ೧ ರೂಪಾಯಿಗೆ ತಗ್ಗಿಸಬೇಕು.	೧—೮—೦
ಕರ್ನಾಟಕ ಶಿಕ್ಷಣ ಸಮಿತಿ, ಹುಬ್ಬಳ್ಳಿ.	ಹೈಸ್ಕೂಲು ಮತ್ತು ಟ್ರೇನಿಂಗ ಕಾಲೇಜುಗಳಿಗೆ ಪಠ್ಯ— ಬೆಲೆಯನ್ನು ೨ ರೂಪಾಯಿಗೆ ಇಳಿಸಿದರೆ.	೨—೮—೦
ಸಂಪಾದಕರು, ಸಂಚಾಲಕರು ಭಾರತ ಪಬ್ಲಿಶಿಂಗ ಹೌಸ, ೧೦, ಬಿಸ್ಮಿಲ್ಲಾ ಬಿಲ್ಡಿಂಗ ಮುಂಬಯಿ ನಂ. ೪	ಹೈಸ್ಕೂಲುಗಳ ೬ನೆಯ ವರ್ಗಕ್ಕೆ ಮತ್ತು ಟ್ರೇನಿಂಗ ಸಂಸ್ಥೆಗಳಿಗೆ ಪಠ್ಯ.	೧—೦—೦
ಕನ್ನಡ ಪುಸ್ತಕಾಲಯ, ಖಡೇಬಝಾರ, ಬೆಳಗಾವಿ.	ಹೈಸ್ಕೂಲುಗಳ ೫ನೆಯ ವರ್ಗಕ್ಕೆ ಮತ್ತು ಟ್ರೇನಿಂಗ ಸಂಸ್ಥೆಗಳಿಗೆ ಪಠ್ಯ.	೦–೧೨—೦
ರಾಮಾಶ್ರಯ ಬುಕ್‌ಡಿಪೊ, ಧಾರವಾಡ.	ಪ್ರಾಥಮಿಕ ೫ನೆಯ ಇಯತ್ತೆಗೆ ಪಠ್ಯ-ದೋಷಗಳನ್ನು ಹೆಗೆದು ಹಾಕಿದಲ್ಲಿ.	೦–೧೦—೦
ಶ್ರೀ. ಎಚ್. ಬಿ. ನವಲೂರ, ಧಾರವಾಡ.	ಪ್ರಾಥಮಿಕ ಶಾಲೆಗಳ ೫ನೆಯ ವರ್ಗಕ್ಕೆ ಪಠ್ಯ— ಬೆಲೆಯನ್ನು ಒಂದು ರೂಪಾಯಿ ಮಾಡಿದಲ್ಲಿ.	೧—೪—೦
ಬೆಳಗಾವಿ ಬುಕ್‌ಡಿಪೊ, ಖಡೇಬಝಾರ, ಬೆಳಗಾವಿ.	ಹೈಸ್ಕೂಲುಗಳ ೪ರಿಂದ ೬ನೆಯ ಇಯತ್ತೆಯವರೆಗೆ ಮತ್ತು ಟ್ರೇನಿಂಗ ಕಾಲೇಜುಗಳಿಗೆ ಪಠ್ಯ.	೧—೪—೦

(ಸಹಿ)— ಬಿ. ಯಂ. ಶಿಂತ್ರಿ,

ದ. ಭಾ. ಎಜ್ಯುಕೇಶನಲ್ ಇನಸ್ಪೆಕ್ಟರರ ಪರವಾಗಿ.

ಗ್ರಂಥ ವಿಮರ್ಶೆ

ಸೊಗಸಿನ ಕಥೆ; ಭಾಗ ೨:

ಬರೆದವರು:— **ಸಾನೆ ಗುರುಜಿ.** ಪ್ರಕಾಶಕರು:— **ಅನಂತ ಸಾಠೆ,** ಕಿತಾಬ ಮಿನಾರ ಮಾಳಮರಡಿ, ಧಾರವಾಡ ಸಂಪಾದಕರು: ಶ್ರೀ.ಶಂಕರ ಕುರ್ತಕೋಟಿ. ಬೆಲೆ ೧-೦-೦ ರೂ.

ಇದೊಂದು ಅಂದವಾದ ಆರು ಕತೆಗಳ ಸಂಗ್ರಹ. ಒಂದೊಂದು ಬೇರೆ ಬೇರೆ ಸನ್ನಿವೇಶ (ಸಂದರ್ಭ)ಗಳಿಂದ ಆಯ್ದುದಾಗಿದೆ. ಆಯ್ದುದನ್ನು ತಮ್ಮದೇ ಆದ ಭಾಷೆ (ಮರಾಠಿ)ಯಲ್ಲಿ ಮತ್ತು ತಮ್ಮದೇ ಆದ ಸೊಗಸಾದ ಶೈಲಿಯಲ್ಲಿ ರೂಪಗೊಳಿಸಿದವರು ಸಾನೆ ಗುರುಜ ಅವರು. ನಾಡು-ನುಡಿಗಳ ಸೇವೆಗಾಗಿ ವಿವಿಧಕ್ಷೇತ್ರಗಳಲ್ಲಿ ಮಹಾರಾಷ್ಟ್ರದಲ್ಲಿ ಹಗಲಿರುಳೆನ್ನದೆ ಅವಿರತ ದುಡಿಯುತ್ತಿರುವ ಸುಪ್ರಸಿದ್ಧ ವ್ಯಕ್ತಿಗಳಲ್ಲಿ ಒಬ್ಬರು ಸಾನೆ ಗುರುಜಿ ಅವರು. ಮಹಾರಾಷ್ಟ್ರದಲ್ಲಿಯಂತೂ ಅವರ ಹೆಸರು ಮನೆಮನೆಗೂ ಕೇಳಿಬರುತ್ತಿರುವದು. ಮರಾಠಿ ಮಕ್ಕಳು ಈ ಅವರ ಕತೆಗಳನ್ನು ಓದಿ ತಣಿಯುತ್ತಿರುವರು. ಅವುಗಳನ್ನೆ ಕನ್ನಡ ಕಂದರ ಕೈಯಲ್ಲಿ ಕೊಡುಮಾಡಿದ ಶ್ರೇಯವು ಈ (ಕನ್ನಡ) ಹೊತ್ತಗೆಯನ್ನು ತಯಾರಿಸಿದ ಅನುವಾದಕ, ಸಂಪಾದಕ ಮತ್ತು ಪ್ರಕಾಶಕರಿಗೆ ಸಲ್ಲುವದು. ಭಾಷಾಶೈಲಿಯು ಸುಗಮವೂ ಸರಾಗವೂ ಇದೆ.

ಅಂದದ ಆಯ್ಕೆ, ಚಿಂದದ ಶೈಲಿ, ಮೋಹಕ ಮುದ್ರಣ ಮೊದಲಾದವುಗಳಿಂದ ಯುಕ್ತವಾದ ಈ ಪುಸ್ತಕವು ಕನ್ನಡ ಕಂದರಿಗೆ ಸೊಗಸನ್ನುಂಟುಮಾಡುವದರಲ್ಲಿ ಏನೂ ಸಂದೇಹ ವಿಲ್ಲ.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ಶೈಕ್ಷಣಿಕ ಸುದ್ದಿ ಸಂಗ್ರಹ

ಬಾಸೆಲ್ ಮಿಶನ್ ಟ್ರೇನಿಂಗ ಕಾಲೇಜ, ಧಾರವಾಡ

ಬಾಸೆಲ್ ಮಿಶನ್ ಟ್ರೇನಿಂಗ ಕಾಲೇಜದ, ಶಿಕ್ಷಕ ವಿದ್ಯಾರ್ಥಿಗಳು ವಸತಿಗೃಹದ ಸ್ವಚ್ಛತೆ, ಡಿ. ಡಿ. ಟಿ. ಯ ಉಪಯೋಗಸುವಿಕೆ, ಬೋರ್ಡಿಂಗದಲ್ಲಿ ಕಾಳುಕಡಿ ಹಸನಮಾಡುವದು, ಕಾಯಿಪಲ್ಯ ಸಿದ್ಧಗೊಳಿಸುವುದು ಇವೇ ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದಾರಲ್ಲದೆ, ಗಾಂಧಿಸ್ಮಾರಕ ನಿಧಿಗೆ ಸಂಗ್ರಹಕ್ಕೆ, ಪ್ರೌಢ ಶಿಕ್ಷಣಕ್ಕೆ ನೆರವಾಗುತ್ತಿದ್ದಾರೆ. ಇಂತು ಸಾಮಾಜಿಕ ಜೀವನದ ಕಾರ್ಯಗಳು ನಡೆದಿವೆ.

ಹುಬ್ಬಳ್ಳಿಯಲ್ಲಿ ನಗರ ಪ್ರಾಗತಿಕ ಪ್ರಾಥಮಿಕ ಶಿಕ್ಷಕರ ಸಂಘದ ಪರವಾಗಿ ೮-೫-೪೮ನೆಯ ದಿನ ಶಿಕ್ಷಣ ಸಮ್ಮೇಲನವು ಶ್ರೀ. ಸಿ. ಎಸ್. ಕರ್ಬಿ. ಬಿ. ಎ; ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಹುಬ್ಬಳ್ಳಿ ನಗರ ಸಭೆಯ ಪ್ರಾಥಮಿಕ ಶಾಲೆಗಳ ಶಿಕ್ಷಕ ಸಮ್ಮೇಲನವು ೨೦-೭-೪೮ನೆಯ ದಿನ ದ. ಭಾ. ವಿದ್ಯಾಧಿಕಾರಿಗಳಾದ ಶ್ರೀ. ಸಾನೆ ಅವರ ಅಧ್ಯಕ್ಷತೆಯಲ್ಲಿ ಅತ್ಯುತ್ತಮವಾಗಿ ನೆರವೇರಿತು. ಅನೇಕ ಶೈಕ್ಷಣಿಕ ಚಟುವಟಿಕೆಗಳ ಪ್ರದರ್ಶನವೂ ಏರ್ಪಟ್ಟಿತ್ತು. ಅನೇಕ ವಿದ್ಯಾರ್ಥಿಗಳು ಸಮ್ಮೇಲನಕ್ಕೆ ಆಗಮಿಸಿದ್ದರು.

ಧಾರವಾಡದ ಗಂಡುಮಕ್ಕಳ ೨ನೆಯ ನಂಬರ ಶಾಲೆಗೆ ಆಕಳವಾಡಿ ಬುಕ್ ಡಿಪೋದ ಒಡೆಯರಾದ ಶ್ರೀ. ರಾಮಣ್ಣ ಆಕಳವಾಡಿ ಅವರು ಸಂದರ್ಶನವಿತ್ತು ಬಾಲಕರಿಗೆ ಮಿಠಾಯಿ ಹಂಚಿದರು.

ಮುನವಳ್ಳಿ (ಸವದತ್ತಿ)ಯ ಶಾಲೆಯ ಶಿಕ್ಷಕರಾದ ಶ್ರೀ. ಖೋದಾನಪೂರ ಅವರಿಗೆ ಕಾರವಾರ ಜಿಲ್ಹೆಗೆ ಏ. ಡಿ. ಇ. ಆಯ್. ಎಂದು ವರ್ಗವಾದ್ದರಿಂದ ಬೀಳ್ಕೊಡುವ ಸಮಾರಂಭವು ಶ್ರೀ. ವೆಂಕರಡ್ಡಿ ಹೂಲಿ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ದಡೂರ (ಅಥಣಿ)ದಲ್ಲಿ ಗಂಡುಮಕ್ಕಳ ಶಾಲೆಯಲ್ಲಿ ೮-೮-೪೮ನೆಯ ದಿನ ಸರಸ್ವತಿ ಪೂಜೆಯನ್ನು ಆಚರಿಸಲಾಯಿತು. ಶ್ರೀ. ಅಣ್ಣಾಸಾಹೇಬ ನಾಯಿಕ ಮತ್ತು ಶ್ರೀ. ರಾಯಪ್ಪ ಮದಭಾವಿ ಅವರು ೧೫ ರೂಪಾಯಿಗಳನ್ನು 'ಒಕ್ಕಲತನದ ಅಭ್ಯುದಯ' ಎಂಬ ನಾಟಕದ ಅಭಿನಯದ ಕಾಲಕ್ಕೆ ಮೆಚ್ಚುಗೆಯಾಗಿ ಕೊಟ್ಟರು.

ಹಿಡಕಲ್ (ಅಥಣಿ) ಶಾಲೆಯ ವಿದ್ಯಾರ್ಥಿಗಳು ಮುಲ್ಕಿ ಪರೀಕ್ಷೆಯಲ್ಲಿ ಹೆಚ್ಚು ಗುಣ ಪಡೆದು ಪಾಸಾಗಿದ್ದಾರೆ. ಶ್ರೀ. ಕೊಕನೂರ ಹಾಗೂ ಶ್ರೀ. ಎಂ. ಬಿ. ನಾವಲಗಿ ಗುರುಜಿಯವರು ಅಭಿನಂದನೀಯರು.

ಕೊಡಗಾನೂರ ಶಾಲೆಯ ವಾಚನಾಲಯವು ಪ್ರಗತಿ ಹೊಂದುತ್ತಲಿದೆ.

ತ್ವರೆಮಾಡಿರಿ

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗಾಗಿ ಹೊಸ ಪುಸ್ತಕಗಳು

ಶ್ರೀ. ಚಿ. ಶ್ರೀ. ಕುಲಕರ್ಣಿಯವರು ತಮ್ಮ ಹದಿನೈದು ವರುಷದ ಅನುಭವದಿಂದ ಹೊಸ ಅಭ್ಯಾಸ ಪತ್ರಿಕೆಯನ್ನು ಅನುಸರಿಸಿ ಇದೀಗ ತಯಾರಿಸಿದ್ದಾರೆ. ಕಾರಣ ಅವರ ಪುಸ್ತಕಗಳನ್ನೇ ಉಪಯೋಗಿಸಿರಿ.

ಸಚಿತ್ರ ಸಾಮಾನ್ಯ ವಿಜ್ಞಾನ

೧ನೇ ಇಯತ್ತೆಯಿಂದ ೫ನೇ ಇಯತ್ತೆಯ ವರೆಗೆ ೫ ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿವೆ. ಬೆಲೆ ೫ ಕಡಿಮೆ.

ಸಚಿತ್ರ ಕಥೆಯ ಪುಸ್ತಕಗಳು

ಒಂದನೇ ತರಗತಿ ಕಥೆ	೦—೩—೦
ಎರಡನೇ ತರಗತಿ ಕಥೆ	೦—೪—೦
ಮೂರನೇ ತರಗತಿ ಕಥೆ	೦—೫—೦
ಧ್ರುವ	೦—೨—೦
ಪ್ರಲ್ಹಾದ	೦—೨—೦
ಗಜೇಂದ್ರ ಮೋಕ್ಷ	೦—೨—೬
ಕುಮಾರ ಕಿಟ್ಟಿಣ್ಣ	೦—೩—೦
ಮಹಾತ್ಮಾಗಾಂಧಿ	೦—೪—೦
ಜವಾಹರಲಾಲ ನೆಹರು	೦—೪—೦
ಸರದಾರ ಚರಿತ್ರೆ	೦—೪—೦
ರಾಣಿಲಕ್ಷ್ಮಿ	೦—೪—೦
ಕುಮಾರ ರಾಮಣ್ಣ	೦—೬—೦
ರಾಮಕೃಷ್ಣ ಸೀತೆಯ ಕಥೆ	೦—೬—೦
ಭಕ್ತ ಹನುಮಾನ	೦—೬—೦
ಶ್ರೀಕೃಷ್ಣ ಚರಿತ್ರೆ	೦—೮—೦
ಬದರೀ ಯಾತ್ರೆ	೦—೮—೦
ಪುರಂದರದಾಸರ ಪರಿಚಯ	೦—೮—೦
ಶನಿಮಹಾತ್ಮೆ	೦—೨—೦
೩ನೇ ಇಯತ್ತೆಯ ಇತಿಹಾಸ	೦—೬—೦

ಸಚಿತ್ರ ಪೌರನೀತಿ

೧ನೇ ಇಯತ್ತೆಯಿಂದ ೭ನೇ ಇಯತ್ತೆಯ ವರೆಗೆ ೭ ಪುಸ್ತಕಗಳು. ಭಾಲ ಭಾಷೆಯಲ್ಲಿ ಬರೆಯಲ್ಪಟ್ಟಿವೆ.

ಗಣಿತ ಸಂಗ್ರಹ	೦—೪—೦
ಪ್ರಬಂಧ ಬರೆಹ	೧—೦—೦
ಇತಿಹಾಸ ಪ್ರಶ್ನೋತ್ತರಮಾಲೆ	೧—೦—೦
ಭೂಗೋಲ ಪ್ರಶ್ನೋತ್ತರಮಾಲೆ	೧—೦—೦
ಭೂಮಿತಿ	೧—೦—೦
ಜಮಾಖರ್ಚು ,,	೧—೦—೦
ವಿಜ್ಞಾನ ,,	೧—೦—೦
ಭಾಷಾಭ್ಯಾಸ ,,	೧—೦—೦
ಕೈಪಿಡಿ ,,	೧—೦—೦
ಹೈಸ್ಕೂಲ ಮಾರ್ಗದರ್ಶಿಕೆ	೧—೮—೦
ಮಿಡಲಸ್ಕೂಲ	೧—೦—೦

ಪರೀಕ್ಷೆಯಿಂದ ಮುಕ್ತರಾಗಲು ಇವನ್ನು ಅವಶ್ಯವಾಗಿ ಅಭ್ಯಾಸಿಸಬೇಕು.

ಅಂಗಸಾಧನವೆಂಬ ಸಂಪೂರ್ಣ ಡ್ರಿಲ್ ಆಟಗಳ ಪುಸ್ತಕ ಸಚಿತ್ರ ಬೆಲೆ ೧೨ ಆಣೆ

ಎಲ್ಲ ಪುಸ್ತಕಗಳು ಲೋಕಾಗಿಯೂ, ಚಿಲ್ಲರೆಯಾಗಿಯೂ ಸಿಗುವ ಒಂದೇ ಸ್ಥಳ:

ಕೆ. ಎಸ್. ಕುಲಕರ್ಣಿ, ಬುಕ್ ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ ರಚಿಸಲ್ಪಟ್ಟು

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯ ೬ ಪುಸ್ತಕಗಳು: ೧ನೆಯ ಇಯತ್ತೆಯಿಂದ ೬ನೆಯ ಇಯತ್ತೆಯ ವರೆಗೆ ಪುಸ್ತಕಗಳಲ್ಲಿಯ ವಿಷಯವು ಹೊಸ ಅಭ್ಯಾಸ ಪತ್ರಿಕೆಯಂತೆ ಅಚ್ಚಾಗಿವೆ. ಸಚಿತ್ರವಾಗಿವೆ.

ಸಚಿತ್ರ ಪೌರನೀತಿ ಮಾಲೆಯ ೩ ಪುಸ್ತಕಗಳು: (೧ನೆಯ ಇಯತ್ತೆಯಿಂದ ೩ನೆಯ ಇಯತ್ತೆಯ ವರೆಗೆ) ಪುಸ್ತಕಗಳಲ್ಲಿಯ ವಿಷಯವು ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿದೆ. ಹಳ್ಳಿಗರ ಪಟ್ಟಣಿಗರ ಜೀವನಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಪುಸ್ತಕಗಳ ಬಾಹ್ಯಾಂಗರಚನೆಯೂ ಸೊಗಸಾಗಿದೆ.

ಭೌಗೋಲಿಕ ನಕಾಶ ಪುಸ್ತಕ ಮಾಲೆಯ ೬ ಪುಸ್ತಕಗಳು: (೨ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ) ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟ ಭೂಗೋಲ ವಿಷಯಕ ಪುಸ್ತಕಗಳು ಸಚಿತ್ರ) ಪುಸ್ತಕಗಳ ಬಾಹ್ಯಾಂಗ ರಚನೆಯು ಸೊಗಸಾಗಿದೆ.

ಭೂಮಂಡಲ ಪರಿಚಯ ೨ ಪುಸ್ತಕಗಳು: (ಭಾಗ ೩, ೬ನೆಯ ಇಯತ್ತೆಗೆ, ಭಾಗ ೪ ೭ನೆಯ ಇಯತ್ತೆಗೆ) ಪುಸ್ತಕಗಳಲ್ಲಿಯ ವಿಷಯವು ಇತ್ತೀಚಿನ ಹೊಸ ಅಭ್ಯಾಸ ಪತ್ರಿಕೆಯಂತೆ ಸುಲಭವಾಗಿ ಬೋಧಿಸಲ್ಪಟ್ಟಿದೆ. ಪುಸ್ತಕಗಳ ಬಾಹ್ಯಾಂಗ ರಚನೆಯೂ ಸೊಗಸಾಗಿದೆ.

ಧಾರವಾಡ ಜಿಲ್ಲೆಯ ಭೂಗೋಲ: (೩ನೆಯ ಇಯತ್ತೆಗೆ) ಪಂಚಾಳರ ಕೃತಿ ಇನಪ್ರಿಯವಾದ ಭೂಗೋಲವನ್ನು ಹೊಸ ಅಭ್ಯಾಸ ಪತ್ರಿಕೆಯಂತೆ ತಿದ್ದಿ ವಿಷಯಗಳನ್ನು ವಿವೇಚಿಸಲಾಗಿದೆ. ಅಂದದಾದ ಚಿತ್ರಗಳು ನಕಾಶೆಗಳು ತುಂಬಿವೆ. ಪುಸ್ತಕ ಬಾಹ್ಯಾಂಗ ರಚನೆಯೂ ಸೊಗಸಾಗಿದೆ.

ಒಕ್ಕಲುತನದ ಪುಸ್ತಕಗಳು: (ಆಧುನಿಕ ಕೃಷಿ ೧ನೆಯ ಭಾಗ ೫ನೆಯ ಇಯತ್ತೆಗೆ ೨ನೆಯ ಭಾಗ ೬ನೆಯ ಇಯತ್ತೆಗೆ) ಈ ಪುಸ್ತಕಗಳಲ್ಲಿ ಒಕ್ಕಲುತನದ ಶಾಲೆಗಳಲ್ಲಿ ಹೊಸ ಅಭ್ಯಾಸ ಪ್ರತಿಕೆಗೆ ಅನುಸಾರವಾಗಿ ವಿಷಯ ವಿವೇಚನೆಯುಂಟು. ಪುಸ್ತಕಗಳ ಬಾಹ್ಯಾಂಗ ರಚನೆಯೂ ಸೊಗಸಾಗಿದೆ.

ಭಾರತೀಯ ರಾಜ್ಯತಂತ್ರ: ಹಿಂದುಸ್ಥಾನದ ಶಾಸನ ಪದ್ಧತಿಯು ಪ್ರಸಾದಿಸಿದ ಬದಲಾವಣೆಯಯದುದನ್ನು ಸುಬೋಧ ಪಾಗಿ ವರ್ಣಿಸಲಾಗಿದೆ.

ಇದಲ್ಲದೆ ಸಮೃದ್ಧಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ, ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ ಪುಸ್ತಕಗಳೂ ದೊರೆಯುತ್ತವೆ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ
ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತೆಗಾಗಿ)	.....	ಬೆಲೆ ೮ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತೆಗಾಗಿ)	.....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತೆಗಾಗಿ)	.....	,, ೧ ರೂ ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತೆಗಾಗಿ)	.....	,, ೧ ರೂ. ೮ ಆ.

ಎಲ್ಲ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ಪ್ರಥಮ ಸ್ವಾತಂತ್ರ್ಯೋತ್ಸವದ ಚಟುವಟಿಕೆಗಳು

(ಗಂಡುಮಕ್ಕಳ ಸರಕಾರಿ ಪ್ರೌಢಶಾಲೆ ಕಾಲೇಜು ಧಾರವಾಡ)



ಹೊಸ ಪುಸ್ತಕ ಪ್ರತಿಗಳು ಸ್ವಲ್ಪ ತ್ವರೆಮಾಡಿರಿ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಕೈಪಿಡಿ

ಇದರಲ್ಲಿ ಪರೀಕ್ಷೆಗೆ ಒದಬೇಕಾದ ವಿಷಯವೆಷ್ಟು, ಅದರಲ್ಲಿ ಪ್ರಶ್ನೆಗಳನ್ನೂ ಹೇಗೆ ಕೇಳುವರು, ಅಂತೆ ಉತ್ತರಗಳನ್ನೂ ಹೇಗೆ ಬರೆಯಬೇಕು ಎಂಬದರ ಸರಿಯಾದ ಜ್ಞಾನ ಮಾಡಿಕೊಡುವ ಅತ್ಯುಪಯೋಗಿ ಪುಸ್ತಕ. ಇದೀಗ ಹೊರಬಿದ್ದಿದೆ. ಬೇಗನೆ ಬರೆಯಿರಿ. ಬೆಲೆ ೧೨ ಆಣೆ.

ಕೆ. ಎಸ್. ಕುಲಕರ್ಣಿ, ಬುಕ್‌ಡಿಪೊ
ಸ್ಟೇಶನ ರೋಡ, ಹುಬ್ಬಳ್ಳಿ.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ!!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯಗಳಿಗೆ ಶ್ರೇಷ್ಠ ಸಾಹಿತ್ಯ ಬೇಕಲ್ಲವೇ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಗ ಬೇಕಾದಲ್ಲಿ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯಬೇಕಾಗಿ ಬಿನ್ನಹ.

ಶ್ರೀ. ಪಾವಟೆ ಚೆನ್ನಪ್ಪನವರು ಪ್ರ್ಯಾಕ್ಟಿಸಿಂಗ ಸ್ಕೂಲ ಶಿಕ್ಷಕರು ಧಾರವಾಡ ಅವರಿಂದ ರಚಿತವಾದ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ	೦-೫-೦
೨) ರಾಂತಿಸಮರ	೦-೪-೦
೩) ಕಿರಣ (ಗದ್ಯಸಂಗ್ರಹ)	೧-೮-೦
೪) ವಿವೇಕ (ಏಕಾಂಕ ನಾಟಕ)	೦-೪-೦

ನಿರಕ್ಷರ ಪ್ರೌಢರ ಸಲುವಾಗಿ ಹೊತ್ತಿಗೆಗಳು

೫) ಅಶಿಕ್ಷಿತರ ಗೋಳು (ಏಕಾಂಕ ನಾಟಕ)	೦-೩-೦

(ಇದು ಸರಕಾರದಿಂದ ಅಂಗೀಕೃತ ಪುಸ್ತಕವೆಂದು ನಿರ್ಣಯಿಸಲಾಗಿದೆ.)

೬) ವಯಸ್ಕರ ಪದ್ಯಾವಲಿ	೦-೮-೦

ಅಚ್ಚಾಗಲಿರುವ ಪುಸ್ತಕಗಳು

೭) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ
ಸವಿಸ ಚೆನ್ನಪ್ಪ ಪಾವಟೆ
ಜಯನಿಲಯ ಪ್ರಕಾಶನ ಸಮಿತಿ, ಲೈನಬಜಾರ
ಧಾರವಾಡ

ನೂತನ ಗಣಿತ

ಲೇಖಕರು:-ಶ್ರೀ. ಕೆ. ಕೆ. ಗಲಗಲಿ.

ಇದರಲ್ಲಿ ಗಣಿತ ವಿಷಯವಲ್ಲದೆ ಜನೆಯ ಇಯತ್ತೆಯ ಭೂಮಿತಿ ಮತ್ತು ದೇಶಿ ಇಮಾಖಚಿನ ವಿಷಯಗಳೂ ಇವೆ. ಬೆಲೆ ೧—೪—೦ ಇದಲ್ಲದೆ ನಮ್ಮಲ್ಲಿ ಶಾಲೆ ಕಾಲೇಜುಗಳಿಗೆ ಬೇಕಾಗುವ ಎಲ್ಲ ತರದ ಪುಸ್ತಕಗಳೂ ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆಳಗಿನ ಪತ್ತಿಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ
ವಿಜಯರೋಡ, ಧಾರವಾಡ

Printed by: D. T. Kayasth, at Ravindra Press, U. B. Hill, (House No 3538) Dharwar, Edited and Published by R. K. Lakkundi Principal, T. C. M., B. V, Desai Principal B. T. C., Y. D. Nadakarni Lady Superintendent T C W Dharwar jointly, at the Kannada prathamik Shikshan Office Govt. Training College for Men

ಕನ್ನಡ ಪ್ರಾಥಮಿಕ ಶಿಕ್ಷಣ

ಧಾನ ಸಂಪಾದಕರು :

.ಕೃ. ಲಕ್ಕುಂಡಿ

★

ಸಪ್ಟಂಬರ

೧೯೪೮

★

ವಾರ್ಷಿಕ ಚಂದಾ

೪ ರೂ.

ಬಿಡಿಸಂಚಿಕೆ

೬ ಆಣೆ



ರೈವರಾಜಾಡವನ್ನು ಹಣ್ಣಿಗೆ ತಂದ

ದಕ್ಷಿಣವಿಭಾಗದ ಮುಖ್ಯ ಸೇನಾಪತಿ

ಮಹಾರಾಜಾ ರಾಜೇಂದ್ರಸಿಂಹಜಿಯವರು

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳಿ

ಸಂಚಾಲಕರು: ಶ್ರೀ. ಎ. ಎಸ್. ಸಾನೆ., ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ.

ಸಂಪಾದಕರು

ಶ್ರೀ. ರಂ. ಕೃ. ಲಕ್ಕುಂಡಿ. ಶ್ರೀ. ಆರ್. ವ್ಹಿ. ದೇಸಾಯಿ. ಮಿಸ್. ವಾಯ್. ಡಿ. ನಾಡಕರ್ಣಿ.

ಸಪ್ಟಂಬರ] ಪರಿವಿಡಿ [೧೯೪೮

★

೧. ಸುದ್ದಿಗಳು	....	೨
೨. ಸಂಪಾದಕೀಯ	....	೩
೩. ಕಂಬನಿ	....	೪, ೮
೪. ಮಕ್ಕಳಿಗೆ ಇತಿಹಾಸದ ಪರಿಚಯವನ್ನು ಮಾಡಿ ಕೊಡುವದು	ಶ್ರೀ. ಕೆ. ಜಿ. ಸೈಯದ್ದೈನ	೫
೫. ಆರ್ಯರ ಮೂಲಸ್ಥಾನ	ಶ್ರೀ. ಎಚ್. ಎಸ್. ದೂದಿಹಳ್ಳಿ	೯
೬. ಮೂಲ ಶಿಕ್ಷಣದ ಮಹತ್ವ	ಶ್ರೀ. ಸ್ವಾ. ಭಿ. ಕದರಮಂಡಲಗಿ	೧೨
೭. ಪ್ರಾಥಮಿಕ ಶಿಕ್ಷಕರು (ಮುಂಬಯಿ ಸರಕಾರದ ಕಾಯಿದೆಗಳು)	....	೧೫
೮. ಶಿಕ್ಷಣ ಸಂಸ್ಥೆಗಳಲ್ಲಿ ಜಾತೀಯತೆ	....	೧೭
೯. ಭಾರತ ಸರಕಾರದ ಸಾಮಾಜಿಕ ಶಿಕ್ಷಣ ರೂಪರೇಷೆಗಳು	ಶ್ರೀ. ಅ. ಶಿ. ಭಟ್ಟ	೧೯
೧೦. ಮ. ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ	ಶ್ರೀ. ವಾಮನ ಥಿಟೆ.	೨೨
೧೧. ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣದ ಯೋಜನೆ	ಶ್ರೀ ಆರ್. ಎಲ್. ಪಾಟೀಲ	೨೫
೧೨. ಗ್ರಂಥವಿಮರ್ಶೆ	ಶ್ರೀ. ರಂ. ಕೃ. ಲಕ್ಕುಂಡಿ	೨೮
೧೩. ವರ್ಧಾ ರಾಷ್ಟ್ರೀಯ ಶಿಕ್ಷಣದಲ್ಲಿ ಪುಣ್ಯತಿಥಿ ಹಾಗೂ ಹಬ್ಬಗಳ ಆಚರಣೆ	ಶ್ರೀ. ರತ್ನಾಕರ, ಧಾರವಾಡ ...	೨೯

ಸರಕಾರಿ ಟ್ರೇನಿಂಗ ಕಾಲೇಜ ಕಾರವಾರ

●

ಕಾರವಾರ:—ಅಗಸ್ಟ ೧೫. ಇಲ್ಲಿಯ ಟ್ರೇನಿಂಗ ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಪ್ರಾಧ್ಯಾಪಕರೊಡಗೂಡಿ ಸ್ವಾತಂತ್ರ್ಯೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಿದರು.

ಬೆಳಗಿನ ಕಾರ್ಯಕ್ರಮ:— ಬೆಳಗು ಮುಂಜಾನೆ ೫-೩೦ಕ್ಕೆ ಸರಿಯಾಗಿ ಎಲ್ಲ ಶಿ. ವಿದ್ಯಾರ್ಥಿಗಳು ವಸತಿಗೃಹ ಹಾಗು ಕಾಲೇಜದ ಇಮಾರತಿಯ ಸುತ್ತುಮುತ್ತು 'ಸಫಾಯಿ' ಕಾರ್ಯಕ್ರಮವನ್ನು ಪೂರೈಸಿ, ಸರಿಯಾಗಿ ೬ ಘಂಟೆಗೆ ಬಾಡದಲ್ಲಿಯ ಕಾಲೇಜದ ಕಟ್ಟಡದ ಎದುರಿಗೆ ರಾಷ್ಟ್ರಧ್ವಜದ ಕೆಳಗೆ ನಿಂತು ಸಾಮೂಹಿಕ ಪ್ರಾರ್ಥನೆಯನ್ನು ಮಾಡಿದರು. ನಂತರ ಮಾನ್ಯ ಪ್ರಿನ್ಸಿಪಾಲರಾದ ಶ್ರೀಮಾನ್ ಜೋಶಿಯವರಿಂದ ಧ್ವಜಾರೋಹಣ, ಸಾರ್ವತ್ರಿಕ ಧ್ವಜವಂದನೆ, ಪ್ರತಿಜ್ಞಾ ವಿಧಿಗಳು ಮುಗಿದ ನಂತರ ಪ್ರಿನ್ಸಿಪಾಲರವರು ಕಳೆದ ವರ್ಷ ಜರುಗಿದ ಘಟನೆಗಳು ಹಾಗು ಮುಂದೆ ಮಾಡಬಹುದಾದ ವಿಧಾಯಕ ಕಾರ್ಯಕ್ರಮಗಳ ಕುರಿತು ಬೋಧಪ್ರದವಾದ ಭಾಷಣವನ್ನು ಮಾಡಿದರು. ನಂತರ ಗಿಡಗಳನ್ನು ನೆಡುವ ಕಾರ್ಯಕ್ರಮವು ಪೂರೈಸಲ್ಪಟ್ಟಿತು. ಕೂಡಲೆ ಎಲ್ಲರೂ ಸಾಲಾಗಿ ಪೋಲೀಸ ಪರೇಡ ಮೈದಾನಕ್ಕೆ ಜಯಘೋಷ ಮಾಡುತ್ತ ಹೋದರು. ಅಲ್ಲಿಂದ ಹಾಗೆಯೇ 'ಅರ್ಬುದ' ಜೈಲಿಗೆ ಬಂದು, ತಿರುಗಿ ಅಲ್ಲಿಂದ ಸರಕಾರೀ ಹಾಯಸ್ಕೂಲಿನ ಕ್ರೀಡಾಂಗಣದಲ್ಲಿ ಶಾರೀರಿಕ ಚಟುವಟಿಕೆಗಳನ್ನು ಪ್ರದರ್ಶಿಸಲಾಯಿತು.

ಮಧ್ಯಾಹ್ನದ ಕಾರ್ಯಕ್ರಮ:—ಸರಿಯಾಗಿ ಮಧ್ಯಾಹ್ನ ೨ ಘಂಟೆಗೆ ಪ್ರಿನ್ಸಿಪಾಲರವರ ಹಸ್ತದಿಂದ ಕಾಲೇಜದ ನವಾರ ಮಗ್ಗಗಳ ಉದ್ಘಾಟನೆಯು ಮುಗಿದೊಡನೆಯೇ ೨-೩೦ ರಿಂದ ಳರ ತನಕ ಸೂತ್ರಯಜ್ಞವು ಭಗವದ್ಗೀತೆ, ವಚನ, ಕುರಾಣ, ಬಾಯಬಲ್, ಭಕ್ತಿಪರ ಸಂಗೀತ ಪದಗಳು ಮುಂತಾದವುಗಳ ಪಠನದೊಡನೆ ಆಚರಿಸಲ್ಪಟ್ಟಿತು. ಆ ಕಾಲಕ್ಕೆ ಇಲ್ಲಿಯ ಎಲ್ಲ ವಿದ್ಯಾಧಿಕಾರಿಗಳೂ, ಆಸ್ಥೆಯುಳ್ಳ ಇನ್ನಿತರ ಮಹನೀಯರೂ ನಮ್ಮ ಆಮಂತ್ರಣಕ್ಕೆ ಮಾನ್ಯತೆಯಿತ್ತು ಆಗಮಿಸಿದ್ದರು. ನಂತರ ಮಾನ್ಯ ಪ್ರಿನ್ಸಿಪಾಲರವರು ನಮ್ಮ ಕಾಲೇಜದ ಕೈ ಬರೆಹದ ತ್ರೈಮಾಸಿಕ ಪತ್ರಿಕೆಯಾದ 'ಕನ್ನಡ ತಾರೆ'ಯ ಈ ಎರಡನೇ ವರ್ಷದ ಮೊದಲನೆಯ ಸಂಚಿಕೆಯನ್ನು ಸ್ವಾತಂತ್ರ್ಯ ಸಂಚಿಕೆಯಾಗಿ ಪ್ರಸಿದ್ಧಿಪಡಿಸಿದರು. ಕೊನೆಯದಾಗಿ ಮಿ. ಡಿ. ಎ. ಇ. ಕ್ಯಾ ಮಾನ್ಯ ಶ್ರೀ. ಪಿ. ಎಸ್ ಡೀ. ಪಾಠಾಣ) ಇವರ ನೇ ದಲ್ಲಿ ನಮ್ಮ ಶಿ. ವಿದ್ಯಾರ್ಥಿಗಳ ಹಿಂದುಸ್ತಾನೀ ಸ್ಪರ್ಧೆಯು ಜರುಗಿತು.

ಸಾಯಂಕಾಲ ೬ ಘಂಟೆಗೆ ಧ್ವಜಾವತರಣದ ಕಾರ್ಯಕ್ರಮಗಳು ಮುಕ್ತಾಯ ಹೊಂದಿದವು.

ಸರಕಾರೀ ಕನ್ನಡ ಟ್ರೇನಿಂಗ ಕಾಲೇಜದಲ್ಲಿ

ಸ್ವಾತಂತ್ರ್ಯೋತ್ಸವ

●

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾ ಧಾರವಾಡ.



೧೫ನೇ ಅಗಸ್ಟ ೧೯೪೮ನೆಯ ದಿವಸ ಸ್ವಾತಂತ್ರ್ಯೋತ್ಸವದ ನಿಮಿತ್ತವಾಗಿ ಸರಕಾರೀ ಕನ್ನಡ ಗಂಡುಮ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ, ಇತರ ಶಿಕ್ಷಕ ಶಿಕ್ಷಕವಿದ್ಯಾರ್ಥಿಗಳೂ, ಪ್ರಾಕ್ಟಿಸಿಂಗ ಸ್ಕೂಲಿನ ಶಿಕ್ಷ ವಿದ್ಯಾರ್ಥಿಗಳೂ ಕಾಲೇಜದ ಆಟದ ಬಯಲಿನಲ್ಲಿ ಕ ಬೆಳಗಿನ ೭ ಗಂಟೆಗೆ ಧ್ವಜಾರೋಹಣ ಸಮಾರಂಭನ ಡಾ|| ಕಬ್ಬೂರರವರ ಹಸ್ತದಿಂದ ನೆರವೇರಿಸಿದರು. ದಿನದ ಮಹತ್ವವನ್ನು ಕುರಿತು ಡಾ|| ಕಬ್ಬೂರರ ಸಮಯೋಚಿತವಾದ ನಾಲ್ಕು ಮಾತುಗಳಲ್ಲಿ ಹೇಳಿದ ನಂತರ ಶ್ರೀಯುತ ಧಾರವಾಡಕರರವರ ಹಸ್ತದಿಂದ ಕಾಲೇ ಜದ ಆವಾರದಲ್ಲಿ ವೃಕ್ಷಾರೋಪಣ ಸಮಾರಂಭವು ಜರು ಸಲ್ಪಟ್ಟಿತು. ಒಟ್ಟಾರೆ—ಗಿಡಗಳನ್ನು ನಾಟಿಲಾಯಿ

ಕನ್ನಡ ಪ್ರಾಥಮಿಕ ಶಿಕ್ಷಣ



ಪ್ರಧಾನ ಸಂಪಾದಕರು: ರ. ಕೃ. ಲಕ್ಕುಂಡಿ.

ಸಂಪುಟ ೮೮ | ಸೆಪ್ಟಂಬರ ೧೯೪೮ | ಸಂಚಿಕೆ ೪

ಸಂಪಾದಕೀಯ

೧೯೪೫ರ ಜನವರಿಯಲ್ಲಿ ಸೇವಾಗ್ರಾಮದಲ್ಲಿ ನೆರೆದ ರಾಷ್ಟ್ರೀಯ ಶಿಕ್ಷಣ ಸಮ್ಮೇಲನಕ್ಕೆ ಮಹಾತ್ಮಾ ಗಾಂಧಿಯವರು ಕೆಮ್ಮಿನಿಂದಾಗಿ ಮಾತನಾಡದೆ ಬರೆಸುಕೊಟ್ಟ ಸಂದೇಶವನ್ನು ಕೆಳಗೆ ಕೊಡಲಾಗಿದೆ. ನಮಗೆ-ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ-ಸದಾ ಮಾರ್ಗದರ್ಶಿಯಾಗಿರುವುದು.

ಇಂದಿನ ವರೆಗೆ ನಮ್ಮ ಶಿಕ್ಷಣವು ಹೊಸದಿದ್ದಾಗ್ಯೂ ನಾವು ಒಂದು ಉಪಸಾಗರದಲ್ಲಿ ಇದ್ದೆವು. ಬಟ್ಟ ಬಯಲಾಗಿರುವ ಸಮುದ್ರಕ್ಕಿಂತ ಉಪಸಾಗರವು ಸುರಕ್ಷಿತವಿದೆ. ಅದು ರಕ್ಷಿಸುತ್ತಿರುತ್ತದೆ. ನಮ್ಮ ಕಾರ್ಯಕ್ರಮ ಸೀಮಿತವಾಗಿತ್ತು. ನಾವೀಗ ಉಪಸಾಗರವನ್ನು ಬಿಟ್ಟು ಮಹಾಸಾಗರದಲ್ಲಿ ನಮ್ಮನ್ನೆ ನಾವು ಒಗೆದುಕೊಳ್ಳುತ್ತಿದ್ದೇವೆ. ಅಲ್ಲಿ ಧ್ರುವ ನಕ್ಷತ್ರವನ್ನು ಬಿಟ್ಟರೆ ನಮಗಾರೂ ರಕ್ಷಕರಿಲ್ಲ. ಆ ಧ್ರುವತಾರೆಯಂದರೆ ಕೈಗಾರಿಕೆ-ಗ್ರಾಮೋದ್ಯೋಗ. ಈಗ ನಮ್ಮ ಕ್ಷೇತ್ರ ೭ನೆಯ ವರುಷದ ಬಾಲಕನಿಂದ ೧೪ನೆಯ ವರುಷದ ಬಾಲಕನ ವರೆಗೆ ಇಲ್ಲ; ಆದರೆ ತಾಯಿಯ ಹೊಟ್ಟೆಯಿಂದ ಹುಟ್ಟಿದಾಗಿನಿಂದ ಹಿಡಿದು ಸಾಯುವ ತನಕ, ನಮ್ಮ ಅರ್ಥಾತ್ ಹೊಸ ಶಿಕ್ಷಣ (ವರ್ಧಾ ರಾಷ್ಟ್ರೀಯ ಶಿಕ್ಷಣ) ದ ಕ್ಷೇತ್ರವಿದೆ. ಆದ್ದರಿಂದ ನಮ್ಮ ಕಾರ್ಯ ಬಹಳ ಬೆಳೆದು ಹೋಗಿದೆ. ಆದರೆ ಕಾರ್ಯಮಾಡುವವರು ಅವರೇ ಇದ್ದಾರೆ.

ಈ ಬಗೆಗೆ ನಾವು ಚಿಂತೆಮಾಡಬಾರದು. ನಮ್ಮ ನಿಜವಾದ ಜೊತೆಗಾರ ಸತ್ಯರೂಪ ಈಶ್ವರನಿರುವ. ಅವನೆಂದಿಗೂ ನಮಗೆ ಮೋಸಮಾಡಲಾರ. ನಾವು ಯಾರ ಪರವೆಯನ್ನು ಮಾಡದೆ ಆ ಸತ್ಯದ ಮೇಲೆ ಅಚಲವಾಗಿದ್ದರೆ ಮಾತ್ರ ಆ ಸತ್ಯ ನಮ್ಮ ಸಂಗಡಿಗವಾಗುವದು. ಅ ವ ರ ಲ್ಲಿ ಆಡಂಬರಕ್ಕೆ ಸ್ಥಾನವಿಲ್ಲ, ಅಹಂಕಾರಕ್ಕೆ ಎಡೆಯಿಲ್ಲ, ರಾಗ-ಕ್ರೋಧಕ್ಕೆ ತಾಣವಿಲ್ಲ. ನಾವೆಲ್ಲರೂ ಹಳ್ಳಿಗರ ಶಿಕ್ಷಕರಾಗುತ್ತೇವೆ ಅರ್ಥಾತ್ ಹಳ್ಳಿಗರ ನಿಜವಾದ ಸೇವಕರಾಗುತ್ತೇವೆ. ಇದರಲ್ಲಿ ಪಾರಿತೋಷಕವೆಂದರೆ ಕಾರ್ಯ, ಹೃದಯವೇ ಸಾಕ್ಷಿ ಹೊರಗಿನದೇನೂ ಇಲ್ಲ. ಸತ್ಯಶೋಧನೆಯಲ್ಲಿ ಜೊತೆಗಾರ ಸಿಕ್ಕರೂ ಸರಿಯೆ, ಸಿಗದಿದ್ದರೂ ಸರಿಯೆ.

ಈ ಹೊಸ ಶಿಕ್ಷಣವು ಹಣವನ್ನು ಅವಲಂಬಿಸಿಲ್ಲ. ಹೊಸ ಶಿಕ್ಷಣದ ವೆಚ್ಚವನ್ನು ಹೊಸ ಶಿಕ್ಷಣದಿಂದಲೇ ತೆಗೆಯಬೇಕಾಗಿದೆ, ಇದರ ಬಗ್ಗೆ ಬೇಕಾದಷ್ಟು ಟೀಕೆಯಾಗಲಿ. ನಿಜವಾದ ಶಿಕ್ಷಣವು ಸ್ವಾಶ್ರಯಿಯಾಗಿರುತ್ತದೆಂಬುದನ್ನು ನಾನು ಬಲ್ಲೆ. ಇದರಲ್ಲಿ ನಾಚಿಕೆಯಿಲ್ಲ, ಹೊಸತನವಿದೆ. ಅದರಲ್ಲಿಯೇ— ಅದರಿಂದಲೇ ಮನಸ್ಸು ಅರ್ಥಾತ್ ಮಿದುಳಿನ ನೈಜ ವಿಕಾಸವಾಗುವುದೆಂಬುದನ್ನು ಮಾಡಿತೋರಿಸಲು ಮತ್ತು ಹೇಳಲು ನಾವು ಸಮರ್ಥರಾದರೆ ನಮ್ಮ ಚೇಷ್ಟೆಮಾಡಿ ನಗುವವರೇ ಹೊಸ ಶಿಕ್ಷಣವನ್ನು ಬಣ್ಣಿಸುವರು. ಮತ್ತು ಹೊಸ ಶಿಕ್ಷಣವು ಸರ್ವವ್ಯಾಪಕವಾಗುವುದು. ಇಂದು ನಮ್ಮ ಎಲ್ಲ ಬಗೆಯ ನಿರ್ಧನತೆಯನ್ನು ತೋರಿಸುವ ಏಳು ಲಕ್ಷ ಹಳ್ಳಿಗಳು ಸಮೃದ್ಧವಾಗುವವು—ಆ ಸಮೃದ್ಧಿಯು ಹೊರಗಿನಿಂದ ಬರಲಾರದು, ಒಳಗಿನಿಂದ ಬರುವುದು, ನಮ್ಮ ಪ್ರತ್ಯೇಕ ಹಳ್ಳಿಗನ ಶುದ್ಧ ಉದ್ಯೋಗದಿಂದ ಬರುವುದು.

ಹೊಸ ಶಿಕ್ಷಣದ ಉದ್ದೇಶ ಇದು, ಇದಕ್ಕಿಂತ ಚಿಕ್ಕದಾದ ಉದ್ದೇಶವಾವುದೂ ಇಲ್ಲ. ಈ ಉದ್ದೇಶವನ್ನು ನಿಜಮಾಡಿ ತೋರಿಸಲು ಸತ್ಯರೂಪೀ ಈಶ್ವರ ನಮಗೆ ನೆರವನ್ನೀಯಲಿ.

ಕಂಬನಿ

●

ಸೇವಾ-ನಿವೃತ್ತ ಪ್ರಿನ್ಸಿಪಾಲ
ಶ್ರೀ. ಹುಚ್ಚರಾಯರು ಉಮಡಿ, ಎಂ. ಎ.
ಅವರ ಆಕಸ್ಮಿಕ ನಿಧನ

ಶ್ರೀ. ಹುಚ್ಚರಾಯರ ಪ್ರಾಥಮಿಕ ವತ್ತು ಮಾಧ್ಯಮಿಕ ಶಿಕ್ಷಣಗಳು ಧಾರವಾಡದಲ್ಲಿಯೇ ಮುಗಿದುವು. ಬಳಿಕ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಗಣಿತ ವಿಷಯವನ್ನು ತೆಗೆದುಕೊಂಡು ೧೧೧೨ರಲ್ಲಿ ಬಿ. ಎ. ಪದವಿಯನ್ನು ಪಡೆದರು. ಬಳಿಕ ಒಂದು ವರುಷದ ವರೆಗೆ ವಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಅಧ್ಯಾಪನಕಾರ್ಯವನ್ನು ಸರ್ವರ ಮನ ಮೆಚ್ಚುವಂತೆ ಮಾಡಿ ತಮ್ಮ ಪ್ರತಿಭೆಯನ್ನು ಕನ್ನಡ ಜನಕ್ಕೆ ತೋರಿಸಿದರು. ೧೯೧೪ ರಲ್ಲಿ ಮುಂಬಯಿ ಸರಕಾರದ ಶಿಕ್ಷಣ ಖಾತೆಯಲ್ಲಿ ಸೇರಿ ಧಾರವಾಡ, ಬೆಳಗಾವಿ, ವಿಜಾಪುರಗಳ ಹಾಯಸ್ಕೂಲುಗಳಲ್ಲಿ ತಮ್ಮ ಕರ್ತವ್ಯವನ್ನು ಪ್ರಶಂಸನೀಯ ರೀತಿಯಲ್ಲಿ ಜರಗಿಸುತ್ತ ೧೦೧೬ರಲ್ಲಿ ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಆದರ್ಶ ಶಿಕ್ಷಕನು ಆಜನ್ಮ ವಿದ್ಯಾರ್ಥಿಯೆಂಬುದನ್ನು ತಮ್ಮ ಸಹೋದ್ಯೋಗಿಗಳಿಗೆ ಮನವರಿಕೆ ಮಾಡಿಕೊಟ್ಟರು. ಬಳಿಕ ಟ್ರೇನಿಂಗ ಕಾಲೇಜಿನಲ್ಲಿಯೂ ಹಾಯಸ್ಕೂಲಿನಲ್ಲಿಯೂ ಶಿಕ್ಷಕ ವೃತ್ತಿಯನ್ನು ಮಾಡಿದರು. ೧೯೩೫ರಿಂದ ಟ್ರೇನಿಂಗ ಕಾಲೇಜಿನಲ್ಲಿಯೇ ಪ್ರಾಥಮಿಕ ಶಿಕ್ಷಕರಿಗೆ ವಿದ್ಯಾದಾನ ಮಾಡುತ್ತ ೧೯೪೩ರಲ್ಲಿ ಪ್ರಿನ್ಸಿಪಾಲರಾದರು. ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಉಮಡಿ ಹುಚ್ಚರಾಯರು ೬-೯-೧೯೪೫ರಿಂದ ಸೇವಾನಿವೃತ್ತರಾದರು. ಟ್ರೇನಿಂಗ ಕಾಲೇಜಿನಲ್ಲಿಯೇ ಕೆಲಸ ಮಾಡುತ್ತಿರುವಾಗ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ 'ವೇತೀ ಜಮಾ ಖರ್ಚು' ಎಂಬ ಪುಸ್ತಕವನ್ನು ಬರೆದರು. ಇದೂ ಅಲ್ಲದೆ 'ಪ್ರಾಥಮಿಕ ಶಿಕ್ಷಣ'ದಲ್ಲಿ ಅದರ ಸಂಪಾದಕರಾಗಿ ನಾನಾ ವಿಷಯಗಳನ್ನು ಕುರಿತು ಅನೇಕ ಲೇಖನಗಳನ್ನು ಬರೆದರು. ಈಗ ಒಂದು ಅಂಕಗಣಿತವನ್ನು ಬರೆದಿರುವರು. ಈ ಬಗೆಯಾಗಿ ನಮ್ಮ ಕನ್ನಡ ನಾಡಿನ ಜ್ಞಾನದ ಬೆಳವಣಿಗೆಗೆ ಮತ್ತು ಕನ್ನಡ ಸಾಹಿತ್ಯದ ಏಳ್ಗೆಗಾಗಿ ಸೇವೆಯನ್ನು ಸಲ್ಲಿಸುತ್ತಿದ್ದರು.

ಶ್ರೀ. ಉಮಡಿಯವರ ಜೀವವು "ಸರಳ ಜೀವನ ಮತ್ತು ಉದಾತ್ತ ವಿಚಾರ" ಎಂಬ ಮಾತಿನ ಪ್ರತ್ಯಕ್ಷ ದೃಷ್ಟಾಂತವಾಗಿತ್ತು. ಇವರ ಪ್ರಫುಲ್ಲಿತ ಮುಖವೂ ಮುಖದಲ್ಲಿಯ ಮುಗುಳು ಹೂ-ನಗೆಯ ಸೌರಭ್ಯವೂ ಅವರಲ್ಲಿ ಪ್ರೇಮಾದರಗಳನ್ನು ಹುಟ್ಟಿಸುತ್ತಿದ್ದವು. ಅವರ ಭವ್ಯ ದೇಹವೂ ಮಂದವಾದ ಗಂಭೀರ ನಡಿಗೆಯೂ ಮಿತವಾದ ನಗೆಮಾತುಗಳೂ ಅವರ ವ್ಯಕ್ತಿತ್ವದ ಹಿರಿಮೆಯನ್ನೇ ಸೂಚಿಸುವ ಚಿನ್ಹಗಳೆಂದು ಅನಿಸದೆ ಇರುತ್ತಿದ್ದಿಲ್ಲ. ಇವರು ಅನೇಕರಿಗೆ ಆದರ್ಶಪುರುಷರಾಗಲು ಇವರಲ್ಲಿದ್ದ ಅನೇಕ ಗುಣಗಳೇ ಕಾರಣವು. ನಿರ್ವಿಕಲ್ಪ ಮನಸ್ಸಿನಿಂದ ವಿಚಾರ ಮಾಡಿ ಸತ್ಯವನ್ನು ಕಂಡು ಹಿಡಿಯುವ ಅಗಾಧ ಶಕ್ತಿಯು ಇವರಲ್ಲಿ ಒಡೆದುಕಾಣುತ್ತಿತ್ತು. ಗಣಿತವು ಇವರ ಅತ್ಯಂತ ಮೆಚ್ಚಿನ ವಿಷಯವಾದರೂ ಕಲಾಭಿರುಚಿಗೂ ಸೌಂದರ್ಯೋಪಾಸನೆಗೂ ಇವರ ಹೃದಯದಲ್ಲಿ ಅಗ್ರಸ್ಥಾನವಿತ್ತು.

ಇಳಿವಯಸ್ಸಾದರೂ ಇವರ ಜ್ಞಾನತೃಷೆಯು ಹಿಂಗಿದ್ದಿಲ್ಲ. ಪರರಿಗೆ ಕಲಿಸುವ ಭರದಲ್ಲಿ ತಾವು ಕಲಿಯಬೇಕಾದುದೇನೂ ಇಲ್ಲವೆಂಬ ಭಾವವು ಇವರಲ್ಲಿದ್ದಿಲ್ಲ. ವಿನಯವೇ ಇವರ ಜೀವನದ ಅಡಿಗಲ್ಲಾಗಿತ್ತು. ಉಜ್ವಲವಾದ ಪ್ರತಿಭೆ, ವಿನಯ, ಸತ್ಯಸಂಧತೆ ಇವುಗಳ ಸಮಾಗಮದಿಂದ ಇವರ ದೃಷ್ಟಿಕೋನವು ಶಾಸ್ತ್ರೀಯವಾಗಿತ್ತು. ಹೃದಯವು ವಿಶಾಲವಾಗಿತ್ತು, ಅಂತಃಕರಣವು ಪರಿಶುದ್ಧವಾಗಿತ್ತು. ಇಂಥವರು ನಮ್ಮಿಂದ ೬-೯-೧೯೪೫ರ ನೆಯ ದಿನ ಆಕಸ್ಮಿಕ ಅಗಲಿ ಹೋದುದಕ್ಕಾಗಿ ನಮಗೆ ಅತೀವ ದುಃಖವಾಗಿದೆ.

ಪರಮಾತ್ಮನು ಇವರಿಗೆ ಶಾಂತಿಯನ್ನು ದಯಪಾಲಿಸಲೆಂದೂ ಇವರ ಆದರ್ಶ ನಮಗೆ ಬೆಳಕನ್ನೀಯಲೆಂದೂ ಪರಮಾತ್ಮನನ್ನು ಬೇಡುತ್ತೇವೆ.

ಮಕ್ಕಳಿಗೆ ಇತಿಹಾಸದ ಪರಿಚಯವನ್ನು ಮಾಡಿಕೊಡುವದು

ಲೇಖಕರು: ಶ್ರೀ. ಕೆ. ಜಿ. ಸೈಯದ್ಸೆನ. ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರು.

ಆರೇಳು ವರ್ಷದ ಮಕ್ಕಳು ಇತಿಹಾಸ ಪೂರ್ವದ ತಮ್ಮ ಪೂರ್ವಜನು ಯಾವ ಸರಳವಾದ ಮತ್ತು ಮೂಲ ಪದ್ಧತಿಗಳಿಂದ ಇರುತ್ತಿದ್ದನು, ಹೇಗೆ ಆಹಾರ ದೊರಕಿಸುತ್ತಿದ್ದನು, ಹವೆಯ ಉಗ್ರತೆಗಳಿಂದ ತನ್ನನ್ನು ಹೇಗೆ ರಕ್ಷಿಸಿಕೊಳ್ಳುತ್ತಿದ್ದನು, ಕ್ರೂರ ಮೃಗಗಳ ಆಕ್ರಮಣದಿಂದ ತನ್ನನ್ನು ಹೇಗೆ ಕಾಪಾಡಿಕೊಳ್ಳುತ್ತಿದ್ದನು, ತನ್ನೊಡನಾಡಿಗಳೊಡನೆ ಒಟ್ಟಾಗಿರುವದನ್ನು ಹೇಗೆ ಕಲಿತನು, ಮತ್ತು ಸಾವಕಾಶವಾಗಿ ಸುತ್ತಲಿನ ಪರಿಸ್ಥಿತಿಯಲ್ಲಿಯ ಕೆಲವೊಂದು ಶಕ್ತಿಸಾಮಗ್ರಿಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಮುಂದೆ ಅವುಗಳನ್ನು,—ತನಗಾಗಿ ಹೆಚ್ಚು ಭದ್ರವಾದ, ವಿಶಾಲವಾದ ಸುಖಕರ ಜೀವನವನ್ನು ರಚಿಸಿಕೊಳ್ಳಲು ಹೇಗೆ ಬಳಸಿಕೊಂಡನೆಂಬುದನ್ನು ಕಲಿಯಲು ಒಳ್ಳೇ ಅಭಿರುಚಿಯುಳ್ಳವರಾಗಿರುತ್ತಾರೆ. ಈ ಸಂಗತಿಗಳನ್ನು ಅವರಿಗೆ ಕಲಿಸುವಾಗ ಆ ಕಾಲದ ಕಲ್ಪಿತ ಕುಟುಂಬಗಳ ಪರಿವಾರದವರಿಗೆಲ್ಲ—(ಮಕ್ಕಳನ್ನೂ ಸಹ ಒಳಗೊಂಡು)—ಯೋಗ್ಯ ಹೆಸರುಗಳನ್ನು ಕೊಟ್ಟು ಸಣ್ಣ ಸಣ್ಣ ಕಟ್ಟು ಕತೆಗಳ ರೂಪಗಳಲ್ಲಿ ಕಲಿಸಿದರಂತೂ-ನಿಶ್ಚಿತವಾಗಿ ಅವರಿಗೆ ಹೆಚ್ಚಾದ ಅಭಿರುಚಿ ಹುಟ್ಟುವದು ಮತ್ತು ಮನುಷ್ಯನ ಮೂಲ ಕೊರತೆಗಳು ಯಾವವಿದ್ದವು ಹಾಗೂ ಅವನು ತಪ್ಪುಗಳನ್ನು ಮಾಡಿ ಅವುಗಳಿಂದ ಹೆಚ್ಚು ಜ್ಞಾನ ಸಂಪಾದಿಸಿಕೊಳ್ಳುವ ಪದ್ಧತಿಯಿಂದ ಮತ್ತು ಸಹಕಾರೀ ಚಟುವಟಿಕೆಗಳಿಂದ ಅವುಗಳನ್ನು ಹೇಗೆ ತುಂಬಿಕೊಂಡನೆಂಬ ಬಗೆಗೆ ಅತ್ಯುಪಯುಕ್ತವಾದ ಬಹಳ ವಿಷಯಗಳನ್ನು ಜೀರ್ಣಿಸಿಕೊಳ್ಳುವರು.

೨. 'ಸಾಮಾಜಿಕ ಅಭ್ಯಾಸ'ವನ್ನು ಈ ರೀತಿ ಕ್ರಮಪಡಿಸುವದರಿಂದ ಅನೇಕ ವಿಶಿಷ್ಟ ಲಾಭಗಳಿವೆ.—

ಮೊದಲನೆಯದಾಗಿ, ಇದು ಮಕ್ಕಳ ಕಲಿಯಬೇಕಾದ ವಿಷಯಗಳಲ್ಲಿ ಅವರ ಅಭಿರುಚಿಯೂ-ಸಹಕಾರವೂ ನೆಲೆಯೂರುವಂತೆ ಮಾಡುವದು. ಯಾಕಂದರೆ ಕೆಲವೊಂದು ರೀತಿಗಳಲ್ಲಿ ಸದ್ಯದ ಕ್ಲಿಷ್ಟ ಜೀವನದ ರಚನೆಗಿಂತ ಪ್ರಾಚೀನ ಸರಳ ಜೀವನವನ್ನು ತಿಳಿದುಕೊಳ್ಳುವದು ಅವರಿಗೆ ಹಗುರೆನಿಸುವದು. ಎರಡನೆಯದಾಗಿ,—ಆಹಾರ, ಬಟ್ಟೆ, ಬಿಡಾರ ಸಾಗಾಟ ಸಾಧನ ಮುಂತಾದ ವಿಷಯಗಳಲ್ಲಿ ಈಗಿನ ಮತ್ತು ಆಗಿನ ಸಮಯಗಳ ಅಂತರವನ್ನು ಹೂಗಿ ಅರಿತುಕೊಳ್ಳಲು ಮಗುವನ್ನು ಅಣಿಗೊಳಿಸುವದರಿಂದ—ತನಗೆ ತಿಳಿಯದಂತೆಯೇ ಅದು (ಮಗುವು) ಯುಗಾಂತರಗಳಿಂದ ಮನುಷ್ಯನು ನಾಗರಿಕತೆಯ ಆದರ್ಶದತ್ತ ಇಟ್ಟ ಮುನ್ನಡೆಗಳ ಬಗೆಯನ್ನು ಗ್ರಹಿಸಿಕೊಳ್ಳುವದು. ಇದು ಉತ್ತಮವಾದ ಸಾಮಾಜಿಕ ಶಿಕ್ಷಣಾಭ್ಯಾಸ ಕ್ರಮಕ್ಕೆ ಮೂಲ ಭೂತವಾಗಿರಲೇಬೇಕಾದ ತಿಳುವಳಿಕೆ.

ಮೂರನೆಯದಾಗಿ, ಇಂತಹ ಅಭ್ಯಾಸ ಕ್ರಮವು ಗುಡಿಸಲು ಕಟ್ಟುವ, ಎಲೆಗಳಿಂದ ಕಾಡು ವೇಷಗಳನ್ನು-ತಯಾರಿಸುವ, ಮಣ್ಣಿನಿಂದ ಉಪಕರಣ ಮಾಡುವ, ಕುಟುಂಬದವರ ಗೊಂಬೆಗಳನ್ನು ರಚಿಸುವ ಮುಂತಾದ ಅನೇಕ ವಿವಿಧ ಕೈಗಾರಿಕೆಗಳನ್ನು ಕಲಿಸಿಕೊಡಲು ಸುಸಂಧಿಯನ್ನೊದಗಿಸಿಕೊಡುತ್ತದೆ.

ನಾಲ್ಕನೆಯದಾಗಿ, ಈ ವಯಸ್ಸಿಗೆ ಕಲಿಸಲೇ ಬೇಕಾದ ಅನೇಕ ಅಭ್ಯಾಸ ಕೌಶಲ್ಯಗಳನ್ನು ಒಂದೆಡೆಗೆ ಸೆಳೆದು ತರುವ ಕೇಂದ್ರವಿಷಯದ ಸುತ್ತ ಸುಸಂಬದ್ಧವಾಗಿ ಹೆಣೆದು ಕೊಂಡಿರುವ ಜ್ಞಾನಾರ್ಜನೆಯ ಅಖಂಡವಾದ ಒಂದು ಪಾಠವಾಗುವದು.

ಮಾನವನೂ ಆತನ ಕೊರತೆಗಳೂ

ಐತಿಹಾಸಿಕ ಸಂಗತಿಗಳು, ಭೂಗೋಲ ಮತ್ತು ಸೃಷ್ಟಿ ನಿರೀಕ್ಷಣೆ, ಕೈಕೆಲಸ ಮತ್ತು ಕತೆ ಹೇಳುವದರಲ್ಲಿ ಆಗುವ ಆತ್ಮವಿಕಾಸ, ಎಣಿಕೆ ಮುಂತಾದವುಗಳನ್ನು ಜ್ಞಾನ-ಚಟುವಟಿಕೆಗಳ ಏಕೀಕೃತವಾದ ಪಡಿಕಟ್ಟಾಗುವಂತೆ ನೇಯಬಹುದು. ಬೆಲ್ಜಿಯಮ್‌ದ "ಡಿಕ್ರೊಬಿ" (Decroby)ಯಂತಹ ಕೆಲವು ಪ್ರಗತಿಪರ ಶಾಲೆಗಳಲ್ಲಿ—ಮನುಷ್ಯ ಹಾಗೂ ಆತನ

ಆಶೆ ಕೊರತೆಗಳ ಸಂತುಷ್ಟಿ ಎಂಬ ಒಂದೇ ಒಂದು ವಿಷಯ ವನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಪಕ ಪದ್ಧತಿಯಿಂದ (ಆವಿಷಯದ) ಬಹುಮುಖ ಮಹತ್ವವನ್ನು ಎಲ್ಲ ವರ್ಗ ಗಳಲ್ಲಿ ಹೆಚ್ಚಾದ ತಿಳುವಳಿಕೆಯಿಂದಲೂ ಕೂಲಂಕಷವಾದ ವಿಭಜನೆ ವಿಮರ್ಶೆಗಳಿಂದಲೂ ಅಭ್ಯಾಸ ಮಾಡಿಸಲಾಗು ತ್ತದೆ. ಇದೇ ರೀತಿಯು ಶಾಲೆಯ ಎಲ್ಲ ಅಭ್ಯಾಸ, ಚಟು ವಟಿಕೆಗಳಲ್ಲಿ ಕವಲೊಡೆದು ಪಸರಿಸುತ್ತದೆ.

೩. ನಮ್ಮ ಶಿಕ್ಷಕರಿಗೆ ಇಂಥಹ ಆಮೂಲಾಗ್ರವಾಗಿ ಭಿನ್ನ ವಾದ ಪದ್ಧತಿಯನ್ನು ಅರಗಿಸಿ, ಪಳಗಿಸಿಕೊಂಡು ಅನುಸರಿಸು ವದು ಸಾಧ್ಯವಾಗಲಿಕ್ಕಿಲ್ಲ! ಆದರೂ ಒಂದನೆಯ ವರ್ಗದಲ್ಲಿ ಮಕ್ಕಳಿಗೆ ಪ್ರಾಚೀನ ಇತಿಹಾಸದ ಕತೆಗಳನ್ನು ಕಲಿಸುವ ಬದಲು, ಮೇಲೆ ಸೂಚಿಸಿದಂತೆ ಇತಿಹಾಸ-ಪೂರ್ವದ ಮಾನವ-ಜೀವನದ ಕತೆಗಳನ್ನೆತ್ತಿಕೊಂಡು ಅವರಿಗೆ ಕಲಿ- ಯಲು ಬರಬೇಕೆಂಬ ಯೋಜನೆಯನ್ನು ಕಾರ್ಯರೂಪಕ್ಕಿಳಿ ಸಬೇಕೆಂದು ಪ್ರಸ್ತಾಪಿಸಿದ್ದಾಗಿದೆ. ಇದಕ್ಕೆ ಶಿಕ್ಷಕರು ವಿಷಯ ನಿರೂಪಣೆಯಲ್ಲಿ ಹೆಚ್ಚಿನ ಕೌಶಲ್ಯವುಳ್ಳವರಾಗಿರಬೇಕಾಗು ತ್ತದೆ. ಯಾಕಂದರೆ ಅವರು ಇತಿಹಾಸ-ಪೂರ್ವದ ಸ್ಥಿತಿಗತಿ ಗಳ ಸನ್ನಿವೇಶಗಳಲ್ಲಿ ಮಕ್ಕಳು ಉತ್ಸಾಹಭರಿತರಾಗಿ ಭಾಗ ವಹಿಸುವಂತೆ ಚಿತ್ರ, ರೇಖಾಚಿತ್ರ ಮೊದಲಾದವುಗಳಿಂದ ಅವರ ಕಲ್ಪನೆಯನ್ನು ಕುದುರಿಸಿ ಕಣ್ಣಿಗೆ ಕಟ್ಟುವಂತೆ ವಾಸ್ತವತೆಗೆ ಇಳಿಸಬೇಕಾಗುತ್ತದೆ.

೪. ವಿಷಯದ ನಿಜ ಸ್ವರೂಪವು ಹೀಗಿರ ವಾಗ, ಕಟ್ಟ ನಿಟ್ಟಾದ ಅಭ್ಯಾಸಕ್ರಮವನ್ನು ಸೂಚಿಸಲು ಬರುವಂತೆಯೇ ಇಲ್ಲ. ಶಿಕ್ಷಕರು ಇಂತಹ ಜಾಣ್ಮೆ, ಕಲ್ಪಿತಬುದ್ಧಿಗಳಿಗಾಗಿ ಸ್ವಾವಲಂಬಿಗಳಾಗಬೇಕಾಗುತ್ತದೆ. ಹೀಗಿದ್ದರೂ ಇದು ತೀರ ಹೊಸ ಮಾರ್ಗವಿರುವದರಿಂದ, ಮಾರ್ಗದರ್ಶಿಯಾಗಿ ಕೆಲವು ವಿಶಿಷ್ಟ ವಿಷಯಗಳನ್ನು ಕೆಳಗೆ ಸೂಚಿಸಿದೆ. ಇವು ಗಳ ಸಹಾಯವು ಶಿಕ್ಷಕರ ಕಲ್ಪನೆಯನ್ನು ಪ್ರಚೋದಿಸಿ ಸಜಾ ತೀಯ ಅನ್ಯ ವಿಷಯಗಳನ್ನು ಕಂಡು ಹಿಡಿಯಲು ಅವರಿಗೆ ತುಂಬಾ ನೆರವಾಗುವದೆಂದು ಆಶಿಸಲಾಗಿದೆ.

ಕತೆ ನಿರೂಪಿಸುವಾಗ-ಮಕ್ಕಳು ಪಾತ್ರಗಳ ಹೆಸರುಗ ಳನ್ನು ಸೂಚಿಸಿ ಕತೆಯನ್ನು ಪೋಷಿಸುವದರಲ್ಲಿ, ವಿವಿಧ ಪಾತ್ರಗಳನ್ನು ಅಭಿನಯಿಸುವದರಲ್ಲಿ, ತಮ್ಮ ಅಭ್ಯಾಸಕ್ಕೆ ಸಂಬಂಧಿಸಿದ ಸಹಾಯ ಸಲಕರಣೆಗಳನ್ನು ಸಂಗ್ರಹಿಸುವದ ರಲ್ಲಿ ಮತ್ತು ತುಲನಾತ್ಮಕ ನಿರೀಕ್ಷಣೆ ಮಾಡುವದರಲ್ಲಿ ಹೆಜ್ಜೆ ಹೆಜ್ಜೆಗೂ ಅವರ (ಮಕ್ಕಳ) ಸಹಕಾರ-ಚಟುವಟಿಕೆಗಳನ್ನು ಪಡೆಯಲೇ ಬೇಕಾಗುವದೆಂಬ ವಿಚಾರವಿದೆಯೆಂಬುದನ್ನು ಶಿಕ್ಷಕರು ಲಕ್ಷದಲ್ಲಿಡಬೇಕು. ಈ ರೀತಿಯನ್ನನುಸರಿಸಿದಲ್ಲಿ ಕಾಡು ಮಾನವನ ಜೀವನ ಚರಿತೆಯು ಇಲ್ಲಿಯ ಈಗಿನ ವ ಕ್ಕಳಿಗೆ ಚಿತ್ತಾಕರ್ಷಕವಾದ, ಬುದ್ಧಿವಿಕಾಸ ಮಾಡು- ವಂತಹ ಮತ್ತು ಆಚರಣೆಗಿಳಿಸಬಹುದಂಥ ಸಾಹಸವಾಗಿ ಪರಿಣಮಿಸಿ ಮುಂದೆ ಕ್ರಮಿಕ ಇತಿಹಾಸದನ್ನು ತಿಳಿದುಕೊ- ಳ್ಳಲು ಅವರಿಗೆ ನೆಲೆಗಟ್ಟಾಗುವದು.

ಕೆಳಗಿನಂತಹ ವಿಷಯಗಳ ಸುತ್ತ ಕತೆಗಳನ್ನು ಹೆಣೆಯ ಬೇಕು.

೧. ಅತಿಪೂರ್ವದಲ್ಲಿ ಭೂಮಿಯ ಮೇಲೆ ಮನುಷ್ಯನಿರ ಲೇ ಇಲ್ಲ. ಕೇವಲ ಗಿಡಗಳು ಹರಿದಾಡುವ ದೊಡ್ಡ ಪ್ರಾಣ ಗಳು, (ಸರ್ಪಗಳೂ) ಮೀನಗಳು ಮತ್ತು ಇನ್ನುಳಿದ ಪ್ರಾಣಿ ಗಳು ಇರುತ್ತಿದ್ದವು.

೨. ಮೊಟ್ಟ ಮೊದಲಿನ ಕಾಡು ಮನುಷ್ಯನು ಭಯ- ಶೋಕಗಳಿಂದ ಪೂರಿತವಾದ ಅತ್ಯಂತ ಕಠಿಣವಾದ ಜೀವ ನವನ್ನು ಸಾಗಿಸುತ್ತಿದ್ದನು.

ಅ) ಆಹಾರದ ಅಭಾವ:-ಗಿಡಗಳ ಕಸುಕು ಎಲೆಗಡ್ಡೆಗಳು ಅಥವಾ ತತ್ತಿಗಳು, ಅಥವಾ ತಾನು ಕೆಲವುಸಲ ಬೇಟೆಯಾಡಿ ದೊರಕಿಸಿದ ಹಕ್ಕಿ-ಪ್ರಾಣಿಗಳನ್ನುಳಿದರೆ, ಆತನು ಪ್ರಾಣಿಗ- ಳಂತೆ ಎಚ್ಚತ್ತ ವೇಳೆಯನ್ನೆಲ್ಲ ಆಹಾರಕ್ಕಾಗಿಯೇ ವಿನಿ ಯೋಗಿಸುತ್ತಿದ್ದನು.

ಬ) ಬಿಡಾರದ ಅಭಾವ:—ಭೀಕರ ಕಾಡು ಮೃಗಗಳಿಂದ ತುಂಬಿದ ನಿಬಿಡವಾದ ಕಾರ್ಗತ್ತಲೆಯ ಅಡವಿಯಲ್ಲಿ ವಾಸಿ ಸುತ್ತಿದ್ದನು.; ರಾತ್ರಿ ತನ್ನ ಕುಟುಂಬವನ್ನು ಗಿಡಗಳ ಹೊದ ರುಗಳಲ್ಲಿಯಾಗಲೀ ದೊಡ್ಡ ಬಂಡೆಗಲ್ಲುಗಳ ಹಿಂದಾಗಲೀ ಅಡಗಿಸಿರುತ್ತಿದ್ದನು.

ಕ) ಬಟ್ಟೆಯ ಅಭಾವ:—ಅವನು ಬೇಸಿಗೆಯ ಬಿಸಿಲಿಗೆ ಸಿಕ್ಕಿ ದಹಿಸಲ್ಪಡುತ್ತಿದ್ದನು ಮತ್ತು ಹಿಮದ ಗಾಳಿ ಹಾಗು ಹಿಮಗಳಿಗೆ ಸಿಕ್ಕುತ್ತಿದ್ದನು. ಕೆಲವು ಸಲ ಚಿಕ್ಕ ಮಕ್ಕಳು ಆತನ ತೋಳುಗಳ ತೆಕ್ಕೆಯಲ್ಲಿಯೇ ಹೆಪ್ಪುಗಟ್ಟಿ ಸಾಯುತ್ತಿದ್ದವು.

ಡ) ಪಾತ್ರೆಗಳನ್ನು ರಚಿಸುವದಕ್ಕಾಗಲಿ, ಅಥವಾ ಇರಲು ಮನೆಗಳನ್ನು ಕಟ್ಟುವದಕ್ಕಾಗಲೀ, ಅಥವಾ ಆತ್ಮರಕ್ಷಣೆಗೆ ಶಸ್ತ್ರಗಳನ್ನು ತಯಾರಿಸುವದಕ್ಕಾಗಲೀ ಅವನಿಗೆ ಆಯುಧ ಗಳೇ ಇದ್ದಿಲ್ಲ.

ಇ) ಭಾಷೆಯ ಅಭಾವ:—ಮೊದಲು ಪ್ರಾಣಿಗಳಂತೆ ರ್ಥವಿಲ್ಲದ ಬಡಬಡಿಕೆಯ ಸಪ್ಪಳವನ್ನು ಮಾಡುತ್ತಿದ್ದನು. ಂಡಾಂತರದ ಕಾಲಕ್ಕೆ ಗೈದ ದನಿಗಳು ವಿಶಿಷ್ಟಾರ್ಥಗಳನ್ನು ಂದಲಾರಂಬಿಸಿದವು; ಕ್ರೂರ ಪ್ರಾಣಿಗಳ ಅಥವಾ ಳುವ ಗಿಡಗಳ ವಿರುದ್ಧ ಎಚ್ಚರಿಸುವ ಧ್ವನಿಯಾಗತೊ ಗಿತು.

೩. ಕಾಡು ಮನುಷ್ಯನು ತನ್ನ ಕೊರತೆಗಳನ್ನು ತುಂಬಿ ಳ್ಳಲು ವಸ್ತುಗಳನ್ನು ರಚಿಸಿಕೊಳ್ಳಹತ್ತಿದನು.

ಅ) ತನ್ನ ಅತಿಶಯವಾದ ಚಳಿಯಿಂದ ರಕ್ಷಿಸಿಕೊಳ್ಳಲ ಪ್ರಾಣಿಗಳಂತೆ ನೆಲವಲ್ಲಿ ಗುದ್ದು ಹೊಡೆದು ಅದರಲ್ಲಿ ತನ್ನ ಟುಂಬದವರೊಂದಿಗೆ ಇರಹತ್ತಿದನು. ಇದೇ ಮನೆ ಟ್ಟುವದರ ಪ್ರಾರಂಭ.

ಆ) ಗುದ್ದುಗಳನ್ನು ಎಲೆಬಳ್ಳಿಗಳಿಂದ ಮುಚ್ಚಿ, ಕೆಲವು ಪ್ರಾಣಿಗಳನ್ನು ಸೆರೆಹಿಡಿದು ಕೊಂದು ತಿಂದು ಅವುಗಳ ತುಪ್ಪ ವನ್ನು ತನ್ನನ್ನು ಬೆಚ್ಚಗೆ ಇಟ್ಟುಕೊಳ್ಳಲು ಉಪಯೋಗಿಸಿ ಮುಚ್ಚಿಕೊಳ್ಳಲು ಕಲಿತನು. ಇದೇ ಉಡುಗೆಯ ಪ್ರಾರಂಭ.

ಇ) ಬೇಗೆಯಲ್ಲಿ ಸಿಕ್ಕು, ಬೆಂಕಿಯ ಜ್ವಾಲೆಯಲ್ಲಿ ಬೆಂದು ಂಕಿಯು ಕೇವಲ ತನ್ನ ವೈರಿಯಾಗಿರದೆ ಹಿತದ ಗೆಳೆ ಯನೂ ಅಹುದೆಂದು ನಿಶ್ಚಯಿಸಿಕೊಂಡನು ಮತ್ತು ರಿಯುವ ಬಡ್ಡೆಯನ್ನೊಂದು ಎಳೆದು ತಂದು ತನ್ನ ಹಾರವನ್ನು ಬೆಚ್ಚಗಿರಿಸಿದನು. ಇದೇ ಬೆಂಕಿಯ ಶೋಧ

ಈ) ಆಕಸ್ಮಿಕವಾಗಿ ಬೆಂಕಿಯಲ್ಲಿ ಬಿದ್ದು ಸತ್ತ ಕೋಳಿಯ ರಿಯೊಂದನ್ನು ತಿಂದು ಅದು ಮತ್ತಿಷ್ಟು ರುಚಿಕರವೆಂದು ಂಡುಕೊಂಡ. ಇದೇ ಅಡುಗೆಯ ಪ್ರಾರಂಭ.

ಉ) ಆಡುವ ಮಕ್ಕಳು ಅಕಸ್ಮಾತ್ತಾಗಿ ಎರಡು ಕಲ್ಲು ಂಡುಗಳನ್ನು ಕಟಿಯಲು ಕ್ರಿಡಿಯೆದ್ದಿತು. ಇದೇ ಚಕ-ಮಕಿ ಕಲ್ಲುಗಳನ್ನು ಗೊತ್ತುಹಚ್ಚಿತು. ಹೀಗೆ ಬೆಂಕಿಯನ್ನು ಹೊತ್ತಿಸುವ ಕೆಲಸವನ್ನು ತನ್ನ ಹತೋಟಿಯಲ್ಲಿ ತಂದು ಕೊಂಡ.

ಊ) ಚಳಿಗಾಲಕ್ಕಾಗಿ ಆಹಾರವನ್ನು ಕಾಯ್ದಿಡಬೇಕಾದ್ದ ರಿಂದ ಸೂರ್ಯಕಿರಣಗಳಿಂದಾಗಲೀ ಬೆಂಕಿಯಿಂದಾಗಲೀ ಸುಟ್ಟು ಗಟ್ಟಿಮಾಡಿದ ಮಣ್ಣಿನ ಪಾತ್ರೆಗಳನ್ನು ರಚಿಸಿ ಕೊಂಡನು. ಇದೇ ಕುಂಬಾರಕೆಯ ವತ್ತು ಪಾತ್ರೆಪಡಗ-ಗಳ ರಚನೆಯ ಪ್ರಾರಂಭ.

ಋ) ಆತ್ಮರಕ್ಷಣೆಗಾಗಲೀ ಬೇಟೆಗಾಗಲೀ ಕಲ್ಲನ್ನೇ ಹದನ ಮಾಡಿ ಕೊಡಲೆಗಳನ್ನು ಮಾಚಿಕೊಳ್ಳಲು ಅವನು ತೊಡಗಿದನು ಮುಂದೆ ವಸ್ತುಗಳನ್ನು ರಚಿಸುವಲ್ಲಿ ಕೈಯ ಸಹಾಯಕ್ಕಾಗಿ ಆಯುಧ ಸಲಕರಣೆಗಳನ್ನು ಅಣಿಗೊಳಿಸಿ ಕೊಳ್ಳುವದು, ಇದೇ ಪ್ರಕಾರ ಪ್ರಾರಂಭವಾಯಿತು.

ಋ) ಪ್ರಾಣಿಗಳನ್ನು ಹತ್ತುವದಕ್ಕೂ ನದಿಯಲ್ಲಿ ತೇಲುವ ಕಟ್ಟಿಗೆಯ ಮುಂಡಿಗೆಗಳನ್ನು ನೀರಿನ ಮೇಲೆ ಅಲೆ ದಾಡುವದಕ್ಕೂ ಉಪಯೋಗಿಸಹತ್ತಿದನು. ಇದೇ ಸಾಗಾ-ಟದ ಸಾಧನೆಗಳ ಪ್ರಾರಂಭ.

ಎ) ನೆಲದಲ್ಲಿ ಹುಗಿದಿಟ್ಟ ಕಾಡು ಹಣ್ಣುಗಳ ಬೀಜಗಳು ಮೊಳೆತು ಚಿಗಿತು ಗಿಡಬಳ್ಳಿಗಳಾದವೆಂಬುದನ್ನು ಆಕಸ್ಮಿಕ ವಾಗಿ ಕಂಡುಹಿಡಿದನು. ಇದೇ ಒಕ್ಕಲತನ ಪ್ರಾರಂಭ.

ಏ) ಋತುಗಳ ಬದಲಾವಣೆ, ಹಾಗು ಮನುಷ್ಯ, ಸಸ್ಯ ವರ್ಗಗಳ ಮೇಲೆ ಚಳಿ, ಮಳೆ, ಬೇಗೆ (ಉಷ್ಣತೆ)ಗಳಿಂದಾದ ಪರಿಣಾಮಗಳನ್ನು ನಿರೀಕ್ಷಿಸುತ್ತ ಬಂದದ್ದರಿಂದ ನೈಸರ್ಗಿಕ ಚಮತ್ಕಾರಗಳಲ್ಲಿ ಅವನಿಗೆ ಅಭಿರುಚಿ ಹುಟ್ಟತೊಡಗಿತು.

ಶಿಕ್ಷಕರು ಈ ಸೂಚನೆಗಳನ್ನು, ಎಳೆಯ ಮಕ್ಕಳಿಗೆ ಇತಿ ಹಾಸ ಕಲಿಸುವಾಗ ತಮ್ಮ ಪದ್ಧತಿಗೆ ಜೀವಕಳೆ ತುಂಬಲು ಉಪಯೋಗಿಸುವರೆಂದು ಆಶಿಸಲಾಗಿದೆ.

ಕಂಬನಿ

ಶ್ರೀ. ಈಶ್ವರಪ್ಪ ತಂಬದ ಅವರ ಅಕಾಲಿಕ ನಿಧನ

ಕನ್ನಡ ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಶೈಕ್ಷಣಿಕ ಪ್ರಗತಿಗಾಗಿ, ಏಕೀಕರಣದ ಸಾಧನೆಗಾಗಿ ಹೆಣಗಾಡುವವರಲ್ಲಿ ಒಬ್ಬರಾದ ಶ್ರೀ. ತಂಬದವರು ಇದೇ ತಿಂಗಳದ ೨೦ ನೇ ತಾರೀಖಿನ ದಿನ ಪುಣೆಯಲ್ಲಿ ಹೃದಯ ವಿಕಾರದಿಂದ ಆಕಸ್ಮಿಕವಾಗಿ ನಿಧನ ಹೊಂದಿದರೆಂಬ ವಾರ್ತೆ ಧಾರವಾಡದಲ್ಲಿ ಹರಡಿದ ಕೂಡಲೇ ವಾತಾವರಣದಲ್ಲಿ ಮಂಜು ಮುಸುಕಿದಂತಾಯಿತು. ಅವರ ಗೆಳೆಯರು, ವಿದ್ಯಾರ್ಥಿಗಳು, ಅಧಿಕಾರಿಗಳು ಈ ದುರ್ವಾರ್ತೆಯನ್ನು ಕೇಳಿ, ಸಿಡಿಲು ಬಡಿದಂತಾಗಿ ಮೂಕ-ವಿಸ್ಮಿತರಾದರು. ಊರಲ್ಲೆಲ್ಲ ಹೆಚ್ಚಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ದುಡಿಯುತ್ತಿರುವ ಜನರ ಕಣ್ಣೀರ ಕೋಡಿ ಹರಿಯಿತು. ತಂಬದ ಮಾಸ್ತರರು ಜನಪ್ರಿಯ ಶಿಕ್ಷಕರಾಗಿದ್ದರು. ನುರಿತ ಶಿಕ್ಷಣ ತಜ್ಞರಾಗಿದ್ದರು. ಸರಸ ಬರಹಗಾರರಾಗಿದ್ದರು. ಕಾರ್ಯತತ್ಪರತೆ, ಸತತೋದ್ಯೋಗ ಕಾರ್ಯ ನಿರ್ವಹಣ ಶಕ್ತಿ ಅವರಲ್ಲಿ ಮಿಗಿಲಾಗಿತ್ತು. ಯಾವದಾದರೊಂದು ಕಾರ್ಯವನ್ನು ಅವರು ವಹಿಸಿಕೊಂಡಲ್ಲಿ ಅದರ ಪರಿಪಕ್ವ ಪರಿಪೂರ್ಣತೆ ಹೊಂದಿಸಿದ ವಿನಹ ಅವರಿಗೆ ವಿರಾಮವಿರಲಿಲ್ಲ. ಕೆಲವು ದಿನಗಳ ವರೆಗೆ, ಧಾರವಾಡದ ಸರಕಾರೀ ಗಂಡು ಮಕ್ಕಳ ಹಾಗೂ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜುಗಳಲ್ಲಿ ಹಾಗೂ ಧಾರವಾಡ ಜಿ ಯಲ್ಲಿ ಅಸಿಸ್ಟಂಟ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟ ರಾಗಿ ಕೆಲಸ ಮಾಡಿ ಹೆಸರು ಪಡೆದರು, ಶಿಕ್ಷಣಾಧಿಕಾರಿಗ ಅವರ ಯೋಗ್ಯತೆಯ ಆಳವನ್ನು ಅರಿತುಕೊಂಡು ಮೊ ಮೊನ್ನೆಯೇ ಕನ್ನಡ ಪಠ್ಯಪುಸ್ತಕ ರಚನಾ ಕಮಿಟಿ ಕಾರ್ಯದರ್ಶಿಯನ್ನಾಗಿ ಮಾಡಿದರು. ಆ ಕಾರ್ಯ-ವಿಷ ವಾಗಿಯೇ ಅವರು ಪುಣೆಗೆ ಹೋಗಿದ್ದರು. ಆ ಕಾರ್ಯ-ಚಿ ಯಲ್ಲಿ ಮಗ್ನರಾದಾಗ ಅವರ ದೈಹಿಕ ಜೀವನವು ಕೊ ಗೊಂಡಿತು. ಕಾಯಕದಲ್ಲಿ ನಿರತರಾದಾಗಲೇ ಕೈಲಾ ಪಯಣ ಬೆಳಿಸಿದರು. ಅವರು ಇಂದು ಕನ್ನಡ ನಾಡಿ ಕಣ್ಮರೆಯಾದರು. ಅವರ ಸ್ವಭಾವದಲ್ಲಿಯ ಕೆಲವು ವೈಶಿ ಗಳನ್ನು ನಾವು ಅನುಸರಿಸಿ, ನಾವು ಅವರಂತೆ ಸತತೊ ದ್ಯೋಗಿಗಳಾಗುವದೇ ನಾವು ಅವರಿಗೆ ಉತ್ಕೃಷ್ಟ ರೀತಿಯ ಸಲ್ಲಿಸುವ ಶ್ರದ್ಧಾಂಜಲಿ, ಭಾಷ್ಪಾಂಜಲಿ. ಮೃತರ ಆತ್ಮ ಪರಮೇಶ್ವರನು ಶಾಂತಿಯನ್ನೀಯಲಿ.

—ವೀರೇಶ ಹಿರೇಮಠ, ಧಾರವಾಡ.

ನಾನು ಯಾರು ? ಎಂಬ ಒಗಟಿನ ಪದ್ಯಕ್ಕೆ ಬಂದ ಬಂದ ಉತ್ತರಗಳ

೧೯೪೮ ಅಗಸ್ಟ ತಿಂಗಳದ ಪ್ರಾಥಮಿಕ ಶಿಕ್ಷಣದ ಸಂಚಿಕೆಯಲ್ಲಿ ಅಚ್ಚು ಹಾಕಿಸಲಾದ 'ನಾನು ಯಾರು?' ಎಂಬ ಪದ್ಯಕ್ಕೆ ಕೆಳಗಿನ ಶಾಲೆಗಳಿಂದ ಉತ್ತರಗಳು ಬಂದಿವೆ. ಅವುಗಳಲ್ಲಿ ಒಬ್ಬರ ಉತ್ತರವು ಮಾತ್ರ ತಪ್ಪು ಇದೆ. ಆದ್ದರಿಂದ ಅವರ ಹೆಸರನ್ನು ಕೊಡಲಾಗಿಲ್ಲ. ಸರಿಯಾದ ಉತ್ತರಗಳನ್ನು ಕಳಿಸಿದವರಿಗೆ ನಮ್ಮ ಶುಭಾಶಯಗಳು. ಇದೇ ರೀತಿಯಾಗಿ ಬಾಲಕರು 'ಪ್ರಾಥಮಿಕ ಶಿಕ್ಷಣ ಪತ್ರಿಕೆ'ಗೆ ತಮ್ಮ ನೆರವನ್ನು ಕೊಡಬೇಕೆಂದು ಬಿನ್ನಹ.

ಕನ್ನಡ ಬಾಲಕರು ತಮ್ಮ ಊರಿನ ಹತ್ತಿರದಲ್ಲಿರ ಒಂದು ಐತಿಹಾಸಿಕ ಸ್ಥಳದ ಚಿಕ್ಕ ಹಾಗೂ ಸುಂದರ ವಣ ಯನ್ನು ಬರೆದು ಕಳಿಸಿದಲ್ಲಿ ಮತ್ತು ಅದು ಸಂಪಾ ಮಂಡಳಕ್ಕೆ ಒಪ್ಪಿತವಾದಲ್ಲಿ ಈ ಪತ್ರಿಕೆಯಲ್ಲಿ ಅಚ್ಚುಹಾಕ ಲಾಗುವದು.

'ನಾನು ಯಾರು?' ಎಂಬ ಒಗಟು ಪದ್ಯದ ಉ **ರಾಷ್ಟ್ರಧ್ವಜ.**

ಉತ್ತರ ಕಳುಹಿಸಿದವರು

೧. ಶ್ರೀ. ರಾಮಕೃಷ್ಣ ಭೀಮಪ್ಪಾ ವಡೇಕರ. ಕನ್ನಡ ಗಂಡು ಮಕ್ಕಳ ಶಾಲೆ, ಉಣಕಲ್ಲ (ಹುಬ್ಬಳ್ಳಿ)
೨. ಶ್ರೀ. ಗಂಗಪ್ಪ ವೀರಪ್ಪ ಗದಗ ಸದರ
೩. ಶ್ರೀ. ತಿ. ಗೋ. ಚವಟಿ (೭ನೆಯ ಇಯತ್ತೆ) ಕನ್ನಡ ಗಂಡುಮಕ್ಕಳ ಶಾಲೆ, ಕೋಡ.
೪. ಶ್ರೀ. ಬಸಪ್ಪ ಶಿದರಾಮಪ್ಪ ಹೋಟಗಿ (೭ನೆಯ ಇ.) ಕನ್ನಡ ಗಂಡುಮಕ್ಕಳ ಶಾಲೆ, ಉಣಕಲ್ಲ (ಹುಬ್ಬಳ್ಳಿ)
೫. ಶ್ರೀ. ಸಂಗಯ್ಯ ಬಿ. ಚಿನ್ನಯ್ಯನಮಸ (೭ನೆಯ ಇ.) ಕನ್ನಡ ಗಂಡುಮಕ್ಕಳ ಶಾಲೆ, ಗಜೇಂದ್ರಗಡ.
೬. ಶ್ರೀ. ಸುಂಕಪ್ಪ ಓಲೇಕಾರ (೭ನೆಯ ಇಯತ್ತೆ) ಸದರ

ರ. ಕೃ. ಲಕ್ಕುಂಡಿ, ಪ್ರಧಾನ ಸಂಪಾದಕರು.

ಆರ್ಯರ ಮೂಲ ಸ್ಥಾನ

ಲೇಖಕರು: ಶ್ರೀ. ಎಚ್. ಎಸ್. ದೂದಿಹಳ್ಳಿ ಬಿ. ಏ., ಬಿ. ಟಿ., ಧಾರವಾಡ.

[ಇದರಲ್ಲಿಯ ವಿಚಾರಗಳು ಸಿದ್ಧಾಂತಗಳಲ್ಲವೆಂದು ಇದರ ಲೇಖಕರು ಹೇಳುತ್ತಾರೆ. ಈ ವಿಷಯವಾಗಿ ಹೆಚ್ಚು ಗೊತ್ತಿದ್ದವರು ಬರೆದರೆ ನಾವು ಎತ್ತಿಕೊಡುವೆವು. —ಸಂಪಾದಕರು.)

ಸಾಮಾನ್ಯವಾಗಿ ಅರಿಕೆಯಿದ್ದ ಐದು ಭೂಖಂಡಗಳೊಳಗೆ, ಮೂರು ಖಂಡಗಳಲ್ಲಿ ಆರ್ಯರ ವಂಶಜರು ವಾಸವಾಗಿದ್ದುದನ್ನು ವಿದ್ವಾಂಸರು ಒಪ್ಪುತ್ತಾರೆ. ಯುರೋಪದೊಳಗೆ, ಗ್ರೀಸ, ಆಯರ್‌ಲಂಡ, ಜರ್ಮನಿ, ಇಟಲಿ, ಇಂಗ್ಲಂಡ, ಫ್ರಾನ್ಸ, ನಾರ್ವೆ, ಸ್ವೀಡನಗಳಲ್ಲಿ ಆರ್ಯರ ವಂಶಜರು ನೆಲಿಸಿದರೆಂದು ಊಹಿಸಲಾಗಿದೆ. ಏಶಿಯದಲ್ಲಿ ಹಿಂದುಸ್ತಾನ, ಇರಾಣ ದೇಶಗಳು ಇವರ ವಸತಿಸ್ಥಾನಗಳೆಂದು ಹೇಳಲ್ಪಡುತ್ತವೆ. ದಕ್ಷಿಣ ಅಮೇರಿಕೆಯ ಪೇರೂ, ಮೆಕ್ಸಿಕೋಗಳೂ ಆರ್ಯರು ವಾಸಿಸಿದ್ದ ದೇಶಗಳೆಂದು ಇತ್ತೀಚಿಗೆ ಕಂಡುಹಿಡಿಯಲಾಗಿದೆ. ಈ ಎಲ್ಲ ಜನರ ಪೂರ್ವಜರು ಒಂದೇ ಇದ್ದರೆಂದೂ, ಅವರ ಭಾಷೆ ಮತ್ತು ವಸತಿಸ್ಥಾನಗಳು ಒಂದೇ ಇರಬೇಕೆಂಬುದನ್ನೂ ಬೇರೆ ಹೇಳಬೇಕಾಗಿಲ್ಲ. ಈ ಅನುಮಾನಕ್ಕೆ ಕಾರಣಗಳೂ ಉಂಟು. ಉದಾಹರಣಾರ್ಥವಾಗಿ 'ಗೋ' ಶಬ್ದವು, ಇಂಗ್ಲಿಷ, ಸಂಸ್ಕೃತ, ಏಶಿಯನ್ ಮುಂತಾದ ಭಾಷೆಗಳಲ್ಲಿ ಕೆಲಮಟ್ಟಿಗೆ ಒಂದೇ ತರದ ಉಚ್ಚಾರವನ್ನು ಪಡೆದಿದೆ. ಅದರಂತೆ 'ಅಗ್ನಿ' ಶಬ್ದವು ಲ್ಯಾಟಿನ್ ಭಾಷೆಯ "ಇಗ್ನಸ್" ಶಬ್ದವನ್ನು ಉಚ್ಚಾರದಲ್ಲಿ ಬಹುಮಟ್ಟಿಗೆ ಹೋಲುತ್ತದೆ. ಇವೆಲ್ಲ ಜನಾಂಗಗಳಲ್ಲಿ ದ್ಯೌಃ, ಭಗ, ಅಗ್ನಿ ದೇವತೆಗಳು, ಮತ್ತು ಪ್ರಲಯ ಕಾಲದ ಕಲ್ಪನೆ, ಮುಂತಾದವು ಪ್ರಚಾರದಲ್ಲಿದ್ದುದು ಕಂಡುಬರುತ್ತದೆ. ಈ ಕಾರಣಗಳಿಂದ ಮೇಲ್ಕಾಣಿಸಿದ ಜನಾಂಗಗಳ ಪೂರ್ವಜರು ಒಂದೇ ತರದ ಜನರಿದ್ದು, ಅವರಾಡುವ ಭಾಷೆ, ನೆಲಸಿದ್ದ ವಸತಿಸ್ಥಾನಗಳು ಒಂದೇ ಇರಬಹುದು ಎಂಬ ಊಹೆಯಾಗುತ್ತದೆ. ಆದರೆ ಅವರ ಮೂಲ ಭಾಷೆ ಯಾವದೆಂದು ಇನ್ನೂ ಹುಡುಕಿ ತೆಗೆಯಲ್ಪಟ್ಟಿಲ್ಲ. ಆದರೆ, ಎಲ್ಲ ಭಾಷೆಗಳಲ್ಲಿ ಸಂಸ್ಕೃತ ಭಾಷೆಯೇ ಅತಿ ಪ್ರಾಚೀನ ಭಾಷೆಯೆಂದು ನಿರ್ಣಯಿಸಿದ್ದರಿಂದ, ಸಂಸ್ಕೃತವೇ ಈ ಎಲ್ಲ ಭಾಷೆಗಳ ತಾಯಿ-ನುಡಿಯಿರಬೇಕೆಂದು ಅನುಮಾನಿಸಲಾಗಿದೆ.

ಪಾಶ್ಚಾತ್ಯ ಪಂಡಿತರು ಏಶಿಯದ ಮಧ್ಯ ಭಾಗವನ್ನು ಆರ್ಯರ ಮೂಲಸ್ಥಾನವೆಂದು ಅನುಮಾನ ಪಡುತ್ತಾರೆ. ಇಲ್ಲಿಂದಲೇ ಆರ್ಯರು ಯುರೋಪಖಂಡಕ್ಕೆ ಹೋದರು ಎಂದೂ ಅವರ ತಿಳುವಳಿಕೆ. ಇದಕ್ಕೆ ಆಧಾರವೆಂದು ಪಾರ್ಶಿ ಧರ್ಮ ಗ್ರಂಥ "ಝೆಂಡಾ ಅವೆಸ್ತಾ" ವನ್ನು ಮುಂದೆ ಮಾಡುತ್ತಾರೆ. ಅದರಲ್ಲಿ 'ಅಹೂರ ಮಸ್ಜದ್'ನು (ಪಾರ್ಶಿ ಜನರ ದೇವರು) ಮನುಷ್ಯ ಪ್ರಾಣಿಯನ್ನು ಮೊದಲು ಬ್ಯಾಕ್ಟ್ರಿಯಾದಲ್ಲಿ ಹುಟ್ಟಿಸಿದನೆಂದು ಉಲ್ಲೇಖವಿದೆ. ಆದರೆ, 'ಗಾಯ್ಜರ್' ಮತ್ತು 'ಸ್ಪೇಡರ' ಎಂಬ ಪಾಶ್ಚಿಮಾತ್ಯ ಪಂಡಿತರು, ಆರ್ಯರ ಮೂಲಸ್ಥಾನವು, ಯುರೋಪಖಂಡ —ಅದರಲ್ಲಿಯ ಜರ್ಮನಿಯಲ್ಲಿ— ಇದ್ದಿತೆಂದು ಸ್ಥಾಪಿಸುತ್ತಾರೆ. ಆರ್ಯರ ತಲೆಬುರುಡೆಗಳ ಅವಶೇಷಗಳು ಯುರೋಪಖಂಡದಲ್ಲಿ ಮಾತ್ರ ಸಿಗುವದರಿಂದ ಈ ಅನುಮಾನಕ್ಕೆ ಇನ್ನೂ ಪುಷ್ಟಿ ಬಂದಿದೆ.

ಪೌರ್ವಾತ್ಯ ಪಂಡಿತರ ವಿಚಾರಗಳು ಮೇಲ್ಕಾಣಿಸಿದ ವಿಚಾರಗಳಿಗೆ ತೀರ ವಿರುದ್ಧವಾಗಿವೆ. ಇವರಲ್ಲಿ, ಲೋ. ಬಾ. ಗಂ. ತಿಲಕ ಮತ್ತು ನಾರಾಯಣರಾವ ಪಾವಗೆ ಮುಂತಾದವರು ಹೆಚ್ಚಿನ ಸಂಶೋಧನೆಗಳನ್ನು ಮಾಡಿದ್ದಾರೆ. ಶ್ರೀಯುತ ಪಾವಗೆಯವರು, ಆರ್ಯರ ಮೂಲ ವಸತಿಸ್ಥಾನವು ಹಿಂದುಸ್ತಾನವೇ ಆಗಿದ್ದು, ಏಶಿಯದ ಉಳಿದ ಭಾಗಗಳಿಗೂ, ಯುರೋಪ ಖಂಡಕ್ಕೂ ಇಲ್ಲಿಂದಲೇ ಪಸರಿಸಿದರೆಂದು ಅಭಿಪ್ರಾಯ ಪಡುತ್ತಾರೆ. ಲೋ. ಟಿಳಕರು

ಆರ್ಯರ ಪ್ರಾಚೀನ ಗ್ರಂಥವಾದ ಋಗ್ವೇದವನ್ನು ಸೂಕ್ಷ್ಮವಾಗಿ ಪರಿಶೋಧಿಸಿ, ಆರ್ಯರ ಮೂಲ ವಸತಿ ಸ್ಥಾನವು ಉತ್ತರ ಧ್ರುವದ ಹತ್ತರ ಇದ್ದಿತೆಂದು, ತಮ್ಮ "Arc ic Home in The Vedas" ಎಂಬ ಗ್ರಂಥದಲ್ಲಿ ಸಿದ್ಧ ಮಾಡಿ ತೋರಿಸಿದ್ದಾರೆ. ಅವರು ತಮ್ಮ ಅಭಿಪ್ರಾಯಕ್ಕೆ ವೇದ ಕಾಲದ ಪರಿಸ್ಥಿತಿಯನ್ನು ಆಧಾರವಾಗಿ ಇಟ್ಟುಕೊಂಡಿದ್ದಾರೆ. ಋಗ್ವೇದದಲ್ಲಿ ದೀರ್ಘವಾದ ರಾತ್ರಿಯ ವರ್ಣನೆಗಳಿದ್ದು, ಅವುಗಳಿಂದ ಪಾರು ಮಾಡಿ ಪ್ರಕಾಶವನ್ನು ತೋರಲು ದೇವರಿಗೆ ಮಾಡಿದ ಪ್ರಾರ್ಥನೆಗಳು "ಸೂಕ್ತ" ರೂಪದಲ್ಲಿ ಕಂಡುಬರುತ್ತವೆ. ಉಷಃಕಾಲದ ಅತ್ಯಂತ ಸುಂದರವಾದ ವರ್ಣನೆಯು ಈ ಗ್ರಂಥದಲ್ಲಿದೆ. ಹಿಂದುಸ್ತಾನದಲ್ಲಿಯ ರಾತ್ರಿಗಳ ಅವಧಿಯು ೧೨-೧೩ ತಾಸುಗಳ ವರೆಗೆ ಮಾತ್ರ. ಆದ್ದರಿಂದ ಹೇಳಿಕೊಳ್ಳುವಷ್ಟು ಬೇಜಾರಗೊಳಿಸುವಂಥವಲ್ಲ ಮತ್ತು ನಮ್ಮ ದೇಶಗಳಲ್ಲಿ ಕಾಣುವ ಉಷಃಕಾಲವಾದರೂ ಎಷ್ಟು ಅವಧಿಯದು? ಹೆಚ್ಚೆಂದರೆ ೧ ತಾಸು. ಆದ್ದರಿಂದ ಇಲ್ಲಿಯ ಉಷಃಕಾಲವಾದರೂ ಹೇಳಿಕೊಳ್ಳುವಂಥ ವರ್ಣನೆಯ ವಿಷಯವಾಗಲಾರದು. ದೀರ್ಘಾವಧಿಯ ಉಷಃಕಾಲ ಮತ್ತು ದೀರ್ಘಾವಧಿಯ ರಾತ್ರಿ ಕಾಲಗಳಿರುವ ದೇಶಗಳಲ್ಲಿ ಆರ್ಯರು ಮೊದಲು ಕಂಡಿರಬಹುದಲ್ಲವೆ? ಇಂಥ ಪ್ರದೇಶವು ಉತ್ತರ ಧ್ರುವದ ಸುತ್ತಲೂ ಇಂದಿಗೂ ನೆಲಿಸಿದೆ. ಪರಿಣಾಮವಾಗಿ, ಆರ್ಯರು ಋಗ್ವೇದದ ಕಾಲದಲ್ಲಿ, ಉತ್ತರ ಧ್ರುವದ ಸುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿದ್ದರೆಂದು ಲೋ. ಟಿಳಕರು ಸ್ಥಾಪಿಸುತ್ತಾರೆ. ಅಲ್ಲಿ ಉಷಃಕಾಲದ ಅವಧಿಯು ಮೂರು ತಾಸುಗಳ ವರೆಗೆ- ಇದ್ದು, ರಾತ್ರಿಗಳು ೬ ತಿಂಗಳ ವರೆಗೆ- ಸಾಗುತ್ತವೆ.

ಈ ಪ್ರಕಾರ ಆರ್ಯರು ತಮ್ಮ ಮೂಲ ಸ್ಥಾನದಲ್ಲಿ ಎಷ್ಟೋ ಕಾಲ ಬಾಳಿದರು. ಬಳಿಕ ಹಿಮವೃಷ್ಟಿಯಾಗಿ ಆ ಪ್ರದೇಶವು ವಸತಿಗೆ ಅಯೋಗ್ಯವಾಯಿತು. ಅವರು ಯುರೋಪ ಮತ್ತು ಏಶಿಯದ ಇತರ ಭಾಗಗಳಿಗೆ- ಪಸರಿಸಲು ಇದೇ ಕಾರಣ. ಯುರೋಪಕ್ಕೆ ಹೋದವರು ನಾರ್ವೆ, ಸ್ವೀಡನ್, ಬಾಲ್ಟಿಕ್ ಸಮುದ್ರ, ಲುಥಿಯಾನಿಯಾ, ಜರ್ಮನಿ, ಡೆನ್ಮಾರ್ಕ, ಸ್ವಿಝರ್‌ಲಂಡಗಳ ಮಾರ್ಗವಾಗಿ ಪಸರಿಸಿರಬಹುದು. ಬರಬರುತ್ತ ಇಟಲಿ, ಗ್ರೀಸ ದೇಶಗಳೂ ಇವರ ವಸತಿ ಸ್ಥಾನಗಳಾದವು. ಈ ಸಿದ್ಧಾಂತವನ್ನು ಡಾ. ಸ್ಪೇಡರ ಮುಂತಾದವರು ಸಮರ್ಥಿಸುತ್ತಾರೆ. ಈ ಸಂದರ್ಭದಲ್ಲಿ ಶ್ರೀ. ಪಾವಗೆಯವರ ಸಿದ್ಧಾಂತದ ವಿಸಂಗತತೆಯನ್ನು ಹೇಳಬಹುದು. ಮನುಷ್ಯ ಸ್ವಭಾವವನ್ನು ನೋಡಿದರೆ, ಅವನು ಯಾವಾಗಲೂ ಕಷ್ಟಮಯ ಸ್ಥಿತಿಯಿಂದ ಸುಖಮಯ ಸ್ಥಿತಿಗೆ ಹೋಗಲು ಇಚ್ಛಿಸುತ್ತಾನೆ. ಆದರೆ, ಉತ್ತಮ ಸ್ಥಿತಿಯಿಂದ ಹೀನ ಸ್ಥಿತಿಗೆ ಯಾರೂ ಹೋಗಲು ಇಚ್ಛಿಸುವದಿಲ್ಲ. ಹಿಂದುಸ್ತಾನದಂಥ ಸುಸಮೃದ್ಧ ಮತ್ತು ವಿಸ್ತಾರವಾದ ದೇಶವನ್ನು ಬಿಟ್ಟು, ದೂರದಲ್ಲಿದ್ದ ಉತ್ತರ ಮಹಾಸಾಗರದ ಕಡೆಗೆ ಅವರು ವಸರಿಸಿದರೆಂದು ಸ್ಥಾಪಿಸುವದು ಅಸಮಂಜಸವಾಗುವದು.

ಈ ರೀತಿಯಲ್ಲಿ ಲೋಕಮಾನ್ಯ ಟಿಳಕರ ಸಿದ್ಧಾಂತವು ಹೆಚ್ಚು ಸಮಂಜಸವಾಗಿ ಕಾಣುತ್ತದೆ. ಈ ಸಿದ್ಧಾಂತವನ್ನು ಅನುಸರಿಸಿ ಆರ್ಯರು ತಮ್ಮ ಮೂಲ ಸ್ಥಾನದಿಂದ ಹೊರ ಹೊರಟ ಕ್ರಮವು ಕೆಳಗಿನಂತಿದೆ.

ಉತ್ತರ ಧ್ರುವದಲ್ಲಿ ಆದ ಹಿಮವೃಷ್ಟಿಯು, ಎಲ್ಲ ಕಡೆಗೂ ಒಂದೇ ವೇಳೆಗೆ ಆಗದೆ, ಅದು ಪಶ್ಚಿಮದಿಂದ ಪೂರ್ವ ದಿಕ್ಕಿನ ಕಡೆಗೆ ಸರಿಸುತ್ತ ಹೋದಂತೆ ಕಾಣುತ್ತದೆ. ಮತ್ತು ಅದು ಪಸರಿಸಿದಂತೆ ಆರ್ಯರು ಅದನ್ನು ಬಿಟ್ಟು ಹೋಗಿರಬಹುದು. ಮೊಟ್ಟಮೊದಲು ಸ್ವೀಡನ್ ನಾರ್ವೆಗಳಲ್ಲಿಯ ಜನರು ಡೆನ್ಮಾರ್ಕದ ಕಡೆಗೆ ಸರಿದಿರಬಹುದು. ಇವರೇ ಕಾಲಗತಿಯಲ್ಲಿ "ಟ್ಯೂಟನ್ಸ್" ಎಂಬ ಹೆಸರು ಪಡೆದಿರಬಹುದೆ? ಟ್ಯೂಟನ್ಸರು ಇಂಗ್ಲಂಡ, ಫ್ರಾನ್ಸ, ಆಯರ್ಲಂಡಗಳಲ್ಲಿದ್ದರೆಂಬುದು ನಿರ್ವಿವಾದವು. ಆದರೀಗ ಬಾಲ್ಟಿಕ್ ಸಮುದ್ರದ ದಂಡೆಯಲ್ಲಿದ್ದವರು ಇನ್ನೂ ದಕ್ಷಿಣಕ್ಕೆ ಸರಿದರು. ಸಂಸ್ಕೃತ ಭಾಷೆಗೂ, ಈ ಭಾಗದಲ್ಲಿ ಇಂದು ಆಡುವ ಭಾಷೆಗೂ, ವಿಭಕ್ತಿ, ವಚನ, ಉಚ್ಚಾರಗಳಲ್ಲಿ ಹೆಚ್ಚು ಸಾಮ್ಯವಿದೆ. ಇನ್ನೂ ದಕ್ಷಿಣದಲ್ಲಿರುವ "ಸ್ಲ್ಯಾವ್ಹ" ಜನರು ಸಂಸ್ಕೃತದ ಎಪಿರಿಸ್ಟ (ಸಾಮಾನ್ಯ ಭೂತಕಾಲ) ಪರಫೆಕ್ಟ (ಪೂರ್ಣ ಭೂತಕಾಲ) ಗಳನ್ನು ಇದೂ ವರೆಗೆ ಬಳಸುತ್ತಾರೆ. ಆರ್ಯರ 'ಭಗ' ದೇವತೆಯು ಇಂದಿಗೂ 'ಸ್ಲ್ಯಾವ್ಹ' ಜನರ ಮುಖ್ಯ ದೇವತೆಯೆನಿಸಿದೆ. ಬಹು ದಿನಗಳ ಬಳಿಕ, ಸಂಘರ್ಷಣೆಗಳಿಂದ ಈ ಪರಿಣಾಮವಾಗಿರಬಹುದಲ್ಲವೆ? ಏಶಿಯ ಖಂಡದಲ್ಲಿ ನೆಲಿಸಿದವರು ಕಟ್ಟಕಡೆಗೆ ಹೊರಬಿದ್ದರೆಂದು ಹೇಳಬಹುದು. ಇವರು ತಮ್ಮ ಸಂಗಡ ಋಗ್ವೇದ ಕಾಲದ ಸಂಸ್ಕೃತಿಯನ್ನು ತೆಗೆದುಕೊಂಡು ಹೊರಟರು. ಯುಫ್ರೆಟೀಸ್, ಟಾಯಗ್ರಿಸ ನದಿಗಳ ದಂಡೆಗಳು ಇವರ ವಸತಿ ಸ್ಥಾನಗಳಾದವು. ಆರ್ಯರು ಇನ್ನೂ ದಕ್ಷಿಣಕ್ಕೆ ಸರಿದಂತೆ, ಅವರಿಂದ ಬಂದ

ಸಂಸ್ಕೃತಿ, ವಿಚಾರ, ಆಚಾರಗಳು ಅಲ್ಲಿ ಬೇರೂರಿದವು. ಈ ಸಂಸ್ಕೃತಿಗೆ "ಸುಮೇರಿ" ಸಂಸ್ಕೃತಿ ಎಂದು ವಿದ್ವಾಂಸರು ಕರೆಯುವರು. ಋಗ್ವೇದದ ಇಂದ್ರ-ವೃತ್ರದ ಕಥೆಯು ಈ ಸಂಸ್ಕೃತಿಯಲ್ಲಿಯೂ ಕಂಡುಬರುತ್ತದೆ. ಹೆಸರುಗಳು ಮಾತ್ರ ಬದಲಾವಣೆ ಹೊಂದಿವೆ. ಇಂದ್ರನು ಸುಮೇರಿ ಪಾಜ್ಯಯದಲ್ಲಿ 'ಮರ್ದೂಕ'ನೆಂದು ಕರೆಯಲ್ಪಟ್ಟಿದ್ದಾನೆ. ವೃತ್ರನ ಹೆಸರು 'ತೈಮಾತ'. ಅಲ್ಲದೆ, ಕಾಲಗಣನೆ ದೇವತೆಗಳಲ್ಲಿ ಬಹಳ ಸಾಮ್ಯವಿದೆ. ಬಳಿಕ ಆ ಪ್ರದೇಶದಿಂದ ಹೊರ ಹೊರಟ ಕೆಲವು ಜನರು ಇರಾಣದಲ್ಲಿ ವಾಸ ಮಾಡಿದರು. ಅಲ್ಲಿ ಅವರು ಯಜುರ್ವೇದದಲ್ಲಿ ಹೇಳಿದ ಯಜ್ಞಯಾಗಾದಿಗಳನ್ನು ಬಳಿಕೆಯಲ್ಲಿ ತಂದರು. ಆ ಕಾಲಕ್ಕೆ ಇವರ ಸಂಗಡ ಇದ್ದ ಪಾರ್ಶಿ ಜನರು ಯಜ್ಞಯಾಗಾದಿಗಳನ್ನು ಒಪ್ಪಿಕೊಂಡರು. ಪಾರ್ಶಿ ಜನರಲ್ಲಿ ನೆಲಿಸಿದ ಅಗ್ನಿಯ ಉಪಾಸನೆಯು ಇದರದೊಂದು ಪರಿಣಾಮ. ತದನಂತರ ಹಿಂದುಸ್ತಾನಕ್ಕೆ ಬಂದ ಕೆಲವು ಜನರು ಸಪ್ತಸಿಂಧು ನದಿಗಳ ನಡುವಿನ ಪ್ರದೇಶದಲ್ಲಿ (ಪಂಜಾಬದಲ್ಲಿ) ನೆಲಿಸಿ, ತಮ್ಮ ಸಂಸ್ಕೃತಿಯನ್ನು ಬೆಳಿಸಿದರು. ಕಾಲಗತಿಯಲ್ಲಿ ಇದು ಹಿಂದುಸ್ತಾನದಲ್ಲೆಲ್ಲ ಹಬ್ಬಿತು.

ಈ ರೀತಿಯಲ್ಲಿ ಮೊಟ್ಟಮೊದಲು ಉತ್ತರ ಧ್ರುವದಲ್ಲಿ ನೆಲಿಸಿದ ಮತ್ತು ಸಂಸ್ಕೃತ ಭಾಷೆಯನ್ನಾಡುವ ಜನರು, ತಮ್ಮ ಮೂಲ ಸ್ಥಾನದಿಂದ ಹೊರಗೆ ಬರಹತ್ತಿದರು. ಇವರು ಋಗ್ವೇದವನ್ನು ತಮ್ಮ ಮೂಲಸ್ಥಾನದಲ್ಲಿಯೇ ರಚಿಸಲು ಪ್ರಾರಂಭಿಸಿದ್ದರು. ಕಾಲಗತಿಯಲ್ಲಿ ಇವರು ಹಿಂದುಸ್ತಾನದ ವರೆಗೆ ಬಂದು ಮುಟ್ಟಿದರು. ಎಲ್ಲ ಭಾಷೆಗಳಿಗೆ ಮೂಲ ಭಾಷೆಯಾದ ಸಂಸ್ಕೃತವನ್ನು ಇವರು ತಮ್ಮ ಸಂಗಡ ತಂದರು. ಮತ್ತು ಅದನ್ನು ಬೆಳಿಸಿದರು. ಇವರ ಮಾರ್ಗ ಪಯಣದಲ್ಲಿ ಸಂಪರ್ಕ ಬಂದ ಜನಾಂಗಗಳು ಆರ್ಯರ ಕೆಲವು ಅಂಶಗಳನ್ನು ತೆಗೆದುಕೊಂಡು, ಯೋಗ್ಯಕಂಡಲ್ಲಿ ಅವುಗಳನ್ನು ಬದಲಾಯಿಸಿ, ಸ್ಥಳಿಕ ಪರಿಸ್ಥಿತಿಗಳಿಗೆ ಹೊಂದಿಸಿಕೊಂಡರು. ಆದ್ದರಿಂದ ಶುದ್ಧ ಸಂಸ್ಕೃತ ಭಾಷೆ ಮತ್ತು ವೇದ ಗ್ರಂಥಗಳು ಅವರಲ್ಲಿ ಮೂಲ ಸ್ವರೂಪದಲ್ಲಿ ಉಳಿಯಲಿಲ್ಲ.

(ಧಾರವಾಡದ ವಿದ್ಯಾರ್ಥಿಗಳು ಸಾಮೂಹಿಕ ವ್ಯಾಯಾಮ ಮಾಡುತ್ತಿರುವ ದೃಶ್ಯ)

ಮೂಲ ಶಿಕ್ಷಣದ ಮಹತ್ವ

ಬರೆಹಗಾರ: ಶ್ರೀ. ಸ್ವಾ. ಭೀ. ಕದರಮಂಡಲಿಗಿ ಅ. ಬೀ. ಶಾ. ಹೆ. ಮಾ., ಮೋಟೇಬೆನ್ನೂರ.

೧೯೪೭ ಅಗಸ್ಟ ಹದಿನೈದು ಭಾರತೀಯರಿಗೆಂದೂ ಮರೆಯದ ದಿನವದು. ರಕ್ತರಹಿತ ರಾಜ್ಯಕ್ರಾಂತಿಯಿಂದ ಹಿಂದವು ಸ್ವಾತಂತ್ರ್ಯ ಪಡೆದ ದಿನವದು. ಭಾರತೀಯ ಇತಿಹಾಸದಲ್ಲಿ ಚಿನ್ನದಕ್ಷರಗಳಿಂದ ಬರೆದಿಡುವ ದಿನವದು. ಭಾರತದ ಸ್ವಾತಂತ್ರ್ಯ ಪಡೆದ ಬಗೆಗೆ ಜಗತ್ತೇ ಬೆರಗು ಪಡೆದ ದಿನವದು, ಪೂಜ್ಯ-ಬಾಪೂಜಿಯ ಜೀವವಾಣಿ ಅಮರ ವಾಣಿಯಾದ ಪುಣ್ಯ ದಿನವದು. ಹೆಚ್ಚೇನು, ಬಹು ಕಾಲ ಪಾರತಂತ್ರ್ಯದ ಅಂಧಕಾರದಲ್ಲಿ ಸಿಕ್ಕು ತೊಳಲಿ ಬಳಲಿದ್ದ ಭಾರತದ ಕೆಂಪು ಕೋಟೆಯ ಮೇಲೆ ಸ್ವತಂತ್ರ ರೂಪಿ ಸೌಭಾಗ್ಯ ಸೂರ್ಯನನ್ನು ಕಂಡ ದಿವ್ಯ ದಿನವದು.

ಇದಕ್ಕೆ ವಿಪರೀತವಾಗಿ ದೌರ್ಭಾಗ್ಯಕಾರಿಯಾಗಿ ೧೯೪೮ನೆಯ ಜಾನೇವಾರಿ ಮೂವತ್ತು ಪರಿಣಮಿಸಿ-ಹಿಂಗಳೆದ ದುರ್ದಿನಗಳಲ್ಲಿ ಅಗ್ರಸ್ಥಾನವನ್ನು ಪಡೆಯಿತು. ಭಾರತದ ಭಾಗ್ಯ ವಿಧಾತ, ಸ್ವತಂತ್ರ ಭಾರತದ ನಿರ್ಮಾತೃವೆನಿಸಿದ ಮಹಾತ್ಮಾಗಾಂಧೀಜಿಯು ಕಣ್ಮರೆಯಾದ ಆ ದುರ್ದಿನದ ಕೇಡು ಎಂದೂ ಮರೆಯಲಾಗದ ಕೇಡು.

ಅಂತೆಯೇ ಸ್ವತಂತ್ರ ಹಿಂದುಸ್ಥಾನವಿಂದು ಹಿರಿಯರಿಲ್ಲದ ಮನೆಯಂತೆ, ಗುರುವಿಲ್ಲದ ಮಠದಂತೆ, ಊರುಗೋಲಿಲ್ಲದ ಹುಟ್ಟುಗುರುಡನಂತೆ ಕಕ್ಕಾವಿಕ್ಕಿಯಾಗಿದೆ.

ಒಂದೆಡೆಯಲ್ಲಿ ಧರ್ಮಾಂಧತೆಯಿಂದ ಸ್ವಜನರ ರಕ್ತದ ಕೋಡಿ ಹರಿಯುತಿದೆ; ಮತ್ತೊಂದೆಡೆಯಲ್ಲಿ ನಿರಾಶ್ರಿತರ ಆರ್ತ ಕೂಗು ಆಸೇತು ಹಿಮಾಚಲದ ವರೆಗೆ ಕರ್ಣ ಪಟಲ ಭೇದಿಸುವಂತೆ ಕಿರಿಚುತಿದೆ. ಜೀವನಕ್ಕೆ ಅತ್ಯಾವಶ್ಯಕಗಳಾದ ಆಹಾರ-ಆಶ್ರಯ-ಆಚ್ಛಾದನೆಗಳ ಅಭಾವ-ದುರ್ಭಾವಗಳ ದುರಂತ ದೃಶ್ಯಗಳು ಭಾರತದ ಮೂಲೆ-ಮೂಲೆಗಳಲ್ಲಿ ತಾಂಡವವಾಡುತಿವೆ. ಭಾರತೀಯ ಮಹಿಳೆಯರ ಮಾನ ಬಂಗದ ದುರದೃಷ್ಟಗಳನ್ನು ಕೇಳಿ ಕೇಳಿ ಮನ ಮರುಗುತಿದೆ. ಎದೆ ಬಿರಿಯುತಿದೆ!!

ಸ್ವಾತಂತ್ರ್ಯದ ನಂತರದಲ್ಲಿ ಭಾರತದ ಈ ಪಾಡು ಉಂಟಾದೀತೆಂಬ ಕನಸು ಕೂಡ ನಮ್ಮ ಜನನಾಯಕರಿಗೆ ಬಿದ್ದಿರಲಿಲ್ಲ: ಗುಲಾಮಗಿರಿಯ ಕಾಲದ ಕಷ್ಟಗಳೆಲ್ಲ ದೂರಾಗಿ ಮುಂಬರುವ ದಿನಗಳೆಲ್ಲ ಕ್ರಮೇಣ ಸುಖದ ದಿನಗಳೆಂದು ಎಣಿಸಿದವರ ಎಣಿಕೆ ತಪ್ಪಾಗಹತ್ತಿದೆ. ಭಾರತದ ಪೂರ್ವಾರ್ಜಿತ ದಿವ್ಯ ಸಂಸ್ಕೃತಿಗೆ ಬಲವಾದ ಪೆಟ್ಟು ತಗಲಿದೆ. ಸಹ್ಯ ನಮ್ಮವರ ಮನಶ್ಶಾಂತಿ ಕದಡಿದೆ. ಬಾಳ್ಕೆ ಭಾರವಾಗಿದೆ. ಸ್ವಾತಂತ್ರ್ಯದ ಫಲಿತದಲ್ಲಿ ವಿಪರೀತವನ್ನು ಉಂಟುಮಾಡುವ ವಿಚಿತ್ರ ಘಟನೆಗಳಿಂದ ಭಾರತವು ಜರ್ಜರಿತವಾಗಿದೆ. ಇದಕ್ಕಾಗಿ ಭಾರತದ ಜನನಾಯಕರು ಮುಂದುಗಾಣದವರಾಗಿ ತಪಿಸುತ್ತಿದ್ದಾರೆ.

ನಮ್ಮವರ ಕಲ್ಪನೆಗಿಂತ ಮುಂಚಿತವಾಗಿ ರಾಜ್ಯಸೂತ್ರಗಳು ನಮ್ಮವರ ಕೈಯಲ್ಲಿ ಕೊಡಲ್ಪಟ್ಟವು. ಎಂದಿನಿಂದಲೂ ಏಕಸೂತ್ರತೆ, ಏಕ ಸಂಸ್ಕೃತಿಗಳಿಂದ ಆಸೇತು ಹಿಮಾಚಲದ ವರೆಗೆ ಒಂದೇ ಒಂದಾಗಿದ್ದ ಹಿಂದವು ಇಬ್ಭಾಗ ಮಾಡಲ್ಪಟ್ಟಿತು. ಅನೈಸರ್ಗಿಕವಾದ ಈ ಭೇದ-ಕೊಡಲಿಯ ಕಡಿತದಿಂದ ಅಶಾಂತಿ ಎಲ್ಲೆಲ್ಲೂ ಪಸರಿಸಿತು.

ಸ್ವಾತಂತ್ರ್ಯ ಸಮರದ ಆ ರಾಷ್ಟ್ರೀಯ ಯಜ್ಞದಲ್ಲಿ ಕೆಲವೇ ಋತ್ವಿಜರು (ವ್ಯಕ್ತಿಗಳು) ಭಾಗಿಗಳಾದ ಪ್ರಯುಕ್ತ ಜನಸಾಮಾನ್ಯರಿಗೆ ಸ್ವಾತಂತ್ರ್ಯದ ಕಲ್ಪನೆಯೇ ಇಲ್ಲದಂತಾಗಿದೆ.

ಇಂದು ಭಾರತದಲ್ಲಿ— ಫಲದ್ರೂಪ ಭೂಸಂಪತ್ತಿ, ಸಾಕಷ್ಟು ವೃಷ್ಟಿ, ನದೀ ಜಲಗಳ ಅನುಕೂಲ ಪರಿಸ್ಥಿತಿ, ವಿಪುಲ ಜನ-ಧನ ಸಂಪತ್ತಿ ಇದ್ದರೂ ಜೀವನಾವಶ್ಯಕಗಳಾದ ಆಹಾರ-ಆಶ್ರಯ-ಆಚ್ಛಾದನೆಗಳಿಗಾಗಿ ಪರರ ಮೋರೆ ನೋಡಬೇಕಾಗಿದೆ. ನಮ್ಮ ಸಂಪತ್ತಿಯನ್ನು ನಮಗೆ ಹಿತವಾಗುವಂತೆ ಉಪಯೋಗಿಸಿಕೊಳ್ಳುವ ಬುದ್ಧಿ ಭಾವದ ಅಭಾವವೇ ಇದರ ಮೂಲ!

ರಾಷ್ಟ್ರೀಯತ್ವಕ್ಕೆ ಆಜನ್ಮ ಶತ್ರುಗಳಾದ ಜಾತ್ಯಂಧತೆ, ಪಕ್ಷಾಂಧತೆಗಳು ಅಧಿಕಾಧಿಕವಾಗಿ ಉಬ್ಬೇಳುತ್ತಿವೆ.

ಆಂಗ್ಲ ಪ್ರಭೃತಿಗಳಿಂದ ಪ್ರಣೀತವಾದ ಮೆಕಾಲೇ ಶಿಕ್ಷಣದ ಪರಿಣಾಮವಾಗಿ ಅತ್ಯುಚ್ಚ ಹಿಂದೂ ಸಂಸ್ಕೃತಿಯು ರಾಹುಗ್ರಸ್ತ ಚಂದ್ರನಂತೆ ಮಸಳಿಸಿ ಹೋಗಿದೆ.

ಇವೆಲ್ಲ ರೋಗ ನಿವಾರಣೆಗೆಂದೇ ಬಾಪೂಜಿಯವರ್ಯ ವಿಧಾಯಕ ಕಾರ್ಯಕ್ರಮಗಳೆಂಬ ಮದ್ದನ್ನು ನಮ್ಮವರ ಕೈಯಲ್ಲಿ ಕೊಟ್ಟಿದ್ದು. ಅವರ ಆ ವಿಧಾಯಕ ಕಾರ್ಯಕ್ರಮಗಳೆಲ್ಲ ಯಶಸ್ವಿಯಾಗಿದ್ದರೆ, ಸದ್ಯಃಕಾಲದ ದುರಂತ ವಿಪ್ಲವಗಳಿಗೆ ಆಶ್ರಯವೇ ಸಿಕ್ಕುತ್ತಿರಲಿಲ್ಲ.

ಆದುದಾಯಿತು; ಇನ್ನಾದರೂ ಆ ದಿವ್ಯಾತ್ಮನ, ಆ ಅಮರ ವಿಧಾಯಕ ಕಾರ್ಯಕ್ರಮಗಳಿಂದ ಸಾಮಾನ್ಯ ಜನತೆಯನ್ನು ತರಬೇತುಗೊಳಿಸಬೇಕು.

ಇಷ್ಟೇ ಆದರೆ ತೀರದು. ಇಂದು ಸಾಲೆಗಳಲ್ಲಿ ಕಲಿಯುತ್ತಿರುವ ಬಾಲಕರೇ ಭವಿಷ್ಯತ್ಕಾಲದ ರಾಷ್ಟ್ರಪಾಲಕರು; ಅವರೇ ಸ್ವರಾಜ್ಯ ನಿಲಯದ ಆಧಾರ-ಸ್ತಂಭರು; ಭವಿಷ್ಯತ್ಕಾಲದ ಆಗು-ಹೋಗುಗಳ ವಿಧಾತೃಗಳು ಅವರೇ! ಇಂದು ನಮ್ಮ ಜನನಾಯಕರಿಂದ ರೂಪಿಸಲ್ಪಡುತ್ತಿರುವ ಯೋಜನೆಗಳ ಸಂಯೋಜಕರೂ, ಪುರಸ್ಕರ್ತರೂ, ಕಾರ್ಯಕರ್ತರೂ ಅವರೇ!

ಅದಕ್ಕಾಗಿ ನಮ್ಮ ಭವಿಷ್ಯದ ಭಾಗ್ಯ ಸಂಪತ್ತು-ಅಂದರೆ ಬೀಳಿಗೆಯು ಈಗ ದೊರೆತ ಸ್ವಾತಂತ್ರ್ಯವನ್ನು ಅಬಾಧಿತವಾಗಿ ಕಾಯ್ದುಕೊಳ್ಳಲು ಸಮರ್ಥವಾಗುವಂತೆಯೂ, ಮಸಳಿಸಿದ ಭಾರತೀಯ ಉಚ್ಚ ಸಂಸ್ಕೃತಿಯನ್ನು ಪುನರಪಿ ಉಜ್ವಲಗೊಳಿಸುವಂತೆಯೂ, ಸ್ವಾವಲಂಬನ ಜೀವನ ಸಾಗಿಸುವವರಾಗುವಂತೆಯೂ ತರಬೇತುಗೊಳಿಸುವದು ರಾಷ್ಟ್ರದ ಆದ್ಯ ಕರ್ತವ್ಯವಾಗಿದೆ. ಭಾವೀ ಭಾರತದ ಭಂಡವಳವನ್ನು ಸಿದ್ಧಿಗೊಳಿಸುವ ಸರ್ವಾಂಗಪೂರ್ಣ ಸಾರ್ವತ್ರಿಕ ಶಿಕ್ಷಣವು ನಮ್ಮ ಬಾಲಕರಿಗೆ ಅತ್ಯವಶ್ಯವಾಗಿ ಬೇಕಾಗಿದೆ.

ಆಂಗ್ಲ ಮಹಾಶಯರ ಆಳಿಕೆಯಲ್ಲಿ ಸುಶಿಕ್ಷಿತರ ಸಂಖ್ಯೆ ೧೦:೧೦ ಈ ಪ್ರಮಾಣಕ್ಕೆ ಮುಟ್ಟಬೇಕಾದದು ಅಸಾಧ್ಯವಾಯಿತು. ಅದೆಂತಹ ಶಿಕ್ಷಣ, ಮೆಕಾಲೆ ಭಾರತವನ್ನು ಹತವೀರ್ಯಗೊಳಿಸಲು ಮಾಯದಿಂದ ರೂಪಿಸಿದ ಸಾಕ್ಷರೀ ಶಿಕ್ಷಣ! ಅಂತೆಯೇ ಇಂದು ದೊಡ್ಡ ದೊಡ್ಡ ಪದವೀಧರರು ಆಹಾರ-ಆಶ್ರಯ-ಆಚ್ಛಾದನೆಗಳ ಅಭಾವದಿಂದ ಸ್ವಾವಲಂಬನ ಜೀವಿಗಳಾಗದೆ ನೌಕರಿಗಾಗಿ ಅಂಡಲೆಯುತ್ತಿದ್ದಾರೆ. ಉಪಾಯವಿಲ್ಲ.

ಈ ವರೆಗೆ ಕೊಟ್ಟ ಶಿಕ್ಷಣದಲ್ಲಿ–ಪುಸ್ತಕಗಳೇ ಆಧಾರಗಳು. ಈ ಪುಸ್ತಕೀ ಶಿಕ್ಷಣವೇ ನಮ್ಮನ್ನಿಷ್ಟು ಹತವೀರ್ಯರನ್ನಾಗಿ ಮಾಡಿದೆ. ಇದನ್ನು ಎಲ್ಲರೂ ಏಕಕಂಠದಿಂದ ಒಪ್ಪುತ್ತಿರುವರು.

ಸಾಲೆಯಲ್ಲಿ ಕಲಿಯುವದೊಂದು ತೆರೆ! ಅಂದಿನ ಜೀವನದ ಇರುವಿಕೆ ಮತ್ತೊಂದು ತೆರೆ! ಹೀಗಾಗಿ ಜೀವನಕ್ಕೆ ಹೊರತಾಗಿ ಸಾಗಿದ ಈ ಅಕ್ಷರೀ ಶಿಕ್ಷಣ! ಅಲ್ಲ! ಅಲ್ಲ!! ಮೆಕಾಲೇ ದೊರೆಗಳ ನೌಕರೀ ಶಿಕ್ಷಣವೇ ನಮ್ಮನ್ನಿಷ್ಟು ದುರ್ದೆಶೆಗೆ ಈಡು ಮಾಡಿದ್ದು....

ಎಷ್ಟು ಹೇಳಲಿ? ಆ ಪುಸ್ತಕೀ ಶಿಕ್ಷಣವೇ ನಮ್ಮನ್ನು ಕೂಳುಗೇಡಿಗಳನ್ನಾಗಿ ಮಾಡಿದ್ದು! ಆ ಪುಸ್ತಕೀ ಶಿಕ್ಷಣವೇ ನಮ್ಮನ್ನು ಸ್ಥಾನಗೇಡಿಗಳನ್ನಾಗಿ ಮಾಡಿದ್ದು. ಆ ಪುಸ್ತಕೀ ಶಿಕ್ಷಣವೇ ನಮ್ಮನ್ನು ಸ್ವಾಭಿಮಾನಶೂನ್ಯರನ್ನಾಗಿ ಮಾಡಿದ್ದು. ಆ ಪುಸ್ತಕೀ ಶಿಕ್ಷಣವೇ ನಮ್ಮನ್ನು ಪರಾವಲಂಬಿಗಳನ್ನಾಗಿ ಮಾಡಿದ್ದು! ಈ ಶಿಕ್ಷಣಕ್ಕೆ ಶತಶಃ ವಂದನೆಗಳನ್ನರ್ಪಿಸಿ ಸ್ವತಂತ್ರ ಹಿಂದುಸ್ಥಾನದ ಉಜ್ವಲ ಭವಿಷ್ಯವನ್ನು ಸಾರ್ಥಕಗೊಳಿಸಲು ತಕ್ಕುದಾದ ಶಿಕ್ಷಣದ ವಿನಾ ನಮಗಿನ್ನು ಗತಿಯಿಲ್ಲ. ಬೆಳೆಯುತ್ತಿರುವ ಬಾಲಕರ ಸುತ್ತಲೂ ಆವರಿಸಿರುವ ನೈಸರ್ಗಿಕ-ಆರ್ಥಿಕ-ಸಾಮಾಜಿಕ ಪರಿಸ್ಥಿತಿಗಳಿಗೆ ಸಮನ್ವಯಿಸುವ ಸಂಜೀವ್ಯ ಶಿಕ್ಷಣವು ನಮ್ಮ ರಾಷ್ಟ್ರಕ್ಕೀಗ ಅತ್ಯಗತ್ಯವಾಗಿದೆ.

ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದ-ಉಚ್ಚ ಭಾರತ ಸಂಸ್ಕೃತಿಗೆ ಅರದಾಳ ಹತ್ತತೊಡಗಿವೆ. ಇಂದು ನಮ್ಮ ಶಿಕ್ಷಣ ಭೂಮಿಕೆಯಲ್ಲಿ ಸಾಮಾಜಿಕ ಶಿಕ್ಷಣದ ಅಭಾವವು ಒಡೆದು ಕಾಣುತ್ತಿದೆ! ಅಂತೆಯೇ ಭಾರತದಲ್ಲೆಲ್ಲ ದುರಂತ ತಾಂಡವಗಳು ನಿರಂಕುಶವಾಗಿ ಸಾಗಿವೆ.

ಇವೆಲ್ಲ ಲೋಪದೋಷಗಳನ್ನು ಮಹಾತ್ಮರಿಂದ ಪ್ರಣೀತವಾದ ವರ್ಧಾ (ಮೂಲ) ಶಿಕ್ಷಣವು ನಿರ್ಮೂಲನಗೊಳಿಸಿ ಭಾರತೀಯರಲ್ಲಿ ಅದಕ್ಕೆ ತಕ್ಕುದಾದ ನವಚೈತನ್ಯವನ್ನು ತುಂಬುವದೆಂದು ಶಿಕ್ಷಣ ತಜ್ಞರು ಊಹಿಸಿದ್ದಾರೆ, ಆಶಿಸಿದ್ದಾರೆ, ಆಶೀರ್ವದಿಸಿದ್ದಾರೆ.

"ಭಾರತವು ಭೂಲೋಕದ ಸಾರವೆಂದು" ಹಿಂದೊಮ್ಮೆ ಖ್ಯಾತಿವೆತ್ತಿತ್ತು. ಭಾರತಾಂಬೆಯ ಒಡಲಲ್ಲಿ ವಿಪುಲ ವಿವಿಧ ಸಂಪತ್ತು ಸನ್ನಿಹಿತವಾಗಿದೆ. ಅದನ್ನು ನಾಡವರೆಲ್ಲ ಸಮ್ಯಕ್ಧ್ವಾಗಿ ಉಪಯೋಗಿಸಲಿಕ್ಕೆ ತಕ್ಕುದಾದ ಔದ್ಯೋಗಿಕ ಶಿಕ್ಷಣವು ನಮ್ಮ ರಾಷ್ಟ್ರಕ್ಕೆ ಅವಶ್ಯವಾಗಿ ಬೇಕೆಂದು ಎಲ್ಲರೂ ಕೇಳುತ್ತಿದ್ದಾರೆ.

ಇದನ್ನಾದರೂ ಮೂಲ ಶಿಕ್ಷಣವು ಸಾಧಿಸುತ್ತಿದೆ. ಒಂದಿಲ್ಲೊಂದು ವಿಧವಾದ ವೃತ್ತಿಯ ಮೂಲಕವೇ ಈ ಶಿಕ್ಷಣ ಸಾಗುತ್ತಿರುವದರಿಂದ ಆಯಾ ವೃತ್ತಿಗಳ ತಾತ್ವಿಕ ಜ್ಞಾನವಾಗಿ ಉಚ್ಚ ವೃತ್ತಿ ಶಿಕ್ಷಣಕ್ಕೆ ಹೆದ್ದಾರಿಯಾಗುವದು.

ಎಲ್ಲಕ್ಕೂ ಮೊದಲು ವಿವಿಧ ಧರ್ಮ, ವಿವಿಧ ಜಾತಿ, ವಿವಿಧ ಪಂಗಡ, ವಿವಿಧ ಪಕ್ಷ, ಇನ್ನೂ ಎಷ್ಟೋ ಬಗೆಯ ವೈವಿಧ್ಯತೆಗಳಿಂದೊಳಗೊಂಡ ಈ ವಿಶಾಲ ಭಾರತದ ಬಾಲಕರ ಬಾಲಭಾವನೆಯಲ್ಲಿ ಸರ್ವವನ್ನೂ ಸಮನ್ವಯಗೊಳಿಸುವ ಸಾಮಾಜಿಕ ಶಿಕ್ಷಣಕ್ಕಂತೂ ಅಗ್ರಸ್ಥಾನ ಕೊಡಬೇಕೆಂದು ನನ್ನ ಮತ! ಇಂದಿನ ವೈವಿಧ್ಯಗಳೇ ಮುಂದೆ ಸಾಗಿದುದಾದರೆ ದೊರೆತ ನಮ್ಮ ಸ್ವಾತಂತ್ರ್ಯವು ಕನಸಿನ ಮಂಡಿಗೆಯಂತಾಗುವಲ್ಲಿ ಸಂದೇಹವಿಲ್ಲ!

ಅದಕ್ಕಾಗಿ ಒಂದು ಕಡೆಯಲ್ಲಿ ಜನಸಾಮಾನ್ಯರನ್ನು ಜಾಗೃತಗೊಳಿಸುವ ವಿಧಾಯಕ ಕಾರ್ಯಕ್ರಮಗಳು ಸಾಗಬೇಕು. ಅಷ್ಟೇ ತೀವ್ರಗತಿಯಿಂದ ಶಿಕ್ಷಣದಲ್ಲಿ ಎಲ್ಲೆಡೆಯಲ್ಲಿ ಮಾರ್ಪಾಟನ್ನುಂಟು ಮಾಡಬೇಕು.

ಅಖಂಡ ತಪ್ಪಸ್ಸಿನಿಂದ ಗಳಿಸಿದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು, ಅದರ ಸುಖವನ್ನು ಜನಸಾಮಾನ್ಯರಲ್ಲಿ ಬೀರಲು ನಮ್ಮ ನಾಡ ಹಿರಿಯರು ಅವಿಶ್ರಾಂತ ತಪಿಸುತ್ತಿದ್ದಾರೆ. ಜನಹಿತಕಾರಿಗಳಾದ ಅನೇಕಾನೇಕ ಯೋಜನೆಗಳನ್ನು ರೂಪಿಸುವಲ್ಲಿ ಮಗ್ನರಾಗಿದ್ದಾರೆ. ಅವರ ಆ ಯೋಜನೆಗಳಲ್ಲಿ ಸಾರ್ವತ್ರಿಕ ಮೂಲ ಶಿಕ್ಷಣವೂ ಇದೆಯೆಂಬಲ್ಲಿ ಸಂದೇಹವಿಲ್ಲ! ಅವಕ್ಕೆಲ್ಲ ಹೊಳೆಯ ನೀರು ಬಳಸಿದಂತೆ ದ್ರವ್ಯ ಸೂರೆಗೊಳಿಸಲಣಿಯಾಗಿದ್ದಾರೆಂಬುದೂ ಸತ್ಯ!

ಆದರೂ ಎಲ್ಲ ಯೋಜನೆಗಳಿಗಿಂತ ಶಿಕ್ಷಣಕ್ಕೇ ಪ್ರಥಮ ಸ್ಥಾನವನ್ನು ಕೊಡಬೇಕೆಂದು ಸರಕಾರಕ್ಕೆ ಒತ್ತಾಯಪಡಿಸಿದರೆ ತಪ್ಪಾಗಲಿಕ್ಕಿಲ್ಲ.

ವಿಶಾಲವಾದ ಹಿಂದೀ ಒಕ್ಕೂಟದಲ್ಲಿ ಸಾರ್ವತ್ರಿಕ ವರ್ಧಾ ಶಿಕ್ಷಣವನ್ನು ಪ್ರಚಾರಗೊಳಿಸಲು ಹೇರಳ ಮೂಲ ಧನ ಬೇಕೆಂಬುದೂ ನಿಜವು. ಹೂದ ಅಭಾವವನ್ನಾಗಲಿ, ಕೊರತೆಯನ್ನಾಗಲಿ ಮುಂದು ಮಾಡದೆ ಸರ್ವಾಂಗಪೂರ್ಣವಾದ ವರ್ಧಾ (ಮೂಲ) ಶಿಕ್ಷಣವನ್ನು ಅತಿ ತೀವ್ರ ಕಾರ್ಯಕಾರಿಯನ್ನಾಗಿ ಮಾಡಿದರೇನೆ ಭಾರತಕ್ಕೆ ಕ್ಷೇಮವಿದೆ! ಯಶವಿದೆ ಬಲವಿದೆ! ಗೆಲುವಿದೆ! ಅಮರತ್ವವಿದೆ!!

ಆರಂಭದ ಮೂಲ ಧನದ ಲೆಕ್ಕಕ್ಕಿಂತ ರಾಷ್ಟ್ರಕ್ಕಾಗುವ ಭವಿಷ್ಯದ ಗಣಿತ ಅಧಿಕಾಧಿಕವಾಗಿದೆ. ಮಾತ್ರವಲ್ಲ— ಮೂಲ ಶಿಕ್ಷಣವು ತಾತ್ವಿಕವಾಗಿ ಸಾಗಿದಲ್ಲಿ ಶಿಕ್ಷಣವು ಸ್ವಾವಲಂಬಿಯಾಗುವದೆಂದು ತಜ್ಞರು ತರ್ಕಿಸಿದ್ದಾರೆ. ಅಂದರೆ ಮೂಲ ಶಿಕ್ಷಣವು ತನ್ನ ವೆಚ್ಚವನ್ನು ನಿಯಮಿತ ಅವಧಿಯಲ್ಲಿ ತಾನೇ ವಹಿಸಿಕೊಳ್ಳುವದೆಂದು ಮಹಾತ್ಮರು ಗಂಟಾಘೋಷವಾಗಿ ಸಾರಿದ್ದಾರೆ.

ಆದ್ದರಿಂದ ದ್ರುತಗತಿಯಿಂದ ಮೂಲ ಶಿಕ್ಷಣದ ಸಾರ್ವತ್ರಿಕ ಪ್ರಸಾರದಲ್ಲಿ ಜನತಾ ಸರಕಾರವು—ಮುಂದು ಬೀಳಬೇಕೆಂದು ಬಿನ್ನವಿಸುತ್ತೇನೆ.

ಜನತೆಯಾದರೂ—ಸರಕಾರದ ಯೋಜನೆಗಳಲ್ಲಿ ಒಮ್ಮನದಿಂದ ಸಹಾಯ ಸಹಾನುಭೂತಿಗಳನ್ನು ನೀಡಬೇಕು.

ಅಷ್ಟೇ ಅಲ್ಲ, ಸ್ಥಾನಿಕ ಸಂಸ್ಥೆಗಳವರೂ, ಸ್ವಂತ ಸಂಸ್ಥೆಗಳವರೂ ಅದೆಷ್ಟೋ ಶಿಕ್ಷಣ ಸಂಸ್ಥೆಗಳ ಸಂಚಾಲಕರಾಗಿದ್ದಾರೆ. ಅವರಾದರೂ ಮೂಲ ಶಿಕ್ಷಣದ ಪರಿಣಾಮದಲ್ಲಿ ಸಾಶಂಕರಾಗದೆ ಪರಿಣಾಮ ನಿರೀಕ್ಷಣೆಯಲ್ಲಿ ಕಾಲವ್ಯಯ ಮಾಡದೆ ಮೂಲ ಶಿಕ್ಷಣದ ಪ್ರಸರಣ ಕಾರ್ಯದಲ್ಲಿ ಆಸಕ್ತಿಯಿಂದ ಮುಂದುಗಬೇಕೆಂದು ಬೇಡಿಕೊಳ್ಳುತ್ತೇನೆ.

ಅದಕ್ಕಾಗಿ ಹಳೆಯ ವಿಚಾರ ಸ್ರಣಾಲಿಯಿಂದ ಬರೆಯಲ್ಪಟ್ಟ ಹೊತ್ತಿಗೆಗಳಿಗೆ ಉತ್ತರ ಪೂಜೆಗೊಳಿಸಿ, ಮೂಲ ಶಿಕ್ಷಣಕ್ಕನುಗುಣವಾದ ಹೊತ್ತಿಗೆ-ಚಿತ್ರ-ನಕಾಶ-ಪಟಗಳನ್ನು ತಯಾರಿಸಬೇಕು.

ಆ ರೀತಿಯಿಂದ ಶಿಕ್ಷಣ ಕೊಡಲು ಸಮರ್ಥರಾದ ಶಿಕ್ಷಕರನ್ನು ತರಬೇತು ಗೊಳಿಸಬೇಕು.

ಆ ಬಗೆಯ ಶಿಕ್ಷಣದಲ್ಲಿ ರವಶಃ ತಪ್ಪದಂತೆ ತಪ್ಪಾ ನಡೆಯುವಂತೆ ದಕ್ಷವಾದ ಮೇಲ್ವಿಚಾರಣೆಯೂ ಅತ್ಯವಶ್ಯವಾಗಿದೆ.

ಮೂಲ ಶಿಕ್ಷಣವು ಸಾರ್ವತ್ರಿಕ ಪ್ರಸಾರವಾದುದಾದರೆ ಭಾರತದ ಭವಿಷ್ಯವು, ಹವಿಷ್ಯವಾಗುವದಲ್ಲದೆ

"ನನ್ನ ಕನಸಿನ ಭಾರತ"

ಎಂದು ಭವಿಷ್ಯ ನುಡಿದ ದಿವಂಗತ ಮಹಾತ್ಮಾಜಿಯ ಕನಸೂ ನನಸಾಗುವದು.

ಜೈಹಿಂದ

ಪ್ರಾಥಮಿಕ ಶಿಕ್ಷಕರು.

ಸಮಾಜದಲ್ಲಿಯ ಅವರ ಸ್ಥಾನ-ಮಾನಗಳನ್ನು ಉತ್ತಮಗೊಳಿಸಲೋಸುಗ ಕಾಯಿದೆಗಳು.

ಮುಂಬಯಿ ಸರಕಾರ ಶಿಕ್ಷಣ ಮತ್ತು ಉದ್ಯೋಗಗಳ ಖಾತೆ
ಪ್ರಕಟನೆ-ಪತ್ರ, ನಂಬರ ೭೧೩೫.

ಮುಂಬಯಿ, ಕೋಟೆ, ೨೬ನೆಯ ಫೆಬ್ರುವರಿ, ೧೯೪೮ನೆಯ ಇಸವಿ.

ಸರಕಾರದ ಪ್ರಕಟನೆ-ಪತ್ರ

ಮುಂಬಯಿ ಸರಕಾರವು ಯಾವತ್ತೂ ದರ್ಜೆಗಳ ಹಾಗೂ ತರಗತಿಗಳ ಶಿಕ್ಷಕರ ಕಾರ್ಯಸಮರ್ಥತೆ, ಜೀವನದ ಮಟ್ಟ ಮತ್ತು ಸಮಾಜದಲ್ಲಿಯ ಅವರ ಪ್ರತಿಷ್ಠೆಗಳನ್ನು ಏರಿಸುವ ಪ್ರಶ್ನೆಯಲ್ಲಿ ಸ್ಥೈರ್ಯ ಮತ್ತು ಉತ್ಸುಕತೆಗಳಿಂದ ಆಸ್ಥೆ ವಹಿಸಿರುವದು. ಈ ದೃಷ್ಟಿಯಿಂದ ಅದು ಈಗಾಗಲೆ ಸರಕಾರಿ ಮತ್ತು ಕೆಲವು ಇತರ ಖಾಸಗಿ ಶಾಲೆಗಳಲ್ಲಿಯ ಶಿಕ್ಷಕರ ವೇತನ ಹಾಗೂ ದರ್ಜೆಗಳನ್ನು ಸುಧಾರಿಸುವದಕ್ಕಾಗಿ ಕೆಲವು ಕಾಯಿದೆಗಳನ್ನು ಸ್ವೀಕರಿಸಿರುವದು ಮತ್ತು ಇತರ ಕೆಲವನ್ನು ಈಗ ಅದು ವಿಚಾರ ಮಾಡಹತ್ತಿರುವದು. ಶಿಕ್ಷಣ ಕ್ಷೇತ್ರದಲ್ಲಿಯ ಆಧುನಿಕ ಕಲ್ಪನೆಗಳ ಹಾಗು ಬೆಳವಣಿಗೆಗಳ ವಿಷಯದಲ್ಲಿ ಶಿಕ್ಷಕರು ಕಾಲಸ್ಥಿತಿಗೆ ಹಿಂದೆ ಬೀಳದಂತೆ ಉಳಿಯಬೇಕೆಂದು ಅವರ ಕಾರ್ಯಸಮರ್ಥತೆಯನ್ನು ಚುರುಕಾಗಿಸುವ ಬೇರೆ ಬೇರೆ ತರದ ಕಿರ್ಪಾಟುಗಳನ್ನೂ (ರಿಫ್ರೆಶರ್ ಕೋರ್ಸಸ್) ಹಾಗು ತರಬೇತಿಯ ಸೌಕರ್ಯಗಳನ್ನೂ ಸರಕಾರವು ಆರಂಭಿಸಿರುತ್ತದೆ; ಮತ್ತು ಅವರಿಗಾಗಿ ಈಗ ಲಭ್ಯವಿರುವ ಸಾಂಸ್ಕೃತಿಕ ಹಾಗು ಉಲ್ಲಾಸದಾಯಕ ಸೌಲಭ್ಯಗಳನ್ನು ಹೆಚ್ಚು ಉತ್ತಮಗೊಳಿಸುವದಕ್ಕಾಗಿ ಕೆಲವು ಯೋಜನೆಗಳನ್ನು ಸರಕಾರವು ಆಸಕ್ತಿಯಿಂದ ಪರಿಶೀಲಿಸುತ್ತಲಿದೆ. ಇದೆಲ್ಲದರೊಂದಿಗೆ, ಪ್ರಾಥಮಿಕ ಶಾಲೆಗಳ ಹಾಗು ಹಾಯಸ್ಕೂಲುಗಳ ಶಿಕ್ಷಕರು ತಮ್ಮ ಶಿಕ್ಷಕ ವೃತ್ತಿಬಲದಿಂದ ತಮಗೆ ಹಕ್ಕಿನಿಂದ ದೊರೆಯಬೇಕಾದ ಸಾಮಾಜಿಕ ಸ್ಥಾನ-ಮಾನಗಳನ್ನು ಯಥಾರ್ಥವಾಗಿ ಅನುಭವಿಸುವದನ್ನು ಕಾಣಬೇಕೆಂದು ಸರಕಾರವು ಆತುರ ಪಡುತ್ತಿದೆ. ಸ್ವತಂತ್ರ ಭಾರತದಲ್ಲಿ ಸ್ಥಾಪಿಸಲ್ಪಡಬೇಕಾಗಿರುವ ಹೊಸ ಸಮಾಜ ವ್ಯವಸ್ಥೆಯಲ್ಲಿ, ಶಿಕ್ಷಕರು ತರುಣ ಪೀಳಿಗೆಯು ತನ್ನ ಕರ್ತವ್ಯಗಳ ಹಾಗು ಹಕ್ಕು ಬಾಧ್ಯತೆಗಳ ಗುಣಗ್ರಹಣವನ್ನು ಆಸಕ್ತಿಯಿಂದ ಮಾಡಿಕೊಳ್ಳುವಂತೆ ಅದಕ್ಕೆ ಶಿಕ್ಷಣ ಕೊಡುವದರಲ್ಲಿ ಮುಖ್ಯ ಪಾತ್ರವನ್ನು ವಹಿಸಬೇಕಷ್ಟೇ ಅಲ್ಲದೆ, ಸಮಾಜದ ಯಾವತ್ತೂ ವರ್ಗಗಳು ಅವರನ್ನು ಗೌರವದಿಂದ ಮತ್ತು ಸರಿಸಮಾನತೆಯಿಂದ ಆದರಿಸಬೇಕು. ಶಿಕ್ಷಕರ ಕೂಡ ತಮ್ಮ ಯಾವತ್ತೂ ವ್ಯವಹಾರಗಳಲ್ಲಿ ವಿಶೇಷವಾಗಿ ಅಧಿಕಾರಿಗಳು ಅವರ ಸಾಮಾಜಿಕ ದರ್ಜೆಯನ್ನು ಶಿಥಿಲಗೊಳಿಸಬಹುದಾದ ಯಾವುದನ್ನೂ ಮಾಡಕೂಡದು. ಈ ಸಂಬಂಧದಲ್ಲಿ, ವಿಶೇಷವಾಗಿ ರೆವ್ಹೆನ್ಯೂ (ಕಂದಾಯ) ಮತ್ತು ಪೋಲೀಸ ಖಾತೆಗಳ ಅಧಿಕಾರಿಗಳ ಲಕ್ಷ್ಯವನ್ನು, ಹಳ್ಳಿಗಾಡಿನ ಪ್ರದೇಶಗಳಲ್ಲಿ ಕೆಲಸ ಮಾಡುವ ಪ್ರಾಥಮಿಕ ಶಾಲಾ-ಶಿಕ್ಷಕರನ್ನು ಯೋಗ್ಯ ಎನಯ ಗೌರವಗಳಿಂದ ಆದರಿಸುವದರ ಮಹತ್ವದ ಕಡೆಗೆ ಎಳೆಯಬಯಸುತ್ತದೆ. ಅಧಿಕಾರಿಗಳು [illegible]ಗಳನ್ನು ಸಂದರ್ಶಿಸುವದಾದರೆ, ಅವರು ಸಭ್ಯ ಸಂ[illegible]ರಂತೆ ಹಾಗೆ ಮಾಡಬೇಕು; ಅವರಿಗೆ ಯಾ[illegible] ಸಾರ್ವಜನಿಕ ಸಮಾರಂಭದ ಸಲುವಾಗಿ [illegible]ಳಾಗಲಿ ಅಥವಾ ಅವುಗಳಲ್ಲಿಯ ಕುರ್ಚಿ, ಮೇ[illegible] ಪೀಠೋಪಕರಣಗಳಾಗಲಿ ಅವಶ್ಯ ಬಿದ್ದರೆ [illegible] ಕಡ್ಡಾಯದ ಕೋರಿಕೆಯೆಂದು ಲಿಖಿತ [illegible] ಅಪ್ಪಣೆಯನ್ನೂ ಹೊರಡಿಸುವ ಅಧಿಕಾರವು [illegible] ಆದರೆ ಆ ಕಾರ್ಯಕ್ಕಾಗಿ ಅವರು ವಿನಂ[illegible] ಸಂಬಂಧಿಸಿದ ಶಿಕ್ಷಕರು ತಮ್ಮ ಸ್ವಂತ ಕಾರ್ಯದ ಕಡೆ ಯೊ[illegible] ಲಕ್ಷ್ಯವಿತ್ತು ವಿನಂತಿಯನ್ನು ಮಾನ್ಯ ಮಾಡುವರು. ಇದೂ ಅಲ್ಲದೆ, ಅಧಿಕಾರಿಗಳು ಶಿಕ್ಷಕರನ್ನು ತಮ್ಮ ಕಚೇರಿಗಳಿಗೆ ಬಂದು ಹಾಜರಿರಬೇಕೆಂದು ಕೇಳುವದಾದರೆ, ಇತರ

ಸ್ಥೆ-
ಪಡಿ-
ರೂಪವಲ್ಲಿ
ಮೂರ ನಡೆಗೆ,
ತರಗತಿ ಸಂಘ
ಕಷ್ಟುಮಟ್ಟಿಗೆ
ತಮ್ಮ ತಮ್ಮ
ಕೆಗಳನ್ನು
ರ್ಥಿ-

"ಭಾರತವು ಭೂಲೋಕದ ಸಾರವೆಂದು" ಹಿಂದೊಮ್ಮೆ ಖ್ಯಾತಿವೆತ್ತಿತ್ತು. ಭಾರತಾಂಬೆಯ ಒಡಲಲ್ಲಿ ವಿಪುಲ ವಿವಿಧ ಸಂಪತ್ತು ಸನ್ನಿಹಿತವಾಗಿದೆ. ಅದನ್ನು ನಾಡವರೆಲ್ಲ ಸಮೃದ್ಧವಾಗಿ ಉಪಯೋಗಿಸಲಿಕ್ಕೆ ತಕ್ಕುದಾದ ಔದ್ಯೋಗಿಕ ಶಿಕ್ಷಣವು ನಮ್ಮ ರಾಷ್ಟ್ರಕ್ಕೆ ಅವಶ್ಯವಾಗಿ ಬೇಕೆಂದು ಎಲ್ಲರೂ ಕೇಳುತ್ತಿದ್ದಾರೆ.

ಇದನ್ನಾದರೂ ಮೂಲ ಶಿಕ್ಷಣವು ಸಾಧಿಸುತ್ತಿದೆ. ಒಂದಿಲ್ಲೊಂದು ವಿಧವಾದ ವೃತ್ತಿಯ ಮೂಲಕವೇ ಈ ಶಿಕ್ಷಣ ಸಾಗುತ್ತಿರುವದರಿಂದ ಆಯಾ ವೃತ್ತಿಗಳ ತಾತ್ವಿಕ ಜ್ಞಾನವಾಗಿ ಉಚ್ಚ ವೃತ್ತಿ ಶಿಕ್ಷಣಕ್ಕೆ ಹೆದ್ದಾರಿಯಾಗುವದು.

ಎಲ್ಲಕ್ಕೂ ಮೊದಲು ವಿವಿಧ ಧರ್ಮ, ವಿವಿಧ ಜಾತಿ, ವಿವಿಧ ಪಂಗಡ, ವಿವಿಧ ಪಕ್ಷ, ಇನ್ನೂ ಎಷ್ಟೋ ಬಗೆಯ ವೈವಿಧ್ಯತೆಗಳಿಂದೊಳಗೊಂಡ ಈ ವಿಶಾಲ ಭಾರತದ ಬಾಲಕರ ಬಾಲಭಾವನೆಯಲ್ಲಿ ಸರ್ವವನ್ನೂ ಸಮನ್ವಯಗೊಳಿಸುವ ಸಾಮಾಜಿಕ ಶಿಕ್ಷಣಕ್ಕಂತೂ ಅಗ್ರಸ್ಥಾನ ಕೊಡಬೇಕೆಂದು ನನ್ನ ಮತ! ಇಂದಿನ ವೈವಿಧ್ಯಗಳೇ ಮುಂದೆ ಸಾಗಿದುದಾದರೆ ದೊರೆತ ನಮ್ಮ ಸ್ವಾತಂತ್ರ್ಯವು ಕನಸಿನ ಮಂಡಿಗೆಯಂತಾಗುವಲ್ಲಿ ಸಂದೇಹವಿಲ್ಲ!

ಅದಕ್ಕಾಗಿ ಒಂದು ಕಡೆಯಲ್ಲಿ ಜನಸಾಮಾನ್ಯರನ್ನು ಜಾಗೃತಗೊಳಿಸುವ ವಿಧಾಯಕ ಕಾರ್ಯಕ್ರಮಗಳು ಸಾಗಬೇಕು. ಅಷ್ಟೇ ತೀವ್ರಗತಿಯಿಂದ ಶಿಕ್ಷಣದಲ್ಲಿ ಎಲ್ಲೆಡೆಯಲ್ಲಿ ಮಾರ್ಪಾಟನ್ನುಂಟು ಮಾಡಬೇಕು.

ಅಖಂಡ ತಪ್ಪಸ್ಸಿನಿಂದ ಗಳಿಸಿದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು, ಅದರ ಸುಖವನ್ನು ಜನಸಾಮಾನ್ಯರಲ್ಲಿ ಬೀರಲು ನಮ್ಮ ನಾಡ ಹಿರಿಯರು ಅವಿಶ್ರಾಂತ ತಪಿಸುತ್ತಿದ್ದಾರೆ. ಜನಹಿತಕಾರಿಗಳಾದ ಅನೇಕಾನೇಕ ಯೋಜನೆಗಳನ್ನು ರೂಪಿಸುವಲ್ಲಿ ಮಗ್ನರಾಗಿದ್ದಾರೆ. ಅವರ ಆ ಯೋಜನೆಗಳಲ್ಲಿ ಸಾರ್ವತ್ರಿಕ ಮೂಲ ಶಿಕ್ಷಣವೂ ಇದೆಯೆಂಬಲ್ಲಿ ಸಂದೇಹವಿಲ್ಲ! ಅವಕ್ಕೆಲ್ಲ ಹೊಳೆಯ ನೀರು ಬಳಸಿದಂತೆ ದ್ರವ್ಯ ಸೂರೆಗೊಳಿಸಲಣಿಯಾಗಿದ್ದಾರೆಂಬುದೂ ಸತ್ಯ!

ಆದರೂ ಎಲ್ಲ ಯೋಜನೆಗಳಿಗಿಂತ ಶಿಕ್ಷಣಕ್ಕೇ ಪ್ರಥಮ ಸ್ಥಾನವನ್ನು ಕೊಡಬೇಕೆಂದು ಸರಕಾರಕ್ಕೆ ಒತ್ತಾಯಪಡಿಸಿದರೆ ತಪ್ಪಾಗಲಿಕ್ಕಿಲ್ಲ.

ವಿಶಾಲವಾದ ಹಿಂದೀ ಒಕ್ಕೂಟದಲ್ಲಿ ಸಾರ್ವತ್ರಿಕ ವರ್ಧಾ ಶಿಕ್ಷಣವನ್ನು ಪ್ರಚಾರಗೊಳಿಸಲು ಹೇರಳ ಮೂಲ ಧನ ಬೇಕೆಂಬುದೂ ನಿಜವು. ಹಣದ ಅಭಾವವನ್ನಾಗಲಿ, ಕೊರತೆಯನ್ನಾಗಲಿ ಮುಂದು ಮಾಡದೆ ಸರ್ವಾಂಗಪೂರ್ಣವಾದ ವರ್ಧಾ (ಮೂಲ) ಶಿಕ್ಷಣವನ್ನು ಅತಿ ತೀವ್ರ ಕಾರ್ಯಕಾರಿಯನ್ನಾಗಿ ಮಾಡಿದರೇನೆ ಭಾರತಕ್ಕೆ ಕ್ಷೇಮವಿದೆ! ಯಶವಿದೆ! ಬಲವಿದೆ! ಗೆಲುವಿದೆ! ಔಮರತ್ವವಿದೆ!!

ಆರಂಭದ ಮೂಲ ಧನದ ಲೆಕ್ಕಕ್ಕಿಂತ ರಾಷ್ಟ್ರಜ್ಞಾನದ ಭವಿಷ್ಯದ ಗಣಿತ ಅಧಿಕಾಧಿಕವಾಗಿದೆ. ಮಾತ್ರವಲ್ಲ- ಮೂಲ ಶಿಕ್ಷಣವು ತಾತ್ವಿಕವಾಗಿ ಸಾಗಿದಲ್ಲಿ ಶಿಕ್ಷಣ ಸ್ವಾವಲಂಬಿಯಾಗುವದೆಂದು ತಜ್ಞರು ತರ್ಕಿಸಿದ್ದಾರೆ. ಅಂದರೆ ಮೂಲ ಶಿಕ್ಷಣವು ತನ್ನ ವೆಚ್ಚವನ್ನು ನಿಯಮಿತ ಅವಧಿಯಲ್ಲಿ ತಾನೇ ವಹಿಸಿಕೊಳ್ಳುವದೆಂದು ಮಹಾತ್ಮರು ಗಂಟಾಘೋಷವಾಗಿ ಸಾರಿದ್ದಾರೆ.

ಆದ್ದರಿಂದ ದ್ರುತಗತಿಯಿಂದ ಮೂಲ ಶಿಕ್ಷಣದ ಸಾರ್ವತ್ರಿಕ ಪ್ರಸಾರದಲ್ಲಿ ಜನತಾ ಸರಕಾರವು--ಮುಂದು ಬೀಳಬೇಕೆಂದು ಬಿನ್ನವಿಸುತ್ತೇನೆ.

ಜನತೆಯಾದರೂ--ಸರಕಾರದ ಯೋಜನೆಗಳಲ್ಲಿ ಒಮ್ಮನದಿಂದ ಸಹಾಯ ಸಹಾನುಭೂತಿಗಳನ್ನು ನೀಡಬೇಕು.

ಅಷ್ಟೇ ಅಲ್ಲ, ಸ್ಥಾನಿಕ ಸಂಸ್ಥೆಗಳವರೂ, ಸ್ವಂತ ಸಂಸ್ಥೆಗಳವರೂ ಅದೆಷ್ಟೋ ಶಿಕ್ಷಣ ಸಂಸ್ಥೆಗಳ ಸಂಚಾಲಕರಾಗಿದ್ದಾರೆ. ಅವರಾದರೂ ಮೂಲ ಶಿಕ್ಷಣದ ಪರಿಣಾಮದಲ್ಲಿ ಸಾಶಂಕರಾಗದೆ ಪರಿಣಾಮ ನಿರೀಕ್ಷಣೆಯಲ್ಲಿ ಕಾಲವ್ಯಯ ಮಾಡದೆ ಮೂಲ ಶಿಕ್ಷಣದ ಪ್ರಸರಣ ಕಾರ್ಯದಲ್ಲಿ ಆಸಕ್ತಿಯಿಂದ ಮುಂದಾಗಬೇಕೆಂದು ಬೇಡಿಕೊಳ್ಳುತ್ತೇನೆ.

ಅದಕ್ಕಾಗಿ ಹಳೆಯ ವಿಚಾರ ಪ್ರಣಾಲಿಯಿಂದ ಬರೆಯಲ್ಪಟ್ಟ ಹೊತ್ತಿಗೆಗಳಿಗೆ ಉತ್ತರ ಪೂಜೆಗೊಳಿಸಿ, ಮೂಲ ಶಿಕ್ಷಣಕ್ಕನುಗುಣವಾದ ಹೊತ್ತಿಗೆ-ಚಿತ್ರ-ನಕಾಶ-ಪಟಗಳನ್ನು ತಯಾರಿಸಬೇಕು.

ಆ ರೀತಿಯಿಂದ ಶಿಕ್ಷಣ ಕೊಡಲು ಸಮರ್ಥರಾದ ಶಿಕ್ಷಕರನ್ನು ತರಬೇತು ಗೊಳಿಸಬೇಕು.

ಆ ಬಗೆಯ ಶಿಕ್ಷಣದಲ್ಲಿ ರವಶಃ ತಪ್ಪದಂತೆ ತತ್ವಪ್ರಕಟನೆಯುವಂತೆ ದಕ್ಷವಾದ ಮೇಲ್ವಿಚಾರಣೆಯೂ ಅತ್ಯವಶ್ಯವಾಗಿದೆ.

ಮೂಲ ಶಿಕ್ಷಣವು ಸಾರ್ವತ್ರಿಕ ಪ್ರಸಾರವಾದುದಾದರೆ ಭಾರತದ ಭವಿಷ್ಯವು, ಹವಿಷ್ಯವಾಗುವದಲ್ಲದೆ

"ನನ್ನ ಕನಸಿನ ಭಾರತ"

ಎಂದು ಭವಿಷ್ಯ ನುಡಿದ ದಿವಂಗತ ಮಹಾತ್ಮಾಜಿಯ ಕನಸೂ ನನಸಾಗುವದು.

ಜೈಹಿಂದ

ಪ್ರಾಥಮಿಕ ಶಿಕ್ಷಕರು.
ಸಮಾಜದಲ್ಲಿಯ ಅವರ ಸ್ಥಾನ-ಮಾನಗಳನ್ನು ಉತ್ತಮಗೊಳಿಸಲೋಸುಗ ಕಾಯಿದೆಗಳು.

ಮುಂಬಯಿ ಸರಕಾರ ಶಿಕ್ಷಣ ಮತ್ತು ಉದ್ಯೋಗಗಳ ಖಾತೆ
ಪ್ರಕಟನೆ-ಪತ್ರ, ನಂಬರ ೭೧೨೫.

ಮುಂಬಯಿ, ಕೋಟೆ, ೨೬ನೆಯ ಫೆಬ್ರುವರಿ, ೧೯೪೮ನೆಯ ಇಸವಿ.

ಸರಕಾರದ ಪ್ರಕಟನೆ-ಪತ್ರ

ಮುಂಬಯಿ ಸರಕಾರವು ಯಾವತ್ತೂ ದರ್ಜೆಗಳ ಹಾಗೂ ತರಗತಿಗಳ ಶಿಕ್ಷಕರ ಕಾರ್ಯಸಮರ್ಥತೆ, ಜೀವನದ ಮಟ್ಟ ಮತ್ತು ಸಮಾಜದಲ್ಲಿಯ ಅವರ ಪ್ರತಿಷ್ಠೆಗಳನ್ನು ಏರಿಸುವ ಪ್ರಶ್ನೆಯಲ್ಲಿ ಸ್ಥೈರ್ಯ ಮತ್ತು ಉತ್ಸುಕತೆಗಳಿಂದ ಆಸ್ಥೆ ವಹಿಸಿರುವದು. ಈ ದೃಷ್ಟಿಯಿಂದ ಅದು ಈಗಾಗಲೆ ಸರಕಾರಿ ಮತ್ತು ಕೆಲವು ಇತರ ಖಾಸಗಿ ಶಾಲೆಗಳಲ್ಲಿಯ ಶಿಕ್ಷಕರ ವೇತನ ಹಾಗೂ ದರ್ಜೆಗಳನ್ನು ಸುಧಾರಿಸುವದಕ್ಕಾಗಿ ಕೆಲವು ಕಾಯಿದೆಗಳನ್ನು ಸ್ವೀಕರಿಸಿರುವದು ಮತ್ತು ಇತರ ಕೆಲವನ್ನು ಈಗ ಅದು ವಿಚಾರ ಮಾಡಹತ್ತಿರುವದು. ಶಿಕ್ಷಣ ಕ್ಷೇತ್ರದಲ್ಲಿಯ ಆಧುನಿಕ ಕಲ್ಪನೆಗಳ ಹಾಗು ಬೆಳವಣಿಗೆಗಳ ವಿಷಯದಲ್ಲಿ ಶಿಕ್ಷಕರು ಕಾಲಸ್ಥಿತಿಗೆ ತಂಡೆ ಬೀಳದಂತೆ ಉಳಿಯಬೇಕೆಂದು ಅವರ ಕಾರ್ಯಸಮರ್ಥತೆಯನ್ನು ಚುರುಕಾಗಿಸುವ ಬೇರೆ ಬೇರೆ ತರದ ಕೋರ್ಸ್‌ಗಳನ್ನೂ (ರಿಫ್ರೆಶರ್ ಕೋರ್ಸಸ್) ಹಾಗು ತರಬೇತಿಯ ಸೌಕರ್ಯಗಳನ್ನೂ ಸರಕಾರವು ಆರಂಭಿಸಿರುತ್ತದೆ; ಮತ್ತು ಅವರಿಗಾಗಿ ಈಗ ಲಭ್ಯವಿರುವ ಸಾಂಸ್ಕೃತಿಕ ಹಾಗು ಉಲ್ಲಾಸದಾಯಕ ಸೌಲಭ್ಯಗಳನ್ನು ಹೆಚ್ಚು ಉತ್ತಮಗೊಳಿಸುವದಕ್ಕಾಗಿ ಕೆಲವು ಯೋಜನೆಗಳನ್ನು ಸರಕಾರವು ಆಸಕ್ತಿಯಿಂದ ಪರಿಶೀಲಿಸುತ್ತಲಿದೆ. ಇದೆಲ್ಲದರೊಂದಿಗೆ, ಪ್ರಾಥಮಿಕ ಶಾಲೆಗಳ ಹಾಗು ಹಾಯಸ್ಕೂಲುಗಳ ಶಿಕ್ಷಕರು ತಮ್ಮ ಶಿಕ್ಷಕ ವೃತ್ತಿಬಲದಿಂದ ತಮಗೆ ಹಕ್ಕಿನಿಂದ ದೊರೆಯಬೇಕಾದ ಸಾಮಾಜಿಕ ಸ್ಥಾನ-ಮಾನಗಳನ್ನು ಯಥಾರ್ಥವಾಗಿ ಅನುಭವಿಸುವದನ್ನು ಕಾಣಬೇಕೆಂದು ಸರಕಾರವು ಆತುರ ಪಡುತ್ತಿದೆ. ಸ್ವತಂತ್ರ ಭಾರತದಲ್ಲಿ ಸ್ಥಾಪಿಸಲ್ಪಡಬೇಕಾಗಿರುವ ಹೊಸ ಸಮಾಜ ವ್ಯವಸ್ಥೆಯಲ್ಲಿ, ಶಿಕ್ಷಕರು ತರುಣ ಪೀಳಿಗೆಯು ತನ್ನ ಕರ್ತವ್ಯಗಳ ಹಾಗು ಹಕ್ಕು ಬಾಧ್ಯತೆಗಳ ಗುಣಗ್ರಹಣವನ್ನು ಆಸಕ್ತಿಯಿಂದ ಮಾಡಿಕೊಳ್ಳುವಂತೆ ಅದಕ್ಕೆ ಶಿಕ್ಷಣ ಕೊಡುವದರಲ್ಲಿ ಮುಖ್ಯ ಪಾತ್ರವನ್ನು ವಹಿಸಬೇಕಷ್ಟೇ ಅಲ್ಲದೆ, ಸಮಾಜದ ಯಾವತ್ತೂ ವರ್ಗಗಳು ಅವರನ್ನು ಗೌರವದಿಂದ ಮತ್ತು ಸರಿಸಮಾನತೆಯಿಂದ ಆದರಿಸಬೇಕು. ಶಿಕ್ಷಕರ ಕೂಡ ತಮ್ಮ ಯಾವತ್ತೂ ವ್ಯವಹಾರಗಳಲ್ಲಿ ವಿಶೇಷವಾಗಿ ಅಧಿಕಾರಿಗಳು ಅವರ ಸಾಮಾಜಿಕ ದರ್ಜೆಯನ್ನು ಶಿಥಿಲಗೊಳಿಸಬಹುದಾದ ಯಾವುದನ್ನೂ ಮಾಡಕೂಡದು. ಈ ಸಂಬಂಧದಲ್ಲಿ, ವಿಶೇಷವಾಗಿ ರೆವ್ಹೆನ್ಯೂ (ಕಂದಾಯ) ಮತ್ತು ಪೋಲೀಸ ಖಾತೆಗಳ ಅಧಿಕಾರಿಗಳ ಲಕ್ಷ್ಯವನ್ನು, ಹಳ್ಳಿಗಾಡಿನ ಪ್ರದೇಶಗಳಲ್ಲಿ ಕೆಲಸ ಮಾಡುವ ಪ್ರಾಥಮಿಕ ಶಾಲಾ-ಶಿಕ್ಷಕರನ್ನು ಯೋಗ್ಯ ವಿನಯ ಗೌರವಗಳಿಂದ ಆದರಿಸುವದರ ಮಹತ್ವದ ಕಡೆಗೆ ಎಳೆಯಬಯಸುತ್ತದೆ. ಅಧಿಕಾರಿಗಳು ಶಾಲೆಗಳನ್ನು ಸಂದರ್ಶಿಸುವದಾದರೆ, ಅವರು ಸಭ್ಯ ಸದ್ಗೃಹಸ್ಥರಂತೆ ಹಾಗೆ ಮಾಡಬೇಕು; ಅವರಿಗೆ ಯಾವದೊಂದು ಸಾರ್ವಜನಿಕ ಸಮಾರಂಭದ ಸಲುವಾಗಿ ಶಾಲಾ-ಕಟ್ಟಡಗಳಾಗಲಿ ಅಥವಾ ಅವುಗಳಲ್ಲಿಯ ಕುರ್ಚಿ, ಮೇಜು ಮೊದಲಾದ ಪೀಠೋಪಕರಣಗಳಾಗಲಿ ಅವಶ್ಯ ಬಿದ್ದರೆ ಅವರ ಸಲುವಾಗಿ ಕಡ್ಡಾಯದ ಕೋರಿಕೆಯೆಂದು ಲಿಖಿತ ರೂಪದ ಯಾವ ಅಪ್ಪಣೆಯನ್ನೂ ಹೊರಡಿಸುವ ಅಧಿಕಾರವು ಅವರಿಗೆ ಇಲ್ಲ. ಆದರೆ ಆ ಕಾರ್ಯಕ್ಕಾಗಿ ಅವರು ವಿನಂತಿಸಬೇಕು. ಸಂಬಂಧಿಸಿದ ಶಿಕ್ಷಕರು ತಮ್ಮ ಸ್ವಂತ ಕಾರ್ಯದ ಕಡೆ ಯೋಗ್ಯ ಲಕ್ಷ್ಯವಿತ್ತು ವಿನಂತಿಯನ್ನು ಮಾನ್ಯ ಮಾಡುವರು. ಇದೂ ಅಲ್ಲದೆ, ಅಧಿಕಾರಿಗಳು ಶಿಕ್ಷಕರನ್ನು ತಮ್ಮ ಕಚೇರಿಗಳಿಗೆ ಬಂದು ಹಾಜರಿರಬೇಕೆಂದು ಕೇಳುವದಾದರೆ, ಇತರ

ಯಾವದೆ ನಾಗರಿಕನು ಕಚೇರಿಗೆ ಬಂದು ಹಾಜರಿರಲಿಕ್ಕೆ ಯಾವ ಸಂದರ್ಭಗಳಲ್ಲಿ ಅವಶ್ಯವಿದೆಯೊ ಅಂಥ ಸಂದರ್ಭಗಳ ಹೊರತಾಗಿ ಇತರ ಸಂದರ್ಭಗಳಲ್ಲಿ ಶಿಕ್ಷಕರು ಹಾಜರಿರಬೇಕೆಂದು ಅವರಿಗೆ ಅಪ್ಪಣೆ ಮಾಡಕೂಡದು; ಮತ್ತು ಅವರನ್ನು ಹಾಗೆ ಕರೆಯಿಸಿಕೊಂಡಾಗ ಅವರಿಗೆ ಪೀಠಗಳನ್ನು (ಆಸನಗಳನ್ನು) ಒದಗಿಸಬೇಕು. ವೈಯಕ್ತಿಕ ಶಿಕ್ಷಕರಿಂದ ಅನುಭವಿಸಲ್ಪಡುವ ಸಾಮಾಜಿಕ ಪ್ರಶಂಸೆಯು ವಿವಿಧ ಸಂಗತಿಗಳನ್ನು-ಅವುಗಳಲ್ಲಿ ಅತಿ ಮುಖ್ಯವಾದವುಗಳೆಂದರೆ, ಅವರ ಸ್ವಂತ ಶೀಲ, ವ್ಯಕ್ತಿ ವೈಶಿಷ್ಟ್ಯ ಮತ್ತು ಸೇವಾ-ಸ್ವರೂಪಗಳು (ರೆಕಾರ್ಡ ಆಫ್ ಸರ್ವಿಸ್) ಇವುಗಳನ್ನು ಅವಲಂಬಿಸುವದೆಂದು ಸರಕಾರವು ಸ್ಪಷ್ಟವಾಗಿ ಗ್ರಹಿಸಿದರೂ ಸಹ, ಶಿಕ್ಷಕವರ್ಗವೆಂದು ಶಿಕ್ಷಕರಿಗೆ ಯೋಗ್ಯ ಸನ್ಮಾನವು ಸಲ್ಲುತ್ತದೆಂಬುದನ್ನು ನಿಶ್ಚಯಗೊಳಿಸಿಕೊಳ್ಳಲು ಸರಕಾರವು ನಿರ್ಧಾರ ಮಾಡಿದೆ; ಮತ್ತು ಈ ಕಾರಣದ ಸಲುವಾಗಿ, ಅದು ತನ್ನ ಎಲ್ಲ ಸರಕಾರಿ ಅಧಿಕಾರಿಗಳು, ಸರಕಾರದ ಈ ಧೋರಣೆಯನ್ನು ನೆರವೇರಿಸುವದರಲ್ಲಿ ಸಹಕರಿಸಬೇಕೆಂದು ಅವರಿಗೆ ಆಜ್ಞಾಪಿಸುತ್ತದೆ ಮತ್ತು ಜನತೆಯೂ ಹಾಗೆ ಸಹಕರಿಸುವದೆಂದು ನಂಬಿರುತ್ತದೆ.

ಗವರ್ನರರ ಅಪ್ಪಣೆಯಿಂದ,
ಡಿ. ಎಸ್. ಜೋಶಿ,
ಸರಕಾರದ ಅಂಡರ್-ಸೆಕ್ರೆಟರಿ.

ಪ್ರಾಥಮಿಕ ಶಾಲಾ-ಶಿಕ್ಷಕರು

ಸಮಾಜದಲ್ಲಿಯ ಅವರ ಸ್ಥಾನ-ಮಾನಗಳನ್ನು ಉತ್ತಮಗೊಳಿಸಲೋಸುಗ ಕಾಯಿದೆಗಳು

ಮುಂಬಯಿ ಸರಕಾರ ಶಿಕ್ಷಣ ಮತ್ತು ಉದ್ಯೋಗಗಳ ಖಾತೆ.
ಪ್ರಕಟನೆ-ಪತ್ರ, ನಂಬರ ೭೧೨೫.

ಮುಂಬಯಿ, ಕೋಟೆ, ೨೬ನೆಯ ಫೆಬ್ರುವರಿ, ೧೯೪೮ನೆಯ ಇಸವಿ.

ಸರಕಾರದ ಪ್ರಕಟನೆ-ಪತ್ರ

ಪ್ರಾಥಮಿಕ ಶಾಲೆಗಳ ಹಾಗೂ ಹಾಯಸ್ಕೂಲುಗಳ ಶಿಕ್ಷಕರ ಸಾಮಾಜಿಕ ಸ್ಥಾನ-ಮಾನವನ್ನು ಉತ್ತಮಗೊಳಿಸುವ ದೃಷ್ಟಿಯಿಂದ, ಸರಕಾರವು ೧೯೪೮ನೆಯ ಇಸವಿ ಫೆಬ್ರುವರಿ ತಿಂಗಳ ೨೬ನೆಯ ತಾರೀಖಿನ, ೭೧೨೫ನೆಯ ನಂಬರದ ಶಿಕ್ಷಣ ಮತ್ತು ಉದ್ಯೋಗಗಳ ಖಾತೆಯ ಸರಕಾರಿ ಪ್ರಕಟನ-ಪತ್ರದಲ್ಲಿ ಕೆಲವು ಆಜ್ಞೆಗಳನ್ನು ಹೊರಡಿಸಿರುವದು. ಈ ಆಜ್ಞೆಗಳಲ್ಲದೆ ಸರಕಾರವು ಇನ್ನೂ ಕೆಳಗಿನಂತೆ ಆಜ್ಞಾಪಿಸುತ್ತದೆ.

೧. ಸರಕಾರಿ ಅಧಿಕಾರಿಗಳು ಮತ್ತು ವಿಶೇಷವಾಗಿ ರೆವ್ಹಿನ್ಯೂ (ಕಂದಾಯ) ಮತ್ತು ಪೋಲೀಸ ಖಾತೆಗಳ ಅಧಿಕಾರಿಗಳು ಕೆಲವು ಸಲ (ಸಾಮಾಜಿಕ ಸಮಾರಂಭಗಳ ಸಲುವಾಗಿ ಮತ್ತು ಬೇರೆ ಪ್ರಸಂಗಗಳಲ್ಲಿ) ಕೆಲವು ಸ್ಥಾನಿಕ ಪ್ರಾಥಮಿಕ ಶಾಲೆಗಳ ಹಾಗು ಹಾಯಸ್ಕೂಲುಗಳ ಶಿಕ್ಷಕರನ್ನೂ ಮುಖ್ಯಾಧ್ಯಾಪಕರನ್ನೂ ಆಮಂತ್ರಿಸುವದು ಲೋಕವಾಡದಂತೆ ನೋಡಿಕೊಳ್ಳಬೇಕು; ಮತ್ತು ಈ ಪ್ರಕಾರ ಅವರಿಗೆ ಸರಿಸಮಾನವಾದ ಸಾಮಾಜಿಕ ದರ್ಜೆಯುಳ್ಳವರೆಂದು ತಮ್ಮ ಭಾವನೆ ಇರುವದೆಂದು ಅವರಿಗೂ ಮತ್ತು ಇತರರಿಗೂ ಅನಿಸುವಂತೆ ಮಾಡಬೇಕು.

೨. ಉತ್ತಮ ಕೆಲಸ ಮಾಡುವ ಮತ್ತು ತಮ್ಮ ಭಾವ ಶುದ್ಧಿ, ಪ್ರಾಮಾಣಿಕತೆ, ಹಾಗೂ ಕಾರ್ಯ-ಶ್ರದ್ಧೆಗಳಿಂದ ಸ್ಥಾನಿಕ-ಸಮಾಜದ ಮೇಲೆ ಸ್ಥಿರವಾದ ಸುಪರಿಣಾಮವನ್ನುಂಟು ಮಾಡುವ ಶಿಕ್ಷಕರ ಉದಾಹರಣೆಗಳನ್ನು—ಅವರು ಪ್ರಾಥಮಿಕ ಶಾಲೆಗಳ ಶಿಕ್ಷಕರಿರಲಿ, ಅಥವಾ ಹಾಯಸ್ಕೂಲುಗಳ ಶಿಕ್ಷಕರಿರಲಿ—ವಿಶೇಷವಾಗಿ ಸರಕಾರದ ಗಮನಕ್ಕೆ ತರಬೇಕು; ಮತ್ತು ಅಂಥ ಶಿಕ್ಷಕರ ಜೀವನ-ವೃತ್ತಾಂತದ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಗುಣ ವಿವೇಚನೆಯನ್ನು ಸರಕಾರಿ ಗೆಜೆಟದಲ್ಲಿ ಪ್ರಸಿದ್ಧಿಸಬೇಕು. ಸಾರ್ವಜನಿಕ ಶಿಕ್ಷಣ ಖಾತೆಯ ಡಾಯರೆಕ್ಟರರು, ಸರಕಾರಿ ಗೆಜೆಟದಲ್ಲಿ ಇವು ಪ್ರಸಿದ್ಧಿಸಲ್ಪಡುವ ಪೂರ್ವದಲ್ಲಿ ಸರಕಾರದ ಒಪ್ಪಿಗೆಗಾಗಿ, ವರ್ಷಕ್ಕೊಮ್ಮೆ ಇಂಥ ಮಾನ್ಯತೆಗೆ ಅರ್ಹವಿರುವ ಶಿಕ್ಷಕರ ಜೀವನವೃತ್ತಾಂತದ ಸಂಕ್ಷಿಪ್ತ ಮಾಹಿತಿ ಅಥವಾ ಗುಣ ವಿವೇಚನೆಯನ್ನು ವರದಿ ಮಾಡಬೇಕು.

ಮುಂಬಯಿ ಗವರ್ನರರ ಅಪ್ಪಣೆಯಿಂದ
ಡಿ. ಎಸ್. ಜೋಶಿ.
ಸರಕಾರದ ಅಂಡರ್—ಸೆಕ್ರೆಟರಿ.

ಶಿಕ್ಷಣ-ಸಂಸ್ಥೆಗಳಲ್ಲಿ ಜಾತೀಯತೆ

ಎಲ್ಲ ಕಾಲೇಜುಗಳ, ಹಾಯಸ್ಕೂಲುಗಳ, ತರಬೇತಿ (ಟ್ರೇನಿಂಗ) ಮತ್ತು ವಿಶಿಷ್ಟ ಸಂಸ್ಥೆಗಳ ವ್ಯವಸ್ಥಾಪಕ ಮಂಡಳಗಳಿಗೆ

ನಂಬರ ಎಸ್. ೬೭ (ಸಿ)-ಎಲ್-ಸಾಮಾನ್ಯ. ಸಿ.
ಸಾರ್ವಜನಿಕ ಶಿಕ್ಷಣ ಖಾತೆಯ ಡಾಯರೆಕ್ಟರರ ಕಚೇರಿ.
ಮುಂಬಯಿ ಪ್ರಾಂತ.

ಪುಣೆ, ೧, ೨೧ನೆಯ ಏಪ್ರಿಲ, ೧೯೪೮ನೆಯ ಇಸವಿ.

ಮಾನ್ಯರೇ,

ಸರಕಾರವು ಶಿಕ್ಷಣ-ಸಂಸ್ಥೆಗಳಿಂದ ಜಾತೀಯತೆಯ ಕೀಡೆಯನ್ನು ನಿರ್ಮೂಲಗೊಳಿಸುವ ಪ್ರಶ್ನೆಯನ್ನು ಕುರಿತು ಈಗ ಕೆಲವೊಂದು ಅವಧಿಯಿಂದ ಸೋತ್ಸಾಹವಾಗಿ ಪರ್ಯಾಲೋಚಿಸುತ್ತಿರುವದು. ಅದು ಈಗ ಯಾವದೇ ಶಿಕ್ಷಣ-ಸಂಸ್ಥೆಗಳಲ್ಲಿ ಜಾತೀಯತೆಗೆ ಸಾರ್ವಜನಿಕ ಹಣದಿಂದ ಸಹಾಯ-ಧನವನ್ನಾಗಲಿ ಅಥವಾ ಅಪ್ಪಣೆಯನ್ನಾಗಲಿ ಕೊಡಬಾರದೆಂದು ನಿಶ್ಚಯಿಸಿದೆ. ಆದ್ದರಿಂದ, ಇನ್ನುಮುಂದೆ ಸರಕಾರವು, ಹೊಸದಾಗಿ ಸ್ಥಾಪಿಸಲ್ಪಡುವ ಜಾತೀಯ ಸಂಸ್ಥೆಗಳಿಗೆ ಸಹಾಯ-ದ್ರವ್ಯವನ್ನು (grant-in-aid) ಕೊಡುವದಿಲ್ಲ. ಮತ್ತು ಈಗ ಅಸ್ತಿತ್ವದಲ್ಲಿರುವ ಯಾವ ಸಂಸ್ಥೆಗಳು ಎಲ್ಲ ಜಾತೀಯರಿಗೆ ಪ್ರವೇಶವನ್ನು ಕೊಡುವದಿಲ್ಲವೂ ಅಥವಾ ಕೊಡಲಾರವೊ ಅಂಥ ಸಂಸ್ಥೆಗಳು ಸಾರ್ವಜನಿಕ ಹಣದಿಂದ ಸಹಾಯ-ದ್ರವ್ಯವನ್ನು ಪಡೆಯಲು ಅರ್ಹವಾಗುವದಿಲ್ಲ. ಶಿಕ್ಷಣ ಸಂಸ್ಥೆಗಳ ಆಶ್ರಯ ಹಾಗು ಸೌಕರ್ಯಗಳು ಜಾತೀಯ ಸಂಸ್ಥೆಗಳ ಉದ್ದೇಶಗಳಿಗಾಗಿ ಸಿಗುವಂತೆ ಮಾಡಬಾರದಾಗಿಯೂ ಮತ್ತು ಅಂಥ ಸಂಸ್ಥೆಗಳಲ್ಲಿಯ ಯುವಕರನ್ನು ಜಾತೀಯತೆಯ ವಾತಾವರಣದಲ್ಲಿ ಬೆಳೆಸಬಾರದಾಗಿಯೂ ಸರಕಾರವು ಇಚ್ಛಿಸುತ್ತವೆ. ಸರಕಾರದ ಅಭಿಪ್ರಾಯದಲ್ಲಿ, ಸ್ಕೌಟಪಥಕ, ನ್ಯಾಶನಲ್ ಕ್ಯಾಡೆಟ ಕೋಅರ ಯೋಜನೆ, ಯೂ. ಓ. ಟಿ. ಸಿ., ಗೃಹರಕ್ಷಕದಲ (Home Guards) ಮತ್ತು ಇವುಗಳನ್ನು ಸರಿಹೋಗುವ ಇತರ ಜಾತ್ಯತೀತ ಸಂಸ್ಥೆಗಳು ಎಲ್ಲ ವಯಸ್ಸಿನ ಯುವಕರಿಗೆ ಶಾರೀರಿಕ ತರಬೇತಿ, ಶಿಸ್ತು ಹಾಗು ಸಮಾಜಸೇವೆ ಇವುಗಳಿಗಾಗಿ ಸಂಪೂರ್ಣ ಸುಸಂಧಿಗಳನ್ನು ಒದಗಿಸುವವು. ಆದ್ದರಿಂದ, ನೀವು ಸರಕಾರದ ಈ ಮಹತ್ವದ ನಿರ್ಧಾರಗಳನ್ನು ಗಮನಿಸಿ, ನಿಮ್ಮ ಕಟ್ಟಡಗಳನ್ನಾಗಲಿ, ಸಾಮಗ್ರಿಗಳನ್ನಾಗಲಿ ಮತ್ತು ಇತರ ಸೌಕರ್ಯಗಳನ್ನಾಗಲಿ ಯಾವ ಜಾತೀಯಸಂಸ್ಥೆಗಳೂ ಉಪಯೋಗಿಸಲು ಅವಕ್ಕೆ ಅಪ್ಪಣೆ ಕೊಡಬಾರದೆಂದು ನಾನು ನಿಮ್ಮನ್ನು ವಿನಂತಿಸುತ್ತೇನೆ. ಮತ್ತು ನೀವು ನಿಮ್ಮ ಸಂಸ್ಥೆಯಲ್ಲಿಯ ವಿದ್ಯಾರ್ಥಿಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡು ಅವರು ಸ್ಕೌಟ, ನ್ಯಾಶನಲ್ ಕ್ಯಾಡೆಟ ಕೊಅರ, ಯೂ. ಓ. ಟಿ. ಸಿ. ಮೊದಲಾದ ಜಾತ್ಯತೀತ ಸಂಸ್ಥೆ (ಸಂಘಟನೆ) ಗಳನ್ನು ಸೇರಿ, ಅವುಗಳಲ್ಲಿ ವಿಶೇಷ ಉತ್ಸುಕತೆ ಹಾಗು ಅಭಿರುಚಿಗಳನ್ನು ತಳೆಯುವಂತೆ ಅವರನ್ನು ಪ್ರೋತ್ಸಾಹಿಸಬೇಕೆಂದೂ ನಿಮಗೆ ನಾನು ಸೂಚಿಸ ಬಯಸುವೆನು.

೧—ಅ. (ಹಾಯಸ್ಕೂಲ, ಟ್ರೇನಿಂಗ ಮತ್ತು ವಿಶಿಷ್ಟ ಶಾಲೆಗಳಿಗಾಗಿ ಮಾತ್ರ). ನಿಮ್ಮ ಶಾಲೆಯಲ್ಲಿ ಸ್ಕೌಟ-ಪಥಕಗಳು ಇಲ್ಲವಾದರೆ ಅವುಗಳನ್ನು ನೀವು ಕೂಡಲೆ ಪ್ರಾರಂಭಿಸಿ ಅವುಗಳಲ್ಲಿ ನಿಮ್ಮ ವಿದ್ಯಾರ್ಥಿಗಳು ಒಳಸೇರಿ ಮುನ್ನಡೆಯುವಂತೆ ಮಾಡುವದು ತುಂಬಾ ಇಷ್ಟವಾದುದು. ಸಂಸ್ಥೆಗಳಲ್ಲಿಯ ತರುಣರ ಹಠಾತ್ತಾದ ಪ್ರವೃತ್ತಿಗಳನ್ನು ತೃಪ್ತಿಪಡಿಸುವದಕ್ಕಾಗಿ ಪಠ್ಯೇತರ ಚಟುವಟಿಕೆಗಳ ರೂಪದಲ್ಲಿ ಸ್ಕೌಟಿಂಗ, 'ಗರ್ಲ್‌ಗಾಯಿಡಿಂಗ,' ಪ್ರವಾಸ, ದೂರ ನಡಗೆ, ಅಭ್ಯಾಸಕೂಟ, ಚರ್ಚಾಕೂಟ, ಶಾಲಾಸಂಘ, ತರಗತಿ ಸಂಘ ಮುಂತಾದ ಸೌಕರ್ಯಗಳನ್ನು ಶಾಲೆಯು ಸಾಕಷ್ಟುಮಟ್ಟಿಗೆ ಒದಗಿಸುವದು ಅತ್ಯವಶ್ಯವಾದುದು. ಶಾಲೆಗಳು ತಮ್ಮ ತಮ್ಮ ಸ್ವಂತ ಆವರಣದಲ್ಲಿ ಇಂಥ ಪಠ್ಯೇತರ ಚಟುವಟಿಕೆಗಳನ್ನು ಒದಗಿಸುವದರಲ್ಲಿ ತಪ್ಪುತ್ತಿದ್ದುದೇ ಗತಕಾಲದಲ್ಲಿ ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ಒಂದಿಲ್ಲೊಂದು ರೀತಿಯಿಂದ ಸೆಳೆಯುತ್ತಲಿದ್ದ ಜಾತೀಯ ಹಾಗು ಅನಿಷ್ಟ ಸಂಸ್ಥೆಗಳನ್ನು ಸೇರಲು ಮಾರ್ಗವನ್ನುಂಟು ಮಾಡಿಕೊಡುತ್ತಲಿತ್ತು. ಆದ್ದರಿಂದ ಶಾಲೆಗಳು ಶಾಲಾ ಆಡಳಿತೆಯ ಈ ಮಹತ್ವದ ಅಂಗದ

ಬಗೆಗೆ ಯೋಜನೆಗಳನ್ನು ತಯಾರಿಸಿ ಚಿತ್ರಕರ್ಮಗಳ ಪರಿಸ್ಥಿತಿಗಳನ್ನು ಒದಗಿಸಬೇಕು. ಹೀಗೆ ಮಾಡುವದರಿಂದ ವಿದ್ಯಾರ್ಥಿಗಳ ಆಸಕ್ತಿ ಮತ್ತು ಆಭಿರುಚಿಗಳು ಹೆಚ್ಚು ಸ್ವಂತ ಶಾಲೆಗಳಿಗೆ ಸಂಬಂಧಿಸಿದ ಶಾಲೆಯ ಮೊರಗಿನ ಚಟುವಟಿಕೆಗಳ ಕಡೆಗೆ ಮೊರಳುವನು

೨. ಮಾಸೀ ಹಾಗು ಚಾಗೆಗಳನ್ನು ಕಾಯ್ದಿಡುವದು, ಶಿಷ್ಯ ವೃತ್ತಿಗಳನ್ನು ಕೊಡುವದು ಇವೇ ಮೊದಲಾದ ಸಮಲತ್ತುಗಳ ಸಲುವಾಗಿ, ಸರಕಾರಿ ಸಂಸ್ಥೆಗಳಲ್ಲಿ ಎಲ್ಲ ಜಾತಿಗಳು, ಮುಂದುವರಿದ ಸಮಾಜ ಮತ್ತು ಹಿಂದುಳಿದ ವರ್ಗದವರು ಹೀಗೆ ಸ್ವಾಲಬಾಗಿ ಸಮಾನ ಪ್ರಮಾಣಗಳಾಗಿ ವರ್ಗೀಕರಿಸಲ್ಪಟ್ಟಿರುವವು. ಸರಕಾರ ಕೈಗಾರಿಕ ಸಂಸ್ಥೆಗೆ ಹೊಂದಿಕೊಂಡಿರುವ ವ್ಯಾಯಾಮ, ಪ್ರೋಜನಾಲಯವಲ್ಲಿ ಎಲ್ಲ ಜಾತಿಗಳ ಬಾಲರ ಪ್ರವೇಶಕ್ಕೆ ಎಷ್ಟೆ ಕೆಲವಲಾಗದೆ. ಇವುಗಳಲ್ಲಿ ಶಾಲಾಹಾಗು ಮತ್ತು ಮಾಂಸಾಹಾರಗಳೆಂಬುವ ವ್ಯತ್ಯಾಸವಲ್ಲದೆ ಮಾತ್ರ ಅನ್ಯಾಯ ಕೊಡಲಾಗದೆ. ಸರಕಾರದ ಸಮಾಯ ದ್ರವ್ಯ ಪಡೆಯುವ ಸಂಸ್ಥೆಗಳು ಸರ್ವ ಸರಕಾರಿ ಸಂಸ್ಥೆಗಳೊಂದಿಗೆ ಸಹಕರಿಸಿ ತಮ್ಮ ವಸತಿಗೃಹಗಳಲ್ಲಿ ಎಲ್ಲ ಜಾತಿಗಳ ವಿದ್ಯಾರ್ಥಿಗಳಿಗೆ ಕಾಲಾವಧಿ ಮತ್ತು ಪ್ರಮಾಣಾನುಗುಣವಾಗಿ ಪ್ರತಿಶತ ಪ್ರತಿಶತವಾಗಿ ಫೀಜನಾಲಯಗಳ ಪಿಡಿಗಳು ಮಾಡಬೇಕು. ಅಲ್ಲದೆ ಕೆಲವು ಪ್ರದೇಶ ಕೊಡುವರು ಇದ ಕಾರಣದಿಂದ ನಾನು ಗಮನಿಸ್ತಿದೆ.

ನಾನು ಇದರಂತೆಗೆ ಸಂಕಲ್ಪ ಪ್ರಕಟಿಸಿದ ಪ್ರತಿಕೆ (ಲಿಸ್ಟ್ ಆಫ್ ಸಾಮಾನ್ಯ) ಯೊಂದನ್ನು ಕಳುಹಿಸಿದ್ದೆನು. ನಿಮ್ಮ ಸಂಸ್ಥೆಯನ್ನು ಎಲ್ಲ ಜಾತಿಗಳಿಗೂ ತೆರೆದಿರುವ ಸಂಸ್ಥೆಯನ್ನಾಗಿಸಲು ಬಹುತ ಸಿದ್ಧತೆ ಮಾಡಿ ಅದನ್ನು ನನಗೆ ತಿಳಿಸಬೇಕೆಂದು ಸೂಚಿಸಿತ್ತೇನೆ. ಯಾವುದರಿಂದ ಕಾರಣದ ಸಲುವಾಗಿ ಸಂಕಲ್ಪ ಪ್ರಕಟಿಸಿ ಪ್ರತಿಕೆಯ ಮೇಲೆ ನೀವು ಮಾಡಲು ನಿಮಗೆ ಸಾಧ್ಯವಾಗದಿದ್ದರೆ ದಯೆ ಇಟ್ಟು ನಿಮ್ಮ ಸಮಸ್ಯೆ ಅದನ್ನು ತಕ್ಷಣದಲ್ಲಿ ತಿಳಿಸಬೇಕು. ಮಾಗೂ ನಿಮ್ಮ ಅದರ ಮೇಲೆ ಸಹಿ ಮಾಡಲು ನಿಮ್ಮ ಮನಸ್ಸಿಲ್ಲದಿರುವದರ ಕಾರಣಗಳನ್ನು ಕೊಡಬೇಕು. ನಿಮ್ಮ ಸಂಕಲ್ಪ-ಪ್ರಕಟಿಸಿದ ಪ್ರತಿಕೆಯ ಮೇಲೆ ಸಹಿ ಮಾಡುವದಕ್ಕೆ ಮತ್ತು ನಿಮ್ಮ ಸಂಸ್ಥೆಯನ್ನು ಎಲ್ಲ ಜಾತಿಗಳಿಗೆ ತೆರೆದಿಡಲಿಕ್ಕೆ ತಪ್ಪಿದರೆ, ಸರಕಾರ ಧೋರಣೆಗನುಸರಿಸಿ ಸಾರ್ವಜನಿಕ ದೃಷ್ಟಿಯಿಂದ ನಿಮ್ಮ ಸಹಾಯ ದ್ರವ್ಯವನ್ನು ಈ ವರ್ಷದಿಂದ ಕೊಡಲು ಸಾಧ್ಯವಾಗುವದಿಲ್ಲ.

ಇಂತಿ ನಿಮ್ಮ ಸೇವಕ,

ಡಿ. ಸಿ. ಪಾಟಿಲ

ಡಾಯರೆಕ್ಟರ ಆಫ ಎಡ್ಯುಕೇಶನ್

ಸಂಕಲ್ಪ ಪ್ರಕಟಿಸಿದ ಪತ್ರಿಕೆಯ ನಮೂನೆ

ನಾನು ..... ಸಂಸ್ಥೆಯ ... ಸ್ಥಾನಕ ಹುದ್ದೆಯ ಮೇಲೆ ಈ ಮೂಲಕ ... ಪಡಿಸುವದೇನಂದರೆ- ಯಾವದೇಂದು ನಿರ್ದಿಷ್ಟ ... ಯೆಹಂಗಾಗಿ ಎಂದು ಈ ಸಂಸ್ಥೆಯ ಉದ್ದೇಶಕ್ಕೆ ... ಅದರಲ್ಲಿ ಈಗಲೂ ಮತ್ತು ಇನ್ನು ಮುಂದೆಯೂ ಯಾ... ಪಿಸ್ಸ ಜಾತಿಗಳ ವಿದ್ಯಾರ್ಥಿಗಳಿಗೆ ಯಾವದೂ ಅಡೆ... ಗಳಿಲ್ಲದೆ ಎಲ್ಲ ಜಾತಿಗಳ ಸಂಸ್ಥೆಯಾಗಿರುವ... ಸಂಸ್ಥೆಯ ಮುಖ್ಯಾಧಿಕಾರಿಯ ಮತ್ತಿಯಿಂದ ನಾನು ಕ... ಸಂಸ್ಥೆಯಲ್ಲಿ ಬಾಯಿರುವ ಎಲ್ಲ ಜಾತಿಗಳ ವಿದ್ಯಾರ್ಥಿಗ... ಜಾತಿಯ ನಾನ ರೀತಿಯ ಮತ್ತು ನೌಕರಿಯ ಸ್ಥಾ... ಬೇಕಾದ ಮೊತ್ತವನ್ನು ಮೊರುತ್ತಿನೆ. ಜಾತಿಯ ನಾ... ರೀತಿ ಮತ್ತು ಬೇರ ಸೌಕರ್ಯಗಳನ್ನು ಬೆಳೆಸುವದರಲ್ಲಿ ಸ... ಕ್ಷಕ್ಕಾಗಿ ಮತ್ತು ಮೊರ್ಯಾದೆ ನಡೆಸ್ಕೊಂಡಿದ್ದ ಸರಕಾರ... ಸಂಬಂಧಿಸಿ ಎಲ್ಲ ಕೆಲಸ ಮಾಡಿದೆನು.

ಸ್ಥಳ .....

(ದಿನಾಂಕ) .....

ಇಂತಿ .....

(ಸಹಿ) .....

ಭಾರತ ಸರಕಾರದ ಸಾಮಾಜಿಕ ಶಿಕ್ಷಣದ ರೂಪರೇಷೆಗಳು

ಲೇಖಕರು ಶ್ರೀ. ಆ. ಶಿ. ಭಟ್ಟ
ಶಿಕ್ಷಕ—ಸಿದ್ದಾರ್ಥ ಗಂ. ಪ್ರೌ. ಕಾಲೇಜು ಧಾರವಾಡ

ಭಾರತವು ಸ್ವಾತಂತ್ರ್ಯದ ಮೊದಲನೆಯ ಮೆಟ್ಟಿಲನ್ನು ದಾಟಿದೆ. ಈ ಸ್ವಾತಂತ್ರ್ಯ ಮಂದಿರದ ಕಟ್ಟಡಿಗಳಲ್ಲಿ ಶಿಕ್ಷಣ. ಈ ಭದ್ರವಾದ ಮಂದಿರವನ್ನು ಸರಕಾರವು ಜನತೆಗೆ ಉಪಯುಕ್ತವುಳ್ಳ ಶಿಕ್ಷಣವೆಂಬ ಅಡಿಗಲ್ಲಿನ ಮೇಲೆ ಕಟ್ಟಬೇಕಾಗಿದೆ. ಅದಕ್ಕಾಗಿ ದೇಶದ ಸರ್ವಸ್ವವನ್ನು ಸರಕಾರವು ತನ್ನ ರಾಜ್ಯಸೂತ್ರವನ್ನು ಕೈಯಲ್ಲಿ ಹಿಡಿದಿದೆ. ಮೊಟ್ಟಮೊದಲು ಏನೂ ಇಂದ ಮಕ್ಕಳ ಮನಸ್ಸಿನಲ್ಲಿ ಶಿಕ್ಷಣದ ಉನ್ನತಿಯ ಬಗ್ಗೆ ಅನೇಕ ಯೋಚನೆಗಳನ್ನು ಅನೇಕ ತೆರನಾಗಿ ಕೊಂಡು ನಡೆಸುತ್ತಿದೆ. ಆ ಬಗ್ಗೆ ಹೇಳಿಕೆಗಳ ಪಟ್ಟಿ ಮಾಡುತ್ತಿದೆ. ಮಾಡಲು ಪ್ರಯತ್ನಿಸಿದೆ. ಶಿಕ್ಷಣದ ಬಗ್ಗೆ ಯೋಚಿಸಿದಾಗ ಸಾಮಾಜಿಕ ಶಿಕ್ಷಣದ ರೂಪರೇಷೆಗಳು ಹೀಗಿವೆ:—

ಸಾಮಾನ್ಯ ಸಂತೋಷ ಜೀವನಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಶಿಕ್ಷಣವು ಅತ್ಯವಶ್ಯಕವಾಗಿದೆ. ಸಾಮಾಜಿಕ ಶಿಕ್ಷಣದಲ್ಲಿ ಸಾರ್ವಜನಿಕ ಸಾಮಾಜಿಕ ಸಂಬಂಧ ಸಂಬಂಧಿಸಿದ ಶಿಕ್ಷಣವೆಂದೇ ಅರ್ಥವಲ್ಲ. ಅರ್ಥದ ಮಾನಸೀಕ ಸಾಮಾಜಿಕ ಸಂಬಂಧ ವಿಜ್ಞಾನ ಮತ್ತು ಸಂಬಂಧ ವಿಜ್ಞಾನವೂ ಸಹ ಇದರಲ್ಲಿ ಅಡಗಿದೆ ಎಂದಹಾಗಾಯಿತು.

ಸಾಮಾಜಿಕ ಶಿಕ್ಷಣವೆಂದರೆ ಸಮಾಜದ ಜನತೆಯ ಸ್ಥಿತಿಯನ್ನು ಮೇಲೆತ್ತುವುದು, ಕೀಳಿಕಾರ ಮಾಡುವುದು ಅಥವಾ ಅವರಲ್ಲಿ ಅಂಗೀಕರಿಸಿರುವ ದುಷ್ಟಟಗಳನ್ನು ದೂರಿಕರಿಸುವುದು, ಸಮಾಜದ ಸ್ವಚ್ಛತೆ ಒಗ್ಗೆ ಒಕ್ಕೂಟ ಪ್ರಯತ್ನಿಸುವುದು ಎಂದೆನ್ನಬಹುದಾದಾಗಿದೆ. ಆದರೆ ಸರಕಾರದ ದೃಷ್ಟಿಯಿಂದ ಸಮಾಜ ಶಿಕ್ಷಣ ಅಥವಾ ಅದೇನು ಅದೆಂದರೆ ಜನತೆಯಲ್ಲಿ ನಾಗರಿಕತೆಯ ಭಾವನೆ ಉದ್ಭವವಾಗಬೇಕು. ಸಾಮಾಜಿಕತೆಯ ಭಾವನೆ ಉದಯಿಸಬೇಕು, ಎಂಬುದು ಸಾಮಾಜಿಕ ಶಿಕ್ಷಣದ ಧ್ಯೇಯ. ಯಾವ ಶಿಕ್ಷಣದಿಂದ ಇದು ದೊರೆಯುವುದೋ ಅದು ಸರ್ವ ಸಾಮಾಜಿಕ ಶಿಕ್ಷಣ.

ಈಗ ಪ್ರೌಢ ಶಿಕ್ಷಣದ ಯೋಜನೆಯಲ್ಲಿರುವ ಸೂಚನೆಗಳು ಅದರಲ್ಲಿ ಅದರಲ್ಲಿ ಯೋಗ್ಯತೆಯು. ಸಾಮಾಜಿಕ ಶಿಕ್ಷಣದಲ್ಲಿದೆ. ಪ್ರೌಢ ಶಿಕ್ಷಣದಲ್ಲಿ ಯಾಗಗಳಿವೆ. ೧) ಮನುಷ್ಯ ಸಂಕ್ಷೇಮ ರಾಷ್ಟ್ರಗಳ ಮಾಹಿತಿ. ೨) ಸಾಹಿತ್ಯ ಶಿಕ್ಷಣದ ಆಧಾರದಲ್ಲಿ ಮಾನವಾಭ್ಯುದಯಕ್ಕೆ ಕಾರಣ ಬುದ್ಧಿಗಾರರನ್ನಾಗಿ ತಯಾರಿಸುವುದು. ೩) ರಾಷ್ಟ್ರದ ಮುಖ್ಯ ಅಂಗವಾದ ಜನತೆ ಸಾಮಾಜಿಕತೆಯ ಅರಿವು, ಮತ್ತು ಕರ್ತವ್ಯದ ಅರಿವು ಮಾಡಿಕೊಡುವುದು. ಇಷ್ಟೇ ಪೂರ್ಣವಿಸಿದರೆ ಜಾಗರಣ ಸಾಮಾಜಿಕ ಶಿಕ್ಷಣಕ್ಕೆ ಅವಕಾಶವಿದೆ. ಅದುಂದ ಇದಕ್ಕೆ ಪಠ್ಯದ ಮಾಧ್ಯಮ ಕೊಡಬಲ್ಲದು.

ನಾಗರಿಕತೆಯ ಭಾವನೆ ಉದ್ದೀಪನ ಮಾಡಲು ಮೂರು ಮಾರ್ಗಗಳನ್ನು ಅವಲಂಬಿಸಬೇಕಾದ ಸಂದರ್ಭವಿದೆ.

(೧) ಪ್ರತಿಯೊಂದು ನಾಗರಿಕನು ನಾಗರಿಕತೆಯ ಅರ್ಥ ಮತ್ತು ಪ್ರಾಮುಖ್ಯತೆ ಕುರಿತು ಒಂದನ್ನು ಸಾಮಾಜಿಕ ಕಂಡಿರುವುದಾಗಬೇಕು. ಯಾ ಜೀವನ ಸಂಬಂಧಿಸಿದ ಸಾಮಾಜಿಕ ಜ್ಞಾನವನ್ನಷ್ಟೇ ಅಲ್ಲದೆ ಸಮಾಜದ ಮೂಲ ತತ್ವಗಳನ್ನು ತಿಳಿದಿರುವುದಾಗಬೇಕು. ರಾಷ್ಟ್ರ ಬಾಳುವದು ಹೇಗೆ ಮುಂದುವರಿಯಬೇಕು. ಪ್ರತಿಯ ಮಂತ್ರಿಯಾದ ತನ್ನ ಅಮೂಲ್ಯ ಮತದ ಹಿರಿಯನ್ನೂ ಜೀವಿಯನ್ನೂ ಅರಿತಿರಬೇಕು. ಅವನಿಗೆ ತನಗೂ ಸರಕಾರಕ್ಕೂ ಇರುವ ನಿಕಟ ಸಂಬಂಧವನ್ನು, ತನ್ನ ಮತದ ಮೌಲ್ಯವನ್ನು ತಿಳಿಯುವಂಥ ಸಾಮಾಜಿಕ ಶಿಕ್ಷಣ ಕೊಡಬೇಕು. ಅಷ್ಟರ ಮಟ್ಟಿಗೆ

ಮೌಖಿಕ (ತೋಂಡಿ) ಶಿಕ್ಷಣವೇ ಹೆಚ್ಚಿನ ಪ್ರಶಸ್ತಿ ಪಡೆಯುವದು.

೨. ವ್ಯಕ್ತಿಗತ ಮತ್ತು ಸಾರ್ವಜನಿಕ ಆರೋಗ್ಯದ ನಿಯಮಕ್ಕೆ ಈ ಶಿಕ್ಷಣವು ಬಹು ಅಮೂಲ್ಯವಾದದ್ದು. ಸಮಾಜದ ಆರೋಗ್ಯವನ್ನು ಕಾಯ್ದುಕೊಂಡು ಹೋಗಬೇಕಾದುದು ನಿಜವಾದ ನಾಗರಿಕತೆಯ ಅಂಗವು. ಆದರೆ ಈಗ ಇದನ್ನು ಅನುಸರಿಸಿ ನಡೆಯುವವರು ಅತಿ ವಿರಳ. ಸಾಮಾಜಿಕ ಶಿಕ್ಷಣದ ಮುಖ್ಯ ಧ್ಯೇಯವು ಸ್ವಚ್ಛ ಮತ್ತು ಆರೋಗ್ಯ ಜೀವನವೇ ಇದೆ. ಆದ್ದರಿಂದ ಯೋಗ್ಯ ಹವೆ ಮತ್ತು ಸೂರ್ಯ ಪ್ರಕಾಶದ ಮನೆಯಲ್ಲಿಯ ಸ್ಥಳದ ಯೋಗ್ಯ ಉಪಯೋಗ, ಹುಳಹುಪ್ಪಡಿಗಳ ಉಗಮ ಮತ್ತು ಅವುಗಳ ನಿವಾರಣೆ, ಹೊಲಸು ನೀರಿನ ಗಟಾರ ಇವುಗಳ ಬಗ್ಗೆ ಸಾಧಾರಣ ಜ್ಞಾನವಿರಬೇಕು. ನೆರೆಹೊರೆಯ ಮತ್ತು ಜನತೆಯ ಅನುಕೂಲತೆಯ ಜ್ಞಾನದ ತಿಳುವಳಿಕೆ ಇರುವದು ಅತ್ಯಾವಶ್ಯವಿದೆ.

೩. ಸಾಮಾಜಿಕ ಶಿಕ್ಷಣದಲ್ಲಿ ಜನ-ಸಾಮಾನ್ಯರಿಗೆ ಆರ್ಥಿಕ ಉನ್ನತಿಗೆ ಬೆಂಬಲ ಕೊಡುವ ವಿಷಯಗಳೂ ಸಮಾವೇಶವಾಗಿವೆ. ಜನತೆಗೆ ಈ ಶಿಕ್ಷಣವು ತಮ್ಮ ಆರ್ಥಿಕ ಉನ್ನತಿಯಲ್ಲಿ ಸಹಕಾರಿಯಾಗುವದೆಂದು ತಿಳಿದೊಡನೆ ಅದಕ್ಕೆ ಹಾರ್ದಿಕ ಪ್ರೇಮ ಮತ್ತು ಹೇರಳ ಸಹಾಯ ಸಿಗಲಾರಂಭಿಸುವದು. ಈ ಶಿಕ್ಷಣದಲ್ಲಿ ಶಿಲ್ಪ-ಶಿಕ್ಷಣವೂ ಕೊಡಲ್ಪಡುವದು ಮತ್ತು ಆಧುನಿಕ ಶಿಲ್ಪ ಶಾಸ್ತ್ರವನ್ನು ಹೊಸ ರೀತಿಯಿಂದ ಸುರುವು ಮಾಡುವ ಕುಶಲತೆ ಬೆಳಿಸುವ ಬಗ್ಗೆ ಲಕ್ಷ್ಯ ಪೂರೈಸಲಾಗುವದು.

೪. ಸಾಮಾಜಿಕ ಶಿಕ್ಷಣದಿಂದ ಶಾರೀರಿಕ, ಮಾನಸಿಕ ಉನ್ನತಿಯ ಜೊತೆಯಲ್ಲಿಯೇ ಉಚ್ಚ ಮನೋಭಾವನೆಯೂ ಉತ್ಪನ್ನವಾಗುವದು. ಇದರ ಜೊತೆಯಲ್ಲಿ ಜನ-ಸಂಗೀತ, ನಾಟಕ, ನೃತ್ಯ, ಕವಿತೆ, ಮೊದಲಾದ ಮನೋರಂಜಕ ಕಾರ್ಯಕ್ರಮಗಳ ಸೇರ್ಪಡೆ ಇದೆ.

೫. ಸಾಮಾಜಿಕ ಶಿಕ್ಷಣದಲ್ಲಿ ಅಡಗಿದ ಸದಾಚಾರದ ಮಹತ್ವ ತಿಳುಹುವ ಶಿಕ್ಷಣವು ಕೊಡಲ್ಪಡುವದು. ಅಂದರೆ ತಮ್ಮೊಳಗಿನ ಕ್ಷುಲ್ಲಕ ಒಳಜಗಳ ನಿವಾರಣೆ, ಸಹನಶೀಲತೆ ಬಗ್ಗೆ ಹೆಚ್ಚು ಲಕ್ಷ್ಯ ಪೂರೈಸಲಾಗುವದು. ತಮ್ಮೊಳಗೆ ಸಹಕಾರ ಭಾವನೆ ಬರಬೇಕು, ಇರಬೇಕು, ಎಂಬ ಬಗೆಗೂ ವಿಚಾರವಿದೆ.

ದಿಲ್ಲಿಯು ಒಂದು ಸಣ್ಣ ಪ್ರಾಂತ. ಅದು ಕೇಂದ್ರ ಸರಕಾರದ ವಶದಲ್ಲಿದೆ. ಅಲ್ಲಿಯೇ ಸಮಾಜ ಶಿಕ್ಷಣದ ಹುಟ್ಟಾಗಿ ಮುಂದೆ ಪ್ರತಿಯೊಂದು ಇಲಾಖೆಗೂ ಜಾರಿಯಲ್ಲಿ ಬರುವದು. ಸರಕಾರದಿಂದ ನಡೆಸಲ್ಪಡುವ ಪ್ರತಿಯೊಂದು ಪ್ರಾಥಮಿಕ ಶಾಲೆಗಳಲ್ಲಿಯೂ ಈ ತರದ ಶಿಕ್ಷಣವನ್ನು ಪ್ರೌಢರಿಗೆ ಸಂಜೆಯ ಬಿಡುವಿನ ವೇಳೆಯಲ್ಲಿ ಕೊಡಲಾಗುವದು. ಇದನ್ನು ವಯಸ್ಕರಿಗೆ ಪ್ರತ್ಯಕ್ಷ ಅಥವಾ ಭಾಷಣ, ಇಲ್ಲವೇ ಇನ್ನಿತರ ರೀತಿಯಿಂದ ಕೊಡಬಹುದು.

ಮೇಲಿನ ರೀತಿಗಿಂತಲೂ ಯಶಸ್ವಿಯಾಗಿ ಸಾಗಬೇಕಾದ-ಶ್ರವಣೇಂದ್ರಿಯ ಮುಖಾಂತರ ಶಿಕ್ಷಣ ಕೊಡುವುದು ಸರಕಾರಕ್ಕೆ ಸುಲಭವೆಂದು ತೋರಿ ಬಂದಿದೆ. ಆದ್ದರಿಂದ ಅವರು ಹಳ್ಳಿಯ ನಾಟಕಗಳಿಗೆ ಹೆಚ್ಚಿಗೆ ಪ್ರೋತ್ಸಾಹನ ಕೊಡುವರು. ಅ ಬಗ್ಗೆ ಯೋಗ್ಯ ಇನಾಮನ್ನೂ ಇಡುವರು. ಅದರಲ್ಲಿ ನಾಗರಿಕತೆ, ಸಮಾಜದ ಹೊಣೆಗಾರಿಕೆ, ವೈಯಕ್ತಿಕ ಸ್ವಚ್ಛತೆ, ಸಾರ್ವಜನಿಕ ಸ್ವಚ್ಛತೆ, ಶಾರೀರಿಕ ವ್ಯಾಯಾಮವೇ ಮೊದಲಾದವುಗಳನ್ನೊಳಗೊಂಡ ಫಿಲ್ಮುಗಳನ್ನು ತಯಾರಿಸಲು ಯೋಚಿಸಿದೆ. ಇವುಗಳ ಪ್ರಚಾರವನ್ನು ರೇಡಿಯೋ ಮುಖಾಂತರ ಇನ್ನೂ ದೊಡ್ಡ ಪ್ರಮಾಣದಿಂದ ಮಾಡುವ ಯೋಜನೆಯನ್ನು ಕೈಕೊಳ್ಳಲಾಗಿದೆ.

೧. ಮುಂದಿನ ಭಾರತದಲ್ಲಿಯ ಹಳ್ಳಿಯ ಶಾಲೆಗಳು ಬರೀ ಈಗಿನಂತೆ ಶಿಕ್ಷಣ ಕೇಂದ್ರವಾಗಿ ಉಳಿಯದೆ, ಅವು ಇಡೀ ಹಳ್ಳಿಯ ಸಲುವಾಗಿ ಆಟದ ಮತ್ತು ಮನೋರಂಜಕ ಕ್ಷೇತ್ರವಾಗುವವು.

೨. ಬಾಲ-ಬಾಲಕಿಯರಿಗಷ್ಟೇ ಅವುಗಳಲ್ಲಿ ಸ್ಥಾನವಿರದೆ ಪ್ರೌಢರಿಗೂ ಬೇರೆ ಬೇರೆ ಸಮಯ ಒದಗಿಸಿ ಕೊಡಲಾಗುವದು.

೩. ಕೆಲವು ಮೋಟಾರುಗಳಲ್ಲಿ ಧ್ವನಿವಾಹಕ ಯಂತ್ರವನ್ನಿಟ್ಟು ಫಿಲ್ಮುಗಳನ್ನು ಹಚ್ಚಿ ಹಳ್ಳಿಹಳ್ಳಿಗೂ ಪ್ರತಿಯೊಂದು ಶಾಲೆಗೂ ಕನಿಷ್ಠ ವಾರಕೊಮ್ಮೆಯಾದರೂ ಸುದ್ದಿಯನ್ನು ಬಿತ್ತರಿಸಲಾಗುವದು.

೪. ಶಾಲೆಗಳಿಗೆ ಆದಷ್ಟು ಹೆಚ್ಚು ರೆಡಿಯೋ ಸೆಟ್ಟುಗಳನ್ನು ಒದಗಿಸಿ ಕೊಟ್ಟು, ಹೆಚ್ಚಿಚ್ಚು ಫಿಲ್ಮುಗಳನ್ನು ಕೊಡುವ ವ್ಯವಸ್ಥೆ ಮಾಡಲಾಗುವದು.

ಉತ್ತಮ ನಾಟಕದ ಏರ್ಪಾಟು ಮಾಡಿಸಲಾಗು-
ಉತ್ತಮ ನಾಟಕಗಳಿಗೆ ಯೋಗ್ಯ ಪಾರಿತೋಷಿಕ
ಲಾಗುವದು.

ರಾಷ್ಟ್ರೀಯ ಮತ್ತು ಹಳ್ಳಿಯ ಕಾಡುಗಳ ಒಗ್ಗೆ
ಇಡಲಾಗುವದು.

ನ್ಯಾಯಿಕ ಉಪಯೋಗ, ನಿಕಾರವನ್ನಿಟ್ಟು ಶಿಲ್ಪಕಲೆಗೆ,
ಗಳ್ಳೆ, ಮಹತ್ವವನ್ನೀಯುವದು.

ಹಳ್ಳಿಗಳಿಗೆ ಸಮಾಜದ ಸ್ವಚ್ಛತೆಯ ನಿಯಮ,
ಕೃಷಿ ಶಾಸ್ತ್ರ, ಮನೆಯ ಉದ್ಯೋಗ ದಂಧೆ,
ಸರಕಾರಕ್ಕೆ ನರವಾಗುವ ಉಪನ್ಯಾಸ ಮುಂತಾ-
ಏರ್ಪಾಡು ಮಾಡುವದು.

ರಾಷ್ಟ್ರೀಯ ಮಹತ್ವದ ಸಮಸ್ಯೆಯ ಬಗ್ಗೆ ಹಳ್ಳಿಗ-
ಜಾಗ್ರತಗೊಳಿಸಲು ಒಮ್ಮೊಮ್ಮೆ ರಾಷ್ಟ್ರದ ಪ್ರಮುಖ-
ಕರೆಯಿಸಿ ವ್ಯಾಖ್ಯಾನದ ಏರ್ಪಾಡು ಮಾಡಲಾಗು-
ವದು. ಶಿಕ್ಷಣ ಕ್ಷೇತ್ರವನ್ನು ಕಾರ್ಯರೂಪಕ್ಕಿಳಿಸಲು ನ್ಯಾಸಿಕ
ಸಂಸ್ಥೆಯ ಸಹಾಯವನ್ನು ಆನಂದದಿಂದ ಸ್ವೀಕರಿಸುವದು.

೧೦. ಚಲಚ್ಚಿತ್ರದ ಏರ್ಪಾಡು ಮಾಡಲಾಗುವದು.
ಸಾಮೂಹಿಕ ಆಟದ ಏರ್ಪಾಡು ಮಾಡಲಾಗುವದು. ಅದ
ರಲ್ಲಿ ನಾನಾ ಬಗೆಯ ಆಟದ ಸೇರ್ಪಡೆಯಾಗುವದು.
ಒಮ್ಮೊಮ್ಮೆ ಪ್ರದರ್ಶನ, ಉತ್ಸವ, ಪ್ರವಾಸ ಮೊದಲಾದವು-
ಗಳ ವ್ಯವಸ್ಥೆ ಮಾಡಬಹುದು.

ಈ ರೀತಿ ಕಾಲಕಾಲಕ್ಕೆ ನಮ್ಮ ಜನಪ್ರಿಯ ಸರಕಾರವು
ಕೈಕೊಂಡ ಪ್ರತಿಯೊಂದು ಶಿಕ್ಷಣ ಕ್ಷೇತ್ರದಲ್ಲಿ ಜನತೆಯು
ಸ್ಪಂದಿಸಿ. ಮನ, ಧನದಿಂದ ಉದಾರ ಸಹಾಯ ನೀಡಿದರೆ
ಸರಕಾರದ ಪಂಚ ವಾರ್ಷಿಕ ಯೋಜನೆಯು ತ್ರೈವಾರ್ಷಿಕ-
ದಲ್ಲಿಯೇ ಕಾರ್ಯರಂಗಕ್ಕಿಳಿದು ಪೂರ್ಣವಸ್ತೆಗೆ ಬರುವದೆಂಬು
ದರಲ್ಲಿ ಏಲಮಾತ್ರವಾದರೂ ಸಂದೇಹವಿಲ್ಲ.

ಜೈಹಿಂದ



(ಅಡವಿಯ ದೃಶ್ಯ)

"ಮಹಾತ್ಮಾಗಾಂಧೀಜಿಯವರ—'ವಿಧಾಯಕ ಕಾರ್ಯಕ್ರಮ'"

ಬರೆದವರು: ಶ್ರೀ. ವಾಮನ ಭೀ. ಥಿಟೆ. ಧಾರವಾಡ.

[ಶಾಲಾ ಬಾಲಕರಿಂದ ಈ ಸಂಭಾಷಣೆಯನ್ನು ಅಭಿನಯಿಸಿದಲ್ಲಿ ಹಳ್ಳಿಗರಿಗೆ ಗಾಂಧಿಯವರ ವಿಧಾಯಕ ಕಾರ್ಯಕ್ರಮದ ಪರಿಚಯವು ಚೆನ್ನಾಗಿ ಆಗುವದು. ಇದನ್ನು ಅಭಿನಯಿಸಲು ಪ್ರಾಥಮಿಕ ಶಿಕ್ಷಣದ ಪ್ರಧಾನ ಸಂಪಾದಕರಿಂದ ಒಪ್ಪಿಗೆ ಪಡೆದುಕೊಳ್ಳಬೇಕಾಗಿ ವಿನಂತಿ. —ಸಂಪಾದಕರು.]

(ಖಿನ್ನ ಮುಖನಾಗಿ ಕಲ್ಲಪ್ಪ ತಮ್ಮ ಶಾಲೆಗೆ ಬಂದದ್ದನ್ನು ಕಂಡು ಬುದ್ಧಯ್ಯ ಮಾಸ್ತರರು ಮಾತನಾಡಿಸಲು ಪ್ರಾರಂಭಿಸುವರು).

ಬುದ್ಧಯ್ಯ ಮಾಸ್ತರ: "ಏನ ಕಲ್ಲಪ್ಪಾ, ಇಷ್ಟಾಕ ಸಣ್ಣ ಮಾರಿ ಮಾಡೀದಿ ಇವತ್ತಕ?"

ಕಲ್ಲಪ್ಪ: "ಏನ್ರಿ! ದೇವ್ರಂಥಾ ಮನಸ್ಯಾನ ಕಳಕೊಂಡು ಇಂಥ್ಗೆ ಒ ತಿಂಗಳ ಮ್ಯಾಗ ಆತು, ಆದರೂ ದುಃಖ ಮಾತ್ರ ಬಿಡಲೊಲ್ಲದು. ಜನ್ಮ ಜನ್ಮಕ್ಕರ ಅಂಥಾ ಮನಸ್ಯಾ ಸಿಗಾಣಿಲ್ರಿ."

ಬುದ್ಧಯ್ಯ ಮಾಸ್ತರ: "ನಿಜ, ಕಲ್ಲಪ್ಪಾ. ನನಗೂ ದುಃಖ ಆಗೇದ. ಬರೆ ದುಃಖಬಟ್ಟರ ಏನ ಆಗತದ. ಮಹಾತ್ಮಾ ಗಾಂಧಿಯವರನ್ನ ನಿಜವಾಗಿ ನಾವು ಪ್ರೀತಿಸತಿದ್ದರ ನಾವು ಅವರು ಹೇಳಿದಂತೆ ನಡೆದು ಜಗತ್ತಿಗೆ ಪಾಠ ಹಾಕಿ ಕೊಡಬೇಕು ನೋಡುಕ."

ಕಲ್ಲಪ್ಪಾ: "ನಮದ ನಮ್ಮ ಗತಿ ಇಲ್ಲ, ಉಳಿದ ದೇಶದ್ದೆನ್ರಿಯಪ್ಪಾವ್ರಕ?

ಬು. ಮಾಸ್ತರ: "ಹೌದು. ಮೊದಲು ಅಲ್ಲ ನೋಡು ಎದುರಿಗೆ ಗಾಂಧಿಯವರ ಚಿತ್ರ. ನಗುತ್ತಲಿದ್ದಾರೆ ಅಲ್ಲವೆ?"

ಕಲ್ಲಪ್ಪಾ: "ಹೌದ್ರಿಯಪ್ಪಾ ಎಂಥಾ ನಗಿರಿ ಅದು!"

ಬು. ಮಾಸ್ತರ: "ಅಂತಃಕರುಣದಿಂದ ಉಕ್ಕಿ ಬರುವ ನಗೆ! ಬರೇ ಅಷ್ಟೇ ಅಲ್ಲ ಅದರಾಗ ಅರ್ಥ ಅದ ತಿಳಿತಕ!?"

ಕಲ್ಲಪ್ಪಾ: ಅದ್ಯಾಂಗ್ರಿ ಮಾಸ್ತರಕ ಒಳ್ಳೇ ಹೇಳಾವ್ರು ನೋಡ್ರಿ ನೀವು"

ಬು. ಮಾಸ್ತರ: "ಅಂದ್ರ—'ತಾನು ಹೇಳುವ ಸತ್ಯ, ಅಹಿಂಸಾ ಮಾರ್ಗವನ್ನು ಜನರು ಆಚರಣೆಯಲ್ಲಿ ತರಲು ಎಷ್ಟು ಹಿಂದು ಮುಂದು ನೋಡುವರು. ಜಗತ್ತಿಗೆ ಪಾಠ ಹಾಕಿ ಕೊಡಬೇಕೆಂದರೆ ನಮ್ಮ ಜನರಲ್ಲಿಯೇ ಗುಣಗ್ರಾಹಕ ಶಕ್ತಿಯಿಲ್ಲವೊ? ಈ ತತ್ವಗಳನ್ನು ಮೈ ಗೂಡಿಸಿಕೊಳ್ಳುವ ಬುದ್ಧಿ ಇವರಲ್ಲಿ ಎಂದು ಬರುವದೋ? ಎಂಬ ವಿಚಾರ ಮಾಡಿ 'ಇರಲಿ, ಒಮ್ಮೆಯಾದರೂ ಇವರಿಗೆ ಬುದ್ಧಿ ಬಂದೀತು!' ಎಂದು ಅಂತಃಕರುಣಪೂರ್ವಕವಾಗಿ ವಿಚಾರಿಸಿ ನಸುನಕ್ಕು ಭಾರತಮಾತೆಯ ಕರುಣಾಜನಕ ಸ್ಥಿತಿಯನ್ನು ಕಂಡು ಅದನ್ನು ಮನಸಲ್ಲಿ ಹತ್ತಿಕ್ಕಲು ಪ್ರಯತ್ನಿಸುವಂತೆ ತೋರುವದಿಲ್ಲವೂ ಆ ನಗೆಯಲ್ಲಿ!"

ಕಲ್ಲಪ್ಪಾ: "ಘನ ವಿಚಾರ್ರಿಯಪ್ಪಾ ನಿಮ್ಮದು!"

ಬು. ಮಾಸ್ತರ: "ಅಷ್ಟೇ ಅಲ್ಲ. ಅವರು ಬರೀ ಮಾತಿನ ವೀರರಲ್ಲ. ಪ್ರಪಂಚದ ಯಥಾರ್ಥ ವಾದಿಗಳಲ್ಲಿ ದೊಡ್ಡ ಸ್ಥಾನ ಗಳಿಸಿದವರು. ಅಂಥವರಲ್ಲಿ ಸಾವಿರಾರು ಜೀವಿಗಳ ಸಾವು ಬದುಕಿನ ಸಮಸ್ಯೆಯನ್ನು ಬಿಡಿಸುವಾಗ ಸಲ್ಪವಾದರೂ ಆಲಸ್ಯಕ್ಕೆ ಎಡೆ ಇದ್ದೀತೆ?.....ಅಂತೆಲೆ ಅವರು ವಿಧಾಯಕ ಕಾರ್ಯಕ್ರಮಗಳನ್ನು ಜನರ ಮುಂದೆ ಇಟ್ಟರು. ಮತ್ತು ಅದರಂತೆ ಅವರು ಇಡೀ ಜೀವನದಲ್ಲಿ ಮಾಡಿ ತೋರಿಸಿದರು.

ಕಲ್ಲಪ್ಪ: "ವಿಧಾಯಕ ಕಾರ್ಯಕ್ರಮ ಅಂದ್ರೆಲ್ರಿ ಅದೇನ್ರಿ?

ಬು. ಮಾಸ್ತರ: ಮಹಾತ್ಮಾ ಗಾಂಧಿಯವರು—'ಸತ್ಯ ಮತ್ತು ಅಹಿಂಸಾ ಮಾರ್ಗಗಳ ಮೂಲಕ ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯ ಕಟ್ಟುವದಕ್ಕೇ

ವಿಧಾಯಕ ಕಾರ್ಯಕ್ರಮವೆಂದು ಹೆಚ್ಚು ಉಚಿತವಾಗಿ ಕರೆಯಬಹುದು ಎಂದು ಹೇಳಿದ್ರು, ನೋಡು.''

ಕಲ್ಲಪ್ಪ : " ಸ್ವಾತಂತ್ರ ಸಿಕ್ಕು ಒಂದು ವರ್ಷ ಆತ್ರಿ. ಇನ್ಯಾಕ್ರಿ ಆ ವಿಧಾಯಕ ಕಾರ್ಯಕ್ರಮ ?"

ಬು. ಮಾಸ್ತರ : ಸ್ವಾತಂತ್ರ್ಯನೋ ಮಹಾತ್ಮರಂಥವರ ತಪಃಪ್ರಭಾವದಿಂದ ದೊರಕಿತು. ಅದರ ಈಗ ಅದನ್ನು ಉಳಿಸಿಕೊಂಡು ಹೋಗುವ ಭಾರ ನಮ್ಮ ಮ್ಯಾಲೆ ಅದ ನೋಡು. ನೋಡಿಲ್ಲಾ ಜನರಲ್ಲಿ ಎಷ್ಟು ಅಸಂತೋಷ ! ಎಷ್ಟು ಪಾರ್ಟಿ ! ನಮ್ಮವರು ಮುಂದೆ ಬರಬೇಕು, ನಿಮ್ಮವರು ಮುಂದೆ ಬರಬೇಕು ಎಂಬ ಹಠ ಏನು !

ಕಲ್ಲಪ್ಪ : " ಹೌದು ನೋಡ್ರಿ, ಏನ ರೇಶನ್ ! ಬ್ಲ್ಯಾಕ ಮಾರ್ಕೆಟ ಏನು ! ಬಡವರ್ನ ವ್ಯಾಪಾರಸ್ಥರು ಹರಿದು ತಿಂತಾರ ನೋಡ್ರಿ. ಸುಖಾನ ಇಲ್ರಿ.''

ಬು. ಮಾಸ್ತರ : " ಇಷ್ಟೆಲ್ಲ ಯಾಕ ಆತು ಗೊತ್ತದನ ನಿನಗ. ಆ ಮಹಾತ್ಮಾ ಹೇಳಿದಂತೆ—ನಡಿಯಲಿಲ್ಲದ್ದಕ್ಕ. ಆತ ಹೇಳಿದ ವಿಧಾಯಕ ಕಾರ್ಯಕ್ರಮಗಳಲ್ಲಿ ಎಷ್ಟು ಆಚರಣೆಯಲ್ಲಿ ತಂದಿವಿ ಅಂಬೋದನ್ನಷ್ಟು ವಿಚಾರಿಸಿ ಏನಪಾ ?'

ಕಲ್ಲಪ್ಪ : " ಅದು ಎನೇನು ಅಂಬೋದನ್ನರ ಹೇಳ್ರಿದ್ಯಾವ್ರು "

ಬು. ಮಾಸ್ತರ : " ಅಲಾ ಕಲ್ಲಪ್ಪಾ, ನೀ ಕೇಳಿ ಇಲ್ಲ. ಪಾಂಗಾರ ಕೇಳು. ಮೊದಲನೆಯದಾಗಿ ಜಾತೀಯ ಐಕ್ಯ "

ಕಲ್ಲಪ್ಪ : " ನಮ್ಮ ಹಿಂದುಸ್ಥಾನದಾಗ ಎಷ್ಟರ ಜ್ಯಾತಿ ಅವ್ರಪ್ಪಾ ! "

ಬು. ಮಾಸ್ತರ : " ನಮ್ಮಲ್ಲಿ ಯಾಕೋ ? ಎಲ್ಲ ಕಡೆಗೂ ಅವ ! ಇರಲಿ. ಜಾತೀಯ ಐಕ್ಯ ಅಂದರೇನು? ಎಂಬುದನ್ನು ಚನ್ನಾಗಿ ತಿಳಿದುಕೋ. ಅದು ನಮ್ಮ ಮೇಲೆ ಹೇರಬಹುದಾದ ರಾಜಕೀಯ ಐಕ್ಯವು ಇಂತಹ ಐಕ್ಯವಲ್ಲವೆಂಬುದನ್ನು ಪ್ರತಿಯೊಬ್ಬನು ತಿಳಿದುಕೊಳ್ಳಬೇಕು. ಅಭೇದ್ಯ ಹೃದಯ ಐಕ್ಯವೇ ಇದು ! ಇಂತಹ ಐಕ್ಯವನ್ನು ಸಾಧಿಸಬೇಕಾದರೆ ಪ್ರತಿಯೊಬ್ಬ ಮನುಷ್ಯನು, ಅವನ ಜಾತಿ ಯಾವದೇ ಇರಲಿ, ತಾನು ಹಿಂದು, ಮುಸಲ್ಮಾನ, ಕ್ರಿಶ್ಚಿಯನ್ ಮತ್ತು ಯಹುದಿ ಮುಂತಾದವರ ಪ್ರತಿನಿಧಿಯೆಂದು ತಿಳಿಯಬೇಕು. ಸ್ವಲ್ಪದರಲ್ಲಿ ಹೇಳುವದಾದರೆ, ಹಿಂದು ಮತ್ತು ಹಿಂದೂಯೇತರನೆಂದು ತಿಳಿಯಬೇಕು. ಹಿಂದುಸ್ಥಾನದ ಲಕ್ಷಾಂತರ ನಿವಾಸಿಗಳಂತೆ ತಾನೂ ಒಬ್ಬನೆಂದು ತಿಳಿಯಬೇಕು. ಇಂತಹ ಭಾವನೆ ಬೆಳಿಸಬೇಕಾದರೆ ಇತರ ಜಾತಿಯ ಜನರೊಡನೆ ಸ್ನೇಹ ಮಾಡಬೇಕು. ತನ್ನ ಧರ್ಮದಂತೆ ಇತರ ಧರ್ಮಗಳನ್ನು ಮನ್ನಿಸಬೇಕು.

ಕಲ್ಲಪ್ಪ : "ಉಳಿದ ಧರ್ಮಗಳನ್ನು ಮನ್ನಿಸಿದರ ಏನ ಬರತದ್ರಿ''

ಬು. ಮಾಸ್ತರ "ಅಂತಹ ಆನಂದದಾಯಕ ವಾತಾವರಣದಲ್ಲಿ, ಇದು 'ಹಿಂದುಗಳ ನೀರು' ಮತ್ತು 'ಮುಸಲ್ಮಾನರ ನೀರು' ಅಥವಾ 'ಹಿಂದುಗಳ ಚಹಾ' 'ಮುಸಲ್ಮಾನರ ಚಹ' ಎಂಬ ಕೂಗುಗಳು ಸ್ಟೇಶನ್‌ಗಳಲ್ಲಿ ಕೇಳಬರುವದಿಲ್ಲ. ಶಾಲೆ-ಕಾಲೇಜಗಳಲ್ಲಿ ಹಿಂದು ಮತ್ತು ಇತರ ಜಾತಿಯವರಿಗಾಗಿ ಪ್ರತ್ಯೇಕ ಕೋಣೆಗಳಿರುವದಿಲ್ಲ. ಹೀಗಾಗಿ ಜಾತಿ ವಾಚಕ ಶಾಲೆಗಳೂ ದವಾಖಾನೆಗಳೂ ಇರುವದಿಲ್ಲ. ಇಂಥ ಹೃದಯದ ಐಕ್ಯವು ತರ್ಕ ಶುದ್ಧವಾಗಿದ್ದರೂ ಅದು ಅನೇಕರಿಗೆ ಆಶ್ಚರ್ಯಕರವೆಂದು ಕಂಡು ಬಂತೆನಪಾ. ಅಂತಹ ಆಶ್ಚರ್ಯಕರವಾದ ಘಟನೆಗಳನ್ನೇ ಗಾಂಧಿಯವರು ಕಾರ್ಯರೂಪದಲ್ಲಿ ತರಲು ಹೆಣಗಿದರು. ಅಂತೆಲೆ ನಮ್ಮಂತೆ ಅವರು ಸಾಮಾನ್ಯ ಮನುಷ್ಯರಲ್ಲ !"

ಕಲ್ಲಪ್ಪ : "ಅಸ್ಪೃ.....ಅಸ್ಪೃಶ್ಯತಾ ಅಂತಾ ಎನೋ ಅಂತಾರಲ್ರಿ ಅದೇನು ? "

ಬು. ಮಾಸ್ತರ : " ನಿಜ. ಅದೂ ಅವರ ವಿಧಾಯಕ ಕಾರ್ಯಕ್ರಮದಲ್ಲಿದೆ. 'ಅಸ್ಪೃಶ್ಯತಾನಿವಾರಣೆ' ತಿಳಿಯಿತೇ !" ಇದೊಂದು ಹಿಂದುಗಳ ಮುಖಕ್ಕೆ ಹತ್ತಿದ ಮಸಿ, ಕಾಂಗ್ರೆಸ್ಸಿಗರು ಈ ಸಂಬಂಧದಲ್ಲಿ ವಿಶೇಷ ಕಾರ್ಯಮಾಡ್ಯಾರ, ಏನಪಾ. ಮುಖ್ಯವಾಗಿ ಹರಿಜನರ ಏಳ್ಗೆಗಾಗಿ ಹಿಂದೂ ಜನರು ಹೋರಾಡಬೇಕು ಅಂದರ ಸ್ವಾತಂತ್ರದ ಈ ಹೊಸ ಗಾಳಿಯನ್ನು ಸೇವಿಸಲು ಅನುಕೂಲ ಆಗತದ ಎಂದು ರಗಡಸರೆ ಹೇಳಿದ್ರು ನೋಡು."

ಕಲ್ಲಪ್ಪಾ: " ನಿಜ ನೋಡ್ರಿ. ಬಡವರ ತಂದೆ ಖರೆ ನೋಡ್ರಿ ಅವರು. ಮತ್ಯಾವದನ್ನ ಬಡವರ ಕಲ್ಯಾಣಕ್ಕಾಗಿ ಹೇಳಿದ್ರಿ ? "

ಬು. ಮಾಸ್ತರ: " 'ಪಾನನಿರೋಧ'—ಜಾತೀಯ ಐಕ್ಯ, ಅಸ್ಪೃಶ್ಯತಾ ನಿವಾರಣೆಗಳಂತೆ ಇದು ಒಂದು ಮುಖ್ಯ ನೋಡು. ಅಂದರ ಗಡಂಗ.....ಗಡಂಗ.....ಕುಡಿಯೋದನ್ನ ಬಂದು ಮಾಡೋದು. ನಮ್ಮ ದೇಶದಲ್ಲಿ ಮಾದಕಪೇಯ ಮತ್ತು ಪದಾರ್ಥಗಳ ಪಾಶದಲ್ಲಿ ಜರ್ಜರಿತ

ರಾದ ಲಕ್ಷಾನುಲಕ್ಷ ಸ್ತ್ರೀಪುರುಷರು ಹಾಳಾಗುವುದನ್ನು ನಾವು ನೋಡಿಲ್ಲ. ಆ ಅನಿಷ್ಟ ನಿವಾರಿಸಬೇಕಾದರೆ ನಮ್ಮ ವೈದ್ಯರು ಮುಂದೆ ಬರಬೇಕು. ಅವರು ಕುಡುಕರನ್ನೂ ಅಫೂ ಸೇವಿಸುವರನ್ನೂ ಆ ದುಷ್ಟಟಗಳಿಂದ ಪರಾವೃತ್ತಗೊಳಿಸಲು, ಹೊಸ ಮಾರ್ಗ ಶೋಧಿಸಬೇಕು. ಮಾನನಿರೋಧ ಮದ್ರಾಸ ಇಲಾಖೆಯಲ್ಲಿ ಚನ್ನಾಗಿ ನಡೆದಿದೆ. ಎಲ್ಲ ಕಡೆಗೂ ಅದನ್ನು ಬಂದು ಮಾಡುವರು. ಮುಖ್ಯವಾಗಿ ನಮ್ಮಲ್ಲಿ ತ್ಯಾಗ ಬುದ್ಧಿ ಇರಬೇಕು ನೋಡು. ಅಂದರ ಈ ದುಷ್ಟಟಗಳು ತಮ್ಮಿಂದ ತಾವ ಓಡಿ ಹೋಗತಾವ."

ಕಲ್ಲಪ್ಪ. "ನಾನೂ ಮೊದಲು ಕುಡೀತಿದ್ದೆ. ಗಾಂಧ್ಯಪ್ಪನ ಪುಣ್ಯಾದಿಂದ ಬಿಟ್ಟೆ ನೋಡ್ರಿ. ಬಡವರು ಬಹಳ ಹಾಳಾಗತಾರ್ರಿ."

ಬು. ಮಾಸ್ತರ: "ಅದಕ್ಕೆ ಹೇಳೋದು ಕುಡಿಬ್ಯಾಡ್ರಿ ಎಂದು. ಮತ್ತ ಕೇಳು. 'ಖಾದಿ ಪ್ರಸಾರ' ಒಂದು ಮುಖ್ಯ ನೋಡು.

ಕಲ್ಲಪ್ಪಾ: "ಖಾದಿ, ಖಾದಿ ಎಷ್ಟ ಸರಿ ಹೇಳತಿರ್ರಿ. ಅದರಿಂದ ಏನು ಉಪಯೋಗ? ಚಕಮಕ ರೇಶಿಮೆ ಉಣ್ಣೆನ ಪಾಡ ನೋಡ್ರಿ."

ಬು. ಮಾಸ್ತರ: "ಎಂದು ಉಟ್ಟಿದ್ದಿಪ್ಪಾ ಮಗನ, ರೇಶಿಮೆ ಅಂತ ರೇಶಿಮಿ! ನಮ್ಮ ಹಿತಕ್ಕಲ್ಲೋ ಇದು ಹೇಳೋದು. ಬಡವರ ಹಿತಕ್ಕ. ಬಡವರಿಂದ ತುಂಬಿದ ಹಿಂದುಸ್ಥಾನದ ಹಿತಕ್ಕ ತಿಳಿಯತ! 'ಖಾದಿ' ಅಂದರೆ ಬರೆ ಉರುಟು ಬಟ್ಟೆ ಎಂದು ತಿಳಿಯಬ್ಯಾಡಾ, ಪೂರ್ಣ ಅರ್ಥ ತಿಳಿದುಕೋ; ಖಾದಿ ಅಂದರ— ನೋಡಿದಲ್ಲೆಲ್ಲ ಸ್ವದೇಶಿ ಮನೋವೃತ್ತಿ ಇರಬೇಕು. ಅಂದರ ಈ ಸಾಮಾನು ನಮ್ಮ ದೇಶದ್ದು ಎಂಬ ಅರಿವು ಇರಬೇಕು. ಜೀವನಕ್ಕ ಯಾವ ಸಾಮಾನು ಬೇಕೋ ಅವೆಲ್ಲವೂ ನಮ್ಮ ದೇಶದಲ್ಲಿಯೇ ದೊರಿಯುವಂತೆ ಆಗಬೇಕು. ಮತ್ತು ಹಳ್ಳಿಗರ ಬುದ್ಧಿಶಕ್ತಿಯಿಂದ ಅವನ್ನು ದೊರಿಕಿಸಲು ಸಹಾಯವಾಗುತ್ತದೆ. ಇದು ಖಾದಿಯ ಗುಟ್ಟು! ಮತ್ತು ಪಂ. ಜವಾಹರರು ಹೇಳಿದಂತೆ 'ಹಿಂದೀ ಸ್ವಾತಂತ್ರ್ಯದ ಸಮವಸ್ತ್ರವಾಗಿರುವುದು.'

ಕಲ್ಲಪ್ಪ: "ಹಳ್ಳಿಗಳಲ್ಲಿ ಮಾಡುವ ಕೆಲಸಗಳು ಇನ್ಯಾವವರಿ?"

ಬು. ಮಾಸ್ತರ: ಮಾಡಬೇಕಂದ್ರ ಬೇಕಾದಷ್ಟವ. ಆ ಗ್ರಾಮೋದ್ಯೋಗಗಳು ಖಾದಿಗೆ ಸಹಾಯಕವಾಗಿರುವವು ಖಾದಿಯ ಹೊರತು ಇವು ಬದುಕಲಾರವು. ಮತ್ತು ಇವು ಇಲ್ಲದಿದ್ದರೆ ಖಾದಿಯ ಪ್ರತಿಷ್ಠೆ ಬೆಳಿಯಲಾರದು. ಅವು—ಕೈಯಿಂದ ಬೀಸುವುದು, ಕುಟ್ಟುವುದು, ಸಾಬಾಣ ತಯಾರಿಸುವುದು, ಕಾಗದ ಮಾಡುವದು, ಬೆಂಕಿ ಕಡ್ಡಿಗಳನ್ನು ಸಿದ ಪತಿಸುವುದು. ತೊಗಲು ಹದಮಾಡುವುದು, ಎಣ್ಣೆ ತೆಗೆಯುವುದು ಮುಂ.

ಕಲ್ಲಪ್ಪ: "ಇನ್ನೂ ಆತ್ರಿ ಅದರಲ್ಲಿ ಅಕ್ಷರ ಇದ್ಯಾಕ ಏನ ಹೇಳ್ಯಾರ್ರಿ"

ಬು. ಮಾಸ್ತರ: "ಪ್ರೌಢರ ಶಿಕ್ಷಣ" ಎಂದು ಗೊತ್ತಿಲ್ಲ ನಿನಗೆ? ಈಗ ಮುದಕರಿಗೂ ಕಲಿಸಲಿಕ್ಕೆಹತ್ಯಾರ-ಕಲಿಯೋಣ ಬಾರೋ! ಕಲಿಯೋಣ ಬಾ! ಪಾಟಿ ಪೇನಾ ಬುಕ್ಕ ಹಿಡಿ ಬೇಕ್ಕಜೇರಕ ಅಂತ ಗಾಂಧಿಯವರಿಗೆ ಹಳ್ಳಿಗಳ ಸ್ವಭಾವ ಪೂರ್ಣತಿಳಿದಿತ್ತು. ಆದಕ್ಕ ಅವರಲ್ಲಿಯ ಅಜ್ಞಾನವನ್ನು ಹೋಗಲಾಡಿಸಲುಬಾಯಿಮಾತಿನಿಂದ ಪ್ರೌಢರಿಗೆರಾಜಕೀಯ ಶಿಕ್ಷಣ ಕೊಡಬೇಕು ಎಂದು ಅವರು ಹೇಳಿದರು. ಆಮ್ಯಾಲ ಬಾಯಿ ಮಾತಿನ ಶಿಕ್ಷಣ ಜೊತೆಗೆ ಓದು ಬರಹವನ್ನೂ ಪ್ರಾರಂಭಿಸಬೇಕು. ಅಂದರ ನಿಮ್ಮನ್ನೆಲ್ಲಾ ಜ್ಞಾನಿಗಳನ್ನಾಗಿ ಮಾಡಲು ಬರುವುದು. ಇದರಂತೆ ಮೂಲ ಶಿಕ್ಷಣವನ್ನು ಹಳ್ಳಿ ಬಾಲಕರಿಗೆ ಆಗಲಿ ಪಟ್ಟಣದ ಬಾಲಕರಿಗ ಆಗಲಿ ಕೊಟ್ಟರೆ ಹಿಂದುಸ್ಥಾನದಲ್ಲಿಯ ಉತ್ತಮ ಹಾಗೂ ಶಾಶ್ವತವಾದ ವಿಷಯಗಳ ಜ್ಞಾನ ಅವರಿಗೆ ಆಗತದ. ಹಿಂದುಸ್ಥಾನದ ಮುಂದಿನ ಸಂಪತ್ತಾದ ಬಾಲಕರನ್ನು ಇದರಿಂದ ತಯಾರಿಸಲು ಬರುತ್ತದೆ."

ಕಲ್ಲಪ್ಪ: ನಮ್ಮದು ನಮ್ಮ ಮಕ್ಕಳದು ಆತ್ರಿ. ನಮ್ಮ ಹೆಂಗಸರ ಪಾಡೇನ್ರಿ?"

ಬು. ಮಾಸ್ತರ: "ಕಲ್ಲಪ್ಪಾ, ಖರೆ ರಸಿಕ ನೋಡ ನೀನು! ಹೆಂಗಸರನ್ನು ಸುಧಾರಿಸಲು 'ಮಹಿಳಾ ಉದ್ಧಾರ' ಎಂಬೂದು ಅದರಲ್ಲಿ ಅದ. ಸ್ವರಾಜ್ಯ ಹೋರಾಟದಲ್ಲಿ ಸ್ತ್ರೀಯರು ಸಮ ಭಾಗಿಗಳೆಂದು ತಿಳಿಯಬೇಕು. ಸ್ತ್ರೀಯರನ್ನು ಹಳೇ ಕಾಲದ ಗುಲಾಮರಂತೆ ನಡಿಸಿಕೊಳ್ಳದೆ, ಅವರು ತಮ್ಮ ಸಹೋದ್ಯೋಗಿಗಳು, ಮಿತ್ರರು ಎಂದು ತಿಳಿದುಕೊಂಡು, ಅವರು ಕೇವಲ ಆಟದ ಗೊಂಬೆ ಇಲ್ಲವೆ ಭೋಗ್ಯ ವಸ್ತುಗಳೆಂದು ತಿಳಿದುಕೊಳ್ಳದೇ ಸನ್ಮಾನ್ಯ ಸ್ನೇಹಿತರೆಂದು ತಿಳಿದುಕೊಳ್ಳಬೇಕೆಂದು ತಿಳುಹಿ ಮಹಿಳೆಯ ಉದ್ಧಾರಗೈಯ್ಯಲು ಹೆಣಗಿದರು, ಅಲ್ಲ ಕಲ್ಲಪ್ಪಾ ನಿನ್ನ

ಹಣತಿ ನಿನ್ನ ಆಳತಾಳೇನು ಮತ್ತ ? ಒಟ್ಟಿನ ಮೇಲೆ ಸ್ತ್ರೀ ಪುರುಷರು ಸಹಕಾರ, ಪರಸ್ಪರ ವಿಚಾರ ವಿನಿಮಯದಿಂದ ನಡೆದುಕೊಂಡರೆ ಸಮಾಜ ತಾನೇ ಸುಧಾರಿಸುವುದು ನೋಡು !"

ಕಲ್ಲಪ್ಪಾ : " ವಿದ್ಯಾ ಅತ್ರಿ ಆರೋಗ್ಯಕ್ಕೇನು ಮಾಡ ಬೇಕ್ರಿ ?"

ಬು. ಮಾಸ್ತರ : ಹಳ್ಳಿಯ ಆರೋಗ್ಯ-ರಕ್ಷಣೆ ಮಾಡು ವುದು ಮೊದಲು ಮುಖ್ಯವಾದದ್ದು ನೋಡು. ಹಳ್ಳಿಗಳು ಸಗಣಿಯ ತಿಪ್ಪೆಗಳಾಗದಂತೆ ನೋಡಬೇಕು. ಕುಡಿಯುವ ನೀರಿನಲ್ಲಿ ಸ್ನಾನ ಮಾಡುವದನ್ನು ನಿಲ್ಲಿಸಬೇಕು. ಇದ ಲ್ಲದೆ ಆರೋಗ್ಯ ವಿಜ್ಞಾನದ ವಿಷಯವಾಗಿ ಜ್ಞಾನವಾದರೆ ಮರಣ ಸಂಖ್ಯೆಯನ್ನು ಕಡಿಮೆ ಮಾಡಬಹುದು.

ಕಲ್ಲಪ್ಪಾ : " ಆರೋಗ್ಯ ಮತ್ತ ವಿಜ್ಞಾನ ಅಂದರೇನ್ರಿ?"

ಬು. ಮಾಸ್ತರ : " ಅವುಗಳ ಬಗ್ಗೆ ಇನ್ನ ನಿಯಮ ಕೇಳು ಅಂದ್ರ ಅದು ತಿಳಿತದ. ಅವು— (೧) ಒಳ್ಳೆಯ ವಿಚಾರಗಳನ್ನು ಮಾಡಬೇಕು. ದುಷ್ಟ ಮತ್ತು ಕೆಲಸ ವಿಲ್ಲದ ವಿಚಾರಗಳನ್ನು ಎಂದೂ ತಲೆಯಲ್ಲಿ ತುಂಬಿಕೊಳ್ಳ ಬಾರದು. (೨) ಹಗಲು ಮತ್ತು ರಾತ್ರಿಯಲ್ಲಿ ಅದಷ್ಟು ಶುದ್ಧವಾದ ಹವೆಯನ್ನೇ ಸೇವಿಸಬೇಕು. (೩) ದೈಹಿಕ ಮತ್ತು ಬೌದ್ಧಿಕ ಕೆಲಸಗಳಲ್ಲಿ ಸಮತೂಕವಿರಬೇಕು. (೪) ನೀಟಾಗಿ ನಿಲ್ಲಿರಿ. ನೀಟಾಗಿ ಕುಳಿತುಕೊಳ್ಳಿರಿ. ಮತ್ತು ಪ್ರತಿಯೊಂದು ಕಲಸವನ್ನು ನಿರ್ಮಲವಾಗಿ ಓರಣದಿಂದಲೂ ಮಾಡಬೇಕು. (೫) ನೆರೆಯವರ ಸಲುವಾಗಿ ಬದುಕಲು ಆಹಾರ ಸೇವಿಸ ಬೇಕು ಭೋಗಲಾಲಸೆಗಾಗಿ ಜೀವಿಸಬಾರದು.

ಕಲ್ಲಪ್ಪ : " ಎಷ್ಟ ಸುಲಭ (ಹಗುರ) ಅವರ್ರಿ. "

ಬು. ಮಾಸ್ತರ : "ಇವು ಸುಲಭ ಕಂಡರೂ ಅವುಗಳಂತೆ ವರ್ತಿಸುವುದು ಬಹಳ ಕಠಿಣ. ಆದರೆ ಗಾಂಧಿಯವರು ಹಾಗೆ ನಡೆದರು. ಇಷ್ಟ ಅವರ ವಿಧಾಯಕ ಕಾರ್ಯಗಳು ತಿಳಿತ !"

ಕಲ್ಲಪ್ಪ : " ಎಷ್ಟರ ಕಷ್ಟ ಪಟ್ಟಿಪ್ಪ ಗಾಂಧ್ಯಪ್ಪ ನಮ್ಮ ಸಲುವಾಗಿ ! "

ಬು. ಮಾಸ್ತರ : " ಬರೆ ಅಷ್ಟೇ ಅಲ್ಲ ಕಲ್ಲಪ್ಪಾ, ಅವರು ತಮಗಾಗಿ ಬಾಳಲಿಲ್ಲ. ಇತರರ ಮೇಲ್ಮೈಗಾಗಿಯೇ ಅವರು ತಮ್ಮ ಬಾಳುವಿಕೆಯನ್ನು ಆದ್ಯಂತವಾಗಿ ಮೀಸಲಾಗಿರಿ ಸಿದ್ದರು. ಇಂತಹ ಮಹಾತ್ಯಾಗ ಮೂರ್ತಿಯನ್ನು ನಾವು ಚಿರಕಾಲ ಸ್ಮರಿಸಬೇಕು. ಕೇವಲ ಅವರ ಹುಟ್ಟಿದ ದಿನ ಆಚರಿಸಿದರೆ ಸಾಲದು. ಅವರ ಸತ್ಯ ಸಂಕಲ್ಪವನ್ನು ಅನು ದಿನವೂ ಅತ್ಯಂತ ಪ್ರೀತ್ಯಾದರಗೌರವಗಳಿಂದ ಒಬ್ಬೊಬ್ಬರೂ ಆಚರಣೆಗೆ ತರುವುದರಿಂದ ಮಾತ್ರ ಮಹಾತ್ಮರಿಗೆ ಅವರ ವಾದ ಕೀರ್ತಿಲಭಿಸಿ ಅವರು ದೊರಕಿಸಿಕೊಟ್ಟಂಥ ಸ್ವಾತಂ-ತ್ರ್ಯದ ಸಾರ್ಥಕತೆ ಆಗತದ ತಿಳಿತ ! ಇದೇ ಅವರ ಪವಿತ್ರ ವಾದ ಜೀವನದ ಗುಟ್ಟು."

ಕಲ್ಲಪ್ಪ : " ಮಾಸ್ತರ, ಗಾಂಧಿಯವರ ಪ್ರಿಯವಾದ ಗುಟ್ಟು ತಿಳಿಸಿ ಬಹಳ ಉಪಕಾರ ಮಾಡಿದಿ. ಇದಾತ್ತ ನಾ ಧನ್ಯಾದೆ ನೋಡ್ರಿ. ಜೀವನಕ್ಕೆ ಸುಖ ಆಗಬೇಕಾದ್ರ ಭೂಮಿಯ ಮೇಲೆ ಒಂದು ಅದಷ್ಟ ಧಾರ ಆಗದ ಮಡಿಯ ಬೇಕು ಅಂತಾ ತಿಳಿತ ನೋಡ್ರಿ "

ಬು. ಮಾಸ್ತರ: "ಇದ ಬೇಕಾಗೇದ ನೋಡು. ನಿನ್ನಂತೆ ಸುಧಾರಿಸಿದರ ಕೇಳತೀಯೇನು ? ಹಿಂದುಸ್ಥಾನದ ಕೈ ಹಿಡಿ ಯಲು ಯಾರಿಗೂ ಸಾಧ್ಯವಿಲ್ಲ ! ಆ ದಿನವೇ ಗಾಂಧಿಯವರ ಪುನರಾವತಾರ ಅತಂತ ತಿಳಿ."

* * *

[ಆ ಮೇಲೆ ಇಬ್ಬರೂ ಮೊದಲು ನೋಡಿದ ಗಾಂಧಿಯ ವರ ಚಿತ್ರಕ್ಕೆ ಪುಷ್ಪಮಾಲೆಗಳನ್ನು ಅರ್ಪಿಸಿ ತಮ್ಮ ತಮ್ಮ ಮನೆಗೆ ತೆರಳುವರು.]

* * * *

ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣದ ವ್ಯವಸ್ಥೆಗಾಗಿ ಒಂದು ಯೋಜನೆ

ಲೇಖಕರು: ಆಲ್. ಎಲ್. ಪಾಟೀಲ ಬಿ. ಎಸ್. ಸಿ., ಬಿ. ಟಿ., ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ವಿಜ್ಞಾನ ಶಿಕ್ಷಣದ ಅವಶ್ಯಕತೆ :— ಇಂದಿನ ಯುಗವು ವಿಜ್ಞಾನ ಯುಗ. ವಿಜ್ಞಾನದಿಂದ ಮಾನವನ ಪ್ರಗತಿಯಾಗಿದೆ. ವಿಜ್ಞಾನಿಗಳು ಮಾನವನ ಜೀವನವನ್ನು ಸುಖಮಯ ಮಾಡುವದಕ್ಕಾಗಿ ತಮ್ಮ ಜೀವಮಾನವನ್ನೇ ಕಳೆಯುತ್ತಾರೆ. ಇವರಿಗೆ ಜ್ಞಾನದ ಹಂಬಲ. ಜ್ಞಾನದಿಂದ ಮಾನವನ ಪ್ರಗತಿ. ಕೆಲವು ಕಡೆಗೆ ವಿಜ್ಞಾನದ ದುರುಪಯೋಗವಾಗಿರಬಹುದು. ಆದರೆ ವಿಜ್ಞಾನದ ದುರುಪಯೋಗ ಮಾಡಿಕೊಳ್ಳುವವರು ರಾಜಕಾರಣಿಗಳು; ವಿಜ್ಞಾನಿಗಳಲ್ಲ. ವಿಜ್ಞಾನವು ಪ್ರತಿಯೊಬ್ಬನ ಮನೆಯಲ್ಲಿಯೂ ಇದೆ. ವಿಜ್ಞಾನವನ್ನು ಬಿಟ್ಟು ನಾವುದೂರ ಇರಲಿಕ್ಕಾಗದು. ಆದರಿಂದ ನಮಗೆ ಪ್ರತಿನಿತ್ಯ ಸಂಬಂಧ ಬರುವ ವಿಜ್ಞಾನದ ಪರಿಚಯವು ಎಲ್ಲರಿಗೂ ತುಸು ಮಟ್ಟಿಗಾದರೂ ಇರಬೇಕಾದುದು ಅತ್ಯವಶ್ಯವಾಗಿದೆ. ವಿಜ್ಞಾನದ ಸಾಮಾನ್ಯ ಜ್ಞಾನ ವಿಲ್ಲದವನು ನಿರಕ್ಷರಿಯೆಂದೇ ಹೇಳಬಹುದು.

ಇದಲ್ಲದೆ ವಿಜ್ಞಾನದ ಅಭ್ಯಾಸದಿಂದ ಮನುಷ್ಯನ ಒಂದು ವಿಚಾರ ಸರಣಿಯೇ ಬದಲಾಗುತ್ತದೆ. ಅವನ ಮೂಢ ನಂಬಿಕೆಗಳು ಹೋಗಿ ಅವನಲ್ಲಿ ಸಾರಾಸಾರ ವಿಚಾರ ಮಾಡುವ ಶಕ್ತಿ ಬೆಳೆಯುತ್ತದೆ. ಅವನು ಯಾಕೆ, ಹೇಗೆ, ಏನು, ಎಂದು ಪ್ರಶ್ನೆಮಾಡಿ, ಅನುಭವದಿಂದ ಮತ್ತು ಪ್ರಯೋಗದಿಂದ ಸಿದ್ಧಮಾಡಿದ ಸಂಗತಿಗಳಲ್ಲಿಯೇ ನಂಬಿಕೆ ಇಡುತ್ತಾನೆ. ಈ ಮನೋವೈವಿಧ್ಯವು ಪ್ರಗತಿಗೆ ಸಾಧನ. ಜೀವನದಲ್ಲಿ ಇದು ಹೆಚ್ಚು ಸಹಾಯವಾಗುತ್ತದೆ.

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕನಂತರ ಸಾಮಾನ್ಯ ಜನತೆಗೆ ಇದರ ಅವಶ್ಯಕತೆ ಇನ್ನೂ ಹೆಚ್ಚಾಗಿದೆ. ಈಗಿನ ಯುದ್ಧವೆಂದರೆ ವಿಜ್ಞಾನದ ಯುದ್ಧ. ಯುದ್ಧ ಕಾಲದಲ್ಲಿ, ದೇಶ ರಕ್ಷಣೆಯ ಕಾರ್ಯದಲ್ಲಿ ಎಲ್ಲರೂ ನೆರವಾಗಬೇಕಾಗುತ್ತದೆ. ವಿಮಾನ ದಾಳಿಯಿಂದ ತಮ್ಮ ರಕ್ಷಣೆಮಾಡಿಕೊಳ್ಳಬೇಕಾಗುತ್ತದೆ. ಪಿಡುಗಿನ ರೋಗಗಳು ಹಬ್ಬಿದರೆ ಅವನ್ನು ಪ್ರತಿಬಂಧಿಸಬೇಕಾಗುತ್ತದೆ. ಆಹಾರದ ಕೊರತೆಯಾದರೆ ಸಿಕ್ಕ ರೇಶನ್ನಿನಿಂದ ಆರೋಗ್ಯ ಕಾಯ್ದುಕೊಳ್ಳಬೇಕಾಗುತ್ತದೆ. ಆದ್ದರಿಂದ ಎಲ್ಲರಿಗೂ ದೊರೆಯುವ ಸಾಮಾನ್ಯ ಶಿಕ್ಷಣದಲ್ಲಿ ವಿಜ್ಞಾನದ ಅಭ್ಯಾಸವನ್ನು ಒಳಪಡಿಸುವದು ಸ್ವಾಭಾವಿಕ.

ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಕಲಿಸಲು ಸಾಧ್ಯವಿದೆ

ವ್ಯಕ್ತಿ ಮತ್ತು ಸಮಾಜದ ಆರೋಗ್ಯ ರಕ್ಷಣೆಗಾಗಿ ಆರೋಗ್ಯಶಾಸ್ತ್ರ, ತನ್ನ ಸುತ್ತಲಿನ ಪ್ರಾಣಿ ಮತ್ತೂ ವನಸ್ಪತಿಗಳ ಜೀವನ, ಸೃಷ್ಟಿಯಲ್ಲಿ ಮುಖ್ಯವಾಗಿ ಆಕಾಶದಲ್ಲಿ ಆಗುವ ನೈಸರ್ಗಿಕ ಬದಲಾವಣೆಗಳು ಮತ್ತು ಮನುಷ್ಯನ ಮೇಲೆ ಅವುಗಳ ಪರಿಣಾಮ, ಎಲ್ಲ ಶಾಸ್ತ್ರಕ್ಕೂ ತಳಹದಿಯಾದ ಪದಾರ್ಥ ವಿಜ್ಞಾನ ಶಾಸ್ತ್ರ, ಮತ್ತು ರಸಾಯನ ಶಾಸ್ತ್ರಗಳ ಮೂಲ ತತ್ವಗಳು, ಇವು ಆವಶ್ಯಕವಾದದ್ದರಿಂದ ಈ ವಿಷಯವನ್ನು ಪ್ರಾಥಮಿಕ ಶಾಲೆಯ ಅಭ್ಯಾಸ ಕ್ರಮದಲ್ಲಿ ಅಳವಡಿಸಬೇಕು.

ಸದ್ಯದ ಶಿಕ್ಷಣ:— ಸದ್ಯಕ್ಕೆ ಪ್ರಾಥಮಿಕ ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಸಾಮಾನ್ಯ ವಿಜ್ಞಾನವನ್ನು ಸೇರಿಸಿದ್ದರೂ ಅದರ ಅಭ್ಯಾಸವು ಸರಿಯಾಗಿ ನಡೆದಿರುವದಿಲ್ಲ. ಸಾಕಷ್ಟು ಉಪಕರಣ, ಮತ್ತು ಯೋಗ್ಯ ಶಿಕ್ಷಕರಿಲ್ಲದ ಮೂಲಕ ವಿಜ್ಞಾನ ಶಿಕ್ಷಣವು ಹೆಸರಿಗೆ ಮಾತ್ರ ನಡೆದಿದೆ. ವಿದ್ಯಾರ್ಥಿಗಳು ವಿಜ್ಞಾನದ ಕೆಲವು ಪುಸ್ತಕಗಳನ್ನು ಓದಿ ಕೆಲವು ಸಂಗತಿಗಳನ್ನು ಪಾಠಮಾಡಿ ಪರೀಕ್ಷೆಯಲ್ಲಿ ನೆನಪಿದ್ದ ಸಂಗತಿಗಳನ್ನು ಬರೆಯುತ್ತಾತೆ. ಕೆಲವು ಶಾಲೆಗಳಲ್ಲಿ ತುಸು ಹಳೇ ಉಪಕರಣಗಳು ಇದ್ದರೂ, ಅವನ್ನು ಉಪಯೋಗಿಸಲು ಶಿಕ್ಷಕರಿಗೇ ಸಾಕಷ್ಟು ಜ್ಞಾನವಿಲ್ಲದ್ದರಿಂದ ಅವು ಉಪಯೋಗಿಸಲ್ಪಡದೆ ಧೂಳಿ ಮತ್ತು ಜಂಗು ತಿನ್ನಹತ್ತಿರುತ್ತವೆ. ಹೀಗಾಗುವದರಿಂದ ವಿಜ್ಞಾನದ ನಿಜವಾದ ಜ್ಞಾನವು ಆಗ

ಬರದು. ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಬರೆದ ಉತ್ತರ ಗಳ ಮಟ್ಟವೂ ಕೆಳ ದರ್ಜೆಯದಿದೆ.

ಹೊಸ ಯೋಜನೆ:— ಪ್ರಾಥಮಿಕ ಶಾಲೆಯ ೫, ೬ ನೆಯ ಮತ್ತು ೭ನೆಯ ಇಯತ್ತೆಯಲ್ಲಿ ಮಾತ್ರ ಶಾಸ್ತ್ರೀಯ ಉಪ ಕರಣಗಳ, ಮತ್ತು ಶಾಸ್ತ್ರೀಯ ಶಿಕ್ಷಕನ ಅವಶ್ಯಕತೆ ಇದೆ. ಇದ್ಯಕ್ಕೆ ದಕ್ಷಿಣ ಭಾಗದಲ್ಲಿ ಒಂದು ತಾಲೂಕಿನೊಳಗೆ ಇಂಥ ೧—೧೦ ಶಾಲೆಗಳಿವೆ. ಆರ್ಥಿಕ ದೃಷ್ಟಿಯಿಂದ ಎಲ್ಲ ಶಾಲೆ ಳಿಗೂ ಉಪಕರಣಗಳನ್ನು ಮತ್ತು ಯೋಗ್ಯ ಶಿಕ್ಷಕನನ್ನು ಕೊಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಕೆಳಗಿನ ಪ್ರಾಥಮಿಕ ಯೋಜನೆಯನ್ನು ಮಾಡುವದು ಅವಶ್ಯವಿರು ವದೆ.

ಪ್ರತಿಯೊಂದು ತಾಲೂಕಿನ ಸ್ಥಳದಲ್ಲಿ ಒಂದು ಮಧ್ಯ ಮ ಪ್ರಯೋಗ ಶಾಲೆಯನ್ನು ಸ್ಥಾಪಿಸಬೇಕು. ಈ ಯೋಗ ಶಾಲೆಯ ಒಬ್ಬ ಅನುಭವಿಕ ಮ್ಯಾಟ್ರಿಕ್ ಪಾಸಾದ ವನ್ನು ಮತ್ತು ಈ ಕೆಲಸದಲ್ಲಿ ತರಬೇತಿ ಹೊಂದಿದ ಶಿಕ್ಷಕನ ಅಂಕಿತ ವಿರಬೇಕು. ಮತ್ತು ಅದು ಸ್ಕೂಲಬೋರ್ಡ ಆಡಳಿತೆಗೆ ಒಪಟ್ಟಿರಬೇಕು. ಹೀಗಾದಲ್ಲಿ ದಕ್ಷಿಣ ಭಾಗದಲ್ಲಿ ಇಂಥ ೨—೪೦ ಪ್ರಯೋಗ ಶಾಲೆಗಳಾಗುವವು. ಇವುಗಳ ಮೇಲ್ವಿಚಾರಣೆಗಾಗಿ, ಮತ್ತು ಮಾರ್ಗದರ್ಶನಕ್ಕಾಗಿ ಒಬ್ಬ ನೆಯ ವರ್ಗದ ಸರಕಾರಿ ಅಧಿಕಾರಿ ಇರಬೇಕು. ಅವನಿಗೆ ಸಾಮಾನ್ಯ ವಿಜ್ಞಾನ ಶಿಕ್ಷಣದ ಅನುಭವವೂ, ತಪಾಸಣೆಯ ಅನುಭವವೂ ಇರಬೇಕು. ಪ್ರತಿಯೊಂದು ಪ್ರಯೋಗ ಶಾಲೆಯಲ್ಲಿ ಕೆಳಗೆ ಕಾಣಿಸಿದ ಉಪಕರಣಗಳಿರಬೇಕು. ಯೋಗ್ಯ ಶಾಸ್ತ್ರದ ಮತ್ತು ಇತರ ಚಿತ್ರಪಟಗಳು, ಮಾಡೆಲ್ಲು ಗಳು, ಸಂಗ್ರಹ ಮಾಡಿಟ್ಟ ದೇಹಾಂಗಗಳು, ಅವಶ್ಯಕ ಸಾಯನಗಳು, ಕೆಲವು ಭೌತಶಾಸ್ತ್ರದ ಉಪಕರಣಗಳು, ಜಯಾಲಾಂದರದ ಉಪಕರಣಗಳು, ಶಾಸ್ತ್ರೀಯ ಗ್ರಂಥ ಗಳು, ಪ್ರಥಮ ಚಿಕಿತ್ಸೆಯ ರೋಗಿಯ ಆರೈಕೆಯ ಮತ್ತು ಪವಿಜ್ಞಾನದ ಉಪಕರಣಗಳು ಇರಬೇಕು. ಈ ಪ್ರಯೋಗ ಶಾಲೆಯಲ್ಲಿ ಒಂದು ವಸ್ತುಸಂಗ್ರಹಾಲಯವಿದ್ದು ಅದರಲ್ಲಿ ಪ್ಲೇರಿಯಾ, ಕೆಲವು ಪಕ್ಷಿಗಳೂ, ಬೇರೆ ಬೇರೆ ಪ್ರಕಾರದ ಕಲ್ಲು, ಮಣ್ಣು, ಬೀಜಗಳು ಮುಂತಾದವುಗಳನ್ನು ಸಂಗ್ರಹಿ ಸಬೇಕು. ಒಂದು ಪ್ರಯೋಗ ಶಾಲೆಯನ್ನು ಆರಂಭ ಮಾಡಲಿಕ್ಕೆ ೧೦೦೦ ರೂಪಾಯಿಗಳಾದರೂ ನಡೆಯುವದು. ಇಡೀಯಲ್ಲಿ ೧೦ ತಾಲೂಕುಗಳಿದ್ದರೆ ೧೦೦೦೦ ರೂಪಾಯಿ ಯಷ್ಟು ಜಿಲ್ಲಾ ಸ್ಕೂಲಬೋರ್ಡಿಗೆ ಏನೂ ಭಾರವೆನಿಸುವದಿಲ್ಲ. ಮುಂದೆ ಪ್ರತಿ ವರುಷ ಸುಮಾರು ೩೦೦ ರೂಪಾಯಿಗಳನ್ನು ಕೊಟ್ಟು ಪ್ರಯೋಗ ಶಾಲೆಯನ್ನು ವಿಸ್ತರಿಸಬೇಕಾಗುತ್ತದೆ. ಈ ಪ್ರಯೋಗ ಶಾಲೆಯನ್ನು ಹೇಗೆ ಉಪಯೋಗಮಾಡಿ ಕೊಳ್ಳಬೇಕೆಂಬುದನ್ನು ನೋಡುವಾ.

ಈ ಪ್ರಯೋಗ ಶಾಲೆಯನ್ನು ಕ್ರಮಶಃ ಪ್ರತಿಯೊಂದು ಪೂರ್ಣ ಪ್ರಾಥಮಿಕ ಶಾಲೆಯ ಹುಡುಗರು ಸಂದರ್ಶಿಸ ಬೇಕು. ಪ್ರಯೋಗ ಶಾಲೆಯಿಂದ ೨ ಮೈಲಿನ ಒಳಗೆ ಇರು ವವರು ವಾರಕ್ಕೆ ಒಮ್ಮೆ, ೨—೧೦ ಮೈಲಿನ ಒಳಗೆ ಇರು ವವರು ತಿಂಗಳಿಗೊಮ್ಮೆ ಮತ್ತು ೧೦ ಮೈಲಿನ ಮೇಲೆ ಇರುವವರು ೩ ತಿಂಗಳಿಗೊಮ್ಮೆ ಸಂದರ್ಶಿಸಬೇಕು. ೧೦ ಮೈಲಿನ ಹೊರಗಿನಿಂದ ತನ್ನ ವಿದ್ಯಾರ್ಥಿಗಳನ್ನು ಒಯ್ಯುವ ಶಿಕ್ಷಕನಿಗೆ ಪ್ರತಿಸಲ ೨ ರೂಪಾಯಿ ಭತ್ತೆ ಕೊಡಬೇಕು. ಸ್ಕೂಲಬೋರ್ಡಿಗೆ ಭತ್ತೇದ ಖರ್ಚು ಬಹಳ ಬರುವದಿಲ್ಲ. ಶಾಲೆಯ ವಿದ್ಯಾರ್ಥಿಗಳಿಗೂ, ಪಾಲಕರಿಗೂ ಇದರಿಂದ ಏನೂ ಭಾರವೆನಿಸುವದಿಲ್ಲ. ಯಾಕಂದರೆ ಹಳ್ಳಿಯಲ್ಲಿ ದೂರದೂರಿನ ಜಾತ್ರೆಗಳಿಗಾಗಿ ಚಕ್ಕಡಿ ಹೂಡಿಕೊಂಡು ತಮ್ಮ ಮಕ್ಕಳನ್ನು ಕರೆದೊಯ್ಯುವ ರೂಢಿ ಇದೆ. ಇದರಿಂದ ಮಕ್ಕಳಿಗೆ ಪ್ರವಾ- ಸದ ಅನುಭವವೂ ಬರುವದು.

ಪ್ರಯೋಗ ಶಾಲೆಯ ಸಂದರ್ಶನವು ಒಂದು ಕಾಲಕ್ಕೆ ಒಂದೇ ದಿನ ನಡೆಯಬೇಕು. ಪ್ರಯೋಗ ಶಾಲೆಯ ಶಿಕ್ಷ- ಕನು ೧೨ ಘಂಟೆಯಿಂದ ಸಂಜೆ ೫ ಘಂಟೆಯವರೆಗೆ ಮಕ್ಕ- ಳಿಗೆ ವಿವಿಧ ಪ್ರಯೋಗಗಳನ್ನೂ, ಉಪಕರಣಗಳನ್ನೂ, ಚಿತ್ರ ಗಳನ್ನೂ ವಿವರಿಸಿ ಹೇಳಬೇಕು. ಹಳ್ಳಿಯಲ್ಲಿ ಸಾದಾ ಉಪ ಕರಣಗಳನ್ನು ತಯಾರಿಸುವ ರೀತಿಯನ್ನು ತಿಳುಹಿಸಬೇಕು. ರಾತ್ರಿ ಮಾಯಾಲಾಂದರ ಸಹಾಯದಿಂದ ವಿಜ್ಞಾನಿಗಳ ಬಗ್ಗೆ, ನಕ್ಷತ್ರ, ಗ್ರಹಗಳ ಬಗ್ಗೆ, ಶಾಸ್ತ್ರೀಯ ಶೋಧಗಳು ಮತ್ತು ಸುಧಾರಣೆಯ ಬಗ್ಗೆ ಜ್ಞಾನಮಾಡಿಕೊಡಬೇಕು. ರಾತ್ರಿ ಮಕ್ಕಳ ವಸತಿಯು ಪ್ರಯೋಗ ಶಾಲೆಯಲ್ಲಿಯೇ ಆಗ ಬೇಕು. ಮತ್ತು ಮನೆಯಿಂದ ಅವರು ತಂದ ಬುತ್ತಿಯನ್ನೇ ಊಟ ಮಾಡಬೇಕು. ಮಕ್ಕಳು ಆ ದಿನ ಆ ಊರಲ್ಲಿ ನೋಡತಕ್ಕ ಸ್ಥಳಗಳನ್ನೂ, ವಿವಿಧ ಸರಕಾರಿ ಕಚೇರಿಗ- ಳನ್ನೂ ಸಂದರ್ಶಿಸಬಹುದು. ದಾರಿಯಲ್ಲಿ ನಾನಾ ಪ್ರಕಾರದ ಭೂಮಿ, ಬೆಳೆಗಳು, ಪಕ್ಷಿಗಳು, ಕೀಟಕಗಳು ಮುಂತಾದವು ಗಳನ್ನು ನಿರೀಕ್ಷಿಸಬಹುದು. ಈ ರೀತಿಯಿಂದ ದೊರೆಯುವ ಪ್ರತ್ಯಕ್ಷ ಜ್ಞಾನವು ಶಾಲೆಯ ಕೋಣೆಯಲ್ಲಿ ಶಿಕ್ಷಕನು ವರ್ತಿ- ಸುವದರಿಂದ ಎಂದೂ ದೊರೆಯಲಾರದು.

ಈ ಸೂಚನೆಯನ್ನು ಕಾರ್ಯರೂಪದಲ್ಲಿ ತರಬಹುದೊ?

ಗ್ರಂಥವಿಮರ್ಶೆ

ಭಾರತದ ರಾಜ್ಯಘಟನೆಯ ಕರಡು:

ಅನುವಾದಕರು: ಶ್ರೀ. ನಾಡಗೀರ ಶಿವರಾಯರು ಎಂ.ಎ. (ಅ) ಶ್ರೀ. ಶಂಕರ ವೆಂಕಟೇಶ ಪಾಟೀಲ. ಪ್ರಕಾಶಕರು: ಅನಂತ ನಾತೆ, ಕಿತಾಬ ಮಿನಾರ, ಧಾರವಾಡ. ಪ್ರಕಟನೆಯ ವರ್ಷ—೧೯೪೮. ಬೆಲೆ. ರೂ ೧—೮—೦

ತನ್ನ ದೇಶದ ರಾಜ್ಯಘಟನೆಯನ್ನು ತುಸುಮಟ್ಟಿಗಾದರೂ ಅರಿತಿರುವದು ನಾಗರಿಕತೆಯ ಅವಶ್ಯವಾದುದೊಂದು ಅಂಗವು. ಸ್ವತಂತ್ರ ಹಿಂದುಸ್ತಾನದ ಪ್ರತಿಯೊಬ್ಬ ಹೊಣೆಗಾರ ನಾಗರಿಕನಿಗೂ ಇದರ ಬಗೆಗೆ ಕುತೂಹಲವಿರುವದು ಸಹಜ ಆದರೆ ಇಲ್ಲಿಯವರೆಗ ಭಾರತದ ರಾಜ್ಯಘಟನೆಯ ಕರಡು ಕನ್ನಡಕ್ಕೆ ಭಾಷಾಂತರವಾಗದೆ ಇದ್ದುದರಿಂದ, ಕನ್ನಡವನ್ನು ಮಾತ್ರ ಬಲ್ಲ ಕನ್ನಡ ನಾಗರಿಕರ ಜ್ಞಾನ-ಪಿಪಾಸೆಯು ತೃಪ್ತಿ ಹೊಂದಲು ಮಾರ್ಗವಿದ್ದಿಲ್ಲ. ಅದರ ಈಗ ಘಟನಾಸಮಿತಿಯಿಂದ ರಚಿತವಾದ ಭಾರತದ ರಾಜ್ಯಘಟನೆಯ ಕರಡನ್ನು ಮೂಡಲನೆಯ ಸಲ ಕನ್ನಡಕ್ಕೆ ಭಾಷಾಂತರಿಸಿದುದಾದ್ದರಿಂದ ಅನುವಾದಕರು ಕನ್ನಡ ಜನತೆಗೆ ಅದನ್ನು ಅಭ್ಯಸಿಸಿ ತಿಳಿದುಕೊಳ್ಳಲು ಅವಕಾಶವನುಂಟುಮಾಡಿ ಕೊಟ್ಟಿರುವರು. ಶೈಲಿಯು ತಿಳಿಯೂ, ಶೈಲಿಯು ಸುಲಭವೂ ಇದೆ. ಬೆಲೆಯೂ ಮಿತಿಯಲ್ಲಿದೆ. ಅನುವಾದಕರು ಅಭಿನಂದನಾರ್ಹರು.

ಶ್ರೀ. ಅರವಿಂದರು (ಜೀವನ ಚರಿತ್ರೆ):

ಲೇಖಕರು:— ಶ್ರೀ. ಶಿಂಪಿ ಲಿಂಗಣ್ಣ. ಪ್ರಕಾಶಕರು: ಬಿ. ಜಿ. ಸಂಕೇಶ್ವರ, ಗದಗ. ಮಾಲಕ, ಬಸವೇಶ್ವರ ಪುಸ್ತಕ ಭಾಂಡಾರ ಹುಬ್ಬಳ್ಳಿ. ಪ್ರಕಟನೆಯಾದ ವರ್ಷ—೧೯೪೭ನೆಯ ಇಸವಿ. ಬೆಲೆ—ರೂ. ೧—೧೨—೦.

ಶ್ರೀ ಅರವಿಂದರೆಂದರೆ ಇಂದು ಪುರುಷೋತ್ತಮರು. ಅವರು ಅಂತಸ್ತಿಗೆ ಏರುವ ಮೊದಲು ಜೀವನದ ಯಾವ ಯಾವ ಮೆಟ್ಟಲಿನಲ್ಲಿ ಹೇಗೆ ಹೇಗೆ ಸಾಗಿದರೆಂಬುದನ್ನು ತಿಳಿದುಕೊಳ್ಳುವ ಕುತೂಹಲ ಉಂಟಾಗುವದು ಸಹಜ. ಕನ್ನಡಿಗರ ಈ ಕುತೂಹಲವನ್ನು ತಣಿಸುವ ಗುರಿಯಿಂದ ಶ್ರೀ. ಶಿಂಪಿ ಲಿಂಗಣ್ಣ ಅವರು ಬರೆದ ಪುಸ್ತಕವಿದು. ಲೇಖಕರು ಶ್ರೀ. ಅರವಿಂದರ ಜೀವನ ಚಿತ್ರವನ್ನು ಸುಲಭವಾದ ಭಾಷೆ, ಸರಳವಾದ ಶೈಲಿಗಳಲ್ಲಿ ಚಿತ್ರಿಸಿ ಓದುಗರ ಕಣ್ಮುಂದೆ ಇರಿಸಿರುವರು. ಅವರ ಬರಹವು ಎದೆದುಂಬುವಂತಿರುವದು. ಭಾಷೆಯು ಸುಲಭವಾದರೂ, ಗಂಭೀರವಿದೆ. ಕನ್ನಡಿಗರ ಚಿರಕಾಲದ ಆಕಾಂಕ್ಷೆಯು ನೆರವೇರುವಂತಿದೆ ಪುಸ್ತಕವು ಆಬಾಲವೃದ್ಧರಿಗೂ ಉಪಯುಕ್ತವಿದೆ- ಶ್ರೀ. "ಶಿಂಪಿ ಲಿಂಗಣ್ಣ ಅವರಿಂದ ತಕ್ಕ ಮಟ್ಟಿಗೆ ನಾಡು ನುಡಿಗಳ ಸೇವೆಯಾಗಿದೆ.

ತೋರಣ (೩) ಕಾವ್ಯಮಾಲೆ:

ಬರೆದವರು:— ಪತ್ಯ ಪುಸ್ತಕ ಸಮಿತಿ ಬೆಳಗಾವಿ. ಪ್ರಕಾಶಕರು:— ಶ್ರೀ. ದ. ಬಾ. ಕುಲಕರ್ಣಿ, ಮನೋಹರ ಗ್ರಂಥ ಭಾಂಡಾರ, ಧಾರವಾಡ. ಪ್ರಕಾಶನದ ವರ್ಷ-೧೯೪೮ನೆಯ ಇಸವಿ, ಬೆಲೆ ರೂ. ೦—೧೨—೦

ಇದೊಂದು ಕನ್ನಡ ಕವಿತೆಗಳ ಸಂಗ್ರಹ. ಆಯ್ದ ಮನಾಕಷ್ಟು ಹಳೆಹೊಸ ಕಾವ್ಯಗಳ ಪ್ರಾತಿನಿಧಿಕವಾಗಿದೆಂದು ಹೇಳಲು ಆತಂಕವಿಲ್ಲ. ಓದುಗ ವಿದ್ಯಾರ್ಥಿಗಳಿಗೆ ಕವಿತೆಗಳ ಸ್ವಾರಸ್ಯಾಸ್ವಾದನೆಗೆ ನೆರವಾಗಬೋಸುಗ, ಪ್ರತಿ ಪದ್ಯಕ್ಕೂ ಕವಿಕಾವ್ಯ ಪರಿಚಯ, ಲಘು-ಟಿಪ್ಪಣಿ ಮತ್ತು ಪ್ರಶ್ನೆಗಳನ್ನು ಕೊಡಲಾಗಿದೆ. ಶಬ್ದಕೋಶವೂ ಉಂಟು. ಕವಿತೆಗಳ ರಸ-ಭಾವ ಗ್ರಹಣಕ್ಕೆ ಇವುಗಳಿಂದ ಅನುಕೂಲವುಂಟಾಗಿರುವದೇನೊ ನಿಜ. ಆದರೂ, ಕವಿಕಾವ್ಯ ಪರಿಚಯ ವಿಭಾಗದಲ್ಲಿ ಬರಹಗಾರರು ಪ್ರಸ್ತುತ ಕವಿತೆಯ ಉಗಮ ಮತ್ತು ಆ ಉಗಮ, ಕಾವ್ಯದಲ್ಲಿ ಕವಿಯ ಮನೋವಿಚಾರ ಇವುಗಳ ಬಗ್ಗೆ ಅವಶ್ಯವೆನಿಸಿದಲ್ಲಿ ತುಸು ಹೆಚ್ಚು ಸಂಗತಿಗಳನ್ನೊದಗಿಸಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತೆಂದು ತಿಳಿಯಲಾಗಿದೆ. ಪುಸ್ತಕದ ಮುದ್ರಣ ಮತ್ತು ಸಾಮಾನ್ಯ ಅಂತರ್ಬಾಹ್ಯ ರಚನೆಗಳು ಸಾಕಷ್ಟು ಅಂದ ಚಂದವಾಗಿವೆ.

ಕನ್ನಡ ಕಾವ್ಯದಲ್ಲಿ ಹೊಸದೃಷ್ಟಿಯ ಹಸಿವುಳ್ಳ ವಿದ್ಯಾರ್ಥಿಗಳಿಗೆ ಉಂಡು ತಣಿಯಲು ಈ ಪುಸ್ತಕದಲ್ಲಿ ತುಸುಮಟ್ಟಿಗೆ ಅವಕಾಶವುಂಟು.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ವರ್ಧಾ ರಾಷ್ಟ್ರೀಯ ಶಿಕ್ಷಣದಲ್ಲಿ ಪುಣ್ಯತಿಥಿ ಹಾಗೂ ಹಬ್ಬಗಳ ಆಚರಣೆ

ಲೇಖಕರು: **ಶ್ರೀ. ರತ್ನಾಕರ,** ಧಾರವಾಡ.

●

ಶಿಕ್ಷಣದ ಅನೇಕ ಉದ್ದೇಶಗಳಲ್ಲಿ ನಾಗರಿಕತೆಯ ಪ್ರಸಾರವು ಬಹು ಮುಖ್ಯವೆಂದು ಹೇಳಬಹುದು. ರಾಷ್ಟ್ರದ ಉನ್ನತಿ ಅಥವಾ ಅವನತಿ ರಾಷ್ಟ್ರದ ಪ್ರಜಾ ವರ್ಗವನ್ನೇ ಅವಲಂಬಿಸಿದೆ. ಸುಶಿಕ್ಷಿತ, ಹೊಣೆಯರಿತ ನಾಗರಿಕರುಳ್ಳ ರಾಷ್ಟ್ರವು ಪ್ರಗತಿ ಪಥದಲ್ಲಿಯೇ ಇದೆಯೆಂಬ ಸಂಗತಿಯನ್ನು ಸುಲಭವಾಗಿ ಕಾಣಬಹುದು. ಭಾರತದಂಥ ಬಂಧನದಲ್ಲಿದ್ದ ರಾಷ್ಟ್ರದಲ್ಲಿಯಂತೂ ನಾಗರಿಕತಾ ಪ್ರಸಾರವು ಶಿಕ್ಷಣದ ಪ್ರಥಮ ಹೊಣೆಗಾರಿಕೆಯೆಂದೇ ಹೇಳಬೇಕು. ಸರಿಯಾದ ಶಿಕ್ಷಣ ಪ್ರಸಾರವು ಭಾರತದ ಅನೇಕ ರೋಗಗಳಿಗೆ ಸಂಜೀವಿನಿ ಔಷಧ !

ಭಾರತದಲ್ಲಿ ನಾಗರಿಕತೆಯನ್ನು ಹರಡುವದು ಸುಲಭ ಕೆಲಸವಲ್ಲ. ಜನತೆ ಅಜ್ಞಾನಾಂಧಕಾರದಲ್ಲಿ ಮುಳುಗಿದೆ. ಈ ಅಜ್ಞಾನವು ಜಾತೀಯತೆ, ಪ್ರಾಂತೀಯತೆ, ಲಾಭಬಡಕತನ, ಸ್ವಾರ್ಥ ಮತ್ತು ಸ್ವಜನದ್ರೋಹ ಮುಂತಾದ ಅನೇಕ ದುರ್ಗುಣಗಳಿಗೆ ಆಸ್ಪದವಿತ್ತಿದೆ. ಭಾರತವು ಪ್ರಪಂಚದಲ್ಲಿ ಬಲಶಾಲಿಯಾದ ರಾಷ್ಟ್ರವಾಗಿ ಬಾಳಬೇಕಾದರೆ, ಪರಸ್ಪರ ಪ್ರೇಮ, ವಿಶ್ವಾಸ, ಸ್ವಜನಾಭಿಮಾನ ಮತ್ತು ಸ್ವದೇಶಾಭಿಮಾನ ಮುಂತಾದ ಗುಣಗಳು ಜನತೆಯಲ್ಲಿ ಬೆಳೆಯಲೇಬೇಕು. ಭಾರತದ ಆಂತರಿಕ ಶಾಂತಿ ಸುಖಗಳಿಗೂ ಈ ಗುಣಗಳು ಅವಶ್ಯ. ಇಂಥ ಉದಾತ್ತ ಗುಣಗಳೆಲ್ಲ ಬಾಲ್ಯದಿಂದಲೇ ಬೆಳೆದು ಬರಬೇಕಾಗಿದ್ದರಿಂದ ಜನತೆಯ ಶಿಕ್ಷಣದಲ್ಲಿಯೇ ಈ ವಿಚಾರಗಳಿಗೆ ಪ್ರಾಶಸ್ತ್ಯ ಬರಬೇಕಾದುದು ಕ್ರಮ-ಬದ್ಧ. ಆದ್ದರಿಂದಲೇ ರಾಷ್ಟ್ರೀಯ ಶಿಕ್ಷಣದಲ್ಲಿ ಪುಣ್ಯತಿಥಿ, ಹಬ್ಬಗಳ ಆಚರಣೆಯ ಕಾರ್ಯಕ್ರಮವನ್ನು ಸೇರಿಸಲಾಗಿದೆ. ಇವುಗಳಿಂದ ಶೀಲ ಮತ್ತು ಸಂಸ್ಕೃತಿಗಳ ಸಂವರ್ಧನೆಗೆ ಹೇಗೆ ಪುಷ್ಟಿದೊರೆಯುತ್ತಿದೆಂಬುದೋಡುವಾ.

ಪುಣ್ಯ ತಿಥಿಯ ಆಚರಣೆ

ಭಾರತ ನಮ್ಮ ತಾಯ್ನಾಡು, ನಾವು ಭಾರತೀಯರು ಎಂಬ ವಿಶಾಲ ಭಾವನೆ ಜನತೆಯಲ್ಲಿ ಒಡಮೂಡದೆ, ಭಾರತದಲ್ಲಿ ಒಕ್ಕಟ್ಟು ಬೆಳೆಯಲಾರದು. ಈ ಭಾವನೆಯನ್ನು ಬೆಳೆಯಿಸಲು ಭಾರತದ ವಿಭೂತಿಗಳ ಜೀವನ ಚರಿತ್ರೆ, ಮತ್ತು ಅವರ ಮಹತ್ಕಾರ್ಯಗಳ ಪರಿಚಯವನ್ನು ಮಾಡಕೊಡುವದು ಒಳ್ಳೇ ಸುಲಭವಾದ ಉಪಾಯ. ಈ ಪರಿಚಯವನ್ನು ಪುಣ್ಯತಿಥಿ ಇಲ್ಲವೆ ಹಬ್ಬದ ಆಚರಣೆಯ ಮೂಲಕ ಮಾಡಿಕೊಡುವದರಿಂದ ಮಕ್ಕಳು ಹರುಷದಿಂದ ಈ ಚಟವಟಿಕೆಯಲ್ಲಿ ಭಾಗವಹಿಸುತ್ತಾರೆ. ಅವರ ಪಾಲಿಗೆ ಅದೊಂದು ವಿಶಿಷ್ಟ ದಿನವೇ ಆಗುವದರಿಂದ ಆ ವ್ಯಕ್ತಿಯ ಬಗ್ಗೆ ವಿಶಿಷ್ಟ ಆದರವು ಕಂಡು ಬರುತ್ತದೆ. ಟಿಳಕರ ಪುಣ್ಯತಿಥಿಯ ಆಚರಣೆಯನ್ನೇ ತೆಗೆದುಕೊಳ್ಳೋಣ. ಟಿಳಕರು ನಮ್ಮ ಪ್ರಾಂತದವರಲ್ಲದಿದ್ದರೂ ಅವರು ನಮ್ಮವರೇ ಎಂಬ ವಿಶಾಲ ಭಾವನೆ ತಾನಾಗಿಯೇ ಹುಟ್ಟುತ್ತದೆ. ಅವರು ನಮ್ಮ ಜಾತಿಯವರಲ್ಲ, ನಮ್ಮ ತಾಯ್ನುಡಿಯನ್ನು ಆಡುವವರಲ್ಲ ಎಂಬ ಸಣ್ಣಪುಟ್ಟ ಮಾತುಗಳನ್ನು ನಾವು ಮರೆತೇ ಬಿಡುತ್ತೇವೆ. ಅವರ ರೋಮಾಂಚಕಾರಿ ಜೀವನದಿಂದ ಹುರುಪು ಗೊಳ್ಳುತ್ತೇವೆ. ಅವರ ಬುದ್ಧಿಮತ್ತೆಗೆ ಬೆರಗಾಗುತ್ತೇವೆ. ಅವರ ಸ್ವಾತಂತ್ರ್ಯ ಪ್ರೇಮವು ನಮ್ಮ ಮನಸ್ಸನ್ನು ಸೆಳೆದುಕೊಳ್ಳುತ್ತದೆ. ಕ್ಷಣಹೊತ್ತಾದರೂ ನಮ್ಮನ್ನು ನಾವು ಮರೆಯುತ್ತೇವೆ. ಆ ಮಹಾ ವಿಭೂತಿಯ ಭಕ್ತರೆಂದೇ ನಂಬಿ ನಮ್ಮ ಜೀವನದಲ್ಲಿ ಒಂದು ಹೊಸ ಪ್ರಕರಣವನ್ನು ಪ್ರಾರಂಭಿಸುತ್ತೇವೆ. ಇಂಥ ಹಬ್ಬಗಳ ಆಚರಣೆಯಿಂದ ವಿಶಾಲವಾದ ಭಾರತ ಚಿಕ್ಕದಾಗುತ್ತದೆ; ಚಿಕ್ಕವಾದ ಮನಸ್ಸು ವಿಶಾಲವಾಗುತ್ತದೆ.

ಈ ತರಹದ ಮನೋವೃತ್ತಿಯನ್ನು ಬೆಳೆಯಿಸುವದು ಇತ್ತೀಚೆಗೆ ಅತಿ ಮಹತ್ವದ ರಾಷ್ಟ್ರೀಯ ಕಾರ್ಯವಾಗಿದೆ.

ಭಾರತದಲ್ಲಿ ಎತ್ತ ನೋಡಿದರೂ ಜಾತೀಯತೆ ಹುಚ್ಚೆದ್ದು ಕುಣಿಯುತ್ತಿದೆ; ಪ್ರಾಂತೀಯತೆ ತಲೆಯೆತ್ತುತ್ತಿದೆ. ಭಾಷಾವಾರ ಪ್ರಾಂತೀಕರಣ ಆಡಳಿತೆಯ ದೃಷ್ಟಿಯಿಂದ ಹಿತಕರ; ಆದರೆ ಪ್ರಾಂತೀಯತೆಯ ಅತಿರೇಕವು ಭಾರತದ ಪ್ರಗತಿಗೆ ಕಂಟಕ. ಪ್ರಾಂತೀಯತೆಯಲ್ಲಿಯೂ ಸಮಂಜಸತೆಯನ್ನು ತರುವ ಕಾರ್ಯವನ್ನು ಪುಣ್ಯತಿಥಿಗಳ ಆಚರಣೆ ಕಲಿಸಬಲ್ಲದು. ಇದೂ ಅಲ್ಲದೆ ದೇಶಾಭಿಮಾನದ ಪಾಠಗಳನ್ನು ಕಲಿಸಿ ಭಾರತೀಯರಲ್ಲಿ ಒಕ್ಕಟ್ಟನ್ನು ಬೆಳೆಯಿಸಲು ಸಹಾಯಕವಾಗುವದು.

ಈ ಪುಣ್ಯತಿಥಿಗಳ ಆಚರಣೆಯು ಇನ್ನೂ ಒಂದು ದೃಷ್ಟಿಯಿಂದ ಮಹತ್ವದ್ದು. ಈ ಪ್ರಸಂಗಗಳು ಐತಿಹಾಸಿಕ ಘಟನೆಗಳ ತುಲನಾತ್ಮಕ ಅಭ್ಯಾಸಕ್ಕೂ ಆಸ್ಪದ ಕೊಡುವವು. ಟಿಳಕರ ಕಾಲ, ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಯಾವವಿದ್ದವು, ಅವುಗಳನ್ನು ನಿವಾರಿಸಲು ಟಿಳಕರು ಮಾಡಿದ ಯೋಜನೆಗಳು ಯಾವವು? ಅವುಗಳ ಪರಿಣಾಮ ಏನಾಯಿತು? ಮುಂತಾದ ಅನೇಕ ಸಮಸ್ಯೆಗಳ ಪರಿಚಯ ವಿದ್ಯಾರ್ಥಿಗಳಿಗೆ ಆಗುವದು. ಗಾಂಧಿಯವರ ಪುಣ್ಯತಿಥಿಯನ್ನು ಆಚರಿಸುವಾಗ, ಈ ಸಮಸ್ಯೆಗಳನ್ನು ಗಾಂಧಿಯವರು ಯಾವ ರೀತಿಯಿಂದ ಬಿಡಿಸಲು ಯತ್ನಿಸಿದರು; ಭಾರತದ ರಾಜಕೀಯ ರಂಗದ ಮೇಲಿನ ಅವರ ಪ್ರಭಾವ, ಮುಂತಾದ ವಿಷಯಗಳ ತುಲನಾತ್ಮಕ ಅಭ್ಯಾಸದಿಂದ ವಿದ್ಯಾರ್ಥಿಗಳಲ್ಲಿ ಚಿಕಿತ್ಸಾತ್ಮಕ ಬುದ್ಧಿ ಬಲಿಯುತ್ತಿದೆ. ಮತ್ತು ಅದರ ಅನಾಹುತಗಳ ಅಭ್ಯಾಸದಿಂದ ಸ್ವಾತಂತ್ರ್ಯ ಪ್ರೇಮ, ಸ್ವಾಭಿಮಾನಿಗಳು ಬೆಳೆದು ಜನತೆಯ ಮನಸ್ಸು ಸ್ವಾತಂತ್ರ್ಯದತ್ತ ಹರಿಯುತ್ತದೆ. ರಾಷ್ಟ್ರದ ಪ್ರಗತಿಗಾಗಿ, ಜನತೆಯ ಕಲ್ಯಾಣಕ್ಕಾಗಿ ತಾನು ಮಾಡಲೇಬೇಕಾದ ಕಾರ್ಯ ಯಾವುವೆಂದು ವಿಚಾರಿಸಬೇಕಾಗುತ್ತದೆ; ನಿರ್ಧರಿಸಬೇಕಾಗುತ್ತದೆ. ಈ ರೀತಿಯಿಂದ ವಿದ್ಯಾರ್ಥಿಗಳಲ್ಲಿ ಸ್ವಕರ್ತವ್ಯ ನಿಷ್ಠೆ ಮತ್ತು ಜಾಗ್ರತಿ ಅಂಕುರಿಸಿ ಕಾರ್ಯ ತತ್ಪರರಾಗಲು ಪ್ರೇರಣೆಯಾಗುತ್ತದೆ. ನುರಿತ ಶಿಕ್ಷಕರ ನೇತೃತ್ವದಲ್ಲಿ ಪ್ರೋತ್ಸಾಹವೂ ಸಿಗುತ್ತದೆ.

ಇಲ್ಲಿಯ ವರೆಗೆ ಶಿಕ್ಷಕರು ಹೇಳಬೇಕು; ವಿದ್ಯಾರ್ಥಿಗಳು ಕಲಿಯಬೇಕು ಎಂಬ ತತ್ವವನ್ನು ಅವಲಂಬಿಸಿಯೇ ಶಿಕ್ಷಣ ಸಾಗಿದೆ. ಈ ತುತ್ತುಮಾಡಿ ಉಣಿಸುವ ಕೆಲಸ ಮಾನಸಶಾಸ್ತ್ರದ ದೃಷ್ಟಿಯಿಂದ ಸರಿಯಾದುದಲ್ಲ. ಮಕ್ಕಳಲ್ಲಿ ತಾವೇ ಮಾಡಬೇಕು, ಕಲಿಯಬೇಕು ಎಂಬ ಪ್ರವೃತ್ತಿಯು ಸ್ವಾಭಾವಿಕವಾಗಿಯೇ ಕಂಡುಬರುತ್ತದೆ. ಹೊಸ ಶಿಕ್ಷಣ ಶಾಸ್ತ್ರದ ತತ್ವಗಳಂತೆ ಶಿಕ್ಷಕರು ಕೇವಲ ಮಾರ್ಗದರ್ಶಕರು. ಈ ತತ್ವವನ್ನು ಪುಣ್ಯತಿಥಿಗಳ ಆಚರಣೆಯಲ್ಲಿ ಹೆಚ್ಚಾಗಿ ಉಪಯೋಗಿಸಿಕೊಳ್ಳಬಹುದು. ಗಾಂಧೀಜಿಯವರ ಪುಣ್ಯತಿಥಿಯನ್ನು ಆಚರಿಸುವದಿದೆಯೆಂದು ತಿಳಿಯೋಣ. ಶಿಕ್ಷಕರು ವಿದ್ಯಾರ್ಥಿಗಳ ಒಂದು ಗುಂಪಿಗೆ ಗಾಂಧೀಜಿಯವರು ಬರೆದ ಪುಸ್ತಕಗಳನ್ನು ಕೂಡಿಸುವ, ಎರಡನೆಯ ಗುಂಪಿಗೆ ಅವರ ಜೀವನದಲ್ಲಿಯ ಮಹತ್ವದ ಘಟನೆಗಳನ್ನು ಬರೆದು ತೆಗೆಯುವ, ಮೂರನೆಯ ಗುಂಪಿಗೆ ವಿವಿಧ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಅವರ ಚಿತ್ರಗಳನ್ನು ಕಲೆಹಾಕುವ ಕಾರ್ಯವನ್ನು ಹಂಚಿ ಕೊಡಬಹುದು. ಇದೇ ರೀತಿಯಾಗಿ ಉಳಿದ ಗುಂಪುಗಳಿಗೆ ವಿವಿಧ ರೀತಿಯ ಕಾರ್ಯಗಳನ್ನು ಹಂಚಬಹುದು. ಈ ಎಲ್ಲ ಕಾರ್ಯಗಳನ್ನು ವಿದ್ಯಾರ್ಥಿಗಳೇ ಸಾಗಿಸುತ್ತಾರೆ, ಶಿಕ್ಷಕನು ಅವಶ್ಯವಿದ್ದಾಗ ಸೂಕ್ತ ಸಲಹೆಗಳನ್ನು ಕೊಟ್ಟು ವಿದ್ಯಾರ್ಥಿಗಳ ಕಾರ್ಯವು ಸುಗಮವಾಗಿ ಸಾಗುವಂತೆ ನೋಡಿಕೊಳ್ಳುತ್ತಾನೆ. ವಿದ್ಯಾರ್ಥಿಗಳು ಹೊಣೆಯನ್ನರಿತು ಕೆಲಸಮಾಡಬೇಕಾಗುವದರಿಂದ, ಅವರ ಕರ್ತವ್ಯ ನಿಷ್ಠೆ ಜಾಗೃತವಾಗಿ ಕೆಲಸ ಮಾಡಲು ಹೊಸ ಹುರುಪು ಬರುತ್ತದೆ. ಸ್ವತಂತ್ರವಾಗಿ ಕಾರ್ಯ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ಅದರೊಡನೆ ಆತ್ಮ ವಿಶ್ವಾಸವೂ ಬೆಳೆಯುತ್ತಿದೆ. ಗುರು ಶಿಷ್ಯರಲ್ಲಿ ನಿಕಟ ಸಂಬಂಧ ಬಲಿತು ಶಿಕ್ಷಣವು ಬಹು ಮುಖವಾಗಿ ಸಾಗಿ ನಿಜವಾಗಿಯೂ ಪ್ರಯೋಜನಕಾರಿಯಾಗುತ್ತದೆ.

ಕಾರ್ಯ ನಿರ್ವಹಣ ಶಕ್ತಿ

ಈ ತರದ ಚಟುವಟಿಕೆಗಳನ್ನು ಸಾಗಿಸುವಾಗ ಮಕ್ಕಳು ಮುಂದಾಲೋಚನೆಯಿಂದ ಪೂರ್ವಯೋಜಿತ ಕಾರ್ಯಕ್ರಮದಂತೆ ಕೆಲಸ ನಡೆಯಿಸಬೇಕಾಗುತ್ತದೆ. ಯಾವ ಕೆಲಸಕ್ಕೆ ಯಾರು ಯೋಗ್ಯರು ಎಂಬುದನ್ನು ನಿಶ್ಚಯಿಸಬೇಕಾಗುತ್ತದೆ. ಶ್ರಮ ವಿಭಾಗ ಪದ್ಧತಿಯಿಂದ ಒಂದು ವರ್ಗವಾಗಲಿ ಇಡೀ ಶಾಲೆಯೇ ಆಗಲಿ ಕೆಲಸಮಾಡಬೇಕಾಗುವದರಿಂದ ಎಲ್ಲರೂ ಸಹಕರಿಸಿ ತಮ್ಮ ಪಾಲಿನ ಕೆಲಸವನ್ನು ಪೂರ್ಣ ಹೊಣೆಗಾರಿಕೆಯಿಂದ ಮತ್ತು ಚೊಕ್ಕಟವಾಗಿ ಮುಗಿಸಲೇಬೇಕಾಗುವದರಿಂದ ಮಕ್ಕಳಲ್ಲಿ ಕಾರ್ಯ ನಿರ್ವಹಣ ಶಕ್ತಿ ಕ್ರಮಗೊಳ್ಳುತ್ತದೆ. ಗ್ರಂಥ ಇಲ್ಲವೆ ಚಿತ್ರಗಳನ್ನು ಕಲೆಹಾಕುವಾಗ ಅನೇಕ ಜನರನ್ನು ಭೆಟ್ಟಿಯಾಗಬೇಕಾಗುವದರಿಂದ ಸಾಮಾ-

ಜಿಕ ಜೀವನವು ಇದರಲ್ಲಿ ಸಮಾವೇಶವಾಗುತ್ತದೆ. ಜನರ ಮನಸ್ಸನ್ನರಿತು ಅವರು ಮೆಚ್ಚುವಂತೆ ಮಾತಾಡಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳಬೇಕಾಗುವದರಿಂದ ಮಕ್ಕಳಲ್ಲಿ ಮೇಲ್ಬುದ್ಧಿಯು (Common sense) ಬೆಳೆಯುತ್ತದೆ. ಜನರನ್ನು ಕಾಣುವ ಧೈರ್ಯ ಮತ್ತು ಅವರನ್ನು ಒಲಿಸಿಕೊಳ್ಳುವ ಯುಕ್ತಿಗಳ ಅಭ್ಯಾಸ ಇಲ್ಲಿಂದಲೇ ಪ್ರಾರಂಭವಾಗಿ ಮುಂದೆ ಸಮಾಜದಲ್ಲಿ ಗೌರವದ ಸ್ಥಾನಗಳನ್ನು ಪಡೆದು ಸುಖವಾಗಿ ಬಾಳಲು ಅವರು ಅರ್ಹರಾಗುತ್ತಾರೆ.

ಸೌಂದರ್ಯದ ಕಲ್ಪನೆ ಅಥವಾ ಅಲಂಕಾರ

ಇಂಥ ಯಾವದೇ ಪುಣ್ಯತಿಥಿಯನ್ನು ಆಚರಿಸುವಾಗ ಒಂದು ಸಭೆಯನ್ನು ಕರೆಯುವದು ಸಂಪ್ರದಾಯವಾಗಿದೆ. ಸಭಾಸ್ಥಾನವನ್ನು ಅಲಂಕರಿಸಿ ಅದು ಸುಂದರವಾಗಿ ಅಚ್ಚುಕಟ್ಟಾಗಿ ಕಾಣುವಂತೆ ಮಾಡುವದನ್ನೂ ಮಕ್ಕಳು ಕಲಿಯಲೇ ಬೇಕಾಗುತ್ತದೆ. ಈ ಕಾರ್ಯ ಆ ವಾರದ ಸ್ವಚ್ಛತೆಯಿಂದ ಪ್ರಾರಂಭವಾಗಿ ಸಭಾಮಂಟಪದ ಮತ್ತು ವೈಯಕ್ತಿಕ ಸ್ವಚ್ಛತೆಯಲ್ಲಿ ಕೊನೆಗೊಳ್ಳುತ್ತದೆ. ತಳಿರು ತೋರಣ ಮತ್ತು ಕಾಗದಗಳಿಂದ ಸಭಾಸ್ಥಾನವನ್ನು ಅಲಂಕರಿಸಬೇಕಾಗುವದರಿಂದ ಮಕ್ಕಳಲ್ಲಿ ಸೌಂದರ್ಯದ ಕಲ್ಪನೆ ಉಗಮವಾಗುತ್ತದೆ. ಅಲ್ಪ ಖರ್ಚಿನಲ್ಲಿ ಸೃಷ್ಟಿಯಲ್ಲಿ ಸಿಗುವ ಎಲೆಬಳ್ಳಿ ಹೂಗಳಿಂದ ಸಭಾಸ್ಥಾನವನ್ನು ಹೇಗೆ ಅಲಂಕರಿಸಬೇಕೆಂಬ ಜ್ಞಾನವೂ ಮಕ್ಕಳಿಗೆ ಅವಶ್ಯ. ಈ ಪ್ರಯೋಗ ಅವರ ವಾಸಸ್ಥಾನ ಮತ್ತು ವೈಯಕ್ತಿಕ ಅಲಂಕಾರಕ್ಕೂ ಅನುವು ಮಾಡಿಕೊಡುತ್ತದೆ.

ವಿಚಾರ ಪ್ರಕಟನೆಗೆ ಅವಕಾಶ

ಪ್ರಜಾಪ್ರಭುತ್ವವುಳ್ಳ ರಾಜ್ಯದಲ್ಲಿ ಪ್ರತಿಯೊಬ್ಬನಿಗೂ ನೂತು ಇಲ್ಲವೆ ಬರೆಹಗಳ ಮೂಲಕ ತನ್ನ ವಿಚಾರಗಳನ್ನು ಪ್ರಕಟಿಸುವ ಕಲೆಯ ಪರಿಚಯವಿರುವದು ಅತಿ ಅವಶ್ಯ. ಪುಣ್ಯತಿಥಿಯ ಆಚರಣೆಯಲ್ಲಿ ನಾವು ಆರಿಸಿಕೊಂಡ ನಾಯಕನ ಬಗ್ಗೆ ಸಭೆಯಲ್ಲಿ ಕೆಲವೊಂದು ಮಾತುಗಳನ್ನು ಹೇಳುವದು ಇಲ್ಲವೆ ಕೈಬರಹದ ಪತ್ರಿಕೆಯನ್ನು ಹೊರಡಿಸುವದು (ಅನೇಕ ಸಲ ಎರಡೂ) ನಮ್ಮ ದಿನದ ಕಾರ್ಯಕ್ರಮದ ಅಂಗವೇ ಆಗಿರುತ್ತದೆ. ಇದರಿಂದ ಮಕ್ಕಳಿಗೆ ಸಾರ್ವಜನಿಕ ಸಭೆಯೆಂದರೇನು? ಅದನ್ನು ಯಾವ ರೀತಿಯಿಂದ ಜರುಗಿಸಬೇಕು? ಮುಂತಾದ ಅವಶ್ಯಕ ಸಂಗತಿಗಳ ಪರಿಚಯವಾಗಿ, ಪ್ರಜಾಪ್ರಭುತ್ವ ರಾಷ್ಟ್ರದ ನಾಗರಿಕರಾಗುವ ಅರ್ಹತೆಯನ್ನು ಮಕ್ಕಳು ಪಡೆದುಕೊಳ್ಳುತ್ತಾರೆ. ಸಾರ್ವಜನಿಕ ಸಭೆಗಳಲ್ಲಿ ಮಾತಾಡಲಿಕ್ಕೆ ಬೇಕಾಗುವ ಧೈರ್ಯ, ಪ್ರಸಂಗಾವಧಾನಗಳನ್ನು ಇಲ್ಲಿಯೇ ಕಲಿಯಬಹುದು. ಇಂಥ ಸಭೆಗಳು ದೇಶದ ನಾಯಕರನ್ನು ನಿರ್ಮಿಸುವ ಶಾಲೆಗಳೂ ಕೂಡ ಆಗಬಹುದು.

ಹಬ್ಬಗಳ ಆಚರಣೆ

ಇಲ್ಲಿಯ ವರೆಗೆ ಪುಣ್ಯತಿಥಿಗಳ ಬಗ್ಗೆಯೇ ಚರ್ಚಿಸಲಾಗಿದೆ. ಹಬ್ಬಗಳ ಆಚರಣೆಯೂ ಕೂಡ ಈ ವಿಚಾರಗಳನ್ನು ಪುಷ್ಟೀಕರಿಸುತ್ತದೆ. ಭಾರತೀಯರ ಆಚಾರ-ವಿಚಾರ, ಸಂಪ್ರದಾಯ ಮತ್ತು ಸಂಸ್ಕೃತಿಗಳನ್ನರಿತುಕೊಳ್ಳಲು ಹಬ್ಬಗಳ ಆಚರಣೆ ಅತಿ ಮುಖ್ಯ. ಧರ್ಮದ ನಿಜವಾದ ಕಲ್ಪನೆ, ಧರ್ಮಸಹಿಷ್ಣುತೆ ಮುಂತಾದ ಗುಣಗಳನ್ನು ದೇಶದಲ್ಲಿ ಪಸರಿಸಲು ಸಹಾಯವಾಗುತ್ತದೆ. ನಮ್ಮ ಸಂಸ್ಕೃತಿಯ ನಿಜವಾದ ಜ್ಞಾನವಾಗುವದರಿಂದ ನಮ್ಮ ದೇಶ ಮತ್ತು ಜನರ ಬಗ್ಗೆ ಆದರ ಉಂಟಾಗಿ ಭಾರತದ ಐಕ್ಯಕ್ಕೆ ಅನುಕೂಲ ವಾತಾವರಣ ಉಂಟಾಗುವದು. ಪರರ ಅನುಕರಣದಿಂದ ಉಂಟಾದ ವಿಷಮತೆ ಮಾಯವಾಗಿ, ಜನತೆಯಲ್ಲಿ ಸ್ವತಂತ್ರ ವಿಚಾರಶಕ್ತಿ ಬೆಳೆದು ಭಾರತದ ಜನತೆ ಜಗತ್ತಿಗೆ ಮಾರ್ಗದರ್ಶಕವಾಗಬಲ್ಲದು.

ಒಟ್ಟಾರೆ ಹಲಸಿನ ಗಿಡದಂತೆ ಅಡಿಯಿಂದ ಮುಡಿಯ ವರೆಗೆ ಫಲವನ್ನು ಕೊಡುವ ಶಕ್ತಿಯುಳ್ಳ ಇಂಥ ಆಚರಣೆಗಳಿಗೆ ವರ್ಧಾ ರಾಷ್ಟ್ರೀಯ ಶಿಕ್ಷಣದಲ್ಲಿ ಇದಕ್ಕೆ ನ್ಯಾಯವಾದ ಸ್ಥಾನ ಸಿಕ್ಕುದು ಸಹಜ.

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟು

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯ ೬ ಪುಸ್ತಕಗಳು : ೧ನೆಯ ಇಯತ್ತೆಯಿಂದ ೬ನೆಯ ಇಯತ್ತೆಯವರೆಗೆ

ಸಚಿತ್ರ ಪೌರನೀತಿ ಮಾಲೆಯ ೭ ಪುಸ್ತಕಗಳು : (೧ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯ ೬ ಪುಸ್ತಕಗಳು: (೨ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ)

ಭೂಮಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತೆಗೆ, ಭಾಗ ೪, ೭ ನೆಯ ಇಯತ್ತೆಗೆ)

ಆಧುನಿಕ ರೈತ : ೧ನೆಯ ಭಾಗ ೪ ನೆಯ ಇಯತ್ತೆಗೆ, ೨ನೆಯ ಭಾಗ, ೫ನೆಯ ಇಯತ್ತೆಗೆ). ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತೆಗಾಗಿ)	.....	ಬೆಲೆ ೮ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತೆಗಾಗಿ)	.....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತೆಗಾಗಿ)	.....	,, ೧ ರೂ ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತೆಗಾಗಿ)	.....	,, ೧ ರೂ. ೮ ಆ.

ಎಲ್ಲ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರು ತಮ್ಮ ಹದಿನೈದು ವರುಷಗಳ ಅನುಭವದಿಂದ ಹೊಸ ಅಭ್ಯಾಸಪತ್ರಿಕೆಯಂತೆ ಬರೆದ ಮತ್ತು ಸರಕಾರದ ಪಠ್ಯಪುಸ್ತಕ ಕಮೀಟಿಯಿಂದ ಮಂಜೂರಾದ ಪುಸ್ತಕಗಳು. ಸುಲಭವಾದ ಭಾಷೆ. ಕಾರಣ ಅವರ ಪುಸ್ತಕಗಳನ್ನೇ ಉಪಯೋಗಿಸಿರಿ.

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ

೨ನೆಯ ಇಯತ್ತೆಗೆ—	೦—೪—೦
೩ನೆಯ ಇಯತ್ತೆಗೆ—	೦—೫—೦
೫ನೆಯ ಇಯತ್ತೆಗೆ—	೧—೮—೦

ಸಚಿತ್ರ ಭೂಗೋಲ ಮಾಲೆ

೨ನೆಯ ಇಯತ್ತೆಗೆ—	೦—೬—೦
೩ನೆಯ ಇಯತ್ತೆಗೆ—	೦—೮—೬

ಸಚಿತ್ರ ಪೌರ ನೀತಿ ಮಾಲೆ

೧ನೆಯ ಇಯತ್ತೆಗೆ—	೦—೨—೦
೨ನೆಯ ಇಯತ್ತೆಗೆ—	೦—೩—೦
೩ನೆಯ ಇಯತ್ತೆಗೆ—	೦—೪—೦
೪ನೆಯ ಇಯತ್ತೆಗೆ	೦—೬—೦
೫ನೆಯ ಇಯತ್ತೆಗೆ—	೦—೮—೦
೬ನೆಯ ಇಯತ್ತೆಗೆ—	೦--೧೦--೦

ಈ ಪುಸ್ತಕಗಳೂ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗಾಗಿ ಹೊಸ ಪುಸ್ತಕಗಳೂ ಠೋಕಾಗಿಯೂ, ಚಿಲ್ಲರೆಯಾಗಿಯೂ ಸಿಗುವ ಒಂದೇ ಸ್ಥಳ:

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಸೂಚನೆ

ಸರಕಾರದ ಪಠ್ಯಪುಸ್ತಕ ಕಮೀಟಿಗಳಿಂದ ಮಂಜೂರಾದ ಪುಸ್ತಕಗಳ ಜಾಹೀರಾತುಗಳನ್ನಷ್ಟೇ ಸ್ವೀಕರಿಸಲಾಗುವದು.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ!!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯಗಳಿಗೆ ಶ್ರೇಷ್ಠ ಸಾಹಿತ್ಯ ಬೇಕಲ್ಲವೇ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಕಿಗೆ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯಬೇಕಾಗಿ ಬಿನ್ನಹ.

ಶ್ರೀ. ಪಾವಟೆ ಚೆನ್ನಪ್ಪನವರು ಅಡಲ್ಟ ಎಜ್ಯುಕೇಶನ ಆಫೀಸರ, ಗೋಕಾಕ ಅವರಿಂದ ರಚಿತವಾದ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ ೦—೫—೦
೨) ಶಾಂತಿಸಮರ ೦—೪—೦
೩) ವಿವೇಕ (ಏಕಾಂಕ ನಾಟಕ) ೦—೪—೦
೪) ಅಶಿಕ್ಷಿತರ ಗೋಳು (ಏಕಾಂಕ ನಾಟಕ) ೦—೩—೦

(ಸರಕಾರದಿಂದ ಲಾಯಬ್ರರಿ ಪುಸ್ತಕವೆಂದು ಮಂಜೂರಾದವು)

ಇವಲ್ಲದೆ ಕೆಳಗಿನ ಪುಸ್ತಕಗಳೂ ದೊರೆಯುವವು
೫) ವಯಸ್ಕರ ಪದ್ಯಾವಲಿ ೦—೮—೦

ಅಚ್ಚಾಗಲಿರುವ ಪುಸ್ತಕಗಳು
೬) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರಯುವ ಸ್ಥಳ
ನವಿನ ಚೆನ್ನಪ್ಪ ಪಾವಟೆ
ಜಯನಿಲಯ ಪ್ರಕಾಶನ ಸಮಿತಿ, ಗೋಕಾಕ

ಸರಕಾರದಿಂದ ಮಂಜೂರಾದ ಪುಸ್ತಕಗಳು

ಶ್ರೀ. ಸಾಲಿ ರಾಮಚಂದ್ರರಾಯರಿಂದ ರಚಿತವಾದವು.

ಬಾಲಕಾಂಡ ೧—೦—
ಅಯೋಧ್ಯಾಕಾಂಡ ೧—೪—

ನೂತನ ಗಣಿತ: ಶ್ರೀ. ಕೆ. ಕೆ. ಗಲಗಲಿ.
ಪ್ರಾಥಮಿಕ ಶಾಲೆಯ ಇಯತ್ತಿಗೆ ಬೆಲೆ ೧—೦—೦

ಕೆಳಗಿನ ಪತ್ತೆಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ
ವಿಜಯರೋಡ, ಧಾರವಾಡ

Printed by: D. T. Kayasth, at Ravindra Press, U. B. Hill (House No. 8536) Dharw
Edited and Published by R. K. Lakkundi Principal T.C.M., R. V. Desai Principal B. T.
Y. D. Nadakarni, Lady Superintendent T.C.W. Dharwar Jointly at the Kannda Prathar
Shikshan Office Govt. Training College for Men Dharwar. 7403-46 1375.

ಕನ್ನಡ ಪ್ರಾಥಮಿಕ ಶಿಕ್ಷಣ

ಚರಖಾ (ಗಾಂ
ಜಯಂತಿಯ
ವಿಶೇಷ ಸಂಚ

ಪ್ಟೆಂಬರ
ಳಲ

ಚಂದಾ
ಸಾಯಿ
ಂಚಿಕೆ

ಚರಖಾ (ಗಾಂಧಿ) ಜಯಂತಿ ಸಪ್ತಾಹದ ದೃಶ್ಯಗಳು

ಅಖಂಡ ೭೯ ಗಂಟೆಯ ಸೂತ್ರಯ
ವನ್ನು ೨-೧೦ -ಳಲನೆಯ ದಿನ ಬೆಳಗಿ
೬ ಗಂಟೆಗೆ ಮುಕ್ತಾಯ ಮಾಡಿದ ಕಾಲ
ದೃಶ್ಯ. ಮುಖ್ಯ ಅಥಿತಿಗಳಾದ ಪ್ರೊ.ಶಿ.
ಬಸವನಾಳರು ನಿಂತಿರುವರು. ಪ್ರಿ
ಪಾಲ ಲಕ್ಕುಂಡಿಯೆವರು ಉತ್ತರ ಪ್ರ
ಗಾಗಿ ಕುಳಿತಿರುವರು.

೨-೧೦-ಳಲನೆಯ ದಿನ ಬೆಳಿಗ್ಗೆ ೮ ಗಂಟೆಗೆ ಪ್ರೊ. ಶಿ.ಶಿ.ಬಸವ--
ನಾಳರಿಂದ ರಾಷ್ಟ್ರಧ್ವಜಾರೋಹಣದ ದೃಶ್ಯ- ಧಾರವಾಡದ ಐದು
ಸರಕಾರಿ. ಟ್ರೇನಿಂಗ ಕಾಲೇಜುಗಳ ಪ್ರಿನ್ಸಿಪಾಲರು ನಿಂತಿರುವರು,

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳ

ಸಂಚಾಲಕರು:—ಶ್ರೀ. ಎ. ಎನ್. ಸಾನೆ. ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಸಂಪಾದಕರು: — ಶ್ರೀ. ಆರ್. ಕೆ. ಲಕ್ಕುಂಡಿ. ಶ್ರೀ. ಆರ್. ವ್ಹಿ. ದೇಸಾಯಿ. ಮಿಸ್. ವಾಯ್. ಡಿ. ನಾಡಕರ್ಣಿ.

ಅಕ್ಟೋಬರ] **ಪ ರಿ ವಿ ಡಿ** **[೧೯೪೮**

೧.	ಸಂಪಾದಕೀಯ.	....	೩
೨.	ರೋಹಿಡೇಕರ ಶ್ಯಾಮರಾಯರ ಭಾಷಣ.	....	೪
೩,	ಜಾಗತಿಕ ಮಹಾ ವಿಭೂತಿ ಬಾಪೂ	ಶ್ರೀ. ವಿರೇಶ ಹಿರೇಮಠ.	೭
೪.	ಮ. ಗಾಂಧಿಯವರು ವ್ಯಾವಹಾರಿಕ ವೇದಾಂತಿಗಳು.	ಶ್ರೀ. ರಾ. ವೆಂ. ಪಿರಿರೆಡ್ಡಿ.	೯
೫.	ಹುಟ್ಟಿಬಾ (ಕವನ)	ಶ್ರೀ. ಕೆ. ವ್ಹಿ. ಮಳೆಮಠ.	೧೧
೬.	ಗಾಂಧೀಜಿ–ಶ್ರೇಷ್ಠ ಪತ್ರಿಕೋದ್ಯಮಿ.	ಶ್ರೀ. ಗು. ಹ. ಸೂಡಿ.	೧೨
೭.	ಅಮೃತವಾಣಿಗೆ ಓಗೊಡುವಿರಾ? (ಗಾಂಧಿ ವಚನ.	ಶ್ರೀ. ಶಿ. ಮ. ಹಿಲ್ಲಿ.	೧೬
೮.	ಯಾರು ವಂದನೆಗೈಯಲಿಕ್ಕಿಲ್ಲ? (ಕವನ)	ಶ್ರೀ. ಹಿಮಶಿ	೧೮
೯.	ಮ. ಗಾಂಧಿಯವರು ಅರ್ಥಶಾಸ್ತ್ರಜ್ಞರು.	ಜ. ಎಸ್. ಎಸ್. ಕಾಜಿ.	೧೯
೧೦.	ಖಾದಿಯೂ ಮಹಾತ್ಮರೂ.	ಶ್ರೀ. ಆ. ರಾ. ಮಂಗಳೂರ	೨೩
೧೧.	ಶಿಕ್ಷಣತಜ್ಞ ಗಾಂಧೀಜಿ.	ಶ್ರೀ. ಎಚ್. ಕೆ. ಕೆರೂರ.	೨೬
೧೨.	ರಾಜಕಾರಣದ ಪುರುಷ ಗಾಂಧೀಜಿ.	ಶ್ರೀ. ಸಿ. ಎಸ್. ಕುಲಕರ್ಣಿ.	೩೦
೧೩.	ಸ್ತ್ರೀಜನ ಸುಧಾರಕರು.	ಶ್ರೀಮತಿ ಕಮಲಾ ಜುಜರೂರಕರ.	೩೩
೧೪.	ಅಸ್ಪೃಶ್ಯೋದ್ಧಾರಕ ಗಾಂಧಿ....	ಶ್ರೀಮತಿ ಶಾಂತಾ ಮಳಗಿ.	೩೬
೧೫.	ಮ. ಗಾಂಧಿಯವರು ಜಾತೀಯ ಐಕ್ಯತೆಗಾಗಿ ಮಾಡಿದ ಕಾರ್ಯ.	ಜನಾಬ. ಎಸ್. ಎಸ್. ಸುರ್ಖಿ.	೩೮

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟು

ಸತ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯ ೬ ಪುಸ್ತಕಗಳು : ೧ನೆಯ ಇಯತ್ತೆಯಿಂದ ೬ನೆಯ ಇಯತ್ತೆಯವರೆಗೆ

ಸಚಿತ್ರ ಪೌರನೀತಿ ಮಾಲೆಯ ೭ ಪುಸ್ತಕಗಳು : (೧ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯ ೬ ಪುಸ್ತಕಗಳು: (೨ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ)

ಭೂಮಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತೆಗೆ, ಭಾಗ ೪, ೭ ನೆಯ ಇಯತ್ತೆಗೆ)

ಆಧುನಿಕ ರೈತ : ೧ನೆಯ ಭಾಗ ೪ ನೇಯ ಇಯತ್ತೆಗೆ, ೨ನೆಯ ಭಾಗ, ೫ನೆಯ ಇಯತ್ತೆಗೆ). ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ಥಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತೆಗಾಗಿ)	....	ಬೆಲೆ ೮ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತೆಗಾಗಿ)	....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತೆಗಾಗಿ)	....	,, ೧ ರೂ. ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತೆಗಾಗಿ)	.....	,, ೧ ರೂ. ೮ ಆ.

ಎಲ್ಲ ಪುಸ್ತಕಗಳೂ ಸತ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು: ರ. ಕೃ. ಲಕ್ಕುಂಡಿ.

ಂಪುಟ ೮೮ | ಅಕ್ಟೋಬರ ೧೯೪೮ | ಸಂಚಿಕೆ ೫

ಸಂಪಾದಕೀಯ

ಚರಖಾ (ಗಾಂಧಿ) ಜಯಂತಿ ಸಪ್ತಾಹ

ಸರ್ಧಾ ರಾಷ್ಟ್ರೀಯ ಶಿಕ್ಷಣದಲ್ಲಿ ಸಾಂಘಿಕಜೀವನಕ್ಕೂ ತಿ ಮೂಲ ಶಿಕ್ಷಣಕ್ಕೂ ಮಹತ್ವವಾದ ಸ್ಥಾನವುಂಟು. ದುದರಿಂದ ಈ ಶಿಕ್ಷಣದ ಪ್ರವರ್ತಕರಾದ ಮಹಾತ್ಮಾ ಂಧೀಜಿಯವರ--ಅವರ ಜೀವಾಳದಂತಿದ್ದ ಚರಖಾದ-ಯಂತಿ ಸಪ್ತಾಹವನ್ನು ಧಾರವಾಡದ ಐದೂ ಸರಕಾರಿ ನಿಂಗ ಸಂಸ್ಥೆಗಳ—ಪದವೀಧರ ಬೇಸಿಕ್ ಟ್ರೇನಿಂಗ ಟರ್, ಬೇಸಿಕ್ ಟ್ರೇನಿಂಗ ಸೆಂಟರ್, ಉರ್ದು ನಿಂಗ ಕಾಲೇಜ, ಗಂಡು ಮಕ್ಕಳ ಟ್ರೇನಿಂಗ ಲೇಜ ಮತ್ತು ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ-ರಿಯರು ಒಟ್ಟಾಗಿಯೂ ಪ್ರತ್ಯೇಕವಾಗಿಯೂ ಆಚ ಬೇಕೆಂದು ನಿರ್ಣಯಿಸಿದರು. ಆ ಮೇರೆಗೆ ಗೊತ್ತು ಡಿಸಿದ ಕಾರ್ಯಕ್ರಮದಂತೆ ಚಟುವಟಿಕೆಗಳು ನಡೆ ವು. ಸಾಮೂಹಿಕವಾಗಿ ನಡೆದ ಚಟುವಟಿಕೆಗಳಲ್ಲಿ ಮುಖ್ಯವಾದುವು--೭೯ ಗಂಟೆಗಳ ವರೆಗೆ ೧ ಚರಖಾ ತ್ತು ೩ ತಕಲಿಗಳ ಮೇಲೆ ನಡೆದ ಅಖಂಡ ಸೂತ್ರ ಯಜ್ಞ, ರಾಷ್ಟ್ರ ಧ್ವಜಾರೋಹಣ ಮತ್ತು ಗಾಂಧೀಜಿಯ ಜೀವನವನ್ನು ಕುರಿತು ವಿಚಾರ ಸಂಕೀರ್ಣದ ರ್ಯಕ್ರಮ. ವಿಚಾರ ಸಂಕೀರ್ಣದಲ್ಲಿ ಪ್ರತಿಯೊಂದು ಸ್ಥೆಯಿಂದ ಇಬ್ಬರು ತರಬೇತಿ ಹೊಂದುತ್ತಿರುವವರು ಭಾಗವಹಿಸಿದರು; ಮತ್ತು ಅವರೊಳಗಿನವರೇ ಒಬ್ಬರು ಅಧ್ಯಕ್ಷ ಸ್ಥಾನವನ್ನು ವಹಿಸಿದರು. ಈ ಕಾರ್ಯಕ್ರಮ ಗಳೆಲ್ಲವೂ ಶಿಕ್ಷಕ--ವಿದ್ಯಾರ್ಥಿ--ವಿದ್ಯಾರ್ಥಿನಿಯರಿಂದಲೇ ನಡೆಸಲ್ಪಟ್ಟುದು ಈ ಜಯಂತಿಯ ಒಂದು ವೈಶಿಷ್ಟ್ಯ. ಅಧ್ಯಾಪಕರು ಕೇವಲ ಮಾರ್ಗದರ್ಶಕರಾಗಿದ್ದರು. ೨-೧೦-೪೮ನೆಯ ದಿನ ಪ್ರೊ. ಶಿ. ಶಿ. ಬಸವನಾಳರು ರಾಷ್ಟ್ರಧ್ವಜಾರೋಹಣ ಮಾಡಿ ಸ್ಫೂರ್ತಿಯುತ ಸಂದೇಶ ವಿತ್ತರು.

ಈ ಜಯಂತಿಯ ವಿಚಾರ ಸಂಕೀರ್ಣದಲ್ಲಿ ಭಾಗ ವಹಿಸಿದವರೆಲ್ಲರ ಭಾಷಣಗಳನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ. ಇವಲ್ಲದೆ ನಮ್ಮ ಕಡೆಗೆ ಗಾಂಧೀಜಿ ಯವರನ್ನು ಕುರಿತು ಅನೇಕ ಶಿಕ್ಷಕ ವಿದ್ಯಾರ್ಥಿ ಗಳಿಂದಲೂ ಪ್ರ್ಯಾಕ್ಟಿಸಿಂಗ ಸ್ಕೂಲುಗಳ ವಿದ್ಯಾರ್ಥಿಗ ಳಿಂದಲೂ ಲೇಖನಗಳೂ ಕವನಗಳೂ ಬಂದಿವೆ. ಅವ ನ್ನೆಲ್ಲ ಈ ಸಂಚಿಕೆಯಲ್ಲಿ ಕೊಡಬೇಕೆಂದು ವಿಚಾರ ವಿತ್ತು. ಆದರೆ ಸ್ಥಳಾಭಾವದ ಮೂಲಕ ಅವನ್ನೂ ಈ ಜಯಂತಿಯ ಕಾರ್ಯ ಸಂಘಟನೆಯ ವಿವರಗ ಳನ್ನೂ ನಮ್ಮ ಓದುಗರಿಗೆ ಮಾರ್ಗದರ್ಶಕವಾಗಬಹು ದೆಂಬ ಭರವಸೆಯಿಂದ ಮುಂದಿನ ಸಂಚಿಕೆಯಲ್ಲಿ ಕೊಡುವೆವು.

—:ಕೃತಜ್ಞತೆ:—

ನಮಗೆ ಈ ವಿಶೇಷ ಸಂಚಿಕೆಯನ್ನು ಹೊರಡಿಸಲು ನೆರವಾದ ಧಾರವಾಡದಲ್ಲಿಯ ಐದೂ ಸರಕಾರಿ ಟ್ರೇನಿಂಗ ಸಂಸ್ಥೆಗಳ ಚಾಲಕರಿಗೂ ಶಿಕ್ಷಕ ವಿದ್ಯಾರ್ಥಿ-ವಿದ್ಯಾರ್ಥಿ ನಿಯರಿಗೂ ಪಡಿಯಚ್ಚುಗಳನ್ನು ಉಪಯೋಗಿಸಲು ಕೊಟ್ಟ ಜಯಕರ್ನಾಟಕದ ಸಂಪಾದಕರಿಗೂ ಸಮಾಜ ಬುಕ್ ಡಿಪೋದ ಒಡೆಯರಿಗೂ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ರೋಹಿಡೇಕರ ಶಾಮರಾಯರ ಅಧ್ಯಕ್ಷೀಯ ಭಾಷಣದ ಸಾರಾಂಶ-

ಮಹನೀಯರೇ, ಮಹಿಳೆಯರೇ,

ಇದೀಗ ಸುಮಾರು ಒಂದೂವರೆ ತಾಸಿನ ವರೆಗೆ ಒಟ್ಟು ಹತ್ತು ಜನರು ಮಹಾತ್ಮಾ ಗಾಂಧಿಯವರ ಬಗ್ಗೆ ಹತ್ತು ಬೇರೆ ಬೇರೆ ವಿಷಯಗಳನ್ನು ಕುರಿತು ಮಾತನಾಡಿದ್ದನ್ನು ಕೇಳಿದಿರಿ. ಗಾಂಧೀಜಿಯವರು ಹಟಯೋಗಿಗಳಾಗಿ ತಮ್ಮ ಜೀವನವನ್ನೇ ಹೇಗೆ ಒಂದು ವ್ಯಾಪಾರಿಕ ಯೋಗಾಭ್ಯಾಸವೆಂದು ಬಗೆದಿದ್ದರು ಎಂಬುದನ್ನು ಸ್ಪಷ್ಟೀಕರಿಸಿ, ಒಬ್ಬ ಭಾಷಣಕಾರರು "ಬಾ" ಎಂದರೆ "ಬಾಡದ," "ಪೂ" ಎಂದರೆ "ಹೂ" ಎಂಬ ತಮ್ಮದೇ ಆದ ಮತ್ತು ತಮಗಾಗಿಯೇ ಮೀಸಲಾಗಿಡಲು ಯೋಗ್ಯವಾದ ಅರ್ಥವನ್ನು "ಬಾಪೂ" ಎಂಬ ಶಬ್ದಕ್ಕೆ ಭಾಷ್ಯ ಕೊಟ್ಟು ಹೇಳಲು ಯತ್ನಿಸಿದರು. ಉರ್ದು ಮಾತೃಭಾಷೆಯುಳ್ಳ ಇನ್ನೊಬ್ಬರು "ಗಾಂಧೀಜೀಯವರು ಶ್ರೇಷ್ಠ ಅರ್ಥಶಾಸ್ತ್ರಜ್ಞರು" ಎಂಬುದನ್ನು ತೋರಿಸಲು ತಾವು ಕನ್ನಡದಲ್ಲಿ ಬರೆದು ತಂದ ಹಾಗು ಅನೇಕ ಅಂಕಿಸಂಖ್ಯೆಗಳ ಆಧಾರದಿಂದೊಡಗೂಡಿದ ಭಾಷಣವನ್ನು ಓದಿ ತೋರಿಸಿ, ಉರ್ದು ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಸ್ತುತ್ಯ ಪಾಠ ಹಾಕಿ ಕೊಟ್ಟರು. ಖಾದೀ ಧಾರಿಗಳಾದ ಮಗದೊಬ್ಬರು "ಗಾಂಧೀಜಿ ಹಾಗು ಖಾದಿ" ಎಂಬ ಬಗ್ಗೆ ಒಳ್ಳೇ ಆವೇಶಪೂರ್ಣ ಭಾಷಣ ಮಾಡುತ್ತ, ಗಾಂಧೀಜಿಯವರಿಂದ ಖಾದಿಗೆ ಹೇಗೆ ಮಹತ್ತ್ವ ಬಂದಿದೆ ಮತ್ತು ಖಾದಿಯಿಂದಲೇ ನನ್ನ ದೇಶದ ಉದ್ಧಾರ ಆಗಬಲ್ಲದು ಎಂಬುದನ್ನು ವಿಶದ ಪಡಿಸಿದರು. ವಾದಕ್ಕಾಗಿಯೇ ವಾದ ಹಾಕುವ ನನ್ನ ಮಿತ್ರರೊಬ್ಬರು "ರಾಜಕಾರಣವು ಘಟಿಂಗನ ಕೊನೆಯ ಆಶ್ರಯ" ವೆಂಬ ಮಾತಿನ ಪ್ರತೀಕರಾದ ಕಿಡಿಗೇಡಿಗಳಾದ ರಾಜಕಾರಣಿಗಳಿಂದಲೂ ಮತ್ತು ಕಾರ್ಯಾಸಕ್ತಿಯ ಅರಿವಿಲ್ಲದೆ ಆರಾಮಖುರ್ಚಿಯಲ್ಲಿ ಬಿದ್ದುಕೊಂಡು ರಾಜಕಾರಣದ ವಿಷಯವನ್ನು ಚರ್ಚಿಸುವುದರಲ್ಲಿಯೇ ಹೊತ್ತುಗಳೆಯುವ ನಿರುಪಯೋಗಿ ರಾಜಕಾರಣಿಗಳಿಂದಲೂ ತುಂಬಿದ ಇಂದಿನ ಜಗತ್ತಿಗೆ ಮಹಾತ್ಮಾ ಗಾಂಧೀಜಿಯವರು ಸತ್ಯ, ಅಹಿಂಸೆಗಳ ಭದ್ರವಾದ ತಳಹದಿಯ ಮೇಲೆ ನಿಂತ ರಾಜಕಾರಣದ ಒಂದು ಅಪೂರ್ವವಾದ ದಾರಿಯನ್ನು ಹೇಗೆ ಹಾಕಿ ಕೊಟ್ಟರು ಮತ್ತು ಆ ದಾರಿಯಿಂದಲೇ ಜಗತ್ತಿನಲ್ಲಿ ಶಾಶ್ವತವಾದ ಶಾಂತಿ ಹೇಗೆ ನೆಲೆಗೊಳ್ಳಬಹುದು ಎಂಬುದನ್ನು ಬಹಳ ಮಾರ್ಮಿಕವಾಗಿ ತಿಳಿಯಪಡಿಸಿದರು. ಇನ್ನೊಬ್ಬರು "ಶಿಕ್ಷಣತಜ್ಞ ಗಾಂಧೀಜಿ" ಎಂಬ ವಿಷಯವಾಗಿ ತಮಗೆ ಗೊತ್ತಿದ್ದ ನಾಲ್ಕು ಮಾತುಗಳನ್ನು ಒಳ್ಳೇ ತರ್ಕಬದ್ಧವಾಗಿ ಹೆಣೆದು ಗಾಂಧೀಜೀಯವರ ಪ್ರೇರಣೆಯಿಂದ ಪ್ರಚುರವಾದ ವರ್ಧಾ ರಾಷ್ಟ್ರೀಯ ಶಿಕ್ಷಣ ಯೋಜನೆಯು ನಮ್ಮ ದೇಶಕ್ಕೆ ಅತ್ಯಂತ ಯೋಗ್ಯವಾಗಿದೆಯೆಂದು ಅದರಿಂದಲೇ ನಮ್ಮ ಮುಂದಿನ ಪೀಳಿಗೆಯು ಒಳ್ಳೇ ಶಿಕ್ಷಣ ಪಡೆದು ಮುಂದೆ ಬರುವುದೆಂದು ಭರವಸೆಯನ್ನು ವ್ಯಕ್ತ ಪಡಿಸಿದರು.

ಭಾಷಣ ಮಾಡಲು ಸಂಧಿ ಸಿಕ್ಕಾಗ ಅದನ್ನು ಏಕೆ ಬಿಡಬೇಕು ಎಂಬ ತತ್ವಕ್ಕೆ ಅಂಟಿಕೊಂಡು ಮಾತನಾಡಲು ಧೈರ್ಯದಿಂದ ನಿಂತ ಒಬ್ಬರು, ಸಭಿಕರು ನಡುನಡುವೆ ತುಂಬ ತೊಂದರೆ ಕೊಟ್ಟರು ಗಮನಕ್ಕೆ ತಾರದೆ, ಆ ತೊಂದರೆಯಿಂದಲೇ ತಮ್ಮ ಭಾಷಣದ ಅನೇಕ ಅಮೌಲ್ಯ ನಿಮಿಷಗಳು ಕಳೆದು ಹೋದರು, ಕಡೆಗೆ "ಗಾಂಧೀಜೀಯವರು ಉತ್ತಮ ಪತ್ರಿಕಾ ಕರ್ತರೆಂದು, ಅವರು ನಿರ್ಮಿಸಿದ ಸಾಹಿತ್ಯ ಅಮರವೆಂದೂ ಎಲ್ಲರೂ ನಿಮ್ಮ ಸೆರಗಿಗೆ ಗಂಟು ಹೊಡೆದುಕೊಳ್ಳಿರಿ" ಎಂದು ಆವೇಶದಿಂದ ಹೇಳಿ ಅಪಹಾಸ್ಯಕ್ಕೂ ಬಗ್ಗದ ತಮ್ಮ ವಿಶಿಷ್ಟವಾದ ಧೈರ್ಯವನ್ನು ಪ್ರದರ್ಶಿಸಿದರು. ಉರ್ದು ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳೊಬ್ಬರು "ಗಾಂಧೀಜೀ ಹಾಗು ಜಾತೀಯ ಐಕ್ಯ" ಎಂಬ ವಿಷಯವಾಗಿ ಮಾತನಾಡುತ್ತ, ನೌಖಾಲಿ, ತಿಪ್ಪೇರಿ, ದಿಲ್ಲಿ ಮೊದಲಾದವುಗಳಲ್ಲಿ ಮತ್ತು ತಮ್ಮ ಜೀವನದ ಕೊನೆಯ ದಿನಗಳಲ್ಲಿ ಜಾತೀಯ ಐಕ್ಯಕ್ಕಾಗಿ-ವಿಶೇಷತಃ ಹಿಂದು-ಮುಸ್ಲಿಂ ಮೈತ್ರಿಗಾಗಿ ದುಡಿದು ಹೇಗೆ ಅದಕ್ಕಾಗಿಯೇ ತಮ್ಮ ಜೀವನವನ್ನು ಗಾಂಧೀಜಿ ಧಾರೆಯೆರೆದರು ಎಂಬುದನ್ನು ಮನಮುಟ್ಟುವಂತೆ ತಿಳಿಸಿಕೊಟ್ಟರು. ನನ್ನ ಗೆಳೆಯ ಭಾಷಣಕಾರರೊಬ್ಬರು "ಮಹಾತ್ಮಾಜಿಯವರು ಜಾಗತಿಕ ಭೂತಿ"ಯ ಬಗ್ಗೆ ಭಾಷಣ ಮಾಡುತ್ತ ಅವರ ಜೀವನದಲ್ಲಿ ತೋರಿ ಬರುವ ವಿರೋಧಾಭಾಸವನ್ನು-ವಿರೋಧವಲ್ಲ ಅದರ ಆಭಾಸ ಮಾತ್ರ-ಅನೇಕ ಉದಾಹರಣೆಗಳಿಂದ ಸ್ಪಷ್ಟ ಪಡಿಸಿದರಲ್ಲದೆ, ಅಬ್ರಾಹಂ ಲಿಂಕನ್, ಸೊಕ್ರೆಟಿಸ್, ಹಿಟ್ಲರ್, ಚರ್ಚಿಲ್, ಅರಬಿಂದ ಘೋಷ ಮೊದಲಾದ ಜಗತ್ತಿನ ಯಾವದೇ ಶ್ರೇಷ್ಠ ವ್ಯಕ್ತಿಗಿಂತ ಗಾಂಧೀಜಿಯವರು ಹೆಚ್ಚಿನವರು ಎಂಬುದನ್ನು ತಿಳಿಸಲು ಪರ್ಲಬಕ್, ಗುಂಥರ ಮೊದ

ರಾದ ಪ್ರಸಿದ್ಧ ಲೇಖಕರ ಆಧಾರಗಳನ್ನೆ ಕೊಡುತ್ತ, ಕೊನೆಗೆ ಗೆಳೆಯ ಅಧ್ಯಕ್ಷನಾದ ನಾನು ಗಂಟೆಗೆ ಕೈ ಮುಕ್ಕಿ ಅವರ ಮುಖ ನೋಡುತ್ತಿದ್ದುದರಿಂದ ತಮ್ಮ ಮಾತನ್ನು ಮುಗಿಸಲೇಬೇಕಾಗಿದೆಯೆಂದರೂ ಕೂಡ, ನನ್ನ ಅವರ ನಡುವೆ ಮೊದಲೇ ಗೊತ್ತಾದಂತೆ ತಮಗೆ ಬೇಕಾದ ಹೆಚ್ಚಿನ ಅವಧಿಯನ್ನು ತೆಗೆದುಕೊಂಡೇ ತಮ್ಮ ಮಾತು ಮುಗಿಸಿದರು. ಆದರೆ ಅವರು ತಮ್ಮ ಮಾತನ್ನು ಮುಗಿಸಬೇಕೆಂಬ ಉದ್ದೇಶದಿಂದ ನಾನವರ ಮುಖವನ್ನು ನೋಡುತ್ತಿರದೆ, ಮಾತಿನ ಮಲ್ಲರಾದ ಅವರ ಮುಖದಿಂದ ಹೊರಡುತ್ತಿರುವ ಮುಕ್ತಾ ಫಲಗಳ ಸವಿಯನ್ನುಣ್ಣಲು ನೋಡುತ್ತಿದ್ದೆ ಮಾತ್ರ.

ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ವತಿಯಿಂದ ಮಾತನಾಡಿದ ಹೆಣ್ಣು ಮಕ್ಕಳೀರ್ವರಲ್ಲಿ ಒಬ್ಬರು ಗಾಂಧೀಜಿಯವರು ಸ್ತ್ರೀಯರ ಉನ್ನತಿಗಾಗಿ ಮಾಡಿದ ಕಾರ್ಯವನ್ನು ವಿವರಿಸುತ್ತ ಒಂದು ಪ್ರಸಂಗದಲ್ಲಿ "ಬಾಪೂ ರವರು "ಬಾಪೂ"ರವರ ನೆತ್ತಿಗೇರಿದ ಪಿತ್ತವನ್ನು ಹೇಗೆ" ಇಳಿಸಿದರೆಂದು; ಹೆಣ್ಣು ಮಕ್ಕಳು ಚಿಕ್ಕವರಿರುವಾಗ ತಂದೆಯ ಆಧೀನದಲ್ಲಿಯೂ, ಬೆಳೆದು ದೊಡ್ಡವರಾದ ಬಳಿಕ ಗಂಡನ ಆಳಿಕೆಯಲ್ಲಿಯೂ ಮುಪ್ಪಿನಲ್ಲಿ ಮಕ್ಕಳ ಕೈಯಲ್ಲಿಯೂ ನಡಕೊಳ್ಳುವ ದುಃಖವನ್ನು ಅನುಭವಿಸಬೇಕಾಗುವ ಪರಿಸ್ಥಿತಿಯು ಅರಿವನ್ನು ಮಾಡಿಕೊಟ್ಟು ಸಮಾಜದಲ್ಲಿ ಸ್ತ್ರೀಯರ ಉನ್ನತಿಗಾಗಿ ಹೆಣಗಾಡಿದ ಗಾಂಧೀಜೀಯವರಿಗೆ ಧನ್ಯವಾದಗಳನ್ನು ಅರ್ಪಿಸಿ, ಸ್ತ್ರೀಸ್ವಭಾವಕ್ಕನುಗುಣವಾಗಿ ಭಾವನಾ ಪ್ರಧಾನದ ತಮ್ಮ ತೀಕ್ಷ್ಣವಾಗ್ಬಾಣಗಳ ಸುರಿಮಳೆಯನ್ನು ಸಭಿಕರ ಕರತಾಡನದೊಂದಿಗೆ ನಿಲ್ಲಿಸಲುದ್ಯುಕ್ತರಾದರು. ಮೇಲೆ ವಿವರಿಸಿದ ಪರಿಸ್ಥಿತಿಯು ಹೋಗಿ, ಇನ್ನು ಮೇಲೆ ಸಣ್ಣವರಿರುವಾಗ ತಂದೆಯನ್ನು ಪೀಡಿಸಿ, ಯುವತಿಯರಾದ ಬಳಿಕ..... ಯುವಕರ ಮೇಲೆ .... ಪ್ರೀತಿಯ ಏಕತಂತ್ರಾಧಿಕಾರವನ್ನು ಸೇರಿ, ಇಳಿವಯಸ್ಸಿನಲ್ಲಿ ಜಗತ್ಪ್ರಸಿದ್ಧವಾದ ಅತ್ತೆತನದ ಶಿಬ್ಬರಕ್ಕೆ ಅಪವಾದವಾಗದೆ ಇರುವ ಹೊಸ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಸಿದ್ಧರಾದ ಆ ಭಾಷಣಕಾರರು ಅಭಿನಂದನಾರ್ಹರಾದರು. ಒಂದು ಕಡೆ ಇಳಿವಯಸ್ಸಿನ ಇನ್ನೊಂದೆಡೆಗೆ ಏರುವುದು ಸಮಾಜಕ್ಕೆ ವಿಘಾತಕವಾಗಿಯೇ ತೀರುವದೆಂಬುದನ್ನು ಇಲ್ಲಿ ಹೇಳದಿರಲಾರೆ. ಇನ್ನೊಬ್ಬರು ಗಾಂಧೀಜಿಯವರು ಮಾಡಿದ ಹರಿಜನ ಸೇವೆಯನ್ನು ಹೃದಯಂಗಮವಾಗಿ ವರ್ಣಿಸಿ, ಅದರಿಂದ ಸ್ಫೂರ್ತಿ ಪಡೆದು, ತಾವು ಹರಿಜನ ಸೇವೆಗಾಗಿಯೇ ಜೀವನವನ್ನು ಮುಡಿಪಾಗಿಡಲು ಪಣತೊಟ್ಟಿರುವರೇ ಏನೋ ಎಂಬಂತೆ ಭರವಸೆಯನ್ನು ಮಾಡಿಕೊಟ್ಟುದು ಸ್ವತಂತ್ರ ಭಾರತದ ಭಾಗ್ಯವೇ ಸರಿ.

ಒಟ್ಟಿನಲ್ಲಿ ಈ ಎಲ್ಲ ಭಾಷಣಕಾರರು ಒಬ್ಬರ ಕ್ಷೇತ್ರವನ್ನು ಇನ್ನೊಬ್ಬರು ಆಕ್ರಮಿಸದೆ, ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ಗಾಂಧೀಜಿಯವರ ಜೀವನದ ಹತ್ತು ಮುಖಗಳನ್ನು ನಿಚ್ಚಳವಾಗಿ ತೋರಿಸಿಕೊಟ್ಟರು.

"ಆಡು ಮುಟ್ಟದ ಗಿಡವಿಲ್ಲ" ಎಂದು ಹೇಳುವಂತೆ ಗಾಂಧೀಜೀ ಮನಸ್ಸು ಹಾಕದೆ ಇದ್ದ ಜೀವನದ ರಂಗವಿಲ್ಲ. ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ, ಆಧ್ಯಾತ್ಮಿಕ, ಆರ್ಥಿಕ ಮೊದಲಾದ ಎಲ್ಲ ಕ್ಷೇತ್ರಗಳಲ್ಲಿಯು ಅವರು ಆಳವಾಗಿ ಹೊಕ್ಕು ತಮ್ಮದೇ ಆದ ಸ್ವತಂತ್ರ ರೀತಿಯಲ್ಲಿ ಜಗತ್ತಿಗೆ ಹೊಸ ಬೆಳಕನ್ನು ನೀಡಿದ್ದಾರೆ. ಗಾಂಧೀಜೀಗಿಂತ ಹೆಚ್ಚಿನ ರಾಜಕಾರಣಿಗಳಿದ್ದಾರೆ; ಹೆಚ್ಚಿನ ಆಧ್ಯಾತ್ಮಿಕ ಜೀವಿಗಳು ಸಿಗುವರು; ಹೆಚ್ಚಿನ ಅರ್ಥಶಾಸ್ತ್ರಜ್ಞರಿಗೆ ಕೊರತೆ ಇಲ್ಲ; ಹೆಚ್ಚಿನ ಶಿಕ್ಷಣ ತಜ್ಞರು ಎಷ್ಟೋ ಜನ; ಹೆಚ್ಚಿನ ಹರಿಜನ ಸೇವಕರು ಸಿಗಬಹುದು; ಸ್ತ್ರೀಯರ ಏಳ್ಗೆಗೆ ಹೆಣಗಾಡಿದ ಹೆಚ್ಚಿನ ವ್ಯಕ್ತಿಗಳು ಇದ್ದಾರೆ; ಜಾತೀಯ ಐಕ್ಯಕ್ಕಾಗಿ ಪ್ರಯತ್ನಿಸುತ್ತಿರುವವರು ಕೆಲವರು ಇರಬಹುದು ಈ ಎಲ್ಲ ಶಕ್ತಿಗಳನ್ನು ಮಧುರವಾಗಿ ಮೈಗೂಡಿಸಿಕೊಂಡ ಒಂದೇ ವ್ಯಕ್ತಿ ಸಿಗುವುದು ಅಸಾಧ್ಯ. ಆ ಸನ್ಮಾನ ಗಾಂಧೀಜೀಯವರೀಗೆ ಸಲ್ಲತಕ್ಕದ್ದು.

ಗಾಂಧೀಜೀಯವರ ಚಟುವಟಿಕೆಗಳಲ್ಲಿ ವಿರೋಧಾಭಾಸವನ್ನು ಕಂಡ ಕೆಲವು ಜನರು ಅವರನ್ನು ಅನೇಕ ಸಲ ಟೀಕಿಸಿದ್ದುಂಟು. ಆದರೆ ಸೂಕ್ಷ್ಮವಾಗಿ ವಿಚಾರ ಮಾಡಿದರೆ, ಆ ವಿರೋಧಾಭಾಸ ಸುತ್ತಲಿನ ಪರಿಸ್ಥಿತಿಯದೇ ವಿನಃ ಗಾಂಧೀಜಿಯವರ ತತ್ತ್ವಗಳದಲ್ಲವೆಂಬುದು ಗೊತ್ತಾಗದಿರದು. ನಿಜವಾದ ಸತ್ಯಾಗ್ರಹಿಯು ಮೂಲ ತತ್ವಗಳಿಗಾಗಿ ಹೋರಾಡುತ್ತಾನೆ; ವಿವರಗಳಿಗಾಗಿ ಅಲ್ಲ. ಸತ್ಯಾನ್ವೇಷಣೆಯೇ ಅವನ ಧ್ಯೇಯ;

ಅಹಿಂಸೆಯೇ ಅವನ ಮಾರ್ಗ; ಪ್ರೇಮವೇ ಅವನ ಸಾಧನ. ಸತ್ಯ, ಅಹಿಂಸೆ, ಪ್ರೇಮ ಇವುಗಳ ತ್ರಿವೇಣೀ ಸಂಗಮದಲ್ಲಿಯೇ ಸತ್ಯಾಗ್ರಹಿಯ ದೈವೀ ಶಕ್ತಿ ಅಡಗಿದೆ ಎಂದು ಗಾಂಧೀಜೀ ಹೇಳಿದ್ದುಂಟು. ಅನ್ಯಾಯದ ಪ್ರತಿಕಾರ ಮಾಡುವುದರಲ್ಲಿ ಪ್ರಾಣದ ಪರಿವೆ ಒಲ್ಲದೆ ಅತುಲ ಧೈರ್ಯದಿಂದ ಹೋರಾಡುವ ಗುಣ ಅವರದು. ಅವರ ಮಾತು ವಿಚಾರದ ಪ್ರತೀಕ; ಕೃತಿ ಮಾತಿನ ಪ್ರತಿಬಿಂಬ. ವಿಚಾರ, ಮಾತು, ಕೃತಿ ಇವುಗಳ ಸುಂದರ ಸಮನ್ವಯದಲ್ಲಿ ಅವರಿಗೆ ಸರಿ ಅವರೇ. ಪ್ರತಿನಿತ್ಯ ವಿಕಾಸ ಹೊಂದುತ್ತಿದ್ದ ಆತ್ಮ ಗಾಂಧೀಜೀಯವರದು. ಇಂದಿನಕಿಂತ ನಾಳೆ ಅವರ ಆತ್ಮದ ಬೆಳಕು ಹೆಚ್ಚೆಚ್ಚು ಪ್ರಜ್ವಲಿತವಾಗುತ್ತಿತ್ತು. ಈ ವಿಕಾಸಕ್ಕೆ ಅವರಿಗೆ ಮೂರು ಸಾಧನಗಳಿದ್ದವು—ಆತ್ಮ ನಿರೀಕ್ಷಣೆ, ಮೌನ, ಕರ್ಮಯೋಗ. ಇತ್ಮ ನಿರೀಕ್ಷಣೆಯಿಂದ ತಮ್ಮ ಅರಿವನ್ನು ತಾವು ಮಾಡಿಕೊಂಡು ತಮ್ಮ ತಪ್ಪನ್ನೊಪ್ಪಿಕೊಳ್ಳುವುದರಲ್ಲಿ ಅವರಿಗಿಂತ ಮುಂದುವರಿದವರು ಇನ್ನೊಬ್ಬರಿಲ್ಲ. ಮೌನದಿಂದ ತಮ್ಮ ಅಂತಃಶಕ್ತಿಯನ್ನು ಅವರು ಬೆಳಿಸಿಕೊಳ್ಳುತ್ತಿದ್ದರು. ಕರ್ಮಯೋಗದಿಂದ ಆದರ್ಶ ಜೀವಿಗಳಾಗಿದ್ದರು. ಅಂತೆಯೇ ಅವರ ಪ್ರಭಾವ ಅಷ್ಟು ಚಮತ್ಕಾರಿಕವಾಗಿತ್ತು.

ಪ್ರತಿಯೊಂದು ಕೆಲಸದಲ್ಲಿಯು ಸತ್ಯಾನ್ವೇಷಣೆಯಿಂದ ಪರಮಾತ್ಮನ ಸ್ವರೂಪವನ್ನು ಕಾಣುವ ದಾರಿ ಅವರದಾಗಿತ್ತು. ಮುಪ್ಪು, ಬಾಲ್ಯ; ನಾದಾ ಜೀವನ, ಅತ್ಯುನ್ನತ ವಿಚಾರ; ಧರ್ಮ, ರಾಜಕಾರಣ; ಸೇವೆ, ದೈವತ್ವ ಇವುಗಳ ಮಧುರ ಸಮ್ಮಿಲನದ ಸಂಜೀವನಿಯಾಗಿದ್ದರವರು. ಸಣ್ಣ ಮಾತುಗಳು ಕೂಡ ಅವರ ಜೀವನದಲ್ಲಿ ವಿಶೇಷ ಮಹತ್ವವನ್ನು ತಾಳುತ್ತಿದ್ದವು. ದ. ಆಫ್ರಿಕೆಯಲ್ಲಿದ್ದ ಹಿಂದೀಯರು ಏನೂ ಗಮನ ಕೊಡದೆ ಪ್ರತಿನಿತ್ಯ ಸಹಿಸುತ್ತಿದ್ದ ಅಪಮಾನಗಳ ಸಣ್ಣ (ಉಳಿದವರ ದೃಷ್ಟಿಯಲ್ಲಿ-ಸಣ್ಣ) ಅನುಭವವು ಅವರನ್ನು ಸತ್ಯಾಗ್ರಹ ಅಸ್ತ್ರದ ಅದ್ಭುತ ಶೋಧಕ್ಕೆ ಎಳೆಯಿತು; ಅವರ ಜೀವನವನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಯೋಗ ಶಾಲೆಯನ್ನಾಗಿ ಮಾರ್ಪಡಿಸಿತು. ಅಂದಿನಿಂದ ಸತ್ಯ ಶೋಧನೆಯೇ ಅವರ ಗುರಿಯಾಯಿತು.

ವಿರೋಧಿಗಳನ್ನು ಅಹಿಂಸೆಯಿಂದ ಪ್ರೀತಿಯಿಂದ ಎದುರಿಸುವುದರಲ್ಲಿಯೇ ಅವರ ಗೆಲವಿನ ಮೂಲವಿದೆ. ಅವರ ಈ ಹೊಸ ದಾರಿ ಅವರ ಎದುರಾಳಿಗಳನ್ನಷ್ಟೇ ಏಕೆ, ಇಡಿಯ ಜಗತ್ತನ್ನೇ ಬೆರಗುಗೊಳಿಸಿದೆ. ಅದೇ ವಿಶ್ವಶಾಂತಿಯ ಗಟ್ಟಿಮುಟ್ಟಾದ ಅಡಿಗಲ್ಲಾಗಬಲ್ಲದೆ. ಹೊರತು ಇನ್ನಾವ ಮಾರ್ಗದಿಂದಲ್ಲ. ಆ ಮಾರ್ಗವನ್ನು ಅನುಸರಿಸುವವರಿಗೆ ಅಪಾರ ತ್ಯಾಗ, ಕಷ್ಟ ಸಹಿಷ್ಣುತೆಗಳು ಬೇಕು. ಇವೆರಡಕ್ಕೂ ಗಾಂಧೀಜೀಯವರೆ ನೆಲೆವನೆಯಾಗಿದ್ದರು. ಅಂತೆ ಅವರು ಅಮರರಾಗಿರುವರು; ಅಸಮ ಕೀರ್ತಿವಂತರಾಗಿರುವರು. ಅವರ ದಾರಿಯಲ್ಲಿ ನಡೆಯುವ ಪ್ರತಿಯೊಂದು ಜೀವಿಯು ಅವರ ಸ್ಮಾರಕವೇ ಸರಿ. ಈ ದಿಸೆಯಲ್ಲಿ ಭಾರತವು ಜಗತ್ತಿಗೆ ಮಾರ್ಗದರ್ಶಕವಾಗಲಿ!

ಜಾಗತಿಕ ಮಹಾ-ವಿಭೂತಿ ಬಾಪೂ.

ಶ್ರೀ. ವೀರೇಶ ಹಿರೇಮಠ. ಬಿ. ಎ. ಬಿ. ಟಿ., ಜಿ. ಬಿ. ಟಿ. ಸಿ. ಧಾರವಾಡ.

ಸೋದರ, ಸೋದರಿಯರೆ,

ವ್ಯಕ್ತಿ, ದೇಶ, ರಾಷ್ಟ್ರಗಳ ಕಲ್ಪನೆಯನ್ನು ಮೆಟ್ಟಿವಿಶ್ವ ಂಧುತ್ವದ ದಿವ್ಯ ಪ್ರೇರಣೆಯಿಂದ ಪ್ರೇರಿತರಾಗಿ ಇಡೀ ಾನವ ಜನಾಂಗದ ಐಕ್ಯತೆ ಹಾಗೂ ಪ್ರಗತಿಯು ದಿವ್ಯ ನಸುಗಳನ್ನು ಕಾಣುತ್ತಿರುವ ಮಹಾ ವ್ಯಕ್ತಿಯೇ ಮಹಾ ರು ಎಂದು ನಾವು ಹೇಳಬಹುದು. ಸ್ವಾಮಿ ವಿವೇಕಾ ಂದರು ಮಹಾತ್ಮರು ಯಾರು ಎಂದು ಹೇಳಿದಾಗ ಈ ೀತಿಯಾಗಿ ಹೇಳಿದ್ದಾರೆ "ಬಡವರ ಮತ್ತು ಪತಿತರ ಷ್ಟ ದೂ ರ ಮಾ ಡ ಲು ರ ಕ್ತ ಸು ರಿ ಸು ವಾ ತ ನೇ ಾ ಹಾ ತ್ಮಾ" ಬಾ ಪೂ ಜಿ ಯ ವ ರು ಕೇ ವ ಲ ಗದ್ವಂದ್ಯ ಮಹಾತ್ಮರಷ್ಟೇ ಅಲ್ಲ. ಯುಗ, ಪ್ರವರ್ತಕ ಷ್ಟೇ ಅಲ್ಲ. ಇಲ್ಲವೆ ಕೇವಲ ಭಗವಾನ್ ಶ್ರೀ ಕೃಷ್ಣನ ವತಾರವಲ್ಲ, ಬರೀ ಕ್ರೈಸ್ತನ ಪ್ರತಿಬಿಂಬವಲ್ಲ. ಅವರು ಡೀ ವಿಶ್ವದ ಬಾಪೂ. ಗುಜರಾಥಿಯಲ್ಲಿ 'ಬಾಪೂ' ಎಂದರೆ ಂದೆ ಎಂದರ್ಥ. ಗಾಂಧೀಜಿಯವರ ಬಳಗದವರು, ಸೇವಾ ್ರಮಷ ಆಶ್ರಮ ನಿವಾಸಿಗಳು, ಗಾಂಧೀ ಸೇವಾ-ಸಂಘದ ರು ಜವಾಹರಲಾಲರಂತಹ ಮಹಾವ್ಯಕ್ತಿಗಳು ಏಕಕಂಠ ಂದ, ಪ್ರೇಮದಿಂದ ತುಂಬಿದ ಹೃದಯದಿಂದ ಅವರನ್ನು ಾಪೂ ಎಂದು ಸಂಬೋಧಿಸಿದರು. ಗಾಂಧೀಜಿಯವರು ತ್ಯ, ಅಹಿಂಸೆ, ಪ್ರೇಮದ ಮಂತ್ರಗಳನ್ನು ಇಡೀ ಮಾನವ ನಾಂಗಕ್ಕೆ ಉಪದೇಶಿಸುತ್ತ ಜಗತ್ತಿನಲ್ಲಿಯೇ ಕ್ರಾಂತಿಯ ್ಮಂಟು ಮಾಡಿದರು. ಅಂತೆಯೇ ಮಹಾತ್ಮರು ಇಡೀ ಾನವ ಜನಾಂಗದ ಕೇಂದ್ರದಂತಿದ್ದರು. ಜಗತ್ತಿನ ಸುಖ, ಂತಿಗಳಿಗಾಗಿ ಹೋರಾಡಿದ ವಿಶ್ವ-ವಿಭೂತಿಗಳೆಂದರೆ ಮಹಾತ್ಮರೊಬ್ಬರೇ.

ಘನ ಶ್ಯಾಮದಾಸ ಬಿರಲಾ ಅವರು 'ಗಾಂಧೀ' ಅಂದರೆ ಂದು ಯಕ್ಷ, ಒಂದು ಒಗಟು ಎಂದು ಹೇಳಿದಾಗ ಲಾರ್ಡ ಿಲಿಂಗ್ಡನ್‌ರಿಗೆ ಗಾಂಧೀಜಿಯವರು ಒಂದು ಮಹಾ ಸಮಸ್ಯೆ ಾಗಿ ಪರಿಣಮಿಸಿದ್ದರು. ಭಾರತ-ಮಂತ್ರಿಗಳು ಗಾಂಧೀ ಜಿಯವರೊಡನೆ ಒಪ್ಪಂದ ಮಾಡಿಕೊಳ್ಳಿರಿ ಎಂದು ಒತ್ತಿ ಹೇಳಿದಾಗ ವಿಲಿಂಗ್ಡನ್‌ರು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತ ಪಡಿಸಿದರು "ಅವರು ಅತಿ ಚತುರರು. ಅವರ ಮಾತು ಬೆಲ್ಲದಂತಹ ಮಾತು. ಅವರ ವಾಕ್ ಪಾಶದಲ್ಲಿ ನಾನು ಪೂರಾ ಸಿಕ್ಕಿ ಬೀಳುವ ವರೆಗೆ ನಾನು ಆ ರೀತಿ ಸಿಕ್ಕಿ ದ್ದೇನೆ ಎಂಬುದು ಸಹ ಗೊತ್ತಾಗುವದಿಲ್ಲ. ಆದುದರಿಂದ ಅವರಿಗೆ ಭೆಟ್ಟಿಯಾಗದಿರುವದೆ ಉತ್ತಮ ಮಾರ್ಗ. ಅವ ರಿಂದ ದೂರವಿರುವದರಿಂದಲೆ ನಾನು ನಿರ್ಭಯನಾಗಿರಬಲ್ಲೆ' ಅಮೇರಿಕಾ ದೇಶದ ಗುಂಥರ ಎಂಬ ಗ್ರಂಥಕಾರ 'ಮಹಾತ್ಮಾ ಗಾಂಧೀಯವರಲ್ಲಿ ಏಸೂ, ಚಾಣಕ್ಯ, ಹಾಗೂ ಬಾಪೂ ಈ ಮೂವರ ಅದ್ಭುತವಾದ ಮಿಶ್ರಣವಿದೆ. ಮಹಾತ್ಮಾ ಏಕ-ಕಾಲಕ್ಕೆ ಮುತ್ಸದ್ದಿ, ಅವತಾರೀ ಪುರುಷ, ಹಾಗೂ ಅತ್ಯಂತ ಪ್ರತಾಪಿ-ಪ್ರಸಂಗಪಟು, ಎಂದು ಹೇಳಿ ದ್ದಾನೆ,

ಗಾಂಧೀಜಿಯವರನ್ನು ಶಬ್ದಗಳಿಂದ ಬಣ್ಣಿಸುವದು ಅಸಾಧ್ಯ. ಯಾವ ವಿಶೇಷ ಹಾಗೂ ವಿಶಿಷ್ಟ ಗುಣಗಳಿಂದ ಗಾಂಧೀಜಿಯವರು ಮಹಾತ್ಮರು ಎಂದು ಕೇಳಿದರೆ ಎಷ್ಟು ತಿಳಿಸಿ ಹೇಳಿದರೂ, ಕೇಳಿದವರನ್ನು ಸಮಾಧಾನ ಪಡಿಸು ವದು ಸಾಧ್ಯವಿಲ್ಲ. ಅವರ ಜೀವನವೇ ಅಂತಹ ದೊಡ್ಡ ದೈವೀ ಉತ್ಸವ. ಗಾಂಧೀಜಿಯವರು ಸತ್ಯ-ಸಾಧಕರು. ಕಟ್ಟಾ ಬ್ರಹ್ಮಚಾರಿಗಳು. ಭಗವಂತನ ಭಕ್ತ ಶಿರೋಮಣಿ ಗಳು. ಹರಿಜನ ಹಿತ-ಸಾಧಕರು, ಜನತಾ-ಸೇವಕರು. ಹಿಂದೂ-ಮುಸಲ್ಮಾನರ ಐಕ್ಯ-ಸಾಧನೆಯಲ್ಲಿಯೇ ದೈಹಿಕ ಜೀವನ ಮುಕ್ತಾಯಗೊಳಿಸಿದವರು.

ನನ್ನ ಜೀವನ ಅಷ್ಟು ದೊಡ್ಡದಲ್ಲ. ನಾನೊಬ್ಬ ಕಿರಿಯ ವ್ಯಕ್ತಿ, ಎಂದು ಹೇಳುವಾಗ, "ನನ್ನ ಜೀವನವೆಂದರೇನು? ಅದೊಂದು ಸತ್ಯದ ಪ್ರಯೋಗ-ಶಾಲೆ. ನನ್ನ ಇಡೀ ಜೀವನ ದಲ್ಲಿ ನಾನೊಂದೇ ಒಂದು ಗುರಿಯನ್ನಿಟ್ಟು ಯತ್ನಪಡು ತ್ತಿರುವೆ. ಮೋಕ್ಷ-ಪ್ರಾಪ್ತಿ-ಪರಮಾತ್ಮನ ಸಾಕ್ಷಾತ್ಕಾರ ಇದೇ ಆ ಗುರಿ. ಕೂತಿರಲಿ, ನಿಂತಿರಲಿ, ಎಚ್ಚರಿರಲಿ, ಮಲ ಗಿರಲಿ, ಉಣ್ಣಲಿ, ಉಪವಾಸವಿರಲಿ ನನ್ನೆದುರು ಒಂದೇ ಒಂದು ಗುರಿ. ನನ್ನ ಬರಹ, ಭಾಷಣ, ರಾಜಕೀಯ ಚಟು ವಟಿಕೆ ಮುಂತಾದವುಗಳೆಲ್ಲ ಒಂದು ಗುರಿಯತ್ತ ಕಣ್ಣಿಟ್ಟು ಸಾಗಿರುವವು. ನಾನು ಹೇಳುವದಿಲ್ಲ. ನಾನು ಮಾಡಿದು ದೆಲ್ಲ ನಿರ್ದೋಷವೆಂದು ಸಾರುವದಿಲ್ಲ. ಆದರೆ ಒಂದು ಮಾತನ್ನು ನಾನು ಎದೆ-ತಟ್ಟಿ ಹೇಳಬಲ್ಲೆ. ಅದೇನಂದರೆ, ಸರಿ ಎಂದು ತೋರಿದುದನ್ನೆ ಆಯಾ ಕಾಲಕ್ಕೆ ನಾನು ಮಾಡಿ ದೆನು. ಆಯಾ ಕಾಲಕ್ಕೆ ನನಗೆ 'ಧರ್ಮ' ಎಂದು ಪ್ರತೀತ

ವಾದುದನ್ನೆ ನಾನು ಪಾಲಿಸಿದೆನು. ಆದರಿಂದ ನಾನೆಂದೂ ಚ್ಯುತನಾಗಲಿಲ್ಲ. ಸೇವೆಯೇ ಪರಮ ಧರ್ಮ. ಸೇವೆಯಲ್ಲಿಯೇ ಪರಮಾತ್ಮ ಸಾಕ್ಷಾತ್ಕಾರ"ಎಂದು ಹೇಳಿದರು.

ಬಾಪೂಜಿಯವರು ಭರತ ವರ್ಷದ ಬಗ್ಗೆ ಅನೇಕ ದಿವ್ಯ ಕನಸುಗಳನ್ನು ಕಂಡರು. ಅವುಗಳಲ್ಲಿ ಎಷ್ಟೋ ಕನಸು ನನಸಾದವು. ಹಿಂದುಸ್ತಾನದ ಬಗ್ಗೆ ಅವರ ಕನಸುಗಳನ್ನು ಅವರ ಮಾತುಗಳಲ್ಲಿ ಹೇಳುವದೇ ಉಚಿತ.

"ಭರತ ಖಂಡದಲ್ಲಿ ಬಡ-ಬಗ್ಗರು ಇದು ನಮ್ಮದೇ ನಾಡು ಎಂಬ ಭಾವನೆಯಿಂದ ದುಡಿದು ಅದರ ಹಿರಿಮೆಗಾಗಿ ಕಾರಣೀಭೂತರಾಗುವಂತಹ ಹಿಂದುಸ್ತಾನದಲ್ಲಿ ನಾನು ಕಾರ್ಯ-ನಿರತವಾಗುವೆ.

"ನನ್ನ ಕನಸಿನ ಭರತ ಖಂಡದಲ್ಲಿ ಅಸ್ಪೃಶ್ಯತೆಯ ಕಲಂಕ ಇಲ್ಲವೆ ಮಾದಕ ಪೇಯ, ಇಲ್ಲವೆ ದ್ರವ್ಯಗಳಿಗೆ ಎಳ್ಳಷ್ಟೂ ಆಸ್ಪದವಿಲ್ಲ. ಪುರುಷರಂತೆ ಸ್ತ್ರೀಯರಿಗೂ ಸಮಾಜದಲ್ಲಿ ಸ್ಥಾನ-ಮಾನವಿದೆ, ಶಾಂತಿಯೇ ನಮ್ಮ ಜೀವನದ ಪರಮ ಧ್ಯೇಯವಾದುದರಿಂದ, ವಿಶ್ವಪ್ರೇಮಿಗಳಾಗಿರುವದರಿಂದ, ಯಾವ ರಾಷ್ಟ್ರದ ವಿಷಯದಲ್ಲಿ ದಾಳಿ-ದಂಗೆಗಳ ಭಯವಿಲ್ಲ. ತನ್ಮೂಲಕ ನಮಗೆ ಸೈನ್ಯ ಬಲವು ನಮಗೆ ವಿಶೇಷವಾಗಿ ಬೇಕಾಗಿಲ್ಲ."

ಜವಾಹರಲಾಲ ನೆಹರೂ ಅವರು ಮಹಾತ್ಮರ ದುರ್ಮರಣದ ವಾರ್ತೆಯನ್ನು ಕೇಳಿ ಸ್ಮೃತಿಹೀನರಾದರು. ಕಣ್ಣೀರಿನ ಕೋಡಿ ಹರಿಯಿತು. ದುಃಖದ ಉದ್ವೇಗದಲ್ಲಿ ಬಾಯಿಂದ ಶಬ್ದಗಳೇ ಹೊರಡಲಿಲ್ಲ. ಕಂಠ ಬಿಗಿದು ಬಂದಿತು. ನೇತ್ರಗಳು ಅಶ್ರು-ಬಿಂದುಗಳಿಂದ ತುಂಬಿ ದೃಷ್ಟಿ ಮಂದವಾಯಿತು. ಕಷ್ಟ ಪಟ್ಟು ಮಹಾತ್ಮರ ಮರಣವಾದ ಕೆಲ ಹೊತ್ತಿನ ನಂತರ ಈ ರೀತಿ ಹೇಳಿದರು-

"ನಮ್ಮ ನಂದಾದೀಪವು ಆರಿಹೋಯಿತು. ವಿಶ್ವದ ತಂದೆಯಂತಿದ್ದ ಬಾಪೂ ಇಂದು ಕಣ್ಮರೆಯಾದರು. ನಾವು ಆಪ್ತಾಲೋಚನೆಗೆಂದು ಮೇಲಿಂದಮೇಲೆ ಹೋಗುತ್ತಿದ್ದೆವು. ಇನ್ನು ಮೇಲೆ ಎಲ್ಲಿಯ ಆಪ್ತಾಲೋಚನೆ, ಇನ್ನೆಲ್ಲಿಯ ಉಪದೇಶ?"

ಸ್ತ್ರೀಯರಲ್ಲಿ ಕೀರ್ತಿ ಗಗನಕೇರಿದ ಶ್ರೀಮತಿ ಸರೋಜಿನಿ ನಾಯಡು ಅವರು ಮಹಾತ್ಮರ ಮರಣವಾದಕೂಡಲೆ "ಗಾಂಧೀಜಿಯವರು ಜಾಗತಿಕ ಮಹಾ-ಪುರುಷರೆಂದು ಬೇರೆ ಬೇರೆ ಭಾಷೆಗಳ ಮುಖಾಂತರ ವಿಶ್ವವು ವ್ಯಕ್ತ ಪಡಿಸಿದೆ. ಅಲ್ಲದೆ ಒಳ್ಳೇ ಜನರು ಹಾಗು ಸುಸಂಸ್ಕೃತರು ಎನ್ನಿಸಿಕೊಳ್ಳುವವರು ಗಾಂಧೀಜಿಯವರನ್ನು ಪ್ರೀತಿಸುವದಲ್ಲದೆ ದೇವರೆಂದು ಪೂಜಿಸಿದರು."

ಮಹಾತ್ಮಾಜಿಯ ಕೊಲೆಯು ಸಾಕ್ರೆಟಿಸನಂತೆ ಆಯಿತು. ಕ್ರೈಸ್ತನಂತೆ ಕೊನೆಗೊಂಡಿತು. ಅಬ್ರಾಹಮ ಲಿಂಕನ್‌ನ ಕೊಲೆಯು ಈ ರೀತಿಯಾಗಿಯೇ ಆಯಿತು. ಗಾಂಧೀಜಿಗೆ ಮರಣದ ಕಾಲಕ್ಕೆ ಕೊಂಚ ಶಕ್ತಿ ಇದ್ದರೆ ಅತನೂ ಕ್ರೈಸ್ತನಂತೆ "ದೇವಾ ನನ್ನ ಕೊಲೆ ಮಾಡಿದ ಈ ಮಹಾ-ಪುರುಷನನ್ನು ಕ್ಷಮಿಸು" ಎಂದೆನ್ನಬಹುದಾಗಿತ್ತು.

ಒಟ್ಟಾರೆ ಮಹಾತ್ಮಾಜಿಯು ಅಬ್ರಾಹಮ್ ಲಿಂಕನ್ ಕ್ರೈಸ್ತ, ಕೃಷ್ಣ, ಬಸವಣ್ಣ, ಮಹಮ್ಮದ ಪೈಗಂಬರ, ಅಶೋಕ, ಸಾಕ್ರೆಟಿಸ್-ಮೊದಲಾದ ಮಹಾ-ವ್ಯಕ್ತಿಗಳ ಸಾರ-ಸಂಗ್ರಹ-ಸುಂದರ ಸಮ್ಮಿಲನ ಸ್ವಾಭಾವಿಕ ಸಂಗಮ.



ಮಹಾತ್ಮಾ ಗಾಂಧೀಜಿಯವರು ವ್ಯಾವಹಾರಿಕ ವೇದಾಂತಿಗಳು.

ಲೇಖಕರು:—ಶ್ರೀ. ರಾ. ವೆಂ. ಗಿರಿರೆಡ್ಡಿ, ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ ಧಾರವಾಡ.

ಪೂಜ್ಯ ಬಾಪೂಜಿ

ಹೊಸ ಯುಗಪುರುಷರು:— ಮಹಾತ್ಮಾ ಗಾಂಧೀಜಿಯವರು ಬದುಕಿ ಇದ್ದದ್ದು ೭೯ ವರುಷ ಮಾತ್ರ. ಭಾರತದ ಈ ಯುಗದ ಇತಿಹಾಸಿನಲ್ಲಿ ಈ ೭೯ ವರುಷಗಳಿಗೆ ಇದ್ದ ಮಹತ್ವವು ಇನ್ನಾವ ಕಾಲಕ್ಕೂ ಇರಲಿಲ್ಲ. ಇವರ ಬಗೆ ಯಾರು ಎಷ್ಟೇ ಮಾತನಾಡಲಿ ಅದು ಮಹಾಸಾಗರದೊಳ್ಗಿನ ಒಂದು ಹನಿ ನೀರಿನಷ್ಟು ಮಾತ್ರ. ಜಗತ್ತಿನಲ್ಲಿ ಅನೇಕ ಮಹಾತ್ಮರು ಜನ್ಮವೆತ್ತಿ ಹೋಗಿದ್ದಾರೆ. ಆದರೆ ಅವರು ತಮ್ಮ ಪ್ರಚಂಡವಾದ ತೇಜವನ್ನು ಒಂದು ಭೂಖಂಡಕ್ಕೆ ಮಾತ್ರ ಬೀರಿ ಹೋಗಿರುವರು. ಅವರೆಲ್ಲರಿಗಿಂತ ನಮ್ಮ ಬಾಪೂಜಿಯವರು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಸಮಸ್ತ ಜಗತ್ತಿಗೇ ತಮ್ಮ ದಿವ್ಯಜ್ಞಾನ ತೇಜವನ್ನು ಬಿತ್ತರಿಸಿದ್ದಾರೆ.

ಸತ್ಯಶೋಧನೆ, ಬ್ರಹ್ಮಚರ್ಯಪಾಲನೆ, ಗೋಸಂಗೋಪನೆ, ಹರಿಜನೋದ್ಧಾರ, ಭಗವಂತನ ಭಜನೆ, ಖಾದೀ ಆಂದೋಲನ, ಹಿಂದು ಮುಸ್ಲಿಮರ ಐಕ್ಯಕ್ಕೆ ಹೆಣಗಾಟ, ಸ್ವರಾಜ್ಯ ಸಂಪಾದನೆಗೆ ಹೋರಾಟ, ನಿಸರ್ಗದ ಕೂಡ ಪ್ರಯೋಗ ಮುಂತಾದವುಗಳನ್ನು ತಮ್ಮ ಜೀವನಕ್ಕೆ ಆದರ್ಶ ಗುರಿಯನ್ನಾಗಿ ಇಟ್ಟುಕೊಂಡಿದ್ದರು. ಇವುಗಳಿಂದ ಹೊಸ ಮನ್ವಂತರವನ್ನು ಪ್ರದರ್ಶಿಸಿದವರು ಇವರು. ಇಂತಹ ಕರ್ಮ ಸಾಧನೆಯಲ್ಲಿ ತೊಡಗಿದ್ದುದು ಆಡಂಬರಕ್ಕಲ್ಲ, ಮೋಕ್ಷ ಪ್ರಾಪ್ತಿಗಾಗಿ, ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ.

ನತ್ವಹಂ ಕಾಮಯೇ ರಾಜ್ಯಂ । ನಸ್ವರ್ಗಂ ನಾಪುನರ್ಭವಮ್ । ಕಾಮಯೇ ದುಃಖಪ್ರಾಪ್ತಾನಾಂ । ಪ್ರಾಣಿನಾಮಾರ್ತಿನಾಶನಮ್ । ದುಃಖದಿಂದ ಕೂಡಿದ ಜೀವಿಗಳ ಸಂತಾಪ ನಿವಾರಣೆಯಲ್ಲಿ ನನಗೆ ರಾಜ್ಯಬೇಡ, ಸ್ವರ್ಗಬೇಡ, ಮೋಕ್ಷಬೇಡ ಎಂಬುದು ಅವರ ಧ್ಯೇಯವಾಗಿತ್ತು, "ಜನತೆಯ ಸೇವೆಯೇ ಜನಾರ್ದನನ ಸೇವೆ" "ದೇಶಸೇವೆಯೇ ಈಶ-ಸೇವೆ"ಎಂಬ ಅವರ ವಾಣಿಯು ಕರ್ಮಕಾಂಡದ ಒಂದು ಮಹತ್ತರವಾದ ಆಖ್ಯಾಯವನ್ನು ಮತ್ತು ಶ್ರೀ ಕೃಷ್ಣನು ಹೇಳಿದ ಕರ್ಮಮಾರ್ಗವನ್ನು ಕಲಿಯುಗದಲ್ಲಿ ಕೃತಿಗಿಳಿಸಿರುವದು.

ವ್ಯಾವಹಾರಿಕ ವೇದಾಂತಿಗಳು:— ಇವರ ವೇದಾಂತವು ಕೇವಲ ವ್ಯಾವಹಾರಿಕವಾದುದು, ಬರೆ ಕಲ್ಪನಾ ಸಾಮ್ರಾಜ್ಯದಲ್ಲಿ ಗಾಳಿಗೋಪುರವನ್ನು ಕಟ್ಟುವಂತಹದಲ್ಲ. ಧಾರ್ಮಿಕ, ಸಾಮಾಜಿಕ, ನೈತಿಕ, ರಾಜಕೀಯ, ಆರ್ಥಿಕ, ಭೌತಿಕ, ಮುಂತಾದವುಗಳಲ್ಲಿ ಏಕ-ಛತ್ರಾಧಿಪತಿಗಳಾಗಿ ಯೋಗಿಯಂತೆ ಬಾಳಿದವರು.ಈ ಅಧಿಕಾರವನ್ನು ಯಾರೂ ಇವರಿಗೆ ಕೊಟ್ಟಿದ್ದಿಲ್ಲ, ಕೊಟ್ಟರೂ ಅದನ್ನು ತಕ್ಕೊಂಡಿದ್ದಿಲ್ಲ.

ನಿಜವಾಗಿ ನೋಡಿದರೆ ಇವರದು ರಾಜನೀತಿಜ್ಞೆತೆಗೆ ಗೌಣಸ್ಥಾನ, ಧರ್ಮನೀತಿಜ್ಞೆತೆಗೆ ಗಣ್ಯಸ್ಥಾನ. ಸಾಮಾನ್ಯ ಜನರಂತೆ ಗೃಹಸ್ಥಾಶ್ರಮಿಗಳಾಗಿದ್ದರೂ ಕೆಸರಿನಲ್ಲಿ ಹುಟ್ಟಿದ

ಕಮಲದಂತೆ ಅವರ ಗುಣಭಾವನೆಗಳು ನಿರ್ಮಲ. ಇವರು ತ್ಯಾಗಿಗಳ ತ್ಯಾಗಿ, ಯೋಗಿಗಳ ಯೋಗಿ, ಸಾಧುಗಳಿಗೆ ಪರಮ ಸಾಧುಗಳು. ಚರಕವೇ ಇವರ ತಂಬೂರಿ, ಹಂಜಿಯ ಬುಟ್ಟಿಯೇ ಇವರ ಕೈಯೊಳಗಿನ ಕಮಂಡಲ, ಖಾದಿಯೇ ಕೌಪೀನ, ಅಖಂಡ ಸೂತ್ರಕರ್ಮವೇ ಇವರ ಯಜ್ಞಶಾಲೆ, ಶಾಂತಿ, ಸತ್ಯ, ಅಹಿಂಸೆ, ನೀತಿ, ಧರ್ಮ, ದಯಾ-ದಾಕ್ಷಿಣ್ಯ, ಸಹಕಾರ, ಸಹಾನುಭೂತಿ, ಅಸ್ತೇಯ, ಅಪರಿಗ್ರಹ, ಅಸ್ವಾದ, ಅಭಯ, ಶುಚಿ, ಸ್ವದೇಶಿ, ಸ್ವರಾಜ್ಯ ಮುಂತಾದವುಗಳೇ ಇವರ ಜಪ-ತಪ, ಹೋಮ-ಹವನಗಳು, ನೋಡಿರಿ. ಇವರು ನಿಜವಾದ ಸನ್ಯಾಸಿಗಳಲ್ಲದೆ ಮತ್ತಿನ್ನಾರು? ಅತಃ ರಾಜಕಾರಣದಲ್ಲಿ, ಸಮಾಜಕಾರಣದಲ್ಲಿ ಧರ್ಮಮಾರ್ಗದಿಂದ ಕರ್ಮಯೋಗದ ತಪಸ್ವಿಗಳಾಗಿದ್ದರು.

ಸತ್ಯನಿಷ್ಠೆ:— ಚಿಕ್ಕಂದಿನಲ್ಲಿ ಸತ್ಯವಂತನಾದ ಹರಿಶ್ಚಂದ್ರನ ನಾಟಕವನ್ನು ನೋಡಿದಾಗಿನಿಂದ ಇವರಲ್ಲಿ ಸತ್ಯದ ಅಂಕುರವು ಬೆಳೆದು ಅದೊಂದು ಜಗತ್ತಿಗೇನೇ ಸವಿ ಫಲಗಳನ್ನು ಕೊಡತಕ್ಕಂಥ ವೃಕ್ಷವಾಯಿತು. ಕೈಕೊಂಡ ವ್ರತ, ಮಾಡಿದ ಪ್ರತಿಜ್ಞೆ, ಇವುಗಳನ್ನು ಪ್ರಾಣಹೋದರೂ ಚಿಂತೆಯಿಲ್ಲ, ಪಾಲಿಸುವದನ್ನು ಮಾತ್ರ ಬಿಡಲಿಕ್ಕಿಲ್ಲ ವೆಂಬ ಹಠಯೋಗಿಗಳು. ಇದಕ್ಕಾಗಿಯೇ ತಮ್ಮ ಆಯುಷ್ಯದಲ್ಲಿ ಎಷ್ಟೋಸಲ ಉಪವಾಸಗಳನ್ನು ಮಾಡಿದ್ದುಂಟು. ಅನೀತಿ ಎಂಬುದು ಕಂಡದ್ದಾದರೆ ಎರಡನೇಯವರು ಹೇಳುವದಕ್ಕಿಂತ ಮೊದಲೇ ಅದನ್ನು ಬಿಟ್ಟುಬಿಡತಕ್ಕವರು. ದೇವರನ್ನು ಕಾಣದೆ ನಾವು ಕಂಡಿದ್ದೇವೆ ಎಂದು ಜಂಭವನ್ನು ಕೊಚ್ಚಿಕೊಳ್ಳುವ ಡಾಂಭಿಕ ವೃತ್ತಿಯು ಇವರದಲ್ಲ. ಯಾರಾದರೂ ನೀವು ದೇವರನ್ನು ನೋಡಿದ್ದೀರಾ ಎಂದು ಕೇಳಿದರೆ 'ಇಲ್ಲ. ಇನ್ನೂ ದೇವರು ಪ್ರತ್ಯಕ್ಷವಾಗಿಲ್ಲ. ಹುಡುಕುತಲಿದ್ದೇನೆ. ಅವನನ್ನು ಹುಡುಕುವ ಕಾರ್ಯದಲ್ಲಿ ನಾವು ಬಂದರೂ ಆ ಕೆಲಸವನ್ನು ಬಿಡಲಾರೆ' ಎನ್ನುತ್ತಿದ್ದರು.

ಅಸತ್ಯಕ್ಕೆ ಬಲಿಬಿದ್ದೇನೆಂದು ಪ್ರತಿಯೊಂದು ಶಬ್ದಗಳನ್ನು ತೂಗಿ ನೋಡಿ ಮಾತಾಡುತ್ತಿದ್ದರು. ಪರಮಾತ್ಮನ ಅನುಗ್ರಹದಿಂದ ದೂಷಣಗಳೆಲ್ಲ ಭೂಷಣಗಳಾಗುತ್ತವೆಂದು ನಂಬಿದ್ದರು. ನಂಜುಂಡನು ನಂಜನುಂಡು ಅಖಂಡವಾದ ಸುಖವನ್ನು ಪಡೆದು ಕೊರಳನ್ನು ಕಪ್ಪುಮಾಡಿಕೊಂಡನು. ಆದರೆ ಆ ಕಪ್ಪು-ಕೊರಳು ಅವನಿಗೆಷ್ಟು ಚಂದ! ಇದರಂತೆ ನಿಂದಕರಿಂದ ಸತ್ಯುಳ್ಳವರ ಅಂದತನವು ಮತ್ತಿಷ್ಟು ಚಂದವಾಗುವುದೇ ಹೊರತು ಅಂದಗೆಡುವದಿಲ್ಲೆಂಬುದನ್ನು ಚನ್ನಾಗಿ ತಿಳಿದಿದ್ದರು.

ಇಂಗ್ಲಂಡಕ್ಕೆ ವಿದ್ಯಾಭ್ಯಾಸಕ್ಕಾಗಿ ಹೋಗುವ ಕಾಲಕ್ಕೆ ಅಲ್ಲಿ ಅಭೋಜ್ಯವಸ್ತುಗಳ ಭೋಜನವನ್ನು ವರ್ಜಿಸುವೆನು. ಧರ್ಮದ ಮರ್ಮವನ್ನು ಅರಿಯದ ಕುಕರ್ಮಿಗಳ ದೇಶದಲ್ಲಿ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಕರ್ಮವೀರನಾಗಿ ಭೂಮಿಗೆ ಮರಳಿಬರುವೆನೆಂದು ತಾಯಿಗೆ ಕೊಟ್ಟ ವಚನವನ್ನು ಅಕ್ಷರಶಃ ಪಾಲಿಸಿದರು. ಒಟ್ಟಿಗೆ ಗಾಂಧೀಜಿಯವರ ಜೀವನವೆಂದರೆ ಅದೊಂದು ಸತ್ಯದ ಪ್ರಯೋಗಶಾಲೆ.

ಎಲ್ಲವೂ ಹರಿಚಿತ್ತ:— ಅವರು ಯಾವ ಕೆಲಸವನ್ನು ಮಾಡಿದರೂ ಅದು ಪರಮಾತ್ಮನನ್ನು ಕುರಿತೇ ಇರುವದೆಂದು ಗಾಂಧೀಜಿಯವರು ಮೇಲಿಂದ ಮೇಲೆ ಹೇಳುತ್ತಿದ್ದರು. ಪರಮಾತ್ಮನ ರೂಪ ಅನೇಕ, ನಿತ್ಯ-ಸನಾತನ ಎಂದೂ ಬದಲಾವಣೆಯಾಗದಂತಹ ಸತ್ಯವು ಯಾವುದೋ ಅದೇ ಪರಮಾತ್ಮನ ರೂಪ ಎಂದೂ ಗಾಂಧೀಜಿಯವರ ಒಂದು ವಚನ. "ಅಂಧೇರಿ ದುನಿಯಾ ಭಜನ ಬಿನಾ ಕೈಸೆ ತರಿಯೋರೆ" ಎಂಬ ಕಬೀರನ ಗೀತದಂತೆ ಭಜನೆಯೇ ಅಂಧಕಾರಮಯವಾದ ಪ್ರಪಂಚವನ್ನು ದಾಟುವ ದಾರಿ ಎಂದು ನಂಬಿದ್ದರು. "ವೈಷ್ಣವ ಜನತೋ ತೇಣೆ ಕಹಿಯೇ" ಇದು ಅವರ ಪ್ರೀತಿಯ ಭಕ್ತಿಗೀತ. ಸರ್ವಧರ್ಮಗಳ ಸಮನ್ವಿತವಾದ ರಾಮನಾಮ ಭಜನೆಯು ಇವರ ಸೊತ್ತು. ಇವರಿಗೆ ಯಾರಾದರೂ "ನಿಮ್ಮ ಕೆಲಸವು ಬಹಳ ಉತ್ತಮವಾಯಿತು" "ನಿಮ್ಮ ಭಾಷಣವು ಒಳ್ಳೆ ಹಸನಾಯಿತು" ಎಂದು ಅಂದರೆ ಅದಕ್ಕೆ ಪ್ರತಿಉತ್ತರ ಗಾಂಧೀಯವರದು ಹೀಗೆ 'ಎಲ್ಲವೂ ದೇವರ ಅನುಗ್ರಹ. ನೂಲುವಾಗ, ಉಣ್ಣುವಾಗ, ಉಡುವಾಗ, ತಿರುಗಾಡುವಾಗ, ಮಾತನಾಡುವಾಗ, ಆಕಳಿಸುವಾಗ ಯಾವಾಗ ಬೇಕಾದಾಗಲಾದರೂ ಸಹ ದೇವರ ಪ್ರಾರ್ಥನೆಮಾಡುತ್ತ ಕಾಯಕಮಾಡುವುದು ನನ್ನ ರೀತಿ.

ನಿಜರೂಪ:— ಮಹಾತ್ಮಾಜಿಯವರ ನಿಜರೂಪವನ್ನು ಕಾಣಬೇಕಾದರೆ, ಅವರ ಬಾಪೂ ಎಂಬ ರೂಪದಲ್ಲಿ ಕಾಣಬಲ್ಲೆವು. ಆಶ್ರಮದಲ್ಲಿ ಎಲ್ಲೆಲ್ಲಿ ನೋಡಿದಲ್ಲಿ ಇವರಿಗೆ "ಬಾಪೂಜಿ" ಎಂಬ ಹೆಸರಿನಿಂದಲೇ ಕರೆ. ಇವರ ಆಶ್ರಮವು ಸೇವಾಗ್ರಾಮದಲ್ಲಿ, ಅಲ್ಲಿ ರಾಜರ, ಮಹಾರಾಜರ ಕೂಡ ಸಂಭಾಷಣೆ, ಪತ್ರವ್ಯವಹಾರ, ವರ್ಕಿಂಗ ಕಮೀಟಿಯ ಅಧಿ-

ವೇಶನಗಳು, ರಾಜಕಾರಣ ಪಟುಗಳ ಸಮ್ಮೇಲನಗಳು ನಡೆಯುವವು. ವಾಣಿಜ್ಯ, ಅರ್ಥಶಾಸ್ತ್ರ ವಿಶಾರದರು, ಸೇವಾ ತತ್ಪರರು, ಜಗತ್ತಿನೊಳಗಿನ ಶ್ರೇಷ್ಠ ಕನಿಷ್ಠ ಎಲ್ಲತರದ ವ್ಯಕ್ತಿಗಳು, ವ್ಯಕ್ತಿ ಸಮುದಾಯಗಳೂ ಅಲ್ಲಿ ಉಂಟು. ಬೌದ್ಧಿಕ, ಶಾರೀರಿಕ, ಆರ್ಥಿಕ, ಪಾರಮಾರ್ಥಿಕ ವಿಷಯ ಗಳ ಚರ್ಚೆಗಳೂ ಅಲ್ಲಿ ನಡೆಯುವವು. ಆದರೇನು? ಧರ್ಮ ಭೇದವಿಲ್ಲ-ಕರ್ಮಭೇದವಿಲ್ಲ, ಜಾತಿಭೇದವಿಲ್ಲ, ಸಂತಿಭೇದವಿಲ್ಲ, ಪ್ರಾಂತಭೇದವಿಲ್ಲ, ಯಾವ ತರಹದ ಭೇದಗಳೂ ಅಲ್ಲಿಲ್ಲ. ಊಟ ಕೇವಲ ಮಹರ್ಷಿಗಳದು. ಸುಳಿ, ಕಾರ, ಉಪ್ಪು, ತುಪ್ಪ ಇವಾವೂ ಊಟದಲ್ಲಿಲ್ಲ. ಇದೆಲ್ಲ ಏತಕ್ಕಾಗಿ? ಇಂದ್ರಿಯ ನಿಗ್ರಹಕ್ಕಾಗಿ, ಬ್ರಹ್ಮಚರ್ಯ ಪಾಲಿಸುವದಕ್ಕಾಗಿ, ಪಾರಮಾರ್ಥಿಕವನ್ನು ಸಾಧಿಸಿಕೊಳ್ಳುವ ದಕ್ಕಾಗಿ. ಅನೇಕ ಪವಾಡಗಳಿಂದ ಕೂಡಿದ ಇಂಥ ಪುಣ್ಯ ಭೂಮಿಯು ಹಿಂದೆ ಎಂದೂ ಇದ್ದಿರಲಿಕ್ಕಿಲ್ಲ. ಪೃಥ್ವಿಯಲ್ಲಿ ಈಗ ಎಲ್ಲಿಯೂ ಕಾಣಲಿಕ್ಕಿಲ್ಲ. ಅದೊಂದು ಕಲಿಯುಗದ ಭಾರತ ಮಹರ್ಷಿಯ ತಪೋಭೂಮಿ. ಆ ತಪೋಭೂಮಿ ಯ ಮಹರ್ಷಿ ಕರ್ಮಯೋಗಿ ಬಾಪೂ.

ಮುಕ್ತಿಯನ್ನು ಪಡೆದುಕೊಳ್ಳಲಿಕ್ಕೆ ಪ್ರಾಪಂಚಿಕವು ಆತಂಕ ಮಾಡುವದೆಂಬ ಭ್ರಮೆಯನ್ನು ಬಾಪೂ ಸುಳ್ಳು ಮಾಡಿ ತೋರಿಸಿದ್ದಾರೆ. ಇವರ ಕರ್ಮಯೋಗದ ಸಾಧನಗಳು ಹೂವಿನ ಸುವಾಸನೆಯಂತೆ ಹರಡುತ್ತಿರುತ್ತವೆ. ಬಾ= ಬಾಡದ, ಪೂ= ಹೂವು. "ಬಾಪೂ" ಎಂದರೆ ಎಂದೂ ಬಾಡದ ಹೂವು. ಹರಿಶ್ಚಂದ್ರ, ಧ್ರುವ, ಪ್ರಹ್ಲಾದ ಮುಂತಾದವರಂತೆ ಅಜರಾಮರ ಸ್ಥಾನವನ್ನು ಹೊಂದಿದರು. ಬಾಪೂ. ಇಷ್ಟೆಲ್ಲಕ್ಕೆ ಇವರದು ಪಾರಲೌಕಿಕದ ಕಡೆಗಿದ್ದ ಒಲವೇ ಕಾರಣ. ಭಾರತ ಪುತ್ರರಾದ ಬಾಪೂಜಿಯವರ ತತ್ವಾನುಯಾಯಿಗಳಾದ ನಾವೆಲ್ಲರೂ ಅವರು ಹಾಕಿಕೊಟ್ಟ ಐಹಿಕ, ಪಾರಮಾರ್ಥಿಕ ಮಾರ್ಗವನ್ನು ಅನುಸರಿಸುವದು ಉತ್ತಮ. ಏಕೆಂದರೆ ಅವರು ತೋರಿದ ದಾರಿ ವ್ಯಾವ ಹಾರಿಕ ವೇದಾಂತಿಗಳದು. ಅದರಿಂದಲೇ ಇಹ-ಪರಗಳಲ್ಲಿ ಸುಖ-ಶಾಂತಿ ದೊರಕುವದು.

ಹುಟ್ಟಿಬಾ

(ಶ್ರೀಹರೆ ನಮೋ ದುರಿತಾರೆ.....ಎಂಬ ಧಾಟಿಯಂತೆ)

ಶ್ರೀ ಗಾಂಧೀ ನಮೋ ಗುಣಾಹಾರಾ । ಅಹಿಂಸಾವಾದಿ
ಶಾಂತಿಮೂರ್ತಿಯೇ ॥ಪ॥

ಪೋರ ಪುರಧೀಶ । ರಾಷ್ಟ್ರಪಿತಾಮಹ । ಗೌರವಮೂರ್ತಿ । ಪ್ರಪಂಚದ ಕೀರ್ತಿ ॥೧॥ ಶ್ರೀ. ಗಾಂಧೀ.

ಭಾರತಪುತ್ರ । ಧೀರ ಗಂಭೀರ । ಭಾರತೀಯರ ಭಾಗ್ಯ । ಪರಮ ಪವಿತ್ರ ॥೨॥ ಶ್ರೀ. ಗಾಂಧೀ.

ಹಿಂದುಮಾತೆಯ । ಸುಂದರ ಕುವರಾ । ಮಂಗಲ ಕಸ್ತೂರಿ । ರಮಣಾಭರಣಾ ॥೩॥ ಶ್ರೀ. ಗಾಂಧೀ.

ಹರಿಹರಭಕ್ತನೆ । ಹರಿಜನೋದ್ಧಾರಾ । ಸರಸಕುರಾನವ । ಹರುಷದಿ ಪೂಜಿಪ ॥೪॥ ಶ್ರೀ. ಗಾಂಧೀ.

ದೀರ್ಘಸಾಹಸಿಯೇ । ಮುಗ್ಧಮೂರ್ತಿಯೇ । ನಿಸರ್ಗ ಪ್ರೇಮನೆ । ಸ್ವರ್ಗಪ್ರಿಯನೆ ॥೫॥ ಶ್ರೀ. ಗಾಂಧೀ.

ಭಕ್ತಿಯುತನೆ । ಯುಕ್ತಿದಾತನೆ । ಮುಕ್ತಾಂಗನೆಯ । ರತ್ನಾಹಾರವೆ ॥೬॥ ಶ್ರೀ. ಗಾಂಧೀ.

ಭಾಪುರೆ ಬಾಪುಜಿ । ಮರಣಕಂಜದೆ । ಶರಣಮಾಲೆ ಯೊಳು । ಗಣಿಸಿದ ವಿಭೂತಿಯೆ ॥೭॥ ಶ್ರೀ. ಗಾಂಧೀ.

ಬಾ ಎನ್ನವಿನಯ । ಸಂಪದ ಮೂರ್ತಿಯೇ । ಇಂಪಿನ ಕಂಪಿನ । ಬೋಧವನೀಡಲು ॥೮॥ ಶ್ರೀ. ಗಾಂಧೀ.

ಭಾರತಮಾತೆಯಲಿ । ಪುನರ್ಜನ್ಮವನು । ಕರುಣದಿ ತಾಳಿ । ಪ್ರಿಯಮುಖ ತೋರೋ ॥೯॥ ಶ್ರೀ. ಗಾಂಧೀ.

ಕೆ. ವ್ಹಿ. ಮಳೆಮಠ.
ಗವ್ಹರ್ನಮೆಂಟ ಪ್ರ್ಯಾಕ್ಟೀಸಿಂಗ ಸ್ಕೂಲ್ ಟೀಚರ್,
ಟ್ರೈ. ಕಾ ಫಾರ್ ಮೆನ್, ಧಾರವಾಡ.

ಗಾಂಧೀಜಿ--ಶ್ರೇಷ್ಠ ಪತ್ರಿಕೋದ್ಯಮಿ.

ಶ್ರೀ. ಗು. ಹ. ಸೂಡಿ. ಗಂಡು ಮಕ್ಕಳ ಸರಕಾರಿ ಟ್ರೇ. ಕಾ.
ಧಾರವಾಡ.

ಪೂಜ್ಯ ಮಹಾತ್ಮಾ ಗಾಂಧೀಜಿಯವರ ಪತ್ರಿಕೋದ್ಯಮದ ಬಗ್ಗೆಯಾಗಲಿ, ಸಾಹಿತ್ಯದ ಬಗ್ಗೆಯಾಗಲಿ, ಅವರ ಲೇಖನ, ಗ್ರಂಥಗಳ ಬಗ್ಗೆಯಾಗಲಿ ಅಧಿಕೃತವಾಗಿ ಮಾತನಾಡುವಲ್ಲಿ ನಾನೆಷ್ಟು ಅಸಮರ್ಥನಿರುವೆನೆಂಬುದರ ಅರಿವು ನನಗೆ ಪೂರ್ಣವಾಗಿದ್ದರೂ ಇಲ್ಲಿಯ ತರಬೇತಿ ಸಂಸ್ಥೆಗಳವತಿಯಿಂದ ಜರುಗಿಸಲ್ಪಡುವ ಪರಮ ಪೂಜ್ಯ ಮಹಾತ್ಮಾಜೀಯವರ, (ಅರ್ಥಾತ್ ಚರಖಾ) ಜಯಂತಿಯ ಕಾಲಕ್ಕೆ ಏರ್ಪಡಿಸಲ್ಪಟ್ಟ ಈ ವಿಚಾರ ಸಂಕೀರ್ಣದಲ್ಲಿ ಹೇಗಾದರೂ ಸರಿಯೆ, ಮಾತನಾಡಿಯೇ ತೀರಬೇಕೆಂಬ ಒಂದು ಹಟದ ಮೂಲಕ ನಾನಿಲ್ಲಿ ಮಾತಾಡುತ್ತಿದ್ದೇನೆ. ಅದೆಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಬಹುದೋ, ನಾನು ಹೇಳಲಾರೆ!

ಬಾಲ್ಯದಲ್ಲಿಯೇ ತಮ್ಮ ತಾಯಿಯವರ ಪ್ರಭಾವದಿಂದ ಹಾಗು ಕೆಲವೊಂದು ಕಾರಣ ಸನ್ನಿವೇಶಗಳ ಮೂಲಕ ಗಾಂಧೀಜಿಯವರಲ್ಲಿ ನೆಲಸಿದ ಸತ್ಯವು ಅವರ ಪ್ರೌಢಾವಸ್ಥೆಯಲ್ಲಿ ಪರಿಪಕ್ವಗೊಂಡಿತು. ಆಗ ತಾವು ಕೈಕೊಳ್ಳಬೇಕಾದ ವ್ಯವಸಾಯದಲ್ಲಿಯ ಅಪ್ರಾಮಾಣಿಕತೆಯ ಅತಿರೇಕವನ್ನು ಕಂಡು ಗಾಂಧೀಜಿಯವರು ಆ ವ್ಯವಸಾಯವನ್ನೇ ತ್ಯಜಿಸಿ ತಮ್ಮ ಕಾರ್ಯ ಕ್ಷೇತ್ರದ ದಿಕ್ಕನ್ನು ಬದಲಿಸಿದರು. ನೂರಾರು ವರುಷಗಳಿಂದ ವಿದೇಶೀ ಪ್ರಭುತ್ವದ ಪೈಶಾಚಿಕ ನೃತ್ಯದ ತುಳಿತದಲ್ಲಿ ಸಿಕ್ಕು ಗಾಸಿಯಾಗಿ, ದಿನದಿನಕ್ಕೆ ಬೆಳೆಯುತ್ತಿದ್ದ ಅನ್ನ-ವಸತಿಗಳ ಅಭಾವದಿಂದಾಗಿ ಭಾರತೀಯ ಜನಸಾಮಾನ್ಯವು ಕಂಗಾಲಾಗಿ ದೈನ್ಯಾವಸ್ಥೆಯಲ್ಲಿ ಬಿದ್ದು ತೊಳಲಿ ಬಳಲುತ್ತಿರುವದು ಒಂದು ಕಡೆ, ಆಧುನಿಕ ಸುಖ ಸೌಂದರ್ಯಗಳ ಕಡೆಗೆ ವಿಶೇಷ ಗಮನವೀಯುತ್ತ ಮಾನವೀಯತೆಯನ್ನು ಮರೆತು ಪಾಶವೀ ಪ್ರವೃತ್ತಿಗಳ ಕಡೆಗೆ ಸಾಗಹತ್ತಿರುವ ಈ ಪ್ರಪಂಚದ ಅಧಃಪಾತ ಇನ್ನೊಂದು ಕಡೆಗೆ, ಇದನ್ನು ಕಂಡು ಸಹಿಸಲಾಗದೇ ಗಾಂಧೀಜಿಯವರು ಭಾರತೀಯರ ಈ ಕರುಣಾಜನಕ ಪರಿಸ್ಥಿತಿಯು ಕಾಣೆಯಾಗಬೇಕಾದರೆ ಮೊದಲು ದೊರೆಯಬೇಕಾದದ್ದು ಸ್ವರಾಜ್ಯ ಎಂದರು. ಇದರ ಹೊರತು ಇನ್ನಾವ ಸೌಕರ್ಯವೂ ನಮ್ಮೀ ದುರಾದೃಷ್ಟವನ್ನು ದೂರೀಕರಿಸಲಾರದು. ಆದ್ದರಿಂದ ನಾನು ಸ್ವರಾಜ್ಯ ಪ್ರಾಪ್ತಿಗಾಗಿ ಹೆಣಗುವದು ನನ್ನ ಪ್ರಥಮ ಕರ್ತವ್ಯ. ಇದರ ಸಂಗಡವೇ ಜಗತ್ತಿಗೆ ನಿಜವಾದ ಸುಖ, ಶಾಂತಿ, ಸಂತೋಷಗಳನ್ನು ಒದಗಿಸುವ ಶಕ್ತಿಯಾವುದೆಂಬದನ್ನು— ಸ್ವರಾಜ್ಯ ಪ್ರಾಪ್ತಿಗಾಗಿ ಕೈಕೊಳ್ಳುವ ಮಾರ್ಗದಲ್ಲಿ ತಾವು ಅನುಸರಿಸುವ ಕ್ರಮದಿಂದಲೇ— ಪ್ರಪಂಚಕ್ಕೆ ತೋರಿಸಿಕೊಡಬೇಕೆಂಬುದನ್ನೂ ನಿರ್ಧರಿಸಿ ಗಾಂಧೀಜಿಯವರು ಆ ಪ್ರಕಾರ ಸ್ವರಾಜ್ಯವನ್ನು ದೊರಕಿಸುವದಕ್ಕಾಗಿ ಭಾರತೀಯ ಜನಸಾಮಾನ್ಯರನ್ನೆಲ್ಲ ಜಾಗ್ರತಗೊಳಿಸಬೇಕಾಗಿ ಬಂದಿತು. ಆಗ ಈ ಪತ್ರಿಕೋದ್ಯಮವನ್ನಾಗಲಿ, ತನ್ಮೂಲಕ, ಲೇಖನಗಳನ್ನಾಗಲಿ ತಮ್ಮ ವಿಚಾರಗಳ ಪ್ರಚಾರದ ಒಂದು ಸಾಧನವನ್ನಾಗಿ ಕೈಕೊಂಡರೇ ಹೊರತು, ತಾವು ಪತ್ರಿಕೋದ್ಯಮಿಯಾಗಬೇಕು, ಸಾಹಿತಿಯಾಗಬೇಕು, ಅದರಿಂದ ಹಣ ಗಳಿಸಬೇಕು, ಕೀರ್ತಿ ಗಳಿಸಬೇಕು ಎಂಬ ಸಾಮಾನ್ಯ ಬಯಕೆಯಿಂದ ಕೈಕೊಳ್ಳಲಿಲ್ಲ.

ಗಾಂಧೀಜಿಯವರ ಸಾಹಿತ್ಯವು ಬಳಿಕೆಯಲ್ಲಿ ಬರುವದಕ್ಕಿಂತ ಪೂರ್ವದಲ್ಲಿ ಪ್ರಚಲಿತವಿದ್ದ ಸಾಹಿತ್ಯವೆಲ್ಲ ಕೇವಲ ಪಂಡಿತರ ಸೊತ್ತಾಗಿತ್ತು. ಅದು ಸಾಮಾನ್ಯ ಜನರಿಗೆ

ಯಂದೂ ತಿಳಿಯದ,ಅರ್ಥವಾಗದ ಸ್ಥಿತಿಯಲ್ಲಿಯೇ ಮುಂದು ಸರಿಯುತ್ತ ಬಂದಿತ್ತು. ಗಾಂಧೀಜಿಗೆ ಆ ಸಾಹಿತ್ಯವು ಬೇಕಿರ ಲಿಲ್ಲ. ತಮ್ಮ ವಿಚಾರವನ್ನು ಕೇವಲ ಭಾಷಾ ಪಂಡಿತ ರಷ್ಟೇ ಅರ್ಥಮಾಡಿಕೊಳ್ಳಲಿ ಎಂಬ ಅಪೇಕ್ಷೆಯು ಅವರಿಗಿರದೆ ಜನಸಾಮಾನ್ಯರಿಗೆಲ್ಲ ತಿಳಿಯಬೇಕು ಎಂಬ ಇಚ್ಛೆಯಿತ್ತು. ಅದಕ್ಕಾಗಿ ಅವರು ಸಾಮಾನ್ಯ (ಸಾದಾ) ಭಾಷೆಯಿಂದ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿ ಬೆಳೆಸಿದರು. ಆದರೂ ಸಹಿತ ಅವರ ಬರವಣಿಗೆ ಯಲ್ಲಿ ಕಂಡುಬರುವ ಹದ, ಹರಿತಗಳು ಉತ್ತಮ ಸಾಹಿ ತ್ಯದ ಗುರುತಾಗಿವೆ. ಗಾಂಧೀಜಿಯವರು ತಮ್ಮ ಬರವಣಿಗೆ ಯಲ್ಲಿ ಹೇಳಬೇಕಾದುದನ್ನು ಹೇಳುವ ರೀತಿ, ಹೇಳುವ ರಸಕ್ಕೆ ಬಳಸುವ ಮಾತು,ಅದರಲ್ಲಿ ಬರುವ ದೃಷ್ಟಾಂತ ಇವೆ ಮುಗಳನ್ನು ನಿರೀಕ್ಷಿಸಿದಲ್ಲಿ ಅವರಿಗೆ ತಮ್ಮದೇ ಆದ ಒಂದು ಲಕ್ಷಣ ಶೈಲಿಯಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು. ಅವರ ಶೈಲಿಯಲ್ಲಿ ಅರ್ಥದ ಸಂಗ್ರಹ, ಸಂಗ್ರಹದಷ್ಟೇ ಸುಲಭತೆ,ಸುಲಭತೆಯಷ್ಟೇ ಸ್ಪಷ್ಟತೆ, ಈ ಮೂರು ಗುಣಗಳು ಸಡಕವಾಗಿವೆ. ಒಂದೇ ಕಡೆಯಲ್ಲಿ ಈ ಮೂರು ಗುಣಗಳ ಸಮ್ಮಿಶ್ರಣವನ್ನು ನಾವು ಇತರ ಸಾಹಿತಿಗಳಲ್ಲಿ ಕಾಣುವದು ಅಪರೂಪ.

ಗಾಂಧೀಜಿಯವರು ಸಾಹಿತ್ಯಕ್ಕೆ ಕೈಹಾಕುವದಕ್ಕಿಂತ ಮೊದಲು ಅವರ ಮಾತೃ ಭಾಷೆಯಾದ ಗುಜರಾತಿಯಲ್ಲಿ ಸಾಹಿತ್ಯವು ಇಲ್ಲಿಲ್ಲದ ವಿಕಾರಗಳಿಗೊಳಪಟ್ಟು ಸತ್ವವು ಕ್ಷೀಣವಾಗುತ್ತ ನಡೆದಿತ್ತು. ಗಾಂಧೀಜಿಯವರು ಹಾಕಿದ ನಂತರ ಅದಕ್ಕೆ ಸರಳತೆಯ ಉಡುಗರೆಯನ್ನು ತೊಡಿಸಿದ್ದಲ್ಲದೆ ಗಾಂಭೀರ್ಯದ ರುಮಾಲನ್ನು ಕೂಡ ಸುತ್ತಿ ರು. ಅದರಿಂದಾಗಿ ಗುಜರಾತೀ ಸಾಹಿತ್ಯವು ಇದೀಗ ಹೆಚ್ಚು ಬಲಗೊಂಡಿದೆಯೆಂದು ಬಲ್ಲವರು ಅಭಿಪ್ರಾಯ ಪಡುತ್ತಾರೆ.

ಮಾತು ಬಳಸುವಲ್ಲಿ ಗಾಂಧೀಜಿಯಂಥ ಕೃಪಣ ವ್ಯಕ್ತಿ ಈ ಜಗತ್ತಿನಲ್ಲಿ ಇನ್ನಾರೂ ಇಲ್ಲವೆಂದುಹೇಳಿದರೆ ಅಷ್ಟೇನೂ ತಪ್ಪಾಗಲಿಕ್ಕಿಲ್ಲ. ಜನರಿಗೆ ಸ್ಪಷ್ಟವಾಗಿ ತಿಳಿಯಲು ಎಷ್ಟು ಬೇಕೋ ಅಷ್ಟೇ, ಅದಕ್ಕಿಂತ ಒಂದು ಶಬ್ದವನ್ನು ಕೂಡ ಹೆಚ್ಚು ಹೆಸತಕ್ಕವರಲ್ಲ. ಇದಕ್ಕೆ ಗಾಂಧೀಜಿ ಅನ್ನುವದು ಹೀಗೆ— ಒಂದು ವಾಕ್ಯ ದೊಡ್ಡ ಹೊಟ್ಟೆಯ ಆನೆಯಂತೆ. ಆನೆಯ ಹೊಟ್ಟೆಗೆ ಆಹಾರವನ್ನು ಒದಗಿಸುವದು ಬಲು ಕಷ್ಟ. ಸಿಕ್ಕ ನ್ನೆಲ್ಲ ಅದಕ್ಕೆ ಹಾಕಬೇಕು. ಅರ್ಥಕ್ಕೆ, ಭಾವಕ್ಕೆ, ಒಂದು ಮಿತಿಯಿದೆ. ಮಾತಿಗೆ ಇಲ್ಲ. ಕೆಲಸಕ್ಕೆ ಬಾರದ ಮಾತಿನ ಕಸದ ತಿಪ್ಪೆಯನ್ನು ಕೂಡಿಹಾಕಿ ವಾಕ್ಯರಚನೆ ಯನ್ನು ಬೆಳೆಸಬಹುದಾಗಲಿ ಅಸಲಿಗೇ ಮೋಸವಾಗುತ್ತದೆ. ಹೀಗೆ ಗಾಂಧೀಜಿಯು ಬರೆಹದಲ್ಲಿ ಮಾತಿನ ಮಿತವ್ಯಯತೆ ಯನ್ನು ತಂದರು. ಗಾಂಧೀಜಿಯ ಬರವಣಿಗೆಯ ವಾಕ್ಯ ಗಳು ಚಿಟಿಕೆ ಹಾಕುವದರೊಳಗಾಗಿ ಮುಗಿಸಬಹುದಾದಷ್ಟು ಚಿಕ್ಕ ನುಡಿಗಳಿಂದ ಕೂಡಿದಂಥವು. ಆದರೂ ಅವು ಗುಂಡಿ- ನೇಟಿನಂತೆ ಗುರಿತಪ್ಪದ, ತಿಳಿಯಾದ, ಮೊನೆಯಾದ ಮಾತು ಗಳಿಂದ ಕೂಡಿದಂಥವು. ಅವರ ಆ ಬರಹದಲ್ಲಿ ಬೆಳಕು ಉಂಟು. ಅವರ ಬರೆಹದಲ್ಲಿ ಸೃಷ್ಟಿ—ಪ್ರಳಯಗಳೆರಡೂ ಹುದುಗಿಕೊಂಡಿವೆ.

ಗಾಂಧೀಜಿಯ ಬರಹ ಗುಂಡಿನೇಟಿನಂತೆ ಎಂದು ಹೇಳಿಯಾಯಿತಷ್ಟೇ. ಅದನ್ನು ಹೇಳುವಲ್ಲಿ ಅವರು ಅನು ಸರಿಸುವ ಪದ್ಧತಿಗೆ ನಾವು ಸಾಮಾನ್ಯವಾಗಿ ಸೂತ್ರರೂಪದಲ್ಲಿ ಹೇಳುವ ಪದ್ಧತಿಯೆಂದು ಅನ್ನಬಹುದು. ಮೇಯೋ ಎಂಬೊಬ್ಬ ವಿದೇಶೀ ಮಹಿಳೆಯು ಹಿಂದುಸ್ಥಾನವನ್ನು ಸುತ್ತಾಡಿ ಇಲ್ಲಿಯ ಆದರ್ಶಗಳನ್ನು ಅವಲೋಕಿಸದೆ ಅವನ್ನು ಅವಲೋಕಿಸುವಷ್ಟು ಬುದ್ಧಿ ಮತ್ತೆಯು-ಅವ ಲೋಕಿಸಿದ್ದರೂ ಕೂಡ ಅವುಗಳನ್ನು ಪ್ರಕಟಿಸುವಷ್ಟು ಉದಾರ ಬುದ್ಧಿಯು ಆ ಮಹಾತಾಯಿಯಲ್ಲಿ ಇತ್ತೋ? ಇಲ್ಲವೋ?—ನ್ಯೂನ್ಯತೆಗಳನ್ನಷ್ಟೇ ಕಂಡುಕೊಂಡು ಅವನ್ನೆ ಕಡ್ಡಿಯನ್ನು ಒಯ್ದು ಗುಡ್ಡವನ್ನು ಮಾಡಿದಂತೆ ಅಸಹ್ಯ ವಾಗಿ ವರ್ಣಿಸಿ ಬರೆದ "ಮದರ ಇಂಡಿಯಾ" ಎಂಬ ಪುಸ್ತಕ ವನ್ನು ನೋಡಿ ಗಾಂಧೀಜಿಯವರು "ಇದೊಂದು ಗಟಾರ ಪರೀಕ್ಷೆಯ ವರದಿ"ಎಂದು ಅದರ ವಿಮರ್ಶೆಯನ್ನು ಒಂದೇ ಒಂದು ವಾಕ್ಯದಲ್ಲಿ ಮುಗಿಸಿದ್ದಲ್ಲದೆ "ಈ ಪುಸ್ತಕವು ಯಾವ ವಿದೇಶೀಯನೂ ಓದದಂಥಹದು. ಪ್ರತಿಯೊಬ್ಬ ಭಾರತೀ ಯನೂ ಓದಬೇಕಾದುದು" ಎಂದು ಹೇಳಿ ಅದರ ಅವತಾರ ವನ್ನು ಮುಗಿಸಿಬಿಟ್ಟರು. ಅಂಥ ಪುಸ್ತಕಗಳ ವಿಮರ್ಶೆಗೆ ಇದಕ್ಕಿಂತ ಹೆಚ್ಚಿಗೆ ಇನ್ನಾವ ಶಬ್ದ, ವಾಕ್ಯಗಳು ಬೇಕು? ಮಾನವನ ಕಾಮ ಪ್ರವೃತ್ತಿಯ ಬಗ್ಗೆ ಬರೆಯಬೇಕಾದಾಗ ಗಾಂಧೀಜಿಯು ನಿರ್ಬಂಧವಿಲ್ಲದ ಸ್ತ್ರೀ ಪ್ರೇಮ "ನಾಯ ಕಾಮ" ಎಂದು ಬರೆದು ಕಾಮಶಾಸ್ತ್ರದ ಬಗ್ಗೆ ಹೇಳಬೇಕಾ ದದ್ದನ್ನು ಪೂರ್ಣಗೊಳಿಸಿದರು. ನಮಗೆ (ಭಾರತೀಯರಿಗೆ) ಒಗ್ಗದ ಕೆಲವು ವಿದೇಶೀ ಸಾಹಿತ್ಯ ಸಂಸ್ಕೃತಿಗಳಿಗೆ ಮರು ಳಾಗಿ ಮೋಸ ಹೋಗುತ್ತಿದ್ದ ಭಾರತೀಯ ನೂತನ ತರು ಣಿಯರನ್ನು ನೋಡಿ "ಆಧುನಿಕ ತರುಣಿಯರು ಅರ್ಥ

ಡಜನ್ ಪ್ರಿಯತಮರ ಪ್ರೇಯಸಿಯರಾಗಬಯಸುತ್ತಾರೆ." ಎಂಬ ಒಂದೇ ಒಂದು ಮಾತಿನಿಂದ ಅವರ ಮಾಟದ ಮಾಯಕಾರಿತನಕ್ಕೆ ಎಂದೂ ಅಳಿಸಲಾರದ ಮಸಿಯನ್ನು ಬಳೆದುಬಿಟ್ಟರು. ಇವನ್ನೆಲ್ಲ ನೋಡಲಾಗಿ ಗಾಂಧೀಜಿಯ ಬರವಣಿಗೆಯು ಅದೆಷ್ಟು ಚಿಕ್ಕದೂ, ಸರಳವೂ, ಗಾಂಭೀರ್ಯವೂ, ಸತ್ಯಪೂರ್ಣವಾದದೂ, ತೀಕ್ಷ್ಣವೂ ಆದುದೆಂಬದನ್ನು ಬೇರೆ ಹೇಳುವ ಕಾರಣವಿಲ್ಲ.

ಗಾಂಧೀಜಿಯವರು ಗುಜರಾತಿ, ಹಿಂದಿ, ಇಂಗ್ಲೀಷು ಈ ಮೂರು ಭಾಷೆಗಳಲ್ಲಿ ಬರೆದಿದ್ದಾರೆ. ದಕ್ಷಿಣ ಆಫ್ರಿಕೆಯಲ್ಲಿ ಪ್ರಾರಂಭಿಸಿದ "ಇಂಡಿಯನ್ ಓಪಿನಿಯನ್" ಇವರ ಸರ್ವ ಪ್ರಥಮ ಆಂಗ್ಲ ಸಾಪ್ತಾಹಿಕ ಪತ್ರಿಕೆ. ನಂತರ ಹಿಂದುಸ್ಥಾನಕ್ಕೆ ಬಂದಮೇಲೆ 'ನವಜೀವನ' ವೆಂಬ ಗುಜರಾತೀ ಸಾಪ್ತಾಹಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಅದು ವಾರಕ್ಕೊಮ್ಮೆ ಹೊರಬಿದ್ದರೆ ಹಳ್ಳಿಗಳಲ್ಲಿ ಅಂಚೆಮನೆ ಮುಂದೆ ಅದನ್ನು ದೊರಕಿಸುವದಕ್ಕಾಗಿ ಜನರ ನುಗ್ಗಾಟವೇ ನುಗ್ಗಾಟ. ಹಳ್ಳಿಯಲ್ಲಿ ಅದನ್ನು ಯಾರಾದರೂ ಓದಹತ್ತಿದರೆ ಹಳ್ಳಿಗರು ನೊಣ ಮುತ್ತಿದಂತೆ ಆ ಓದುಗನನ್ನು ಮುತ್ತುತ್ತಿದ್ದರಂತೆ. ಅಂದಮೇಲೆ ಚನ್ನಾಗಿ ಓದು ಬರಹ ಬಲ್ಲ ಜನರ ಮನೆಯಲ್ಲಿ 'ನವಜೀವನವು' ಇರುತ್ತಿತ್ತೇ? ಎಂದು ಕೇಳುವದೇ ಬೇಡ. ಆಗ ನವಜೀವನಕ್ಕೆ ಗುಜರಾಥದಲ್ಲಿ ೨೫ಸಾವಿರ ಚಂದಾದಾರರಿದ್ದರಂತೆ. ಆ ತರುವಾಯ "ಯಂಗ ಇಂಡಿಯಾ" ಎಂಬ ಆಂಗ್ಲ ಸಾಪ್ತಾಹಿಕವನ್ನು ಹೊರಡಿಸಿದರು. ನಂತರ ಹರಿಜನರ ದೈನ್ಯಾವಸ್ಥೆಯನ್ನು ದೂರೀಕರಿಸಲೋಸುಗ ಅವರ ಉನ್ನತಿಯನ್ನೇ ಲಕ್ಷದಲ್ಲಿಟ್ಟುಕೊಂಡು ಹೊರಡಿಸಿದ "ಹರಿಜನ" ಎಂಬ ಇಂಗ್ಲೀಷ ವಾರಪತ್ರಿಕೆಯಲ್ಲಿಯೇ ಬರಬರುತ್ತ ಗಾಂಧೀಜಿಯು ತಮ್ಮ ಎಲ್ಲ ವಿಚಾರಗಳನ್ನು ಪ್ರಕಟಿಸಹತ್ತಿದರು. ಇಂಗ್ಲೀಷು ನಮ್ಮ ಭಾಷೆಯಲ್ಲವಾದ್ದರಿಂದ ನಾವು ಆ ಸಾಹಿತ್ಯಕ್ಕೆ ಸಲ್ಲಿಸಬಹುದಾದ ಸೇವೆ ಅತಿ ವಿರಳ. ಅದರಲ್ಲಿಯೂ ಇಂಗ್ಲೀಷ ಭಾಷೆಯ ನುಡಿಗಟ್ಟು ಸುಲಭವಾಗಿ ಅರಗಿಸಿಕೊಳ್ಳಲಿಕ್ಕೆ ಬರುವಂಥದಲ್ಲ. ಆದರೂ ಅದರ ಸೂಕ್ಷ್ಮಗಳೆಲ್ಲ ಗಾಂಧೀಜಿಯವರ ಕೈವಶವಾಗಿದ್ದವೆಂದು ಅವರ ಸಾಪ್ತಾಹಿಕ ಸಾಹಿತ್ಯವನ್ನು ಓದುತ್ತಿದ್ದ ಆಂಗ್ಲ ಸಾಹಿತಿಗಳೇ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಹರಿಜನವು ಎಂಥ ವಿಚಾರಗಳನ್ನು ಪ್ರಕಟಿಸುತ್ತಿತ್ತು, ಅದರಲ್ಲಿ ಗಾಂಧೀಜಿಯವರು ಯಾವ ವಿಧವಾದ ಲೇಖನಗಳನ್ನು ಒದಗಿಸುತ್ತಿದ್ದರು ಎಂಬ ಕಲ್ಪನೆಯು ನಮಗೆ ಚನ್ನಾಗಿ ಆಗಬೇಕಾಗಿದ್ದು ನಮ್ಮ ಭಾರತೀಯ ಓದುಗರು ಹರಿಜನದ ಬಗ್ಗೆ ವ್ಯಕ್ತಪಡಿಸುವ ಅಭಿಪ್ರಾಯಕ್ಕಿಂತ ವಿದೇಶಿ ಓದುಗರು ಕೊಡುತ್ತಿದ್ದ ಅಭಿಪ್ರಾಯಗಳನ್ನೇ ತಮ್ಮೆದುರಿಗಿಡುವದು ಹೆಚ್ಚು ಸೂಕ್ತವಾದೀತು. ಓರ್ವ ಇಂಗ್ಲೀಷ ಮಹಿಳೆಯು "ಹರಿಜನ ಬಂದರೆ ನೀರಿಲ್ಲದೆ ಸೆಕೆಯಿಂದ ಬಾಯಾರುವ ಸೀಮೆಯಲ್ಲಿ ಕುಡಿಯಲು ತಿಳಿಯಾದ ಸೀ ನೀರು ಸಿಕ್ಕಂತೆ ಅನಿಸುತ್ತದೆ" ಎಂದಿದ್ದಾಳೆ ಹರಿಜನ ಪತ್ರಿಕೆಯ ಬಗ್ಗೆ. ಮತ್ತೊಬ್ಬ ಪ್ರಸಿದ್ಧ ವಿದೇಶಿಯರು "ಹರಿಜನ ಪತ್ರಿಕೆಯನ್ನು ನೋಡಿ ಕೂಡಲೇ ಎತ್ತೆತ್ತಲೂ ವಿದ್ವೇಷ ತುಂಬಿ ದುರ್ಗಂಧವಿಡಿಗಿ ಈ ಜಗತ್ತಿನಿಂದ ನಾವು ನೇಲಮೇಲಕ್ಕೆ ಹೋಗಿ ಅ ಪ್ರಶಾಂತವಾದ ನಿರ್ಮಲವಾದ ಹವೆಯಲ್ಲಿ ಹಾಯುವಾ ಉಸಿರಾಡಿಸಿದಂತೆ ಆಗುತ್ತಿದೆ. ಏಕೆ ಗೊತ್ತೇ? ಅ ದ ರ ಸತ್ಯದ ಬೆಳಕಿದೆ. ಹಾಗು ಈ ಪ್ರಪಂಚದಲ್ಲಿ ಮನೆ ಮಾಡಿ ಹಿಂಸೆ, ದ್ವೇಷ, ಲೂಟಿ, ಸುಲಿಗೆಗಳು ತತ್ವಗಳ ವೇಷಹಾ ಕೊಂಡು ಮಾನವ್ಯತೆಯನ್ನು ಮರೆಯಿಸುತ್ತಿರುವ,ಅಧುನಿ ನಾಗರಿಕತ್ವವೆಂದು ಹೇಳಿಸಿಕೊಳ್ಳುತ್ತಿರುವ ಮಹಾ ವಂಚ ಯಿಂದ ಮುಕ್ತರನ್ನಾಗಿ ಮಾಡಿ ಅವೆಲ್ಲವುಗಳನ್ನು ಹೊ ದೋಡಿಸುವ ಉಜ್ವಲ ಪ್ರಕಾಶವಿದೆ" ಎಂದು ಹರಿಜನವನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ.

ಗಾಂಧೀಜಿಯವರು ತಾವು ಬರೆದ ಯಾವುದೇ ಸಾಹಿತ್ಯವನ್ನು ಪುನಃ ತಿದ್ದುವದು ಅಪರೂಪ; ಅದೇಕೆ? ತಿದ್ದುವಂಥದ ಅದರಲ್ಲಿ ಏನೂ ಇರುವದಿಲ್ಲವೆಂದು ಹೇಳಿದರೆ ಹೆಚ್ಚು ಸತ್ಯವಾದೀತು. ಏನು ತಿದ್ದಬೇಕು? ಸತ್ಯದಾಚರಣೆಯಿಂದ ಭಾವಶುದ್ಧಿಯಿಂದ ಅವಶ್ಯವಿದ್ದಷ್ಟೇ ಮಾತುಗಳನ್ನು ತೂ ಮಾಡಿದಂತೆ ಬಳೆಸುತ್ತಿದ್ದ ಬರೆಹದಲ್ಲಿ ತಿದ್ದಬೇಕಾದದ್ದು ಏನು? ತಿದ್ದುಪಡಿಯ ಬಗ್ಗೆ ಸ್ವತಃ ಗಾಂಧೀಜಿಯೇ ಹೇಳಿ ಒಂದು ಉದಾಹರಣೆಯನ್ನು ಇಲ್ಲಿ ವಿವರಿಸಿದರೆ ಅಪ್ರಸ್ತುತವಾಗಲಾರದು. 'ಹಿಂದ ಸ್ವರಾಜ್ಯ' ವೆಂಬುದು ೧೯೦೮ರ ಬರೆದ ಅವರ ಮೊದಲ ಗ್ರಂಥ. ಅದರಲ್ಲಿ ಗಾಂಧೀಜಿಯ ಹಿಂದುಸ್ಥಾನಕ್ಕೆ ಎಂಥ ಸ್ವರಾಜ್ಯ ಬೇಕು? ಅದು ಹೇ ಸಿಗಬೇಕು? ಎಂಬಿವೇ ಮುಂತಾದ ಸಂಗತಿಗಳನ್ನು ಅದರ ಪ್ರಕಟಿಸಿದ್ದಾರೆ. ೧೩ವರ್ಷಗಳ ತರುವಾಯ ಅದ ಪುನರ್ಮುದ್ರಣ ಮಾಡಿಸಬೇಕಾದಾಗ ಗಾಂಧೀಜಿಯವರ "ಇದರಲ್ಲಿ ಒಂದೇ ಒಂದು ಶಬ್ದದ ವಿನಹ ಏನನ್ನೂ ಬ ಲಿಸಲಾರೆ. ಅದನ್ನು ಕೂಡ ಒಬ್ಬ ಗೆಳತಿಯ ಸಂತೋ

ಗೆಗೆದುಹಾಕುತ್ತೇನೆ" ಎಂದು ಬರೆದಿದ್ದಾರೆ. ಇದ ಅವರ ಬರವಣಿಗೆಯು ಅದೆಷ್ಟು ಸಮತೋಲವಾದ ಕಲ್ಪನೆಯು ನಮಗೆ ಸಹಜವಾಗಿ ಆಗುವಂತಿದೆ.

ಸ್ಮ ಸಾಪ್ತಾಹಿಕ ಸಾಹಿತ್ಯದ-ಬರೆಹದ-ಮೂಲಕ ಧೀಜಿಯು ಜನರನ್ನು ಆಡಿಸಿದಂತೆ ಪ್ರಪಂಚದಲ್ಲಿ ರೂ ಆಡಿಸಿಲ್ಲವೆಂದು ಧೈರ್ಯವಾಗಿ ಹೇಳಬಹುದು. ರ ಮನಸ್ಸಿಗೆ ನಾಟುವ ಹಾಗೆ ಬರೆಯುವದು ಗಾಂಧೀ ಲೇಖನದ ಗುಣ. ಅವರು ಬರೆದ ವಿಷಯ ಒಂದಲ್ಲ, ಲ್ಲ, ಹತ್ತಾರು! ಹಲವಾರು! ಧಾರ್ಮಿಕ, ಸಾಮಾಜಿಕ, ಕೀಯ, ಆರ್ಥಿಕ, ಶೈಕ್ಷಣಿಕ, ಸತ್ಯ, ಅಹಿಂಸೆ, ಬ್ರಹ್ಮ ರ್ಯ ಇವೇ ಮೊದಲಾದ ಲೆಕ್ಕವಿಲ್ಲದಷ್ಟು. ಹೀಗೆ ಕ ವಿಷಯ, ಅನೇಕ ಸಮಸ್ಯೆಗಳಲ್ಲಿ ಕೈಹಾಕಿ ಬರೆ ಆ, ಆ ಬರೆಹದಲ್ಲಿ ಆ ಭಾಷೆಯಲ್ಲಿ ನಿಗ್ರಹ, ತೂಕಗಳು ತ್ತಿರಲಿಲ್ಲ. ಗಾಂಧೀಜಿಗೆ ಈ ನಿಗ್ರಹ ತೂಕಗಳು ಅವರ ಭಾವ ನೈರ್ಮಲ್ಯವೇ ಅದಕ್ಕೆ ಮುಖ್ಯ ಣ. ಯಾವದೇ ಲೇಖ, ಗ್ರಂಥಗಳನ್ನು ಬರೆಯುವಾಗ ಸತ್ಯೋಪಾಸಕರು, ತಮ್ಮ ಬರೆಹದಲ್ಲಿ ಎಲ್ಲಿ ಅಸತ್ಯ ತ್ತೇತೋ, ಎಲ್ಲಿ ಹಿಂಸೆ ನುಣುಚಿಕೊಂಡಿತೋ ಎಂಬ ರವು ಗಾಂಧೀಜಿಗೆ ಸದಾ ಇರುತ್ತಿತ್ತು. ಅವರು ತಮ್ಮ ಭವವನ್ನು ಸಾಣೆಹಿಡಿದುಕೊಂಡಿದ್ದರಿಂದಲೇ ಅವರ ಬರೆಹಗಳಲ್ಲಿ ಕುದಿಸಿ ಕಾವೇರಿಸುವ ಗುಣವಿಲ್ಲ. ಮನ ಕರಗಿಸಿ ಕಡೆದು ಮೇಲ್ಮಟ್ಟಕ್ಕೆ ಒಯ್ಯುವ ಗುಣ ಅದರಲ್ಲಿ ಬೆಂಕಿಯಿಲ್ಲ. ಬೆಳಕಿದೆ; ಅದರಿಂದಲೇ ಮಾತ್ಯರು "ಗಾಂಧೀಜಿಯ ಬರೆಹದಲ್ಲಿ ಕ್ರೈಸ್ತನ ದೇಶವನ್ನು ಕಾಣುತ್ತೇವೆಂದೂ" ಪೌರ್ವಾತ್ಯರು ಮಹಾತ್ಮಾ ಬುದ್ಧನ ಅಮರ ಆದೇಶವನ್ನು ನೋಡುತ್ತೇ ದೂ" ಧಾರಾಳವಾಗಿ ಅಂದುಕೊಳ್ಳುತ್ತಿದ್ದಾರೆ. ಇವೆಲ್ಲವು ನ್ನು ನೋಡುವ, ಕೇಳುವ ನಾವು ಗಾಂಧೀಜಿಯೊಬ್ಬ ಶ್ರೇಷ್ಠತಮ ಸಾಹಿತಿಗಳು ಇದ್ದರೆಂದು ಒಪ್ಪಿಕೊಳ್ಳಲೇ ಕು.ಇನ್ನು ನಿಮಗಿಂದು ಪತ್ರಿಕೋದ್ಯಮಿಯ ಬಗ್ಗೆ ಹೇಳ ರಟ ನಾನು ಅವರ ಸಾಹಿತ್ಯದ ಹೆಸರನ್ನೆತ್ತುತ್ತಿರುವ ನ್ನು ನೋಡಿ ನನ್ನನ್ನು ವಿಷಯಾಂತರದ ದೋಷಕ್ಕೆ ಮಾಡಲಾರಿರಿ. ಯಾಕಂದರೆ ಉತ್ತಮ ಪತ್ರಿಕೋದ್ಯಮಿ ಗಿರಬೇಕಾದವನು ಮೇಲಾದ ಸಾಹಿತಿಯಾಗಿರಲೇ ಕು. ಆ ಸಾಹಿತ್ಯದ ಅವಲೋಕನದಿಂದಲೇ ಆ ಪತ್ರಿ ದ್ಯಮಿಯ ಮಟ್ಟವನ್ನು ಕಂಡುಕೊಳ್ಳಬೇಕಾಗುತ್ತದೆ. ಆದ್ದರಿಂದ ಗಾಂಧೀಜಿಯವರ ಸಾಹಿತ್ಯವನ್ನು ಕುರಿತು ವಿವರಿಸುವದು ವಿಷಯಾಂತರವಾಗಿರಲಿಕ್ಕಿಲ್ಲೆಂದು ನನ್ನ ಭಾವನೆ.

ಗಾಂಧೀಜಿಯ ಸಾಹಿತ್ಯದ ಬಗ್ಗೆ ಇನ್ನೊಂದು ಉದಾಹರಣೆಯೊಡನೆ ನಾನು ನನ್ನ ಈ ಕಿರಿಯ ಭಾಷಣವನ್ನು ಪೂರ್ತಿಗೊಳಿಸುವೆ.

ಮಹಾತ್ಮಾಜಿಯವರು ಗುಜರಾತಿಯಲ್ಲಿ ಬರೆದ ಅವರ ಆತ್ಮಕಥೆ (ಸತ್ಯಶೋಧನೆ)ಯು ಪ್ರಕಟವಾದ ೧೫ ದಿನಗಳಲ್ಲಿಯೇ ಅದರ ೧೦ ಸಾವಿರ ಪ್ರತಿಗಳು ಮಾರಿದವು. ಜಗತ್ತಿನಲ್ಲಿ ಇದುವರೆಗೆ ಇಷ್ಟು ಅಲ್ಪಾವಕಾಶದಲ್ಲಿ ಇಷ್ಟು ದೊಡ್ಡ ಪ್ರಮಾಣದಿಂದ ಯಾವ ಗ್ರಂಥವೂ ಮಾರಾಟವಾಗಿಲ್ಲ ಹಾಗೂ ಈಗ ಸ್ವಲ್ಪ ದಿನಗಳ ಹಿಂದೆ ಆ ಗ್ರಂಥದ ಇಂಗ್ಲೀಷ ಭಾಷಾಂತರವನ್ನು ಪ್ರಕಟಿಸುವ ಒಡೆತನವನ್ನು ಸಂಪಾದಿಸುವದಕ್ಕಾಗಿ ಅಮೇರಿಕೆಯ ಪ್ರಕಾಶಕರೊಬ್ಬರು ೨ ಲಕ್ಷ ರೂಪಾಯಿಗಳನ್ನು ತೆತ್ತಿದ್ದಾರೆ. ಅಲ್ಲಿ ಅದೀಗ ಪ್ರಕಟವಾಗಿದ್ದು ಆ ಗ್ರಂಥದ ಬಗ್ಗೆ ಬೇರೆಬೇರೆ ವಿದೇಶೀ ಮಹಾವ್ಯಕ್ತಿಗಳು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳನ್ನು ತಾವು ಪತ್ರಿಕೆಗಳಲ್ಲಿ ನೋಡಿರಲಿಕ್ಕೆ ಸಾಕು. ಅಂದಮೇಲೆ ಇಷ್ಟೊಂದು ತನಮನವನ್ನಾಕರ್ಷಿಸಬೇಕಾದರೆ ಆ ಗ್ರಂಥದಲ್ಲಿಯ ಸಾಹಿತ್ಯದ ಮೇಲ್ಮೆಯು ಅದೆಷ್ಟಿರಬಹುದೆಂಬದನ್ನು ವಿಚಾರಿಸಿ ನಿರ್ಣಯಿಸುವದನ್ನು ನಿಮಗೆ ಬಿಟ್ಟುಕೊಡುವೆ. ಇಂಥ ಸಾಹಿತ್ಯದ ಮೇಲ್ಮೆಯುಳ್ಳ ಗಾಂಧೀಜಿಯು ಅದೆಷ್ಟು ಶ್ರೇಷ್ಠತಮ ಪತ್ರಿಕೋದ್ಯಮಿಯಾಗಿರಬೇಕೆಂಬುದನ್ನು ಸಹ ನಿರಾಯಾಸವಾಗಿ ನಿರ್ಣಯಿಸಬಹುದು. ಒಟ್ಟಿನಲ್ಲಿ ಗಾಂಧೀಜಿಯು "ಜೀವನಕ್ಕೆ ಸಾಹಿತ್ಯ ಅಗತ್ಯ. ಬದುಕಿನಂತೆ ಭಾಷೆ ಬೇಕು" ಎಂಬ ಧೋರಣವುಳ್ಳವರಾಗಿದ್ದು ಜಗತ್ತಿನಲ್ಲಿಯ ಓರ್ವ ಅತಿ ಶ್ರೇಷ್ಠ ಪತ್ರಿಕೋದ್ಯಮಿಗಳಾಗಿದ್ದರೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುವೆ.*

---

*ಈ ಭಾಷಣದ ಸಿದ್ಧತೆಗೆ ಶ್ರೀ. ಸಿದ್ದವನಹಳ್ಳಿ ಕೃಷ್ಣಶರ್ಮರು ಬರೆದ ಪುಸ್ತಕಗಳು ನೆರವಾಗಿವೆ. ಅವರಿಗೆ ನಾನು ತುಂಬಾ ಕೃತಜ್ಞ—ಭಾಷಣಕಾರ.

-:ಹನ್ನೆರಡು:-

ತಾಳ ತಪ್ಪಿದರೆ ಹಾಡು ಹಾಳು. ತಾಳ್ಮೆ ತಪ್ಪಿದರೆ ಬಾಳು ಹಾಳು. ತಾಳ್ಮೆಯ ಬೆಳಿಗೆಯೇ ಬಲುಮೆಯ ಬೆಳಿಗೆ ಕೇಳಿಂದನಾ ನಮ್ಮ ಗುರು ಗಾಂಧಿ ಸಕಲೇಶ್ವರಾ ||

-:ಹದಿಮೂರು:-

ಪ್ರೇಮಕ್ಕಾಗಿ ಪರವ್ಯಕ್ತಿಗಳ ಫೋಟೊ ಪೂಜಿಸುವದು ಕ್ಷಣಿಕ ಪ್ರೇಮ ನೋಡಾ. ಅದೇ ವ್ಯಕ್ತಿಯ ಆದರ್ಶ ತತ್ವ ಪೂಜೆಯಾದರೆ ಚಿರಸ್ಥಿರ ಪ್ರೇಮ ನೋಡೆಂದನಾ ನಮ್ಮ ಗುರು ಗಾಂಧಿ ಸಕಲೇಶ್ವರಾ ||

-:ಹದಿನಾಲ್ಕು:-

ಮಕ್ಕಳು, ಮಕ್ಕಳನ್ನು ಅಕ್ಕರೆಯಿಂದ ಕಾಣುವದಕ್ಕಿಂ ಬೇಕು. ಅಕ್ಕರೆಯಿರದ ಮಕ್ಕಳು ಇರುವದಕ್ಕಿಂತ ಜೊ ಸನ್ಯಾಸಿಗಳಾಗಿರುವದು ಲೇಸೆಂದನಾ ನಮ್ಮ ಗುರು ಗಾಂ ಸಕಲೇಶ್ವರಾ ||

-:ಹದಿನೈದು:-

ಮಾನವನು ಅಪಯಶಸ್ಸಕ್ಕೆ ಅಧೈರ್ಯನಾಗಿರಬಾರದ ಅದೊಂದು ವಿಶ್ರಾಂತಿಯ ಬಿಡುವು ನೋಡಾ. ಸತ ಪ್ರಯತ್ನ, ಅವಿಶ್ರಾಂತಿ ಪರಿಶ್ರಮ, ನಂಬಿಕೆ ಇವು ಜಯ ಹೆಗ್ಗುರುತು ನೋಡೆಂದನಾ ನಮ್ಮ ಗುರು ಗಾಂಧಿ ಸ ಲೇಶ್ವರಾ ||

ಯಾರು ವಂದನೆಗೈಯಲಿಕ್ಕಿಲ್ಲ?

-:ವಂದಿಪೆವು:-

ಮ. ಗಾಂಧಿ. ಶತಕ ವರ್ಷ ೭೯ (೨-೧೦-೪೮

ವಂದಿಪೆ ಗುರುಗಾಂಧಿಯೆ
ಅಂದದಿ ಕಂದರೆಲ್ಲರು ಅಡಿಗೆ ||ಪ||

—:ಒಂದು:—
ಸುಂದರ ಬಾಲರು ।
ಕುಂದದೆ ಕುಗ್ಗದೆ ||
ವಂದೇ ಭಾರತಾಂಬೆ ।
ಎಂದು ಘೋಷಿಸುತ ||೧||

—:ಎರಡು:—
ರನ್ನದಂತೆ ರಂಜಿಸುವ ।
ಚಿನ್ನದ ನಾಡಿನ ||
ಜೆನ್ನ ಬಾಪೂಜಿ ನಿನಗೆ ।
ನನ್ನಿಯಿಂದಲಿ ನಾವು ||೨||

—:ಮೂರು:—
ನರರಿಗೆ ಮಹರ್ಷಿ ।
ಅರಸರಿಗೆ ರಾಜರ್ಷಿ ||
ಸುರರಿಗೆ ದೇವರ್ಷಿ ।
ಯಾದಂಥ ಬಾಪೂಜಿ ||೩||

—:ಅರ್ಪಣ:—
ಜಗದ ಜ್ಯೋತಿ ಅಮರ ಬಾಪೂಜಿಗೆ
'ಚರಖಾ ಜಯಂತಿ' ನಿಮಿತ್ತ ಪ್ರಕಟವಾದದ್ದು.

—ಹಿಮತಿ ಕೃತ..

ಮಹಾತ್ಮಾ ಗಾಂಧಿಯವರು ಅರ್ಥಶಾಸ್ತ್ರಜ್ಞರು.

ಜನಾಬ. ಎಸ್. ಎಸ್. ಕಾಜಿ. ಗವ್ಹರ್ನಮೆಂಟ
ಉರ್ದು ಟ್ರೇನಿಂಗ್ ಕಾಲೇಜ, ಧಾರವಾಡ.

ಪೂಜ್ಯ ಬಾಪೂಜಿ

ಮಾನ್ಯ ಅಧ್ಯಕ್ಷರೆ, ಗುರುಗಳೆ ಮತ್ತು ಬಂಧು ಭಗಿನಿಯರೆ, ನಾನು ಈಗ ಹೇಳಬೇಕಾದದ್ದು ಮ. ಗಾಂಧಿಯವರು ಅರ್ಥ ಶಾಸ್ತ್ರಜ್ಞರು ಎಂಬ ವಿಷಯದ ಬಗ್ಗೆ.

ಜಗತ್ತಿನಲ್ಲಿ ಎಲ್ಲೆಲ್ಲಿಯೂ "ಜೀವನದ ಮಟ್ಟನ್ನು ಏರಿಸಬೇಕು" ಉತ್ಪಾದನ ಶಕ್ತಿಯನ್ನು ಹೆಚ್ಚಿಸಬೇಕು ಎಂಬ ಕೂಗು ಕೇಳಿ ಬರುತ್ತಿರುವದು. ಪಾಶ್ಚಿಮಾತ್ಯ ರಾಷ್ಟ್ರಗಳು ಈ ಉದ್ದೇಶ ಇಟ್ಟುಕೊಂಡು ಎತ್ತಸಾಗಿವೆ ಎಂಬುದನ್ನು ತುಸು ವಿಚಾರಿಸೋಣ.

ವಿಶೇಷವಾಗಿ ಸುಮಾರು ೧೯ನೇ ಶತಮಾನದಿಂದ ಕೈಗಾರಿಕ ಕ್ರಾಂತಿಯಾದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಿತಿಮೀರಿದ ಯಂತ್ರಗಳ ಉಪಯೋಗವು ಪ್ರಾರಂಭವಾಯಿತು. ದೊಡ್ಡ ದೊಡ್ಡ ಪ್ರಮಾಣದಲ್ಲಿ ಗಿರಣಿಗಳೂ, ಫ್ಯಾಕ್ಟರಿಗಳೂ, ವರ್ಕಶಾಪಗಳೂ. ಬೆಳೆದು ಬೇರೆ ಬೇರೆ ಸಾಮಾನುಗಳ ಉತ್ಪತ್ತಿಯು ಮಿತಿಮೀರಿ ಬೆಳೆಯಿತು. ಇನ್ನು ಈ ಸಾಮಾನಗಳ ಮಾರಾಟಕ್ಕೂ, ಅವುಗಳ ತಯಾರಿಸಿಗೆ ಬೇಕಾಗುವ ಕಚ್ಚಾ ಮಾಲುಗಳ ಪುರವಠೆಗಾಗಿಯೂ, ಆ ರಾಷ್ಟ್ರಗಳು ಪರದೇಶಗಳಲ್ಲಿಯ ಮಾರ್ಕೇಟಗಳನ್ನು ಹುಡುಕಬೇಕಾಯಿತು, ಅಬಲ ರಾಷ್ಟ್ರಗಳನ್ನು ಗೆದ್ದು ಅವುಗಳಲ್ಲಿ ತಮ್ಮ ಸ್ವಾಮಿತ್ವವನ್ನು ನೆಲೆಗೊಳಿಸಿ ತಮ್ಮ ದೇಶಗಳಲ್ಲಿ ತಯಾರಾದ ಸಾಮಾನುಗಳ ಮಾರಾಟಕ್ಕೆ ಹೆಚ್ಚು ಪ್ರೋತ್ಸಾಹನಕೊಟ್ಟು ಅಲ್ಲಿಯ ಉದ್ಯೋಗಗಳನ್ನು ಕುಗ್ಗಿಸಿ ನಾಶ ಮಾಡಲು ಅವು ಅನುವಾದವು. ಪರದೇಶಗಳಲ್ಲಿಯ ತಮ್ಮ ಸ್ವಾಮಿತ್ವಕ್ಕೆ ಧಕ್ಕೆ ಹತ್ತಬಾರದು, ಪರರಾಷ್ಟ್ರಗಳು ಇದಕ್ಕೆ ಭಂಗ ತರಬಾರದು ಎಂಬ ಉದ್ದೇಶದಿಂದ ಭೂ,ಜಲ, ಆಕಾಶ ಪಡೆಗಳನ್ನು ಸುಸಜ್ಜಿತವಾಗಿ ಇಡಬೇಕಾಯಿತು. ಇದರಿಂದ ರಾಷ್ಟ್ರ ರಾಷ್ಟ್ರಗಳಲ್ಲಿ ಅನೇಕ ಯುದ್ಧಗಳು ಎಸಗಿ ಅಸಂಖ್ಯಾತ ಜನ, ಧನ, ಧಾನ್ಯಗಳು ಹಾಳಾದುದನ್ನು ನಾವು ನೋಡಬಹುದು. ಈಗ ಇಂಗ್ಲಂಡ್, ಅಮೇರಿಕಾ, ರಶಿಯಾ ರಾಷ್ಟ್ರಗಳಲ್ಲಿಯ ತುರಸಾಟನನ್ನೂ, ಮೂರನೇ ಮಹಾಯುದ್ಧದ ಕಾರ್ಮೋಡಗಳು ಯುರೋಪದಲ್ಲಿ ಕವಿದಿರುವದನ್ನೂ ನಾವು ಗಮನಕ್ಕೆ ತಂದುಕೊಳ್ಳಬಹುದು.

ಆರ್ಥಿಕ ಪದ್ಧತಿಯಿಂದ ಜಿತರಾಷ್ಟ್ರಗಳಲ್ಲಿ ಉಂಟಾದ ದುಷ್ಟ ಪರಿಣಾಮಗಳನ್ನು ನಮ್ಮ ಹಿಂದುಸ್ತಾನ ದೇಶದ ಉದಾಹರಣೆಯಿಂದ ನೋಡಬಹುದು. ಇಂಗ್ಲೀಷರು ಇಲ್ಲಿಯ ಎಲ್ಲ ಉದ್ಯೋಗಗಳನ್ನು ಹೊರಲಾಗದ ಕರ ಕಾನೂನಗಳಿಂದ ಹತ್ತಿಕ್ಕಿ, ತಮ್ಮ ಭಂಡವಾಲದಾರರ ಹೊಟ್ಟೆಯು ಮತ್ತಿಷ್ಟು ಕೊಬ್ಬುವಂತೆ ಮಾಡಿದರು. ಇಲ್ಲಿಯ ಉದ್ಯೋಗಗಳ ಬೆಳವಣಿಗೆಗೆ ಯಾವ ಅನುಕೂಲತೆಯನ್ನು ಒದಗಿಸಿ ಕೊಡಲಿಲ್ಲ. ಇದರಿಂದ ನಮ್ಮ ನಾಡಿನಲ್ಲಿ ಎರಡು ಆಣೆ ಬೆಲೆ ಬಾಳುವ ಕಚ್ಚಾ ಮಾಲು ಇಂಗ್ಲಂಡ್‌ಕ್ಕೆ ಹೋಗಿ ಅಲ್ಲಿಂದ ತಯಾರಾಗಿ ಬಂದಮೇಲೆ ಅದರ ಬೆಲೆಯು ಒಂದು ರೂಪಾಯಿ ಆಗತೊಡಗಿತು. ಇದರಿಂದ ನಮ್ಮ ನಾಡಿನಲ್ಲಿ ಎರಡು ಆಣೆ ಉಳಿದು ಪರದೇಶಕ್ಕೆ ಒಂದ

ರೂಪಾಯಿ ಹೋಯಿತು. ಅಷ್ಟೇ ಪ್ರಮಾಣದಲ್ಲಿ ಅದು ಇಲ್ಲಿಯ ಬಡಜನರ ಅನ್ನ, ಕೂಲಿಗಳಿಗೆ ಮುಳುವಾಯಿತು. ಒಬ್ಬ ಒಕ್ಕಲಿಗನು ೭೦ ರೂಪಾಯಿ ಖರ್ಚುಮಾಡಿ ೧೦೦ ರೂಪಾಯಿ ಬೆಲೆ ಬಾಳುವ ಶೇಂಗಾ ಬೆಳೆದರೆ ಅವನಿಗೆ ೩೦ ರೂಪಾಯಿ ಉತ್ಪನ್ನವಾದಂತಾಯಿತು. ಇನ್ನು ಆದೇ ಶೇಂಗಾದಿಂದ ತಯಾರಾದ ಎಣ್ಣೆಯನ್ನು ಸುಗಂಧದ ಎಣ್ಣೆಯನ್ನು ತಯಾರಿಸುವ ಫ್ಯಾಕ್ಟರಿ ಮಾಲಕನು ಕೊಂಡು ಅದರಿಂದ ಪ್ರತಿ ತಿಂಗಳ ೧೫೦ ರೂಪಾಯಿ ಉತ್ಪನ್ನದಂತೆ ವರ್ಷಕ್ಕೆ ೧೮೦೦ ರೂಪಾಯಿಗಳ ಉತ್ಪನ್ನವನ್ನು ಸಂಪಾದಿಸುವನು. ಇದರ ಪರಿಣಾಮವಾಗಿ ಇಲ್ಲಿಯ ಜನರ ಉತ್ಪಾದನ ಶಕ್ತಿಯೂ, ಕೊಳ್ಳುವ ಶಕ್ತಿಯೂ ಕಡಿಮೆ ಆಗುತ್ತ ನಡೆದವು. ಹಿಂದೆ ಬಂಗಾರದ ಹೊಗೆ ಹಾಯುತ್ತಿದ್ದ ನಮ್ಮ ದೇಶಕ್ಕೆ ಬಡತನದ ಭೂತವು ಬಂದು ಆವರಿಸಿತು. ಜನರ ಜೀವನ ಮಟ್ಟವು ಕನಿಷ್ಟ ಪಕ್ಷಕ್ಕೆ ಇಳಿಯಿತು. ಇಲ್ಲಿಯ ಪ್ರತಿಯೊಬ್ಬನ ಉತ್ಪನ್ನವನ್ನು ನಾವು ನೋಡಬಹುದು.

ಪ್ರೊ. ವ್ಹಿ. ಕೆ. ಆರ್. ವ್ಹಿ. ರಾವ ಇವರ ಅಭಿಪ್ರಾಯದಂತೆ ಇಲ್ಲಿಯ ಪ್ರತಿಯೊಬ್ಬನ ಒಂದು ವರ್ಷದ ಉತ್ಪನ್ನ ೬೦ ರೂಪಾಯಿ ಇರುವದು.

ಪ್ರೊ. ಜೆ. ಸಿ. ಕುಮಾರಪ್ಪನವರು ಮಧ್ಯಪ್ರಾಂತ ೬೦೦ ಹಳ್ಳಿಗಳನ್ನು ಪರೀಕ್ಷಿಸಿ ಅಲ್ಲಿಯ ಪ್ರತಿಯೊಬ್ಬನ ಉತ್ಪನ್ನವು ೧೨ ರೂಪಾಯಿ ಆಗುವದೆಂದು ಅಭಿಪ್ರಾಯ ಪಟ್ಟಿರುವರು. ಇದರಿಂದ ಪ್ರತಿದಿನದ ಉತ್ಪನ್ನ ಎರಡುಮಡ್ಡು ಆಯಿತು. ಇದರಿಂದ ಹೊಟ್ಟೆ ಬಟ್ಟೆಗೆ ಏನು ಮಾಡಬೇಕು?

ನಮ್ಮ ನಾಡು ಹಳ್ಳಿಗಳ ನಾಡು. ಏಳು ಲಕ್ಷ ಹಳ್ಳಿಗಳು ನಮ್ಮಲ್ಲಿವೆ. ೧೦೦ಕ್ಕೆ ೯೦ ಜನರು ಹಳ್ಳಿಗಳಲ್ಲಿದ್ದು ಅರಷ್ಟು ಜನರು ಒಕ್ಕಲತನದಿಂದ ಜೀವಿಸುವರು. ಇನ್ನು ಬೇರೆ ಉದ್ಯೋಗಗಳಿಗೆ ಪ್ರೋತ್ಸಾಹನ ಇಲ್ಲದ್ದರಿಂದ ಒಕ್ಕಲತನವನ್ನು ಹೆಚ್ಚು ಹೆಚ್ಚು ಜನರು ಅವಲಂಬಿಸಬೇಕಾಯಿತು. ಇನ್ನು ಇಲ್ಲಿಯ ಒಕ್ಕಲಿಗನು ಹೊಲದ ಪ್ರತಿಯೊಂದು ಎಕರೆಗೆ ೫೬ ರೂಪಾಯಿ ಬೆಲೆ ಬಾಳುವ ಧಾನ್ಯಗಳನ್ನು ಬೆಳೆದರೆ, ಅದೇ ಇಂಗ್ಲಂಡ್‌ದ ಒಕ್ಕಲಿಗನು ಅ ೨೩೦ ರೂಪಾಯಿ ಬೆಲೆಯಷ್ಟು ಕಾಳನ್ನು ಬೆಳೆಯುವನು. ಇಲ್ಲಿ ೬೯೦ ಪೌಂಡು ಕಾಳು ಬೆಳೆದರೆ ಇಂಗ್ಲಂಡ್ ಅಮೆರಿಕೆಗಳಲ್ಲಿ ೨೦೦೦ ಪೌಂಡು ಕಾಳು ಬೆಳೆಯುವರು.

ಇದು ಅಲ್ಲದೆ ಬೇರೆ ಬೇರೆ ಉದ್ಯೋಗಗಳ ಮೂಲವಾಗಿ ಒಕ್ಕಲಿಗರು ಅಲ್ಲಿ ಹೆಚ್ಚು ಉತ್ಪನ್ನವನ್ನು ತಕ್ಕೊಳ್ಳುವರು.

ದೇಶದ ಹೆಸರು.	ಬೇರೆ ಉದ್ಯೋಗಗಳಿಂದ.	ಒಕ್ಕಲತನದಿಂದ.
(೧) ಅಮೇರಿಕಾ.	೯೬೩ ರೂಪಾಯಿ.	೧೭೫ ರೂಪಾಯಿ.
(೨) ಕಾನಡಾ.	೫೪೫ ರೂಪಾಯಿ.	೩೪೪ ರೂಪಾಯಿ.
(೩) ಹಿಂದುಸ್ತಾನ.	೧೨ ರೂಪಾಯಿ.	೪೮ ರೂಪಾಯಿ.

ಇದರಿಂದ ಇಲ್ಲಿಯ ಪರಿಸ್ಥಿತಿಯನ್ನು ಪರೀಕ್ಷಿಸಬಹುದು. ಒಕ್ಕಲಿಗರೆಲ್ಲರೂ ಬಡತನದ ಶೂಲಕ್ಕೆ ಸಿಲುಕಿ ಬೆಂಡಾದರು. ೧೯೩೫ರಲ್ಲಿ ಅವರ ಸಾಲ ೨೦೦ ಕೋಟಿ ರೂಪಾಯಿ ಆಗಿದೆ ಎಂದು ನಿಕಲಸನ್ ಅಭಿಪ್ರಾಯ.

ಆದರೆ ಅನ್ಯಾಯವೂ ಅವಿಚಾರವೂ ಬಹಳ ದಿನಗಳವರೆಗೆ ನಡೆಯದು. ಪ್ರಕೃತಿ ನೇಮವು ಅದನ್ನು ಇಂವಿಲ್ಲ ನಾಳೆ ಎದುರಿಸುವದು. ಅದು ಮ. ಗಾಂಧಿಯವರಲ್ಲಿ ರೂಪಗೊಂಡಿತು.

ಗಾಂಧಿಯವರು ಪರರಾಷ್ಟ್ರಗಳ ಆಸುರಿ ವೃತ್ತಿಯನ್ನು ಸಾಮ್ರಾಜ್ಯಶಾಹಿಯ ತತ್ವದಿಂದ ವಿರೋಧಿಸಿದರು. ಅವರ ಅನ್ಯಾಯದ ಆರ್ಥಿಕ ಧೋರಣೆಯನ್ನು ಪ್ರತಿಭಟಿಸಿದರು. ದಾಸ್ಯದಲ್ಲಿ ಬಳಲುತ್ತಿರುವ ನಮ್ಮ ನಾಡನ್ನು

ತಂತ್ರಮಾಡಿ ಉದ್ಧಾರಮಾಡಬೇಕು ಎಂದು ಹಗಲಿರಳು, ಸ, ಮನ, ಧನದಿಂದ ದುಡಿಯಲು ಟೊಂಕಕಟ್ಟಿ ಂತರು.

ಗಾಂಧಿಯವರು ಪಾಶ್ಚಿಮಾತ್ಯ ರಾಷ್ಟ್ರಗಳ ಆರ್ಥಿಕ ೋರಣೆಯಲ್ಲಿಯ ದೋಷಗಳನ್ನು ಕಂಡು ಹಿಡಿದು ಅದ ಂದ ಜಗತ್ತಿನಲ್ಲಿ ಯಾವ ಕಲ್ಯಾಣವೂ ಆಗುವದಿಲ್ಲವೆಂದು ನಿನಗಂಡರು. ಜಗತ್ತಿನ ಅಶಾಂತಿಗೂ ಅಕಲ್ಯಾಣಕ್ಕೂ ದೇ ಹೆಚ್ಚಾದ ಕಾರಣವು. ಇದು ನಿಜವಾದ ದಾರಿಯಲ್ಲ ಂದು, ಪುರಾತನ ಕಾಲದಿಂದ ಬಂದ ಹಳ್ಳಿಗಳ ಕೈಗಾರಿಕೆ ಳ ಹೆಚ್ಚಳಕ್ಕಾಗಿಯೂ ಹಳ್ಳಿಗಳ ಪುನರುದ್ಧಾರಕ್ಕಾಗಿಯೂ ಡಿದರು. ಇದರಿಂದಲೆ ಶಾಶ್ವತವಾದ, ನ್ಯಾಯಸಮ್ಮತ ವಾದ ಆರ್ಥಿಕ ಪದ್ಧತಿಯೂ ನೆಲೆಗೊಳ್ಳುವದು ಎಂದು ನಿದರು. ಇದರ ದೆಶೆಯಿಂದ "ಅಖಿಲ ಹಿಂದುಸ್ತಾನ ನೂಲುವಕೇಂದ್ರ," "ಅಖಿಲ ಹಿಂದುಸ್ತಾನ ಹಳ್ಳಿಗಳ ಕೈಗಾ ರಿಕೆಗಳ ಸಂಸ್ಥೆ" ಇವುಗಳನ್ನು ಸ್ಥಾಪಿಸಿ ಕೈಗಾರಿಕೆಗಳ ಉದ್ಧಾರಕ್ಕಾಗಿ ದುಡಿಯಲು ಅನುವಾದರು.

ಈ ಕೈಗಾರಿಕೆಗಳ ಮೂಲಕವಾಗಿ ಯಂತ್ರಗಳಿಂದ ಬಂಡಲವಾಲಗಾರರಲ್ಲಿ ಕೇಂದ್ರೀಕೃತವಾಗುವ ನಮ್ಮ ಹಣವು ಎಲ್ಲರಿಗೂ ಹಂಚಿಹೋಗುವದು. ಎಲ್ಲರಿಗೂ ಜೀವನಕ್ಕೆ ಬೇಕಾಗುವ ಅನ್ನ ಬಟ್ಟೆಗಳು ಸಾಕಷ್ಟು ದೊರೆಯುವವು ಎಂಬುದನ್ನು ಅವರು ಪ್ರತಿಪಾದಿಸಿದರು. ಇದರ ನಿಜಾಂಶ ವನ್ನು ಒಂದು ಉದಾಹರಣೆಯಿಂದ ನೋಡಬಹುದು.

ಈಗ ಅಖಿಲ ಹಿಂದುಸ್ತಾನ ನೂಲುವ ಕೇಂದ್ರದಲ್ಲಿ ಸಾಲ್ವತ್ತು ಲಕ್ಷ ರೂಪಾಯಿ ಬಂಡವಲು ಇದೆ. ಇದರಲ್ಲಿ ೫೦೦೦೦ ನೂಲುವವರು, ನೇಯುವವರು, ಬಟ್ಟೆ ಒಗೆಯು ವವರು ಮತ್ತು ಬಣ್ಣ ಹಾಕುವವರು, ದುಡಿಯುವರು. ೧೦೦೦ ವ್ಯವಸ್ಥಾಪಕರು ದುಡಿಯುವರು, ೩೦,೦೦,೦೦೦ ರೂಪಾಯಿ ಪಗಾರ ಕೂಲಿಗಾಗಿ ವಿನಿಯೋಗವಾಗುವುದು. ೫೦೦೦೦ ಹಳ್ಳಿಗಳು ಇದರಲ್ಲಿ ಸಮಾವೇಶವಾಗುವವು ಎಂಬುದು ಸಿದ್ಧವಾಗಿದೆ.

ಇದರಿಂದ ಹಣದ ಹಂಚಿಕೆಯನ್ನು ನಾವು ಮನಗಾಣ ಬಹುದು. ಇದರಂತೆ ಹೆಚ್ಚು ಹಣವನ್ನು ಬೇರೆ ಬೇರೆ ಕೈಗಾರಿಕೆಗಳಿಗೆ ಹಾಕಿ ಪ್ರೋತ್ಸಾಹನ ಕೊಟ್ಟರೆ ಜನರಿಗೆ ಹೆಚ್ಚಿನ ಉತ್ಪನ್ನ ಉಂಟಾಗುವದರಲ್ಲಿ ಸಂಶಯವೆಲ್ಲಿದೆ? ಒಂದೇ ಫ್ಯಾಕ್ಟರಿಯಿಂದ ಕೇವಲ ೧೦೦೦ ಜನರಿಗೆ ಕೂಲಿ ಸಿಕ್ಕುಉಳಿದದ್ದೆಲ್ಲ ಬಂಡವಲಗಾರನ ಹತ್ತರ ಕೇಂದ್ರೀಕೃತ ವಾಗುವದು.

ಆದರೆ ಗಾಂಧಿಯವರ ಈ ತತ್ವಕ್ಕೆ ಮೊದಲು ಎಲ್ಲ ಅರ್ಥಶಾಸ್ತ್ರ ಪಂಡಿತರು ನಕ್ಕರು, ಹುಚ್ಚನೆಂದರು, ಪುರಾ ತನ ಕಾಲಕ್ಕೆ ಎಳೆಸುವನೆಂದು ಹೀಯಾಳಿಸಿದರು. ಆದರೆ ಇತ್ತಿತ್ತಲಾಗಿ ಅವರ ತತ್ವವನ್ನು ಪೌರ್ವಾತ್ಯ ಮತ್ತು ಪಾಶ್ಚಿ ಮಾತ್ಯ ಅರ್ಥ ಶಾಸ್ತ್ರಜ್ಞರು ಒಪ್ಪಹತ್ತಿದ್ದಾರೆ.

ಗಾಂಧಿಯವರು ನಿಜವಾಗಿಯೂ ಅರ್ಥ ಶಾಸ್ತ್ರ ಪಂಡಿ ತರು ಹೌದು.

ಅವರಿಗೆ ಬೇಕಾದುದು ನ್ಯಾಯಸಮ್ಮತವಾದ, ಶಾಶ್ವತ ವಾದ ಆರ್ಥಿಕ ಪದ್ಧತಿಯು–ನಿಜವಾಗಿಯೂ ಮ. ಗಾಂಧಿ ಯವರಿಗೆ ಯಂತ್ರಗಳು ಬೇಡವಾಗಿರಲಿಲ್ಲ–ಅವರಿಗೆ ಬೇಕಾ ದದ್ದು ಮಾನವನು ಯಂತ್ರಗಳ ದಾಸನಾಗದೆ ಯಂತ್ರಗಳು ಮನುಷ್ಯನ ದಾಸ್ಯತ್ವದಲ್ಲಿ ಉಳಿದು ಅವುಗಳಿಂದ ಸದುಪ ಯೋಗವಾಗುವದು.

ಹಿಂದುಸ್ತಾನದಲ್ಲಿ ಇಷ್ಟು ಬಡತನವು ನೆಲೆಸಿರುವಾಗ ಬಹಳ ಜನರು ಕೂಲಿಮಾಡಿ ಹೊಟ್ಟೆ ಹೊರಕೊಳ್ಳುತ್ತಿರು ವಾಗ ದೊಡ್ಡ ಪ್ರಮಾಣದಲ್ಲಿ ಯಂತ್ರಗಳ ಉಪಯೋಗ ಬೇಡವೆಂದು ಪ್ರತಿಪಾದಿಸಿದರು. ಆದರೆ ಎಲ್ಲಿ ಮಾನವನ ಶಕ್ತಿಯಿಂದ ಮಾಡುವದು ಅಶಕ್ಯವೊ ಅಲ್ಲಿ ಯಂತ್ರ ಗಳನ್ನು ಉಪಯೋಗಿಸಬಹುದು. ಆ ಎಲ್ಲ ಫ್ಯಾಕ್ಟರಿಗಳು, ಉದ್ಯೋಗಗಳು ಸರಕಾರನ ಕೈಯಲ್ಲಿ ಹೋಗಬೇಕು ಎಂದು ಅಭಿಪ್ರಾಯ ಪಟ್ಟಿರುವರು.

ಪರಿಶೀಲಿಸಿ ನೋಡಿದರೆ, ನಮ್ಮ ದೇಶಕ್ಕೆ ಹಳ್ಳಿಗಳ ಪುನ ರುದ್ಧಾರದಿಂದಲೆ ಹೆಚ್ಚು ಕಲ್ಯಾಣವೆಂಬುದು ಸ್ಪಷ್ಟವಾಗು ವದು. ಹೆಚ್ಚು ಜನರು ಒಕ್ಕಲತನವನ್ನು ಅವಲಂಬಿಸಿ ಹಳ್ಳಿಯಲ್ಲಿಯೇ ಇರುವದು ಅವಶ್ಯಕವಾದುದರಿಂದ, ಸದಾ– ಕಾಲ ಅವರು ಹಳ್ಳಿಯಲ್ಲಿಯೇ ಇರುವದು ಅವಶ್ಯಕವಾದುದ ರಿಂದ ಅವರಿಗೆ ಫ್ಯಾಕ್ಟರಿ ಮೊದಲಾದವುಗಳಿಗೆ ಹೋಗಿ ಬೇರೆ ಉತ್ಪನ್ನವನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ–ಅದಕ್ಕೆ ಬೇರೆ ಬೇರೆ ಕೈಗಾರಿಕೆಗಳೇ ಮೂಲ ಉಪಾಯವು.

ದೇಶದ ಆರ್ಥಿಕ ಪದ್ಧತಿಯೂ ರಾಜಕೀಯ ಪದ್ಧತಿ ಯೂ, ಒಂದನ್ನೊಂದು ಬಹಳ ಅವಲಂಬಿಸಿವೆ ಎಂಬುದನ್ನು ನಾವು ಮರೆಯಬಾರದು. ನಿಜವಾಗಿಯೂ ನ್ಯಾಯಬದ್ಧ

ವಾದ ಪ್ರಜಾ-ಪ್ರಭುತ್ವವು ನಮ್ಮಲ್ಲಿ ನೆಲೆಗೊಳ್ಳಬೇಕು. ಎಂಬ ಅಭಿಪ್ರಾಯವಿದ್ದರೆ, ಈ ಕೈಗಾರಿಕೆಗಳಿಗೆ ಹೆಚ್ಚಾದ ಪ್ರೋತ್ಸಾಹನವನ್ನು ಕೊಡಲೇಬೇಕಾಗುವದು,—ಮತ್ತು ಪ್ರಜಾಪ್ರಭುತ್ವವು ಸಿದ್ಧಿಸಬೇಕಾದರೆ, ಜನರಲ್ಲಿ ತಿಳವಳಿಕೆ ಉಂಟಾಗಿ ಅವರು ಬುದ್ಧಿವಂತರಾಗಿ ಎಲ್ಲರಲ್ಲಿಯೂ ಉತ್ತಮ ಗುಣಗಳು ನೆಲೆಗೊಂಡು, ಐಕ್ಯ ಭಾವನೆ, ಸಂಘ-ಟನೆಗಳುಂಟಾಗಿ ಜನರಲ್ಲಿ ಪ್ರೇಮಾದರಗಳು ಉತ್ಪನ್ನವಾಗಿ ಎಲ್ಲರಲ್ಲಿ ಬಂಧುತ್ವವು ನೆಲೆಗೊಳ್ಳಬೇಕಾಗುವದು ಅವಶ್ಯಕವು. ಇದು ಕೈಗಾರಿಕೆಗಳಿಂದ ಸಾಧಿಸುವದಲ್ಲದೆ ದೊಡ್ಡ ಪ್ರಮಾಣದಲ್ಲಿಯ ಯಾಂತ್ರಿಕ ಉದ್ಯೋಗಗಳಿಂದ ಸಾಧ್ಯವಾಗಲಾರದು.

ಇನ್ನು ಕೆಲವರು ಈ ಯಾಂತ್ರಿಕ ಯುಗದಲ್ಲಿ ಒಂದು ದೇಶವು ಮತ್ತೊಂದು ದೇಶವನ್ನು ಅವಲಂಬಿಸಿರುವಾಗ ಒಂದು ದೇಶವು ಈ ರೀತಿ ಸ್ವತಂತ್ರವಾಗಿಯೂ ಎಲ್ಲವನ್ನು ಧಿಕ್ಕರಿಸಿ ಬದುಕುವದು ಸಾಧ್ಯವಿಲ್ಲವಾದ್ದರಿಂದ ಜೀವನ ಮಟ್ಟವು ಅಷ್ಟೊಂದು ಏರಲಾರದು; ಕೇವಲ ಚಳವಳಿಗೆ ಅನುಕೂಲವಾದ ವಾತಾವರಣವನ್ನು ಹುಟ್ಟಿಸುವದಕ್ಕಾಗಿ ಈ ದಾರಿ ಹಿಡಿಯಲ್ಪಟ್ಟಿರುವದು. ಇದು ಅಸಾಧ್ಯವಾದ ಮಾತು ಎಂದು ವಿರೋಧಿಸುವರು.

ಏನೇ ಆದರೂ, ಇಷ್ಟು ಮಾತ್ರ ನಿಜ; ಯಾವದೆ ಆರ್ಥಿಕ ಪದ್ಧತಿಯಾದರೂ ಎಲ್ಲರಿಗೂ ಕಲ್ಯಾಣ ದೊರಕ ಬೇಕಾದರೆ ಈ ಕೈಗಾರಿಕೆಗಳಿಗೆ ಯೋಗ್ಯ ಸ್ಥಾನವದೆ ಎಂಬ ದನ್ನು ನಾವು ಮರೆಯಬಾರದು. ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳು ನಡೆಯಬೇಕು ಎಂದು ಮನಗಂಡು ಮ ಗಾಂಧಿಯವರು ಹಾಕಿ ಕೊಟ್ಟ ಹಳ್ಳಿಗಳ ಕೈಗಾರಿಕೆಗಳನ್ನು ನಾವು ಮರೆಯಬಾರದು. ಅವರದು ಶಾಂತಿ ಮಾರ್ಗ ಆ ಮಾರ್ಗಕ್ಕೆ ಅನುಸರಿಸಿ ಆರ್ಥಿಕ ಪದ್ಧತಿಯನ್ನು ತೋ ಸಿದ್ದಾರೆ. ಇದು ಯಾವಾಗಲೂ ಅನಿವಾರ್ಯವು. ಅವ ಪದ್ಧತಿಯನ್ನು ಅನುಸರಿಸಿದಾಗಲೇ ಜಗತ್ತಿನ ಕಲ್ಯಾಣ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಂತ್ರಗಳ ಅವಲಂಬನ ದಿಂದ ಅಲ್ಲಿ ಸ್ವತಂತ್ರವಾದ, ನೈಸರ್ಗಿಕವಾದ ಜೀವನಕ್ಕೆ ಎಡೆ ಇಲ್ಲದಾಗಿದೆ. ಸ್ವತಂತ್ರ ವಿಚಾರ ಶಕ್ತಿ, ವೈಯುಕ್ತಿಕ ಸ್ವಾತಂತ್ರ್ಯ,ನೈಸರ್ಗಿಕ ಆನಂದ ಇವುಗಳಲ್ಲಿ ಯಾವದಕ್ಕೂ ಮಾರ್ಗವಿಲ್ಲದೆ ಕೃತಕವಾದ, ಅಸ್ವಾಭಾವಿಕವಾದ, ಒತ್ತಾ ಯದ ಜೀವನದಿಂದ ಮನುಷ್ಯನ ಶರೀರದ ಮೇಲೆ ಅನೇಕ ದುಷ್ಟ ಪರಿಣಾಮಗಳಾಗಿವೆ. ಅಲ್ಲಿಯ ರಾಜಕೀಯ ಆರ್ಥಿಕ, ಸಾಮಾಜಿಕ, ನೈತಿಕ ಜೀವನದಲ್ಲಿ ಅನೇಕ ದುಷ್ ಪರಿಣಾಮಗಳಾಗಿವೆ. ಅಲ್ಲಿಯ ಸಿರಿವಂತಿಕೆಯ ಬುಡದಲ್ಲಿ ಬಡತನವಿದೆ, ನಿರುದ್ಯೋಗಗಳ ಕೂಗು ಎಲ್ಲಿಯೂ ಕೇ ಬರುವದು. ಆ ಎಲ್ಲ ರಾಷ್ಟ್ರಗಳು ಹಿಂದುಸ್ತಾನದ ಕಡೆ ನೋಡುತ್ತಿವೆ. ಸರಿಯಾದ ದಾರಿ ತೋರುವ ಭಾರ ನಮ್ಮ ದೇಶದ ಮೇಲಿದೆ.



ಮುಂಬಯಿ ಸರಕಾರದ ಒಕ್ಕಲುತನ ಹಾಗೂ ಅರಣ್ಯ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ. ಪಾಟೀಲ ಮಲ್ಲನ ಗೌಡರು ವರ್ಧಾ ರಾಷ್ಟ್ರೀಯ ಅಧ್ಯಾಪಕ ಕೇಂದ್ರಕ್ಕೆ ಭೆಟ್ಟಿ ಕೊಟ್ಟಾಗಿನ ದೃಶ್ಯ.

ಖಾದಿಯೂ ಮಹಾತ್ಮರೂ.

ಖಾದಿ ಚಳುವಳಿಯೂ.

ಲೇಖಕರು:
ಶ್ರೀ. ಎ. ರಾ. ಮಂಗಳೂರ. ಬೇಸಿಕ್ ಟ್ರೇನಿಂಗ ಸೆಂಟರ್, ಧಾರವಾಡ.

ಮಾನ್ಯ ಅಧ್ಯಕ್ಷರೇ, ಹಾಗೂ ಸಭ್ಯ ಸಭಿಕರೇ, ನನ್ನ ಹಿರಿಕಿರಿಯ ಸದೋದ್ಯೋಗಿಗಳು ಮಹಾತ್ಮರ ಜೀವನದ ವಿವಿಧ ಚಟುವಟಿಕೆಗಳ ವಿಷಯವಾಗಿ ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ನಾನಾದರೂ ನನಗೆ ಕೊಟ್ಟ ಅಲ್ಪಾವಧಿಯಲ್ಲಿ ಮಹಾತ್ಮರ ವಿಧಾಯಕ ಕಾರ್ಯಕ್ರಮದ ಒಂದು ಮಹತ್ವದ ಅಂಗವಾದ ಖಾದೀ ವಿಷಯವನ್ನು ಕುರಿತು ನನಗೆ ತಿಳಿದ ಮಟ್ಟಿಗೆ ನಾಲ್ಕು ಮಾತುಗಳನ್ನಾಡಲು ಬಯಸಿರುವೆನು, ತಾವೆಲ್ಲರೂ ತಾಳ್ಮೆಯಿಂದ ಕೇಳುವಿರಾಗಿ ಬಿನ್ನವಿಸಿಕೊಳ್ಳುತ್ತೇನೆ.

ಮಾನವನ ಜೀವನಕ್ಕೆ ಹವೆ, ನೀರು, ಆಹಾರಗಳು ಅತಿ ಮುಖ್ಯ ಪ್ರಾಣಾಧಾರ ವಸ್ತುಗಳಾಗಿರುವವು. ಅದರಂತೆ ಬಟ್ಟೆಯೂ ಒಂದಾಗಿರುತ್ತದೆ. ಶರೀರದ ಬೆಳವಣಿಗೆಗೂ ಹಾಗೂ ಅವರ ಬದುಕುವಿಕೆಗೂ ಮಾನವನು ತನ್ನ ಕಾಯಕಷ್ಟದಿಂದ ಆಹಾರದ ಉತ್ಪಾದನೆ ಮಾಡಿಕೊಳ್ಳುವಂತೆ, ಅದೇ ಶರೀರದ ಜೋಪಾನಕ್ಕೂ ಮತ್ತು ಮಾನ ಮರ್ಯಾದೆಗಳನ್ನು ಕಾಯ್ದುಕೊಳ್ಳಲಿಕ್ಕೂ ಬಟ್ಟೆಯನ್ನು ಅವನು ತನ್ನ ಕೈಯಿಂದಲೇ ನೂತು ನೇಯ್ದುಕೊಳ್ಳಬೇಕಾಗುವದು. ಈ ರೀತಿಯ ಸ್ವಯಂಶ್ರಮದಿಂದ ಸಿದ್ಧವಾಗುವ ಬಟ್ಟೆಗೆ ಮಹಾತ್ಮಾ ಗಾಂಧಿಯವರು ತಮ್ಮ ಗುಜರಾಥೀ ಭಾಷೆಯಲ್ಲಿ 'ಖಾದಿ' ಎಂದು ಕರೆದಿದ್ದಾರೆ. ಇಂದಿನ ನಾಗರಿಕತೆಯಲ್ಲಂತೂ ಆಹಾರಕ್ಕಿಂತ ಬಟ್ಟೆಗೆ ಹೆಚ್ಚು ಮಹತ್ವ ಬಂದಿರುವದು. ಯಾಕಂದರೆ ಮಾನವನು ಒಂದು ಹೊತ್ತು ಊಟವಿಲ್ಲದಿದ್ದರೂ ಬಾಳಬಹುದು; ಆದರೆ ಬಟ್ಟೆಯಿಲ್ಲದೇ ಒಂದರ ಗಳಿಗೆಯನ್ನಾದರೂ ಸುಶಿಕ್ಷಿತರೆನ್ನಿಸಿಕೊಳ್ಳುವ ನಾವು ಕಳೆಯಲಾರೆವು. ಇದು ಎಲ್ಲರಿಗೂ ಗೊತ್ತಿದ್ದ ಮಾತಾಗಿರುತ್ತದೆ.

ಖಾದಿಯು ವೇದಕಾಲದ ಹಿಂದೆಯೇ ಉತ್ಪತ್ತಿಯಾಗಿದೆಂಬದಕ್ಕೆ ಋಗ್ವೇದದಲ್ಲಿ ಉಲ್ಲೇಖಗಳಿವೆ. "ಒಬ್ಬ ತರುಣ ಗಂಡನು ತನ್ನ ವಿವಾಹದ ಪ್ರಥಮ ದಿವಸದಲ್ಲಿಯೇ ತನ್ನ ಹೆಂಡತಿಯು ಸಿದ್ಧಮಾಡಿದ ಧೋತರವನ್ನುಟ್ಟುಕೊಂಡನು." ಎಂದು ಋಗ್ವೇದದಲ್ಲಿ ಹೇಳಿದೆ. ಮುಂದೆ ರಾಮಾಯಣ ಮಹಾಭಾರತ ಕಾಲಗಳಲ್ಲಿ ರೇಶಿಮೆ, ಉಣ್ಣೆ, ಹಾಗೂ ನೂಲಿನ ಬಟ್ಟೆಗಳು ಹೇರಳವಾಗಿ ಪ್ರಚಾರದಲ್ಲಿದ್ದವು. ವಾಲ್ಮೀಕಿ ರಾಮಾಯಣದಲ್ಲಿ ಸೀತಾದೇವಿಯ ಕರಂಡಕದಲ್ಲಿ "ಉಣ್ಣೆಯ ವಸ್ತ್ರಗಳೂ, ಅನೇಕ ಅಮೂಲ್ಯ ರತ್ನಗಳೂ, ರೇಶಿಮೆಯ ಮಡಿಗಳೂ, ನಾನಾವರ್ಣದ ಜರದ ಪೀತಾಂಬರಗಳೂ ಮುಂತಾದ ಬಹು ಬೆಲೆಯ ವಸ್ತು ಒಡವೆಗಳಿದ್ದವು" ಎಂದು ಉಲ್ಲೇಖಿಸಲ್ಪಟ್ಟಿದೆ. ಇದರಂತೆ ಮಹಾಭಾರತದಲ್ಲಿಯೂ ಬಟ್ಟೆಯನ್ನು ಕುರಿತು—ಬೇರೆ ಬೇರೆ ಉಲ್ಲೇಖಗಳಿವೆ. ಈ ರೀತಿಯಿಂದ ನಮ್ಮ ಪ್ರಾಚೀನ ಭಾರತದ ಬಟ್ಟೆಯ ವ್ಯವಸಾಯವು ಕ್ರಿಸ್ತಿಶಕ ಗಿಲನೇ ಶತಮಾನವ ಆರಂಭಕಾಲದವರೆಗೆ ಸಾಗುತ್ತಾ ಬಂದಿತ್ತೆಂಬದು ಇತಿಹಾಸ ಪ್ರಸಿದ್ಧವಿದೆ. ಇಷ್ಟು ದೀರ್ಘಕಾಲದ ಸತತ ಉದ್ಯೋಗದಿಂದ ಭಾರತವು ಬಟ್ಟೆಯ ವ್ಯವಸಾಯದಲ್ಲಿ ಸಾಕಷ್ಟು ಶ್ರೇಷ್ಠತೆಯನ್ನೂ ನೈಪುಣ್ಯವನ್ನೂ ಪಡೆದಿತ್ತು ಎಂಬದನ್ನು ಇತಿಹಾಸವು ಸಿದ್ಧಪಡಿಸುತ್ತದೆ. ಪ್ರಾಚೀನ ಕಾಲದಲ್ಲಿ ಬಟ್ಟೆಯನ್ನು ಶರೀರ ಹಾಗೂ ಮಾನ ಮರ್ಯಾದೆಗಳ ರಕ್ಷಣೆ, ಶೃಂಗಾರ, ವ್ಯಾಪಾರೀ ಆರ್ಥಿಕ ಲಾಭ, ಹಾಗೂ ಹಸ್ತಕೌಶಲ್ಯದ ಪ್ರದರ್ಶನಗಳು ಮುಂತಾದವಷ್ಟೇ ಉದ್ದೇಶ್ಯಗಳಿಗಾಗಿ ಉಪಯೋಗಿಸುತ್ತಿದ್ದರೆಂದು ತಿಳಿಯುತ್ತದೆ.

ಮುಂದೆ ಗಿಲನೆಯ ಶತಮಾನದ ಆರಂಭಕಾಲದಿಂದ ನಮ್ಮ ರಾಷ್ಟ್ರವು ಪರರ ಆಕ್ರಮಣಕ್ಕೆ ಒಳಗಾಗಿ ಅವರ ಯಾಂತ್ರಿಕ ಯುಗದ ದಬ್ಬಾಳಿಕೆಯಲ್ಲಿ ಸಿಕ್ಕು ತನ್ನ

ಪ್ರಾಚೀನ ಖಾದೀ ವ್ಯವಸಾಯದ ವೈಭವಗಳನ್ನೆಲ್ಲ ಕಳೆದುಕೊಂಡಿತು. ದೇಶದ ಮನೆಮನೆಗಳಲ್ಲಿ ಕಂಗೊಳಿಸುತ್ತಿದ್ದ ರಾಟೆಗಳು ಮೂಲೆಗುಂಪಾಗಿ ಬಟ್ಟೆಯ ವ್ಯವಸಾಯವು ನಿಂತಿತು. ರಾಷ್ಟ್ರವು ಅನ್ನ ವಸ್ತ್ರಗಳಿಗೆ ಪರಾವಲಂಬಿಯಾಗಿ ಶೋಕಪಡಲಾರಂಭಿಸಿತು. ರಾಷ್ಟ್ರೋದ್ಧಾರಕ್ಕಾಗಿ ತ್ರಿಕರಣ ಪೂರ್ವಕವಾಗಿ ಸೇವೆಗೈಯಲುಟೊಂಕಕಟ್ಟಿ ನಿಂತ ಮಹಾತ್ಮಾ ಗಾಂಧಿಯವರು ದೇಶಕ್ಕೊದಗಿದ ಈ ಸಂಕಟಮಯ ಪರಿಸ್ಥಿತಿಯನ್ನು ಯಾವ ಸುಲಭ ಸಾಧನದಿಂದ ಅಹಿಂಸಾ ಪೂರ್ವಕವಾಗಿ ನಿವಾರಿಸಿ, ಜನಾಂಗದ ನೈತಿಕ, ಸಾಮಾಜಿಕ, ಔದ್ಯೋಗಿಕ, ರಾಜಕೀಯ ಕಲ್ಯಾಣವನ್ನು ಸಾಧಿಸಲಿಕ್ಕೆ ಬಂದೀತು ಎಂದು ದೀರ್ಘವಾಗಿ ವಿಚಾರಿಸಿ, ಖಾದೀವ್ರತೋಪಾಸನೆಯನ್ನು ಕೈಕೊಂಡರು. ಇದೇ ಭಾರತದ ಖಾದೀ ಪುನರುತ್ಥಾಪನೆಯು.

ಬಾಪೂಜಿಯವರು ಮೊಟ್ಟಮೊದಲು ತಾವು ಸ್ವತಃ ರಾಟೆಯಿಂದ ನೂಲಲಿಕ್ಕೆ ಆರಂಭಿಸಿ ನಂತರ ನಮ್ಮ ದೇಶಬಾಂಧವರನ್ನು ಕುರಿತು "ಮೇಟಿ-ರಾಟೆಗಳು ನಮ್ಮ ರಾಷ್ಟ್ರದ ಸ್ವಾವಲಂಬನದ ಆಧಾರಸ್ತಂಭಗಳು; ಪವಿತ್ರವಾದ ರಾಟೆಯನ್ನು ನಮ್ಮ ಮನೆಯಿಂದ ತಳ್ಳಿಹಾಕಿದ್ದರಿಂದಲೇ ನಾವು ಈಗ ಪರಾವಲಂಬಿಗಳು—ದುಃಖಿಗಳೂ ಆಗಿದ್ದೇವೆ. ಜನಾಂಗದ ಉದ್ಧಾರಕ್ಕೆ ರಾಟೆಯು ಬಹು ಮುಖ್ಯವಾಗಿದೆ. ಶುದ್ಧ ಮತ್ತು ಅಹಿಂಸಾ ಯುಕ್ತವಾದ ಖಾದಿಯ ಉತ್ಪಾದನೆಗಾಗಿ ರಾಷ್ಟ್ರದ ಪ್ರತಿವ್ಯಕ್ತಿಯೂ ರಾಟೆಯನ್ನು ತಡವಿಲ್ಲದೇ ಕೈಯಲ್ಲಿ ಹಿಡಿಯಬೇಕು" ಎಂದು ಸಾರಿದರು. "ಹಿರಿಯಕ್ಕನ ಜಾಳಿ ಮನೆ ಮಂದಿಗೆಲ್ಲ" ಎಂಬ ತತ್ವವನ್ನನುಸರಿಸಿ ಮಹಾತ್ಮರು ಈ ಖಾದೀ ಪ್ರಚಾರವನ್ನು ಎಲ್ಲಕ್ಕೂ ಮೊದಲು ಸುಶಿಕ್ಷಿತರಾದ ರಾಷ್ಟ್ರ ಮುಖಂಡರಲ್ಲಿ ಆಚರಣೆಗೆ ತರದವಿನಃ ಇದು ಸಾಮಾನ್ಯ ಜನರಲ್ಲಿ ಪ್ರಚಾರವಾಗಲಾರದೆಂದು ನಿರ್ಧರಿಸಿ ಅದರಂತೆ ರಾಷ್ಟ್ರ ಮುಖಂಡರಿಗೆ ಖಾದೀ-ವ್ರತೋಪಾಸನೆಯ ಉಪದೇಶ ಕೊಟ್ಟರು. ರಾಷ್ಟ್ರ ಮುಖಂಡರೆನ್ನುವವರೆಲ್ಲ ಕಾಂಗ್ರೆಸ್ಸಿನಲ್ಲಿದ್ದ ಮೂಲಕ "ಇನ್ನು ಮುಂದೆ ಕಾಂಗ್ರೆಸದ ಯಾವದೇ ಮುಖಂಡನು, ಕಾರ್ಯಕರ್ತನು, ಇಲ್ಲವೇ ಸದಸ್ಯನು ಖಾದೀ ಧಾರಿಯೂ, ಅದರ ಉತ್ಪಾದಕನೂ ಪ್ರಚಾರಕನೂ ಆಗಲೇಬೇಕು. ಎಂಬ ನಿರ್ಭಂಧವನ್ನು ಹಾಕಿದರು. ಇದರಿಂದ ಶ್ರೀಮಂತ ಸುಶಿಕ್ಷಿತರೂ ರಾಷ್ಟ್ರ ಮುಖಂಡರೂ ಆಗಿದ್ದ ಮೋತೀಲಾಲ ನೆಹರು ರವರೇ ಆದಿಯಾಗಿ ತಾವು ನಿತ್ಯದಲ್ಲಿಯೂ ಧರಿಸುತ್ತಿದ್ದ ಉಡುವುಗಳನ್ನು ಬಿಟ್ಟು ರಾಟೆಯಿಂದ ಕೈನೂಲಿನ ಖಾದೀ ಧಾರಿಗಳಾಗಬೇಕಾಯಿತು. ಅಲ್ಲದೇ ಅದರ ಉತ್ಪಾದಕರ ಪ್ರಚಾರಕರೂ ಆಗುವದು ಅವರಿಗೆ ಅನಿವಾರ್ಯವಾಯಿತ ಈ ರೀತಿಯಿಂದ ಸತ್ಯ ಮತ್ತು ಅಹಿಂಸಾ ತತ್ವದಿಂದೊಡಗ ಡಿದ ಖಾದಿಯಿಂದ ಸುಶಿಕ್ಷಿತರಲ್ಲಿಯೇ ಸ್ವಾವಲಂಬ ಹಾಗೂ ಸ್ವದೇಶಾಭಿಮಾನಗಳನ್ನು ಬಿತ್ತಿದರು.

ಮಹಾತ್ಮರ ಹಾಗೂ ಕಾಂಗ್ರೆಸ್ಸಿನ ಅಹಿಂಸಾಯು ವಾದ ಖಾದೀ ಉತ್ಪಾದನೆ, ಹಾಗೂ ಅದರ ಪ್ರಚಾರಗಳಿಂ ಸ್ವರಾಜ್ಯ ಸಾಧಿಸುವದು ಅಸಾಧ್ಯವೆಂದು ಕಾಂಗ್ರೆಸ್ಸಿ ಹೊರಗಿದ್ದ ಅನೇಕ ಸುಶಿಕ್ಷಿತರು ಬೇರೆ ಬೇರೆ ರೀತಿಯಿಂ ಟೀಕೆ—ಟಿಪ್ಪಣಿಗಳನ್ನೆಬ್ಬಿಸಲಾರಂಭಿಸಿದರು. ಇವರ ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವದಕ್ಕಾಗಿ ಹೀಗೆ ಅಂದಿದ್ದಾರೆ:— "ನಮ್ಮ ಮಾತೃಭಾಷೆಯಲ್ಲಿ ನಮಗೆ ಅಭಿ ವಿಲ್ಲದಿದ್ದರೆ, ನಮ್ಮ ಬಟ್ಟೆ ನಮ್ಮ ಮನಸ್ಸಿಗೆ ಬಾರದಿದ್ದರೆ, ನಮ್ಮ ಉಡುಪು ನಮಗೆ ಸೇರಿಕೆಯಾಗದಿದ್ದರೆ, ನಮ್ಮ ಆಹಾರ ನಮಗೆ ರುಚಿಸದಿದ್ದರೆ, ನಮ್ಮ ಜನರು ನಮ್ಮೊಡನೆ ಇರಲು ಅಯೋಗ್ಯರೆನಿಸಿದರೆ, ನಮ್ಮ ಸಂಸ್ಕೃತಿಯು ನಮಗೆ ದೋಷಯುಕ್ತವೆಂದು ಕಂಡುಬಂದರೆ ನನಗೆ ಸ್ವರಾಜ್ಯದ ಅರ್ಥವೇ ತಿಳಿಯುವದಿಲ್ಲ. ನಿಜವಾದ ದೇಶೀಯರೆನ್ನುವವರು ತಮ್ಮ ದೇಶದಲ್ಲಿ ಉತ್ತಮವಾದದ್ದೆಂದು ತೋರುವ ಎಲ್ಲ ಅಂಶಗಳ ಪಾಲನೆಯನ್ನು ಮಾಡುತ್ತಾರೆ. ಖಾದಿಯು ಅಂಥ ಶುದ್ಧ ಮತ್ತು ಪವಿತ್ರ ಸ್ವದೇಶಿಯ ಅರ್ಥವನುಂಟು ಮಾಡುವದು."

ಮಹಾತ್ಮರ ಈ ಮಾತಿನ ಅರ್ಥವನ್ನು ತಿಳಿದು ಬಹಳ ಜನರು ಖಾದೀ ಧರಿಸಲಾರಂಭಿಸಿದರು. ಖಾದೀ ಧಾರಿಗಳು ಅದರ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂಬ ನಿಯಮವಿದ್ದಮೂಲಕ ಖಾದೀ ಧಾರಣ ಹಾಗೂ ಅದರ ಪ್ರಚಾರ ಈ ಕಾರ್ಯಗಳು ಒಂದರ ಹಿಂದೊಂದು ಸಮುದ್ರದ ಅಲೆಗಳಂತೆ ಸುಶಿಕ್ಷಿತರಲ್ಲಿ ಹರಡಲಾರಂಭಿಸಿದವು. ಹೀಗೆ ಸುಶಿಕ್ಷಿತರಲ್ಲಿಯೇ ಸ್ವಯಂಶ್ರಮ ಮಾಡಬೇಕೆಂಬ ತತ್ವವನ್ನು ತಿಳಿಸಿ ವಸ್ತ್ರ ಸ್ವಾವಲಂಬನದ ರೀತಿಯನ್ನು ಖಾದಿಯಿಂದ ಸಿದ್ಧಪಡಿಸಿದ್ದಾರೆ.

ಮಹಾತ್ಮರು ಸಾಬರಮತಿ, ಬಾರ್ಡೋಲಿ, ವರ್ಧಾ ಈ ಸ್ಥಳದಲ್ಲಿ ಖಾದೀ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿದರು. ಮತ್ತು ಈ ಕೇಂದ್ರಗಳಲ್ಲಿ ದೇಶದ ಅನೇಕ ನಿರುದ್ಯೋಗಿಗಳಿಗೆ ನೂಲುವ, ನೇಯುವ, ಕಲೆಯನ್ನು ಕಲಿಸುವಂತೆ ಮಾಡಿ, ಅವರಿಗೆ ಅಲ್ಲಿ ಉದ್ಯೋಗವನ್ನು ದೊರಕಿಸಿಕೊಟ್ಟರು; ಇದರಿಂದ ದೇಶದ ನಿರುದ್ಯೋಗ

ಶನದ ನಿವಾರಣೆಯನ್ನು ಖಾದಿಯು ಹೇಗೆ ಸಾಧಿಸುವ ದೆಂಬುದು ಸ್ಪಷ್ಟವಾಗುವಂತಿದೆ.

ಖಾದೀ ಪ್ರಚಾರವು ಸಾಮಾನ್ಯಜನರಲ್ಲಿಯೂ ಮತ್ತು ಶ್ರೀಮಂತರಲ್ಲಿಯೂ ಹೆಚ್ಚಾಗಿ ಆಗಬೇಕೆಂಬುದೇ ಮಹಾತ್ಮರ ಮನೀಷೆಯಾಗಿತ್ತು. ಆದಕ್ಕಾಗಿ ಅವರು ೧೯೨೫ರಲ್ಲಿ ಕಾಂಗ್ರೆಸ್ಸಿನ ಹೊರಗೆ ಸ್ವತಂತ್ರವಾಗಿ "ಅಖಿಲ ಭಾರತ ಚರಖಾ ಸಂಘ" ಎಂಬ ಸಂಘವನ್ನು ಸ್ಥಾಪಿಸಿ ಖಾದೀ—ವ್ಯವಸಾಯದ ಎಲ್ಲ ಕಾರ್ಯಕ್ರಮವನ್ನು ಈ ಸಂಘಕ್ಕೆ ಒಪ್ಪಿಸಿದರು. ಮತ್ತು ಈ ಸಂಘಕ್ಕೆ ಕಾಂಗ್ರೆಸು ಎಲ್ಲ ರೀತಿಯಿಂದಲೂ ಹಾಯ ಸೌಕರ್ಯಗಳನ್ನು ಒದಗಿಸಬೇಕೆಂದು ಗೊತ್ತುಪಡಿಸಲಾಯಿತು. ಸನ್ ೧೯೨೫ರಿಂದ ಈ ಸಂಘವೇ ಖಾದೀ ಉತ್ಪಾದನೆ, ಪ್ರಚಾರ ಕಾರ್ಯ, ಹೊಸಕೇಂದ್ರಗಳ ಸ್ಥಾಪನೆ, ಹಾಗೂ ಹೊಸ ಹೊಸ ಸಂಶೋಧನಾಲಯಗಳು, ಖಾದೀ ಭಾಂಡಾರ, ಇವುಗಳಿಗಾಗಿ ಕಾರ್ಯಕರ್ತರನ್ನೂ—ಕೆಲಸಗಾರರನ್ನೂ ನಿಯಮಿಸಿಕೊಳ್ಳುವದು, ಇತ್ಯಾದಿ ಎಲ್ಲ ಕಾರ್ಯಗಳನ್ನು ಶಿಸ್ತಿನಿಂದಲೂ, ಪ್ರಗತಿಪರವಾಗಿಯೂ, ಇಂದಿಗೂ ನಡಿಸುತ್ತಲಿದೆ. ಈ ಸಂಘವು ಸನ್ ೧೯೪೪ರಲ್ಲಿ ೧೮೪ಕೋಟಿ ಗಜ ಖಾದೀ ಬಟ್ಟೆಯನ್ನು ಸಿದ್ಧಪಡಿಸಿದೆ. ಇದರ ಮೂಲ ಬೆಲೆಯು ೯೩ಕೋಟಿ ರೂಪಾಯಿ, ಮಾರಿದ ಬೆಲೆಯು ೧೨ಕೋಟಿ ರೂಪಾಯಿ, ಆಗಿರುವದು. ಅಲ್ಲದೇ ಕೆಲಸಗಾರರಲ್ಲಿ—ನೂಲುವವರಿಗೆ ೨೩ಕೋಟಿ ರೂಪಾಯಿ, ನೇಯುವವರಿಗೆ ೩ಕೋಟಿ ರೂಪಾಯಿ. ಅನ್ಯ ಕೆಲಸಗಾರರಿಗೆ ೬೬ಲಕ್ಷ ೭೦ಸಾವಿರ ರೂಪಾಯಿಗಳನ್ನು ಈ ಸಂಘವು ಕೊಟ್ಟಿರುವದು. ಈ ಅಂಕೆಗಳನ್ನು ನೋಡಿದರೆ ಮಹಾತ್ಮರು ಖಾದಿಯಮೂಲಕ ವಸ್ತ್ರ ಸ್ವಾವಲಂಬನವನ್ನುಂಟುಮಾಡಿ ದೇಶದ ಆರ್ಥಿಕ ಪರಿಸ್ಥಿತಿಯನ್ನು ಹೇಗೆ ಸುಧಾರಿಸಲೆತ್ನಿಸಿದರೆಂಬದು ತಿಳಿದುಬರುವದು. ಮತ್ತು ಅದೇ ವರ್ಷ ಈ ಸಂಘದಲ್ಲಿ ೧ಲಕ್ಷ ೮೫ಸಾವಿರಕ್ಕೆ ಮೇಲ್ಪಟ್ಟು ಹಿಂದುಗಳು, ೪೬ಸಾವಿರಕ್ಕೆ ಮೇಲ್ಪಟ್ಟು ಮುಸಲ್ಮಾನರು, ೧೨ ಸಾವಿರಕ್ಕೆ ಮೇಲ್ಪಟ್ಟು ಇತರರು ಕೆಲಸಗಾರರಿದ್ದರು ಮತ್ತು ಖಾದೀ ಉದ್ಯೋಗಕ್ಕೆ ಪೂರಕ ಉದ್ಯೋಗಿಗಳಾದ ಬಳೆಗಾರರು, ಅಚ್ಚುಹಾಕುವವರು, ಬಡಿಗರು, ಪಿಂಜಾರರು ಮೊದಲಾದವರಲ್ಲಿ ಭಿನ್ನ ಭಿನ್ನ ಜಾತಿಮತಗಳವರು ಸಮಾವೇಕವಾಗಿದ್ದಾರೆ. ಇದನ್ನೆಲ್ಲ ನೋಡಿದರೆ ಖಾದಿಯಿಂದ ಜಾತೀಯ ಐಕ್ಯ, ಸಾದಾ ಮತ್ತು ಸರಳ ಜೀವನ, ಹಾಗೂ, ಗ್ರಾಮೋದ್ಯೋಗಗಳ ಬೆಳವಣಿಗೆಗಳು ಹೇಗೆ ಸಾಧಿಸಿದವೆಂಬ ಕಲ್ಪನೆ ಆಗುವಂತೆ ಇದೆ. ಇಷ್ಟಾದರೂ ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ೩ರಷ್ಟು ಜನರು ಸಹ ಇನ್ನೂ ಖಾದೀ ಧಾರಿಗಳಾಗಿರುವದಿಲ್ಲ.

ಈ ರೀತಿಯಿಂದ ಮಹಾತ್ಮಾ ಗಾಂಧೀಜಿಯವರು ಖಾದಿಯ ಮಹತ್ವವನ್ನು ಕಂಡುಹಿಡಿದು ಅದರ ಉತ್ಪಾದನೆ, ಧಾರಣೆ, ಪ್ರಚಾರ ಈ ಕಾರ್ಯಗಳನ್ನು ಕೈಕೊಂಡು, ಭಾರತೀಯರಾದ ನಮ್ಮನ್ನು ಸ್ವಯಂಶ್ರಮಿಗಳೂ, ಸ್ವಾವಲಂಬಿಗಳೂ, ಸ್ವದೇಶಾಭಿಮಾನಿಗಳೂ ಆಗುವಂತೆ ಮಾಡಿದ್ದಲ್ಲದೆ ನಮ್ಮನ್ನು ಸಂಘಟಿಸಿ ಕೇವಲ ಸತ್ಯ ಮತ್ತು ಅಹಿಂಸೆಯಿಂದಲೇ ಅತ್ಯಲ್ಪಕಾಲದಲ್ಲಿ ಸ್ವಾತಂತ್ರ್ಯ ಗಳಿಸಿಕೊಟ್ಟರು. ವಸ್ತ್ರಸ್ವಾವಲಂಬನದ ಮಾರ್ಗದರ್ಶಿಕ ಪತಾಕೆಯೆಲ್ಲಿದ್ದ ರಾಟೀಯೇ ಇಂದು ರೂಪಾಂತರವನ್ನು ಹೊಂದಿ, ಅಹಿಂಸಾ ತತ್ವದಿಂದೊಡಗೂಡಿದ—ಅಶೋಕ ಚಕ್ರವೆಂಬ ನಾಮನಿರ್ದೇಶದಿಂದ ಸ್ವತಂತ್ರ ಭಾರತದ ತ್ರಿವರ್ಣರಂಜಿತ-ರಾಷ್ಟ್ರಧ್ವಜದಲ್ಲಿ ಮಿನುಗುತ್ತಿರುವದು. ಈ ಧ್ವಜಕ್ಕೂ ಇದರ ಹಿನ್ನೆಲೆಯಾದ ರಾಟೆಗೂ, ರಾಟೆಯ ಪುನರುದ್ಧಾರಕರಾದ ಮಹಾತ್ಮಾ ಗಾಂಧೀಜಿಯವರಿಗೂ ನಾವು ಯೋಗ್ಯ ಗೌರವಾಭಿಮಾನಗಳನ್ನು ತೋರಿಸಬೇಕಾಗಿದ್ದರೆ ಆ ಮಹಾತ್ಮರ ಮನೀಷೆಯಂತೆ ಭಾರತೀಯರೆಲ್ಲರೂ ಖಾದಿಯ ಸಂಪೂರ್ಣವಾಗಿ ಉತ್ಪಾದಕರೂ, ಧಾರಕರೂ, ಪ್ರಚಾರಕರೂ ಆಗಲಿಕ್ಕೆಬೇಕು- ಈ ಕಾರ್ಯವನ್ನು ಪೂರ್ಣಗೊಳಿಸುವ ಹೊಣೆಯು ನಮ್ಮೆಲ್ಲರನ್ನು ಕೂಡಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ಗಾಂಧೀಜಿ.

ಶಿಕ್ಷಣತಜ್ಞ ಗಾಂಧೀಜಿ

ಶ್ರೀ. ಎಚ್. ಕೆ. ಕೆರೂರ. ಬೇಸಿಕ್ ಟ್ರೇನಿಂಗ್ ಸೆಂಟರ, ಧಾರವಾಡ.

ಪೂರ್ವಕಾಲದಿಂದಲೂ ಭಾರತೀಯರು ಜನತೆಯ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುತ್ತ ಬಂದಿರುವರೆಂಬದು ಭಾರತದ ಶಿಕ್ಷಣದ ಇತಿಹಾಸದಿಂದ ತಿಳಿದು ಬರುತ್ತದೆ. ಮಾನವನು ಹುಟ್ಟಿದೊಡನೆ ಕೆಲವು ಅನುವಂಶಿಕ ಗುಣಗಳು ಬಂದಿರುವವೆಂದು ಅವುಗಳಿಗೆ ಒಂದು ಬಗೆಯ ಯೋಗ್ಯ ಸಂಸ್ಕಾರ ಕೊಡುವದು ಅಗತ್ಯವೆಂದು ನಮ್ಮ ಪೂರ್ವಜರು ಅರಿತಿದ್ದರು. ವ್ಯಕ್ತಿಯಲ್ಲಿಯ ದುಷ್ಟ ಪ್ರವೃತ್ತಿಗಳನ್ನು ನಿಗ್ರಹಿಸುವಂತೆಯೂ ಶಿಷ್ಟ ಪ್ರವೃತ್ತಿಗಳನ್ನು ಪ್ರೋತ್ಸಾಹಿಸುವಂತೆಯೂ ಸಂಸ್ಕಾರವನ್ನುಂಟುಮಾಡುವದೇ ಶಿಕ್ಷಣದ ಮೂಲ ಉದ್ದೇಶವಾಗಿದ್ದಿತು. ಶಿಕ್ಷಣವೆಂದರೆ ಬರಿ ಓದು, ಬರೆಹವಲ್ಲ. ಶಾರೀರಿಕ, ಬೌದ್ಧಿಕ, ಆಧ್ಯಾತ್ಮಿಕ ವಿಕಾಸ. ಈ ಬಗೆಯ ಮಾನವನ ಸರ್ವತೋಮುಖ ವಿಕಾಸದ ಕಾರ್ಯವು ಭರತ ಖಂಡದಲ್ಲಿ ಉಸಿರಿನಷ್ಟಾಲದಿಂದಲೂ ನಡೆದು ಬಂದಿದೆ. ಅಂದು ಗುರುಕುಲದಲ್ಲಿ ದೊರೆಯುತ್ತಿದ್ದ ಶಿಕ್ಷಣ ಕೇವಲ ವೇದಾಂತವಲ್ಲ. ಶಾರೀರಿಕ, ಮಾನಸಿಕ, ಆಧ್ಯಾತ್ಮಿಕ, ಶಕ್ತಿಗಳ ವಿಕಾಸವು. ಈ ಬಗೆಯ ಶಿಕ್ಷಣ ಪರಂಪರೆಯು ನಮ್ಮ ನಾಡಿನಲ್ಲಿ ಬ್ರಿಟಿಶರ ಆಳಿಕೆಯು ಆರಂಭವಾಗುವ ವರೆಗೂ ನಡೆದಿದ್ದಿತು. ಅಂದು ಸುಶಿಕ್ಷಿತರ ಸಂಖ್ಯೆಯು ಇಂದಿನಕಿಂತಲೂ ಹೆಚ್ಚಾಗಿದ್ದಿತೆಂದು ತಿಳಿದು ಬರುತ್ತದೆ. ಬ್ರಿಟಿಶರ ಆಳಿಕೆಯ ಆರಂಭದಿಂದ ನಮ್ಮ ಶಿಕ್ಷಣದ ಗುರಿಯು ಬದಲಾಯಿತು. ಬದಲಾಯಿತೆನ್ನುವದಕ್ಕಿಂತಲೂ ಗುರಿಯೇ ಇಲ್ಲದಾಯ್ತೆನ್ನುವದು—ಹೆಚ್ಚು ಯೋಗ್ಯವಾಗುವದು. ಮೆಕಾಲೆ ಸಾಹೇಬರ ಮುತ್ಸದ್ದಿತನದ ಪರಿಣಾಮವಾಗಿಯೂ, ನಮ್ಮ ಜನತೆಯ ಅಜ್ಞಾನ, ಜಡತ್ವಗಳ ಮೂಲಕವಾಗಿಯೂ, ಶಿಕ್ಷಣದಲ್ಲಿಯ ನಮ್ಮ ಸಂಸ್ಕೃತಿಯ ಸ್ಥಾನವನ್ನು ಆಂಗ್ಲ ಸಂಸ್ಕೃತಿಯು ಆಕ್ರಮಿಸಿತು. ರಾಜಕೀಯ ದಾಸ್ಯದೊಡನೆ, ಸಾಂಸ್ಕೃತಿಕ ದಾಸ್ಯವೂ ಬೆರೆತು, ನಮ್ಮ ಸಮಾಜದಲ್ಲಿಯ ರಾಷ್ಟ್ರೀಯತೆಯು ಅಳಿದು, ಅರಾಷ್ಟ್ರೀಯತೆಯು ಬೆಳೆಯಲಾರಂಭಿಸಿತು. ಪರಭಾಷೆಯ ಪ್ರೀತಿ, ಪರ ಸಂಸ್ಕೃತಿಯ ವ್ಯಾಮೋಹ ಬೆಳೆದಂತೆ. ಸ್ವಭಾಷೆ, ಸ್ವಸಂಸ್ಕೃತಿಯ ಬಗ್ಗೆ ತಿರಸ್ಕಾರ ಉಂಟಾಗ ತೊಡಗಿತು. ಮೇಲು ಕೀಳು, ಶ್ರೀಮಂತ ಬಡವ, ಎಂಬ ಭೇದ ಉಂಟಾಗಿ ಐಕ್ಯತೆಯು ಅಳಿದು ಸಾಮಾಜಿಕ ಜೀವನವೇ ಸಡಿಲುಗೊಳ್ಳಹತ್ತಿತು. ಆಚಾರ—ವಿಚಾರ, ರೀತಿ-ನೀತಿಗಳಲ್ಲಿ ಆಂಗ್ಲ ಸಂಸ್ಕೃತಿಯು ಬೇರೂರಿತು. ತತ್ಪರಿಣಾಮವಾಗಿ (ವಿಲಾಸ) ಐಹಿಕ ಭೋಗದತ್ತ ನಮ್ಮ ಸಮಾಜದ ದೃಷ್ಟಿ ಹೊರಳಿತು. ಸಾದಾ ಸರಳ ಜೀವನದ ಸ್ಥಳದಲ್ಲಿ ಆಡಂಬರದ ಜೀವನವು ಆರಂಭವಾಯಿತು. ಆಂಗ್ಲ ಭಾಷೆಯ ಜ್ಞಾನ ಪಡೆದವರೇ ಸುಸಂಸ್ಕೃತರು. ಇನ್ನುಳಿದವರು ಅಸಂಸ್ಕೃತರು ಎಂಬ ಭಾವನೆಯು ಜನತೆಯಲ್ಲಿ ಉಂಟಾಯಿತು. ಬ್ರಿಟಿಶರು ಶಿಕ್ಷಣ ಕ್ಷೇತ್ರದಲ್ಲಿಯೂ ಭೇದ ನೀತಿಯನ್ನು ಅನುಸರಿಸಿ ಜಾತೀಯತೆಯ ವಿಷಬೀಜವನ್ನು ಬಿತ್ತಿದರು. ಅದರಿಂದ ಅದೆಷ್ಟೋ ತಲೆಮಾರುಗಳಿಂದ ಅಣ್ಣ ತಮ್ಮಂದಿರಂತಿದ್ದ ಹಿಂದೂ—ಮುಸಲ್ಮಾನರು, ಒಬ್ಬರನ್ನೊಬ್ಬರು ಸಾಶಂಕ ದೃಷ್ಟಿಯಿಂದ ನೋಡುವಂತಾಯಿತು. ಕೊನೆಗೆ ಪರಸ್ಪರರು ಕಡುವೈರಿಗಳೆಂದು ಬಗೆದರು. ಸಾಮಾಜಿಕ ಜೀವನದಲ್ಲಿ ಅಶಾಂತಿ, ದುಃಖ, ದ್ವೇಷ, ಅಸೂಯೆಗಳು ತಲೆಯೆತ್ತಿದವು. ಎಲ್ಲೆಡೆಯಲ್ಲಿಯೂ

ಜಾತೀಯತೆಯ ತಾಂಡವ ನೃತ್ಯ ನಡೆಯಿತು. ಇದೆಲ್ಲವೂ ಆಳರಸರ ಶಿಕ್ಷಣದ ಫಲಿತಾಂಶ.

ಬ್ರಿಟಿಶ್ ಸರಕಾರವು ಭಾರತೀಯರಿಗೆ ಕೊಡಮಾಡಿದ ಶಿಕ್ಷಣದ ಪರಿಣಾಮವು ಭಾರತೀಯರ ಆರ್ಥಿಕ ಜೀವನಕ್ಕೂ ಗಂಡಾಂತರವನ್ನು ತಂದೊಡ್ಡಿತು. ಹರಕು-ಮುರಕು ಪುಸ್ತಕೀಯ ವಿದ್ಯೆಯನ್ನು ಪಡೆದವರು ಸುಸಂಸ್ಕೃತರೆಂದು ಹೆಮ್ಮೆ ಪಡುತ್ತ, ಪರಂಪರಾಗತವಾಗಿ ಬಂದ ಉದ್ಯೋಗಗಳನ್ನು ಮಾಡುವದು ಕೀಳೆಂದು ಬಗೆದು ಅವುಗಳನ್ನು ತೊರೆದು ನವಕರಿಗಾಗಿ ಅಲೆಯಹತ್ತಿದರು. ನವಕರಿಯೇ ಅಂದಿನ ಶಿಕ್ಷಣದ ಗುರಿಯಾಗಿದ್ದಿತು. ಶಿಕ್ಷಣ ಪಡೆದವರೆಲ್ಲರೂ ನವಕರಿಯ ಬೆನ್ನುಹತ್ತಿ ಹೊರಟರು. ಅದರಿಂದ ಒಕ್ಕಲುತನ, ನೇಕಾರಿಕೆ ಮುಂತಾದ ಉದ್ಯೋಗಗಳು ಮುಗ್ಗರಿಸಿ ರಾಷ್ಟ್ರದ ಉತ್ಪಾದನ ಶಕ್ತಿಯು ಕುಗ್ಗಿತು. ಅನ್ನಬಟ್ಟೆಯ ಸಮಸ್ಯೆಯು ಉದ್ಭವಿಸಿತು. ಜೀವನಾವಶ್ಯಕ ಪದಾರ್ಥಗಳ ಕೊರತೆಯುಂಟಾಗಿ ಬದುಕುವಿಕೆಯೇ ಒಂದು ಸಮಸ್ಯೆಯಾಗಿ ಪರಿಣಮಿಸಿತು. ತೀರ ಸಾಮಾನ್ಯ ಜೀವನವನ್ನು ಸಾಗಿಸುವದು ಕೂಡ ಕಠಿಣವಾಯಿತು. ಬದುಕುವ ಪಕ್ಷಾಗಿ ಜನರು ಸ್ವಾರ್ಥಲೋಲುಪರಾದರು. ನಮ್ಮವರೇ ನಮ್ಮ ಶೋಷಣೆ ನಡೆಯಿಸಹತ್ತಿದರು. ಇದರಿಂದ ಜನತೆಯ ನೈತಿಕ ಮಟ್ಟವು ಕೆಳಗಿಳಿಯಿತು. ಸಮಾಜದಲ್ಲಿ ಅನೀತಿ, ಅನ್ಯಾಯ, ಅಸತ್ಯ, ಹಿಂಸೆಗಳು ನೆಲೆಯೂರಿದವು. ಗ್ರಾಮ ಜೀವನದ ಅಂಗಗಳಾದ ಗ್ರಾಮೋದ್ಯೋಗಗಳು ಮೂಲೆಗುಂಪಾದವು. ನಿರುದ್ಯೋಗಿತನವು ಭರತ ಖಂಡವನ್ನೆಲ್ಲ ವ್ಯಾಪಿಸಿತು. ಹೀಗಾಗಿ ಜನತೆಯ ಆರ್ಥಿಕ ಜೀವನದ ಮಟ್ಟವು ತೀರ ಕೆಳಗಿಳಿದು ಭಾರತೀಯರ ಜೀವನವು ನಿರಾಶೆಯಲ್ಲಿ ವಳುಗಿ ನಿಷ್ಕ್ರಿಯ ಜೀವನವಾಯಿತು.

ಗಾಂಧೀಜಿ ಭಾರತೀಯರ ಈ ಹೀನ ಸ್ಥಿತಿಯನ್ನು ಕಂಡು ಮರುಗಿದರು. ಇದೆಲ್ಲದರ ಮೂಲವು ಶಿಕ್ಷಣದ ವಿಧಾನದಲ್ಲಿಯೇ ಇದೆಯೆಂದು ಅರಿತು, ಭಾರತೀಯರ ಸರ್ವಾಂಗೀಣ ಉನ್ನತಿಯ ಹೊಸ ಮಾರ್ಗ ಶೋಧಿಸತೊಡಗಿದರು. ಆಂಗ್ಲರ ಆಳಿಕೆಯಿಂದ ನಡೆದು ಬಂದ ರಾಷ್ಟ್ರ ವಿಘಾತಕವಾದ ಶಿಕ್ಷಣ-ಕ್ರಮವನ್ನು ಆಮೂಲಾಗ್ರವಾಗಿ ಬದಲಿಸದೆ—ಶಿಕ್ಷಣ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡದೆ—ಭಾರತೀಯರ ಹಿತ ಸಾಧಿಸದೆಂದು ನಿಶ್ಚಯಿಸಿದರು. ಭಾರತೀಯ ಸಂಸ್ಕೃತಿಗೆ ಒಗ್ಗುವ ಹಾಗೂ ಸತ್ಯ ಅಹಿಂಸೆಗಳ ತಳಹದಿಯ ಮೇಲೆ ರಚಿಸಲ್ಪಟ್ಟ ಶಿಕ್ಷಣ ಕ್ರಮದಿಂದ ಮಾತ್ರ ಭಾರತವು ಸಮರ್ಥ, ಸ್ವಯಂಪೂರ್ಣ, ಶೋಷಣರಹಿತ ರಾಷ್ಟ್ರವಾಗಬಲ್ಲುದು. ಅದರಿಂದ ಭಾರತೀಯರ ಕಲ್ಯಾಣವು ತನ್ಮೂಲಕ ಜಗತ್ತಿನ ಕಲ್ಯಾಣವು, ಸಾಧ್ಯವೆಂದು ಬಗೆದು ಗಾಂಧೀಜಿ ಭಾರತದ ಏಳು ಲಕ್ಷ ಹಳ್ಳಿಗಳ ಪರಿಸ್ಥಿತಿ ಹಾಗೂ ಆವಶ್ಯಕತೆಗಳನ್ನು ಅನುಲಕ್ಷಿಸಿ ಒಂದು ಶಿಕ್ಷಣ ಯೋಜನೆಯನ್ನು ತಯಾರಿಸಿದರು. ಅದುವೇ ವರ್ಧಾಶಿಕ್ಷಣ ಯೋಜನೆಯು.

ಈ ಯೋಜನೆಯು ಮೊಟ್ಟಮೊದಲು ಗಾಂಧೀಜಿಗೆ ಹೊಳೆದದ್ದು ಅವರು ದಕ್ಷಿಣ ಆಫ್ರಿಕೆಯಲ್ಲಿದ್ದಾಗಲೇ. ಅವರು ಟಾಲಸ್ಟಾಯ್ ಫಾರ್ಮಿನಲ್ಲಿ ಈ ಹೊಸ ಬಗೆಯ ಶಿಕ್ಷಣ ಕ್ರಮವನ್ನು ಕಾರ್ಯರೂಪದಲ್ಲಿ ತಂದಿದ್ದರು ಅದಕ್ಕೆ ಒಂದು ಮೂರ್ತ ಸ್ವರೂಪ ಕೊಟ್ಟು, ವರ್ಧಾದಲ್ಲಿ. ಶಿಕ್ಷಣತಜ್ಞರ ಎದುರಿನಲ್ಲಿ ಇಟ್ಟರು. ಈ ಯೋಜನೆಯನ್ನು ಕುರಿತು ಶಿಕ್ಷಣ ತಜ್ಞರು ಕೂಲಂಕಷವಾಗಿ ಚರ್ಚಿಸಿದರು. ಕೊನೆಗೆ ಈ ಯೋಜನೆಯ ಬಗ್ಗೆ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು. ಆಗ ಈ ಯೋಜನೆಯನ್ನು ಕುರಿತು ಕೆಲವು ಆಕ್ಷೇಪಗಳು ಬಂದವು. ಅವುಗಳನ್ನೆಲ್ಲ ಸಾನಿಲ್ಲಿ ವಿಸ್ತರಿಸುತ್ತ ಹೋಗಲಾರೆನು. ಏಕೆಂದರೆ ವೇಳೆಯ ನಿರ್ಬಂಧ ಒಂದಿದೆ. ಆದರೂ ಮುಖ್ಯವಾಗಿ "ಈ ಯೋಜನೆಯಲ್ಲಿ ಧಾರ್ಮಿಕ ಶಿಕ್ಷಣದ ವ್ಯವಸ್ಥೆ ಇಲ್ಲ" ಎನ್ನುವದೊಂದು ಆಕ್ಷೇಪ. ಎಲ್ಲ ಧರ್ಮಗಳ ಸಾರವು ನೀತಿಯು. ನೈತಿಕ ಶಿಕ್ಷಣಕ್ಕೆ ಈ ಯೋಜನೆಯಲ್ಲಿ ಸಾಕಷ್ಟು ಅವಕಾಶವನ್ನು ಕಲ್ಪಿಸಲಾಗಿದೆ. ಅಂದಮೇಲೆ ಈ ಆಕ್ಷೇಪವು ನಿರಾಧಾರವಲ್ಲವೇ? ಎರಡನೆಯದಾಗಿ—ಈ ಯೋಜನೆಯಲ್ಲಿ "ಹೊಸತೇನೂ ಇಲ್ಲ. ಇದು ಯೋಜನಾ ಪದ್ಧತಿಯಂತೆಯೇ ಇದೆ" ಎಂಬುದು. ಯೋಜನಾ ಪದ್ಧತಿಯಲ್ಲಿಯ ಕೃತಿಯಲ್ಲಿ ಸಾಕಷ್ಟು ಏಕಾಗ್ರತೆ, ಅನುಸಂಧಾನ, ಉತ್ಪಾದನ ದೃಷ್ಟಿ, ಸಶಾಸ್ತ್ರೀಯ ಅಭ್ಯಾಸ ಇವುಗಳ—ಕೊರತೆ ಇದೆ. ಆದರೆ ಈ ಯೋಜನೆಯಲ್ಲಿ ಮೇಲೆ ಕಾಣಿಸಿದ ಕೊರತೆಗಳಿರುವದಿಲ್ಲ ಮೂರನೆಯದಾಗಿ "ಈ ಯೋಜನೆಯು ಮಕ್ಕಳ ಶಾರೀರಿಕ ಶಿಕ್ಷಣವನ್ನು ಅಲಕ್ಷಿಸಿದೆ" ಎಂದು ಮಕ್ಕಳು ಕೃತಿಮೂಲಕ ಶಿಕ್ಷಣ ಪಡೆಯುವದರಿಂದ ಅವರ ದೇಹದ ಅಂಗಾಂಗಗಳಿಗೆ ಸಾಕಷ್ಟು ಕೆಲಸ ದೊರೆಯುವದು. ಅಲ್ಲದೆ ಆಟಪಾಟಗಳ ಮುಖಾಂತರ ಶಾರೀರಿಕ ಶಿಕ್ಷಣವನ್ನು ಕೊಡಲಾಗುವದು. ಎಂದಮೇಲೆ ಈ ಆಕ್ಷೇಪದಲ್ಲಿಯೂ ಹುರುಳಿಲ್ಲ. ಇನ್ನು ಕೆಲವು ಆಕ್ಷೇಪಗಳು ಬಂದವು. ಅವುಗಳಿಗೆಲ್ಲ ಡಾ|| ಝಾಕೀರ ಹುಸೇನ, ಸೈಯದ್ದೈನ ಮೊದಲಾದ

ವರು ಸಮರ್ಪಕವಾದ ಉತ್ತರಗಳನ್ನು ಕೊಟ್ಟಿದ್ದಾರೆ.

ಗಾಂಧೀಜಿ ಈ ಯೋಜನೆಯನ್ನು ತಯಾರಿಸುವಾಗ ಭಾರತದಲ್ಲಿ ಒಂದು ಹೊಸಬಗೆಯ "ಶೋಷಣರಹಿತವಾದ ಸಮಾಜ"ವನ್ನೇ ನಿರ್ಮಿಸಬೇಕೆಂದು ಬಗೆದು ಈದಕ್ಕನುಗುಣವಾಗಿಯೇ ಈ ಯೋಜನೆಯನ್ನು ಸಿದ್ಧಗೊಳಿಸಿದರು. ಯಾವದೊಂದು ರಾಷ್ಟ್ರದ ಶಿಕ್ಷಣ ಕ್ರಮವನ್ನು ನಿರ್ಧರಿಸುವಾಗ, ಆ ರಾಷ್ಟ್ರದ ಪರಿಸ್ಥಿತಿ—ಆ ರಾಷ್ಟ್ರದ ಬೇಡಿಕೆಗಳನ್ನು ಅರಿತಿರಬೇಕಾಗುತ್ತದೆ. ಗಾಂಧೀಜಿ ಈ ಯೋಜನೆ ತಯಾರಿಸುವಾಗ ಭಾರತದ ನಲವತ್ತು ಕೋಟಿ ಹೃದಯಗಳನ್ನು ಅರಿತಿದ್ದರು. ಭಾರತೀಯರ ಬೇಡಿಕೆಗಳನ್ನು ಪೂರೈಸುವ ದೃಷ್ಟಿಯನ್ನೇ ಇಟ್ಟುಕೊಂಡಿದ್ದರು. ಅಲ್ಲದೆ ಸಾಮಾನ್ಯ ಜನತೆಯ ಜೀವನದ ದೃಷ್ಟಿಯಿಂದ ಈ ಯೋಜನೆಯನ್ನು ಸಿದ್ಧಗೊಳಿಸಿದರು. ಗಾಂಧೀಜಿ ಈ ಯೋಜನೆ ಸಿದ್ಧಗೊಳಿಸುವಾಗ ಶಿಕ್ಷಣ ಪ್ರಪಂಚದಲ್ಲಿ ಮುಂದುವರಿದ ಅಮೇರಿಕೆ, ರಶಿಯಾ, ಮುಂತಾದ ರಾಷ್ಟ್ರಗಳ ಶಿಕ್ಷಣ ಕ್ರಮವನ್ನು ಆದರ್ಶವನ್ನಾಗಿ ಇಟ್ಟುಕೊಳ್ಳಲಿಲ್ಲ. ಏಕೆಂದರೆ---ಬಂಡವಲಶಾಹಿ ವ್ಯಾಪಾರದೃಷ್ಟಿಯುಳ್ಳ ಅಮೇರಿಕೆಯ ಶಿಕ್ಷಣ ಕ್ರಮವೂ, ವ್ಯಕ್ತಿವಿಕಾಸರಹಿತವಾದ ಸಮಾಜವಾದಿ ರಶಿಯದ ಶಿಕ್ಷಣ ಕ್ರಮವೂ ನಮ್ಮ ನಾಡಿಗೆ ಒಗ್ಗುವಂತಹದಲ್ಲ.

ಸಮಾಜದ ಘಟಕವಾದ ಪ್ರತಿಯೊಂದು ವ್ಯಕ್ತಿಯ ವಿಕಾಸಕ್ಕೆ ಈ ಯೋಜನೆಯಲ್ಲಿ ಎಡೆಯಿದೆ. ಮಾನವನಿಗೆ ಜನ್ಮದಾರಭ್ಯದಿಂದಲೂ ನಿಸರ್ಗವು ಶಿಕ್ಷಣ ಕೊಡುತ್ತಲೇ ಇರುವದು. ಇಂದ್ರಿಯಗಳ ದ್ವಾರ ಮನೋವಿಕಾಸದ ಕಾರ್ಯವು ಅವ್ಯಾಹತವಾಗಿ ನಡದೇ ಇರುತ್ತದೆ. ಅಂತಃಶಕ್ತಿಗೂ ಬಾಹ್ಯಸೃಷ್ಟಿಗೂ ಸಂಪರ್ಕವಾದೊಡನೆ ಇಚ್ಛೆ ಉಂಟಾಗುತ್ತದೆ. ಇಚ್ಛೆಯಿಂದ ಕ್ರಿಯೆ, ಕ್ರಿಯೆಯಿಂದ ಅನುಭವ ಜ್ಞಾನ. ಇದು ನೈಸರ್ಗಿಕ ಶಿಕ್ಷಣ ಕ್ರಮ. ಈ ಕ್ರಮವು ಸ್ವಯಂಪ್ರೇರಣೆಯಿಂದ ನಡೆಯತಕ್ಕುದು. ಯಾರ ಸಹಾಯವೂ ಬೇಕಿಲ್ಲ. ಯಾವ ಶಿಕ್ಷಕನ ಅವಶ್ಯಕತೆಯೂ ಇಲ್ಲ. ಆದರೆ ಈ ಕ್ರಮದಿಂದ ಮೊರೆತಜ್ಞಾನವು ಸಂಪೂರ್ಣವು ಸುಸಂಬದ್ಧವೂ ಆಗಿರುತ್ತದೆಂದು ಹೇಳಲಿಕ್ಕಾಗದು. ಏಕೆಂದರೆ ಅಂತಃಶಕ್ತಿಗಳು ವಯೋಮಾನಕ್ಕನುಸಾರವಾಗಿ ವಿಕಾಸವಾಗುತ್ತವೆ. ಅವುಗಳಿಗೆ ತಕ್ಕ ಕಾಲಕ್ಕೆ ತಕ್ಕ ಪರಿಸ್ಥಿತಿಯನ್ನು ನಿರ್ಮಾಣಮಾಡಬೇಕಾಗುತ್ತದೆ. ಹಾಗೆ ಮಾಡಿದರೆ ಮಾತ್ರ ಅವು ಸಂಪೂರ್ಣ ವಿಕಾಸಗೊಳ್ಳುವವು. ಅಂತಃಶಿಕ್ಷಣ ಹಾಗೂ ಬಾಹ್ಯ ಶಿಕ್ಷಣ ಇವುಗಳ ಜೋಡಣೆಯ ರೀತಿಯು ಶಿಕ್ಷಣತಜ್ಞರಿಗೆ ಒಂದು ಜಟಿಲವಾದ ಸಮಸ್ಯೆಯೇ ಆಗಿದ್ದಿತು. ಆ ಸಮಸ್ಯೆಯನ್ನು ಗಾಂಧೀಜಿ ವರ್ಧಾಶಿಕ್ಷಣ ಯೋಜನೆಯಲ್ಲಿ ಬಿಡಿಸಿ ತೋರಿಸಿದ್ದಾರೆ.

ಮಕ್ಕಳ ಶಿಕ್ಷಣವು ಯಾವದೊಂದು ಗ್ರಾಮೋದ್ಯೋಗದ ಮುಖಾಂತರ ನಡೆಯಬೇಕೆಂದು ಗಾಂಧೀಜಿ ಒತ್ತಿ ಹೇಳಿದ್ದಾರೆ. ಅದಕ್ಕಾಗಿಯೇ ಈ ಶಿಕ್ಷಣಕ್ಕೆ "ಕೃತಿ ಮೂಲ ಶಿಕ್ಷಣ"ವೆಂದೂ ಕರೆಯಲಾಗುತ್ತಿದೆ. ಗಾಂಧೀಜಿ ಕೃತಿಗೆ ಇಷ್ಟೊಂದು ಪ್ರಾಧಾನ್ಯತೆಯನ್ನು ಏಕೆ ಕೊಟ್ಟಿದ್ದಾರೆ? ಎಂಬುದು ಗಮನಾರ್ಹವಾದುದು. ನಮ್ಮ ರಾಷ್ಟ್ರದ ಬೇಡಿಕೆಗಳಲ್ಲಿ ಗ್ರಾಮೋದ್ಯೋಗಗಳ ಪುನರುಜ್ಜೀವನವೂ ಒಂದು. ಮಕ್ಕಳು ಗ್ರಾಮೋದ್ಯೋಗದ ಮುಖಾಂತರ ಶಿಕ್ಷಣ ಪಡೆಯುವದರಲ್ಲಿ ಗ್ರಾಮೋದ್ಯೋಗದ ಪುನರುಜ್ಜೀವನದ ಉದ್ದೇಶವು ಅಡಕವಾಗಿದೆ. ಅಲ್ಲದೆ ಮಕ್ಕಳು ಮಾಡಿದ ಕೆಲಸದಿಂದ ಶಿಕ್ಷಣವು ಸ್ವಾವಲಂಬಿಯಾಗುವದೆಂದು ಗಾಂಧೀಜಿ ಆಶಿಸಿದ್ದಾರೆ. ಹೀಗೆ ಶಿಕ್ಷಣವನ್ನು ಸ್ವಾವಲಂಬಿಯನ್ನಾಗಿ ಮಾಡಿದರೆ ಮಾತ್ರ ಅದು ಭಾರತದ ಏಳು ಲಕ್ಷ ಹಳ್ಳಿಗಳ ಮಕ್ಕಳಿಗೆ ಸುಲಭವಾಗಿ ದೊರೆಯಬಲ್ಲುದು. ಎಂಬ ಮಾತನ್ನು ಗಾಂಧೀಜಿ ಮನಗಂಡಿದ್ದರು. ಕೃತಿಯಲ್ಲಿ ಮಕ್ಕಳು ತಮ್ಮ ಮನಸ್ಸನ್ನು ಲೀನಗೊಳಿಸುವದರಿಂದ ಮನಸ್ಸಿನ ಧೃಡತೆ ಹೆಚ್ಚುತ್ತದೆ. ಮಕ್ಕಳ ಕೃತಿಯು ಕಾಯಕಾರಣ ಭಾವದಿಂದ ಕೂಡಿರುವದರಿಂದ ಅವರ ಬೌದ್ಧಿಕ ವಿಕಾಸವು ಸಹಜವಾಗಿಯೇ ಆಗುತ್ತದೆ. ಬಸವಣ್ಣನವರ "ಕಾಯಕವೇ ಕೈಲಾಸ"ವೆಂಬ ತತ್ವವು ಇದರಲ್ಲಿ ಅಡಕವಾಗಿದೆ. ಬುದ್ಧಿಯ ಬೆಳವಣಿಗೆಗೆ ಕರ್ಮಬೇಕು. ಕರ್ಮವಿಲ್ಲದಿದ್ದರೆ ಯಾವುದೂ ಸಾಧ್ಯವಿಲ್ಲ' "ನಹಿಕಶ್ಚಿತ್ ಕ್ಷಣಮಪಿ ಜಾತುತಿಷ್ಠತ್ಯ ಕರ್ಮಕೃತ್" ಎಂದು ಗೀತೆ ಸಾರುತ್ತದೆ. ಉತ್ಪಾದನದ ದೃಷ್ಟಿಯಿಲ್ಲದ. ಜ್ಞಾನ, ದೃಷ್ಟಿಯಿಲ್ಲದ ಕರ್ಮವು ಜೀವನಕ್ಕೆ ನಿರುಪಯೋಗಿಯಾಗುವದು. ಅಂತಹ ಕರ್ಮವು "ಜೀವನ ಶಿಕ್ಷಣಕ್ಕೆ" ತಳಹದಿಯಾಗಲಾರದು. "ಕರ್ಮವು ಕೀಳಲ್ಲ"ಎಂಬ ಭಾವನೆಯನ್ನು ಮಕ್ಕಳಲ್ಲಿ ಎಳೆತನದಲ್ಲಿಯೇ ಉಂಟುಮಾಡಿ ಅದರಿಂದ ಮಕ್ಕಳು ಉದ್ಯೋಗಶೀಲರಾಗುವಂತೆ ಮಾಡುವದೂ, ಕೃತಿ ಮೂಲ ಶಿಕ್ಷಣದ ಉದ್ದೇಶವಾಗಿದೆ. ಜೀವನಾವಶ್ಯಕವಾದ ವಿವಿಧಲ್ಲಿ ರಾಷ್ಟ್ರದ ಉತ್ಪಾದನ ಶಕ್ತಿಯನ್ನು ಹೆಚ್ಚಿಸಲೂ, ರಾಷ್ಟ್ರದ ಆರ್ಥಿಕ ಜೀವನದ ಮಟ್ಟವನ್ನು ಎತ್ತರಿಸಲೂ, ಮಕ್ಕಳು ಸಮರ್ಥರಾಗಬೇಕೆಂಬುದು ಗಾಂಧೀಜಿಯ ಉದ್ದೇಶವಾಗಿದೆ.

ಮಕ್ಕಳು ಸ್ವಾವಲಂಬಿಗಳಾಗುವಂತೆ ಯತ್ನಿಸುವದೂ ಈ ಯೋಜನೆಯ ಉದ್ದೇಶವಾಗಿದೆ. ಆದುದರಿಂದ ಇದಕ್ಕೆ "ಸ್ವಾವಲಂಬಿ ಶಿಕ್ಷಣ"ವೆಂದು ಕರೆಯುವದು ತಪ್ಪಾಗದು. ಚಟುವಟಿಕೆಗಳೇ ಈ ಶಿಕ್ಷಣದ ತಳಹದಿಯಾಗಿರುವದರಿಂದ ದಕ್ಕೆ ಜೀವನ ಶಿಕ್ಷಣವೆಂದೂ ಕರೆಯುವರು.

ಮಕ್ಕಳು ಕೃತಿಯನ್ನು ಮಾಡುತ್ತ ಅನುಭವ ಪಡೆದುದರಿಂದ ಹೊಂದಿದ ಜ್ಞಾನವು ನಿಜವಾದದ್ದು. ಜೀವನೋಪಯೋಗೀ ಚಟುವಟಿಕೆಗಳನ್ನು ಮಾಡುತ್ತ ಅವುಗಳಲ್ಲಿ ಜಡಕವಾದ, ಜೀವನೋಪಯೋಗೀ ಜ್ಞಾನ ಪಡೆಯುವದು ಈ ಕೃತಿ ಮೂಲಶಿಕ್ಷಣದಲ್ಲಿಯ ಚಟುವಟಿಕೆಯ ಉದ್ದೇಶವಾಗಿದೆ. ಕೃತಿಯನ್ನು ಮಾಡುವಾಗ ಮಕ್ಕಳಿಗೆ ಆ ಕೃತಿಗೆ ಸಂಬಂಧಿಸಿದ ಜ್ಞಾನದ ಬೇಡಿಕೆಯು ಸಹಜವಾಗಿಯೇ ಉಂಟಾಗುತ್ತದೆ. ಏಕೆಂದರೆ ಕೃತಿಗೂ ಜ್ಞಾನಕ್ಕೂ ನಿಕಟ ಸಂಬಂಧವಿರುತ್ತದೆ. ಆ ಬೇಡಿಕೆಯನ್ನು ಪೂರೈಸುವದು ಶಿಕ್ಷಕನ ಕೆಲಸ. ಈ ರೀತಿಯಾಗಿ ಮಕ್ಕಳ ಬೇಡಿಕೆಗೆ ಸಂಗತಿ ಜ್ಞಾನ ಕೊಡುವದು ನಿಜವಾದ ಶಿಕ್ಷಣ ಕ್ರಮವು. ಈ ಕ್ರಮವೇ ಈ ಯೋಜನೆಯಲ್ಲಿದೆ.

ರಾಷ್ಟ್ರೀಯ ಶಿಕ್ಷಣದಲ್ಲಿ ಗಾಂಧೀಜಿ "ಶುಚಿ"ಗೆ ಅತ್ಯಂತ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಮಕ್ಕಳ ಶಿಕ್ಷಣವು ಸ್ವಚ್ಛತೆಯಿಂದಲೇ ಆರಂಭವಾಗಬೇಕೆಂದು ಗಾಂಧೀಜಿ ಹೇಳಿದ್ದಾರೆ. ದೇಹಕ್ಕೂ ಮನಸ್ಸಿಗೂ ತೀರ ನಿಕಟ ಸಂಬಂಧವಿರುವದರಿಂದ ದೈಹಿಕ ಸ್ವಚ್ಛತೆಯು ಮನಸ್ಸನ್ನು ತಿಳಿಯಾಗಿಸಲು, ನಿರ್ಮಲವಾಗಿಸಲು ಸಹಾಯಕ ವಾಗುತ್ತದೆ. ಅಲ್ಲದೆ ಮಕ್ಕಳ ಆರೋಗ್ಯ ರಕ್ಷಣೆಗೆ ಶುಚಿತ್ವವು ಅತ್ಯಂತ ಆವಶ್ಯಕವಾದುದು.

ಗಾಂಧೀಜಿ ತಮ್ಮ ಶಿಕ್ಷಣ ಯೋಜನೆಯಲ್ಲಿ "ಸಾಂಘಿಕ ಜೀವನಕ್ಕೆ" ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಮಕ್ಕಳಿಗೆ ಸಾಮಾಜಿಕ ಜೀವನದ ಅರಿವು ಉಂಟಾಗಬೇಕೆಂಬುದೇ ಇದರ ಮುಖ್ಯ ಉದ್ದೇಶವಾಗಿದೆ. ಸಾಂಘಿಕ ಜೀವನದಿಂದ ಮಕ್ಕಳಲ್ಲಿ ಪರಸ್ಪರ ಪ್ರೀತಿ, ವಿಶ್ವಾಸಗಳು ನೆಲೆಗೊಳ್ಳಬೇಕು. ಸಹಕಾರ ಭಾವನೆ ಬೆಳೆಯಬೇಕು. ಎಲ್ಲರೂ ಸಮಾನರೆಂಬ ವಿಶಾಲ ದೃಷ್ಟಿಯು ಮಕ್ಕಳಲ್ಲಿ ಬರಬೇಕು. ಒಟ್ಟಿನಲ್ಲಿ ಸಾಮಾಜಿಕ ಜೀವನಕ್ಕೆ ಅಗತ್ಯವಿರುವ ಸದ್ಗುಣಗಳನ್ನು ಮಕ್ಕಳಲ್ಲಿ ನೆಡುವದು ಸಾಂಘಿಕ ಜೀವನದ ಉದ್ದೇಶವಾಗಿದೆ. ಮಕ್ಕಳ ಶೀಲ ಸಂವರ್ಧನೆಯಾಗಿ ಅವರು ಆದರ್ಶ ನಾಗರಿಕರಾಗಬೇಕೆಂಬುದು ಇದರ ಉದ್ದೇಶವಿದೆ.

ಈ ಯೋಜನೆಯು ಈಗಾಗಲೇ ಹಿಂದುಸ್ಥಾನದ ಕೆಲವು ಪ್ರಾಂತಗಳಲ್ಲಿ ಕಾರ್ಯ ರೂಪದಲ್ಲಿ ಬಂದಿದೆ. ಸಾರ್ಜಂಟ ಕಮೀಟಿಯವರು "ಈ ಯೋಜನೆಯು ಹಿಂದುಸ್ಥಾನದಲ್ಲಿ ಸಾರ್ವತ್ರಿಕ ಶಿಕ್ಷಣವಾಗಲು ಯೋಗ್ಯವಿದೆ" ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ಅಖಿಲ ಭಾರತ ಶಿಕ್ಷಣ ಸಮಿತಿಯವರು ಈ ಯೋಜನೆಯನ್ನು ಎಲ್ಲ ಪ್ರಾಂತಗಳಲ್ಲಿ ತರಲು ನಿಶ್ಚಯಿಸಿದ್ದಾರೆ. ಯಾವದೊಂದು ಶಿಕ್ಷಣ ಯೋಜನೆಯ ಫಲಿತಾಂಶವು ತಿಳಿಯಬೇಕಾದರೆ ಕನಿಷ್ಠ ಪಕ್ಷಕ್ಕೆ ೫೦-೬೦ ವರುಷಗಳಾದರೂ ಬೇಕು. ಆದರೆ ಈ ಯೋಜನೆ ಆರಂಭವಾಗಿ ಕೇವಲ ೮-೯ ವರುಷಗಳಾದವು. ಇಷ್ಟರಲ್ಲಿಯೇ ಇದರ ಭವಿತವ್ಯವು ಉಜ್ವಲವಾಗಿದೆಯೆಂಬುದು ತಿಳಿದು ಬಂದಿದೆ. ರಾಷ್ಟ್ರೀಯ ಶಿಕ್ಷಣ ಪಡೆದ ಮಕ್ಕಳು ಸಾಮಾನ್ಯ ಶಿಕ್ಷಣ ಪಡೆದ ಮಕ್ಕಳಿಗಿಂತ ಹೆಚ್ಚು ಚಟುವಟಿಕೆಯುಳ್ಳವರೂ, ಹಸನ್ಮುಖಿಗಳೂ, ವ್ಯವಹಾರ ಜ್ಞಾನವುಳ್ಳವರೂ ಆಗಿರುವರೆಂಬುದು ಕಂಡು ಬರುತ್ತದೆ.

ಇದನ್ನೆಲ್ಲ ನೋಡಿದರೆ ಗಾಂಧೀಜಿ ಒಬ್ಬ ಶಿಕ್ಷಣತಜ್ಞರೆಂಬುದು ಸ್ಪಷ್ಟವಾಗುವದಿಲ್ಲವೇ? ಗಾಂಧೀಜಿ ಭಾರತವಲ್ಲಿ ಯಾವ ರಾಮರಾಜ್ಯವನ್ನು ಸ್ಥಾಪಿಸಬೇಕೆಂದಿದ್ದರೋ ಆ ರಾಮರಾಜ್ಯದ ಬೀಜವು ಈ ಯೋಜನೆಯಲ್ಲಿಯೇ ಇದೆ. ಆ ರಾಮರಾಜ್ಯವನ್ನು ಸ್ಥಾಪಿಸುವ ಹೊಣೆಯು ಶಿಕ್ಷಕರಾದ ನಮ್ಮೆಲ್ಲರ ಮೇಲೆಯೇ ಇದೆ. ಇದನ್ನರಿತು ನಾವು ಇಂದಿನಿಂದಲೇ ರಾಮರಾಜ್ಯವನ್ನು ಸ್ಥಾಪಿಸಲು ಕಂಕಣಬದ್ಧರಾಗೋಣ. ಈ ಯೋಜನೆಯನ್ನು ಯಶಸ್ವಿಗೊಳಿಸಿದರೆ ಮಾತ್ರ ಗಾಂಧೀಜಿಯ ಬಯಕೆಯನ್ನು ಈಡೇರಿಸಿದಂತಾಗುತ್ತದೆ. ಆಗ ನಾವು ಗಾಂಧೀಜಿಯ ನಿಜವಾದ ಸ್ಮಾರಕವನ್ನು ಮಾಡಿದಂತಾಗುತ್ತದೆ.

—:ಜಯ್ ಹಿಂದ್:—

ರಾಜಕಾರಣ ಪುರುಷ ಗಾಂಧೀಜಿ.

ಶ್ರೀ. ಚಿ. ಶಂ. ಕುಲಕರ್ಣಿ. ಬಿ- ಎ, ಬಿ. ಟಿ, ಪದವೀಧರ. ವರ್ಧಾ ರಾಷ್ಟ್ರೀಯ ಶಿಕ್ಷಣ ಅಧ್ಯಾಪನ ಕೇಂದ್ರ.ಧಾರವಾಡ

ಗಾಂಧೀಜಿ ಪಂಡಿತ ಜವಾಹರಲಾಲ ನೆಹರು.

ಮಾನ್ಯ ಅಧ್ಯಕ್ಷರೆ, ಗುರುಹಿರಿಯರೆ, ಅಣ್ಣತಮ್ಮಂದಿರೆ, ಅಕ್ಕತಂಗಿಯರೆ,

ಮಹಾತ್ಮರು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠರಾದ ರಾಜಕಾರಣ ಪುರುಷರು ಎಂದು ನಾನು ಹೇಳಿದರೆ ನಂಬದೇ ಇರುವ ಬುದ್ಧಿವಂತರು ನಮ್ಮಲ್ಲಿ ಇನ್ನೂ ಬಹಳ ಜನರಿದ್ದಾರೆ. ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಮಹಾತ್ಮರು ಶ್ರೇಷ್ಠರಾದ ರಾಜಕಾರಣ ಪುರುಷರಷ್ಟೇ ಅಲ್ಲದೇ ರಾಜಕಾರಣದಲ್ಲಿ ಹೊಸ ಯುಗವನ್ನು ಪ್ರಾರಂಭಿಸಿದ ಯುಗ ಪುರುಷರು ಎಂದು ನಾನು ಸಾಧಿಸಿದರೆ ಇದೇನೋ ಅತಿಶಯೋಕ್ತಿ ಎಂದು ನಗುವವರಿಗೇನೂ ಕೊರತೆಯಿಲ್ಲ.

ಆದರೆ ಮಹಾತ್ಮರ ಜೀವನವನ್ನು ಪರಿಶೀಲಿಸಿದರೆ ಅವರ ಆಯುಷ್ಯದ ಮುಕ್ಕಾಲು ಭಾಗವು ರಾಜಕಾರಣದಲ್ಲಿಯೇ ಕಳೆದಿದೆ ಎಂಬ ಮಾತು ನಮಗೆ ಮನದಟ್ಟಾಗುವದು. ಹಾಗೇ ನಾವು ಅವರ ಜೀವನವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತ ಹೋದರೆ ಅವರ ಶ್ರೇಷ್ಠರಾದ ರಾಜಕಾರಣ ಪುರುಷರೂ, ರಾಜಕಾರಣದಲ್ಲಿ ನವಯುಗಾರಂಭ ಮಾಡಿದ ಕಾರಣ ಪುರುಷರೂ ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಇಂಗ್ಲಂಡಿನಿಂದ ಬ್ಯಾರಿಸ್ಟರ ಆಗಿ ಮರಳಿ ಬಂದ ಗಾಂಧೀಜಿ ಮುಂಬಯಿಯಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಆದರೆ ವಕೀಲರಿಗೆ ಅವಶ್ಯವಾಗಿ ಇರಬೇಕಾದ ಗುಣಗಳು ಅಂದರೆ ಸುಳ್ಳು ಇರುವದನ್ನು ಸತ್ಯವಾಗಿ ಕಾಣುವಂತೆ ಪ್ರತಿವಾದಿಸುವದು. ಸತ್ಯವಾಗಿರುವದನ್ನು ಸುಳ್ಳು ಎಂದು ತೋರುವಂತೆ ವಾದಿಸುವದು, ಇರಲಿಲ್ಲ. ಆದ್ದರಿಂದ ಅವರು ರವಿವಾರದ ವಕೀಲರು. (

) ಎಂದು ಬಿರುದು ಪಡೆಯಬೇಕಾಯಿತು. ಮುಂದೆ ಅವರ ಅಣ್ಣನು ರಾಜಕೋಟಕ್ಕೆ ಅವರನ್ನು ಕರೆಯಿಸಿಕೊಂಡನು. ಅಲ್ಲಿಯೂ ಅವರ ಪ್ರಾಪ್ತಿ ಅಷ್ಟಕಷ್ಟೆ ಆಯಿತು. ಕಡೆಗೆ ದಕ್ಷಿಣ ಆಫ್ರಿಕದಲ್ಲಿಯ ಒಬ್ಬ ಮುಸಲ್ಮಾನ ಗೆಳೆಯರ ಖಟ್ಲೆಯ ಸಲುವಾಗಿ ಗಾಂಧೀಜಿಯರುವ

ದರ ಅಣ್ಣನಿಂದ ದಕ್ಷಿಣ ಆಫ್ರಿಕೆಗೆ ಕಳಿಸಲ್ಪಟ್ಟರು.

ದಕ್ಷಿಣ ಆಫ್ರಿಕ್‌ದಲ್ಲಿಯ ಹಿಂದೀಯರನ್ನು ನಡೆಯಿಸಿ ಳ್ಳುವ ರೀತಿಯೂ ಅದರ ಪ್ರತ್ಯಕ್ಷ ಅನುಭವವೂ ಮಹಾ ಆತ್ಮವನ್ನು ಜಾಗೃತಗೊಳಿಸಿದವು. ಮಾನವನ ಜನ್ಮ ಹಕ್ಕುಗಳಿಗಾಗಿ ಅವರು ಹೋರಾಡಬೇಕಾಯಿತು. ರಾಜಕಾರಣವು ಮಹಾತ್ಮರ ದಾರಿಯಲ್ಲಿ ಅಡ್ಡ ಬಂದು ಂತಿತು. ಮಹಾತ್ಮರು ಮಾನವಧರ್ಮದ ರಕ್ಷಣೆಗಾಗಿ ಾಜಕಾರಣದಲ್ಲಿ ಕಾಲಿಟ್ಟರು.

ದಕ್ಷಿಣ ಆಫ್ರಿಕೆಯುಲ್ಲಿ ಜಯವನ್ನು ದೊರಕಿಸಿದ ಮೇಲೆ ಮಹಾತ್ಮರು ಭಾರತದಲ್ಲಿ ಕಾಲಿಟ್ಟರು. ಆಗ ಭಾರತಕ್ಕೆ ಒಬ್ಬ ಜನ ನಾಯಕನು ಬೇಕಾಗಿದ್ದ. ಗಿಲಿಜನೇ ಸಶಸ್ತ್ರ ಕ್ರಾಂತಿಯು ಅಯಶಸ್ವಿಯಾದ ಮೇಲೆ ಬ್ರಿಟಿಶರಿಂದ ಬಿಕ್ಕೆ ಸೇಡುವದೇ ಭಾರತದ ರಾಜಕಾರಣದ ಧ್ಯೇಯವಾಗಿತ್ತು. ಉಗ್ರವಾದಿಗಳೂ ಅವರ ಮುಖಂಡರಾದ ಲೋಕ ಮಾನ್ಯರೂ ಕೆಲವು ಕ್ರಾಂತಿಕಾರರೂ ಇದಕ್ಕೆ ಅಪವಾದವಾಗಿ ದ್ದರು.

ದಕ್ಷಿಣ ಆಫ್ರಿಕೆಯಲ್ಲಿಯ ಮಹಾತ್ಮರ ಸತ್ಯಾಗ್ರಹವು ರಾಜಕಾರಣದಲ್ಲಿ ಕ್ರಾಂತಿಯನ್ನು ಮಾಡಿತ್ತು. ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ಇನ್ನೂ ಪ್ರಯೋಗಮಾಡಿ ನೋಡಬೇಕಾಗಿತ್ತು. ಭಾರತವು ಈ ಹೊಸ ಅಸ್ತ್ರದ ಈ ಹೊಸ ರಾಜಕಾರಣದ ಪ್ರಯೋಗ ಭೂಮಿಯಾಯಿತು. ಇದರ ಹಲವು ಪ್ರಯೋಗಗಳಾದ ಮೇಲೆ ಭಾರತವು ಸ್ವತಂತ್ರವಾಯಿತು. ಮಹಾತ್ಮರ ರಾಜಕಾರಣಕ್ಕೆ ಗೆಲುವಾಯಿತು. ಜಗತ್ತಿನ ರಾಜಕಾರಣದಲ್ಲಿ ನವಯುಗಾರಂಭವಾಯಿತು.

ಇಲ್ಲಿಯ ವರೆಗೂ ರಾಜಕಾರಣವೆಂದರೆ ಕುಟಿಲ ನೀತಿ, ಅನ್ಯಾಯ, ಬಲಾತ್ಕಾರ, ವಂಚನೆ ಎಂದು ತಿಳಿಯಲ್ಪಡುತ್ತಿತ್ತು. ಆದ್ದರಿಂದಲೇ ಇಂಗ್ಲೀಷಿನಲ್ಲಿ ( ) ಎಂಬ ಮಾತು ರೂಢವಾಗಿದೆ. ಈ ಕುಟಿಲ ನೀತಿಯಲ್ಲಿ ಯಾರು ಪ್ರವೀಣರೋ ಅವರು ಶ್ರೇಷ್ಠ ರಾಜಕಾರಣಿಗಳೆಂದು ಗಣಿಸಲ್ಪಡುತ್ತಿದ್ದರು. ಇಂಥ ರಾಜಕಾರಣದ ದೃಷ್ಟಿಕೋನದಿಂದ ಅಳೆದರೆ ಮಹಾತ್ಮರು ರಾಜಕಾರಣಿಗಳೇ ಅಲ್ಲ ಎಂದು ನಾವು ಒಪ್ಪಲೇಬೇಕು. ಯಾಕಂದರೆ ಮಹಾತ್ಮರಲ್ಲಿ ವಂಚನೆಗೆ, ಬಲಾತ್ಕಾರಕ್ಕೆ, ಅನ್ಯಾಯಕ್ಕೆ ಸ್ಥ

ರಾಜಕಾರಣದಲ್ಲಿ ಯಾವ ಸಂಗತಿಯೂ ಗೌಪ್ಯವಾಗಿ ನಡೆಯುತ್ತಿದ್ದಿಲ್ಲ. ತಾವು ಮಾಡಬೇಕಾದದ್ದನ್ನು ಎದುರಾಳಿಗೆ ತಿಳುಹಿಸಿಯೇ ಮಾಡುತ್ತಿದ್ದರು. ಇನ್ನೊಂದು ವಿಶೇಷವೆಂದರೆ ರಕ್ತಪಾತಕ್ಕಾಗಲೀ ಶಸ್ತ್ರಗಳಿಗಾಗಲೀ ಆಸುರೀ ಕೃತ್ಯಗಳಿಗಾಗಲೀ ಮಹಾತ್ಮರ ರಾಜಕಾರಣದಲ್ಲಿ ಸ್ಥಳವೇ ಇದ್ದಿಲ್ಲ. ಇದರಿಂದ ಮಹಾತ್ಮರ ರಾಜಕಾರಣವು ಮಾನವೀಯತೆಯ ರಾಜಕಾರಣವಾಯಿತು. ಇಲ್ಲಿಯ ವರೆಗಿನ ರಾಜಕಾರಣವು ಆಸುರೀ ರಾಜಕಾರಣವಾಗಿತ್ತು. ದಾರುಣವಾದ ಶಸ್ತ್ರಗಳು, ರಾಕ್ಷಸೀ ಅತ್ಯಾಚಾರಗಳು, ಕಗ್ಗೊಲೆ ರಕ್ತಪಾತಗಳು, ಬಲಾತ್ಕಾರ ಅನ್ಯಾಯ ವಂಚನೆಗಳು ಆಸುರೀ ರಾಜಕಾರಣದ ಅಂಗೋಪಾಂಗಗಳು ಹಾಗೂ ಪರಿಣಾಮಗಳು. ದುಃಖ ದಾರಿದ್ರ್ಯಗಳು ಅದರ ಸಹಚರರು. ಮಹಾತ್ಮರ ಮಾನವೀಯತೆಯ ರಾಜಕಾರಣವು ಇದಕ್ಕೆ ತೀರ ವಿರುದ್ಧವಾದುದು. ಸತ್ಯ, ಅಹಿಂಸೆ, ತ್ಯಾಗ ಇವು ಮಹಾತ್ಮರ ರಾಜಕಾರಣದ ಅಡಿಗಲ್ಲುಗಳು. ಪ್ರೇಮ, ಶಾಂತಿ, ಆನಂದಗಳೇ ಅದರ ಫಲಗಳು. ಇದರಲ್ಲಿ ಆಸುರೀ ರಾಜಕಾರಣವು ಶ್ರೇಷ್ಠವಾದದ್ದೋ ಇಲ್ಲವೆ ಮಾನವೀಯತೆಯ ರಾಜಕಾಣವು ಶ್ರೇಷ್ಠವಾದದ್ದೋ ಎಂಬದನ್ನು ನೀವೇ ವಿಚಾರಿಸಿರಿ. ಅಂದರೆ ಮಹಾತ್ಮರು ಶ್ರೇಷ್ಠರಾದ ರಾಜಕಾರಣ ಪುರುಷರೂ ರಾಜಕಾರಣದಲ್ಲಿ ಯುಗ ಪ್ರವರ್ತಕರೂ ಹೇಗಾದರು ಎಂಬ ಮಾತು ತನ್ನಿಂದ ತಾನೇ ಸ್ಪಷ್ಟವಾಗುತ್ತದೆ.

ಮೂರನೇ ಜಾಗತಿಕ ಯುದ್ಧದ ಕಾರ್ಮೋಡಗಳು ವಿಶ್ವದ ರಾಜಕಾರಣದ ದಿಗಂತಲ್ಲಿ ಕಾಣಿಸಿಕೊಳ್ಳುತ್ತಿರುವ ಈ ಸಮಯದಲ್ಲಿ ಮಹಾತ್ಮರ ರಾಜಕಾರಣವು ಜಗತ್ತಿಗೆ ಎಷ್ಟು ಅವಶ್ಯವಾಗಿದೆ ಎಂಬದನ್ನು ನೀವು ವಿಚಾರಿಸಿ ನೋಡಿರಿ. ಜರ್ಮನಿ, ಜಪಾನುಗಳನ್ನು ಸೋಲಿಸುವಲ್ಲಿ ಒಂದಾದ ರಾಷ್ಟ್ರಗಳು ಈಗ ವಿಶ್ವ ಶಾಂತಿಯನ್ನು ಕಾಯ್ದುಕೊಳ್ಳಲು ಏಕೆ ಒಂದಾಗಲೊಲ್ಲವು? ಈ ಪ್ರಶ್ನೆಗೆ ಉತ್ತರವೆಂದರೆ ಆ ರಾಷ್ಟ್ರಗಳು ಅನುಸರಿಸುತ್ತಿರುವ ಕುಟಿಲ ರಾಜನೀತಿಯೇ ಕಾರಣ ಎಂದು ತಟ್ಟನೇ ಉತ್ತರ ಹೇಳಬಹುದು. ಕಂಕುಳದಲ್ಲಿ ಡೊಣ್ಣೆ ಕೈಯಲ್ಲಿ ಶರಣಾರ್ಥಿ ಎಂಬುದೇ ಅವರ ಧ್ಯೇಯವಾಗಿದೆ. ಶಾಂತಿ ಸ್ಥಾಪನೆಗಾಗಿ ಯುದ್ಧ ಬೇಕು ಎಂದು ಅವರ ವಾದವಿದೆ. ಆದರೆ ಬೇವಿನ ಬೀಜವನ್ನು ಬಿತ್ತಿದರೆ ಮಾವಿನ ಫಲವು ದೊರೆಯುವದೇ? ಶಾಂತಿಯಿಂದಲೇ ಶಾಂತಿಯನ್ನು ಸಾಧ್ಯ. ಪ್ರೇಮದಿಂದಲೇ ಪ್ರೇಮವು ದೊರೆಯಬಲ್ಲದೇ. ದ್ವೇಷಾಸೂಯೆ

ಗಳಿಂದ ಎಂದೂ ಪ್ರೇಮ ಹುಟ್ಟುವದಿಲ್ಲ.

ಇದನ್ನೆಲ್ಲ ವಿಚಾರಿಸಿ ನೋಡಿದರೆ ಮಹಾತ್ಮರು ರಾಜಕಾರಣದಲ್ಲಿ ಯುಗ ಪ್ರವರ್ತಕರೆಂಬ ಮಾತನ್ನು ಒಪ್ಪಬೇಕಾಗುತ್ತದೆ. ನಿಶ್ಶಸ್ತ್ರವೂ ನಿಷ್ಕಲಂಕವೂ ಶಾಂತಿದಾಯಕವೂ ಪ್ರೇಮಮಯವೂ ಆದ ರಾಜಕಾರಣವು ನಮಗೆ ಅದೇಕೆ ಜಗತ್ತಿಗೇ ಹೊಸದೂ ಶ್ರೇಷ್ಠವಾದದ್ದೂ ಅಲ್ಲವೇ? ಇಂಥ ರಾಜಕಾರಣವನ್ನು ಬಳಕೆಗೆ ತಂದು ಅದರಿಂದಲೇ ಮೂವತ್ತುಮೂರು ಕೋಟಿ ಜನರಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಪುರುಷನು ಶ್ರೇಷ್ಠ ರಾಜಕಾರಣಿಯಲ್ಲದೆ ರಾಜಕಾರಣದಲ್ಲಿ ಯುಗ ಪ್ರವರ್ತಕನಲ್ಲವೇ ?

ಆದ್ದರಿಂದ ಮಹಾತ್ಮರು ಶ್ರೇಷ್ಠರಾದ ರಾಜಕಾ ಪಟುಗಳು. ರಾಜಕಾರಣವನ್ನು ಮಾನವೀಯತೆಗೆ ಇ ವರು, ಶಾಂತಿದೂತರು ಅಂತರರಾಷ್ಟ್ರೀಯ ರಾಜಕಾರ ದಾರಿಯನ್ನು ತೋರುವ ಯೋಗ್ಯತೆ ಉಳ್ಳವರು ಎ ನಾನು ಈಗ ಹೇಳಿದರೆ ನೀವೆಲ್ಲರೂ ಒಪ್ಪುವಿರೆಂದು ನ ದ್ದೇನೆ.

ಜಯ ಹಿಂದ!

—ಃಕರ್ಮಯೋಗಿಃ—

[ಧಾಟಿ:—ತೇರುನೆಳೆಯುತಾರ ತಂಗಿ । ನೋಡಲಿಕ್ಕೆ ಹೋಗೋನು ಬಾರೆ ॥ ಎಂಬ, ಶರೀಫ ಸಾಹೇಬರು ಶಿಶುವಿನ ಹಾಳ. ಇವರ ಪದ್ಯದಂತೆ.]

ಧನ್ಯ! ಧನ್ಯ! ಮಹಾತ್ಮಾ ಗಾಂಧಿ ।
ಮಾನ್ಯ ಭಾರತ ದೇಶದ ತಂದೆ ॥ಪಲ್ಲ॥

ಸತ್ಯ ಮಾರ್ಗವ ತೋರಿದ ಗಾಂಧಿ ।
ಶಾಂತಿ ಸಮತೆಯ ಬೀರಿದ ಗಾಂಧಿ ।
ನಿತ್ಯ ಅಹಿಂಸೆಯ ಸಾರಿದ ತಂದೆ ॥೧॥

ಹರಿಜನ ಉದ್ಧಾರ ಮಾಡಿದ ಗಾಂಧಿ ।
ಕರುಣ ಪೂರಿತ ಮೋಹನ ಗಾಂಧಿ ।
ಮರಣ ರಹಿತ ಮಹಿಮ ತಂದೆ ॥೨॥

ದುಂಡು ಮೇಜಿಗೆ ಹೋದ ಗಾಂಧಿ ।
ಲಂಡನ್ನು ನಡುಗಿಸಿಬಿಟ್ಟಂಥ ಗಾಂಧಿ ।
ಘಂಡಲಕಾಗಿ ಹೋದ ತಂದೆ ॥೩॥

ಜಾತಿ ಐಕ್ಯಕಾಗಿ ಗಾಂಧಿ ।
ದೂತನಾಗಿ ಮಡಿದ ಗಾಂಧಿ ।
ಸತತ ದೇಹವ ಸವಿಸಿದ ತಂದೆ ॥೪॥

ಮುದ್ದು ಚರಕವ ತಿರುವಿದ ಗಾಂಧಿ ।
ಖಾದಿ ಪ್ರಸಾರವ ಮಾಡಿದ ಗಾಂಧಿ ।
ನೇದು ವಸ್ತ್ರವ ಧರಿಸಿದ ತಂದೆ ॥೫॥

ಭಾರತ ಪುತ್ರವರ ಗಾಂಧಿ ।
ಭಾರತ ಸ್ವಾತಂತ್ರ್ಯ ಜನಕ ಗಾಂಧಿ ।
ಭಾರತಕಾಗಿ ಮಡಿದ ತಂದೆ ॥೬॥

ಆರ್. ಬಿ. ಪಾಟೀಲ. ಗಂಡು ಮಕ್ಕ
ಟ್ರೇನಿಂಗ್ ಕಾಲೇಜ ಶಿಸುವಿನಹಾಳ,

ಬಾಪೂಜಿ ಸ್ತ್ರೀಜನ ಸುಧಾರಕರು.

ಶ್ರೀಮತಿ ಕಮಲಾ ಬಾಜುರೂಪಕರ. ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಭಾರತೀಯರಿಗೆ ಅಕ್ಟೋಬರ ೨ನೆಯ ದಿನಾಂಕ ಒಂದು ಸ್ಫೂರ್ತಿದಾಯಕ ದಿನ. ಯಾಕಂದರೆ ಅದು ಭಾರತದ ಬಂಧ ವಿಮೋಚಕನ ಜನ್ಮದಿನ. ಬಾಪೂಜಿಯ ಹೆಗ್ಗುರಿ ಭಾರತದ ವಿಮೋಚನೆ ಒಂದೇ ಆಗಿದ್ದರೂ ಅವರ ಬಾಳು ಕೋತವರ ಗೆಲುವಿಗಾಗಿ, ದಲಿತರ ಉದ್ಧಾರಕ್ಕಾಗಿ, ಬಡ ಕುರಿಗಳ ಮೋಕ್ಷಕ್ಕಾಗಿ ಮೀಸಲಾಗಿತ್ತು. ಅಂತೇ ಬಾಪೂ ಅಳರಸನ ಆಜ್ಞಾ ಉಲ್ಲಂಘನೆ, ಸತ್ಯಾಗ್ರಹ, ಚಳವಳಿ, ಸಹಕಾರ, ಸಂಘಟನೆ. ಶಿಸ್ತು, ಹರಿಜನ ಉದ್ಧಾರ, ಸ್ತ್ರೀಜನ ಸಮುದಾಯದ ಸುಧಾರಣೆ, ಹೀಗೆ ಒಂದನ್ನು ಬಿಡದೆ ರಾಜಕಾರಣದ ಜೊತೆಗೆ ಎಲ್ಲವನ್ನೂ ಕೈಕೊಂಡರು. ಬಾಪುವಿನಂತೆ ರಾಜಕೀಯ, ಸಾಮಾಜಿಕ, ಧಾರ್ಮಿಕ, ನೈತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಮಹಾತ್ಮರು ಈವರೆಗೆ ಯಾರೂ ಇಲ್ಲ. ಬಾಪುವನ್ನು ಬಸವ, ಬುದ್ಧರಿಗೆ ಹೋಲಿಸುತ್ತಾರೆ, ಇದು ತಪ್ಪು.

ಬುದ್ಧ ಬಸವರು ಬರಿಯ ಪರ ಸಾಧನೆಗೆ ಬೇಕಾಗುವಷ್ಟನ್ನು ಹೇಳಿದರು. ಮೋಕ್ಷಕ್ಕೆ ಸಾಕಾಗುವಷ್ಟನ್ನು ಬೋಧಿಸಿದರು. ಆದರೆ ಬಾಪು ಹಾಗಲ್ಲ! ಇಹಲೋಕದಲ್ಲಿ ಸುಖ ಶಾಂತಿ ಸಿಕ್ಕಮೇಲೆ ಪರ ಸಾಧನೆ ಅವರ ಗುರಿ. ಆದರೆ ಅವರಿಗೆ ಮೋಕ್ಷ ಬೇಡವೆಂದಿಲ್ಲ! "ಜೀವವಿದ್ದಾಗ ಇಲ್ಲದ ಮೋಕ್ಷ ಸತ್ತಮೇಲೆ ತೆಗೆದುಕೊಂಡೇನು?" ಎಂಬ ಕಬೀರನ ಮಾತನ್ನೇ ಇವರು ಮೇಲೆ ಮೇಲೆ ಜನಕ್ಕೆ ಹೇಳುತ್ತಿದ್ದರು. ಆದ್ದರಿಂದ ಬಾಪುವನ್ನು ಯಾರಿಗಾದರೂ ಹೋಲಿಸ ಬೇಕಾದರೆ ಬಾಪುವಿಗೇ ಹೋಲಿಸಬೇಕಲ್ಲದೆ ಇನ್ನಿತರಿಗೆ ಅದು ಸಲ್ಲದು. ಯಾಕಂದರೆ ಬಾಪು ಬುದ್ಧ, ಬಸವರಂತೆ ಒಬ್ಬ ಸಾಧುವಲ್ಲ, ಸಿದ್ಧನೂ ಅಲ್ಲ! ಆತ ಒಬ್ಬ ಸಾಧಕ. ಆತನು ಸಾಧಿಸಿದ್ದು ಸತ್ಯ, ಅಹಿಂಸೆ. ಒಂದೆಡೆ ಸಿದ್ದವ್ವನ ಹಳ್ಳಿ ಕೃಷ್ಣಶರ್ಮರೆಂದಂತೆ "ಬಾಪು ಒಂದು ವ್ಯಕ್ತಿಯಲ್ಲ! ಅದೊಂದು ಪಂಥ" ಅದು ಜನತೆಯನ್ನು ಬೆಳಕಿನ ಕಡೆಗೆ ಎಳೆದೋಯ್ಯುವ ಒಂದು ದೀವಳಿಗೆ. ಭಗವಾನ ಬುದ್ಧ ದೇವನೇ ಒಂದೆಡೆ ಅಂದಿದ್ದಾನೆ. "ಸ್ತ್ರೀ ಜನಕ್ಕೆ ಮುಕ್ತಿಯೇ ಇಲ್ಲ"ವೆಂದು. ಬಾಪೂಜಿಯಾದರೋ ಸ್ತ್ರೀಯನ್ನು ಮಾತೃಸ್ಥಾನದಲ್ಲಿ ಕಂಡಿದ್ದಾರೆ. ಅವರು "ಇಂದು ಹೆಂಡತಿಯಾಗಿ ಕಂಡ ಸ್ತ್ರೀ ರೂಪವೇ ಅಂದು ತಾಯಿಯಾಗಿದ್ದಳು. ಮುಂದೆ ಅದೇ ರೂಪ ಮಗಳು." ಎಂದಿದ್ದಾರೆ. ಸ್ತ್ರೀಯನ್ನು ಅವರು ನಾಮರೂಪದಿಂದ ನೋಡದೆ ಆತ್ಮರೂಪದಿಂದ ನೋಡಿದ್ದಾರೆ. ಬಾಪೂಜಿಗೂ ಸ್ತ್ರೀಯರಿಗೂ ಇರುವ ಸಂಬಂಧ ಆತ್ಮ, ಆತ್ಮಗಳ ಸಂಬಂಧ. ಅಂತೆಯೇ ಅವರಿಗೆ ಸ್ತ್ರೀ ಜಾತಿಯ ಬಗೆಗೆ ಅಷ್ಟು ಗೌರವ, ವಿಶ್ವಾಸ.

ವಿಶ್ವದ ಎಲ್ಲ ದಾಸ್ಯಗಳಲ್ಲಿ ಹೆಂಗಸರದೇ ಘೋರವಾದುದು. ಸೋತು ಸೋತು ಸೋಲೇ ತನ್ನ ಪಾಲಿಗೆ ಸರಿಯೆಂದು ಒಪ್ಪಿದ್ದಳು ಸ್ತ್ರೀ ಈ ಪ್ರಪಂಚದಲ್ಲಿ. ಆದರೆ ಈಗ ಆಕೆಗೆ ತನ್ನ ಪಾಡಿನ ಅರಿವಾಗಿದೆ. ಆಕೆಗೂ ಮನಸ್ಸಿದೆ. ಬುದ್ಧಿಯಿದೆ. ಎಲ್ಲ ರಂಗಗಳಲ್ಲಿ ಮೇಲ್ಪಾಯು ಕೆಲಸ ಮಾಡತಕ್ಕ ಶಕ್ತಿಯೂ ಇದೆ ಎಂದು ಬಾಪು ತಿಳಿದಿರಬೇಕು. ಅಂತೆಯೇ ಸ್ತ್ರೀ ಜಾತಿಯ ಉದ್ಧಾರಕ್ಕೆ ಕೈಹಾಕಿದರು. ಈ ವರೆಗಾದ ಯಾವ ಅವತಾರಿಕ ಪುರುಷನೂ ಈ ಸಮಸ್ಯೆಗೆ ಕೈ ಹಾಕಿದ್ದಿಲ್ಲ. ಇತ್ತೀಚೆಗೆ ಕೆಲವು ಮಹನೀಯರು "ಸ್ತ್ರೀಯರ ಸುಧಾರಣೆ ಆಗಬೇಕು. ಅವರು ಮುಂದೆ ಬರಬೇಕು. ಎಂದು ಹೇಳಿದರು. ಆದರೆ ಅದು ಬಾಯಿಮಾತೇ ಆಗಿತ್ತು. ನೈಜ ಕೃತಿಗೆ ಇಳಿದಿರಲಿಲ್ಲ. ಹೆಂಗಸಿಗೆ ಯಾವ ಸ್ವಾತಂತ್ರ್ಯವೂ ಸಮಾಜದಲ್ಲಿದ್ದಿಲ್ಲ. ಆಕೆ ಅವರ ಪಾಲಿಗೆ ಒಂದು ಚರ ಆಸ್ತಿ. ಅದನ್ನು ಬೇಕಾದಾಗ ಕೊಳ್ಳಬಹುದು. ಬೇಕಾದಾಗ ಬೇಕಾದವರಿಗೆ ಮಾರಲೂ ಬಹುದು ಎಂದು ನಮ್ಮವರ ಕಲ್ಪನೆ. ಇಂಥ ಈ ಕಲ್ಪನೆ ನಮ್ಮಲ್ಲಿಯೇ ಅಲ್ಲ. ಅರಬ, ಯಹೂದ್ಯರಲ್ಲಿಯೂ ಕೂಡ ಬಳಕೆಯಲ್ಲಿತ್ತು. ಹೆಣ್ಣಿಗೆ ಮಿಸುಕಾಡಲು ಕೂಡ ಅನುವಿಲ್ಲ.

ಆಕೆ ದೊಡ್ಡವಳಾಗುವ ವರೆಗೆ ತಂದೆಯ ಆಧೀನ, ಮುಂದೆ ಗಂಡನ ಆಧೀನ, ಮುಪ್ಪಡಸಲು ಮಕ್ಕಳ ಆಧೀನ' ಕೊನೆಗೆ ಸಾವಡಸಲು ಯಮನ ಆಧೀನ. ಈ ಆಧೀನಗಳ ಪರಂಪರೆಯನ್ನು ಬಾಪೂಜಿ ನೋಡಿ ಬೇಸತ್ತಿರಬೇಕು. ಹೆಂಗಸು

ಸಹಿಸುತ್ತಿರುವ ದಬ್ಬಾಳಿಕೆಯನ್ನು ಅವರು ಕಂಡು ಮರುಗಿರಬೇಕು. ಅಂತೆಯೇ ಅವರು ಒಂದೆಡೆ ಅಂದಿದ್ದಾರೆ. "ಹೆಣ್ಣು ಒಂದು ಮಹಾಶಕ್ತಿ. ಇದು ನನಗೂ ಮೊದಲು ತಿಳಿದದ್ದು 'ಬಾ'ನಿಂದ. ನನ್ನ ಹೆಂಡತಿಯನ್ನು ನನ್ನ ಮನಸ್ಸಿಗೆ ತಕ್ಕಂತೆ ಬಗ್ಗಿಸುವ ಪ್ರಯತ್ನದಲ್ಲಿ ಆಕೆಯಿಂದ ನಾನೇ ಅಹಿಂಸೆಯ ಪಾಠ ಕಲಿತೆ. ನನ್ನ ಹಟಕ್ಕೆ ಮಣಿಯದೆ ದೃಢವಾಗಿ ಆಕೆ ವಿರೋಧಿಸುವದು ಒಂದು ಕಡೆ. ನನ್ನ ಮೂರ್ಖತನಕ್ಕೆ ಬೇಸತ್ತು ನನ್ನ ಕಾರ್ಯವನ್ನು ಸದ್ದಿಲ್ಲದೆ ಸಹಿಸುವದು ಇನ್ನೊಂದು ಕಡೆ. ಇದರಿಂದ ನನ್ನ ನೆತ್ತಿಗೇರಿದ ಪಿತ್ತ ಪೂರಾ ಕಡಿಮೆ ಆಗಿ ಆಕೆಯಿಂದ ನಾನು ಒಂದು ಹೊಸ ಪಾಠ ಕಲಿತೆ ಆಫ್ರಿಕೆಯಲ್ಲಿದ್ದಾಗ. ಆಕೆ ಅರಿಯದೆ ಮಾಡಿದ್ದನ್ನು ನಾನು ಅರಿತು ಮಾಡಿದ್ದೇನೆ" ಎಂದಿದ್ದಾರೆ.

ಎಷ್ಟಾದರೂ ಗಾಂಧೀಜಿಗೆ ಸ್ತ್ರೀ ಅಬಲೆಯಲ್ಲ! ಸಬಲೆ "ಪಾಶವೀಶಕ್ತಿಯೇ ಶಕ್ತಿ ಎನ್ನುವದಾದರೆ ಅದರಲ್ಲಿ ಸ್ತ್ರೀ ಗಂಡಸಿಗಿಂತ ಸಾವಿರ ಪಟ್ಟು ಸಬಲೆ, ಆಕೆ ಅಹಿಂಸೆಯ ಮೂರ್ತಿ, ತಾಳ್ಮೆಯ ಪ್ರತಿಮೆ" ಎಂದಿದ್ದಾರೆ ಬಾಪು.

ಅವರು ದಕ್ಷಿಣ ಆಫ್ರಿಕೆಯಲ್ಲಿದ್ದಾಗಲೇ ಸ್ತ್ರೀ ಜನ ಸುಧಾರಣೆಗೆ ಮೊದಲು ಮಾಡಿದ್ದರು, ಈಚೆಗೆ ಹಿಂದುಸ್ತಾನದ ಸ್ತ್ರೀಯರಲ್ಲಿ ಅದ್ಭುತ ಜಾಗೃತಿ ಉಂಟಾಗಿದೆ. ಮೊನ್ನೆ ಮೊನ್ನೆ ತೊತ್ತಾಗಿದ್ದ ಹೆಂಗಸು ಇಂದು ರಾಜಕೀಯ ರಂಗದಲ್ಲಿ ಪುರುಷನ ಸಮಾನ ಹೆಜ್ಜೆ ಹಾಕುತ್ತಿದ್ದಾಳೆ. ಐವತ್ತು ವರುಷಗಳ ಕೆಳಗೆ ಅಡುಗೆ ಮನೆಯಲ್ಲಿ ಒಂದು ಕರಿಯ್ಯ ಬಾಪುಗ ಬಂದರೆ ಅಂಜಿ ಚೆಟ್ಟನೆ ಚೀರುವ ಮಹಾಧಿರೆ ಅಂದು ಆಳರಸನ ಲಾಠಿಯ ಹೊಡೆತಕ್ಕೆ ನೆರವಾಗಿ ತನ್ನ ತಲೆಯನ್ನು ಕೊಟ್ಟಳು. ಇದೆಲ್ಲ ಈ ಗಾಂಧಿ ಯುಗದಲ್ಲಾದ ಬದಲಾವಣೆ. ಸತ್ಯಾಗ್ರಹದಿಂದಲೇ ಸ್ತ್ರೀ ಜನ ಸೇವೆಗೆ ಮೊದಲುಮಾಡಿದರು ಬಾಪು. ಉಪ್ಪಿನ ಸತ್ಯಾಗ್ರಹದಿಂದ ಎಷ್ಟೋ ಜನ ಸ್ತ್ರೀಯರು ತಮ್ಮ ಗವಿಗಳನ್ನು ಬಿಟ್ಟರು. ಗಂಡಸಿನೊಡನೆ ಸಮನಾಗಿ ಸ್ವಾತಂತ್ರ್ಯದ ಹೆಜ್ಜೆ ಹಾಕಿದರು. ನಿಜವಾಗಿ ಸತ್ಯಾಗ್ರಹದಿಂದಲೇ ಸ್ತ್ರೀಯರ ಉದ್ಧಾರವಾದ ಹಾಗೆ, ಇದಕ್ಕೆ ಈಗ ಎಲ್ಲ ರಂಗಗಳಲ್ಲಿ ಮೆರೆಯುವ ಸ್ತ್ರೀಯರ ಕೈವಾಡವೇ ಸತ್ಯ. ಬಾಪು ಹೇಳುತ್ತಿದ್ದ- ಪ್ರತಿಯೊಬ್ಬ ಸ್ತ್ರೀಯ ಬಾಳೂ ಕೇವಲ ಲಗ್ನಕ್ಕಾಗಿ ಅಲ್ಲ! ಲಗ್ನವಾಗಿ ಒಬ್ಬನ ಸೇವೆಯಲ್ಲಿ ಜೀವನ ತಳ್ಳುವದಕ್ಕಿಂತ ಹಾಗೆಯೇ ಇದ್ದು ಇಷ್ಟು ನರಕೋಟಿಯ ಸೇವೆಯಲ್ಲಿ ಜೀವನ ತಳ್ಳುವ ಸ್ತ್ರೀಯ ಬಾಳೇ ಮೇಲಲ್ಲವೇ?" ಎಂದು.

ಬಾಪು ಸ್ತ್ರೀಯರಿಗಾಗಿ ಇನ್ನೂ ಒಂದು ತತ್ವ ಉಪದೇಶಿಸಿದ್ದಾರೆ. ಇಷ್ಟು ದಿನ ಸ್ತ್ರೀಯರು ಗಂಡನ ಆಜ್ಞೆ ಎಂಥರಾದರೂ ಅದನ್ನು ಮೀರಕೂಡದು. ಅದು ವೇದ ವಾಕ್ಯ, ಎಂಬ ಭಾವನೆ ನಮ್ಮ ಜನರಲ್ಲಿ ಬೆಳೆದು ಬಂದಿತ್ತು. ಇದಕ್ಕೆ ಬಾಪು ಒಂದು ಕಥೆಯನ್ನು ಉದಹರಿಸುತ್ತಿದ್ದರು. ಅದು ಸೀತೆಯದು. ರಾಮ ವನಕ್ಕೆ ಹೋಗುವಾಗ ಸೀತೆಗೆ ಬರಬೇಡವೆಂದರೂ ಆಕೆ ತನ್ನ ಧರ್ಮಕ್ಕಾಗಿ ಗಂಡನ ಆಜ್ಞೆ ಮೀರಿದಳು." ಈ ರೀತಿ ನೆಮ್ಮದಿಯಾಗಿ ಧರ್ಮವನ್ನೂ ಬೋಧಿಸುತ್ತಿದ್ದರು.

ಯಾರೇ ಆಗಲಿ ತಾವು ತಪ್ಪು ಮಾಡಿದರೆ ಆ ತಪ್ಪಿನಲ್ಲಿ ಬೇರೆಯವರನ್ನು ಸಿಕ್ಕಿಸುವದೊಂದು ಚಾಪಲ್ಯ ಮಾನವ ಜಾತಿಯದು. ಗಂಡ ತನ್ನ ದೌರ್ಜನ್ಯದಿಂದ ದುರ್ಮಾರ್ಗಿಯಾಗಿ ಅಧೋಗತಿಗಿಳಿಯುತ್ತಿದ್ದರೆ ತನ್ನ ಜೊತೆಗೆ ತನ್ನ ಹೆಂಡತಿಯನ್ನೂ ಅಧೋಗತಿಗಿಳಿಸಲು ಆತ ಪ್ರಯತ್ನಿಸುತ್ತಾನೆ, ಎಂದು ತಿಳಿದಿರಬೇಕು ಬಾಪು. ಅಂತೆಯೇ ಇಂಥ ಪ್ರಸಂಗಗಳನ್ನು ತಪ್ಪಿಸಲು ಸ್ತ್ರೀ ಜನಕ್ಕೆ ಅವರು ಉಪದೇಶ ಮಾಡಿದ್ದು.

ಬಾಪು ಸ್ತ್ರೀ ಜಾತಿಗೆ ದೇವರು ದಯಪಾಲಿಸಿದ ಒಂದು ಮಹಾ ಸೊತ್ತು. ಅವರನ್ನು ಕಂಡರೆ ಸ್ತ್ರೀಯರಿಗೆ ತುಂಬ ಗೌರವ, ಪ್ರೀತಿ. ಬಾಪುವನ್ನು ಅವರು ಒಂದು ಪರಿಪೂರ್ಣ ವ್ಯಕ್ತಿಯೆಂದು ತಿಳಿದಿದ್ದಾರೆ. ಈ ಪರಿಪೂರ್ಣ ವ್ಯಕ್ತಿಯಲ್ಲಿಯೂ ಒಂದು ಹಟ ಇತ್ತು. ಅದು ತನ್ನ ಬಳಿಯಲ್ಲಿ ಬಂದವರಿಗೆ ಸೂತ್ರಯಜ್ಞದ ದೀಕ್ಷೆ ಕೊಡುವದು. ಖಾದಿ ಧಾರಿಗಳನ್ನಾಗಿ ಮಾಡುವದು. ಬಾಪೂಜಿಯ ಮಾತಿಗೆ ಬೆಲೆ ಕೊಟ್ಟು ದೀಕ್ಷಾಬದ್ಧರಾದವರು ಗಂಡಸರು ಒಂದು ಸಾವಿರ ಜನವಾದರೆ ಸ್ತ್ರೀಯರು ಗಿಲಕ್ಷ ಜನ.

ಬಾಪೂಜಿ ಒಬ್ಬ ದರಿದ್ರ ನಾರಾಯಣದ ದತ್ತಕ ತಂದೆ. ತನ್ನ ನಾಲ್ವತ್ತು ಕೋಟಿ ಮಕ್ಕಳ ಪಾಲನೆಗೆ ಆಗಾಗ ಭಿಕ್ಷಾಟನೆಗೆ ಹೊರಡಬೇಕಾಗುತ್ತಿತ್ತು. ಅವರು ಸ್ತ್ರೀಯರಿಗೆ ಹೇಳುತ್ತಿದ್ದರು, "ನಿಮ್ಮ ಬಳಿಯಲ್ಲಿ ನಿಮ್ಮದೆನ್ನುವ ವಸ್ತು ಯಾವದೂ ಇಲ್ಲ, ನಿಮ್ಮ ಮೈಮೇಲಿನ ಆಭರಣಗಳ ಹೊರತಾಗಿ ಈ ಆಭರಣಗಳ ಮೇಲೆ ಯಾರ ಅಧಿಕಾರವೂ ಇಲ್ಲ. ಅವನ್ನು ನೀವು ನಿಮ್ಮ ಮನಸ್ಸಿಗೆ ಬಂದಂತೆ ಮಾಡಬಹುದು" ಎಂದು. ಈ ಮಾತನ್ನು ಕೇಳಿ ಬಡಜನ ಸೇವೆಗಾಗಿ ಸ್ತ್ರೀ ಜನ ತಮ್ಮ ಆಭರಣಗಳ ವೃಷ್ಟಿಕರಿ[illegible]ತ್ತಿದ್ದರು. ಬಾಪು ಏನ ಮುಂದೆ. ಬಡಕಲು ದೇ[illegible]ರಾಗಿಯಾದ ಬಾಪು

ಬಾಪೂಜಿ-ಸ್ತ್ರೀಜನ ಸುಧಾರಕರು.

ವಿಗೆ ಈ ರೀತಿ ಗೌರವ. ಬಾಪೂಜಿ ಮೇಲೆ ಮೇಲೆ ಯುರೋಪಕ್ಕೆ ಹೋಗುತ್ತಿದ್ದರು. ಎಲ್ಲಿಹೋದರೂ ಅವರ ಬೆಳಗಿನ ಸಾಯಂಕಾಲದ ಪ್ರಾರ್ಥನೆ ತಪ್ಪಿದ್ದಲ್ಲ. ಅವರ ಜೀವನದ ತಳಹದಿ, ತುದಿ, ಪ್ರಾರ್ಥನೆಯೇ! ಯುರೋಪದಲ್ಲಿ ಚಳಿ ಹೆಚ್ಚಾದರೂ ಅವರ ಪ್ರಾರ್ಥನೆಗೆ ಅದೆಷ್ಟೋ ಜನ ಬರುತ್ತಿದ್ದರು. ಹೀಗೆ ಬರತಕ್ಕವರಲ್ಲಿ ಸ್ತ್ರೀಯರೇ ಹೆಚ್ಚು. ಬಾಪೂಜಿಗೆ ಗೌರವಿಸುವದಂತೂ ಸರಿಯೇ ಸರಿ! ಬಾಪುವನ್ನು ನೋಡಿದವರಿಗೆ, ಇಷ್ಟೇ ಏಕೆ ಬಾಪುವಿನ ದೇಶದವರೆಂದರೆ ಸಾಕು, ಅವರನ್ನು ತುಂಬ ಉಪಚರಿಸುವರು ಅಲ್ಲಿಯ ಜನ. ಪರರಾಷ್ಟ್ರಗಳಲ್ಲಿ ಬಾಪುವೆಂದರೆ ಹಿಂದುಸ್ಥಾನ, ಹಿಂದುಸ್ಥಾನವೆಂದರೆ ಬಾಪು, ಎಂಬ ಭಾವನೆ ಇಷ್ಟು ಬಲವಾಗಿದೆ. ಭಾರತದೊಡನೆ ಬಾಪುವಿನ ಸಂಬಂಧ ಇಷ್ಟು ಹಾಸುಹೊಕ್ಕಾಗಿದೆ. ಬಾಪು ಸ್ತ್ರೀ ಜಾತಿಯನ್ನು ತುಂಬ ಗೌರವಿಸುತ್ತಿದ್ದರು. ಅವರು ಒಮ್ಮೆ ತಮಿಳು ನಾಡಿಗೆ ಹೋಗಿದ್ದರು. ಅಲ್ಲಿಯ ಆಂಧ್ರ ಕಲಾಪತಿಯರನು ಕಂಡು ತುಂಬ ಹಿಗ್ಗಿ "ನನಗೆ ಪುನರ್ಜನ್ಮ ಇರುವದಾದರೆ ನಾನು ಇವರ ಮಧ್ಯ ಹುಟ್ಟಿ ಇವರ ಸೇವೆ ಮಾಡಬಯಸುತ್ತೇನೆ" ಎಂದಿದ್ದಾರೆ.

ಬಾಪು ನಿಜವಾಗಿಯೂ ಒಬ್ಬ ಸ್ತ್ರೀ ಜನ ಸುಧಾರಕ. ಇದಕ್ಕೆ ಈಗ ಎಲ್ಲ ರಂಗಗಳಲ್ಲಿಯೂ ಕೇಳಬರುತ್ತಿರುವ ಸ್ತ್ರೀಯರ ವಿಜಯ ನಿನಾದವೇ ಸಾಕ್ಷಿ.

ಈ ರೀತಿ ಸ್ತ್ರೀ ಜಾತಿಯ ಉದ್ಧಾರಕ್ಕಾಗಿ ಹೆಣಗಿದ ಬಾಪು ಇಂದು ನಮ್ಮ ಮಧ್ಯದಲ್ಲಿಲ್ಲ. ಅವರು ಗುಂಡಿನೇಟಿಗೆ ತಮ್ಮ ಗುಂಡಿಗೆಯನ್ನು ವೀರರಂತೆ ಒಡ್ಡಿ ಕಣ್ಮರೆ ಆಗಿದ್ದಾರೆ. ಆದರೂ ಅವರ ತತ್ವ ನಮ್ಮ ಕಣ್ಣಮುಂದಿವೆ. ಅವರು ಮುಸೋಲಿನಿಯಂತೆ ಮಡಿಯಲಿಲ್ಲ! ಹಿಟ್ಲರನಂತೆ ಸಾಯಲಿಲ್ಲ! ಸಾಕ್ರೆಟೀಸನಂತೆ ಸಾವನ್ನಪ್ಪಿದರು. ಏಸುವಿನಂತೆ ಸಿಲುಬೆಗೇರಿದರು. ಅದಕ್ಕಾಗಿ ನಾವು ಅವರ ಮರಣಕ್ಕೆ ದುಃಖಿಸಬೇಕಾಗಿಲ್ಲ. ಅವರು ಹಾಕಿಕೊಟ್ಟ ಆ ದರ್ಶನದ ದಾರಿಯತ್ತ ಸಾಗುವದು ಇಂದಿನ ಭಾರತೀಯರ ಕರ್ತವ್ಯ. ಈ ರೀತಿ ಭಾರತದ ಕಣ್ಮಣಿಯಾದ ಬಾಪು, ಸತ್ತರೂ ಭಾರತದ ಸೇವೆಯನ್ನು ಸತ್ಯ, ಅಹಿಂಸೆಯೆಂಬ ತತ್ವದ ಮೂಲಕ ಮಾಡುವ ಬಾಪು ಇಂದು ಅಮರರಾಗಿದ್ದಾರೆ. ಅವರ ದಿವ್ಯಾತ್ಮಕ್ಕೆ ಜಗದೀಶನು ಶಾಂತಿಯನ್ನು ಈಯಲಿ.



ಗಾಂಧೀಜಿಯವರ ಜಡ ದೇಹ ದಹನದ ದೃಶ್ಯ.

ಅಸ್ಪೃಶ್ಯೋದ್ಧಾರಕ ಗಾಂಧೀಜಿ.

ಶ್ರೀಮತಿ ಶಾಂತಾ ಮಳಗಿ. ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

★

ಗಾಂಧಿಯವರು ನಮ್ಮ ಹಿಂದುಸ್ತಾನದ ದಾಸ್ಯವನ್ನು ಹೋಗಲಾಡಿಸುವದರ ದೆಶೆಯಿಂದ ಅನೇಕ ಪ್ರಯತ್ನಗಳನ್ನು ಮಾಡಿದರು. ಅದರಲ್ಲಿಯೂ "ಹರಿಜನೋದ್ಧಾರ"ದ ಕಡೆಗೆ ವಿಶೇಷ ಲಕ್ಷ್ಯಪೂರೈಸಿದರು. ಮೊದಲು ನಮ್ಮಲ್ಲಿ ಜಾತಿ ಭೇದಗಳುಂಟಾಗಲು ಕಾರಣವೇನು? ಆರ್ಯರ ಕಾಲದಿಂದಲೂ ನಮ್ಮ ಈ ವರ್ಣಭೇದಗಳು ಕಂಡು ಬರುತ್ತವೆ. ಆರ್ಯರು ತಮ್ಮ ಸಮಾಜದ ಶ್ರಮವಿಭಾಗಕ್ಕಾಗಿ ನಾಲ್ಕು ವರ್ಣಗಳನ್ನು ಕಲ್ಪಿಸಿಕೊಂಡರು. ಮುಂದೆ ವಂಶಪರಂಪರವಾಗಿ ಆಯಾ ಜನರು ತಮ್ಮ ಪಾಲಿಗೆ ಬಂದ ಕೆಲಸಗಳನ್ನು ಪ್ರೀತಿಯಿಂದಲೂ, ಸಹಾನುಭೂತಿಯಿಂದಲೂ ಮಾಡುತ್ತ ಬಂದರು. ಜನರು ಹೆಚ್ಚಾದಂತೆ ಪಟ್ಟಣಗಳ ನಿರ್ಮಾಣವಾಯಿತು. ಅದರಿಂದ ಈ ನಾಲ್ಕು ವರ್ಣಗಳ ಸಂಬಂಧವು ಕಡಿಮೆಯಾಗುತ್ತ ಬಂದಿತು. ಏದೇಕೆ? ತಪ್ಪಿಯೇ ಹೋಯಿತೆಂದರೂ ಅಡ್ಡಿ ಇಲ್ಲ, ಹೀಗಿರಲು ಇಂಗ್ಲಿಷರು ನಮ್ಮಲ್ಲಿ ಮೆಲ್ಲ ಮೆಲ್ಲನೆ ಹೆಜ್ಜೆಹಾಕತೊಡಗಿ ನಮ್ಮ-ನಮ್ಮಲ್ಲಿಯ ವರ್ಣಗಳನ್ನು ಬೆಳೆಸಿದರು. ಮೇಲು ಕೀಳುಗಳೆಂಬ ಭಾವನೆಗಳನ್ನು ತಂದು ಕೊಡಹತ್ತಿದರು. ಆಗಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣರಿಗೇ ಹೆಚ್ಚು ದೊಡ್ಡ-ದೊಡ್ಡ ಕೆಲಸಗಳಿನ್ನು ಕೊಟ್ಟು, ಅವರನ್ನೇ ಏರಿಸಿ ಕೂಡ್ರಿಸಿದರು. ಇದರಿಂದ ಶಿಕ್ಷಣ ಪಡೆದವರೆಲ್ಲರೂ ಅಶಿಕ್ಷಿತರನ್ನು ಬಹಳ ಕೀಳುತನದಿಂದ ನಡೆಸಿಕೊಳ್ಳಲು ಮೊದಲಾಯಿತು. ಈ ಪ್ರಕಾರ ಇಂಗ್ಲಿಷರು ಮೊದಲು ವ್ಯಾಪಾರಕ್ಕಾಗಿ ಬಂದು, ಹಿಂದುಸ್ತಾನದಲ್ಲಿಯ ಜನರಲ್ಲಿ ಒಡಕು ಮತ-ಭೇದ ಇತ್ಯಾದಿಗಳನ್ನು ಬೆಳಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಾರಂಭಿಸಿದರು. ಈವರೆಗೆ ಸಮಾಜದಲ್ಲಿ ಮೊದಲೇ ಹಿಂದೆ ಬಿದ್ದ ಅಸ್ಪೃಶ್ಯರು ಇನ್ನೂ ಹಿಂದೆ ಸರಿಯಹತ್ತಿದರು. ಇವರಿಗೆ ಸಮಾಜದಲ್ಲಿ ಎಲ್ಲಿಯೂ ಸ್ಥಾನಮಾನಗಳು ಸಿಕ್ಕದಂತಾದವು. ಈ ಸಮಯವನ್ನು ಸಾಧಿಸಿ ಇಂಗ್ಲಿಷರು ಇನ್ನೂ ಹೆಚ್ಚು ಉರಿಯುವದರಲ್ಲಿ ಹುಲ್ಲು ಹಾಕಿದರು. ಸರ್ವರ ಮನಸ್ಸಿನಲ್ಲಿಯೂ ಸೇವ್ಯ ಸೇವಕ ಎಂಬ ಭಾವನೆ ಸಂಪೂರ್ಣವಾಗಿ ನೆಲೆಗೊಂಡಿತು. ಮುಂದೆ ಗಾಂಧೀಜಿಯವರು ಈ ಪ್ರಕಾರ ಸಮಾಜದಲ್ಲಿ ನಡೆಸಿರುವ ಅನ್ಯಾಯಗಳನ್ನು ನೋಡಿ, ನೋಡಿ ಬೇಸತ್ತು ಇತ್ತ ಲಕ್ಷ ಹಾಕಿದರು. ಯಾವಾಗಲೂ "ಅಸ್ಪೃಶ್ಯೋದ್ಧಾರವನ್ನು ಯಾವ ರೀತಿಯಿಂದ ಮಾಡಬೇಕೆಂಬುದೊಂದೇ ಚಿಂತೆ. ಅವರಿಗಾಗಿ ಬಹಳ ಕಷ್ಟಪಡಹತ್ತಿದರು. ಅವರಲ್ಲಿ ಜಾಗ್ರತಿಯನ್ನುಂಟು ಮಾಡಬೇಕೆಂದು ವಿಶ್ವ ಪ್ರಯತ್ನ ಮಾಡಹತ್ತಿದರು. ಮತ್ತು ಅವರೊಡನೆ ಬೆರೆತು ಮುಖ್ಯವಾಗಿ ಹಳ್ಳಿಗಳಲ್ಲಿಯೇ ಕೆಲಸಮಾಡಹತ್ತಿದರು. ಕಾಂಗ್ರೆಸ್ಸಿನ ಮುಖಾಂತರ ಹರಿಜನ ಮಂತ್ರಿಗಳು ನಿಯಮಿಸಲ್ಪಟ್ಟರು. ಹರಿಜನರು ಸುಧಾರಿಸಬೇಕೆಂದು ಮಧ್ಯಪ್ರತಿಬಂಧ ಮಾಡಿದರು. ಮತ್ತು ಖಾದಿ ಪ್ರಚಾರ ಮಾಡಿದರೆ ಜನರು ಸ್ವಾವಲಂಬಿಗಳಾಗುವರೆಂದು ತಿಳಿದು ನೂಲುವದು, ನೇಯುವದು ಇತ್ಯಾದಿಗಳನ್ನು ಪ್ರಚಾರದಲ್ಲಿ ತಂದರು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಡೆದ ಸೇವ್ಯ ಸೇವಕ ವೃತ್ತಿಯನ್ನು ಹೋಗಲಾಡಿಸುವದರ ಸಲುವಾಗಿ ಅಲ್ಲಿಯೂ ಹರಿಜನರೊಡನೆ ಸೇರಿ ಕೆಲಸ ಮಾಡಹತ್ತಿದರು. ಯಾವ ಹಳ್ಳಿಗೇ ಹೋಗಲಿ, ಪಟ್ಟಣಕ್ಕೇ ಹೋಗಲಿ, ಇವರು ಹರಿಜನ ಕೇರಿಯಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಅವರೊಡನೆ ಓಣಿ ಗೂಡಿಸುವದು, ಭಂಗಿ ಕೆಲಸ ಇತ್ಯಾದಿಗಳನ್ನು ಮಾಡಿ, ಅವರೂ, ತಾವೂ ಒಂದೇ ಎಂಬ ಭಾವನೆಯನ್ನು ಹರಿಜನರಿಗೂ, ಮಾನವನು ಎಷ್ಟೇ ದೊಡ್ಡವನಿದ್ದಾಗ್ಯೂ ಸ್ವಾವಲಂಬಿಯಾಗಿರಬೇಕೆಂಬುದನ್ನು ಜನತೆಗೂ, ಸಮಾಜಕ್ಕೂ ಪ್ರತಿಕ್ಷಣಕ್ಕೆ ಪ್ರತಿಯೊಂದು ಕೆಲಸದಲ್ಲಿ ತೋರಿಸಿಕೊಡುತ್ತಿದ್ದರು. ಹರಿಜನರಿಗೂ ಭಕ್ತಿ, ದೇವರು ಎಂಬುದನ್ನು ಕಲ್ಪಿಸಿಕೊಟ್ಟು, ಅವರಿಗೆ ಭಜನೆ ಇತ್ಯಾದಿಯನ್ನು ಕಲಿಸಿ ದಿಲ್ಲಿಯಲ್ಲಿ ಅವರಿಗೋಸುಗ ವಾಲ್ಮೀಕಿ ಗುಡಿಯನ್ನು ಸ್ಥಾಪಿಸಿದರು. ಅಲ್ಲದೆ ಹಿಂದೂ ಜನರ ಪವಿತ್ರ ಕ್ಷೇತ್ರಗಳಾದ

ಶಿ, ಮಧುರಾ, ರಾಮೇಶ್ವರ, ತಿರುಪತಿ ಮುಂತಾದ ಪವಿತ್ರ ದೇವಾಲಯಗಳಲ್ಲಿಯೂ ಕೂಡ ಹರಿಜನರ ಪ್ರವೇಶ ಮಾಡಿಸಿದರು. ಕೆರೆ, ಭಾವಿಗಳನ್ನು ಮುಟ್ಟಲು ಅನುಕೂಲ ಮಾಡಿಕೊಟ್ಟರು. ಹರಿಜನರನ್ನು ಸುಶಿಕ್ಷಿತರನ್ನಾಗಿ ಮಾಡಲು ಪ್ರಯತ್ನಿಸಿದರು. ಲಕ್ಷ್ಮಿಯೆಂಬ ಹರಿಜನ ಬಾಲಿಕೆಯನ್ನು ಅತ್ಯಂತ ಮಮತೆಯಿಂದ ಸಾಕಿ, ಸಲುಹಿ ಶಿಕ್ಷಣ ಕೊಟ್ಟರು. ಈ ಪ್ರಕಾರ ಹರಿಜನರ ಉನ್ನತಿಗಾಗಿ ಹೋರಾಡಿದ ಮಹಾತ್ಮರು ಕೊನೆಗೆ ಅವರನ್ನು ಉಚ್ಚಸ್ಥಾನಕ್ಕೆ ಮುಟ್ಟಿಸಿದರು ಮತ್ತು ಹರಿಜನರ ಬಲವನ್ನು ಸಮಾಜದ ಕಡೆಗೂ ತಿಳಿಸಿದರು. "ನುಡಿಗಿಂತ ನಡೆಮೇಲು" ಎಂಬ ನಾಣ್ಣುಡಿಯನ್ನು ಇವರು ಚೆನ್ನಾಗಿ ಅರಿತದ್ದರಿಂದಲೇ ಇಂಥ ದೊಡ್ಡ ಕೆಲಸಕ್ಕೆ ಕೈಹಾಕಿ ರಾಷ್ಟ್ರೋದ್ಧಾರದ ಸಲುವಾಗಿ, ಒಕ್ಕಲನ್ನು ಬೆಳೆಸುವದರ ಸಲುವಾಗಿ, ಹರಿಜನರ ಉನ್ನತಿಗಾಗಿ, ಹಿರಿಯಿಂದ ಹೋರಾಡಹತ್ತಿದರು. ಅವರು ಯಾವಾಲೂ ಹರಿಜನರ ಕೀಳು ಸ್ಥಿತಿಗೆ ನಾವೇ ಕಾರಣರೆಂದೂ, ಇದು ನಮ್ಮದೇ ತಪ್ಪೆಂದೂ ಮೇಲಿಂದಮೇಲೆ ಹೇಳುತ್ತಿದ್ದರು. ಮತ್ತು ನಮ್ಮಲ್ಲಿ ಈ ಪ್ರಕಾರ ಹಲವಾರು ದೋಷಗಳಿರುವದರಿಂದಲೇ, ನಾವು ಪಾರತಂತ್ರ್ಯದಲ್ಲಿ ಸಿಕ್ಕು ತೊಳಲಾಡುತ್ತಿದ್ದೇವೆಂದೂ, ನಮ್ಮಲ್ಲಿಯ ಈ ಭೇದಗಳಳಿದ ಮೇಲೆಯೇ ನಾವು ಸ್ವಾತಂತ್ರ್ಯ ಸುಖವನ್ನನುಭವಿಸುವೆವೆಂದೂ ಹೇಳುತ್ತಿದ್ದರು ಈ ಪ್ರಕಾರ ಹರಿಜನೋದ್ಧಾರವನ್ನು ಮಾಡಬೇಕಾದರೆ ನಮ್ಮ ಗಾಂಧೀಜಿಯವರೂ ಹರಿಜನದಾಗಲೇ ಸಾಧ್ಯವಾಯಿತೆಂಬುದನ್ನು ಎಲ್ಲರೂ ನೆನಪಿನಲ್ಲಿಡತಕ್ಕದ್ದಾಗಿದೆ. ಈ ರೀತಿ ಅನೇಕ ರೀತಿಯಿಂದ ನಮ್ಮೆಲ್ಲರಿಗೆ ಉಪದೇಶ ಮಾಡಿ, ನಮಗೆ ಅಗಷ್ಟ ೧೫ಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟು, ಆ ಸುಖವನ್ನು ತಾವು ಕೇವಲ ೫ ತಿಂಗಳು ಅನುಭವಿಸಿ ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರು. ಮೂರ್ತಿ ಮಾಯವಾದರೂ ಕೀರ್ತಿ ಮಾಯವಾಗಿಲ್ಲ. ಸತ್ಯ, ಅಹಿಂಸೆ, ಇತ್ಯಾದಿ ಅನೇಕ ಉಪದೇಶಗಳನ್ನು ಮಾಡಿದ್ದಾರೆ. ಶ್ರೀ ರಾಮಚಂದ್ರನೂ ವನವಾಸಕ್ಕೆ ಹೋದಾಗ ಭರತನು ಅವನ ಪಾದುಕೆಗಳನ್ನು ತಂದು ಅವುಗಳೇ ರಾಮಚಂದ್ರನೆಂದು ತಿಳಿದು ರಾಜ್ಯವಾಳಿದಂತೆ, ನಾವೆಲ್ಲರೂ ಗಾಂಧೀಜಿಯವರ ಪಾದುಕೆಗಳಾದ ಸತ್ಯ-ಅಹಿಂಸೆಗಳನ್ನು ಪೀಠದ ಮೇಲಿಟ್ಟು ನಾವೂ ಭರತನಂತೆ ನಿಜವಾದ ರಾಮರಾಜ್ಯವನ್ನು ಕಟ್ಟಲು ಪ್ರಯತ್ನಿಸೋಣ.

ಜೈ ಹಿಂದ!

ಭಾಷಣಕಾರ ಗಾಂಧೀಜಿ.

ಮಹಾತ್ಮಾ ಗಾಂಧಿಯವರು ಜಾತಿಯ ಐಕ್ಯತೆಗಾಗಿ ಮಾಡಿದ ಕಾಯ

ಜನಾಬ. ಎಸ್. ಎಸ್. ಸುಖೀ. ಉರ್ದು ಟ್ರೇನಿಂಗ ಕಾಲೇಜ, ಧಾರವಾಡ.

ಮಾನ್ಯ ಅಧ್ಯಕ್ಷರೆ, ಗುರುಗಳೆ, ಬಂಧು ಭಗಿನಿಯರೆ,

ಹಿಂದುಸ್ತಾನವು ಜಾತಿ ಧರ್ಮಗಳ ತವರು ಮನೆ. ಇಲ್ಲಿ ಹಲವಾರು ಧರ್ಮಗಳು, ನೂರಾರು ಜಾತಿಗಳುಂಟು. ಹಿಂದು, ಮುಸಲ್ಮಾನ, ಕ್ರೈಸ್ತ, ಶೀಖ, ಬೌದ್ಧ, ಜೈನ, ಮೊದಲಾದ ಬೇರೆ ಬೇರೆ ಜಾತಿಗಳು ಹುಟ್ಟಿವೆ. ಅದರಲ್ಲಿ ಯೂ ಹಿಂದು ಧರ್ಮದಲ್ಲಿ ಉಂಟಾದ ಜಾತಿ, ಪಕ್ಷ, ಪಂಗಡ ಗಳನ್ನು ಹೇಳ ತೀರದು. ಇದರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬ ಮುಖ್ಯ ಭೇದಗಳಲ್ಲದೆ ಒಂದೊಂದ ರಲ್ಲಿ ಮತ್ತೆ ನೂರೆಂಟು ಜಾತಿ, ಕುಲಗಳು, ಪಕ್ಷ ಪಂಗಡ ಗಳು ಇರುವವು. ಈ ಬೇರೆ ಬೇರೆ ಧರ್ಮಗಳಲ್ಲಿ, ಜಾತಿ ಜಾತಿಗಳಲ್ಲಿ ಕುಲ ಕುಲಗಳಲ್ಲಿ ಪಕ್ಷ ಪಂಗಡಗಳಲ್ಲಿ ಕೂಡಿಕೆ ಇಲ್ಲ. ಬಳಿಕೆ ಇಲ್ಲ. ಒಂದು ಪಂಗಡದ ಏಳಿಗೆ ಮತ್ತೊಂದು ಪಂಗಡದ ಅಸೂಯಕ್ಕೆ ಕಾರಣವಾಗುವದು, ಒಂದು ಜಾತಿಯವರಿಗೆ ಕಲ್ಯಾಣವಾದರೆ ಮತ್ತೊಂದು ಜಾತಿಯವ ರಿಗೆ ಸೇರಿಕೆ ಇಲ್ಲ. ಇನ್ನು ಉರಿಯುವರಮೇಲೆ ಹುಲ್ಲನ್ನು ಹಾಕಿದಂತೆ ಈ ಬ್ರಿಟಿಶರ ಆಳಿಕೆಯು ಜಾತಿಗಳಲ್ಲಿಯ ದ್ವೇಷ ಅಸೂಯೆಗಳಿಗೆ ಮತ್ತಿಷ್ಟು ಪ್ರಚೋದನೆಯ ನ್ನುಂಟು ಮಾಡಿತು. ನಮ್ಮಲ್ಲಿ ಎಷ್ಟೆಷ್ಟು ಅನೈಕ್ಯತೆಯು ನೆಲೆಗೊಳ್ಳುವದೋ ಅಷ್ಟು ಸ್ಥಿರವಾಗಿ ತಮ್ಮ ಸ್ವಾಮಿತ್ವವು, ಸಾಮ್ರಾಜ್ಯಶಾಹಿಯು, ಹಿಂದುಸ್ತಾನದಲ್ಲಿ ಉಳಿಯುವದು ಎಂಬುದನ್ನು ಬ್ರಿಟಿಶರು ಮನಗಂಡರು. ಭೇದೋಪಾಯವೇ ಇದಕ್ಕೆ ತಕ್ಕ ಮಾರ್ಗವೆಂದು ತಿಳಿದು "ವಿಭಜಿಸಿ ಆಳು" ಎಂಬ ತತ್ವವನ್ನು ಅವರು ಅನುಸರಿಸಿದರು. ಇದರಿಂದ ಬೆಕ್ಕುಗಳೆರಡು ತಮ್ಮ ತಮ್ಮೊಳಗೆ ಕಡಿದಾಡಿ ಕೋತಿಯ ಹಿರಿತನದಲ್ಲಿ ಬೆಣ್ಣೆಯನ್ನು ಹಂಚಿಕೊಳ್ಳಲು ಹೊರಟ ಗತಿ ಯೇ ಆಯಿತು. ಜಾತಿ ಜಾತಿಗಳಲ್ಲಿ ವೈಷಮ್ಯ ಮತ್ತಿಷ್ಟು ಹೆಚ್ಚಾಗಿ ಬೆಳೆಯಿತು. ಎಲ್ಲ ಜಾತಿಯ ಧರ್ಮಗಳು ಸ್ವಾರ್ಥ ಭಾವಕ್ಕೆ ಎಡೆಗೊಟ್ಟು ತಮ್ಮ ಪಂಗಡದ ಜನರ ಕಲ್ಯಾಣಕ್ಕೆ ಹೆಣಗಾಡಲಾರಂಭಿಸಿದವು. ಅದರ ಪರಿಣಾಮವಾಗಿ "ಹಿಂದು ಮಹಾಸಭೆ," "ಮುಸ್ಲಿಂಲೀಗ," "ಅಂಬೇಡಕರ ಪಾರ್ಟಿ" ಮೊದಲಾದವು ತಲೆ ಎತ್ತಿದವು.

ಮಹಾತ್ಮಾ ಗಾಂಧಿಯವರು ಹಿಂದುಸ್ತಾನವನ್ನು ಪರರ ದಾಸ್ಯದಿಂದ ಮುಕ್ತ ಮಾಡಲು ಟೊಂಕಕಟ್ಟಿ ತನು, ಮನ, ಧನದಿಂದ ದುಡಿಯುತ್ತಿರುವಾಗ ಈ ಜಾತಿಯ ಜಂಜಾಟವು ಪ್ರತಿಯೊಂದು ಮಾರ್ಗದಲ್ಲಿಯೂ ತಡೆಯನ್ನುಂಟು ಮಾಡಿತು. ರಾಜಕೀಯ ಪ್ರಗತಿಯಾಗಬೇಕಾದರೆ ಎಲ್ಲರೂ ಒಕ್ಕಟ್ಟಾಗಿ ಎಲ್ಲರ ಕಲ್ಯಾಣಕ್ಕಾಗಿ ದು ಡಿ ಯು ವ ದು ಮುಖ್ಯವು. ಆದರೆ ಈಗ ಎಲ್ಲೆಲ್ಲಿಯೂ ಅನೈಕ್ಯತೆಯು ತ ಎತ್ತಿದೆ. ಈ ಜಾತಿಗಳ ತಾರತಮ್ಯ ಭಾವಕ್ಕೆ ಬ್ರಿಟಿಶರ ಕಾರಣವೆಂದು ಹೇಳಲಿಕ್ಕಾಗುವದಿಲ್ಲ. ಅದಕ್ಕೆ ನಮ್ಮ ಜನ ಜಾತ್ಯಾಭಿಮಾನವೂ ಸ್ವಾರ್ಥಭಾವನೆಯೂ ಕಾರಣವೆಂಬ ದನ್ನು ನಾವು ಮರೆಯಬಾರದು. ಒಡಕು ಹುಟ್ಟಿಸಿ ರ ವಾಳುವ ಬ್ರಿಟಿಶರ ರಾಜನೀತಿಯು ಇದಕ್ಕೆ ಪುಟ ಕೊಟ್ಟಿ ೧೯೩೭ರಲ್ಲಿ ಪಾಸಾದ "ಕೋಮುವಾರ ಪದ್ಧತಿಯು" ಯ ವಿಷ ಬೀಜವನ್ನು ಮತ್ತಿಷ್ಟು ಗಟ್ಟಿಯಾಗಿ ಊ ಆದರೆ ಮಹಾತ್ಮಾ ಗಾಂಧಿಯವರಾಗಲಿ ಅದರ ಅನುಯಾ ಯಾಗಿ ದುಡಿಯುವ ಕಾಂಗ್ರೆಸ ಸಂಸ್ಥೆಯಾಗಲಿ ಇ ಎದೆಗುಂದಲಿಲ್ಲ. ಸ್ವಾತಂತ್ರ್ಯದ ಗುರಿಯನ್ನು ಬಿಡಲಿಲ್ಲ.

ಮಹಾತ್ಮಾ ಗಾಂಧಿಯವರು ಐಕ್ಯತೆಯು ನೆಲೆಗೆ ಬೇಕಾದರೆ ನಮ್ಮಲ್ಲಿ ನೆಲೆಗೊಂಡ ಜಾತಿಯ ಅಜ್ಞಾನತೆ ಅಳಿದು ಸರ್ವ ಧರ್ಮ ಸಮನ್ವಯ ದೃಷ್ಟಿಯು ಎ ಉಂಟಾಗಬೇಕು. ಜಾತಿಗಳ ಭೇದ ಭಾವನೆಯು ಅ ಹೋಗಬೇಕು, ಎಂದು ಬಗೆದು ಆ ದಿಶೆಯಲ್ಲಿ ಕಾಂ ಮಾಡಲು ಅಣಿಯಾದರು.

ಎಲ್ಲಕ್ಕಿಂತ ಮುಖ್ಯವಾಗಿ ಅವರು ಕೈಕೊಂಡ ಕಾ ವೆಂದರೆ "ಹರಿಜನೋದ್ಧಾರವು." ಅದನ್ನು ಅವರು ಮ ದರು. ಈ ವಿಷಯವಾಗಿ ಇನ್ನೊಬ್ಬರು ಮಾತನಾ ರಿಂದ ಹೆಚ್ಚು ಹೇಳದೆ ಮಹಾತ್ಮಾಜಿಯವರು ಹಿಂ ಮುಸಲ್ಮಾನ ಐಕ್ಯತೆಗಾಗಿ ಏನು ಮಾಡಿದರೆಂಬುದ ನೋಡೋಣ.

ಇನ್ನು ಮಹಾತ್ಮಾ ಗಾಂಧಿಯವರು, ಹಿಂದು, ಮ ಲ್ಮಾನರ ಐಕ್ಯತೆಗಾಗಿ ಮಾಡಿದ ಪರಿಶ್ರಮವು ಅಷ್ಟಿಷ್ಟಲ್ಲ. ಕ್ಕಾಗಿಯೇ ಅವರು ತಮ್ಮ ಪವಿತ್ರ ಪ್ರಾಣವನ್ನು ಮ ಪಿಟ್ಟರು. ಇದು ಎಂದೂ ಮರೆಯಲಾರದ ಸಂಗತಿ. ಅ ಹಿಂದು, ಮುಸಲ್ಮಾನರು ಇಬ್ಬರೂ ಅಣ್ಣತಮ್ಮಂ ಇದ್ದ ಹಾಗೆ; ಬೇರೆ ಬೇರೆ ಅಲ್ಲ, ಹಿಂದು, ಮುಸಲ್ ಕ್ರೈಸ್ತ, ಪಾರ್ಸಿ, ಬೌದ್ಧ, ಯಾವದೇ ಧರ್ಮವಾದ ನೋಡಲಿಕ್ಕೆ ಬೇರೆ ಬೇರೆಯಾಗಿ ಕಂಡರೂ ಅವುಗಳ ತಿರ ಗುರಿ ಒಂದೇ! ಸರ್ವ ವ್ಯಾಪಿಯಾದ ಪರಮಾತ್ಮನ ಸಾನ್ನಿ ವನ್ನು ಹೊಂದುವದು. ಮಾರ್ಗಗಳು ತೋರಿಕೆಗೆ ಯಾಗಿ ತೋರಬಹುದು. ಆದರೆ ಎಲ್ಲವೂ ಮುಟ್ಟುವ ಒಂದೇ ಸ್ಥಾನದಲ್ಲಿ. ಇದರಲ್ಲಿ ಮೇಲಾವುದು, ಕೀಳಾವು ನೋಡಲಿಕ್ಕೆ ಮೋಟರ, ಕಾರು, ಜೀಪಕಾರ, ಟ್ರಕ್ ಮ ಲಾದವುಗಳು ಬೇರೆಯಾಗಿ ಕಂಡರೂ ಅವುಗಳನ್ನೆಲ್ಲವ

ನಡೆಸುವ ಶಕ್ತಿಯು ಒಂದೇ–ಪೆಟ್ರೋಲ. ಅದರಂತೆ ಹಿಂದು, ಮುಸಲ್ಮಾನ, ಶೀಖ, ಕ್ರೈಸ್ತ, ಎಲ್ಲ ಧರ್ಮಗಳಲ್ಲಿಯೂ ಅಡಕವಾಗಿರುವವನು ಸರ್ವಶಕ್ತನಾದ ಪರಮಾತ್ಮನು ಒಬ್ಬನೆ ಒಬ್ಬನು. ಈ ಶಕ್ತಿಯನ್ನು ಕೆಲವರು ಈಶ್ವರನೆಂದು ಕರೆಯಬಹುದು. ಕೆಲವರು ಬ್ರಹ್ಮನೆಂದು ಕರೆಯಬಹುದು. ಪರಮಾತ್ಮನು ಒಬ್ಬನೇ. ಆದರೆ ನಾಮ ಹಲವು- ಹೀಗೆ ನಿಜ ಧರ್ಮದೃಷ್ಟಿಯನ್ನೂ ವಿಶಾಲ ಭಾವನೆಯನ್ನೂ, ಇಟ್ಟುಕೊಂಡು ಹಿಂದು ಮುಸಲ್ಮಾನರ ಐಕ್ಯತೆಗಾಗಿ ಸತತ ಪಾಗಿ ಹೆಣಗಾಡಿದರು. ಮಹಾತ್ಮಾ ಗಾಂಧಿಯವರು ಹಿಂದುಸ್ತಾನವು ಅಖಂಡ ದೇಶವಾಗಿ ಉಳಿಯಬೇಕೆಂದೂ, ಒಂದು ಮನೆಯನ್ನು ಎರಡಾಗಿ ಒಡೆಯುವದು ಸರಿಯಲ್ಲವೆಂದೂ ಅದೆಷ್ಟೋ ಪ್ರಯತ್ನ ಪಟ್ಟರು. ಆದರೆ ಲೀಗ ಸಂಸ್ಥೆಯು ಇದಕ್ಕೆ ಅಲ್ಲಗಳೆದು ತಮಗೆ ಪಾಕಿಸ್ತಾನವೇ ಬೇಕು ಎಂದು ಹಟ ಹಿಡಿಯಿತು. ಇತ್ತ ಬ್ರಿಟಿಶರು ಕಾಂಗ್ರೆಸ್ಸಿನವರಿಗೂ ಒಳ್ಳೆಯವರಾಗಬೇಕು, ಇತ್ತ ಲೀಗಿಗೂ ಬೇಕಾಗಿರಬೇಕು ಎಂಬ ಇಚ್ಛೆ ಇದ್ದದರಿಂದ ಅವರು ಲೀಗಿನ ಬೇಡಿಕೆಯನ್ನು ಎತ್ತಿ ಹಿಡಿದರು. ಅದು ಸಾಧಿಸದೆ ಹೋದರೆ ರಕ್ತ ಪಾತದ ಹೆದರಿಕೆಯನ್ನು ಲೀಗು ತೋರಿಸಿತು. ಇನ್ನು ಕಾಂಗ್ರೆಸ್ಸು ಇದನ್ನು ನಿರಾಕರಿಸಿದರೆ ಈಗ ದೊರೆಯುವ ಸ್ವರಾಜ್ಯವೂ ದೊರೆಯದೆ ಹೋಗುವದೆಂದೂ, ಬ್ರಿಟಿಶರು ಇರುವವರೆಗೆ ಐಕ್ಯತೆಯು ಸಾಧ್ಯವಿಲ್ಲವೆಂದು ನೆನೆದುಕೊಂಡು ಪಾಕಿಸ್ತಾನದ ಬೇಡಿಕೆಗೆ ಒಪ್ಪಬೇಕಾಯಿತು.

ಪಾಕಿಸ್ತಾನ ವಿಭಜನೆಯ ಸಮಯದಲ್ಲಿ ಹಿಂದ್ದು ಪಾಕ, ಗಡಿ ಪ್ರದೇಶಗಳಲ್ಲಿ ರಕ್ತದ ಕಾಲುವೆಗಳು ಹರಿದವು. ಇಂಥ ಸಮಯದಲ್ಲಿ ಮ.ಗಾಂಧಿಯವರು ತಮ್ಮ ಅಹಿಂಸಾ ಶಸ್ತ್ರದಿಂದ ಶಾಂತಿಯನ್ನು ಸ್ಥಾಪಿಸಿದರು. ಕಲಕತ್ತಾ, ಮತ್ತು ನೌಖಾಲಿಯಲ್ಲಿ ಅವರು ಮಾಡಿದ ಮಹತ್ವವಾದ ಕಾರ್ಯಗಳು ಎಂದೂ ಮರೆಯದಂತಹವಾಗಿವೆ. ಅವರ ನ್ಯಾಯ ದೃಷ್ಟಿಯು ಅಲ್ಲಿ ಮತ್ತಿಷ್ಟು ಒಡೆದು ತೋರುವಂತಾಯಿತು. ಇತ್ತ ದಿಲ್ಲಿಯ ಹತ್ಯಾಕಾಂಡವನ್ನು ವಿರೋಧಿಸಿ ಅವರು ಉಪವಾಸವನ್ನು ಕೈಕೊಂಡರು. ಹಿಂದು, ಮುಸಲ್ಮಾನ ಮುಖಂಡರಿಂದ ತಾವು ಐಕ್ಯದಿಂದಲೂ ಬಂಧುಗಳಂತೆಯೂ ನಡೆಯುವೆವು ಎಂಬ ಲೇಖಿ ವಚನವನ್ನು ತಕ್ಕೊಂಡ ಮೇಲೆ ಉಪವಾಸ ಮತವನ್ನು ಬಿಟ್ಟರು. ಮುಸಲ್ಮಾನರಿಗೆ ಆದ ಹಾನಿಯನ್ನು ತುಂಬಿಕೊಡಲು ಹಿಂದು ಜನರನ್ನು ಕೇಳಿಕೊಂಡು ಸ್ವತಃ ತಾವೇ ನಿಂತು ಅವರ ಮನೆ, ಮಸೀದೆಗಳನ್ನು ಕಟ್ಟಿಕೊಳ್ಳಲು ಅನುಕೂಲತೆಗಳನ್ನು ಒದಗಿಸಿ ಕೊಟ್ಟರು. ಇದರಿಂದ ಅವರ ವಿಶಾಲ ದೃಷ್ಟಿ, ಸರ್ವ ಧರ್ಮ ಸಮನ್ವಯ ದೃಷ್ಟಿ, ನ್ಯಾಯಬುದ್ಧಿ ಮತ್ತಿಷ್ಟು ಒಡೆದು ಕಾಣುವಂತಹವಾಗಿವೆ.

ಮಹಾತ್ಮಾ ಗಾಂಧಿಯವರು ಪ್ರತಿ ದಿವಸ ಪ್ರಾರ್ಥನಾ ಸಮಯದಲ್ಲಿ ಗೀತೆಯನ್ನು, ಕುರಾನ, ಬಾಯಬಲ್‌ಗಳನ್ನು ಪಠಿಸುತ್ತಿದ್ದರು. ಅವರು ಗೀತೆಯಲ್ಲಿ ಎಷ್ಟೆಷ್ಟು ಭಕ್ತಿ, ನಿಷ್ಠೆಗಳನ್ನು ತೋರಿಸುತ್ತ ನಡೆದರೋ ಅಷ್ಟೆ ಕುರಾನ ಬಾಯಬಲ್ಲಿಗಳಲ್ಲಿಯೂ ಪೂಜ್ಯ ಬುದ್ಧಿ ಉಳ್ಳವರಾಗುತ್ತ ನಡೆದರು. ಯಾವದೇ ಧರ್ಮವಿರಲಿ ಅವರು ನಿಜಧರ್ಮ ಸಾಧಕ, ಪರ ಧರ್ಮಗಳನ್ನು ಸಮದೃಷ್ಟಿಯಲ್ಲಿ ಕಾಣುವನು ಎಂಬ ಮಾತನ್ನು ನಾವು ಮಹಾತ್ಮಾ ಗಾಂಧಿಯವರಿಂದ ಕಂಡುಕೊಳ್ಳ ಬಹುದು, ದೃಢ ಪಡಿಸಿಕೊಳ್ಳ ಬಹುದು. ಅವರಿಗೆ ಗೀತೆಯು ಅಷ್ಟೇ! ಕುರಾನ, ಬಾಯಬಲ್ಲಗಳು ಅಷ್ಟೇ!! ಪ್ರತಿ ದಿವಸ ಅವುಗಳಲ್ಲಿಯ ವಚನಗಳನ್ನೂ ಓದಿ ಅವುಗಳಲ್ಲಿಯ ತಿರುಳನ್ನು ಜನರ ಮುಂದೆ ಇಡುತ್ತಿದ್ದರು. ಮಹಾತ್ಮಾ ಗಾಂಧಿಯವರ, ಪ್ರತಿ ನಿತ್ಯದ ಪ್ರಾರ್ಥನೆಯಲ್ಲಿಯ ಅಚ್ಚು ಮೆಚ್ಚಿನ ಹಾಡೆಂದರೆ, "ಈಶ್ವರ ಅಲ್ಲಾ ತೇರೆ ನಾಮ. ಸಬಕೋ ಸನ್‌ಮತಿ ದೇ ಭಗವಾನ್" ಇದರಲ್ಲಿ ಯಾವ ತತ್ವವು ಅಡಕವಾಗಿದೆ ಎಂಬದನ್ನು ಸಭಿಕರೆ ವಿಚಾರಿಸಬಹುದು. ಮಹಾತ್ಮಾ ಗಾಂಧಿಯವರು ಹಿಂದು ಧರ್ಮದ ನಿಜಾಚರಣೆಗಾಗಿಯೂ ಅದರ ಪಾವಿತ್ರತೆಯನ್ನು ಕಾಯ್ದುಕೊಳ್ಳುವದಕ್ಕಾಗಿಯೂ ತುಂಬಾ ಹೆಣಗಾಡಿದರು. ಅದರಂತೆ ನಡೆದು ತೋರಿಸಿದರು. ಅವರ ಅಸ್ಪೃಶ್ಯತಾ ನಿವಾರಣೆ ಕಾರ್ಯವು ಇದಕ್ಕೆ ಸಾಕ್ಷಿಯಾಗಿದೆ. ಜಾತಿ ಪಂಥಗಳನ್ನು ಪರಮಾತ್ಮನು ಮಾಡಿಲ್ಲ. ಅವು ಅವರವರ ಕಾಯಕದಿಂದ ಬಂದಂಥವುಗಳು. ಯಾರಾದರೇನು? ಪರಮಾತ್ಮನಿಗೆ ಬೇಕಾದುದು ಜಾತಿ ಪಂಥಗಳಲ್ಲ. ಅವನಿಗೆ ಬೇಕಾದುದು ನಿರ್ಮಲ ಮನಸ್ಸು, ನಿರ್ವಂಚಕ ಭಕ್ತಿ. ಕಮಲವು ಕಸದಲ್ಲಿ ಹುಟ್ಟಿದರೂ ಅದು ಪರಮಾತ್ಮನ ಪಾದಕ್ಕೆ ಸಲ್ಲುವದು. ಅದರಂತೆ ಯಾವದೇ ಜಾತಿಯವರಾದರೂ ತನ್ನ ನಡೆ ನುಡಿಗಳಿಂದ ಆಚಾರ ವಿಚಾರಗಳಿಂದ, ಪರಮಾತ್ಮನ ಸಾನ್ನಿಧ್ಯವನ್ನು ಹೊಂದಬಹುದು ಎಂಬ ಮಾತನ್ನು ಎಲ್ಲರ ಸ್ಮರಣಕ್ಕೆ ತಂದು ಕೊಟ್ಟರು.

ಹಿಂದು, ಮುಸಲ್ಮಾನರು ಭಾರತ ನಿವಾಸಿಗಳು. ಭಾರತಾಂಬೆಯ ಮಕ್ಕಳು. ಭಾರತದ ಏಳಿಗೆಗಾಗಿ ಬಂಧುಗಳಂತೆ ಪ್ರೇಮದಿಂದ ಮಹಾತ್ಮಾಜಿಯವರ ತತ್ವಗಳನ್ನು ಮಾರ್ಗದರ್ಶಕವಾಗಿ ಇಟ್ಟುಕೊಂಡು ನಡೆಯಲು ಸುಬುದ್ಧಿಯನ್ನು ಕೊಡಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರು ತಮ್ಮ ಹದಿನೈದು ವರುಷಗಳ ಅನುಭವದಿಂದ ಹೊಸ ಅಭ್ಯಾಸಪತ್ರಿಕೆಯಂತೆ ಬರೆದ ಮತ್ತು ಸರಕಾರದ ಪಠ್ಯಪುಸ್ತಕ ಕಮೀಟಿಯಿಂದ ಮಂಜೂರಾದ ಪುಸ್ತಕಗಳು. ಸುಲಭವಾದ ಭಾಷೆ. ಕಾರಣ ಅವರ ಪುಸ್ತಕಗಳನ್ನೇ ಉಪಯೋಗಿಸಿರಿ.

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ

೨ನೆಯ ಇಯತ್ತೆಗೆ—	೦—೪—೦
೩ನೆಯ ಇಯತ್ತೆಗೆ—	೦—೫—೦
೫ನೆಯ ಇಯತ್ತೆಗೆ—	೧—೮—೦

ಸಚಿತ್ರ ಭೂಗೋಲ ಮಾಲೆ

೨ನೆಯ ಇಯತ್ತೆಗೆ—	೦—೬—೦
೩ನೆಯ ಇಯತ್ತೆಗೆ—	೦—೮—೬

ಸಚಿತ್ರ ಪೌರ ನೀತಿ ಮಾಲೆ

೧ನೆಯ ಇಯತ್ತೆಗೆ—	೦—೨—೦
೨ನೆಯ ಇಯತ್ತೆಗೆ—	೦—೩—೦
೩ನೆಯ ಇಯತ್ತೆಗೆ—	೦—೪—೦
೪ನೆಯ ಇಯತ್ತೆಗೆ	೦—೬—೦
೫ನೆಯ ಇಯತ್ತೆಗೆ—	೦—೮—೦
೬ನೆಯ ಇಯತ್ತೆಗೆ—	೦--೧೦--೦

ಈ ಪುಸ್ತಕಗಳೂ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳಿಗಾಗಿ ಹೊಸ ಪುಸ್ತಕಗಳೂ ಠೋಕಾಗಿಯೂ, ಚಿಲ್ಲರೆಯಾಗಿಯೂ ಸಿಗುವ ಒಂದೇ ಸ್ಥಳ:

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.



೨-೧೦-೪೮ನೆಯ ದಿನದ ಧ್ವಜಾರೋಹಣದ ಇನ್ನೊಂದು ದೃಶ್ಯ.



೨-೧೦-೪೮ನೆಯ ದಿನ ಗಾಂಧೀಜಿಯವರನ್ನು ಕುರಿತು ಏರ್ಪಡಿಸಿದ ವಿಚಾರ ಸಂಕೀರ್ಣದಲ್ಲಿ ಭಾಷಣ ಮಾಡಿದ ಶಿಕ್ಷಕ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮತ್ತು ಅಧ್ಯಕ್ಷರು.

ಮುಂದೆ ನಿಂತವರು:—೧. ಶ್ರೀ. ಸುರ್ಪಿ. ೨. ಶ್ರೀಮತಿ ಬುಜುರೂರಕರ. ೩. ಶ್ರೀಮತಿ ಮಳಗಿ. ೪. ಶ್ರೀ. ಕುಲಕರ್ಣಿ. ೫. ಶ್ರೀ. ಕೆರೂರ.

ಹಿಂದೆ ನಿಂತವರು:—೧. ಶ್ರೀ. ಹಿರೇಮಠ. ೨. ಶ್ರೀ. ಕಾಜಿ. ೩. ಶ್ರೀ. ಸೂಡಿ. ೪. ಶ್ರೀ. ರೋಹಿಡೆಕರ. (ಅಧ್ಯಕ್ಷರು.) ೫. ಶ್ರೀ. ಮಂಗಳೂರ. ೬. ಶ್ರೀ. ಗಿರಿಕೆಡ್ಡಿ.

ಸೂಚನೆ

ಸರಕಾರದ ಪಠ್ಯಪುಸ್ತಕ ಕಮೀಟಿಗಳಿಂದ ಮಂಜೂರಾದ ಪುಸ್ತಕಗಳ ಜಾಹೀರಾತುಗಳನ್ನಷ್ಟೇ ಸ್ವೀಕರಿಸಲಾಗುವದು.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ!!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯಗಳಿಗೆ ಶ್ರೇಷ್ಠ ಸಾಹಿತ್ಯ ಬೇಕಲ್ಲವೇ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಕಿಗೆ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯಬೇಕಾಗಿ ಬಿನ್ನಹ.

ಸರಕಾರದಿಂದ ಮಂಜೂರಾದ ಪುಸ್ತಕಗಳು

ಶ್ರೀ. ಸಾಲಿ ರಾಮಚಂದ್ರರಾಯರಿಂದ ರಚಿತವಾದವು.

ಬಾಲಕಾಂಡ ೧—೦—
ಅಯೋಧ್ಯಾಕಾಂಡ ೧—೪—

ನೂತನ ಗಣಿತ: ಶ್ರೀ. ಕೆ. ಕೆ. ಗಲಗಲಿ.
ಪ್ರಾಥಮಿಕ ಶಾಲೆಯ ಇಯತ್ತೆಗೆ ಬೆಲೆ ೧—೦—
ಕೆಳಗಿನ ಪತ್ತೆಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ
ವಿಜಯರೋಡ, ಧಾರವಾಡ

ಶ್ರೀ. ಪಾವಟೆ ಚೆನ್ನಪ್ಪನವರು ಆಡಳಿತ ಎಜ್ಯುಕೇಶನ ಆಫೀಸರ, ಗೋಕಾಕ ಅವರಿಂದ ರಚಿತವಾದ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ ೦—೫—
೨) ಶಾಂತಿಸಮರ ೦—೪—
೩) ವಿವೇಕ (ಏಕಾಂಕ ನಾಟಕ) ೦—೪—
೪) ಅಶಿಕ್ಷಿತರ ಗೋಳು (ಏಕಾಂಕ ನಾಟಕ) ೦—೩—

(ಸರಕಾರದಿಂದ ಲಾಯಬ್ರರಿ ಪುಸ್ತಕವೆಂದು ಮಂಜೂರಾದದ್ದು)

ಇವಲ್ಲದೆ ಕೆಳಗಿನ ಪುಸ್ತಕಗಳೂ ದೊರೆಯುವವು
೫) ವಯಸ್ಕರ ಪದ್ಯಾವಲಿ ೦—೮—

ಅಚ್ಚಾಗಲಿರುವ ಪುಸ್ತಕಗಳು
೬) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ
ನವಿನ ಚೆನ್ನಪ್ಪ ಪಾವಟೆ
ಜಯನಿಲಯ ಪ್ರಕಾಶನ ಸಮಿತಿ, ಗೋಕಾಕ.

Printed by: D. T. Kayasth, at Ravindra Press, U. B. Hill (House No. 8536) Dharwar. Edited and Published by R. K. Lakkundi Principal T.C.M., R. V. Desai Principal B. T. C. Y. D. Nadakarni, Lady Superintendent T.C.W. Dharwar Jointly at the Kannda Prathamik Shikshan Office Govt. Training College for Men Dharwar. 7403-46 1375.

ಕನ್ನಡ ಪ್ರಾಥಮಿಕ ಶಿಕ್ಷಣ

ಬಿಡಿ ಸಂ:

೬ ಅ

ನಮ್ಮ ಮುಖ್ಯ ಹಾಗೂ ವಿದ್ಯಾ ಮಂತ್ರಿಗಳು.

ಶ್ರೀ. ಬಿ. ಜಿ. ಖೇರ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳ

ಸಂಚಾಲಕರು:—ಶ್ರೀ. ಎ. ಎನ್. ಸಾನೆ. ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಸಂಪಾದಕರು:—ಶ್ರೀ. ಆರ್. ಕೆ. ಲಕ್ಕುಂಡಿ. ಶ್ರೀ. ಆರ್. ವ್ಹಿ. ದೇಸಾಯಿ. ಮಿಸ್. ವಾಯ್. ಡಿ. ನಾಡಕರ್ಣಿ.

ನವ್ಹಂಬರ] ಪ ರಿ ವಿ ಡಿ [೧೯೪೦

೧. ಸಂಪಾದಕೀಯ	....	೧
೨. ಬಾಲಕರ ಚರಖಾ ಜಯಂತ್ಯುತ್ಸವವು.	ಶ್ರೀ. ಮ. ಫ. ಬಂಗಾರಿ.	೮
೩. ಶಿಕ್ಷಣ ವಿಧಾನದಲ್ಲಿ ವೃತ್ತಿಯ ಆಯ್ಕೆ.	ಶ್ರೀ. ಎಚ್. ಜಿ. ಜೋಶಿ. ಬಿ. ಎ (ಆನರ್ಸ)	೧೧
೪. ಭಾರತದ ಭಾವುಟ.	ಶ್ರೀ. ಎಚ್. ಕೆ. ಕೆರೂರ.	೧೩
೫. ಟಿಪ್ಪಣಿ.	ಶ್ರೀ. ಪ್ರ. ಸ ರಾಯಚೂರ.	೧೪
೬. ಲಾವಣಿ.	ಶ್ರೀ. ಹೆ. ಮಾ. ಕ. ಗಂ. ಮ. ಕೋಡ.	೨೮
೭ ಬಡವರ ಬೆಣ್ಣೆ.	ಶ್ರೀ. ಎಲ್. ಬಿ ದೇಸಾಯಿ.	೨೬
೮. ಇಂಗ್ಲೆಂಡಿನ ಪಾಠಶಾಲೆಗಳಲ್ಲಿ ಆತ್ಮಶಾಸನದ ಶಿಕ್ಷಣವು.	ಶ್ರೀ. ಲಜ್ಜಾಶಂಕರ. ಝಾ.	೨೪
೯. ಅಮರ ಬಾಪೂಜಿ. (ಕವನ)....	ಶ್ರೀ ಡಿ. ಜಿ. ಭಟಕಳ.	೨೯
೧೦ ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೆ ಪ್ರವೇಶ.	....	೩೦

ಕನ್ನಡ ಪ್ರಾಥಮಿಕ ಶಿಕ್ಷಣ



ಪ್ರಧಾನ ಸಂಪಾದಕರು: ರ. ಕೃ. ಲಕ್ಕುಂಡಿ.

ಸಂಪುಟ ೮೮] ನವ್ಹಂಬರ ೧೯೪೮ [ಸಂಚಿಕೆ ೬

ಸಂಪಾದಕೀಯ

ಚರಖಾ (ಗಾಂಧಿ) ಜಯಂತಿಯ ಕಾರ್ಯ ಸಂಘಟನೆ

[ಧಾರವಾಡದಲ್ಲಿರುವ ಗಂಡು ಮಕ್ಕಳ ಟ್ರೇನಿಂಗ ಕಾಲೇಜ್, ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜ್, ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ, ಸ್ನಾತಕರ ಮೂಲ ಶಿಕ್ಷಣ ಕೇಂದ್ರ, ಉರ್ದು ಟ್ರೇನಿಂಗ್ ಕಾಲೇಜ್, ಈ ಐದು ಸರಕಾರೀ ಟ್ರೇನಿಂಗ್ ಸಂಸ್ಥೆಗಳು ಸೇರಿ ಗೊತ್ತುಪಡಿಸಿದುದು.]

ಹಿಂದಿನ ಸಂಚಿಕೆಯಲ್ಲಿ ಹೇಳಿದಂತೆ, ಚರಖಾ (ಗಾಂಧಿ) ಜಯಂತಿಯ ಕಾರ್ಯ ಸಂಘಟನೆಯನ್ನು ಸಾಮೂಹಿಕ ಚಟುವಟಿಕೆಗಳಿಗೆ ಮಾರ್ಗದರ್ಶಕವಾಗಬೇಕೆಂದು ಇಲ್ಲಿ ಕೊಡಲಾಗಿದೆ.

ಸ್ಥಾನಿಕ ಪಂಚ ಸರಕಾರಿ ತರಬೇತಿ ಸಂಸ್ಥೆಗಳ ಪ್ರಾಧ್ಯಾಪಕರ ಅನೌಪಚಾರಿಕ ಸಭೆಯೊಂದು ಇಂದು ಗಂ. ಟ್ರೇ. ಕಾಲೇಜದ ಕಾರ್ಯಾಲಯದಲ್ಲಿ ಚರಖಾ ಜಯಂತಿಯನ್ನು ಸಾಮೂಹಿಕವಾಗಿ ಆಚರಿಸುವ ಹಾಗು ಕಾರ್ಯಕ್ರಮ ಪಟ್ಟಿಯನ್ನು ಚರ್ಚಿಸಿ ಸಿದ್ಧಗೊಳಿಸಲು ಕೂಡಿತ್ತು.

ಚರಖಾ ಜಯಂತಿಯನ್ನು ಸಾಮೂಹಿಕವಾಗಿ ಆಚರಿಸಕೆಂಬ ನಿರ್ಣಯವಾಯ್ತು.

ಕೆಳಗಿನ ನಿರ್ಣಯಗಳು ಕೈಕೊಳ್ಳಲ್ಪಟ್ಟವು

೧. ಸಾಮೂಹಿಕ ಕಾರ್ಯಕ್ರಮಗಳು.

(೧) ೭ ತಾಸಿನ ವರೆಗೆ ಅಖಂಡ ಸೂತ್ರ-ಯಜ್ಞ.
(೨) ತಾ. ೨-೧೦-೪೮ನೆಯ ದಿನ ವಿಚಾರ-ಸಂಕೀರ್ಣ.
(೩) ಧ್ವಜಾರೋಹಣ ಹಾಗು ಅವತರಣ.

೨. ವೈಯಕ್ತಿಕವಾಗಿ ತಮ್ಮ ತಮ್ಮ ಸಂಸ್ಥೆಯಲ್ಲಿ ಆಚರಿಸಬೇಕಾದ ಕಾರ್ಯಕ್ರಮಗಳು.

(೧) ತಾ. ೨ರಿಂದ ೨ರ ವರೆಗೆ ಒಂದು ದಿನ ಸೂತ್ರ ಯಜ್ಞ. ಇನ್ನೊಂದು ದಿನ ಸ್ವಚ್ಛತೆ.

(೨) ಸಾಮೂಹಿಕ ವಿಚಾರ ಸಂಕೀರ್ಣದ ಮುನ್ನವೇ—ವೈಯಕ್ತಿಕ ಸಂಸ್ಥೆಯ ಪರವಾಗಿ—ವಿಚಾರ ಸಂಕೀರ್ಣ. ಪ್ರತಿದಿನ ಮುಂಜಾವು ೭ರಿಂದ ೮ರ ವರೆಗೆ ಆ ಸಂಸ್ಥೆಗಳ ಅನುಕೂಲತೆಯಲ್ಲಿ ಕಾರ್ಯಗಳನ್ನು ಜರುಗಿಸುವಿಕೆ.

(೩) ತಾ ೨ರಿಂದ ಜಗತ್ತಿಗೆ ಗಾಂಧೀಜಿ ನೀಡಿದ ಸಂದೇಶವನ್ನು ಪ್ರಾರ್ಥನೆಯ ಕಾಲಕ್ಕೆ ಓದಿ ತೋರಿಸುವದು.

೩. ಪ್ರಾಯೋಗಿಕ ಶಾಲೆಗಳಲ್ಲಿಯ ಕಾರ್ಯಕ್ರಮಗಳು.

(೧) ಪ್ರತಿ ನಿತ್ಯ ಅರ್ಧ ಗಂಟೆಯ ವರೆಗೆ—ಹೆಚ್ಚಾಗಿ ಶಾಲೆ ಬಿಡುವ ಮುಂದೆ ಭಜನೆ ಹಾಗು ಗಾಂಧೀಜಿಯ

ಬಗ್ಗೆ ಹಾಡುಗಳನ್ನು ಅನ್ನುವದು.

(೨) ತಾ. ೨-೧೦-೪೮ನೇ ದಿನ ಬೇರೆ ಬೇರೆ ವರ್ಗಗಳಿಗನುಗುಣವಾದ ವಿಚಾರ ಸಂಕೀರ್ಣ.

ವಿಸ್ತೃತ ಕಾರ್ಯಕ್ರಮ

ಅಖಂಡ ಸೂತ್ರಯಜ್ಞ ಕುರಿತು.

(ಅ) ಅಖಂಡ ಸೂತ್ರಯಜ್ಞವು ಗಂ. ಟ್ರೇ. ಕಾಲೇಜದ ಸಭಾ ಭವನದಲ್ಲಿ ತಾ. ೨೮-೯-೪೮ರ ರಾತ್ರಿ ೧೧ಗಂಟೆಗೆ ಪ್ರಾರಂಭವಾಗಿ ತಾ. ೨-೧೦-೪೮ರ ಬೆಳಗಿನ ೬ಗಂಟೆಗೆ ಮುಕ್ತಾಯಗೊಳ್ಳತಕ್ಕದ್ದು.

(ಬ) ಸಾಮಾನ್ಯವಾಗಿ ನೂಲಲು ಚೆನ್ನಾಗಿ ಬರುವವರನ್ನೇ ಆಗೆದುಕೊಳ್ಳಬೇಕು.

(ಕ) ಪ್ರತಿಯೊಬ್ಬರೂ ೧ ತಾಸು ನೂಲಬೇಕು. ನೂಲುವವರು ಗೊತ್ತುಪಡಿಸಿದ ಪ್ರಕಾರ ತಮ್ಮ ತಮ್ಮ ಚರಖವಾಗಲಿ, ಅಥವಾ ತಕಲಿಯಾಗಲೀ ಇನ್ನಿತರ ಸಾಧನಗಳು ಹಂಜಿ ಮುಂತಾದವುಗಳನ್ನು ತಾವೇ ತರಬೇಕು. ಹಾಗ ನೂತ ನೂಲನ್ನು ಕೊನೆಯ ದಿನ ಅಂದರೆ ೨-೧೦-೪೮ನೆಯ ದಿನ 'ಗಾಂಧೀಜಿಗೆ' ಅರ್ಪಿಸುವದಕ್ಕೋಸ್ಕರ ಅಲ್ಲಿಯೇ ಸಭಾ ಭವನದಲ್ಲಿ ಬಿಟ್ಟು ಹೋಗತಕ್ಕದ್ದು.

(ಡ) ವಿಸ್ತೃತ ಯೋಜನೆ ತಯಾರಿಸಲು, ಕಾರ್ಯ ಸಂಟಿಸಲು, ಲೆಕ್ಕಪತ್ರ ವಿಡಲು ಹಾಗು ನೂಲನ್ನು ಸಂಗ್ರಹಿಸುಮುಂತಾದ ಕೆಲಸಗಳನ್ನು ನೋಡಿಕೊಳ್ಳಲು ಪ್ರತಿಯೊಂ ಸಂಸ್ಥೆಯ ಕೃತಿಕೋವಿದರಿಗೆ ಬಿನ್ನವಿಸಿಕೊಳ್ಳಬೇಕು.

(ಇ) ಕೃತಿಕೋವಿದರು ಯೋಚಿಸಿದ ಕೆಲಸವು ಸರಿಯಾ ನಡೆದುಕೊಂಡು ಹೋಗುವಂತೆ ಪ್ರತಿಯೊಂದು ಸಂಸ್ಥೆ ಶಿಕ್ಷಕ ವರ್ಗದವರು ಮೇಲ್ವಿಚಾರಕವಾಗಿ ಕೆಲಸ ಮಾ ಬೇಕು. ಪ್ರತಿಯೊಂದು ಸಂಸ್ಥೆಯಿಂದ ಸರತಿಗೆ ಇಬ್ಬರಂ ಮೇಲ್ವಿಚಾರಕರೆಂದು ನೂಲುವ ಅವಧಿಯಲ್ಲಿ ಹಜರ ಇ ಬೇಕು.

ಮೇಲ್ವಿಚಾರಣೆಯ ಸರತಿಯ ಕಾರ್ಯಕ್ರಮವು.

ತಾರೀಖು.	ವೇಳೆ	ಸಂಸ್ಥೆ.
(೧) ೨೮-೯-೪೮	ರಾತ್ರಿ ೧೧ರಿಂದ ಬೆಳಗು ಮುಂ. ೩.	ಗಂ. ಟ್ರೇ. ಕಾ.
(೨) ೨೯-೯-೪೮	ಬೆಳಗು ೩ರಿಂದ ಸಂಜೆ ೬.	ವ. ರಾ. ಅ. ಕೇ.
(೩) ,,	ಸಂಜೆ ೬ರಿಂದ ರಾತ್ರಿ ೧೦.	ಗಂ. ಟ್ರೇ. ಕಾ.
(೪) ,,	ರಾತ್ರಿ ೧೦ರಿಂದ ರಾತ್ರಿ ೨.	ವ. ರಾ. ಅ. ಕೇ.
(೫) ೩೦-೯-೪೮	ರಾತ್ರಿ ೨ರಿಂದ ಬೆಳಗು ೬.	ಸ್ನಾ. ಮೂ. ಕೇ.
(೬) ,,	ಬೆಳಗು ೬ರಿಂದ ರಾತ್ರಿ ೧೦.	ವ. ರಾ. ಅ. ಕೇ.
(೭) ,,	ರಾತ್ರಿ ೧೦ರಿಂದ ರಾತ್ರಿ ೨.	ಸ್ನಾ. ಮೂ. ಕೇ.
(೮) ೩೧-೧೦-೪೮	ರಾತ್ರಿ ೨ರಿಂದ ಬೆಳಗು ೬.	ಗಂ. ಟ್ರೇ. ಕಾ.
(೯) ,,	ಬೆಳಗು ೬ರಿಂದ ರಾತ್ರಿ ೧೦.	ವ. ರಾ. ಅ. ಕೇ.
(೧೦) ,,	ರಾತ್ರಿ ೧೦ರಿಂದ ರಾತ್ರಿ ೨.	ಸ್ನಾ. ಮೂ. ಕೇ.
(೧೧) ೨-೧೦-೪೮	ರಾತ್ರಿ ೨ರಿಂದ ಬೆಳಗು ೬.	ಗಂ. ಟ್ರೇ. ಕಾ.

(ಈ) ಸಭಾಭವನದ ಶೃಂಗಾರ ಹಾಗು ಗಾಂಧೀಜಿ ಭಾವ ಚಿತ್ರವನ್ನು ಇಡುವದಕ್ಕೋಸ್ಕರ ಮಂಟಪವನ್ನು ಣಗೊಳಿಸುವ ಕೆಲಸಗಳು ೨೮-೮-೪೮ನೆಯ ದಿನ ೧೦ಗಂಟೆ-ಳಿಗಾಗಿ ಸಿದ್ಧವಿರಬೇಕು. ಶೃಂಗಾರ ಸಲಕರಣೆಗಳು ಹೊವಾಗಲೂ ನೂತನವಾಗಿರುವಂತೆ ಜಾಗ್ರತೆ ವಹಿಸಬೇಕು. ಈ ಕೆಲಸವನ್ನು ಹೆಣ್ಣು ಮಕ್ಕಳ ಟ್ರೇ. ಕಾ ದವರು ನೋಡಿಕೊಳ್ಳಬೇಕು. ಸಭಾ ಭವನವನ್ನು ಶೃಂಗ ಸುವ ಹೊರವಲಯಗಳಿಗೆ ತಳಿರು ತೋರಣಗಳನ್ನು ಕ ಮಹಾದ್ವಾರದವರೆಗೊಯ್ಯುವ ಕೆಲಸವನ್ನು ಉ. ಟ್ರೇ. ಕಾ ದವರು ನೋಡಿಕೊಳ್ಳಬೇಕು.

(೨) ವಿಚಾರ ಸಂಕೀರ್ಣ.

ವಿಚಾರ ಸಂಕೀರ್ಣವು ಕೇವಲ ಶಿಕ್ಷಕ ವಿದ್ಯಾರ್ಥಿಗಳಿಗಷ್ಟೇ ಮರ್ಯಾದಿತವಿರಬೇಕು. ಪ್ರತಿಯೊಂದು ಸಂಸ್ಥೆಯವರು ಇಬ್ಬರು ಶಿಕ್ಷಕ ವಿದ್ಯಾರ್ಥಿಗಳನ್ನು ತಾ. ೨೮-೯-೪೮ನೇ ದಿನ ಬೆಳಗಿನ ೧೦ ಗಂಟೆಗೆ ಸ್ನಾ. ಮೂ. ಶಿ. ಕೇಂದ್ರಕ್ಕೆ ಕಳಿಸಿ ಕೊಡಬೇಕು. ೨-೧೦-೪೮ನೇ ದಿನ ನಡೆಯುವ ವಿಚಾರ ಸಂಕೀರ್ಣಕ್ಕೆ ತಮ್ಮಲ್ಲಿಯ ಒಬ್ಬರನ್ನು ಅಧ್ಯಕ್ಷರೆಂದು ಅವರೇ ಆಯ್ದುಕೊಳ್ಳಬೇಕು. ವಿಚಾರ ಸಂಕೀರ್ಣವು ೨-೧೦-೪೮ನೇ ದಿನ ಮಧ್ಯಾಹ್ನ ೨ ಗಂಟೆಗೆ ಗಂ. ಟ್ರೇ. ಕಾ. ದಲ್ಲಿ ನಡೆಯಬೇಕು. ಭಾಗ ತೆಗೆದುಕೊಳ್ಳುವ ಪ್ರತಿಯೊಬ್ಬ ರಿಗೆ ಹತ್ತು ನಿಮಿಷ ವೇಳೆ ಕೊಡಲಾಗುವದು. ಕೆಳಗೆ ಕಾಣಿಸಿದ ವಿವಿಧ ವಿಷಯಗಳನ್ನು ಆ ವಿಷಯಗಳ ಎದುರಿಗೆ ಕಾಣಿಸಿದ ಸಂಸ್ಥೆಗಳಿಗೆ ನೇಮಿಸಿಕೊಡಲಾಯಿತು.

ವಿಷಯಗಳು	ಸಂಸ್ಥೆ
(೧) ಶಿಕ್ಷಣತಜ್ಞ ಗಾಂಧೀಜಿ.	ವ. ರಾ. ಅ. ಕೇ.
(೨) ಗಾಂಧೀಜಿಯೂ ಖಾದಿಯ ಚಳವಳಿಯೂ	,,
(೩) ಬಾಪೂಜಿ ಸ್ತ್ರೀಜನ ಸುಧಾರಕರು.	ಹೆ. ಟ್ರೇ. ಕಾ.
(೪) ಅಸ್ಪೃಶ್ಯೋದ್ಧಾರಕ ಗಾಂಧೀಜಿ	,,
(೫) ಅರ್ಥಶಾಸ್ತ್ರಜ್ಞ ಗಾಂಧೀಜಿ.	ಉ. ಟ್ರೇ. ಕಾ.
(೬) ಜಾತಿಯ ಐಕ್ಯ ಸಾಧಕ ಗಾಂಧೀಜಿ.	,,
(೭) ಗಾಂಧೀಜಿ ಶ್ರೇಷ್ಠ ಪತ್ರಿಕೋದ್ಯಮಿ	ಗಂ. ಟ್ರೇ. ಕಾ.
(೮) ವ್ಯಾವಹಾರಿಕ ವೇದಾಂತಿ ಗಾಂಧೀಜಿ.	,,
(೯) ರಾಜಕಾರಣ ಪುರುಷ ಗಾಂಧೀಜಿ.	ಸ್ನಾ.ಮೂ.ಶಿ.ಕೇ.
(೧೦) ಜಾಗತಿಕ ವ್ಯಕ್ತಿ ಗಾಂಧೀಜಿ.	,,

ಸ್ನಾತಕರ ಮೂ. ಶಿ. ಕೇಂದ್ರದವರು ವಿಚಾರ ಸಂಕೀರ್ಣ ಸಂಘಟನೆಯ ಕಾರ್ಯವನ್ನು ನೋಡಿಕೊಳ್ಳ ಬೇಕು. ಪ್ರತಿಯೊಬ್ಬ ಭಾಷಣಕಾರನು ತನ್ನ ಭಾಷಣದ ಸಾರವನ್ನು ಬರೆದು ಆ ಸಂಘಟಕರ ಕಡೆಗೆ ತಾ. ೧-೧೦-೪೮ ರೊಳಗಾಗಿ ಕೊಡಬೇಕು.

(೩) ಧ್ವಜಾರೋಹಣ ಹಾಗು ಅವತರಣ.

ಸಾಮೂಹಿಕ ಧ್ವಜಾರೋಹಣದ ಕಾರ್ಯಸಂಘಟನೆ ಯನ್ನು ವ. ರಾ. ಅ. ಕೇಂದ್ರದವರು ವಹಿಸಬೇಕು. ಸ್ಥಳವು ವಾಡಿಕೆಯಂತೆ ಗಂ. ಟ್ರೇ. ಕಾಲೇಜದ ಕ್ರೀಡಾಂಗಣವಿರಬೇಕು. ತಾ. ೨-೧೦-೪೮ನೇ ದಿನ ಮುಂಜಾನೆ ಸರಿಯಾಗಿ ೭॥ ಗಂಟೆಗೆ ಧ್ವಜಾರೋಹಣ ಕಾರ್ಯವು ಪ್ರಾರಂಭವಾಗಿ ೧೫ ನಿಮಿಷಗಳ ವರೆಗೆ ನಡೆಯ ತಕ್ಕದ್ದು.

ಧ್ವಜಾರೋಹಣ ಸಮಾರಂಭಕ್ಕೆ ಶ್ರೀಮಾನ್ ಬಸವನಾಳ ರನ್ನಾಗಲಿ, ಅವರಿಗೆ ಬರಲಾಗದ ಪಕ್ಷದಲ್ಲಿ ಶ್ರೀಮತಿ ನಾಡ ಕರ್ಣಿಯವರನ್ನಾಗಲೀ, ಮುಖ್ಯ ಅತಿಥಿಗಳೆಂದು ಬರಮಾಡಿ ಕೊಳ್ಳಬೇಕು. ಅಂದೇ ಸಂಜೆಯ ೬ ಗಂಟೆಗೆ ಅವತರಣ ವನ್ನು ಗಂ. ಟ್ರೇ. ಕಾ. ಪ್ರಿನ್ಸಿಪಾಲರು ನೆರವೇರಿಸುವಂತೆ ಬಿನ್ನವಿಸಿಕೊಳ್ಳಬೇಕು.

ಪ್ರತಿಯೊಂದು ಸಂಸ್ಥೆಯವರು ತಾ. ೨-೧೦-೪೮ನೆಯ ದಿನ ತಮ್ಮ ತಮ್ಮ ಸಂಸ್ಥೆಯಲ್ಲಿ ಧ್ವಜಾರೋಹಣದ ಕಾರ್ಯ ಕ್ರಮವನ್ನು ವ್ಯೆಯಕ್ತವಾಗಿ ಸಾಮೂಹಿಕ ಧ್ವಜಾರೋಹ ಣದ ಕಾರ್ಯಕ್ರಮಕ್ಕಿಂತ ಮುನ್ನ ಅಂದರೆ ೭॥ ಗಂಟೆ ಯೊಳಗಾಗಿ ಮುಗಿಸಿಕೊಳ್ಳತಕ್ಕದ್ದು.

(೧) ವಾಯ್. ಡಿ. ನಾಡಕರ್ಣಿ, ಹೆ. ಟ್ರೇ. ಕಾಲೇಜದ ಮುಖ್ಯಾಧ್ಯಾಪಿಕೆಯರು.

(೨) ಕೇ. ಬಿ. ತೇರಗಾಂವಕರ, ಸ್ನಾ. ಮೂ. ಶಿ. ಕೇಂದ್ರದ ಮುಖ್ಯಾಧ್ಯಾಪಕರು.

(೩) ಆರ್. ಕೆ. ಲಕ್ಕುಂಡಿ, ಗಂ. ಟ್ರೇ. ಕಾಲೇಜದ ಮುಖ್ಯಾಧ್ಯಾಪಕರು.

(೪) ಆರ್. ವ್ಹಿ. ದೇಸಾಯಿ, ವ. ರಾ. ಅ. ಕೇಂದ್ರದ ಮುಖ್ಯಾಧ್ಯಾಪಕರು.

(೫) ಎಸ್. ಎಂ. ಹಾದಿ, ಉರ್ದು. ಟ್ರೇ. ಕಾಲೇಜದ ಮುಖ್ಯಾಧ್ಯಾಪಕರು.

ಗಂ. ಟ್ರೇ. ಕಾ. ಧಾರವಾಡ.
ತಾ. ೨೪-೯-೪೮.

ವ್ಯವಸ್ಥೆ ಮತ್ತು ವೇಳಾಪತ್ರಿಕೆ

ಇಂದಿನ ವಿಸ್ತೃತ ಯೋಜನೆಯ ಸಭೆಯು ಮುಕ್ತಾಯವಾದನಂತರ ಅಖಂಡ ಸೂತ್ರಯಜ್ಞದ ಕಾರ್ಯಕ್ರಮವು ಸುರಳಿತವಾಗಿ ಕೊನೆಯ ವರೆಗೆ ಸಾಗುವಂತೆ ನೋಡಿಕೊಂಡು ಹೋಗುವದು ಅವಶ್ಯವೂ ಅತ್ಯಂತ ಮಹತ್ವದ್ದೂ, ಜವಾಬ್ದಾರಿ ಪೂರ್ಣ ಉಳ್ಳದ್ದುದೂ ಆದುದರಿಂದ ಗಂ. ಟ್ರೇ. ಕಾ; ಸ್ನಾ. ಮೂ. ಶಿ. ಕೇಂದ್ರದ ಹಾಗು ವ. ರಾ. ಅ. ಕೇ. ಮುಖ್ಯಾಧ್ಯಾಪಕರು ಜೊತೆಯಾಗಿ ನೋಡಿಕೊಳ್ಳಬೇಕೆಂಬ ನಿರ್ಣಯವಾಯಿತು. ಆದುದರಿಂದ ಕೆಳಗೆ ಕಾಣಿಸಿದ ವೇಳಾಪತ್ರಿಕೆಯನ್ನು ಗೊತ್ತುಮಾಡಲಾಯಿತು.

ತಾ. ೨೮-೯-೪೮ ರಾತ್ರಿ ೧೧ಗಂಟೆಯಿಂದ ತಾ. ೨೯-೯-೪೮ ಬೆಳಗಿನ ೭ರ ವರೆಗೆ. ಪ್ರಿ. ಗ. ಟ್ರೇ. ಕಾಲೇಜ.

ತಾ. ೨೯-೯-೪೮ ಮು. ೭ರಿಂದ ತಾ. ೨೯-೯-೪೮ ಮಧ್ಯಾಹ್ನ ೩ರ ವರೆಗೆ. ಪ್ರಿ. ವ. ರಾ. ಅ. ಕೇಂದ್ರ.

ತಾ. ೨೯-೯-೪೮ ಮಧ್ಯಾಹ್ನ ೩ರಿಂದ ತಾ. ೨೯-೯-೪೮ ರಾತ್ರಿ ೧೧ಗಂಟೆಯ ವರೆಗೆ. ಪ್ರಿ. ಸ್ನಾ. ಮೂ. ಶಿ. ಕೇಂದ್ರ.

ತಾ. ೨೯-೯-೪೮ ರಾತ್ರಿ ೧೧ರಿಂದ ತಾ. ೩೦-೯-೪೮ ಬೆಳಗು ೭ಗಂಟೆಯ ವರೆಗೆ. ಪ್ರಿ. ವ. ರಾ. ಅ. ಕೇಂದ್ರ.

ತಾ. ೩೦-೯-೪೮ ಬೆಳಗು ೭ರಿಂದ ತಾ. ೩೦-೯-೪೮ ಮಧ್ಯಾಹ್ನ ೩ಗಂಟೆಯ ವರೆಗೆ. ಪ್ರಿ. ಸ್ನಾ. ಮೂ. ಶಿ ಕೇಂದ್ರ.

ತಾ. ೩೦-೯-೪೮ ಮಧ್ಯಾಹ್ನ ೩ರಿಂದ ತಾ. ೩೯-೯-೪೮ ರಾತ್ರಿ ೧೧ಗಂಟೆಯ ವರೆಗೆ. ಪ್ರಿ. ಗ. ಟ್ರೇ. ಕಾಲೇಜ.

ತಾ. ೩೦-೯-೪೮ ರಾತ್ರಿ ೧೧ರಿಂದ ೧-೧೦-೪೮ ಮುಂ. ೭ಗಂಟೆಯ ವರೆಗೆ. ಪ್ರಿ. ಸ್ನಾ. ಮೂ. ಶಿ. ಕೇಂದ್ರ.

ತಾ. ೧-೧೦-೪೮ ಮು. ೭ರಿಂದ ೧-೧೦-೪೮ ಮ. ೩ಗಂಟೆಯ ವರೆಗೆ. ಪ್ರಿ. ಗ. ಟ್ರೇ. ಕಾಲೇಜ.

ತಾ. ೧-೧೦-೪೮ ಮ. ೩ರಿಂದ ೧-೧೦-೪೮ ರಾತ್ರಿ ೧೧ಗಂಟೆಯ ವರೆಗೆ. ಪ್ರಿ. ವ. ರಾ. ಅ. ಕೇಂದ್ರ.

ತಾ, ೧-೧೦-೪೮ ರಾತ್ರಿ ೧೧ರಿಂದ ೨-೧೦-೪೮ ಬೆಳಗು ೭ಗಂಟೆಯ ವರೆಗೆ. ಪ್ರಿ. ಗ. ಟ್ರೇ. ಕಾಲೇಜ.

ಗ. ಟ್ರೇ. ಕಾ. ನಾಲ್ಕು ಪಾಳಿಗಳು. (೩೧ತಾಸು.)
ವ. ರಾ. ಅ. ಕೇ. ಮೂರು ಪಾಳಿಗಳು, (೨೪ತಾಸು)
ಸಾ. ಮೂ. ಶಿ. ಕೇ. ,, (,,)

ಗಂ. ಟ್ರೇ. ಕಾಲೇಜ.

(೧) ೨೮-೯-೪೮ ರಾತ್ರಿ ೧೧ರಿಂದ ೨೯-೯-೪೮ರ ಮುಂ, ೭ರ ವರೆಗೆ, ೮ತಾಸು,

(೨) ೩೦-೯-೪೮ ಮ, ೩ರಿಂದ ೩೦-೯-೪೮ ರಾತ್ರಿ ೧೧ರ ವರೆಗೆ, ೮ತಾಸು,

(೩) ೧-೧೦-೪೮ ಮುಂ, ೭ರಿಂದ ೧-೧೦-೪೮ ಮ, ೩ರ ವರೆಗೆ, ೮ತಾಸು,

(೪) ೧-೧೦-೪೮ ರಾತ್ರಿ ೧೧ರಿಂದ ೨-೧೦-೪೮ ಮುಂ, ೭ರ ವರೆಗೆ, ೭ತಾಸು,

ಒಟ್ಟು ೩೧ತಾಸು,

ವ, ರಾ, ಅ, ಕೇಂದ್ರ.

(೧) ೨೯-೯-೪೮ ಮುಂ, ೭ರಿಂದ ೨೯-೯-೪೮ ಮ, ೩ರ ವರೆಗೆ, ೮ತಾಸು,

(೨) ೨೯-೯-೪೮ ರಾತ್ರಿ ೧೧ರಿಂದ ೩೦-೯-೪೮ ಬೆಳಗು ೭ರ ವರೆಗೆ, ೮ತಾಸು,

(೩) ೧-೧೦-೪೮ ಸಂಜೆ ೩ರಿಂದ ೧-೧೦-೪೮ ರಾತ್ರಿ ೧೧ರ ವರೆಗೆ, ೮ತಾಸು,

ಒಟ್ಟು ೨೪ತಾಸು,

ಸ್ನಾ, ಮೂ, ಶಿ, ಕೇ.

(೧) ೨೯-೯-೪೮ ಮ, ೩ರಿಂದ ೧-೧೦-೪೮ ರಾತ್ರಿ ೧೧ರ ವರೆಗೆ, ೮ತಾಸು,

(೨) ೩೦-೯-೪೮ ಮುಂ, ೭ರಿಂದ ೩೦-೯-೪೮ ಮ, ೩ರ ವರೆಗೆ, ೮ತಾಸು,

(೩) ೩೦-೯-೪೮ ರಾತ್ರಿ ೧೧ರಿಂದ ೧-೧೦-೪೮ ಬೆಳಗು ೭ರ ವರೆಗೆ, ೮ತಾಸು,

ಒಟ್ಟು ೨೪ತಾಸು,

ಚರಖಾ ಜಯಂತಿಯ ವ್ಯವಸ್ಥಾಪಕರು.

ಚರಖಾ (ಗಾಂಧಿ) ಜಯಂತಿಯ ಕಾರ್ಯ ಸಂಘಟನೆ

(ಐದು ಸರಕಾರಿ ಟ್ರೇನಿಂಗ ಸಂಸ್ಥೆಗಳು ಸೇರಿ ಮಾಡಿದುದು.)

ರಂ. ಕೃ. ಲಕ್ಕುಂಡಿ. ಮುಖ್ಯಾಧ್ಯಾಪಕರು. ಗಂ. ಟ್ರೇ. ಕಾಲೇಜ ಧಾರವಾಡ.



ಅಖಂಡ ಸೂತ್ರ ಯಜ್ಞ

ಹಂಚಿಕೆ:—ದಿನಾಂಕ ೨೮-೯-೪೮ರ ರಾತ್ರಿ ೧೧ಗಂಟೆಯಿಂದ ದಿನಾಂಕ ೨-೧೦-೪೮ರ ಬೆಳಗಿನ ೬ಗಂಟೆಯ ವರೆಗೆ ವ್ಯಾಹತವಾಗಿ ೭೯ ತಾಸುಗಳ ವರೆಗೆ ಒಂದು ಚರಖಾ ಹಾಗು ೩ ತಕಲಿಗಳ ಮೇಲೆ ನೂಲುವದು.

(೧) ಶಿಕ್ಷಕ ವಿದ್ಯಾರ್ಥಿಗಳ ಕಾರ್ಯ

ಯೋಜನೆ:—ಒಬ್ಬರು ಚರಖದ ಮೇಲೆ ಮೂವರು ತಕಲಿಯ ಮೇಲೆ ಹೀಗೆ ಪ್ರತಿ ತಾಸಿಗೂ ನಾಲ್ಕು ನಾಲ್ಕು ಜನ ಶಿಕ್ಷಕ ವಿದ್ಯಾರ್ಥಿಗಳು ನೂಲುವದು.

ಪ್ರಾಥಮಿಕ ಶಿಕ್ಷಣ

ಕಾರ್ಯವಿಭಾಗ

ಸಂಸ್ಥೆ	ಕೆಲಸದಲ್ಲಿ ತೊಡಗಿದ ಶಿ. ವಿ. ಸಂಖ್ಯೆ	ಕಾರ್ಯದ ಒಟ್ಟು ಅವ
೧) ಗಂ. ಟ್ರೇ. ಕಾಲೇಜ.	೧೪೬	೧೪೬
(೨) ವ. ರಾ. ಶಿ. ಕೇಂದ್ರ.	೪೭	೪೭
(೩) ಹೆ. ಟ್ರೇ. ಕಾಲೇಜ.	೧೦೪	೧೦೪
(೪) ಸ್ನಾತಕರ ಮೂ. ಶಿ. ಕೇಂದ್ರ.	೧೯	೧೯
		೩೧೬ ತಾಸುಗಳು
		೭೯×೪ =೩೧೬

(೨) ಕೃತಿಕೋವಿದರ ಕೆಲಸ

೭೯ ತಾಸುಗಳ ವರೆಗೆ ನೂಲುವವರಿಗೆ ಸಹಾಯುಮಾರ್ಗದರ್ಶನವನ್ನೊದಗಿಸುವದು.

ಯೋಜನೆ:—ಸ್ನಾತಕರ ಮೂ. ಶಿ. ಕೇಂದ್ರ. ವ. ರಾ. ಶಿ. ಕೇಂದ್ರ. ಹೆ. ಟ್ರೇ. ಕಾಲೇಜ. ಗಂ. ಟ್ರೇ. ಕಾಲೇ ಕೃತಿಕೋವಿದರೆಲ್ಲರೂ ಮೇಲ್ವಿಚಾರಣೆಯ ಹಾಗು ಅವಶ್ಯಕ ಸಂಗತಿಗಳನ್ನು ಬರೆದಿಡುವ ಕಾರ್ಯವನ್ನು ನೋಡಿಕೊಳ್ ತಕ್ಕದ್ದು. ತಾ. ೨೮-೯-೪೮ರ ರಾತ್ರಿ ೧೧ಗಂಟೆಯಿಂದ ತಾ. ೨-೧೦-೪೮ರ ಬೆಳಗಿನ ೬ಗಂಟೆಯ ವರೆಗೆ ಪ್ರತಿಯೊ ಬ್ಬರೂ ಪ್ರತಿದಿನ ೫ರಿಂದ ೬ ತಾಸಿನ ವರೆಗೆ ಕೆಲಸ ಮಾಡತಕ್ಕದ್ದು.

ಕಾರ್ಯವಿಭಾಗ

ಸಂಸ್ಥೆ	ಕೃತಿಕೋವಿದರ ಸಂಖ್ಯೆ	ಒಟ್ಟು ಕೆಲಸದ ತಾಸುಗಳು
(೧) ಗಂ. ಟ್ರೇ. ಕಾಲೇಜ.	೨	೩೦
(೨) ವ. ರಾ. ಅ. ಕೇಂದ್ರ.	೧	೨೦
(೩) ಹೆ. ಟ್ರೇ. ಕಾಲೇಜ.	೧	೧೫
(೪) ಸ್ನಾ. ಮೂ. ಶಿ. ಕೇಂದ್ರ.	೧	೧೪
		ಒಟ್ಟು ೭೯ ತಾಸುಗಳು.

(೩) ಶಿಕ್ಷಕ ವರ್ಗದವರ ಕಾರ್ಯ

ಮೇಲ್ವಿಚಾರಣೆಯನ್ನು ಮಾಡುತ್ತ ಮುಂದಿನ ತಾಸಿನ ಸರತಿಯ ನೂಲುವ ಜನರನ್ನು ನಿಯಮಿತಾವಧಿಯಲ್ಲಿ ಕಳುಹಿ—ಅವ್ಯಾಹತ ಸೂತ್ರ ಯಜ್ಞ ನಡೆಯುವದನ್ನು ನೋಡಿಕೊಂಡು ಹೋಗುವದು.

ಯೋಜನೆ:—ಶಿಕ್ಷಕಿಯರು ಬುಧವಾರ (ತಾ. ೨೯-೯-೪೮) ಗುರುವಾರ (ತಾ. ೩೦-೯-೪೮) ಶುಕ್ರವಾರ (೧-೧೦-೪೮) ಮೂರು ದಿನಗಳಲ್ಲಿ ಮುಂಜಾನೆ ೬ಗಂಟೆಯಿಂದ ಸಂಜೆ ೬ಗಂಟೆಯ ವರೆಗೆ ಹಗಲಿನಲ್ಲಿ ಮೇಲ್ವಿಚಾರಣೆಯನ್ನು ಮಾ ತಕ್ಕದ್ದು. ಹೆ. ಟ್ರೇ. ಕಾಲೇಜದಿಂದ ಮೂವರು. ಸ್ನಾತಕರ ಮೂ. ಶಿ. ಕೇಂದ್ರದಿಂದ ಈರ್ವರು. ಒಬ್ಬರು ವ.ರಾ ಶಿ. ಕೇಂದ್ರದಿಂದ ಹೀಗೆ ಒಟ್ಟು ೬ಜನರು. ಪ್ರತಿಯೊಬ್ಬರೂ ದಿನವೂ ಎರಡೆರಡು ತಾಸಿನಂತೆ ಮೇಲ್ವಿಚಾರಣೆಯ ಕೆಲ ಮಾಡತಕ್ಕದ್ದು.

ಶಿಕ್ಷಕ ಜನರು:—ರಾತ್ರಿ ೧೧ಗಂಟೆಯಿಂದ ಬೆಳಗಿನ ೬ರ ವರೆಗೆ ಮೊದಲನೆಯ ದಿನ ಹಾಗು ಸಂಜೆಯ ೬ಗಂಟೆಯಿಂ ಬೆಳಗಿನ ೬ಗಂಟೆಯ ವರೆಗೆ ಇನ್ನುಳಿದ ದಿನಗಳಲ್ಲಿ—ಗಂ. ಟ್ರೇ. ಕಾಲೇಜದ ಸ್ನಾತಕರರ ಮೂ. ಶಿ. ಕೇಂದ್ರದ ಹಾಗ ವ. ರಾ. ಶಿ. ಕೇಂದ್ರದ ಶಿಕ್ಷಕರು ಮೇಲ್ವಿಚಾರಣೆ ಮಾಡತಕ್ಕದ್ದು.

ಚರಖಾ (ಗಾಂಧಿ) ಜಯಂತಿಯ ಕಾರ್ಯ ಸಂಘಟನೆ.

ಕೆಲಸದ ವರ್ಗೀಕರಣ

ಸಂಸ್ಥೆ	ಶಿಕ್ಷಕರ ಸಂಖ್ಯೆ	ಕೆಲಸದ ತಾಸುಗಳು. ಶಿ.	ಶಿಕ್ಷಕಿಯರು.	ಒಟ್ಟು
ಗಂ. ಟ್ರೇ. ಕಾಲೇಜ.	೮	೧೬	—	೧೬
ವ. ರಾ. ಅ ಕೇಂದ್ರ	೫	೧೫	೬	೨೧
ಹೆ. ಟ್ರೇ. ಕಾಲೇಜ.	೩	—	೧೮	೧೮
ಸ್ನಾ. ಮೂ.ಶಿ. ಕೇಂದ್ರ.	೬	೧೨	೧೨	೨೪
				ಒಟ್ಟು ೭೯

(೪) ಪ್ರಾಧ್ಯಾಪಕರ ಕಾರ್ಯ

೭೯ ತಾಸಿನ ವರೆಗೆ ನಡೆಯುವ ಅಖಂಡ ಸೂತ್ರ ಯಜ್ಞವನ್ನು ನಡೆಯಿಸಿಕೊಂಡು ಹೋಗುವದು.

ಗಂ. ಟ್ರೇ. ಕಾಲೇಜದ ವ. ರಾ. ಅ. ಕೇಂದ್ರದ ಹಾಗು ಸ್ನಾ. ಮೂ. ಶಿ. ಕೇಂದ್ರದ ಪ್ರಾಧ್ಯಾಪಕರು ಪ್ರತಿಯೊಬ್ಬರು ೮ತಾಸಿನ ಅವಧಿಯಂತೆ ಪಾಳಿಯ ಪ್ರಕಾರ ೭೯ ತಾಸಿನ ವರೆಗೆ ಮೇಲ್ವಿಚಾರಣೆಗೈಯ್ಯುವದು.

ಕೆಲಸದ ವರ್ಗೀಕರಣ

ಸಂಸ್ಥೆ	ಕಾರ್ಯದ ಒಟ್ಟು ಅವಧಿ
ಗಂ. ಟ್ರೇ. ಕಾಲೇಜ.	೩೧ (೮ ತಾಸಿನ ೩ ಸರದಿಗೂ ಹಾಗು ೭ ತಾಸಿನ ಒಂದು ಸರದಿ.)
ವ. ರಾ. ಅ. ಕೇಂದ್ರ.	೨೪ (೮ ತಾಸಿನ ಮೂರು ಸರದಿಗಳು.)
ಸ್ನಾ. ಮೂ. ಶಿ. ಕೇಂದ್ರ.	೨೪ (೮ ತಾಸಿನ ೩ ಸರದಿಗಳು.)

(೫) ಸಿಪಾಯಿ ಜನರ ಕೆಲಸ.

ಹಗಲು ರಾತ್ರಿ ಒಂದೇಸವನೇ ಅವ್ಯಾಹತವಾಗಿ ಒಬ್ಬ ಸಿಪಾಯಿಯು ಸಭಾಭವನದ ಹೊರ ಅಂಗಳದಲ್ಲಿ ಇರತಕ್ಕದ್ದು.

ಯೋಜನೆ:—ಗಂ. ಟ್ರೇ. ಕಾಲೇಜದ ಹಾಗು ವ. ರಾ. ಅ. ಕೇಂದ್ರದ ಶಿಪಾಯಿ ಜನರು ಕೆಲಸ ಮಾಡತಕ್ಕದ್ದು. ತಾ. ೨೮-೯-೪೮ ಸಂಜೆಯ ೬ ಗಂಟೆಯಿಂದ ತಾ. ೨-೧೦-೪೮ ರ ಬೆಳಗಿನ ೬ ಗಂಟೆಯ ವರೆಗೆ ಪ್ರತಿಯೊಬ್ಬರಿಗೂ ೬ ತಾಸು ಅವಧಿಯ ಕೆಲಸ ಕೊಡಲ್ಪಟ್ಟಿದೆ.

ಕಾರ್ಯದ ವಿವರಣೆ

ಸಂಸ್ಥೆ	ಶಿಪಾಯಿಯ ಸಂಖ್ಯೆ	ಒಟ್ಟು ಕೆಲಸದ ಅವಧಿ
ಗಂ. ಟ್ರೇ. ಕಾಲೇಜ.	೧೨	೭೨
ವ. ರಾ. ಅ. ಕೇಂದ್ರ.	೨	೧೨
		ಒಟ್ಟು ೮೪

ಬಾಲಕರ ಚರಖಾ ಜಯಂತ್ಯುತ್ಸವವು

ಶ್ರೀ. ಮ. ಫ. ಬಂಗಾರಿ. ಅಸಿ. ಮಾ. ಗಂ. ಟ್ರೇ. ಕಾಲೇಜ. ಪ್ರ್ಯಾ. ಸ್ಕೂ. ಧಾರವಾಡ.

ಕಾರ್ಯಕ್ರಮದ ಯೋಜನೆ

ಪ್ರತಿಯೊಂದು ವರ್ಗದಿಂದಲೂ ಆರಿಸಲ್ಪಟ್ಟ ಇಬ್ಬಿಬ್ಬರು ಹಿರಿಮಣಿಗಳಿಂದ ಕಾರ್ಯಕಾರೀ ಮಂಡಲವು ರಚಿತವಾಯಿತು. ಇವರೆಲ್ಲ ತಾ. ೨೬-೯-೧೯ಳಲನೆಯ ರವಿವಾರ ಕೂಡಿ ಏಳನೆಯ ವರ್ಗದವರು ಅಧ್ಯಕ್ಷರಾಗಬೇಕು; ಆರನೆಯ ವರ್ಗದವರು ಸಭೆಯ ಎಲ್ಲ ಕಾರ್ಯಗಳನ್ನು ಮಾಡುವವರಾಗಬೇಕು; ಅವರಿಗೆ ಏಳನೆಯ ವರ್ಗದವರು ನೆರವಾಗಬೇಕು; ೫ನೆಯ ವರ್ಗದಲ್ಲಿ ಒಬ್ಬರು ಕಾರ್ಯದರ್ಶಿಯಾಗಬೇಕು; ನಾಲ್ಕನೆಯ ವರ್ಗದವರು ಆಭಾರ ಮನ್ನಣೆ ಹೊಣೆ ಹೊರಬೇಕು; ೧ನೆಯ ಮತ್ತು ಎರಡನೆಯ ವರ್ಗದವರು ಅಧ್ಯಕ್ಷರ ಆಯ್ಕೆಯನ್ನೂ ಒಪ್ಪಿಗೆ ಕೊಡುವದನ್ನೂ ಮಾಡಬೇಕು; ಎಲ್ಲ ವರ್ಗದವರೂ ಬಾಪೂಜಿಯ ಚರಿತ್ರೆ,—ಸ್ವಭಾವ—ಅವರ ಪ್ರೀತಿಯ ವಿಷಯಗಳು ಮುಂತಾದವುಗಳ ಬಗೆಗೆ ಸಂಭಾಷಣೆ, ಹಾಡು, ಭಾಷಣ ಮಾಡುವದರಲ್ಲಿ ಭಾಗ ವಹಿಸಬೇಕು ಎಂದು ನಿಶ್ಚಯಿಸಿಕೊಂಡರು. ಮತ್ತು ಹಿರಿಯರಾದ ಪ್ರಿನ್ಸಿಪಾಲರ ಹೇಳಿಕೆಯಂತೆ "ದಿನಾಲು ಶಾಲೆಯ ಆರಂಭದ ಒಂದು ಅವಧಿಯಲ್ಲಿ ಬಾಪೂಜಿಯ ಪ್ರೀತಿಯ, ಕೊಳೆ-ತೆಗೆಯುವ ಕಾರ್ಯ ಎಲ್ಲರೂ ಮಾಡುವದು; ಕೊನೆಯ ಅವಧಿಯಲ್ಲಿ ಬಾಪೂಜಿ ದಿನಾಲು ಭಜನೆ ಮಾಡುತ್ತಿದ್ದ 'ರಾಮಧುನಿ' ಭಜನೆಯನ್ನು ಬೈಲಲ್ಲಿ ಎಲ್ಲರೂ ಕೂಡಿ ಮಾಡುವದು" ಇದಕ್ಕೆ ಒಪ್ಪಿದರು.

ಕಾರ್ಯಕ್ರಮ

ಮಂಗಳವಾರ ರಾತ್ರಿ ಸೂತ್ರಯಜ್ಞದ ಆರಂಭದಿಂದಲೇ ಚರಖಾ ಜಯಂತಿಯ ಕಾರ್ಯವು ಆರಂಭವಾಗುವದೆಂದು ತಿಳಿದಿತ್ತು. ಅಂದು ಸಂಜೆಯ ಬಿಡುವು. ಆದುದರಿಂದ ಬಾಲಕರು ೧ನೆಯ ಅವಧಿಯಲ್ಲಿ ಕೊಳೆ ತೆಗೆದರು ಕೊನೆಯ ಅವಧಿಯಲ್ಲಿ 'ರಾಮಧುನಿ' ಭಜನೆ ಮಾಡಿದರು. ಮುನ್ನೂರಕ್ಕೆ ಮಿಕ್ಕಿದ ಬಾಲಕರು ಒಂದೆಡೆ ಸಾಲಾಗಿ ಕುಳಿತು, ಕೋಮಲ ಕಂಠದಿಂದ ಭಜನೆ ಮಾಡಿದ್ದನ್ನು ಕಂಡವರೇ ಪುಣ್ಯಶಾಲಿಗಳು ಹಾದಿಯಲ್ಲಿ ಸಂತೆಗೆ ಹೊರಟ ಹಳ್ಳಿಗರ ಮತ್ತು ಕಾಲೇಜಕ್ಕೆ ಹೊರಟಿದ್ದ ವಿದ್ಯಾರ್ಥಿಗಳ ಹೃದಯಗಳು ಅರಳಿ, ಅವರೂ ಕೆಲಹೊತ್ತು ನಿಂತು ಮಾನಸ ಭಜನೆಯನ್ನು ಮಾಡುವದೇನು ಅಚ್ಚರಿಯ ಮಾತಲ್ಲ. ಅಂದು ಕೊನೆಗೆ ಗುರುಗಳಲ್ಲೊಬ್ಬರಾದ ಶ್ರೀ. ಮಳೆಮಠ ಅವರು 'ಇಂದಿನ ಪ್ರೀತಿಯ ಪೂಜ್ಯ ಬಾಪೂಜಿಗೆ ೭೫ವರುಷ. ಅದರಿಂದ ನಮ್ಮ ಕಾಲೇಜದಲ್ಲಿ ೭೫ವರುಷ ಅಖಂಡ ಸೂತ್ರಯಜ್ಞವು ಆರಂಭವಾಗಲಿದೆ. ನಿಮ್ಮೆಲ್ಲರಿಗೆ ಅಷ್ಟು ಮೇಳ ನೂಲಲು ಆಗಲಿಕ್ಕಿಲ್ಲ. ಕನಿಷ್ಠ ೭೫ಮಿಟರೂ ನೂಲು ತೆಗೆದು ಬಾಪೂಜಿಯ ನಿಜ ಭಕ್ತರಾಗಿ. ಬಾಪೂಜಿಯ ಆತ್ಮಕ್ಕೆ ತೃಪ್ತಿ ಮಾಡಿರಿ ಎಂದು ಹೇಳಿದರು. ಈ ಭಜನೆಯ ಜೊತೆಗೆ ಮಹಾತ್ಮರ ಸ್ತೋತ್ರದ ಪದವನ್ನು ಅನ್ನುವ ಕ್ರಮವನ್ನಿಟ್ಟುಕೊಂಡರು. ಹೀಗಯೇ ನಾಲ್ಕು ದಿನ ಕಾರ್ಯ ಸಾಗಿತು. ಈ ಕ್ರಮವು ಸುತ್ತಲಿನ ಜನರ ಮನಸ್ಸನ್ನು ಬಾಪೂಜಿಯ ದಿನಾಲು ಮಾಡುವ ಭಜನೆಯ ಕಡೆಗೆ ಎಳೆಯಿತು. ಹೀಗೆ ನಡೆದಾಗಲೇ ನೋಡಿ ಉಬ್ಬಿದ ೧ನೆಯ ವರುಷದ ಶಿಕ್ಷಕರೊಬ್ಬರು ರಾಮಧುನಿಯ ಧಾಟಿಯಲ್ಲಿ ತಾವೇ ರಚಿಸಿದ ಗಾಂಧೀಜಿಯ ಮಹತ್ಕಾರ್ಯಗಳುಳ್ಳ ಪದ್ಯವನ್ನು ಅತ್ಯಾನಂದದಿಂದ ಬಾಲಕರಿಂದ ಅನ್ನಿಸಿದರು

ಬಾಲಕರು ನಿರೀಕ್ಷಿಸುತ್ತಿದ್ದ ಅಕ್ಟೋಬರ ೨ನೆಯ ತಾರೀಖು ಬಂದಿತು. ಅಂದೇ ಮಹಾತ್ಮರ ಹುಟ್ಟು ಹಬ್ಬ. ಅಂದೇ ಬಾಲಕರ ತಮ್ಮದೇ ಆದ ಸಮಾರಂಭ ಎಂದಮೇಲೆ ಬಾಲಕರ ಉತ್ಸಾಹಕ್ಕೂ ಆನಂದಕ್ಕೂ ಎಣೆಯುಂಟೇ? ಏಳು ಗಂಟೆಗೆ ಧ್ವಜವಂದನೆಗೆ ಬರಹೇಳಿದರೂ ೬ಗಂಟೆಗೆ ಮುಗಿಯುವ ಸೂತ್ರಯಜ್ಞದ ಮಂಗಲಕ್ಕೆ ಬಂದ ಬಾಲಕರೆಷ್ಟೋ? ೭ಗಂಟೆಗಂತೂ ಎಲ್ಲ ಬಾಲಕರೂ ಸ್ನಾನ ಮಾಡಿ, ಮಡಿಯ ಬಟ್ಟೆ ಧರಿಸಿ, ನಾಡಗುಡಿಯನ್ನು ಹಿಡಿದುಕೊಂಡು, ನಗುಮೊಗದಿಂದ ಬಂದುದನ್ನು ನೋಡಿದವರೇ ಧನ್ಯರು. ಎಲ್ಲರೂ ಸಾಲಾಗಿ ಮುಖ್ಯ ಶಾಲೆಯಿಂದ ನಾಡಗುಡಿಗಳನ್ನು

ಹಿಡಿದುಕೊಂಡು 'ಧ್ವಜವಂದನೆಗೆ ಬನ್ನಿ' ಎಂಬ ಹಾಡನ್ನು ಹಾಡುತ್ತ ನಡನಡುವೆ 'ಭಾರತ ಮಾತೆಗೆ ಜಯವಾಗಲಿ' ಎಂದು ಕೂಗುತ್ತ ಅವರಿಗಾಗಿಯೇ ಇದ್ದ ಸ್ಥಳದಲ್ಲಿ ಧ್ವಜ ವಂದನೆಗೆ ವ್ಯವಸ್ಥೆಯಿಂದ ನಿಂತರು. ಶ್ರೀಮಾನ್ ಬಸವ ನಾಳರವರಿಂದ ಧ್ವಜವೇರಿತು. ಅವರ ಬೋಧಕ ಭಾಷಣ ಮುಗಿಯಿತು. ರಾಷ್ಟ್ರಗೀತೆಯಾಯಿತು. ಮುಂದಿನ ಕಾರ್ಯ ವೆಂದರೆ ಅವರ ಜೀವವೇ ಉಳ್ಳ ಬಾಲಕರ ಸಭೆ.

ಮುನ್ನಾ ದಿನ ಸಂಜೆಗೇ ಆರನೆಯ ವರ್ಗದವರು ಸಭೆಯ ಸ್ಥಳವನ್ನು ತಳಿರು—ತೋರಣಗಳಿಂದ ಅಲಂಕರಿಸಿದ್ದರು. ಪೂಜ್ಯ ಗಾಂಧೀಜಿಯವರ ಭಾವಚಿತ್ರದ ಗದ್ದುಗೆಯನ್ನು ಶೋಭಿಸುವಂತೆ ನಡುವೆ ರಚಿಸಿದ್ದರು. ಅತಿಥಿಗಳಿಗಾಗಿ, ಪ್ರೇಕ್ಷಕರಿಗಾಗಿ, ತಮ್ಮ ಗೆಳೆಯರಿಗಾಗಿ ಕೂಡ್ರಲು ಸ್ಥಳದ ಏರ್ಪಾಡು ಮಾಡಿದ್ದರು. ಅಲ್ಲಲ್ಲಿ ವ್ಯವಸ್ಥೆಗಾಗಿ ಆರನೆಯ ಮತ್ತು ಏಳನೆಯ ವರ್ಗದ ಬಾಲಕರು ನಿಂತಿದ್ದರು. ಬಂದ ವರಿಗೆಲ್ಲ ಇವರೇ ಸ್ಥಳ ತೋರಿಸಿ ಕೂಡ್ರಿಸುತ್ತಿದ್ದರು. ಬಾಲ ಕರೆಲ್ಲರೂ ಕುಳಿತರು. ಗುರುಗಳೂ ಬಂದರು. ಅತಿಥಿ ಗಳಾದ ಶ್ರೀ. ಜೋಶಿಯವರು ಅಕಸ್ಮಾತ್ ಊರಿಗೆ ಹೋದರು ಎಂಬ ಸುದ್ದಿ ಬಂದು ಬಾಲಕರು ಚಿಂತೆಯಲ್ಲಿ ಮುಳುಗಿದರು. ಆಗ ಬಾಲಕರು ಪ್ರಿನ್ಸಿಪಾಲರನ್ನು ಕೇಳಿ ಕೊಳ್ಳಲು, ಬಾಲಕರ ಮನವುಬ್ಬಿಸುದರಲ್ಲಿಯೇ ಸಂತೋಷ ಬಡುವ ಈ ಲಕ್ಕುಂಡಿ ರಾಯರು ತಟ್ಟನೆ ಒಪ್ಪಿ ಬಾಲಕ ರನ್ನು ಆನಂದಗೊಳಿಸಿದರು. ಪ್ರಿನ್ಸಿಪಾಲ ಲಕ್ಕುಂಡಿ ರಾಯ ರೊಂದಿಗೆ ಅವರ ಬಲಗೈಯಂತಿದ್ದ ಹಾವೇರಿಯವರೂ ಹಾಜರಾದರು. ಕಾಲೇಜದ ಕೆಲಜನ ಶಿಕ್ಷಕರೂ ಬಂದರು ಇಷ್ಟೆಲ್ಲ ಕಾರ್ಯ ನಡೆದದ್ದು ಕುಳಿತದ್ದು ಇವುಗಳನ್ನು ನೋಡಿ ದರೆ ಈ ಶಾಲೆಯ ಬಾಲಕರ ಅಚ್ಚುಕಟ್ಟುತನವು ಕಾಣು ವಂತಿತ್ತು.

೨ನೆಯ ವರ್ಗದ ಬಾಲಕನಿಂದ ಮಹಾತ್ಮರ ಭಾವಚಿತ್ರದ ಪೂಜೆ ಮುಗಿದ ಕೂಡಲೆ ಸಭೆಯ ಕಾರ್ಯವು ಆರಂಭವಾ ಯಿತು. ಕಾರ್ಯಕ್ರಮವಂತೆ ಕಾರ್ಯಗಳು ಸಾಗುವದಕ್ಕೆಂದೇ ಭಾಗ ವಹಿಸತಕ್ಕ ಬಾಲಕರೆಲ್ಲರೂ ಕ್ರಮವಾಗಿ ಒಂದೆಡೆ ಕುಳಿತಿದ್ದರು. ಅಧ್ಯಕ್ಷರ ಆಯ್ಕೆ, ಅನುಮೋದನಗಳಾ ದವು. ಅಧ್ಯಕ್ಷರ ಭಾಷಣವಾಯಿತು. ಒಂದನೆಯ ವರ್ಗದ ವರು ವರ್ಧಾ ಶಿಕ್ಷಣ, ಗಾಂಧೀಜಿಯ ಹಾಡು; ೨ನೆಯ ವರ್ಗ ದವರು ಗಾಂಧೀಜಿಯ ಪ್ರತಿಜ್ಞೆ, ಸತ್ಯವಂತ ಗಾಂಧಿ, ಗಾಂಧೀಜಿಯ ಹಾಡು; ೩ನೆಯ ವರ್ಗದವರು ಗಾಂಧೀಜಿಯ ಚರಿತ್ರ, ಗಾಂಧೀಜಿಯ ಹಾಡು; ೪ನೆಯ ವರ್ಗದವರು ಗಾಂಧೀಜಿಯ ಅಹಿಂಸೆ, ಗಾಂಧೀಜಿಯ ಕೃತಿಗಳ ಹಾಡು; ೫ನೆಯ ವರ್ಗದವರು ಗಾಂಧೀಜಿಯ ಜೀವನ ಚರಿತ್ರ, ಚರಖಾ ಜಯಂತಿಯ ಬಗೆಗೆ ಭಾಷಣ, ರಾಟೆಯ ಹಾಡು; ಆರನೆಯ ವರ್ಗದವರು ತ್ಯಾಗವೀರ ಗಾಂಧೀಜಿ, ಗಾಂಧೀ ಸ್ತೋತ್ರ, ಏಳನೆಯ ವರ್ಗದವರು ಮಹಾತ್ಮರ ಗೀತೆ, ಬಾಷ್ಪಾಂಜಲಿ, ಗಾಂಧೀ ಟೊಪ್ಪಿಗೆ ಈ ಮುಂತಾದ ವಿಷಯ ಗಳ ಬಗೆಗೆ ಮಾತಾಡಿದರು ಮತ್ತು ಹಾಡಿದರು. ೧ನೆಯ ಬಾಲಕರಾದ ಕುಮಾರ ತೊಗಲಂಗಿ ಮತ್ತು ಕುಮಾರ ನಾಯಕ ಇವರ ವರ್ಧಾ ಶಿಕ್ಷಣದ ಬಗೆಗೆ ಆದ ಸಂಭಾಷಣವು ಬಾಲಕರನ್ನು ಹರುಷಗೊಳಿಸಿತು. ೨ನೆಯ ವರ್ಗದ ಬಾಲಕ ಕುಮಾರ ಬಳ್ಳಾರಿ ಈತನ ಗಾಂಧೀಜಿಯ ಪ್ರತಿಜ್ಞೆ ಎಂಬ ವಿಷಯದ ಭಾಷಣವು ಎಲ್ಲರ ಮನವೆಳೆಯಿತು. ೪ನೆಯ ಇಯತ್ತೆ ಬಾಲಕ ಕುಮಾರ ಪುರಾಣಿಕ ಈತನ ಗಾಂಧೀಜಿ ಯ ಅಹಿಂಸೆ ಈ ಭಾಷಣವು ಎಲ್ಲರಲ್ಲೂ ತಾಳ್ಮೆಯನ್ನು ಬೇರೂರಿಸಿತು. ೫ನೆಯ ವರ್ಗದ ಬಾಲಕರಾದ ಕುಮಾರ ಕಾಳೆ ಮತ್ತು ಬಾರಕಿ ಇವರ ಚರಖಾ ಜಯಂತಿಯ ಸಂಭಾ ಷಣವು ಹಾಸ್ಯದಲ್ಲಿ ಮುಳುಗಿಸಿತು. ೬ನೆಯ ವರ್ಗದ ಬಾಲಕ ನಾಯಕ ಈತನ 'ತ್ಯಾಗವೀರ ಗಾಂಧಿ' ಭಾಷಣವು ಎಲ್ಲರೂ ಹೌದೆನ್ನುವಂತಾಯಿತು. ೭ನೆಯ ವರ್ಗದ ಗಿರಿ ಭಟ್ಟನ ಬಳಗದವರಿಂದಾದ ಗಾಂಧಿ ಟೊಪ್ಪಿಗೆ ಎಂಬ ಸಂಭಾ ಷಣವು ಎಲ್ಲರ ಹೊಟ್ಟೆ ಹುಣ್ಣಾಗುವಂತೆ ನಗಿಸಿತು. ಕುಮಾರ ಗಾಡಗೋಳಿ ಈತನ ಬಾಷ್ಪಾಂಜಲಿಯು ಎಲ್ಲರ ಕಣ್ಣುಗಳಿಂದ ಬಾಷ್ಪಗಳನ್ನು ಸುರಿಸಿಯೇ ಬಿಟ್ಟಿತು. ಮತ್ತೆ ಮತ್ತೆ ಅಂದರೂ ಬೇಕೆನ್ನುವಂತಹ ರೀತಿಯಲ್ಲಿ ಹಾಡಿದ ಹಾಡಿದು. ಬಾಲಕರ ಕಾರ್ಯ ನೋಡಿ ಹಿಗ್ಗುವ ಮನವುಳ್ಳ ಲಕ್ಕುಂಡಿ ರಾಯರಿಗೆ ಇಷ್ಟೆಲ್ಲ ನೋಡಿದ ಮೇಲೆ ಕೇಳುವ ದೇನು? ಕಾರ್ಯದಲ್ಲಿ ಆಸ್ಥೆ ತೋರಿಸಿದ ಎಲ್ಲ ಮಕ್ಕಳನ್ನು ಬೇರೆ ಬೇರೆಯಾಗಿಯೇ ಕರೆದು ಪ್ರತಿಯೊಬ್ಬರಿಗೂ ಬೆನ್ನು ಚಪ್ಪರಿಸಿ, ಚೆನ್ನಾಗಿ ಮಾಡಿದೆ ಎಂದು ಹಸ್ತಾಂದೋಲನ ಮಾಡಿದರು. ಆಗ ಬಾಲಕರ ಹಿಗ್ಗು ಹಿಡಿಸದಾಯಿತು. ಕೊನೆಗೆ ಎಷ್ಟು ಕೆಲಸವಾದರೂ ಬೇಸರಿಯದ ಲಕ್ಕುಂಡಿ ರಾಯರು ಬಾಲಕರಿಗೆ ನಿಮ್ಮದೇ ಆದ ಸಭೆ ನೋಡಿ ಸಂತೋಷವಾಯಿತು. ಎಲ್ಲ ಕಾರ್ಯಗಳಲ್ಲಿಯೂ ಇಂದಿನಂತೆ ವ್ಯವಸ್ಥೆಯಿಂದ, ಒಕ್ಕಟ್ಟಾಗಿ, ಉತ್ಸಾಹದಿಂದ ಕಾರ್ಯ ಮಾಡಿ ಮುಂದೆ ಬರ್ರಿ ಎಂದು ಹರಿಸಿದರು. ೪ನೆಯ ಇಯತ್ತೆಯ ಕುಮಾರ ಸತೀಶನಿಂದ ಆಭಾರ ಮನ್ನಣೆ

ಮುಗಿಯಿತು. ಎಲ್ಲರೂ ಎದ್ದು ನಿಂತು ರಾಷ್ಟ್ರಗೀತೆ ಹಾಡಿದ ಮೇಲೆ ಸಭೆ ಮುಗಿಯಿತು.

ಈ ಕಾರ್ಯಕ್ರಮವು ಎರಡು ತಾಸು ನಡೆದರೂ ಸಭೆಯು ಶಾಂತವಾಗಿ ನಡೆಯಿತು. ಪ್ರತಿಯೊಂದು ಕಾರ್ಯವೂ ನಡುವೆ ಬಿಡುವಿಲ್ಲದೆ ಸಾಗಿತು. ಕೊನೆಗೆ ಹೋಗುವಾಗಲೂ ಯಾರಿಗೂ ತೊಂದರೆಯಾಗದಂತೆ ಸಾಲಾಗಿ ಹೋದರಂತೂ ಒಳ್ಳೆಯ ಶಿಸ್ತನ್ನು ತೋರಿಸುತ್ತಿತ್ತು. ಇಲ್ಲಿಯ ಬಾಲಕ ಮಾಡುವ ಕಾರ್ಯದ ಪಡಿಕಟ್ಟು ಎಂತಹದೆಂಬದನ್ನು ಸಭೆಯು ಬಂದವರೆಲ್ಲರಿಗೂ ತೋರಿಸುವಂತಿತ್ತು. ಬಾ ಕರಿಗೇ ಹೊಣೆ ಹೊರಿಸಿದಾಗ ಕಾರ್ಯವನ್ನು ಕೆಡಿಸುವದ್ಕಿ ಚೆನ್ನಾಗಿಯೇ ಮಾಡುವರೆನ್ನುವದಕ್ಕೆ ಇದೊಂದು ಒಳ್ಳೆಯ ಉದಾಹರಣೆ ಎನ್ನಬಹುದು.

ಭಾಷಣಕಾರ ಗಾಂಧೀಜಿ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ
(೧೯೪೯)

ಪ್ರತಿ ವರುಷದಂತೆ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ (ಮುಲ್ಕಿ ಪರೀಕ್ಷೆ)ಯು ಎಪ್ರಿಲ್ ತಿಂಗಳಲ್ಲಿ ನಡೆಯದೆ ಈ ವರ್ಷದ ಪರೀಕ್ಷೆಯು ೧೯೪೯ ಮಾರ್ಚ ತಿಂಗಳಲ್ಲಿ ನಡೆಯುವದು. ಪರೀಕ್ಷೆಯ ನಿಶ್ಚಿತ ತಾರೀಖನ್ನು ಯಥಾವಕಾಶವಾಗಿ ತಿಳಿಸಲಾಗುವುದು

೧೯೪೯-೫೦ನೆಯ ವರುಷದ ಮುಲ್ಕಿ ಪರೀಕ್ಷೆಯು ೧೯೫೦ ಫೆಬ್ರುವರಿ ತಿಂಗಳಲ್ಲಿ ನಡೆಯುವದು.

ತಾ. ೩೦-೧೦-೪೮

(ಸಹಿ) ಎ. ಎನ್. ಸಾನೆ.
ಎಜ್ಯುಕೇಶನಲ್ ಇನಸ್ಪೆಕ್ಟರ, ದ, ಭಾ, ಧಾರವಾಡ.

ಶಿಕ್ಷಣ ವಿಧಾನದಲ್ಲಿ ವೃತ್ತಿಯ ಆಯ್ಕೆ

ಶ್ರೀ. ಎಚ್. ಜಿ. ಜೋಶಿ. ಬಿ. ಎ. (ಆನರ್ಸ್.) ಡಿ.ಬಿ.ಈ. ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ, ಧಾರವಾಡ.

ಶಿಕ್ಷಣದಲ್ಲಿ ವೃತ್ತಿ ಮತ್ತು ಚಟುವಟಿಕೆಗಳು ಅತ್ಯಂತ ಮಹತ್ವದ ಅಂಗವೆಂದು ಹೊರದೇಶದ ಶಿಕ್ಷಣತಜ್ಞರೂ, ಸುಧಾರಕರೂ ಅಭಿಪ್ರಾಯಪಡುತ್ತಾರೆ. ವೃತ್ತಿಯಾಗಲಿ ಚಟುವಟಿಕೆಯಾಗಲಿ ವಿಧಾಯಕವೂ ಆರ್ಥಿಕ ದೃಷ್ಟಿಯಲ್ಲಿ ನೆರವಾಗುವಂತಹದೂ ಆಗಬೇಕೆಂದು ಮೂಲ ಶಿಕ್ಷಣ ಪ್ರತಿಷ್ಠಾಪಕರ ಮನೀಷೆ. ಶಿಕ್ಷಣದ ವಿಷಯವಾಗಿ ಅನೇಕ ಮಹನೀಯರು ವಿಚಾರಿಸಿದ್ದಾರೆ; ವಿಚಾರಿಸುತ್ತಿದ್ದಾರೆ. ಅವರೆಲ್ಲರೂ ಚಟುವಟಿಕೆ ಹಾಗು ವೃತ್ತಿಗಳನ್ನು ಶಿಕ್ಷಣದ ಅವಶ್ಯಕತೆಗಳೆಂದು ಒಪ್ಪದೆ ಸಾಗಿಯೆ ಇಲ್ಲ. ಎಂತಹ ಕ್ರಾಂತಿಕಾರಿ ವಿಚಾರಶೀಲರಾದ ಶಿಕ್ಷಣವಿಶಾರದರೂ ಈ ದಾರಿಯನ್ನು ಅನುಸರಿಸಿಯೆ ಕ್ರಮ ಹೇಳಿದ್ದಾರೆ.

ಅನುಕರಣೆ ಹಾಗು ನಿರ್ಮಾಣೇಚ್ಛೆಗಳು ಮಕ್ಕಳಲ್ಲಿ ಪ್ರಬಲವಾದ ಭಾವನೆಗಳಿರುವಾಗ ಅವುಗಳನ್ನು ಜ್ಞಾನಾರ್ಜನೆಗಾಗಿ ಉಪಯೋಗಿಸುವುದು ಶಿಕ್ಷಕನ ಕರ್ತವ್ಯ. ಶಿಕ್ಷಣ ಪದ್ಧತಿಯು ಕೂಡ ಮಕ್ಕಳ ಮನೋವಿಜ್ಞಾನದ ವಿರುದ್ಧದೆಸೆಗೆ ಸಾಗುವದಿದ್ದರೆ ನಿರುಪಯೋಗಿಯೇ ಆದೀತು. ವೃತ್ತಿ-ಪ್ರವೃತ್ತಿಯು ಮಕ್ಕಳಿಗೆ ಮನೆಯ ಇಲ್ಲವೆ ನೆರೆಹೊರೆಯ ವಾತಾವರಣದಿಂದ ಪ್ರೇರಿತವಾಗುತ್ತದೆ. ಆಗ ಮಕ್ಕಳಲ್ಲಿ ಸಹಜವಾಗಿಯೆ ಇದ್ದ ಸುಪ್ತ ಶಕ್ತಿಗೆ ಚಾಲನೆ ದೊರೆಯುತ್ತದೆ. ಈ ಸಂಚಲಿತ ಭಾವನೆಗೆ ಸಾಕಷ್ಟು ಬೆಂಬಲ ನಿಲ್ಲದಾಗ ಅದು ನಿಲ್ಲುವದುಂಟು. ಆಗ ಶಿಕ್ಷಣದ ಗತಿ ಶಿಕ್ಷಕನ ಮಾರ್ಗದರ್ಶನ ಅವಶ್ಯಬೇಕು. ಇದು ಮಾನಸಶಾಸ್ತ್ರ ದೃಷ್ಟಿಯಿಂದ ಶಿಕ್ಷಣದಲ್ಲಿ ವೃತ್ತಿ ಏಕೆ ಅವಶ್ಯ ಎಂಬ ಮಾತು ಹೇಳಿಕೊಡುವದು.

ಭಾರತವು ಒಕ್ಕಲುತನ ಹಾಗು ಕೈಗಾರಿಕೆಗಳಿಂದಲೇ ತನ್ನ ನಾಡಗುಡಿಯನ್ನು ಜಗತ್ತಿನಲ್ಲಿ ಎತ್ತಿ ತೋರಿಸಿದ ಕಾಲವೊಂದಿತ್ತು. ಇಂದು ಅದೆಲ್ಲ ಅಜ್ಜಿಯ ಕತೆ, ಇಲ್ಲವೆ ನಮ್ಮ ಗತವೈಭವದ ಒಣ ನೆನಹು ಆಗಿದೆ. ಆಂಗ್ಲರು ಹಿಂದುಸ್ಥಾನದ ಮೇಲೆ ದಾಳಿಯಿಕ್ಕುವದಕ್ಕಿಂತಲೂ ಮೊದಲು ಅಫಗಾನರೂ ಮೊಗಲರೂ ಭಾರತವನ್ನು ಸುಲಿದು ಸೂರೆಗೈದು ಅಂಡಲೆದರೂ ಭಾರತದ ಕೈಗಾರಿಕೆ ಕಲೆಗಳ ಬೆಳವಣಿಗೆಗೆ ಕುಂದಿರಲಿಲ್ಲ. ಮೊಗಲರು ಬ್ರಿಟಿಶರಕ್ಕಿಂತಲೂ ಹೆಚ್ಚು ಸಮಯ ಹಿಂದುಸ್ತಾನವನ್ನಾಳಿದರು. ಆದರೆ ಅವರ ದೃಷ್ಟಿ ಬೇರೆಯೆ ಆಗಿತ್ತು. ಬ್ರಿಟಿಶರು ಭಾರತದ ಜನರ ರಕ್ತ ಶೋಷಿಸಿ, ಅವರನ್ನು ಬೀತ ನರಪೇತರನ್ನಾಗಿ ಮಾಡಿದರು. ಅವರು ಕಲೆ ಕೈಗಾರಿಕೆಗಳನ್ನು ಕೊಲೆಗೈದರು. ಅವರ ರಾಜ್ಯದಾಡಳಿತದ ಉದ್ದೇಶವೆ ಇದೆ ಇರಬಹುದೋ ಎನ್ನುವಷ್ಟು ಭಯಂಕರ ರೀತಿಯಲ್ಲಿ ನಮ್ಮ ದೇಶದ ಸುಲಿಗೆಯಾಯಿತು. ನಮ್ಮ ಒಕ್ಕಲುತನ, ನಮ್ಮ ನೂಲುನೇಗೆ, ನಮ್ಮ ಬಡಿಗತನ, ನಮ್ಮ ಕಂಬಾರಿಕೆ, ಕುಂಬಾರಿಕೆಗಳು ಎಂದು ಲಯದ ಬಸಿರಹೊಕ್ಕವೊ. ಅಂದೇ ಭಾರತದ ವಿನಾಶಯುಗ ಆರಂಭವಾಯಿತು. ಅದು ಕಳೆದ ೩೦ವರುಷಗಳ ಹಿಂದಿನ ಅವಧಿಯ ವರೆಗೂ ನಡೆಯುತ್ತಾ ಬಂದಿತು. ಅಶೋಕನ ಇಲ್ಲವೆ ಅಕಬರನ ಕಾಲದ ಭಾರತ ನೋಡಿದ ವೃದ್ಧನು 'ಅಯರ್ವಿನ್' ಇಲ್ಲವೆ 'ರೀಡಿಂಗರ' ಕಾಲದ ಹಿಂದುಸ್ಥಾನ ನೋಡಿದ್ದರೆ ಎದೆಯೊಡೆದುಕೊಂಡು ಸತ್ತೇ ಹೋಗುತ್ತಿದ್ದ. ನಂದನ ವನದ ನಾಡು ಮಸಣವಟ್ಟಿಯಾಯಿತು. ಇದಕ್ಕೆ ಒಂದೇ ಒಂದು ಕಾರಣ ನಮಗೆ ದುಡಿಯುವ ಪ್ರವೃತ್ತಿ ಹೋಯಿತು. ದುಡಿದ ದುಡಿಮೆ ಕೈಗೆ ಸಿಗದಂತಾಯಿತು. ನಮ್ಮ ಕೈ ಮುರಿದು ಹೋಯಿತು. ಹೆರವರ ಬದುಕಿಗೆ ಬಾಯಿ ಬಿಡುವ ಹೊತ್ತು ಬಂದಿತು. ಇದು ನೆಲೆಯಾಗಿ ನಿಂತಮೇಲೆ ಊಳಿಗತನವು ಸ್ವಾಭಾವಿಕವಾಗಿಯೆ ಜೀವನಕ್ಕೆ ಅಂಟಿಕೊಂಡಿತು. ಈ ರೋಗ ನಿವಾರಣೆಗಾಗಿಯೆ ವೃತ್ತಿ ಮೂಲ ಶಿಕ್ಷಣದ ಅವಶ್ಯಕತೆ ಬಿತ್ತು. ನಮ್ಮ ಜನರಲ್ಲಿ ಬೆಳೆದುಕೊಂಡು ಬಂದ ದಾಸ್ಯ ಭಾವನೆ,

ಮೈಗಳ್ಳತನ, ಮರೆತುಹೋದ ನಮ್ಮ ಕೈಗಾರಿಕೆಗಳನ್ನು ಇನ್ನೂ ಮರೆಯಬೇಕೆಂಬ ಪ್ರವೃತ್ತಿಗಳನ್ನೆಲ್ಲ ದೂರ ಮಾಡಲು ಗಾಂಧೀಜಿ ಈ ರಾಮಬಾಣ ಯೋಜಿಸಿದ್ದಾರೆ

ನಮ್ಮ ಕುಟುಂಬ ಈ ವೃತ್ತಿಮೂಲ ಶಿಕ್ಷಣದಿಂದ ಸ್ವಾವಲಂಬಿಯಾಗುತ್ತದೆ. ನಮ್ಮ ಮಕ್ಕಳ ಹೊಟ್ಟೆ ಬಟ್ಟೆಯ ಚಿಂತೆ ಬಿಟ್ಟುಹೋಗಿ ಅವರು ಮನೆತನದ ಕಸಬಿನಲ್ಲಿ ಪ್ರವೀಣರೂ ಆಗುತ್ತಾರೆ. ಗ್ರಾಮ ಸ್ವಯಂಪೂರ್ಣವಾಗಿ ದೇಶ ಸಮೃದ್ಧವಾಗುತ್ತದೆ.

ವೃತ್ತಿಗಳ ಆಯ್ಕೆ

ನಮ್ಮ ದೇಶದ ವಿಧಾಯಕ ಪ್ರಗತಿ ನಾಗರಿಕರಾದ ನಮ್ಮ ಗುರಿ. ಅದು ಸಾಧಿಸಲ್ಪಡಬೇಕು. ಜೀವನವು ಅದಕ್ಕೆ ಹೊಂದಿಕೊಂಡೆ ಸುಸೂತ್ರವಾಗಿ ಏರಿಳಿತಿಲ್ಲದೆ ಸಾಗಬೇಕು. ಇದು ಪ್ರಜಾ ಜೀವನದ ಬಯಕೆ. ಶಿಕ್ಷಣಕ್ಕೂ ಪ್ರಜಾ ಜೀವನಕ್ಕೂ ಜನ್ಯ ಜನಕ ಸಂಬಂಧವಿರುವದು. ಪ್ರಜಾ ಜೀವನದ ನಿರ್ಮಾತೃವೆ ಶಿಕ್ಷಣವೆನ್ನಿಸುವಾಗ ಅದು ಯಾವಾಗಲೂ ಹಿತವನ್ನೇ ಮಾಡುವದಾಗಿರಬೇಕೆಂಬುದು ಸ್ಪಷ್ಟವಿದೆ. ಜೀವನದ ಮಟ್ಟವನ್ನು ಏರಿಸುವ ಉದ್ದೇಶವಿಷ್ಟೆ ಶಿಕ್ಷಣಕ್ಕಿಲ್ಲ. ಹಾಗಿದ್ದರೆ ನಾಡಿನಲ್ಲಿ ಶಾಂತಿ ಸುಖ ಸಮಾಧಾನಗಳಲ್ಲಿ ಯಾವಾಗಲೂ ಏರಿಳಿತಗಳು ಉಳಿದುಕೊಂಡೇ ಇರುವವು. ನಮ್ಮ ಜೀವನದ ಮಟ್ಟ ಏರಬೇಕೇನೋ ನಿಜ. ಆದರೆ ಅದು ಸಮತೆಯ ತತ್ವದ ಮೇರೆಗೆ ಹಾರಬೇಕು. ವ್ಯಕ್ತಿಯು ಸಮಾಜನ ತುಣುಕು ಎಂಬುದನ್ನೂ ಇಂದು ಹಿಂದುಸ್ತಾನವು ನಿಚ್ಚಳವಾಗಿ ಜ್ಞಾಪಕದಲ್ಲಿಟ್ಟುಕೊಂಡು ಸಾಗಬೇಕಾಗಿದೆ. ಈ ಸಾಮಾಜಿಕ ಜೀವನದ ಮಟ್ಟವನ್ನು ಎತ್ತರಿಸುವ ಎತ್ತುಗಡೆಯೆ ಈ ವೃತ್ತಿ ಮೂಲ ಶಿಕ್ಷಣದ ತಳಹದಿಯಾಗಿದೆ. ಮತ್ತು ಅದರಲ್ಲಿಯ ವೃತ್ತಿಗಳನ್ನು ಆಯ್ದುಕೊಳ್ಳುವಲ್ಲಿಯೂ ಈ ವಿಷಯದ ಕಡೆಗೆ ಹೆಚ್ಚು ಗಮನವೀಯಬೇಕಾಗಿದೆ.

ಹೊಟ್ಟೆಯ ಸಾಧನ

ಇಂದು ಹಿಂದುಸ್ಥಾನದಲ್ಲಿ ಎಲ್ಲಕ್ಕೂ ಮಹತ್ವದ ಉದ್ಯೋಗ ಒಕ್ಕಲುತನ. 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು.' ಯಾಕಂದರೆ ಮನುಷ್ಯನ ಎಲ್ಲ ಅವಶ್ಯಕತೆಗಳಲ್ಲಿ ಮೊದಲಿನದು ಹೊಟ್ಟೆಯದು. ಅದನ್ನು ಪೂರೈಸುವ ಏಕಮೇವ ಸಾಧನವೆಂದರೆ ನಮ್ಮಲ್ಲಿ ಒಕ್ಕಲುತನವೆ. ಮೇಲಿನ ಜಾನಪದ ನುಡಿಯು ಪ್ರಭು ಸಮ್ಮಿತವಾದ ಶ್ರುತಿ ಎಂದೆ ಹೇಳಬಹುದು.

ಕಳೆದ ಎರಡನೆಯ ಮಹಾಯುದ್ಧದವರೆಗೂ ಭಾರತನ ಆಹಾರಕ್ಕೆ ಇನ್ನೊಂದು ದೇಶದ ಮುಖ ನೋಡಿದ್ದಿಲ್ಲ. ಅದು ಅಷ್ಟು ಸ್ವಾವಲಂಬಿಯಾಗಿತ್ತು. ನಮ್ಮ ಒಕ್ಕಲುತನದ ಪದ್ಧತಿ ನಾಶವಾಗುತ್ತಲೆ, ಇಲ್ಲವೆ ನಿಜವಾಗಿ ಭೂಮಿಯು ಗುಣಹೀನವಾಗುತ್ತಲೊ ಬಂದುದರ ಪರಿಣಾಮವಾಗಿಯೊ ಜನರಿಗೆ ಒಕ್ಕಲುತನದಲ್ಲಿ ಪ್ರವೃತ್ತಿಯೆ ಕಡಿಮೆಯಾದುದು. ತಕ್ಕ ಸಾಧನ ಸಾಮಗ್ರಿಗಳಿಲ್ಲದಿರುವುದು, ಸರಕಾರದ ಅಲಕ್ಷ ಹಾಗು ರೈತನಿಗೆ ತಕ್ಕ ಪೇಟೆಯ ಅನುಕೂಲವಿಲ್ಲದಿರುವುದು, ಅಲ್ಲದೆ ಹೆಚ್ಚು ಲಾಭದಾಸೆಗಾಗಿ ಹೊಲಗಳಲ್ಲಿ ಅಫೀಮು ತಂಬಾಕು ಸಿಂದಿಗಿಡ ಮೊದಲಾದವುಗಳನ್ನು ಬೆಳೆಸುವದು, ಅಲ್ಲದೆ ಇನ್ನೂ ಅನೇಕ ಅನೈತಿಕ ಕಾರಣಗಳಿಗಾಗಿ ಒಕ್ಕಲುತನದ ಮಹತ್ವ ಹಾಗು ನಿಜವಾದ ಲಾಭ ಮುಳುಗಿ ಹೋಗಿದೆ. ಇಂದಿಗೂ ಹಳ್ಳಿಗಳಲ್ಲಿ ನಂಬುಗೆಯಿದೆ— 'ರೈತ ಹೊಲಬುಗೆಟ್ಟನೆಂದೇ ಮಳೆ ಬೆಳೆ ಹೋಗಿದೆ" ಎಂದು.

ರೈತನಿಗೆ ನೈತಿಕ ಜೀವನವು ದೊಡ್ಡ ಆಸ್ತಿ. ಇದು ಅವನ ದಾರಿದ್ರ್ಯದಿಂದ ತೊಳೆದುಹೋಯಿತು. ದಾರಿದ್ರ್ಯವಾದರೂ ಸರಿಯಾದ ಶಿಕ್ಷಣವಿಲ್ಲದ್ದಕ್ಕೆ ನೆಲೆಯಾರಿತಲ್ಲದೆ ಬೇರೆ ಅಲ್ಲ. ನಮ್ಮ ದೇಶದ ಆರ್ಥಿಕ ನೀತಿ ಇಂದು ಒಕ್ಕಲುತನವನ್ನು ಹಾಳುಗೆಡುಹಿದೆ. ಹೊಲಗಳಿಗೆ ತಲೆಭಾರವಾದ ತೆರಿಗೆ ಬೆಳೆಯದಿದ್ದರೂ ಒತ್ತಾಯದ ಎತ್ತುವಳಿ. ಹೀಗಾಗಿ ರೈತನು ಬರಿ ಎಲುಬಿನ ಹಂದರವಾಗಿದ್ದಾನೆ. ಜೀವ ಉಳಿಸಿಕೊಳ್ಳುವದಕ್ಕಾಗಿ ಅಪ್ರಾಮಾಣಿಕನಾಗಿಯೂ ಅನೈತಿಕವಾಗಿಯೂ ಬದುಕು ಸಾಗಿಸಿದ್ದಾನೆ. ಸರಕಾರದ ಆರ್ಥಿಕ ನೀತಿ ಅವನನ್ನು ಮೂಲೆಗೊತ್ತಿದೆ. ಇದೆಲ್ಲಕ್ಕೂ ಮೊದಲಾಗಿ ಅವನು ಅಜ್ಞಾನದ ಶುದ್ಧ ಮೂರ್ತಿ. ಅದ್ದರಿಂದಲೆ ರೈತನ ಬಾಳು ಜಡ ಹಾಗು ಶೋಚನೀಯವಾಗಿದೆ. ಇದಕ್ಕೆ ರೈತರು ಸಂತತವಾಗಿ ಒಕ್ಕಲುತನದಲ್ಲಿ ಜಾಣರಾಗುವದು, ರಾಜ್ಯದಲ್ಲಿ ತಾನೂ ಒಂದು ಶಕ್ತಿ ಎಂಬುದನ್ನರಿತು ತನ್ನ ಹಿತ ಸಾಧಿಸಲೆತ್ನಿಸಿ, ರಾಷ್ಟ್ರವನ್ನು ಬಲಶಾಲಿಯಾಗಿ ಮಾಡುವದು. ಶಿಕ್ಷಣದಲ್ಲಿ ಒಕ್ಕಲುತನವನ್ನು ಅಂಗವಾಗಿಟ್ಟುಕೊಳ್ಳುವದು, ಮತ್ತು ಅದು ಲಾಭದಾಯಕವಾಗಿ ರಾಷ್ಟ್ರದ ವ್ಯಕ್ತಿಯ ಆರ್ಥಿಕ ಬಲಗಟ್ಟಿಗೆ ಸಾಧನವಾಗುವಂತೆ, ಪರಿಣಮಿಸುವಂತೆ ನೋಡಿಕೊಳ್ಳುವದಾಗಿದೆ. ಬೀಜಗಳು ಮತ್ತು

ಕ್ಕಲುತನದ ಇತರ ಸಾಧನಗಳು ಮತ್ತು ಅವುಗಳ ಪರಿ ರ ಸುಧಾರಣೆಗಳು ಎಲ್ಲದರಲ್ಲಿಯೂ ವಿದ್ಯಾರ್ಥಿಗಳಿಗೆ ವು ಬರಬೇಕು. ಪ್ರತ್ಯಕ್ಷ ಪ್ರಯೋಗಗಳಿಂದ ಅದನ್ನು ಗೊಳಿಸಬೇಕೆ ಹೊರತು ಬರಿ ಪುಸ್ತಕೀಯ ಹಾಗು ತ್ರೀಯ ಸಿದ್ಧಾಂತಗಳಿಂದ ಶಿಕ್ಷಣ ಕೊಡುವುದು ಅಷ್ಟು ಂಜಸವಾಗಲಾರದು. ಶಾಲೆಗಳು ಎರಡದರ ಕಡೆಗೂ ಷ್ಟಿ ಇಟ್ಟು ಸಾಗಬೇಕು.

ಹಳ್ಳಿಗಳಲ್ಲಿ ಹುಟ್ಟುವ ಕಚ್ಚಾ ಮಾಲಿನ ಉಪಯೋಗವು ಂತ್ರಗಳ ಬಾಯಲ್ಲಿ ಸೇರುವದಾಗಿರದೆ ಅವು ಕೇಂದ್ರಿಕೃತ ಉದ್ಯೋಗಗಳಲ್ಲಿ ರೂಪುಗೊಂಡು ರ ಉಪಯೋಗಕ್ಕೆ ಬರುವ ವಸ್ತುಗಳಾದರೆ ಈ ಮೂಲ ಶಿಕ್ಷಣದ ಸಾರ್ಥಕತೆ. ಒಕ್ಕಲುತನ ಹಾಗು ಇತರ ಉದ್ಯೋಗಗಳ ಒಂದು ಸುಂದರ ಸಮನ್ವಯವೆ ಈ ವೃತ್ತಿ ಮೂಲ ಶಿಕ್ಷಣದ ಧ್ಯೇಯವಾಗಿದೆ.

ಈ ಧ್ಯೇಯದತ್ತ ದೃಷ್ಟಿಯನ್ನಿಟ್ಟುಕೊಂಡೇ ವೃತ್ತಿಯನ್ನಾಗಲೀ ಚಟುವಟಿಕೆಗಳನ್ನಾಗಲೀ ಆಯ್ದುಕೊಳ್ಳುವದೇ ಸಯುಕ್ತಿಕವು. ವೃತ್ತಿಯು ಸಾಮಾಜಿಕ, ನೈಸರ್ಗಿಕ, ಆರ್ಥಿಕ ನೆಲೆಯ ಮೇಲೆ ನಿಂತಿರಬೇಕಲ್ಲದೆ-ಮಕ್ಕಳ ವಯೋಮಾನಕ್ಕೆ ತಕ್ಕಂತೆ ಅವರ ಮೈನ ಮನಗಳಲ್ಲಿ ದೇಹಗಳಲ್ಲಿ ಆಗತಕ್ಕ ಬದಲಾವಣೆಗಳನ್ನನುಲಕ್ಷಿಸಿ ಆಯ್ದುಕೊಂಡವುಗಳಾಗಿರಬೇಕು. ಅದುವೇ ವರ್ಧಾ ರಾಷ್ಟ್ರೀಯ ಶಿಕ್ಷಣ ಪುರಸ್ಕರ್ತರ ಅಭಿಲಾಷೆ.

ಭಾರತದ ಬಾವುಟ

(ಮೊದಲನೆಯ ಸ್ವಾತಂತ್ರ್ಯೋತ್ಸವದ ಕಾಲಕ್ಕೆ ರಚಿಸಿದುದು.)

ಇದೋ ! ನಮ್ಮ ಬಾವುಟ ! ಭಾರತದ ಬಾವುಟ !
ಅಂದು ಮೆರೆದ ಬಾವುಟ ! ಮೆರೆಯಲಿಂದು ಬಾವುಟ ! ||ಪ||

ವರ್ಣ-ದ್ವೇಷ ವೈರ-ಭಾವ ಅಳಿದು ವಿಶ್ವ ಬಂಧು ಭಾವ ।
ಇಳೆಗೆ ಸಾರಿ ಜಗಕೆ ದಾರಿ ತೋರಲೀ ಬಾವುಟ ||
ನಾಡ ಗುಡಿಯು ನಾಡಿಗಿದುವೆ ನಾಡಿನುಸಿರು ನಮ್ಮ ಜೀವ ।
ತೃಣಕೆ ಸಾಟಿ ನಮಗೆ ಶುಭವ ಕೋರಲೀ ಭಾವುಟ ||೧||
ಇದರ ಶಕ್ತಿ ನಮಗೆ ಸ್ಫೂರ್ತಿ ಮೌನ ಗಾನ ಇದರ ಧ್ಯಾನ ।
ಇದರ ಗೀತ ಶಾಂತಿ ಗೀತ ಮೊಳಗಲೀ ಬಾವುಟ ||
ಇದರ ಬಲದ ಮೇಲೆ ನಮ್ಮ ಬಲದ ಅಸ್ತಿವಾರವು ।
ಇದರ ಪೂಜೆ ನಮ್ಮ ಓಜೆ ಬೆಳಗಲೀ ಬಾವುಟ ||೨||
ಪರರ ತಂತ್ರ ಜಾಲದಲ್ಲಿ ಗಾಸಿಗೊಂಡ ಭಾರತಾಂಬೆ ।
ಸೇವೆಗೆಂದು ಹಿರಿಯ ಮುದುಕ ಹಿಡಿದನೀ ಬಾವುಟ ||
ಹಿಂದ ಮಾತೆ-ಗೆಂದ ಶೋಕ ಚಂದ್ರಗುಪ್ತರಂದು ಕಳದಿ ।
ಜಯತು ಎನೆ ! ಜಯವ ತಂದು ತೋರಿದೀ ಬಾವುಟ ||೩||
ನಮ್ಮ ರಕ್ತನಾಳದಲ್ಲಿ ಬೇರು ಬಿಟ್ಟ ಬಾವುಟ ।
ಮೇಲು-ಕೀಳು ಮೆಟ್ಟಿ ಸಮತೆ ಸಾರಲೀ ಬಾವುಟ ||
ಪಾರತಂತ್ರ್ಯ ಶೃಂಖಲೆಯ ಕಡಿದುದೀ ಬಾವುಟ ।
ಸ್ವಾತಂತ್ರ್ಯ ಸೌರಭವ ಬೀರಲೀ ಬಾವುಟ ||೪||

ಎಚ್. ಕೆ. ಕೆರೂರ.
ಬಿ. ಟಿ. ಸಿ. ಧಾರವಾಡ.

ಚಟುವಟಿಕೆ:— ಬಣ್ಣದ ಕಾಗದಗಳಿಂದ ರಾಷ್ಟ್ರಧ್ವಜವನ್ನು ತಯಾರಿಸುವದು.

ಶಿಕ್ಷಕರ ಹೆಸರು:—ಶ್ರೀ. ಪ್ರ ಸ. ರಾಯಮಾಹೂರ, ಬಿ. ಎ, ಡಿ. ಬಿ. ಇ.

ಕೃತಿಯ ಮೆಟ್ಟಿಗಳು	ಕೆಲಸದ ವಿವರ	ಅವಶ್ಯಕ ವಿಷಯ
(೧) ಯೋಜನೆ:— ಬಣ್ಣದ ಕಾಗದಗಳಿಂದ ರಾಷ್ಟ್ರಧ್ವಜವನ್ನು ತಯಾರಿಸುವದರ ಬಗ್ಗೆ:	(೧) ಪ್ರೇರಣೆ ಅಥವಾ ಅವಶ್ಯಕತೆ:	ದಿನಾಂಕ ೧೫-೮-೧೯೪೮ನೆಯ ದಿನ ಸ್ವಾತಂತ್ರ್ಯೋತ್ಸವದ ನಿಮಿತ್ತ ನಮ್ಮ ರಾಷ್ಟ್ರದ ತುಂಬೆಲ್ಲ ಹಬ್ಬವನ್ನು ನೆರವೇರಿಸುತ್ತಾರೆ. ಒಂದು ವರುಷದ ಹಿಂದೆ ಇದೇ ದಿನ ನಮ್ಮ ದೇಶಕ್ಕೆ ಸ್ವಾತಂತ್ರ್ಯವು ದೊರಕಿತು. ಅಂದು ನಾವು ನಮ್ಮ ರಾಷ್ಟ್ರಧ್ವಜವನ್ನು ಏರಿಸಿ ಹಾರಿಸಿ ಮೆರೆಯಿಸಿದೆವು. ಅದರಂತೆ ಸ್ವಾತಂತ್ರ್ಯೋತ್ಸವದ ದಿನವೂ ಕೂಡ ಅರಿವೆಯ ಧ್ವಜವನ್ನು ಹಾರಿಸುವದಲ್ಲದೆ ಅಂಥ ರಾಷ್ಟ್ರಧ್ವಜಗಳಿಂದ ತೋರಣಗಳನ್ನು ಮಾಡಿ ನಮ್ಮ ಶಾಲೆಯಲ್ಲಿ ಸಿಂಗರಿಸೋಣ. ಹಾಗಾದರೆ ಆ ತೋರಣಗಳಿಗಾಗಿ ಈ ದಿನ ನಾವು ರಾಷ್ಟ್ರಧ್ವಜಗಳನ್ನು ತಯಾರಿಸೋಣ. ಏರಿಸುವ ರಾಷ್ಟ್ರಧ್ವಜವನ್ನು ಅರಿವೆಯಿಂದ ಮಾಡಿರುತ್ತಾರೆ. ನಾವು ತೋರಣಗಳಿಗಾಗಿ ಕಾಗದದಿಂದ ರಾಷ್ಟ್ರಧ್ವಜಗಳನ್ನು ತಯಾರಿಸಿದರೆ ಅದು ಹೆಚ್ಚು ಸುಲಭವೂ ಕಡಿಮೆ ವೆಚ್ಚದಿಂದಲೂ ಆಗುತ್ತದೆ.
	(೨) ರಾಷ್ಟ್ರಧ್ವಜದ ನಿರೀಕ್ಷಣೆ ಹಾಗು ಕಲ್ಪನೆ:	ಅರಿವೆಯ ರಾಷ್ಟ್ರಧ್ವಜದ ನಿರೀಕ್ಷಣೆಯ ಮೂಲಕ ರಾಷ್ಟ್ರಧ್ವಜದ ಕಲ್ಪನೆ ಹಾಗು ಅದರಲ್ಲಿ ಅಡಕವಾದ ಉಪಕೃತಿಗಳ ವಿವರ. ರಾಷ್ಟ್ರಧ್ವಜದಲ್ಲಿ ಮೂರು ಬಣ್ಣದ ಪಟ್ಟಿಗಳಿರುತ್ತವೆ ಮೇಲೆ ಕೇಸರಿ, ನಡುವೆ ಬಿಳಿದು, ಕೆಳಗೆ ಹಸಿರು. ಅವಗಳನ್ನು ಒಂದಕ್ಕೊಂದು ಹೊಲಿದು ಕೂಡಿಸಿರುತ್ತಾರೆ ಕಾಗದದ ಪಟ್ಟಿಗಳನ್ನು ಅಂಟಿಸಬೇಕಾಗುತ್ತದೆ. ಧ್ವಜದ ನಡುವೆ ನೀಲಿ ಬಣ್ಣದ ಚಕ್ರವಿರುತ್ತದೆ. ರಾಷ್ಟ್ರಧ್ವಜದ ಆಕಾರವು ಕಾಟಕೋನ ಚೌಕೋನವಿರುತ್ತದೆ. ಮೂಲೆಗಳು ಕಾಟಕೋನಗಳಿರುತ್ತವೆ. ಅಂಚುಗಳು (ಎದುರು ಬದುರಿನ) ಸರಿಯಿರುತ್ತವೆ. ಚಕ್ರದ ಆಕಾರವು ದುಂಡಗೆ ಅಥವಾ ವರ್ತುಲಾಕಾರವಿದೆ.

ಸಮವಾಯ ಶಿಕ್ಷಣದ ಟಿಪ್ಪಣಿ. ವರ್ಗ:೩

ದಿನಾಂಕ: ೧೨-೮-೪೮ ವೇಳೆ: ಮುಂಜಾವು ೮ರಿಂದ ೧೧ರ ವರೆಗೆ.

ಕಲಿಸುವ ವಿಧಾನ.

ಸ್ವಚ್ಛತೆಯ ನಿರೀಕ್ಷಣೆ ....

ದಿನಾಂಕ ೧೫ನೆಯ ಆಗಸ್ಟ ೧೯೪೭ನೆಯ ದಿನ ಯಾವ ಉತ್ಸವವಿದೆ ?

ಸ್ವಾತಂತ್ರ್ಯೋತ್ಸವ ಎಂದರೇನು ?

ಒಂದು ವರುಷದ ಹಿಂದೆ ಈ ದಿನ ಅಂದರೆ ದಿನಾಂಕ ೧೫ನೆಯ ಆಗಸ್ಟ ೧೯೪೭ನೆಯ ದಿನ ಏಕೆ ಉತ್ಸವವನ್ನು ನೆರವೇರಿಸಿದೆವು ?

ಅಂದು ಯಾವ ಧ್ವಜವನ್ನು ಹಾರಿಸಿದೆವು ?

ಹಾಗಾದರೆ ಈ ೧೫ನೆಯ ದಿನಾಂಕವೂ ಅರಿವೆಯ ಧ್ವಜವನ್ನು ಹಾರಿಸುವದಲ್ಲದೆ ಸಿಂಗಾರವನ್ನು ಏತರಿಂದ ಮಾಡೋಣ ?

ತೋರಣಗಳನ್ನು ಏತರಿಂದ ತಯಾರಿಸೋಣ ?

ಅದಕ್ಕಾಗಿ ರಾಷ್ಟ್ರಧ್ವಜಗಳನ್ನು ಏತರಿಂದ ತಯಾರಿಸಬೇಕು ?

ಹಾಗಾದರೆ ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವಕ್ಕಾಗಿ ಸಿಂಗರಿಸಲು ಈ ದಿನ (ಬಣ್ಣದ ಕಾಗದದಿಂದ) ರಾಷ್ಟ್ರಧ್ವಜಗಳನ್ನು ತಯಾರಿಸೋಣ.

ರಾಷ್ಟ್ರಧ್ವಜವನ್ನು ಯಾರು ನೋಡಿರುವಿರಿ ?

ಅದನ್ನು ಏತರಿಂದ ಮಾಡಿರುತ್ತಾರೆ ?

ನಾವು ರಾಷ್ಟ್ರಧ್ವಜಗಳನ್ನು ತೋರಣಗಳಿಗಾಗಿ ಏತರಿಂದ ತಯಾರಿಸೋಣ ?

ಕಾಗದದಿಂದ ಏಕೆ ಧ್ವಜಗಳನ್ನು ತಯಾರಿಸಬೇಕು ?

ಇಲ್ಲಿ ಅರಿವೆಯ ಒಂದು ರಾಷ್ಟ್ರಧ್ವಜವಿದೆ. ಇದು ಹೇಗೆ ಇರುತ್ತದೆ ಎಂಬುದನ್ನು ಪರೀಕ್ಷಿಸಿ ನೋಡಿರಿ.

'ಶಿಕ್ಷಕನು ಮಾದರಿಗಾಗಿ ಅರಿವೆಯ ರಾಷ್ಟ್ರಧ್ವಜವನ್ನು, ಬಾಲಕರಿಗೆ ಗುಂಪಿನಂತೆ ತೋರಿಸಿ' ನಿರೀಕ್ಷಣೆ ಮಾಡಿಸುತ್ತ, ಇದರಲ್ಲಿ ಅರಿವೆಯ ತುಂಡು ಒಂದೇ ಇರುವದೋ ಹೇಗೆ ?

ಎಷ್ಟು ತುಂಡುಗಳಿರುತ್ತವೆ ? ಎಷ್ಟು ಬಣ್ಣದ ಪಟ್ಟಿಗಳಿರುತ್ತವೆ ? ಮೇಲಿನ ಪಟ್ಟಿಯು ಯಾವ ಬಣ್ಣದ್ದಿರುತ್ತದೆ ?

ಉಳಿದ ಎರಡು ಪಟ್ಟಿಗಳು ಯಾವ ಬಣ್ಣದ್ದಿರುತ್ತವೆ ?

ಈ ಬಣ್ಣದ ಪಟ್ಟಿಗಳಲ್ಲಿ ಮೇಲಿನಿಂದ ಕೆಳಕ್ಕೆ ಯಾವ ಕ್ರಮವಿದೆ ?

ಈ ಅರಿವೆಯ ಪಟ್ಟಿಗಳನ್ನು ಹೇಗೆ ಒಂದಕ್ಕೊಂದು ಕೂಡಿಸಿರುತ್ತಾರೆ ?

ಕಾಗದದ ಪಟ್ಟಿಗಳಿದ್ದರೆ ಹೇಗೆ ಕೂಡಿಸಬೇಕಾಗುತ್ತದೆ ?

ಈ ಧ್ವಜದ ಆಕಾರವು ಹೇಗಿರುತ್ತದೆ ? ಮೂಲೆಗಳು ಹೇಗಿರುತ್ತವೆ ? ಪಟ್ಟಿಗಳು ಯಾವ ಆಕಾರದವು ಇರುತ್ತವೆ ?

ಧ್ವಜದ ನಡುವೆ ಏನು ಕಾಣಿಸುತ್ತದೆ ? ಆ ಚಕ್ರವು ಯಾವ ಆಕಾರದ್ದಿದೆ ?

	(೩) ಉಪಕೃತಿಗಳ ವಿವರ:	**ಕರೆ ಹಲಿಗೆಯ ಬರಹ:** ಉಪಕೃತಿಗಳು:- (೧) ಮೂರು ಬಣ್ಣದ ಕಾಗದದ ಪಟ್ಟಿಗಳನ್ನು ಕ್ರಮವಾಗಿ ಹೊಂದಿಸುವದು. (೨) ಪಟ್ಟಿಗಳ ಅಂಟು ಹಚ್ಚುವ ಭಾಗಗಳನ್ನು ಎರಡೂ ಬದಿಗೆ ಅಗಲದಲ್ಲಿ ೧½"ನಷ್ಟು ಪೆನ್ಸಿಲಿನಿಂದ ಗುರುತಿಸುವದು; (೩) ಪಟ್ಟಿಗಳಿಗೆ ಅಂಟು ಹಚ್ಚಿ ಕೂಡಿಸುವದು. (೪) ಚಕ್ರವನ್ನು ನಡುವೆ ಅಂಟಿನಿಂದ ಹಚ್ಚುವದು.
(೨) ಸಾಧನಗಳ ಸಂಗ್ರಹ:	(೧) **ಸಾಕಷ್ಟು ಸರಿಯಾದ ಸಾಧನಗಳ ಪೂರೈಕೆ ಹಾಗು ಅವುಗಳ ಸರಿಯಾದ ಉಪಯೋಗ:**	**(೧) ಬಣ್ಣದ ಹಾಳಿಗಳ ಪಟ್ಟಿಗಳು–ಕೇಸರಿ,ಬಿಳಿ,ಹಸರು, ದೊಡ್ಡ ಹಾಳಿಗಳು:– ೨ ೨ ೨** ಪೇಟೆಯಲ್ಲಿ ಸಿಗುವ ದೊಡ್ಡ ಬಣ್ಣದ ಹಾಳಿಗಳನ್ನು ಮಡಿಚಿ (ನಾಲ್ಕು ಸಲ) ಸರಿಯಾದ ಭಾಗಗಳಾಗುವಂತೆ ಮಾಡಿ ಒಂದು ದೊಡ್ಡ ಹಾಳಿಯಲ್ಲಿ ೧೬ ಸಣ್ಣ ಭಾಗಗಳನ್ನು ಮಾಡಿ ಮಡಿಚುವದು. ಒಂದು ದೊಡ್ಡ ಹಾಳಿಯಲ್ಲಿ ೧೬ ಭಾಗಗಳಾಗುವದರಿಂದ, ೩೦ ಬಾಲಕರು, ಒಬ್ಬ ಶಿಕ್ಷಕರಿಗೆ ಕೂಡಿ ೩೨ ಭಾಗಗಳು ಅಂದರೆ ಒಂದೊಂದು ಬಣ್ಣದ ಎರಡು ದೊಡ್ಡ ಹಾಳಿಗಳು ಬೇಕಾಗುವವು ಶಿಕ್ಷಕನು ಒಂದು ದೊಡ್ಡ ಹಾಳಿಯನ್ನು ಮಡಿಚಿ ೧೬ ಭಾಗಗಳನ್ನು ಮಾಡಿ ತೋರಿಸುವದು. ಬಾಲಕರಲ್ಲಿ ಆರಾರು ಜನರ ಒಂದೊಂದು ಗುಂಪಿನವರಿಂದ ಒಂದೊಂದು ದೊಡ್ಡ ಹಾಳಿಯನ್ನು ೧೬ ಭಾಗಗಳಾಗುವಂತೆ ಮಡಿಸಲು ಹೇಳುವದು. ೨, ೪, ೮, ೧೬ ಅಲ್ಲದೆ ೩, ೫ ಇತ್ಯಾದಿಗಳ ತಿಳಿವಳಿಕೆ.

ದುಂಡಗಿರುವ ವಸ್ತುವಿನ ಆಕಾರಕ್ಕೆ ಯಾವ ಆಕಾರವೆನ್ನುತ್ತಾರೆ ?
ಹಾಗಾದರೆ ಬಣ್ಣದ ಕಾಗದಗಳಿಂದ ಧ್ವಜಗಳನ್ನು ತಯಾರಿಸಲು, ಯಾವ ಯಾವ ಬಣ್ಣದ ಕಾಗದಗಳು ಬೇಕು ?

ಎಷ್ಟು ಬಣ್ಣದ ಪಟ್ಟಿಗಳು ಬೇಕಾಗುವವು ?
ಈ ಬಣ್ಣದ ಪಟ್ಟಿಗಳನ್ನು ಹೇಗೆ ಹೊಂದಿಸಿಕೊಳ್ಳಬೇಕು ?
ಒಂದು ಪಟ್ಟಿಗೆ ಮತ್ತೊಂದನ್ನು ಹೇಗೆ ಜೋಡಿಸಬೇಕು ?

ಏತರಿಂದ ಅವು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡಬೇಕು ?
ಪಟ್ಟಿಗಳನ್ನು ಅಂಟಿಸಿದ ಮೇಲೆ ನಡುವೆ ಏನನ್ನು ಕೂಡಿಸಬೇಕು ?
ಹಾಗಾದರೆ ಯಾವ ಯಾವ ಕೆಲಸಗಳಾದವು ?

ಈ ರೀತಿ ಶಿಕ್ಷಕನು ಧ್ವಜಗಳನ್ನು ತಯಾರಿಸುವವರಲ್ಲಿ ಅಡಕವಾದ ಉಪಕೃತಿಗಳನ್ನು ಗೊತ್ತುಪಡಿಸಿ ಕ್ರಮಬದ್ಧವಾಗಿ ಬರೆಯುವನು.

ಈಗ ಹಾಗಾದರೆ ಯಾವ ಯಾವ ಸಾಮಾನುಗಳು ಬೇಕಾಗುವವು ?
ಎಷ್ಟು ಬಣ್ಣದ ಹಾಳಿಗಳು ಬೇಕು ?
ಪೇಟೆಯಲ್ಲಿ ಸಿಗುವ ಒಂದೊಂದು ಬಣ್ಣದ ಹಾಳಿ ಎಷ್ಟು ದೊಡ್ಡದಿರುತ್ತದೆ ?
ಅದರ ಉದ್ದಗಲಗಳನ್ನು ಯಾರು ಅಳೆಯುವಿರಿ ?

ಅದರ ಆಕಾರವು ಹೇಗಿದೆ ? ಅದರ ಮೂಲೆಗಳು, ಅಂಚುಗಳು ಹೇಗಿವೆ ?
ನಮಗೆ ಧ್ವಜಕ್ಕಾಗಿ ಯಾವ ಆಕಾರದ ಪಟ್ಟಿಗಳು ಬೇಕು ?
ಅವುಗಳು ಎಷ್ಟು ಅಳತೆಯವಿರಬೇಕು ? ಅರಿವೆಯ ಧ್ವಜದ ಪಟ್ಟಿಗಳ ಅಳತೆಗಳಷ್ಟು ಸಾಕಾಗುವದೋ ಹೇಗೆ ?

ದೊಡ್ಡ ಕಾಗದದಲ್ಲಿ ಸಣ್ಣ ಪಟ್ಟಿಗಳನ್ನು ಮಾಡಲು ಏನು ಮಾಡಬೇಕು ? ಹೇಗೆ ಮಡಿಚಬೇಕು ? ಮೂಲೆಗಳು ಹಾಗು ಅಂಚುಗಳು ಹೇಗಿರಬೇಕು ?

(ಒಂದು ದೊಡ್ಡ ಹಾಳಿಯನ್ನು ಸರಿಯಾದ ಅರ್ಧ ಭಾಗಗಳಾಗುವಂತೆ ಮಡಿಚಿ) ಈಗ ಎಷ್ಟು ಭಾಗಗಳಾದವು ? ಇವುಗಳು ಒಂದಕ್ಕೊಂದು ಹೇಗಿವೆ ?

ಇನ್ನೊಮ್ಮೆ ಮಡಿಚಿದರೆ ಎಷ್ಟು ಭಾಗಗಳಾಗುವವು ?

ಹೀಗೆ ಶಿಕ್ಷಕನು ಒಂದು ಕಾಗದದಲ್ಲಿ ೧೬ ಭಾಗಗಳಾಗುವಂತೆ ಮಡಿಚುವನು. ಈ ಕೊನೆಯ ಸಣ್ಣ ಭಾಗದ ಕಾಗದದ ಪಟ್ಟಿಯು ಧ್ವಜಕ್ಕೆ ಯೋಗ್ಯವಾಗುವದೋ ಹೇಗೆ ?

ನಮಗೆ ಒಟ್ಟು ಒಂದೊಂದು ಬಣ್ಣದ ಕಾಗದದ ಎಷ್ಟು ಪಟ್ಟಿಗಳು ಬೇಕು ?

ಹಾಗಾದರೆ ಒಂದು ಕಾಗದದಲ್ಲಿ ೧೬ ಪಟ್ಟಿಗಳಾದರೆ ಇಂಥ ಒಂದೊಂದು ಬಣ್ಣದ ದೊಡ್ಡ ದೊಡ್ಡ ಹಾಳಿಗಳು ಎಷ್ಟು ಬೇಕು ?

ಒಂದೊಂದು ಬಣ್ಣದ ಎರಡು ಹಾಳಿಗಳನ್ನು ತಕ್ಕೊಂಡು ೫ ಗುಂಪಿನವರಿಂದ ಒಂದೊಂದು ದೊಡ್ಡ ಹಾಳಿಯನ್ನು ೧೬ ಭಾಗಗಳಾಗುವಂತೆ ಮಡಿಚಲು ಹೇಳುವದು. ಮಡಿಚುವಾಗ ೩, ೪, ೩, ೧೬ ಅಲ್ಲದೆ ೪, ೩ ಇತ್ಯಾದಿಗಳ ಬಗ್ಗೆ ತಿಳಿಸಿಕೊಡುವದು ಹಾಗೂ ಬರೆಯುವದು.

ಸಣ್ಣ ಭಾಗದ ಕಾಟಕೋನ ಚೌಕೋನಾಕಾರದ ಬಗ್ಗೆ ತಿಳಿಸಿ ಹೇಳುವದು. ಅವುಗಳ ಉದ್ದಗಲಗಳನ್ನು ಅಳೆಯುವದು.

ಬಣ್ಣದ	ದೊಡ್ಡ ಕಾಗದ	ಒಟ್ಟು	ಆದಭಾಗಗಳು	ಚಿತ್ರಗಳು
ಕೇಸರಿ.	೨		೩೨	—
ಬಿಳಿ.	೨		೩೨	—
ಹಸುರು.	೨		೩೨	—
ನೀಲಿ.	೨		—	೩೨

(೨) ಅಂಟಿನ ಡಬ್ಬಿ (ಗ್ಲಾಸಿನಲ್ಲಿ ತಯಾರಿಸಿ ಇದ್ದದ್ದು) ೩೨

(೩) ರದ್ದಿ ಕಾಗದ (ಅಂಟು ಹಚ್ಚುವಾಗ ಕೆಳಗೆ ಇಡುವ) ೩೨.

(೩) ಕಾರ್ಯಾರಂಭ:

(೧) ಕ್ರಮವನ್ನು ಹೊರಡಿಸುವದಕ್ಕಾಗಿ ಶಿಕ್ಷಕನ ಮಾದರಿ ಕೃತಿ:

(೧) ಮೇಲಿನ ಎರಡು ಬಣ್ಣದ (ಕೇಸರಿ, ಬಿಳಿ) ಪಟ್ಟಿಗಳನ್ನು ಅಂಟಿಸುವ ಭಾಗವನ್ನು ೩"ನಷ್ಟು ಪೆನ್ಸಿಲಿನಿಂದ ಗುರುತಿಸುವದು.

(೩) ಎರಡೂ ಪಟ್ಟಿಗಳ ಆ ಭಾಗಕ್ಕೆ ಒಂದೇ ಬೆರಳಿನಿಂದ ದೂರದ ತುದಿಯಿಂದ ಸಾಗಿ ಸಮೀಪದ ತುದಿಗೆ ಬರುವಂತೆ ಅಂಟು ಹಚ್ಚುವದು.

(೨) ರದ್ದಿ ಕಾಗದವನ್ನು ನಮ್ಮ ಎದುರು ಇಟ್ಟುಕೊಳ್ಳುವದು.

(೪) ಎರಡೂ ಪಟ್ಟಿಗಳನ್ನು ಅಂಟಿಸುವದು.

(೫) ಮೂರನೆಯ ಬಣ್ಣದ (ಹಸುರು) ಪಟ್ಟಿಯನ್ನು ಬಿಳಿಯ ಪಟ್ಟಿಗೆ ಕೆಳಗಡೆ ಹಚ್ಚುವದು.

(೬) ಚಕ್ರವನ್ನು ಬಿಳಿಯ ಪಟ್ಟಿಯಲ್ಲಿ ನಡುವೆ ಅಂಟಿಸುವದು.

(೨) ವೇಳೆಯ ಕಲ್ಪನೆ:-

ವೇಳೆ:—ಸಾಧಾರಣ ೨೦ ನಿಮಿಷಗಳು.

(೩) ಸಂಘಟನೆ:-

ಕರೆ ಹಲಿಗೆ ಬರಹ:—

ಅಂ. ನಂ.	ಸಾಮಾನಿನ ಹೆಸರು	ಸಂಖ್ಯೆ	ವಿ. ಹೆಸರು.
೧.	ಕೇಸರಿ ಪಟ್ಟಿಗಳು	೩೨	
೨.	ಬಿಳಿ ,,	೩೨	
೩.	ಹಸುರು ,,	೩೨	—
೪.	ನೀಲಿ ಚಕ್ರಗಳು	೩೨	
೫.	ರದ್ದಿ ಕಾಗದ	೩೨	
೬.	ಅಂಟಿನ ಡಬ್ಬಿ	೩೨	

(೪) ಪ್ರತ್ಯಕ್ಷ ಕಾರ್ಯ:-

ಬಾಲಕರು ಪಟ್ಟಿಗಳ ಆಕಾರ ಅಳತೆಗಳನ್ನು ಚಕ್ರದ ಆಕಾರವನ್ನು ನೋಡಿ ತಿಳಿದುಕೊಳ್ಳುವದು.

ನೆನಪಿಡತಕ್ಕ ಸಂಗತಿಗಳು:—(೧) ಅಂಟು ಕೈಗೆ ಹಾಗು ಕಾಗದಕ್ಕೆ ಹೆಚ್ಚು ಹತ್ತದಂತೆ ನೋಡಿಕೊಳ್ಳಬೇಕು. (೨) ಕಾಗದವು ಹರಿಯದಂತೆ ಅಥವಾ ಹೊಲಸಾಗದಂತೆ

ಈ ಸಣ್ಣ ಭಾಗದ ಆಕಾರವು ಹೇಗಿದೆ ? ಉದ್ದಗಲಗಳು ಎಷ್ಟಿವೆ ?
ಈ ಭಾಗಗಳನ್ನು ಹೇಗೆ ಬೇರೆ ಮಾಡಬೇಕು ? ಏತರಿಂದ ತುಂಡುಗಳನ್ನು ಮಾಡಬೇಕು ? (ಈ ರೀತಿ ಎಲ್ಲ ಹಾಳೆಗಳಲ್ಲಿ ಕತ್ತರಿಸಿ ಭಾಗಗಳನ್ನು ಮಾಡುವದು.)

ಒಂದೊಂದು ಬಣ್ಣದ ಎಷ್ಟು ಪಟ್ಟಿಗಳಾದವು ? ನಮಗೆ ಒಟ್ಟು ಎಷ್ಟು ಬೇಕು ?
ಇದರಂತೆ ಚಕ್ರವನ್ನು ಯಾವ ಬಣ್ಣದ ಹಾಳೆಯಿಂದ ಮಾಡಬೇಕು ?

ಅದನ್ನು ಮಡಿಚಿದ ನಂತರ ಚಕ್ರವನ್ನು ಮಾಡಲು ಹೇಗೆ ಕತ್ತರಿಸಬೇಕು ?
ಶಿಕ್ಷಕನು ಚಕ್ರಾಕಾರವಾಗಿ ಕತ್ತರಿಸಿ ಚಕ್ರಗಳನ್ನು ಮಾಡುವನು.

ಈ ಪ್ರಕಾರ ಶಿಕ್ಷಕನು ಬಣ್ಣದ ಕಾಗದಗಳ ಪಟ್ಟಿಗಳನ್ನು ಹಾಗು ಚಕ್ರಗಳನ್ನು ತಯಾರಿಸಿ ಅಣಿ ಮಾಡಿಕೊಳ್ಳುವನು.
ನಮಗೆ ಮತ್ತೆ ಯಾವ ಸಾಮಾನು ಬೇಕು ? ಎರಡು ಪಟ್ಟಿಗಳನ್ನು ಜೋಡಿಸಲು ಏನು ಬೇಕು ?

ಹಾಗಾದರೆ ಈಗ ನಾನು ಒಂದು ಧ್ವಜವನ್ನು ಮಾಡಿ ತೋರಿಸುತ್ತೇನೆ. ಹೇಗೆ ಮಾಡಬೇಕೆಂಬುದನ್ನು ನೋಡಿರಿ.
ಮೊದಲು ಎಷ್ಟು ಬಣ್ಣದ ಪಟ್ಟಿಗಳನ್ನು ತಕ್ಕೊಳ್ಳಬೇಕು ?

ಅವುಗಳಿಗೆ ಯಾವ ಭಾಗದಲ್ಲಿ ಅಂಟನ್ನು ಹಚ್ಚಬೇಕು ? ಎರಡು ಬದಿಗೆ ಅಂಟು ಹಚ್ಚುವ ಭಾಗವು ಸಮನಾಗಿ ಬರುವಂತೆ ಏತರಿಂದ ಗುರುತಿಸಬೇಕು ? ಎಷ್ಟು ಇಂಚಿನವರೆಗೆ ಗುರುತಿಸಬೇಕು ? ಅಂಟನ್ನು ಹೇಗೆ ಹಚ್ಚಬೇಕು ? ಎಷ್ಟು ಸರಳಿನಿಂದ, ಯಾವ ಕಡೆಯಿಂದ, ಯಾವ ಬದಿಗೆ ಸಾಗಬೇಕು ?

ಅಂಚು ಮೂಲೆಗಳು ಹೊಂದಿಕೆಯಾಗುವಂತೆ ಹೇಗೆ ಅಂಟಿಸಬೇಕು ?

ಮೂರನೆಯನ್ನು ಯಾವ ಬದಿಗೆ ಹಚ್ಚಬೇಕು ?
ಆ ಮೇಲೆ ಏನನ್ನು ಹಚ್ಚಬೇಕು ? ಚಕ್ರವನ್ನು ಎಲ್ಲಿ ಅಂಟಿಸಬೇಕು ?

ಈ ರೀತಿಯಾಗಿ ಕ್ರಮವನ್ನು ಹೊರಡಿಸುವದಕ್ಕಾಗಿ ಶಿಕ್ಷಕನು ಮಾದರಿಗಾಗಿ ಧ್ವಜನನ್ನು ತಯಾರಿಸಿ ತೋರಿಸುವನು.

ಇಷ್ಟು ಧ್ವಜವನ್ನು ತಯಾರಿಸಲು ಎಷ್ಟು ವೇಳೆ ಬೇಕಾಗುವದು ?

ಹಾಗಾದರೆ ನಿಮಗೆ ಈಗ ಯಾವ ಸಾಮಾನುಗಳು ಬೇಕು ?

ಒಂದೊಂದು ಬಣ್ಣದ ಪಟ್ಟಿಗಳು ಎಷ್ಟು ಬೇಕು ? ಅವುಗಳನ್ನು ಯಾರು ಹಂಚುವಿರಿ ?

ಚಕ್ರಗಳು ಎಷ್ಟು ಬೇಕು ? ಅವುಗಳನ್ನು ಯಾರು ಹಂಚುವಿರಿ ?

ಅಂಟು ಹಚ್ಚಲು ಕೆಳಗೆ ಇಡಲು ಏನು ಬೇಕು ? ಎಷ್ಟು? ಯಾರು ಹಂಚುವಿರಿ ?

ನಿಮ್ಮ ಪಟ್ಟಿಗಳ ಉದ್ದಗಲಗಳು ಎಷ್ಟಿವೆ ? ಮಡಿಚಿದರೆ ಅಂಚುಗಳು ಹಾಗು ಕೋನಗಳು ಹೇಗೆ ಹೊಂದುತ್ತವೆ ? ಗಲದಲ್ಲಿ ಎರಡೂ ಬದಿಗೆ ಅಂಟು ಹಚ್ಚುವ ಭಾಗವನ್ನು ಎಷ್ಟು ಗುರುತಿಸುವಿರಿ ?

ಈ ರೀತಿ ಎಲ್ಲ ವಿದ್ಯಾರ್ಥಿಗಳು ಕೆಲಸಕ್ಕೆ ಅಣಿಯಾದ ನಂತರ ಕ್ರಮವಾಗಿ, ಶಿಸ್ತು ಅಚ್ಚುಕಟ್ಟುತನದಿಂದ ಕೆಲಸವು ಆಗುವಂತೆ, ನೆನಪಿಡತಕ್ಕ ಸಂಗತಿಗಳನ್ನು ಆಗಿಂದಾಗ ಹೇಳುತ್ತ, ಶಿಕ್ಷಕನು ಎಲ್ಲ ಬಾಲಕರಿಂದ ಧ್ವಜಗಳನ್ನು ಮಾಡಿಸುವನು.

		ಸಣ್ಣ ಭಾಗದ ಕಾಟಕೋನ ಚೌಕೋನಾಕಾರದ ಬಗ್ಗೆ ತಿಳಿಸಿ ಹೇಳುವದು. ಅವುಗಳ ಉದ್ದಗಲಗಳನ್ನು ಅಳೆಯುವದು. ಬಣ್ಣದ ದೊಡ್ಡ ಕಾಗದ ಒಟ್ಟು ಆದಭಾಗಗಳು ಚಿತ್ರಗಳು. ಕೇಸರಿ. ೨ ೩೨ — ಬಿಳೆ. ೨ ೩೨ — ಹಸುರು. ೨ ೩೨ — ನೀಲಿ. ೨ — ೩೨ (೨) ಅಂಟಿನ ಡಬ್ಬಿ (ಗ್ಲಾಸಿನಲ್ಲಿ ತಯಾರಿಸಿ ಇದ್ದದ್ದು)೩೨ (೩) ರದ್ದಿ ಕಾಗದ (ಅಂಟು ಹಚ್ಚುವಾಗ ಕೆಳಗೆ ಇಡುವ) ೩೨.
(೩) ಕಾರ್ಯಾರಂಭ:	(೧) ಕ್ರಮವನ್ನು ಹೊರಡಿಸುವದಕ್ಕಾಗಿ ಶಿಕ್ಷಕನ ಮಾದರಿ ಕೃತಿ:	(೧) ಮೇಲಿನ ಎರಡು ಬಣ್ಣದ (ಕೇಸರಿ, ಬಿಳೆ) ಪಟ್ಟಿಗಳನ್ನು ಅಂಟಿಸುವ ಭಾಗವನ್ನು ೩/೪"ನಷ್ಟು ಪೆನ್ಸಿಲಿನಿಂದ ಗುರುತಿಸುವದು. (೩) ಎರಡೂ ಪಟ್ಟಿಗಳ ಆ ಭಾಗಕ್ಕೆ ಒಂದೇ ಬೆರಳಿನಿಂದ ದೂರದ ತುದಿಯಿಂದ ಸಾಗಿ ಸಮೀಪದ ತುದಿಗೆ ಬರುವಂತೆ ಅಂಟು ಹಚ್ಚುವದು. (೨) ರದ್ದಿ ಕಾಗದವನ್ನು ನಮ್ಮ ಎದುರು ಇಟ್ಟುಕೊಳ್ಳುವದು. (೪) ಎರಡೂ ಪಟ್ಟಿಗಳನ್ನು ಅಂಟಿಸುವದು. (೫) ಮೂರನೆಯ ಬಣ್ಣದ (ಹಸುರು) ಪಟ್ಟಿಯನ್ನು ಬಿಳೆಯ ಪಟ್ಟಿಗೆ ಕೆಳಗಡೆ ಹಚ್ಚುವದು. (೬) ಚಕ್ರವನ್ನು ಬಿಳಿಯ ಪಟ್ಟಿಯಲ್ಲಿ ನಡುವೆ ಅಂಟಿಸುವದು.
	(೨) ವೇಳೆಯ ಕಲ್ಪನೆ:-	ವೇಳೆ:—ಸಾಧಾರಣ ೨೦ ನಿಮಿಷಗಳು.
	(೩) ಸಂಘಟನೆ:-	ಕರೆ ಹಲಿಗೆ ಬರಹ:—

ಅಂ. ನಂ.	ಸಾಮಾನಿನ ಹೆಸರು	ಸಂಖ್ಯೆ	ವಿ. ಹೆಸರು.
೧.	ಕೇಸರಿ ಪಟ್ಟಿಗಳು	೩೨	
೨.	ಬಿಳೆ ,,	೩೨	
೩.	ಹಸುರು ,,	೩೨	—
೪.	ನೀಲಿ ಚಕ್ರಗಳು	೩೨	
೫.	ರದ್ದಿ ಕಾಗದ	೩೨	
೬.	ಅಂಟಿನ ಡಬ್ಬಿ	೩೨	

	(೪) ಪ್ರತ್ಯಕ್ಷ ಕಾರ್ಯ:-	ಬಾಲಕರು ಪಟ್ಟಿಗಳ ಆಕಾರ ಅಳತೆಗಳನ್ನು ಚಕ್ರದ ಆಕಾರವನ್ನು ನೋಡಿ ತಿಳಿದುಕೊಳ್ಳುವದು. ನೆನಪಿಡತಕ್ಕ ಸಂಗತಿಗಳು:—(೧) ಅಂಟು ಕೈಗೆ ಹಾಗು ಕಾಗದಕ್ಕೆ ಹೆಚ್ಚು ಹತ್ತದಂತೆ ನೋಡಿಕೊಳ್ಳಬೇಕು. (೨) ಕಾಗದವು ಹರಿಯದಂತೆ ಅಥವಾ ಹೊಲಸಾಗದಂತೆ ಅಂಟು ಹಚ್ಚಬೇಕು.

ಈ ಸಣ್ಣ ಭಾಗದ ಆಕಾರವು ಹೇಗಿದೆ ? ಉದ್ದಗಲಗಳು ಎಷ್ಟಿವೆ ?
ಈ ಭಾಗಗಳನ್ನು ಹೇಗೆ ಬೇರೆ ಮಾಡಬೇಕು ? ಏತರಿಂದ ತುಂಡುಗಳನ್ನು ಮಾಡಬೇಕು ? (ಈ ರೀತಿ ಎಲ್ಲ ಹಾಳೆಗಳಲ್ಲಿ ಕತ್ತರಿಸಿ ಭಾಗಗಳನ್ನು ಮಾಡುವದು.)

ಒಂದೊಂದು ಬಣ್ಣದ ಎಷ್ಟು ಪಟ್ಟಿಗಳಾದವು ? ನಮಗೆ ಒಟ್ಟು ಎಷ್ಟು ಬೇಕು ?
ಇದರಂತೆ ಚಕ್ರವನ್ನು ಯಾವ ಬಣ್ಣದ ಹಾಳೆಯಿಂದ ಮಾಡಬೇಕು ?

ಅದನ್ನು ಮಡಿಚಿದ ನಂತರ ಚಕ್ರವನ್ನು ಮಾಡಲು ಹೇಗೆ ಕತ್ತರಿಸಬೇಕು ?
ಶಿಕ್ಷಕನು ಚಕ್ರಾಕಾರವಾಗಿ ಕತ್ತರಿಸಿ ಚಕ್ರಗಳನ್ನು ಮಾಡುವನು.

ಈ ಪ್ರಕಾರ ಶಿಕ್ಷಕನು ಬಣ್ಣದ ಕಾಗದಗಳ ಪಟ್ಟಿಗಳನ್ನು ಹಾಗು ಚಕ್ರಗಳನ್ನು ತಯಾರಿಸಿ ಅಣಿ ಮಾಡಿಕೊಳ್ಳುವನು.
ನಮಗೆ ಮತ್ತೆ ಯಾವ ಸಾಮಾನು ಬೇಕು ? ಎರಡು ಪಟ್ಟಿಗಳನ್ನು ಜೋಡಿಸಲು ಏನು ಬೇಕು ?

ಹಾಗಾದರೆ ಈಗ ನಾನು ಒಂದು ಧ್ವಜವನ್ನು ಮಾಡಿ ತೋರಿಸುತ್ತೇನೆ. ಹೇಗೆ ಮಾಡಬೇಕೆಂಬುದನ್ನು ನೋಡಿರಿ.
ಮೊದಲು ಎಷ್ಟು ಬಣ್ಣದ ಪಟ್ಟಿಗಳನ್ನು ತಕ್ಕೊಳ್ಳಬೇಕು ?

ಅವುಗಳಿಗೆ ಯಾವ ಭಾಗದಲ್ಲಿ ಅಂಟನ್ನು ಹಚ್ಚಬೇಕು ? ಎರಡು ಬದಿಗೆ ಅಂಟು ಹಚ್ಚುವ ಭಾಗವು ಸಮನಾಗಿ ಬರುವಂತೆ ಏತರಿಂದ ಗುರುತಿಸಬೇಕು ? ಎಷ್ಟು ಇಂಚಿನವರೆಗೆ ಗುರುತಿಸಬೇಕು ? ಅಂಟನ್ನು ಹೇಗೆ ಹಚ್ಚಬೇಕು ? ಎಷ್ಟು ಬೆರಳಿನಿಂದ, ಯಾವ ಕಡೆಯಿಂದ, ಯಾವ ಬದಿಗೆ ಸಾಗಬೇಕು ?

ಅಂಚು ಮೂಲೆಗಳು ಹೊಂದಿಕೆಯಾಗುವಂತೆ ಹೇಗೆ ಅಂಟಿಸಬೇಕು ?

ಮೂರನೆಯನ್ನು ಯಾವ ಬದಿಗೆ ಹಚ್ಚಬೇಕು ?
ಆ ಮೇಲೆ ಏನನ್ನು ಹಚ್ಚಬೇಕು ? ಚಕ್ರವನ್ನು ಎಲ್ಲಿ ಅಂಟಿಸಬೇಕು ?

ಈ ರೀತಿಯಾಗಿ ಕ್ರಮವನ್ನು ಹೊರಡಿಸುವದಕ್ಕಾಗಿ ಶಿಕ್ಷಕನು ಮಾದರಿಗಾಗಿ ಧ್ವಜನನ್ನು ತಯಾರಿಸಿ ತೋರಿಸುವನು.

ಇಷ್ಟು ಧ್ವಜವನ್ನು ತಯಾರಿಸಲು ಎಷ್ಟು ವೇಳೆ ಬೇಕಾಗುವದು ?

ಹಾಗಾದರೆ ನಿಮಗೆ ಈಗ ಯಾವ ಸಾಮಾನುಗಳು ಬೇಕು ?

ಒಂದೊಂದು ಬಣ್ಣದ ಪಟ್ಟಿಗಳು ಎಷ್ಟು ಬೇಕು ? ಅವುಗಳನ್ನು ಯಾರು ಹಂಚುವಿರಿ ?

ಚಕ್ರಗಳು ಎಷ್ಟು ಬೇಕು ? ಅವುಗಳನ್ನು ಯಾರು ಹಂಚುವಿರಿ ?

ಅಂಟು ಹಚ್ಚಲು ಕೆಳಗೆ ಇಡಲು ಏನು ಬೇಕು ? ಎಷ್ಟು? ಯಾರು ಹಂಚುವಿರಿ ?

ನಿಮ್ಮ ಪಟ್ಟಿಗಳ ಉದ್ದಗಲಗಳು ಎಷ್ಟಿವೆ ? ಮಡಿಚಿದರೆ ಅಂಚುಗಳು ಹಾಗು ಕೋನಗಳು ಹೇಗೆ ಹೊಂದುತ್ತವೆ ? ಗಲದಲ್ಲಿ ಎರಡೂ ಬದಿಗೆ ಅಂಟು ಹಚ್ಚುವ ಭಾಗವನ್ನು ಎಷ್ಟು ಗುರುತಿಸುವಿರಿ ?

ಈ ರೀತಿ ಎಲ್ಲ ವಿದ್ಯಾರ್ಥಿಗಳು ಕೆಲಸಕ್ಕೆ ಅಣಿಯಾದ ನಂತರ ಕ್ರಮವಾಗಿ, ಶಿಸ್ತು ಅಚ್ಚುಕಟ್ಟುತನದಿಂದ ಕೆಲಸವು ಆಗುವಂತೆ, ನೆನಪಿಡತಕ್ಕ ಸಂಗತಿಗಳನ್ನು ಆಗಿಂದಾಗ ಹೇಳುತ್ತ, ಶಿಕ್ಷಕನು ಎಲ್ಲ ಬಾಲಕರಿಂದ ಧ್ವಜಗಳನ್ನು ಮಾಡಿಸುವನು.

(೪) ಪರಿಶೀಲನೆ:

(೧) ಯೋಜನೆಗೂ ಆದ ಕಾರ್ಯಕ್ಕೂ ತುಲನೆ. ಆದ ವ್ಯಾತ್ಯಾಸಗಳು ಹಾಗು ಅವುಗಳ ಕಾರಣಗಳು.

(೨) ಅನಿರೀಕ್ಷಿತವಾಗಿ ಉದ್ಭವಿಸಿದ ಸಂಗತಿಗಳು.

(೩) ಕಾರ್ಮಿಕ ತಪ್ಪುಗಳು.

(ಪ್ರತ್ಯಕ್ಷ ಕಾರ್ಯವು ಸಾಗಿದಾಗ ಈ ಸಂಗತಿಗಳನ್ನು ಬಾಲಕರ ಕೃತಿಯಲ್ಲಿ ಶಿಕ್ಷಕನು ಅವಲೋಕಿಸಿ, ಕ್ರಮವಾಗಿ ಅವುಗಳನ್ನು ಮಹತ್ವಕ್ಕನುಸರಿಸಿ ಬಾಲಕರೆದುರು ಚರ್ಚಿಸುವದು) ವ್ಯಾತ್ಯಾಸ: ಉದಾ: ಪಟ್ಟಿಗಳನ್ನು ಸೊಟ್ಟಾಗಿ ಹಚ್ಚುವದು. ಉದಾ: ಅಂಟು ಹಚ್ಚುವಾಗ ಕಾಗದವು ಹರಿಯುವದು.

ಉದಾ: ಅಂಟು ಹಚ್ಚುವ ಪದ್ಧತಿಯಲ್ಲಿಯ ದೋಷಗಳು. ನಮ್ಮ ರಾಷ್ಟ್ರಧ್ವಜದಲ್ಲಿ ಮೂರು ವಿಶಿಷ್ಟ ಬಣ್ಣಗಳನ್ನು ನಿರ್ದಿಷ್ಟಕ್ರಮದಲ್ಲಿ ತಕ್ಕೊಂಡಿದ್ದಾರೆ. ಕೇಸರಿ ಬಣ್ಣವು ದುರಾಶೆ, ದ್ವೇಷಗಳನ್ನು ಬಿಟ್ಟು ಪ್ರೀತಿ ವಿಶ್ವಾಸಗಳಿಂದ ಇರಬೇಕೆಂದು ಹೇಳುತ್ತದೆ. ಬಿಳಿದು ಸತ್ಯವನ್ನು ನುಡಿಯಬೇಕೆಂದೂ, ಹಸರು ಶಾಂತಿ, ಅಹಿಂಸೆಗಳನ್ನು ಪಾಲಿಸಬೇಕೆಂದೂ ಹೇಳುತ್ತವೆ. ಚಕ್ರವು ಸಮ್ರಾಟ್ ಅಶೋಕನ ನೆನಪನ್ನು ತಂದು ಕೊಡುತ್ತದೆ. ಆದರಿಂದ ನಮಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಮಹಾತ್ಮಾ ಗಾಂಧಿಯವರ ಚರಖಾ ಕೂಡ ನಮ್ಮ ಕಣ್ಣೆದುರು ಕಟ್ಟುತ್ತದೆ.

ರಾಷ್ಟ್ರಧ್ವಜದ ಬಗ್ಗೆ ೧೦ ವಾಕ್ಯಗಳನ್ನು ಬರೆಯುವದು.

(ಈ ಕೆಳಗಿನವು ನಾಲ್ಕನೆಯ ಖಾನೆಯಲ್ಲಿ ಇರಬೇಕಾದ ವಿಷಯಗಳು.)

ನಮ್ಮ ರಾಷ್ಟ್ರಧ್ವಜದಲ್ಲಿ ಎಷ್ಟು ಬಣ್ಣಗಳಿವೆ? ಅವುಗಳ ಕ್ರಮವು ಹೇಗಿರುತ್ತದೆ? ಇವೇ ಬಣ್ಣಗಳನ್ನು ಏಕೆ ತಕ್ಕೊಂಡಿದ್ದಾರೆ?

ಕೇಸರಿ ಬಣ್ಣವು ಏನನ್ನು ಹೇಳುತ್ತದೆ? ಬಿಳಿ ಬಣ್ಣವು ಏನನ್ನು ಹೇಳುತ್ತದೆ?

ಹಸರು ಬಣ್ಣವು ಏನು ಹೇಳುತ್ತದೆ?

ನಡುವೆ ಚಕ್ರವು ಏಕೆ ಇರುವದು?

(೫) ರೂಢಿಪಾಠ:—

"ನಮ್ಮ ರಾಷ್ಟ್ರಧ್ವಜ" ಇದರ ಬಗ್ಗೆ ೧೦ ವಾಕ್ಯಗಳನ್ನು ಬರೆಯಿರಿ.

ಚಟುವಟಿಕೆಯು ಮುಗಿದ ನಂತರ ಅದರಲ್ಲಿ ನೈಸರ್ಗಿಕವಾಗಿ ಉದ್ಭವಿಸುವ ವಿಷಯಜ್ಞಾನದ ಬಗ್ಗೆ

ಶಿಕ್ಷಕನ ಟಿಪ್ಪಣಿ

ಮೆಟ್ಟುಗಳು	ಮೂಲೋದ್ಯೋಗ	ಕೈಕೆಲಸ	ಡ್ರಾಯಿಂಗ	ಗಣಿತ	ಇತಿಹಾಸ	ಭೂಗೋಲ	ಸಾಮಾನ್ಯ ವಿಜ್ಞಾನ
(೧) ಯೋಜನೆ:—		ಡಿಜೈನುಗಳ ಬೆಳವಣಿಗೆ:	—	1/2, 1/4, 1/8, 1/16, 1/4, 3/8, 5/8 ಭಾಗಗಳನ್ನು ಮಾಡುವದು ಹಾಗು ಅವುಗಳ ಕಲ್ಪನೆ:	ಸ್ವಾತಂತ್ರ್ಯ ಸಂಗ್ರಾಮ. ರಾಷ್ಟ್ರಧ್ವಜದ ಕಲ್ಪನೆ:	—	
(೨) ಸಾಧನಗಳ ಸಂಗ್ರಹ:—	—	ಬಣ್ಣಗಳನ್ನು ವಿಮರ್ಶಿಸಿ ಮೆಚ್ಚುವದರಲ್ಲಿ ತರಬೇತಿ.	—	ಕಾಟಕೋನ ಚೌಕೋನ ವರ್ತುಳ ಆಕಾರಗಳ ಕಲ್ಪನೆ:	—	—	
(೩) ಕಾರ್ಯಾರಂಭ:—	—	ಕಾಗದದ ಕೆಲಸದಲ್ಲಿ ಅಚ್ಚುಕಟ್ಟುತನ, ಶಿಸ್ತು.	—	ಉದ್ದಗಲಗಳನ್ನು ಅಳೆಯುವದು.	—	—	
(೪) ಪರಿಶೀಲನೆ:—	—	—	—	ಭಾಷಾ ವಿಷಯ	ಬಣ್ಣಗಳು ಸೂಚಿಸುವ ಮಹತ್ವ	—	
(೫) ರೂಢಿ ಪಾಠ:—	—	—	—	ರಾಷ್ಟ್ರಧ್ವಜದ ಬಗ್ಗೆ ೧೦ ವಾಕ್ಯಗಳನ್ನು ಬರೆಯುವದು.	—	—	

ಲಾವಣಿ

ಧ್ಯಾಸಿಟ್ಟು ಕೇಳಿರಿ ಮಹ ಸಭೆ ಜನರು ' ಹೊಸದಾಗಿ ಸ್ಥಾಪಿಸಿ ಹಿಂದುಸ್ಥಾನ
ಕಾಶ್ಮೀರ ಮೈಸೂರು ನೂರೆಂಟು ಸಂಸ್ಥಾನ ' ಪಂಗಡ ಹುಟ್ಯಾವು ಪಾಕಿಸ್ತಾನ ॥ ೧

ದೇಶದ ತುಂಬೆಲ್ಲ ಎಷ್ಟೆ ಭೇದಗಳಿದ್ರೂ ' ಎಣಿಕೆಗೆರಡೆ ಹಿಂದು ಮುಸಲ್ಮೀನ '
ಸೋಸಿ ನೋಡದೆ ಹಮ್ಮಿಗೆ ಬಿದ್ದು ನಮ್ಮ । ಮಹತ್ಮರಿಗೆ ಕೊಂದರು ಬೇಮಾನ ॥ ೨

ಶಾಂತಮೂರ್ತಿಯೊಂದು ಸ್ವರ್ಗಕ್ಕೆ ಹೋದೀತು। ಹುಡುಗರಿಗೆ ಬಂದೀತು ಹಿರೇತನ।
ಮಾತಾಪಿತರಾರೆಂಬುವದರಿಯದೆ । ಬಡದಾಟ ಹೂಡ್ಯಾವ್ರಿ ಸಂಸ್ಥಾನ ॥ ೩

ಸದ್ಯಕ್ಕೆ ನಮ್ಮ ಬುದ್ಧಿವಂತ ಸರ್ಕಾರ । ವೃದ್ಧ ನೆಹರು ನಡಿಸ್ಯಾರ ಶಾಂತೀನಾ ।
ಬುದ್ಧಿವಂತರಿಗೆಲ್ಲ ತಿದ್ದುತ ತೋರಿಸ್ಯಾರು । ಹಿಡಿಯಿರಿ ಎಲ್ಲರು ಒಂದೆ ಲೈನ ॥ ೪

ಹೇಳ್ಕಿಯ ಮಾತು ಕೇಳಿ ನಿಜಾಮಸಾಹೇಬ್ರು । ಬಿಡಲಿಲ್ರಿ ತಮ್ಮ ಅಡಮುಟ್ಟತನ ।
" ಆಳ್ಕಿನೊಳಗೆ ನಾನಿರುವನಲ್ರಿ । ಸ್ವಂತ ಕೊಡಬೇಕು ನನಗೆ ಹಿರೇತನ " ॥ ೫

ಒಳ್ಳೆ ಮಾತಿನಿಂದ ವರ್ಷಗಟ್ಲೆ ಹೇಳಿದ್ರು । ಕೇಳದೆ ಸಾಧಿಸಿದ ಹಟವನಾ ।
ಒಳ್ಳೆ ಜನರಿಗೆ ಸಿಟ್ಟು ಬರಬಾರದು ಬಂದರೆ ಉಳಿಯೋದಿಲ್ರಿ ನಮ್ಮ ಅಭಿಮಾನ॥ ೬

ಉಗ್ರ ಕೋಪ ತಾಳಿ ಗರ್ಜಿಸಿ ಹೊಕ್ಕಾನು । ಸಿಂಹನಂದದಿ ಗರ್ಜನಾ ।
ಬಗ್ಗಿಬಂದನಾಗ ಕೇಳದೆ ಹೋದಾವು । ಹೇಳಿದ ಜನರ ಎಷ್ಟೊ ಹೆಣ ॥ ೭

ಸೊಕ್ಕಿದ ರಜವಿಯ ಚಪ್ಪರಿಸಿ ಹಿಡಿದರು । ದಿಕ್ಕಿಲ್ಲದೆ ಓಡಿತು ರಕ್ಕಸಗಣ ।
ಮಿಕ್ಕಿದ ನಿಜಾಮರು ತಪ್ಪಿಗೆ ಒಪ್ಪಿಕೊಂಡ್ರು । ಒಕ್ಕಟ್ಟೆ ಆದಿತು ಹಿಂದುಸ್ಥಾನ ॥ ೮

ಸದ್ಯಕ್ಕೆ ಶಾಂತಿಯ ಸ್ಥಾಪಿಸಿದಂಥ । ತಂದೆ ನೆಹರೂಗೆ ನಮ್ಮ ವಂದನ ।
ಮುದ್ದಾಮ ದೇವರಿಗೆ ಬೇಡುವೆ ಇವರಿಗೆ । ಕೊಡುಬೇಗ ಸಾರ್ವಭೌಮತನ ॥ ೯

ಭಾರತಮಾತೆಯ ಮಕ್ಕಳು ನಾವು । ಭಿನ್ನ ಭೇದ ಎಣಿಸಬಾರದಣ್ಣ ।
ಗರ್ಬಿಲಿ ನಾ ಹೆಚ್ಚು ನೀ ಹೆಚ್ಚು ಅನ್ನುವರಿಗೆ। ಬಿಡುವದು ಹುಚ್ಚು ತಿಳಿರಿನ್ನು ॥ ೧೦

ಧರೆಯೊಳು ಕೋಡದ ಶಾಲೆಯ ಕನ್ನಡ । ಗಂಡುಮಕ್ಕಳು ಮಾಡಿದ ಕವನ ।
ಅಂತವರು ಅರಿಯಲಿ ಮರೆತವರು ನೆನೆಯಲಿ। ಶ್ರೀಮಾರುತಿ ದೇವರಅಂತಃಕರಣ॥೧೧

ಕಳುಹಿದವರು:— ಕೃ. ಹ. ನಾಯಿಕ
ಹೆ. ಮಾ. ಕ. ಗಂ. ಶಾ. ಕೋಡ.

ಬಡವರ ಬೆಣ್ಣೆ

ಶ್ರೀ. ಎಲ್. ಬಿ. ದೇಸಾಯಿ.

ಯುದ್ಧ ಸಂಧಿ ಹೋದರೂ ಆಹಾರ ಪದಾರ್ಥದ ರತೆ ನೀಗಿಲ್ಲ. ಇಂಥ ದಿನಗಳಲ್ಲಿ ದೇಹವನ್ನು ಆರೋಗ್ಯ ಯಲ್ಲಿಡುವದು ಒಂದು ಸಮಸ್ಯೆಯೇ ಆಗಿದೆ. ಇಷ್ಟೇ , ಉದರ ನಿರ್ವಹಣ ಸಾಗಿಸುವದು ಕಠಿಣವಾಗಿದೆ. ಮನುಷ್ಯನ ಆಹಾರವು ಪ್ರೋಟೆನ್ಸ ಫ್ಯಾಟ್ಸ (ಸ್ನಿಗ್ಧಪದಾರ್ಥ) ರೆ, ಖನಿಜವಸ್ತು, ಆಹಾರ ಸತ್ವಗಳು ಇವುಗಳಿಂದ ಡಿರಬೇಕೆಂಬುದು ಸಹಜ. ಇವಾದರೂ ಕೆಲವೊಂದು ತ ಪ್ರಮಾಣದಲ್ಲಿದ್ದರೇನೇ ಮನುಷ್ಯನು ನಿರೋಗಿ ಾಗಿರಬಲ್ಲನು.

ಆದರೆ ಆಹಾರದ ಕೊರತೆಯ ಮೂಲಕ ನಮ್ಮೀ ಆಹಾ ನಿಶ್ಚಿತ ಪ್ರಮಾಣದಿಂದ ಕೂಡಿಲ್ಲ. ಸಿಕ್ಕಷ್ಟು ಸರಿ ಾಗಿ ವೇಳೆಗೆ ದೊರಕುತ್ತಿಲ್ಲ. ಹೀಗಾದುದರಿಂದ ಇಂದು ತ್ತಿನಲ್ಲಿ ಪಿಡುಗು-ರೋಗಗಳು ಹಬ್ಬತೊಡಗಿವೆ. ಈ ಪಿಡುಗು ರೋಗಗಳಿಂದ ಎಷ್ಟೋ ಜನರು ಸತ್ತದ್ದುಂಟು. ಕಾರದವರು " ಹೆಚ್ಚಿಗೆ ಆಹಾರ ಬೆಳೆಯಿರಿ '' ಎಂಬ ದೋಲನವನ್ನು ಕೈಕೊಂಡಿದ್ದಾರೆ. ಪರದೇಶದಿಂದಲೂ ಾರ ಬರುತ್ತದೆ. ಆದರೂ ಪರಿಸ್ಥಿತಿ ಅಷ್ಟೊಂದು ಹಿಡಿತ ಲ್ಲಿಲ್ಲ. ಜನರು ಕಂಗೆಟ್ಟಿದ್ದಾರೆ. ಅನೇಕ ಜನರು ಪರಿ ತಿಗೆ ಹೊಂದಿಕೊಂಡಿದ್ದಾರೆ. ಶ್ರೀಮಂತರಿಗೆ ಇಂಥ ಳಿಯನ್ನೂ ತಾಕಿಲ್ಲ. ಅವರು ತಮ್ಮ ಐಷಾರಾಮದಲ್ಲಿಯೇ ದ್ದಾರೆ.

ಪರಿಸ್ಥಿತಿ ಹೀಗಿದ್ದರೂ ವಿಜ್ಞಾನಿಗಳು ಕಂಗೆಟ್ಟಿಲ್ಲ. ಅವರ ಂತರ ಶೋಧ ನಡೆದಿದೆ. ದಿನೇದಿನೇ ಶೋಧ ಮುನ್ನ ಗುತ್ತಿದೆ. ಆಹಾರದಲ್ಲಿರಬೇಕಾದ ಅವಶ್ಯಕ ವಸ್ತುಗಳನ್ನು ಂದಿಲ್ಲೊಂದು ರೀತಿಯಿಂದ ದೊರಕುವ ಹಾಗೆ ಪ್ರಯತ್ನ ಾಡಿದ್ದಾರೆ. ಇನ್ನೂ ಪ್ರಯತ್ನಮಾಡುತ್ತಿದ್ದಾರೆ. ಹಾಲಿನ ಕೊರತೆಯನ್ನು ಹೋಗಲಾಡಿಸಲು ಸೋಯಾಬೀನಿನಿಂದ ಾಲನ್ನು ತಯಾರಿಸಿದ ಉದಾಹರಣೆಯೇ ಇದಕ್ಕೆ ಸಾಕ್ಷಿ.

ಅದರಂತೆಯೇ ಬೆಣ್ಣೆಯ ಕೊರತೆ ನಮ್ಮ ಆಹಾರದಲ್ಲಿ ನೇದಿನೇ ಹೆಚ್ಚಾಗತೊಡಗಿದೆ. ಕೊರತೆ ಹೆಚ್ಚಾದಂತೆ ಬೆಲೆಗಳು ಏರತೊಡಗಿವೆ. ಕೆಲವು ಪಟ್ಟಣಗಳಲ್ಲಿ ಬೆಣ್ಣೆಯ ವಾಸನೆಯನ್ನು ನೋಡದಂಥ ಜನರೂ ಅನೇಕರಿದ್ದಾರೆ. ಇದನ್ನು ಹೋಗಲಾಡಿಸಲು ಬಡವರ ಬೆಣ್ಣೆ ಅಥವಾ "ಅಹಿ ಕೆಡೂ" ಫಲವೇ ಸಾಕ್ಷಿ.

ಆವ್ಹಾಕೆಡೂ ಫಲವೃಕ್ಷವು ನಮ್ಮ ದೇಶದ್ದಲ್ಲ. ನಮ್ಮ ದೇಶದಲ್ಲಿ ಸಿಲೋನದಿಂದ ತಂದು ಹೊಸದಾಗಿ ಬೆಳೆಯಲು ಪ್ರಾರಂಭಿಸಿದ್ದಾರೆ. ಈ ವೃಕ್ಷವು ೮-೧೦ ಫೂಟು ಎತ್ತರ ಬೆಳೆಯುತ್ತದೆ. ಹಚ್ಚಿದ ಮೂರನೆಯ ವರ್ಷಕ್ಕೆ ಫಲ ಕೊಡುತ್ತದೆ. ಇದರ ಎಲೆಗಳು ಸ್ವಲ್ಪ ಸಂಪಿಗೆಯ ಗಿಡದ ಎಲೆಗಳನ್ನು ಹೋಲುತ್ತವೆ. ಈ ವೃಕ್ಷದ ಫಲವನ್ನು ಹೆಚ್ಚಿ ದರೆ ಮೇಲಿನ ತೊಗಟೆಯು ಒಳಗಿನ ಪಿಂಡದಿಂದ ಬೇರೆ ಯಾಗುತ್ತದೆ. ಪಿಂಡದ ಮಧ್ಯದಲ್ಲಿ ನಾಶೀಪುಡೀ ಬಣ್ಣದ ದುಂಡಾದ ಬೀಜವಿರುತ್ತದೆ. ಬೀಜವು ಸಾಧಾರಣವಾಗಿ ಒಂದು ಲಿಂಬೇ ಹಣ್ಣನ್ನು ಆಕಾರದಲ್ಲಿ ಹೋಲುತ್ತದೆ. ಈ ವೃಕ್ಷವನ್ನು ಪುಣೆಯ ಗಣೇಶಖಿಂಡಿ ವನಸ್ಪತಿ (Ganeshkhindi Botanical Garden Poona) ತೋಟದಲ್ಲಿ ನೋಡಬಹುದು. ಅಲ್ಲಿಯಾದರೂ ಇದು ಇನ್ನು ಪ್ರಯೋಗಾವಸ್ಥೆಯಲ್ಲಿ ಇರುತ್ತದೆ. ಇದರ ಹಣ್ಣಿನ ರುಚಿಯು ಸಪ್ಪಗಿದ್ದು ಸ್ವಲ್ಪ ಕಿರುಕಹಿ ಇರುತ್ತದೆ. ಈ ಫಲದೊಳಗಿನ ಕೊಬ್ಬನ್ನು ರೊಟ್ಟಿಗೆ (Pread) ಸವರಿ ಸಿಲೋನಿನಲ್ಲಿಯ ಜನ ತಿನ್ನುತ್ತಾರೆ. ಈ ಹಣ್ಣಿನಲ್ಲಿ ೧೮ ರಿಂದ ೨೦ ! ಸ್ನಿಗ್ಧ ಪದಾರ್ಥ (ಫ್ಯಾಟ್ಸ). ಇರುತ್ತದೆ. ಇದನ್ನು ಬೆಣ್ಣೆಯ ಬದಲು ಉಪಯೋಗಮಾಡಬಹುದು.

ಹೀಗೆ ಮಾಡಿದರೆ ನಮ್ಮ ಆಹಾರದ ಕೊರತೆಯು ಸ್ವಲ್ಪ ಮಟ್ಟಿಗಾದರೂ ನೀಗಿ, ನಾವು ನೆಮ್ಮದಿಯಾಗಿ ಬಾಳಲು ಸಮರ್ಥರಾಗುತ್ತೇವೆ. ನಮ್ಮ ಸುತ್ತಲೂ ಸೌಕರ್ಯ ಬೇಕಾದಷ್ಟಿವೆ. ಅದನ್ನು ಉಪಯೋಗಿಸಲು ತಕ್ಕ ಬುದ್ಧಿ, ಜಾಣ್ಮೆ ಬೇಕು.

ಇಂಗ್ಲೆಂಡಿನ ಪಾಠಶಾಲೆಗಳಲ್ಲಿ ಆತ್ಮಶಾಸನದ ಶಿಕ್ಷಣವು

ಲೇಖಕ:— ಶ್ರೀ. ಲಜ್ಜಾಶಂಕರ ಝಾ. ಅನುವಾದಕ:— ಶ್ರೀ. ವೆಂಕಟೇಶ ಪಾಗಾ ಶಿಕ್ಷಕ, ಪ್ರಾ. ಸ್ಕೂ. ಧಾರವಾಡ

ಇಂಗ್ಲೆಂಡಿನಲ್ಲಿ ಎರಡು ಬಗೆಯ ಪಾಠಶಾಲೆಗಳಿವೆ. (೧) ಸಾರ್ವಜನಿಕ ಶಾಲೆಗಳು. (೨) ಸಾಮಾನ್ಯ ಶಾಲೆಗಳು. ಸಾರ್ವಜನಿಕ ಶಾಲೆಗಳು ದೇಶದ ಮುಂದಾಳುಗಳನ್ನು ತಯಾರು ಮಾಡುತ್ತವೆ. ಈ ಶಾಲೆಯಲ್ಲಿ ಕಲಿಯುವ ಪ್ರತಿಯೊಬ್ಬ ಬಾಲಕನೂ ಬೋರ್ಡಿಂಗಿನಲ್ಲಿ ಇರಬೇಕಾಗುವದು. ಸಾಮಾನ್ಯ ಶಾಲೆಗಳಲ್ಲಿ ಜನತೆಯ ಮಕ್ಕಳಿಗೆ ಶಿಕ್ಷಣವು ಕೊಡಲ್ಪಡುತ್ತದೆ. ಆತ್ಮ ಶಾಸನ ಶಿಕ್ಷಣವು ಎರಡೂ ಬಗೆಯ ಪಾಠಶಾಲೆಗಳಲ್ಲಿಯೂ ಕೊಡಲ್ಪಡುತ್ತದೆ. ಆದರೆ ಸಾರ್ವಜನಿಕ ಪಾಠಶಾಲೆಗಳ ಅಭ್ಯಾಸ ಕ್ರಮದ ಅವಲೋಕನದಲ್ಲಿ ವಿಶೇಷ್ಯಲಾಭವಿದೆ. ಹೀಗೆಂದ ಮಾತ್ರಕ್ಕೆ ಅಲ್ಲಿಯ ಪದ್ಧತಿಯನ್ನು ಪೂರ್ಣವಾಗಿ ಅನುಕರಿಸಬೇಕೆಂದಲ್ಲ. ಅಥವಾ ದೇಶಕಾಲಗಳ ವಿಚಾರವನ್ನು ಮಾಡಕೂಡದೆಂದೂ ಅಲ್ಲ. ಹಿಂದುಸ್ಥಾನದ ಬಾಲಕರಿಗೆ ಉಪಯುಕ್ತವಾದ ಅಲ್ಲಿನ ಪದ್ಧತಿಯನ್ನು ಅನುಕರಿಸುವದರಲ್ಲಿ ಯಾವ ದೋಷವೂ ಇಲ್ಲ.

ಸಾರ್ವಜನಿಕ ಶಾಲೆಯ ಎಲ್ಲ ಮಕ್ಕಳೂ ಹಾಸ್ಟೆಲಿನಲ್ಲಿ ಇರುತ್ತಾರೆಂದು ಹೇಳಿದೆನಲ್ಲವೇ? ಅದರಂತೆ ಶಿಕ್ಷಕರೂ ಸಹ ಕುಟುಂಬ ಸಮೇತರಾಗಿ ಹಾಸ್ಟೆಲಿನಲ್ಲಿಯೇ ಇರುತ್ತಾರೆ. ಅಲ್ಲಿ ಎಲ್ಲರ ಊಟ ಉಡಿಗೆ ಆಟಪಾಟಗಳು ನಿಯಮಿತ ವೇಳೆಗೆ ಏಕ ಕಾಲಕ್ಕೆ ಆಗುತ್ತವೆ. ಸಮಯಕ್ಕೆ ಸರಿಯಾಗಿ ಬಾರದವನು ಉಳಿದು ಬಿಡುತ್ತಾನೆ. ಅವನ ಮೇಲೆ ಯಾರೂ ಮಮತೆಯನ್ನು ತೋರಿಸುವದಿಲ್ಲ. ಚಹದ ವೇಳೆಗೆ ಹಾಸಿಗೆಯಲ್ಲಿರುವ ಬಾಲಕನ ಚಹ ಹೋಗಿಬಿಡುತ್ತದೆ. ಅವನಿಗಾಗಿ ಯಾರೂ ಕಾಯುವದಿಲ್ಲ. ಆಡುಗೆಯವನಿಗೇನೋ ದಯೆ ಬಂದರೆ ಅವನಿಗೆ ಒಂದು ಲೋಟ ಚಹ ಸಿಗಬಹುದು. ಆದರೆ ವೇಳೆಗೆ ಸರಿಯಾಗಿ ಚಹಕ್ಕೆ ಬಾರದ ಬಾಲಕನಿಗೆ ಬಾಲ ಸಮಾಜದಲ್ಲಿ ಆದರ ದೊರೆಯುವದಿಲ್ಲ. ಆದುದರಿಂದ ಪ್ರತಿಯೊಬ್ಬ ಬಾಲಕನೂ ವೇಳೆಯ ಬಗೆಗೆ ವಿಶೇಷ ಲಕ್ಷ್ಯ ಕೊಡಬೇಕಾಗುತ್ತದೆ. ಒಂದೇ ಒಂದು ನಿಮಿಷ ತಡವಾದ ಬಾಲಕನು ಕೂಡ ಕ್ಷಮೆ ಕೇಳಿಕೊಂಡು ಅನುಮತಿ ಪಡೆದ ನಂತರವೇ ಒಳಗೆ ಬರಬೇಕಾಗುತ್ತದೆ. ಊಟದ ಗಂಟೆಯಾದ ೫ ನಿಮಿಷಗಳಲ್ಲಿಯೇ ಎಲ್ಲರೂ ಬಂದು ಬಿಡುತ್ತಾರೆ. ಊಟದ ಮನೆಯ ಬಾಗಿಲು ಮುಚ್ಚಿಕೊಳ್ಳುತ್ತದೆ. ಹೊರಗಿನವರು ಹೊರಗೇ, ಒಳಗಿನವರು ಒಳಗೇ. ಆದುದರಿಂದ ಗಂಟೆಯಾಗುತ್ತಲೇ ಎಲ್ಲ ಕೋಣೆಗಳಿಂದಲೂ ಬಾಲಕರು ಲಗುಬಗೆಯಿಂದ ಓಡಿಬರುತ್ತಿರುವ ನೋಟವು ಕಾಣುತ್ತದೆ. ಸಾವಕಾಶವಾಗಿ ಬರುವದಾಗಲೀ ತಡಮಾಡುವದಾಗಲೀ ಅಪರೂಪ.

ಶಾಲೆಯ ಪ್ರತಿಯೊಂದು ಕೆಲಸದ ಸಲುವಾಗಿ ಒಬ್ಬೊಬ್ಬ ಬಾಲ ಅಧಿಕಾರಿಯು ನಿಯಮಿಸಲ್ಪಟ್ಟಿರುತ್ತಾನೆ ಹಾಗೂ ಪ್ರತಿಯೊಬ್ಬ ಬಾಲಕನಿಗೂ ಶಿಕ್ಷಕರ ಅಪ್ಪಣೆಯನ್ನು ಪಾಲಿಸುವಂತೆ ಇವನ ಅಪ್ಪಣೆಯನ್ನು ಪಾಲಿಸುವ ಶಿಕ್ಷಣವು ಕೊಡಲ್ಪಡುತ್ತದೆ. ಏಕೆಂದರೆ ಅವನು ಬಾಲ ಸಮಾಜದಿಂದಲೆ ಆರಿಸಲ್ಪಟ್ಟಿರುತ್ತಾನೆ. ಹಾಗೂ ಬಾಲಕರ ಹಿತಕ್ಕಾಗಿಯೆ ಹೆಣಗಾಡುತ್ತಾನೆ. ವಿಲಾಯತಿಯಲ್ಲಿ ಕೆಲದಿನ ಕೆಲಸ ಮಾಡುತ್ತಲಿದ್ದ ಒಬ್ಬ ಭಾರತೀಯ ಶಿಕ್ಷಕರು ನನಗೊಮ್ಮೆ ಹೀಗೆ ಹೇಳಿದ್ದರು. "ಒಂದು ದಿನ ನಾನು ಒಂದೆರಡು ನಿಮಿಷ ಹೊರಗೆ ಹೋಗಿದ್ದೆ. ಇದೇ ವೇಳೆಗೆ ಶಾಲೆಯ ಮುಖ್ಯಾಧ್ಯಾಪಕರು ಸಂಚರಿಸುತ್ತ ಅಲ್ಲಿಗೆ ಬಂದರು. ನೋಡುತ್ತಾರೆ. ಒಬ್ಬ ಚಿಕ್ಕ ಬಾಲಕನು ಕೋಣೆಯನ್ನು ಕಾಯುತ್ತಲಿದ್ದಾನೆ. ಪ್ರತಿಯೊಬ್ಬ ಬಾಲಕನು ತನ್ನ ಕೆಲಸದ ತೊಡಗಿದ್ದಾನೆ" ಮುಖ್ಯಾಧ್ಯಾಪಕರು "ನಿನಗೆ ಕೋಣೆಯನ್ನು ಕಾಯಲಿಕ್ಕೆ ಯಾರು ಹೇಳಿದ್ದಾರೆ"ಂದು ಕೇಳಿದರು. ಆ ಬಾಲಕನು ಗುರುಗಳೇನೋ ನನಗೇನೂ ಹೇಳಿ ಹೋಗಲಿಲ್ಲ. ಆದರೆ ವರ್ಗದ ಎಲ್ಲ ಬಾಲಕರೂ ಕೂಡಿ ನನ್ನ

ಹೊಣೆಗಾರಿಕೆಯನ್ನು ವಹಿಸಿಕೊಟ್ಟಿದ್ದಾರೆ. ಇಂಗ್ಲಂಡಿನ ಬಾಲಕರು ಮೇಲೆ ಅಂಕುಶವಿದ್ದಾಗ ಮಾತ್ರ ಕೆಲಸ ಮಾಡುತ್ತಾರೆಂದು ಭಾರತೀಯ ಶಿಕ್ಷಕರು ಅಭಿಪ್ರಾಯವಾಗಬಾರದೆಂದು ನನಗೆ ಈ ಹೊಣೆಗಾರಿಕೆಯು ಕೊಡಲ್ಪಟ್ಟಿದೆ. ಗುರುಗಳು ಇದ್ದಾಗ ಗೊಂಡಲ ಮಾಡುವದಕ್ಕಿಂತಲೂ ಶಿಷ್ಟನ ಅಪರಾಧವು ಅವರಿಲ್ಲದಾಗ ಮಾಡುವದು" ಎಂದು ಹೇಳಿದನು. ಇಷ್ಟರಲ್ಲಿಯೇ ವರ್ಗದ ಶಿಕ್ಷಕರು ತಿರುಗಿ ಬಂದರು. ಬಾಲಕರ ಆತ್ಮಗೌರವವನ್ನು ನೋಡಿ ಅವರು ತುಂಬಾ ಪ್ರಸನ್ನರಾದರು. ಆ ವರ್ಗದ ಬಾಲಕರು ೧೦-೧೧ ವರುಷಕ್ಕಿಂತಲೂ ಹೆಚ್ಚು ದೊಡ್ಡವರಾಗಿರಲಿಲ್ಲ. ಇಂಗ್ಲಂಡದ ಪಾಠಶಾಲೆಗಳಲ್ಲಿ ಗಂಟೆ ಬಾರಿಸುವದು, ಕಾಗದ ಹಂಚುವದು, ಕಸಗೂಡಿಸುವದು, ಮುಂತಾದ ಸಣ್ಣ ಪುಟ್ಟ ಕೆಲಸಗಳನ್ನು ಬಾಲಕರು ತಾವೇ ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ಅಲ್ಲಿ ಶಾಲೆಯ ಸಲುವಾಗಿ ಹೆಚ್ಚಾಗಿ ನವಕರನ್ನಿಟ್ಟುಕೊಳ್ಳುವ ಆವಶ್ಯಕತೆಯೇ ಬೀಳುವದಿಲ್ಲ.

ಬೋರ್ಡಿಂಗಿನಲ್ಲಿ ಪ್ರತಿಯೊಬ್ಬ ಬಾಲಕನು ತನ್ನ ಬೂಟುಗಳನ್ನು ತಾನೇ ಸ್ವಚ್ಛ ಮಾಡಿಕೊಳ್ಳಬೇಕಾಗುವದು. ತನಗಾಗಿ ತಾನೇ ನೀರು ತರಬೇಕು, ತನ್ನ ಹಾಸಿಗೆಯನು ತಾನೇ ಹಾಸಿಕೊಳ್ಳಬೇಕು, ತಾನೇ ಸುತ್ತಿ ಇಡಬೇಕು, ಅರಸು ಮನೆತನದ ಹಾಗೂ ಲಾರ್ಡ್ಸ ಮನೆತನದ ಮಕ್ಕಳು ಕೂಡ ತಮ್ಮ ಯಾವತ್ತು ಕೆಲಸವನ್ನು ತಾವೇ ಮಾಡಿಕೊಳ್ಳಬೇಕಾಗುವದು, ಸ್ವಂತದ ಸೇವಕರನ್ನೂ ಅವರು ಇಟ್ಟಿರುವರು, ಕೆಲ ಬಾಲ ಅಧಿಕಾರಿಗಳಿಗಾಗಿ ಕೆಲ ಹಕ್ಕುಗಳು ಕಾಯ್ದಿಡಲ್ಪಟ್ಟಿರುತ್ತವೆ, ಆ ಅಧಿಕಾರಿಗಳಿಗಾಗಿ ಬೇರೆ ಬಾಲಕರು ಹೊರಗಿನಿಂದ ಬಿಸಿನೀರು ಮುಂತಾದುವನ್ನು ತಂದು ಕೊಡುವಂತೆ ಅವರ ಪಾದರಕ್ಷೆಗಳನ್ನು 'ಪಾಲಿಶ್' ಮಾಡಿಕೊಡುತ್ತಾರೆ. ಈ ರೂಢಿಗೆ 'ಬಿಟ್ಟಿ' ಅನ್ನುತ್ತಾರೆ. ಇಂಥ ಸಿರಿವಂತ ಬಾಲಕನೂ ಕೂಡ ಈ "ಬಿಟ್ಟಿ"ಯನ್ನು ಮಾಡಲೇ ಬೇಕಾಗುತ್ತದೆ. ಇಂಗ್ಲಂಡದ ರಾಜ ಕುಮಾರನು ವಿದ್ಯಾರ್ಥಿಯಾಗಿ "ಈಟನ್"ದ ಪಾಠಶಾಲೆಗೆ ಹೋದಾಗ ಬಿಟ್ಟಿಯನ್ನು ಮಾಡಬೇಕಾಯಿತು ಹಾಗೂ ರಾಜಕುಮಾರನು ಬಿಟ್ಟಿಯನ್ನು ಆತ್ಮ ಸಂತೋಷದಿಂದ ಮಾಡಿದನೆಂದು ಹೇಳುವದಂತಿ ಇದೆ.

ಒಂದು ಬಗೆಯ ಸಂಘಟನೆಯು ಜನತೆಯಲ್ಲಿದ್ದಂತೆ ಬಾಲಸಮಾಜದಲ್ಲಿಯೂ ಇದೆ. ಸದಾಚಾರಿಗಳನ್ನು ಹೊಗಳುವದೂ, ದುರಾಚಾರಿಗಳನ್ನು ತೆಗಳುವದೂ ಜನತೆಯಲ್ಲಿ ನಡೆಯುತ್ತಿರುವಂತೆ ಬಾಲ ಸಮಾಜದಲ್ಲಿಯೂ ನಡೆಯುತ್ತಿದೆ. ಅಲ್ಲಿ ಪ್ರತಿಯೊಬ್ಬ ಬಾಲಕನ ನಿರೀಕ್ಷಣೆ ಇರುತ್ತದೆ. ಅಯೋಗ್ಯ ಅಥವಾ ನೀಚ ಕೆಲಸ ಮಾಡಿದ ಬಾಲಕನಿಗೆ ಶಿಕ್ಷಕರು ಏನೂ ಅನ್ನುವದಿಲ್ಲ. ಬಾಲಗಣವು ತನ್ನನ್ನು ತಾನೇ ಅರಿತುಕೊಳ್ಳುತ್ತದೆ. ಶಿಕ್ಷಕರೆದುರು ಸುಳ್ಳು ನೆವ ಹೇಳಿ ಯಾವನಾದರೂ ಬಾಲಕನು ರಜೆ ತೆಗೆದುಕೊಂಡರೆ ವರ್ಗದಲ್ಲಿ ಅವನಿಗೆ ಯಾರೂ ಏನೂ ಅನ್ನುವದಿಲ್ಲ. ಆದರೆ ಬೋರ್ಡಿಂಗಿಗೆ ಬಂದೊಡನೆಯೇ ಅವನ ಗೆಳೆಯರು ಅವನನ್ನು ಸರಿಪಡಿಸಿ ಬಿಡುತ್ತಾರೆ. ಯಾರು ಸುಳ್ಳು ಹೇಳಿ ಹೋದರೆಂಬುದು ಶಿಕ್ಷಕರಿಗೆ ಗೊತ್ತು ಕೂಡ ಆಗುವದಿಲ್ಲ. ಆದರೆ ಬಾಲಸಮಾಜದಲ್ಲಿ ಮಾತ್ರ ಅವನ ಬಗೆಗೆ ಒಳಸಂಚು ಆರಂಭವಾಗುತ್ತದೆ- ಬಾಲಕರು ಉಚ್ಚ ಧ್ಯೇಯದತ್ತ ಸಾಗಲು ತಮ್ಮ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುತ್ತಿರುವದರ ಕಡೆಗೆ ಮಾತ್ರ ಶಿಕ್ಷಕರ ಲಕ್ಷ್ಯವಿರುತ್ತದೆ.

ತನ್ನ ಯಾವದೇ ಬಾಲಕನು ಅಪಕ್ವ ಮನಸಿನವನಾಗಲೀ ಅಂಜುಬುರುಕನಾಗಲೀ ಆಗದಂತೆ ಬಾಲಸಮಾಜವು ಲಕ್ಷ್ಯ ಕೊಡುತ್ತದೆ. ಶಾಲೆಗೆ ಹೊಸದಾಗಿ ಬಂದ ಪ್ರತಿಯೊಬ್ಬ ಬಾಲಕನೂ ಈ ವಿಷಯದಲ್ಲಿ ಪರೀಕ್ಷಿಸಲ್ಪಡುತ್ತಾನೆ. ಹೊಸದಾಗಿ ಶಾಲೆಗೆ ಬಂದ ಮಗುವನ್ನು ಒಂದು ಕಂಬಳಿಯಲ್ಲಿ ಹಾಕಿ ಅದರ ನಾಲ್ಕು ಮೂಲೆಗಳನ್ನು ನಾಲ್ಕು ದೊಡ್ಡ ಹುಡುಗರು ಹಿಡಿದು ತೂಗುತ್ತಾರೆ. ಮೇಲೆ ಛಪ್ಪರಕ್ಕೆ ತಾಗಿಸುವಂತೆ ತೋರುತ್ತಾರೆ. ಆಗ ಬಾಲಕನು ಅರಚಿ ಕೊಳ್ಳದೆ ಇದ್ದರೆ, ಇಲ್ಲವೆ "ಕೈಮುಗಿತೇನಿ ಬಿಡೋ ಯಪ್ಪಾ" ಎನ್ನದಿದ್ದರೆ ಆ ಪರೀಕ್ಷೆಯಲ್ಲಿ ಅವನು ಉತ್ತೀರ್ಣನಾದಂತೆ. ಇದರ ನಂತರ ಅಗ್ನಿ ಪರೀಕ್ಷೆಯಾಗುವದು. ಎಂದರೆ ಮಗುವನ್ನು ಉರಿಯ ಝಳಕ್ಕೆ ಹಿಡಿದು ಪರೀಕ್ಷಿಸುವರು. ಉರಿಗೆ ಬೇಕಾದಷ್ಟು ಹತ್ತಿರ ಹಿಡಿದರೂ ಬೇಕಾದಷ್ಟು ಕಿಡಿಗಳು ಮೈಗೆ ತಾಗಿದರೂ ಮಗುವು ಅರಚಿಕೊಳ್ಳಕೂಡದು. ಅಂದರೆ ಅವನು ಅಗ್ನಿ ಪರೀಕ್ಷೆಯಲ್ಲಿ ಪಾಸಾದಂತೆ. ಇನ್ನೊಮ್ಮೆ ಜಲ ಪರೀಕ್ಷೆಮಾಡುವರು. ಚಳಿಗಾಲದ ಮುಂಜಾವಿನ ಮಂಜಿನಲ್ಲಿ ಥಣ್ಣಗೆ ಜುಣುಗುಡುವ ನೀರಿನ ಹೌದಿನಲ್ಲಿ ಆ ಹೊಸ ಬಾಲಕನನ್ನು ಮುಳುಮುಳುಗಿಸಿ ಎಬ್ಬಿಸುವರು. ಇಂಥ ಪರೀಕ್ಷೆಯಲ್ಲಿ ಉತ್ತೀರ್ಣನಾದ ಬಾಲಕನನ್ನು ಬಾಲಸಮಾಜವು ಗೌರವಿಸುತ್ತದೆ. ಅವನಿಗೆ ತುಂಬಾ ಮನ್ನಣೆ. ಏಕೆಂದರೆ

ಅವನು ಗಂಡುಸಿದ್ದಾನೆ. ಪುಕ್ಕನಲ್ಲ, ಹೇಡಿಯಲ್ಲ. ಆದರೆ ಈ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಬಾಲಕನಿಗೆ ಬಾಲ ಸಮಾಜದಲ್ಲಿ ಸ್ಥಾನವಿಲ್ಲ. ಅವನನ್ನು ಬೇರೆ ಇಡುತ್ತಾರೆ. ಅಂದರೆ ಅವನಿಗೆ ಬಹಿಷ್ಕಾರ ಹಾಕುತ್ತಾರೆ. ಅವನೊಡನೆ ಯಾರೂ ಮಾತಾಡುವದಿಲ್ಲ. ಯಾವ ವ್ಯವಹಾರವನ್ನು ಮಾಡುವದಿಲ್ಲ. ಪ್ರತಿಯೊಂದು ವಿಷಯದಲ್ಲೂ ಅವನೊಡನೆ ಅಸಹಕಾರ, ತಿರಸ್ಕಾರ. ಇದೇ ಕಾರಣದಿಂದಲೇ ಆಂಗ್ಲ ಬಾಲಕನು ಎಂಥ ಆಪತ್ಕಾಲದಲ್ಲಿಯೂ ಅನ್ಯರೆದುರು ಕಣ್ಣೀರು ಸುರಿಸುವದಿಲ್ಲ. ಈ ರೀತಿಯಲ್ಲಿ ಬಾಲಸಮಾಜವು ಪ್ರತಿಯೊಬ್ಬ ಮಗುವಿಗೆ ನಿರ್ಭಯವೃತ್ತಿಯನಾಗುವ ಹಾಗೂ ವೀರನಾಗುವ ದೀಕ್ಷೆಯನ್ನು ಕೊಡುತ್ತದೆ. ಈ ಬಗೆಯ ದೃಶ್ಯಗಳ ವರ್ಣನೆಯನ್ನು ಕೇಳಿ ತಾವು ಗಾಬರಿ ಯಾಗಬಹುದು. ಇದು ಮಹಾ ಕ್ರೂರತೆ ಎಂದೂ ಅನ್ನ ಬಹುದು. ಅಲ್ಲದೆ ಈ ಶಿಕ್ಷಕರು ಮಾಡುವದಾದರೂ ಏನು"? ಎಂದು ಕೇಳಬಹುದು. ಆದರೆ ಶಿಕ್ಷಕರು ನಡಮೆ ಏನೂ ಮಾತಾಡುವದಿಲ್ಲ. ಏಕೆಂದರೆ ಇಂದಿನ ಬಾಲಕ ರನ್ನು ನಾಳಿನ ವೀರ ನಾಗರಿಕರನ್ನಾಗಿ ಮಾಡುವದೇ ಅವರ ಉಚ್ಚ ಧ್ಯೇಯವಾಗಿದೆ. ನಮ್ಮ ಭಾರತದಲ್ಲಿ ಹಿಂದೊಮ್ಮೆ ಇದೇ ಬಗೆಯ ಶಿಕ್ಷಣವು ಕ್ಷತ್ರಿಯರಿಗೆ ಕೊಡಲ್ಪಡುತ್ತಿತ್ತು. ಆದುದರಿಂದಲೇ ಅವರು ಶೌರ್ಯದ ಹಾಗೂ ಪರಾಕ್ರಮದ ಆದರ್ಶವನ್ನು ತೋರಿ ಹೆಸರುವಾಸಿಯಾಗಿ ಹೋಗಿದ್ದಾರೆ. ಆದರೆ ಇಂದಿನ ಸಮಯದಲ್ಲಿ ಕ್ಷತ್ರಿಯರಷ್ಟೇ ಅಲ್ಲ. ಪ್ರತಿಯೊಬ್ಬರೂ ಶೂರರಾಗಬೇಕಾಗಿದೆ. ವೀರರಾಗಬೇಕಾ ಗಿದೆ. ಧೀರರಾಗಬೇಕಾಗಿದೆ. ಪರಾಕ್ರಮಿಗಳಾಗಬೇಕಾಗಿದೆ. ಬಾಲಕರನ್ನು ಹಾಲೂ ಸಕ್ಕರೆಯಲ್ಲಿ ಕೈ ತೊಳೆಯಿಸಿ ಮೆತ್ತ ಗಿನ ತೊಟ್ಟಿಲಲ್ಲಿ ತೂಗುವ ದಿನಗಳಿವಲ್ಲ.

ಇಂಗ್ಲಂಡದ ಬಾಲಕರಿಗೆ ತಮ್ಮ ಜಗಳವನ್ನು ತಮ್ಮ ಲ್ಲಿಯೇ ಬಗೆಹರಿಸಿಕೊಳ್ಳುವ ಶಿಕ್ಷಣವು ಕೊಡಲ್ಪಡುತ್ತದೆ. ಶಿಕ್ಷಕರೆದುರು ಹೋಗಿ ಅಳುವದರಿಂದ ಏನೂ ಲಾಭವಿಲ್ಲ. ನಿನ್ನನ್ನು ಹೊಡೆದವನಿಗೆ ಬಡ್ಡಿಸಹಿತ ಅವನ ಹೊಡೆತದ ಸಾಲವನ್ನು ತಕ್ಷಣ ತೀರಿಸು, ಸೇರಿಗೆ ಸವ್ವಾಸೇರು ಆಗು. ಅಳುತ್ತ ಬರಬೇಡ. ಎಂದು ಸಂಗಡಿಗರು ಹೇಳಿಕೊಡು ತ್ತಾರೆ. ಹೊಡೆತ ತಿಂದು ಓಡಿಬಂದ ಬಾಲಕನ ಸ್ಥಿತಿಯು ಬಾಲ ಸಮಾಜದಲ್ಲಿ ಇನ್ನೂ ಹೀನವಾಗುತ್ತದೆ. ಅವರು "ಹೋಗು ಇನ್ನೂ ಹೋರಾಡು, ಮತ್ತೆ ಹೊಡೆತ ಬಿದ್ದರೆ ಮತ್ತೆ ಹೋರಾಡು. ಒಂದಕ್ಕೆರಡು ಹೇರು. ಅಂಜಬೇಡ" ಎಂದು ಅವನನ್ನು ಮೇಲಿಂದ ಮೇಲೆ ಹುರಿದುಂಬಿಸು ತ್ತಾರೆ. ಇದೇ ಕಾರಣದಿಂದಲೇ ಪ್ರತಿಯೊಬ್ಬ ಆಂಗ್ಲ ಬಾಲಕನೂ ವಿಪಕ್ಷಿಯೊಡನೆ ಮುಷ್ಟಿಯುದ್ಧ ಮಾಡಲು ಸದಾ ಯತ್ನಿಸುತ್ತಿರುವನು.

ಆಂಗ್ಲ ಬಾಲಕರಲ್ಲಿ ಸಂಘ ಬುದ್ಧಿ ಪ್ರಬಲವಾಗಿದೆ. ಒಬ್ಬ ಚಿಕ್ಕ ಇಲ್ಲವೆ ಅಶಕ್ತ ಬಾಲಕನ ಮೇಲೆ ಯಾವನಾದರೂ ದೊಡ್ಡ ಇಲ್ಲವೆ ಸಶಕ್ತ ಹುಡುಗನು ಏರಿ ಹೋದರೆ ಮತ್ತೊ ಬ್ಬ ದೊಡ್ಡ ಹುಡುಗನು ತಕ್ಷಣ ಅವನನ್ನು ರಕ್ಷಿಸಲು ತನ್ನ ಜೀವದ ಹಂಗು ದೊರೆದು ಯತ್ನಿಸುವನು. ಆದರೆ ಸಮ ಶಕ್ತಿಯ ಬಾಲಕರಲ್ಲಿ ಜಗಳವುಂಟಾದರೆ ಪ್ರತಿಯೊಬ್ಬನೂ ಸ್ವಾವಲಂಬಿಯಾಗಬೇಕಾಗುವದು. ಮುಷ್ಟಿಯುದ್ಧವು ಶುರು ಆದರೆ ಸಾಕು. ಉಳಿದೆಲ್ಲ ಬಾಲಕರು ದುಂಡಗೆ ಅವರನ್ನು ಸುತ್ತುಗಟ್ಟಿ ನಿಲ್ಲುವರು. ಯಾರೂ ಅವರನ್ನು ಬಿಡಿಸಲಿಕ್ಕೆ ಹೋಗುವದಿಲ್ಲ. ಅವರನ್ನು ತುಂಬಾ ಕಾದಾಡ ಲಿಕ್ಕೆ ಬಿಡುವರು. ಸೋಲುವಂತೆ ಕಂಡವನಿಗೆ ಹುರುಪು ಕೊಡುವರು. ಆದರೆ ಯಾರ ರಕ್ಷಣೆಯನ್ನು ಯಾರೂ ಮಾಡುವದಿಲ್ಲ. ಆದರೆ ಯುದ್ಧವು ನಿಯಮಬದ್ಧವಾಗಿ ನಡೆದಿದೆಯೋ ಇಲ್ಲವೊ ಎಂಬುದನ್ನು ಮಾತ್ರ ಎಲ್ಲರೂ ನಿರೀಕ್ಷಿಸುತ್ತಿರುವರು. ಯುದ್ಧ ಮುಗಿದೊಡನೆ ಗಾಯ ಗಳಿಗೆ ಪ್ರಥಮ ಚಿಕಿತ್ಸೆಮಾಡುವರು. ಹಾಗೂ ಹಸ್ತಾಂದೋ ಲನ ಮಾಡಿ ಶತ್ರುತ್ವವನ್ನು ಮರೆತು ಮಿತ್ರರಾಗಲು ಅವರಿಗೆ ಆಗ್ರಹ ಮಾಡುವರು. ಹಸ್ತಾಂದೋಲನದೊಡನೆ ಶತ್ರುತ್ವವು ಕೊನೆಗೊಂಡು ಮಿತ್ರತ್ವವು ಮೊದಲಾಗುವದು. ಅಲ್ಲಿಯೆ ಜಗಳ ಮುಗಿಯಿತು. ಇಷ್ಟೆಲ್ಲ, ಸಂಭವಿಸಿದರೂ ಕೂಡ ಈ ವಿಷಯವಾಗಿ ಒಂದು ಶಬ್ದವನ್ನಾದರೂ ಶಿಕ್ಷಕರ ಕಿವಿ ಮುಟ್ಟಿಸುವ ಧೈರ್ಯವು ಒಬ್ಬ ಬಾಲಕನಿಗೂ ಇರುವದಿಲ್ಲ.

ನಿಯಮ ಬದ್ಧ ಯುದ್ಧದ ತಾತ್ಪರ್ಯವಿಷ್ಟೇ. ಒಬ್ಬನ ಮುಷ್ಟಿಯಿಂದ ಯುದ್ಧ ಮಾಡುತ್ತಿರುವಾಗ ವಿಪಕ್ಷಿಯ ಲಾಠಿಯನ್ನಾಗಲೀ ಚೂರಿಯನ್ನಾಗಲೀ ಉಪಯೋಗಿಸ ಕೂಡದು. ಕೇವಲ ಮುಷ್ಟಿಯಿಂದಲೇ ಯುದ್ಧಮಾಡ ಬೇಕು. ಒಬ್ಬ ವ್ಯಕ್ತಿಯು ಬಿದ್ದಾಗ ಅವನ ಮೇಲೆ ಆಕ್ರಮಣ ಮಾಡಕೂಡದು. ಆಕ್ರಮಣ ಮಾಡಿದರೆ ಅದು ಅನ್ಯಾಯವಾಗುತ್ತದೆ. ಅಧರ್ಮವೆಂದು ತಿಳಿಯಲ್ಪಡುತ್ತದೆ. ಇಷ್ಟೇ ಅಲ್ಲ, ಹೀಗೆ ಮಾಡಿದವನ ಮೇಲೆ ನಾಲ್ಕು ಕಡೆ ಗಳಿಂದ ಹೊಡೆತಗಳು ಬೀಳಲಾರಂಭಿಸುತ್ತವೆ. ಅವನಿಗೆ ಅಲ್ಲಿ ನಿಲ್ಲುವದೇ ಕಠಿಣವಾಗುತ್ತದೆ.

ಲಂಡನ್ನಿನ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಮಾಡುತ್ತಿದ್ದ ಒಬ್ಬ ಭಾರತೀಯ ವಿದ್ಯಾರ್ಥಿಯು ನನಗೊಮ್ಮೆ ಹೀಗೆ ಹೇಳಿದ್ದ ಚಳಿಗಾಲದಲ್ಲಿ ಲಂಡನದಲ್ಲಿ ಬರ್ಫ ಬೀಳುವ ವಿಷಯವಂತೂ ನಿಮಗೆ ತಿಳಿದೇ ಇದೆ. ಆ ವರುಷವಂತೂ ಭಾರಿ ಬರ್ಫ ಬೀಳುತ್ತಿತ್ತು. ಕೆಲ ಸ್ವೇಚ್ಛಾಚಾರಿ ವಿಧ್ಯಾರ್ಥಿಗಳು ಒಂದು ಮುಂಜಾವು ಮಾಳಿಗೆಯನ್ನೇರಿ ಬರ್ಫವನ್ನು ಒಟ್ಟು ಗೂಡಿಸಿ ಹೊಗೆಗಿಂಡಿಯಿಂದ ಒಳಗಡೆಗೆ ಎಸೆಯಲಾರಂಭಿಸಿದರು. ಕಾಲೇಜಿನ ಕೋಣೆಗಳಲ್ಲಿ ಬರ್ಫದ ರಾಶಿ ಬಿದ್ದಿತು. ಬೆಚ್ಚಗಿಡುವದರ ಸಲುವಾಗಿ ಇಟ್ಟ ಬೆಂಕಿಯೆಲ್ಲವೂ ಆರಿಹೋಯಿತು. ಕೆಲಸ ಮಾಡುವದು ಕಠಿಣವಾಯಿತು. ಪ್ರೊಫೇಸ್ಟನು "ಮಾಳಿಗೆಯನ್ನೇರಿ ತುಂಟತನ ಮಾಡಿದವರು ಹೆಸರು ಕೊಡಬೇಕೆ"ಂದು ನೋಟೀಸು ತೆಗೆದರು. ಆಯಿತು. ಶೋಧನೆಯ ಕಾರ್ಯ ನಡೆಯಲೇ ಇಲ್ಲ. ಏಕೆಂದರೆ ಯಾರೂ ಅನ್ಯರ ಹೆಸರು ಸೂಚಿಸುವದಿಲ್ಲ ವೆಂಬುದು ಅವರಿಗೆ ಗೊತ್ತು. ನೋಟೀಸು ಮುಟ್ಟುವದೊಂದೇ ತಡ ಮಾಳಿಗಿಯನ್ನೇರಿದವರು ಹಾಗು ತುಂಟತನ ಮಾಡಿದವರು ತಮ್ಮಷ್ಟಕ್ಕೆ ತಾವೇ ಲಗುಬಗೆಯಿಂದ ಪ್ರೊಫೇಸ್ಟನ ಕೋಣೆಗೆ ಹೋದರು. ತಮ್ಮ ಹೆಸರು ಬರೆಯಿಸಿದರು. "ಇದೇನು"? ಎಂದು ನಾನವರನ್ನು ಕೇಳಿದೆ. ಅವರು "ತುಂಟತನ ಮಾಡಬೇಕೆನ್ನಿಸಿದಾಗ ತುಂಟತನ ಮಾಡಿದೆವು. ಈಗ ಶಿಕ್ಷೆ ಅನುಭವಿಸುವ ಸರತಿ ಬಂದರೆ ಮುಖವನ್ನೇಕೆ ಮುಚ್ಚಿಕೊಳ್ಳಬೇಕು"? ಎಂದು ನನ್ನನ್ನೇ ಕೇಳಿದರು.

ಅಂಗ್ಲ ಬಾಲಕರಿಗೆ ದೊರೆಯುವ ದೀಕ್ಷೆಯ ಬಗೆಗೆ ಇದೇ ಸದ್ಗೃಹಸ್ಥರು ಇನ್ನೊಂದು ಕತೆಯನ್ನು ಹೇಳುತ್ತಿದ್ದರು. ಇಬ್ಬರು ಬಾಲಕರು ಯಾವದೋ ಒಂದು ಕಾರಣದ ದೆಶೆಯಿಂದ ಜಗಳಾಡಿದರು. ಇಬ್ಬರೂ ಒಬ್ಬರ ಮೇಲೊಬ್ಬರು ಮಶಿಕುಡಿಕೆಗಳನ್ನೆಸೆದರು. ಪೇಪರವೇಟುಗಳನ್ನೊಗೆದರು. ಕುರ್ಚಿಗಳನ್ನು ಎತ್ತಿ ಒಗೆದರು. ಆದರೆ ಜಗಳ ಮುಗಿದ ಮೇಲೆ ಇಬ್ಬರೂ ಹಸ್ತಾಂದೋಲನ ಮಾಡಿ ಮಿತ್ರರಾದರು. ಗಾಯಗಳ ಬಂಧನದ ನಂತರ ಇಬ್ಬರೂ ಕೂಡ ಪ್ರೊಫೇಸ್ಟರ ಹತ್ತಿರ ಹೋಗಿ "ಸ್ವಾಮಿ ನಾವು ಜಗಳಾಡಿದ್ದೇವೆ. ನಮ್ಮ ಕಾರಣದಿಂದ ಎಷ್ಟೋ ದೌತಿಗಳು ಒಡೆದಿವೆ. ಮಶಿ ಚಲ್ಲಿ ಗೋಡೆ ನೆಲ ಹೊಲಸಾಗಿವೆ. ಅಲ್ಲದೆ ಎಷ್ಟೋ ಕುರ್ಚಿಗಳೂ ಸಹ ಮುರಿದು ಹೋಗಿವೆ ಆದುದರಿಂದ ಕಾಲೇಜಿಗೆ ನಮ್ಮಿಂದಾದ ಹಾನಿಯನ್ನು ನಮಗೆ ತಿಳಿಸಿರಿ. ನಾವು ತುಂಬಿಕೊಡುತ್ತೇವೆ. ಪ್ರೊಫೇಸ್ಟರಿಂದ ಯಾದಿ ಬಂದೊಡನೆಯೇ ಹಣ ತುಂಬಿಬಿಟ್ಟರು. ಆದರೆ ಅವರಿಬ್ಬರಲ್ಲಿಯೂ ಯಾರು ಯಾವದನ್ನು ಮುರಿದರು. ಯಾರು ಎಷ್ಟು ಹಣಕೊಡಬೇಕು? ಅಥವಾ ಯಾರು ಮೂಲ ತಪ್ಪುಗಾರರು ಎಂಬ ಬಗೆಗೆ ಕೂಡ ಜಗಳಾಡಲಿಲ್ಲ. ಎಲ್ಲ ಪ್ರಶ್ನೆಯನ್ನು ತಮ್ಮತಮ್ಮಲ್ಲಿಯೇ ಬಗೆಹರಿಸಿಕೊಂಡರು.

ಇಂಗ್ಲೀಷಿನಲ್ಲಿ "ಡಿಸಿಪ್ಲಿನ್" ಎಂದು ಶಬ್ದವಿದೆ. ಇದರ ಪೂರ್ಣ ಅರ್ಥವನ್ನು ಕೊಡುವ ಶಬ್ದವು ಹಿಂದಿಯಲಿಲ್ಲ. ಎಷ್ಟೋ ಜನರು ಈ ಶಬ್ದಕ್ಕೆ ಪ್ರತಿಯಾಗಿ "ವಿನಯ" ಈ ಶಬ್ದವನ್ನು ಉಪಯೋಗಿಸುತ್ತಾರೆ. ಆದರೆ ಈ ಶಬ್ದದ ಅರ್ಥವು ಪೂರ್ಣ ತಿಳಿಯಬೇಕಾದರೆ ಇಂಗ್ಲಂಡಿನ ಶಾಲೆಗಳನ್ನು ನೋಡಬೇಕು. "ಡಿಸಿಪ್ಲಿನ್" ಸಂಯೋಗಾತ್ಮಕ ಬುದ್ಧಿ ಇರುತ್ತದೆ. ವಿಶೇಷವಾಗಿ ಇದನ್ನು ಆಂಗ್ಲ ಸೇನೆಯಲ್ಲಿ ನೋಡಬಹುದು. ಅಪ್ಪಣೆಯಾದೊಡನೆ ಸಾವಿರಾರು ಆಂಗ್ಲ ಸೈನಿಕರು ಒಂದೇ ಕ್ಷಣದಲ್ಲಿ ಒಂದೆ ಹೆಜ್ಜೆಯವರಾಗಿ ಏಕಚಿತ್ತರಾಗಿ ಆಜ್ಞಾಪಾಲನೆಗೆ ಸಿದ್ಧರಾಗುತ್ತಾರೆ. ಒಬ್ಬರೂ ಮಿಸುಕಾಡುವದಿಲ್ಲ ಕುಂಟನೆವ ಹೇಳುವದಿಲ್ಲ. ಮಾತುಕತೆಯಾಡುವದಿಲ್ಲ. ಪಿಟ್ಟೆನ್ನದೆ ಏಕಚಿತ್ತರಾಗಿ ಅಪ್ಪಣೆಯನ್ನು ಪಾಲಿಸುತ್ತಾರೆ. ಯುದ್ಧದ ಪಿಡಿತ ಹೊಡೆತಗಳು ನೋಡ ನೋಡುವಷ್ಟರಲ್ಲಿ ಅಚ್ಚುಕಟ್ಟಾಗಿ ನಿರ್ವಿಘ್ನವಾಗಿ ನೆರವೇರಿಬಿಡುತ್ತವೆ. ಒಂದು ಕ್ಷಣವು ಕೂಡ ವ್ಯರ್ಥವಾಗಿ ಹೋಗುವದಿಲ್ಲ. ಒಬ್ಬ ಮನುಷ್ಯನು ಕೂಡ ಸೈಲಾ ಬೈಲಾ ನಡೆಯುವದಿಲ್ಲ. ಮನುಷ್ಯನ ಮಾತೇನು? ಪಶುಗಳು ಕೂಡ ನಿಯಮ ಬದ್ಧವಾಗಿ ನಡೆಯುತ್ತವೆ ಸಿಪಾಯರು, ಕ್ಯಾಂಪಫಾಲೋಅರರು ಹಾಗು ನೌಕರ ಚಾಕರರು ಪರೇಡ ಮೇಲೆ ಹೊರಟಾಗಿನ ದೃಶ್ಯವು ನೋಡುವಂತಿರುತ್ತದೆ. ಒಂದೇ ಹೆಜ್ಜೆ, ಒಂದೇ ವೇಗ, ಸ್ವಚ್ಛವಾದ ಸೆಟೆದು ನಿಂತ ಪೋಷಾಕು. ಮುದುಡೆಯಾದ ಅಂಗಿ ಇಲ್ಲ; ಸಡಿಲಾದ ಗುಂಡಿ ಇಲ್ಲ. ಪ್ರತಿಯೊಬ್ಬನೂ ತನ್ನ ಕರ್ತವ್ಯಕ್ಕೆ ಸಿದ್ಧನಾಗಿರುವನು ಕಂಡು ಬರುತ್ತದೆ. ಎಂತಲೇ ಸಾವಿರಾರು ಸಿಪಾಯರು, ನೂರಾರು ಸವಾರರು ಜಂ ಗಟ್ಟಲೆ ತೋಪುಗಳು ಗಾಡಿಗಳು ಇತ್ತಿಂದಿತ್ತ ಅತ್ತಿಂದಿತ್ತ ಓಡಾಡಿದರೂ ದಾರಿಯಲ್ಲಿ ಯಾರಿಗೂ ಯಾವ ಬಗೆಯ ಆತಂಕವಾಗುವದಿಲ್ಲ. ಯಾವ ದುರ್ಘಟನೆಯೂ ಸಂಭವಿಸುವದಿಲ್ಲ. ಪರೇಡ ನೋಡುವದರಿಂದ ಡಿಸಿಪ್ಲಿನದ ಅರ್ಥವು ತುಸು ಮಟ್ಟಿಗೆ ಆಗುತ್ತದೆ. ಇದೇ ಕಾರಣದಿಂದಲೇ ಆಂಗ್ಲ ಸೇನೆಯು ತಾನು ಚಿಕ್ಕದಿದ್ದರೂ ಪ್ರಬಲ ಶತ್ರುಗಳನ್ನೆದುರಿಸಿ ಜಯಶಾಲಿಯಾಗಿದೆ.

ಸೈನ್ಯ ಶಿಕ್ಷಣವು ಇಂಗ್ಲೆಂಡಿನ ಪಾಠಶಾಲೆಗಳ ವೈಶಿಷ್ಟ್ಯವಾಗಿದೆ ಪ್ರತಿಯೊಂದು ಸಾರ್ವಜನಿಕ ಶಾಲೆಯಲ್ಲಿ ಒಂದು ಕ್ಯಾಡೆಟ್ ಕೋರ ಇರುತ್ತದೆ. ಇದರ ಮುಖಾಂತರವೇ ಶಾಲೆಯ ಎಲ್ಲ ಬಾಲಕರಿಗೆ ಸೈನ್ಯ ಶಿಕ್ಷಣವು ಕೊಡಲ್ಪಡುತ್ತದೆ. ಈ ಶಿಕ್ಷಣದ ಪ್ರಭಾವವಾಗಿ ಚಿಕ್ಕ ಚಿಕ್ಕ ಬಾಲಕದಲ್ಲಿ ಬಂದೂಕು, ಕತ್ತಿ, ಕಠಾರಿಗಳ ಬಗೆಗಿರುವ ಭಯವು ದೂರಾಗುತ್ತದೆ. ಇದಕ್ಕೂ ಹೆಚ್ಚಿನ ಲಾಭವೆಂದರೆ ಸೈನಿಕ ಶಿಕ್ಷಣದ ಪ್ರಭಾವವು ಬಾಲಕರ ಭಾವೀ ಜೀವನದ ಮೇಲೆ ಚನ್ನಾಗಿ ಬೀಳುತ್ತದೆ.

ಇದೇ ಕಾರಣವಾಗಿ ನಾಲ್ಕಾರು ವಿದ್ಯಾರ್ಥಿಗಳು ಅಡ್ಡಾಡಲಿಕ್ಕೆ ಹೊರಟರೂ ಒಂದೇ ವೇಷವಲ್ಲಿ ಹೋಗುವರು ಅವರು ತಾಲಬದ್ಧವಾಗಿ ಹೆಜ್ಜೆ ಹಾಕುತ್ತ ಒಂದೇ ಸಾಲಿನಲ್ಲಿ ಹೋಗುವರು. ಅವರ ಹೆಜ್ಜೆಗಳು ವೀರರ ಹೆಜ್ಜೆಗಳಂತೆ ಜೋರಿನಿಂದ ಬೀಳುವವು. ಜಗತ್ತಿನಲ್ಲಿ ತಮಗೆ ಯಾರ ಭಯವೂ ಇಲ್ಲವೋ ಏನೋ ಎಂಬಂತೆ ಎದೆ ಸೆಟೆಯಿಸಿ ತಲೆಯೆತ್ತಿ ಕೈ ಬೀಸುತ್ತಾ ನಡೆಯುವದು. ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಹೋಗುವದಾದರೆ ಕವಾಯಿತು ಮಾಡುತ್ತಿರುವಂತೆ ಹೋಗುವರು. ವರ್ಗದಲ್ಲಿ ಎದ್ದು ನಿಲ್ಲುವದಾದರೆ ಚಟ್ಟನೆ ಎದ್ದು ಸರಳವಾಗಿ ಸೆಟೆದು ನಿಲ್ಲುವರು. ತಮ್ಮ ಡೆಸ್ಕಿನ ಸಹಾಯದಿಂದ ಎದ್ದು ಅದರ ಮೇಲೆ ಎರಡೂ ಕೈಗಳನ್ನೂರಿ ಚತುಷ್ಪಾದಿಗಳಂತೆ ನಿಲ್ಲುವ ದೃಶ್ಯವು ಕಾಣುವದು ಅಪರೂಪ.

ಗಂಟೆಯಾಗುವ ವರೆಗೆ ಆಂಗ್ಲ ಬಾಲಕರು ಚಂಚಲರೂ ಉಪದ್ರವಿಗಳೂ ಆಗಿರುತ್ತಾರೆ. ಒಬ್ಬನು ಇನ್ನೊಬ್ಬನ ಕೂಡ ಹೊಡೆದಾಡುತ್ತಿದ್ದರೆ ಇನ್ನೊಬ್ಬನು ಮತ್ತೊಬ್ಬನಿಗೆ ಅಣಕಿಸುತ್ತಿರುತ್ತಾನೆ. ಬೇರೊಬ್ಬನು ಮತ್ತೊಬ್ಬನಿಗೆ ಟಾಚನಿ ಚುಚ್ಚಿ ಓಡಿಸುತ್ತಿದ್ದರೆ ಇನ್ನೊಬ್ಬನು ಬೇರೊಬ್ಬನ ಜೇಬಿನಲ್ಲಿ ಕಪ್ಪೆಯನ್ನು ಬಿಡುತ್ತಿರುತ್ತಾನೆ. ಬಹುಶಃ ಎಲ್ಲರೂ ಇದೇ ರೀತಿಯಾಗಿ ಒಂದಿಲ್ಲೊಂದು ಬಗೆಯ ಗೊಂದಲದಲ್ಲಿ ತೊಡಗಿರುತ್ತಿದ್ದರೆ, ಗಂಟೆಯಾಗುವ ಪೂರ್ವದಲ್ಲಿ ಇಂಗ್ಲೆಂಡಿನ ಶಾಲೆಯನ್ನು ನೋಡಿದರೆ ವಾಹನ ಸೇನೆಯ ಸಮ್ಮೇಲನವು ನಡೆದಿದೆಯೋ ಏನೋ ಎಂದು ಭಾಸವಾಗುತ್ತದೆ. ಆದರೆ ಅವರ ವೈಶಿಷ್ಟವೆಂದರೆ ಗಂಟೆಯಾಗುತ್ತಲೇ ಅವರಲ್ಲಿ ಬದಲಾವಣೆಯಾಗಿಬಿಡುತ್ತದೆ. ಗಂಟೆಯಾಗುತ್ತಲೇ ಅವರು ಒಂದು ಸಾಲು ಮಾಡಿ ಲಗುಬಗೆಯಿಂದ ತಮ್ಮ ತಮ್ಮ ಕೋಣೆಯನ್ನು ಶಿಸ್ತಿನಿಂದ ಪ್ರವೇಶಿಸುತ್ತಾರೆ. ಇದು ಸೈನಿಕ ಶಿಕ್ಷಣದ ಪ್ರಭಾವವಲ್ಲವೇ ?

ಭಾರತೀಯರು ಶಾಲೆಯಲ್ಲಿ ಓದು ಬರೆಹದ ಕಡೆಗೆ ವಿಶೇಷ ಲಕ್ಷ್ಯ ಕೊಡುವಂತೆ ಆಂಗ್ಲರು ಕೊಡುವದಿಲ್ಲ. ಅಲ್ಲಿ ಬಾಲಕನು ೧–೧॥ಗಂಟೆಗಿಂತಲೂ ಹೆಚ್ಚು ವೇಳೆ ಶಾಲೆಯ ಹೊರಗಡೆಗೇ ಕಳೆಯುವನು. ಅವರಲ್ಲಿ ಬಹಳಷ್ಟು ವೇಳೆಯು ಆಟಪಾಟ, ವ್ಯಾಯಾಮ ಮತ್ತು ಮನೋರಂಜನೆಯಲ್ಲಿಯೇ ಕಳೆಯುವದು. ಓದು, ಬರಹದಲ್ಲಿ ದಡ್ಡನಾಗುವದು ಕೆಡಕೆಂದು ಅವರು ತಿಳಿಯುವದೂ ಇಲ್ಲ. ಆದರೆ ಆಟ ವ್ಯಾಯಾಮಗಳಲ್ಲಿ ಹೆಸರು ಗಳಿಸಿದವನಿಗೆ ಬಹಳ ಮನ್ನಣೆ, ಗೌರವ. ಕಾರಣವಿಷ್ಟೇ ಅವರು "ಶಾರೀರಮಾದ್ಯಂ ಖಲು ಧರ್ಮ ಸಾಧನಂ" ಎಂಬುದನ್ನು ಬಲ್ಲವರು. ಶರೀರ ಸಂಪತ್ತಿನ ಸಂಚಯಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡುತ್ತಾರೆ. ಏಕೆಂದರೆ ಸೈನ್ಯಖಾತೆ. ಪೋಲೀಸ ಖಾತೆ, ಕಾರಖಾನೆ ಮುಂತಾದ ಅಧಿಕಾರ ನಡೆಯಿಸಬೇಕಾದ ಸ್ಥಳಗಳಲ್ಲಿ ಕೆಲಸ ಮಾಡುವದಾದರೆ ಅನ್ಯರ ಮೇಲೆ ತನ್ನ ಪ್ರಭಾವ ಕೆಡವಬೇಕಾಗುವದು. ಹಾಗು ಅನ್ಯರ ಮೇಲೆ ಪ್ರಭಾವ ಕೆಡುವಬೇಕಾದರೆ ಶರೀರವು ಚನ್ನಾಗಿರಬೇಕು. ಎಂಬುದನ್ನು ಅವರು ಬಲ್ಲರು. ಶರೀರವು ಗಟ್ಟಿ ಇದ್ದವನ ಮನಸ್ಸೂ ಗಟ್ಟಿ ಇರುತ್ತದೆ. ಎಂಥ ಆಪತ್ತಾಲದಲ್ಲಿಯೂ ಅವನು ಹೆದುವದಿಲ್ಲ. ಪಾರಾಗುವ ಹಂಚಿಕೆಯು ಕೊಡಲೇ ಹೊಳೆಯುತ್ತದೆ. ಇಂಥ ಸಮಯದಲ್ಲಿ ಪುಸ್ತಕ ಪಂಡಿತರು ನಿರುಪಯೋಗಿ ಆಗುವದು.

ಸಹಕಾರೀ ಆಟಗಳಿಂದ ಆತ್ಮಶಾಸನದ ಶಿಕ್ಷಣವೂ ದೊರೆಯುತ್ತದೆ. ಸಂಯೋಗಾತ್ಮಕ ಬುದ್ಧಿಯೂ ಹುಟ್ಟುತ್ತದೆ. ಸ್ವತಂತ್ರ ದೇಶಕ್ಕೆ ಈ ಎಲ್ಲ ಗುಣಗಳು ಲಾಭದಾಯಕವಾಗಿವೆ.

ಅಮರ ಬಾಪೂ

ಎಲ್ಲ ಜನ ಪೂಜಿತ ಶ್ರೀ ಗಾಂಧಿ ಮಹಾತ್ಮಾ ।
ನೀನಿಹೆ ಅಮರಾತ್ಮಾ ।
ಭಾರತೀಯ ಜೀವನಕೆ ವಿಕಸನವ ತಂದೆ ||ಪ||

ಸತ್ಯಧರ್ಮ ಅಂಹಿಂಸೆಗಳಿಂ
ಮಿಥ್ಯಪಾಶ ಹರಿಯುತಲಿ
ಸ್ಫೂರ್ತಿ ಇತ್ತಿಹ ಭಾರತ ಜನಕೆ
ಶಾಂತಿ ದೂತ ಮೂರುತಿಯೇ ||೧||

ಘೋರ ತಿಮಿರವು ಜಗವನು ಮುತ್ತಿ
ಭಾರವಾಗಿಹ ಬಾಳೊಳು ನಿನ್ನ
ಕೋರುತಿರುತಿಹ ಕಠಿಣ ಸಮಯದಿ
ವೀರ ಮರಣವನಾಲಿಂಗಿಸಿದೇ ||೩||

ರಾಜತಂತ್ರ ನಿಪುಣತೆ ಪೊಂದು
ರಾಜ ಮುಕುಟ ಭರತಕೆ ತಂದು
ವಿಜಯ ಭೇರಿ ಜಗದೊಳು ಹೊಡೆದ
ತೇಜ ಪುರುಷ ಮೋಹನ ದಾಸ ||೨||

ಜಯದ ನಲಿವು ನಿನಗಿರಲಾಯ್ತು
ವಿಧಿಗೆ ನ್ಯಾಯವಿಲ್ಲ ವಾಯ್ತು
ಜಗದ ಹೃದಯ ಶೂನ್ಯವಾಯ್ತು
ಜೊಟ್ಟಿ ಜಗವು ಬೇಡ ವಾಯ್ತು ||೪||

ಅಮರ ಬಾಪೂ ನಿನ್ನ ಆತ್ಮವು
ಭಾರತೀಯರ ಹೃದಯ ಪೇಳ್ವುವು
ನಿನ್ನ ಬಯಕೆಯ ರಾಮರಾಜ್ಯವ
ಭಾರತೀಯರು ನಾವ್ ಮಾಡುವೆವು ||೫||

ಡಿ. ಜಿ. ಭಟಕಳ.
ಗಂ. ಟ್ರೇ. ಕಾ. ಧಾರವಾಡ.

ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೆ ಪ್ರವೇಶ

ಪುಣೆಯಲ್ಲಿ ಸ್ಕಾಟಲಂಡ ಮಿಶನ್ ಚರ್ಚದ ಪರವಾಗಿ ನಡೆಯುವ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಕೇಳಿದ ಪ್ರಶ್ನೆಗಳಿಗೆ ಮುಂಬಯಿ ಇಲಾಖೆಯ ವಿದ್ಯಾಖಾತೆಯ ಮೆ॥ ಡಾಯರೆಕ್ಟರ ಸಾಹೇಬರ ೫—೫—೧೯೪೮ನೆಯ ದಿನ ಕೊಟ್ಟ ಉತ್ತರಗಳನ್ನು ಪ್ರಾಥಮಿಕ ಶಿಕ್ಷಕರು ಅರಿಯಬೇಕಾದುದು ಅವಶ್ಯವೆಂದು ಇಲ್ಲಿ ಕೊಡಲಾಗಿದೆ.

೧. ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಉಮೇದವಾರರಿಗೆ ಎರಡು ವರ್ಷದ ಹೊಸ ಅಭ್ಯಾಸ ಕ್ರಮದ ಎರಡನೆಯ ವರ್ಷಕ್ಕೆ ನೇರವಾಗಿ ಪ್ರವೇಶವು ದೊರೆಯುವದು.

೨. ಮ್ಯಾಟ್ರಿಕ್ ನಪಾಸಾದ ಉಮೇದವಾರರಿಗೆ ಎರಡು ವರುಷದ ಹೊಸ ಅಭ್ಯಾಸ ಕ್ರಮದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜುಗಳಲ್ಲಿ ೨ನೇ ವರ್ಷಕ್ಕೆ ಪ್ರವೇಶವು ದೊರೆಯುವದು. ಆದರೆ ಉಮೇದವಾರರು ಇಂಗ್ಲಿಷ ಒಂದನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಲ್ಲಿ ಪಾಸಾಗಿ ಬೇಕು ಮತ್ತು ಆ ಇತರ ವಿಷಯಗಳಲ್ಲಿ ನೂರಕ್ಕೆ ೪೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನು ಅಥವಾ ಆಗಾಗ್ಗೆ ವಿದ್ಯಾಖಾತೆಯವರು ಸೇಕಡಾ ಗೊತ್ತುಪಡಿಸಬಹುದಾದ ಗುಣಗಳನ್ನು ಪಡಿದಿರಬೇಕು.

೩. ಆಂಗ್ಲೊ-ವ್ಹರ್ನ್ಯಾಕ್ಯುಲರ್ ಶಾಲೆಗಳ ೬ನೆಯ ಇತ್ತ್ರಿಯಲ್ಲಿ ತೇರ್ಗಡೆಹೊಂದಿ ಹೆಣ್ಣುಮಕ್ಕಳಿಗೆ ಮಾತ್ರ ಎರಡು ವರ್ಷದ ಹೊಸ ಅಭ್ಯಾಸಕ್ರಮದ ೧ನೆಯ ವರುಷಕ್ಕೆ ಪ್ರವೇಶವು ದೊರೆಯುವದು.

ಇವೇ ನಿಯಮಗಳು ಎಸ್. ಎಲ್. ಸಿ ಪರೀಕ್ಷೆಯಲ್ಲಿ ಪಾಸಾದ ಅಥವಾ ನಪಾಸ ಉಮೇದವಾರರಿಗೂ ಅನ್ವಯಿಸುತ್ತವೆ.

ಸೂಚನೆ

ಈ ಸಲ ಕಡಮೆಯಾದ ಪುಟಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು

—ಸಂಪಾದಕರು.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳು. ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ.

ಸಾಮಾನ್ಯ ವಿಜ್ಞಾನಃ— ಒಳ್ಳೇ ಅನುಭವದಿಂದ

೧ ರಿಂದ ೫ನೇ ಯತ್ತೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ನೇ ಇಯತ್ತೆಯಿಂದ ೬ನೇ ಇಯತ್ತೆಯವರೆಗೆ ಭೂಗೋಲದ ಹೊಸ ಜ್ಞಾನ ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು.		**ಮುಲ್ಕೀ ಪರೀಕ್ಷೆಗಾಗಿ**	
ಕುಮಾರ ಕಿಟ್ಟಣ್ಣ	೦—೩—೦	ಗಣಿತಸಂಗ್ರಹ	೧—೪—೦
ಮಹಾತ್ಮರ ಪರಿಚಯ	೦—೪—೦	ವಾಕ್ಯರಚನೆ ಹಾಗೂ ನಿಬಂಧಬರೆಹ	೧—೦—೦
ರಾಮಕೃಷ್ಣನೀತಿಯಕಥೆ	೧—೬—೦	ಗುಣವಿವೇಚನೆ	೦—೮—೦

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟು

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯ ೬ ಪುಸ್ತಕಗಳು : ೧ನೆಯ ಇಯತ್ತೆಯಿಂದ ೬ನೆಯ ಇಯತ್ತೆಯವರೆಗೆ

ಸಚಿತ್ರ ಪೌರನೀತಿ ಮಾಲೆಯ ೭ ಪುಸ್ತಕಗಳು : (೧ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯ ೬ ಪುಸ್ತಕಗಳು: (೨ನೆಯ ಇಯತ್ತೆಯಿಂದ ೭ನೆಯ ಇಯತ್ತೆಯ ವರೆಗೆ)

ಭೂಮಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತೆಗೆ, ಭಾಗ ೪, ೭ನೆಯ ಇಯತ್ತೆಗೆ)

ಆಧುನಿಕ ರೈತ : ೧ನೆಯ ಭಾಗ ೪ ನೆಯ ಇಯತ್ತೆಗೆ, ೨ನೆಯ ಭಾಗ, ೫ನೆಯ ಇಯತ್ತೆಗೆ). ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತೆಗಾಗಿ)	.....	ಬೆಲೆ	೮ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತೆಗಾಗಿ)	.....	,,	೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತೆಗಾಗಿ)	.....	,,	೧ ರೂ. ೬ ಆ
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತೆಗಾಗಿ)	.....	,,	೧ ರೂ. ೮ ಆ

ಎಲ್ಲ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ಶ್ರೀ. ಚಾಮುಂಡೇಶ್ವರಿ

ಸೂ ಚ ನೆ

ಸರಕಾರದ ಪಠ್ಯಪುಸ್ತಕ ಕಮೀಟಿಗಳಿಂದ ಮಂಜೂರಾದ ಪುಸ್ತಕಗಳ ಜಾಹೀರಾತುಗಳನ್ನಷ್ಟೇ ಸ್ವೀಕರಿಸಲಾಗುವದು.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ !!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯಗಳಿಗೆ ಶ್ರೇಷ್ಠ ಸಾಹಿತ್ಯ ಬೇಕಲ್ಲವೇ ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಕಿಗೆ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯಬೇಕಾಗಿ ಬಿನ್ನಹ.

ಸರಕಾರದಿಂದ ಮಂಜೂರಾದ ಪುಸ್ತಕಗಳು

ಶ್ರೀ. ಸಾಲಿ ರಾಮಚಂದ್ರರಾಯರಿಂದ ರಚಿತವಾದವು.

ಬಾಲಕಾಂಡ ೧—೦—೦
ಅಯೋಧ್ಯಾಕಾಂಡ ೧—೪—೦

ನೂತನ ಗದ್ಯ: ಶ್ರೀ. ಕೆ. ಕೆ. ಗಲಗಲಿ.

ಪ್ರಾಥಮಿಕ ಶಾಲೆಯ ಇಯತ್ತೆಗೆ ಬೆಲೆ ೧—೦—೦

ಕೆಳಗಿನ ಪತ್ತಿಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ
ವಿಜಯಮಠೋಡ, ಧಾರವಾಡ

ಶ್ರೀ. ಪಾವಟೆ ಚೆನ್ನಪ್ಪನವರು ಆಡಳ್ಳ ಎಜ್ಯುಕೇಶನ ಆಫೀಸರ, ಗೋಕಾಕ ಅವರಿಂದ ರಚಿತವಾದ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ ೦—೫—೦
೨) ಶಾಂತಿಸಮರ ೦—೪—೦
೩) ವಿವೇಕ (ಏಕಾಂಕ ನಾಟಕ) ೦—೪—೦
೪) ಅಶಿಕ್ಷಿತರ ಗೋಳು (ಏಕಾಂಕ ನಾಟಕ) ೦—೩—೦

(ಸರಕಾರದಿಂದ ಲಾಯಬ್ರರಿ ಪುಸ್ತಕವೆಂದು ಮಂಜೂರಾವದ್ದು)

ಇವಲ್ಲದೆ ಕೆಳಗಿನ ಪುಸ್ತಕಗಳೂ ದೊರೆಯುವವು
೫) ವಯಸ್ಕರ ಪದ್ಯಾವಲಿ ೦—೮—

ಅಚ್ಚಾಗಲಿರುವ ಪುಸ್ತಕಗಳು
೬) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ
ನವಿನ ಚೆನ್ನಪ್ಪ ಪಾವಟೆ
ಜಯನಿಲಯ ಪ್ರಕಾಶನ ಸಮಿತಿ, ಗೋಕಾ

Printed by: D. T. Kayasth, at Ravindra Press, U. B. Hill (House No. 12561) Dharw
Edited and Published by R. K. Lakkundi Principal T.C.M , R. V. Desai Principal B. T.
Y. D. Nadakarni, Lady Superintendent T.C.W. Dharwar Jointly at the Kannda Prathan
Shikshan Office Govt. Training College for Men Dharwar. 7403-46-1375.

ಕನ್ನಡ ಪ್ರಾಥಮಿಕ ಶಿಕ್ಷಣ

ಡಿಶಂಬರ ೧೯೪೮

ಉಖಾ ಪಾತ್ರ



ಇಟಗಿಯಲ್ಲಿ ದೊರೆತ ಉಖಾ ಎಂಬ ಯಜ್ಞಪಾತ್ರೆ.
ಹಿಂದುಸ್ತಾನದಲ್ಲಿ ಎಲ್ಲಿಯೂ ಸಿಗದ ಈ ಪಾತ್ರೆಯು ಕನ್ನಡ ಸಂಶೋಧನ ಸಂಸ್ಥೆಯಲ್ಲಿ ನೋಡಲು ದೊರೆಯುತ್ತದೆ.
(ಪುಟ-೩ ನೋಡಿರಿ)

ವಾರ್ಷಿಕ ಚಂದಾ
೪ ರೂಪಾಯಿ

ಬಿಡಿ ಸಂಚಿಕೆ
೬ ಆಣೆ


MAP SHOWING
THE
PRE-HISTORIC & PROTO-HISTORIC SITES
IN
BOMBAY KARNATAK
(FROM SURFACE EXPLORATION)
INDEX TO PLACES
1 BADGI
2 BISHAL
3 CHIMMALGI
4 GARUDADINNI
5 GUNDATIPALLI
6 GIRIGAVI
7 GIRISAGAR
8 HIREKAL
9 KAMDAL
10 ROLLI
11 SIDDAPUR
12 SONNA
13 ANAGAWADI
SITES
0 10 20 30 40 50
MILES
BOMBAY
AHMADABAD
GUJARAT
NANDED
NIZAMABAD
KARIMNAGAR
POONA
OSMANABAD
SHOLAPUR
SIDAR
MEDAK
WARANGAL
BARAMATI
BAIRAR
RATNAGIRI
SATARA
GULBARGA
ATRAF-I-BALDA
NALGONDA
BIJAPUR
NAMBUBNAGAR
BELGAUM
SAVANTVADI
DHARWAR
GOA
KURNOOL
NELLORE
KARWAR
NORTH KANARA
ANANTAPUR
CUDDAPAH
SHIMOGA
TUMKUR
CHITTOOR
MYSORE
KADUR
HASSAN
BANGALORE
MANGALORE
MANDYA
NORTH ARCOT
SALEM
COORG
MYSORE
SOUTH ARCOT
NILGIRIS
TRICHINOPOLY
TANJORE
COCHIN
MADURA
TRAVANCORE
RAMNAD
TINNEVELLY
Upadhye K.S.
R.S. Panchamukhi
Director of Karnatak Research

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳ

ಸಂಚಾಲಕರು:—ಶ್ರೀ. ಎ. ಎನ್. ಸಾನೆ. ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಸಂಪಾದಕರು:—ಶ್ರೀ. ಆರ್. ಕೆ. ಲಕ್ಕುಂಡಿ. ಶ್ರೀ. ಆರ್. ವ್ಹಿ. ದೇಸಾಯಿ. ಮಿಸ್. ವಾಯ್. ಡಿ. ನಾಡಕರ್ಣಿ.

ಡಿಸೆಂಬರ] ಪ ರಿ ವಿ ಡಿ [೧೯೪೮

೧.	ಸಂಪಾದಕ	೨
೨.	ಕನ್ನಡ ಸಂಶೋಧನ ಸಂಸ್ಥೆ	೩
೩.	ಜಾಗತಿಕ ಶಾಂತಿ ಸಮ್ಮೇಳನ	೫
೪.	ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಹೊಣೆ	೮
೫.	ಏಳಿ ಜಾತಿ ಐಕ್ಯಕೆ (ಕೂಚುಗೀತ)	೧೧
೬.	ಲಕ್ಷ್ಮೇಶ್ವರ	
೭.	ಮಕ್ಕಳಲ್ಲಿ ಮಮತೆ	೧೨
೮.	ಇಜಿಪ್ತ ದೇಶದ ಪ್ರಾಚೀನ ಧರ್ಮ	೧೩
೯.	ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ (೧೯೪೯)	೧೬
೧೦.	ಇಂದಿನ ಶಿಕ್ಷಣದಲ್ಲಿ ಶಿಕ್ಷಕನ ಸ್ಥಾನ	
೧೧.	ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯ (೧೯೪೯)—ಕಾರ್ಯಕ್ರಮ	೧೯
೧೨.	ನಾವು ಯಾರು ? (ಲಾವಣಿ)	೨೦
೧೩.	ಯುಗಪುರುಷ ಬಾಪೂಜಿ (ಕವನ)	೨೧
೧೪.	ಸಮವಾಯ ಶಿಕ್ಷಣದ ಪಾಠದ ಟಿಪ್ಪಣಿಗಳು	೨೨
೧೫.	ಪ್ರೇಮದಿಂದ ವಿಶ್ವವನ್ನು ಗೆಲ್ಲಿರಿ	೩೦
೧೬.	ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ—(೧೯೪೯)ಯ ನಿಯಮಗಳು	೩೩
೧೭.	ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಹೊಸ ಅಭ್ಯಾಸ ಪತ್ರಿಕೆಯಲ್ಲಿ ಕಿದ್ದುಪಡೆ ಮುಂತಾದವು	೩೬
೧೮.	ಕಾರವಾರ ಟ್ರೇನಿಂಗ ಕಾಲೇಜಿನಲ್ಲಿ ರಂಗವಲ್ಲಿ ಪ್ರದರ್ಶನ	೩೯
	....	೨
	ಶ್ರೀ. ಆರ್. ಎಸ್. ಪಂಚಮುಖಿ ಎಂ. ಎ ...	೩
	ಶ್ರೀ. ಆರ್ ವ್ಹಿ. ದೇಸಾಯಿ, ಬಿ. ಎ., ಬಿ. ಟಿ.	೫
	ಕುಮಾರಿ ಕಮಲಾ ಬುಜರೂರಕರ	೮
	ಶ್ರೀ. ಹ. ಯ. ಮನಹಳ್ಳಿ	೧೧
	ಶ್ರೀ. ಶಿ. ರಾ. ಕೊತ್ತಲ, ೭ನೆಯ ಇಯತ್ತೆಯ ವಿದ್ಯಾರ್ಥಿ, ಬಟ್ಟೂರ	೧೨
	ಶ್ರೀ. ಭಿ. ಸ. ಮಣ್ಣೂರ	೧೩
	ಶ್ರೀ. ಎಚ್. ಎನ್. ದೂದಿಹಳ್ಳಿ	೧೫
	....	೧೭
	ಶ್ರೀ. ಗ. ಜ. ಗುಂಜೀಕರ, ಬಿ. ಎ., ಬಿ. ಟಿ.	೧೮
	....	೧೯
	ಶ್ರೀ. ಎಸ್. ಜಿ. ಕುಂಬಾರ	೨೦
	ಶ್ರೀ. ಸಂ. ಸ. ಸೋಮಾಪೂರ	೨೧
	ಶ್ರೀ. ಈ. ಆರ್. ರಾವೂತ	
	ಜಿ. ಬಿ. ಟಿ. ಸಿ. ಧಾರವಾಡ.	೨೨
	ಶ್ರೀ. ವೀರೇಶ ಹಿರೇಮಠ	೩೦

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ರ. ಕೃ. ಲಕ್ಕುಂಡಿ.

ಸಂಪುಟ ೮೮ | ಡಿಸೆಂಬರ ೧೯೪೮ | ಸಂಚಿಕೆ

ಸಂಪಾದಕೀಯ

ಜೀವನ ಶಿಕ್ಷಣ ಹಾಗೂ ಸಂಶೋಧನೆ

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳೂ ವಿದ್ಯಾ ಮಂತ್ರಿಗಳೂ ಆದ ಮಾನ್ಯ ಶ್ರೀ. ಬಿ. ಜಿ. ಖೇರ ಅವರು ಧಾರವಾಡದ ಟ್ರೇನಿಂಗ ಕಾಲೇಜಿನ ಆವಾರದಲ್ಲಿರುವ ಪದವೀಧರರ ಜೀವನ-ಶಿಕ್ಷಣ ಕೇಂದ್ರಕ್ಕೆ ೫-೧೨-೪೮ನೆಯ ದಿನ ಸಂದರ್ಶನವಿತ್ತು, ಅಲ್ಲಿ ಶಿಕ್ಷಣ ಪಡೆಯುತ್ತಿದ್ದ ಪದವೀಧರರ ಕಾರ್ಯಕಲಾಪಗಳನ್ನು ಕಂಡು ಸಂತೋಷ ವ್ಯಕ್ತಗೊಳಿಸುತ್ತ ಪದವೀಧರರಿಗೆ ಹೇಳಿದ ಮಾತುಗಳು ಜೀವನ ಶಿಕ್ಷಣಕ್ಷೇತ್ರದಲ್ಲಿ ಅರ್ಥಾತ್ ವರ್ಧಾ ರಾಷ್ಟ್ರೀಯ ಶಿಕ್ಷಣಪದ್ಧತಿಯ ಕಾರ್ಯಕ್ಷೇತ್ರದಲ್ಲಿ ದುಡಿಯುವವರಿಗೆ ಮಾರ್ಗದರ್ಶಿಯಾಗಿವೆ ಮತ್ತು ಮನನೀಯವಾಗಿವೆ. ಅವರು ಹೇಳಿದ ಮಾತುಗಳ ಸಾರವು ಇಂತಿದೆ:—

ಸದ್ಯಕ್ಕೆ ನೀವು ಪಡೆಯುತ್ತಿರುವ ಶಿಕ್ಷಣಕ್ಕೆ ನೀವು ಜೀವನ ಶಿಕ್ಷಣ ಎಂದು ಕರೆಯುತ್ತಿರುವಿರಿ. ಹಳ್ಳಿಗರೇ ರಾಷ್ಟ್ರದ ಜೀವಾಳ. ಅವರ ಜೀವನದ ಮಟ್ಟವನ್ನು ಏರಿಸುವಂತಹ ಶಿಕ್ಷಣವೇ ಜೀವನ ಶಿಕ್ಷಣ ಎಂದು ಹೇಳಬಹುದು. ಶಿಕ್ಷಕನು ತನ್ನ ಜೀವನವನ್ನೇ ಅನುಭವಕ್ಕೆ ತಂದುಕೊಳ್ಳದೆ ಹೋದಾಗ ಹಳ್ಳಿಗರಿಗೆ ಹಾಗೂ ಇತರರಿಗೆ ಹೇಗೆ ಜೀವನ ಶಿಕ್ಷಣವನ್ನು ಕೊಡಬಲ್ಲ? ಜೀವನವೆಂದರೇನು? ಎಂಬದನ್ನು ಅವನು ಮೊದಲು ಪರಿಕ್ಷಿಸಿ ನೋಡಬೇಕು, ಅದರ ಅನುಭವ ಪಡೆಯಬೇಕು. ಅವನು ಜೀವನದ ಅನುಭವವನ್ನು ಪಡೆದ ನಂತರವೇ ಅವನಿಂದ ಜೀವನ ಶಿಕ್ಷಣದ ದಾನ ಸಾಧ್ಯ.

ಜೀವನ ಶಿಕ್ಷಣದ ಉದ್ದೇಶಗಳು ನಮಗೆ ಸ್ಪಷ್ಟವಾಗಿವೆ ಯಾದರೂ ಶಿಕ್ಷಣ ಕಾರ್ಯದಲ್ಲಿ ತೊಡಗಿರುವವರಿಗೆ ಅವು ಇನ್ನೂ ನಿಚ್ಚಳವಾಗಿ ಕಾಣಬೇಕಾಗಿವೆ. ಸಮವಾಯ ಪದ್ಧತಿಯು ಇನ್ನೂ ಒಂದು ಸಮಸ್ಯೆಯಾಗಿಯೆ ಉಳಿದಿದೆ. ಇದನ್ನು ಬಿಡಿಸುವ ಕಾರ್ಯ ನಿಮ್ಮ ಮೇಲಿದೆ. ಅದಕ್ಕೋಸ್ಕರ ನೀವು ಸಂಶೋಧನೆ ಮಾಡಬೇಕು. ಪಾಶ್ಚಾತ್ಯ ರಾಷ್ಟ್ರಗಳು ಸಂಶೋಧನೆಗೆ ಹೆಚ್ಚು ಮಹತ್ವ ಕೊಡುತ್ತವೆ. ಅವು ತಮ್ಮ ದೇಶ ಗೌರವವನ್ನು ಹೆಚ್ಚಿಸುವಂತಹ ಶಿಕ್ಷಣದ ಶೋಧನೆ ಮಾ ಜನತೆಗೆ ಶಿಕ್ಷಣ ಕೊಡುತ್ತವೆ. ಆದರೆ ನಮ್ಮ ಜನತೆ ಅಜ್ಞಾ ದಲ್ಲಿ ಮುಳುಗಿದೆ. ಅದರ ಅಜ್ಞಾನ ಅಂಧಕಾರವನ್ನ ಹೊಡೆದೋಡಿಸಲು ನೀವು ಸಂಶೋಧನ ಮಾಡಿ ಒಂ ಉತ್ತಮ ಜೀವನ ಶಿಕ್ಷಣೋಪಾಯವನ್ನು ಕಂಡು ಹಿಡಿಯ ವುದು ನಿಮ್ಮೆಲ್ಲರ, ನಮ್ಮೆಲ್ಲರ ಕರ್ತವ್ಯವಾಗಿದೆ. ನಾ ಡುವ ಈ ಎಲ್ಲ ಮಾತುಗಳು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂ ಪಟ್ಟುವು. ಪ್ರಾಥಮಿಕ ಶಿಕ್ಷಣವೇ ಉಚ್ಚ ಶಿಕ್ಷಣದ ತಳಹ ಅದರ ಕ್ಷೇತ್ರದಲ್ಲಿ ಜೀವನ ಶಿಕ್ಷಣವು ನಲಿಯುವಂತೆ ಮಾ ವುದು ಶಿಕ್ಷಕರ ಹೊಣೆಯಾಗಿದೆ. ಶಿಕ್ಷಣದ ಧ್ಯೇಯ ಮಾನವನ ನೈತಿಕ ಹಾಗೂ ಸಾಂಸ್ಕೃತಿಕ ಮೆಟ್ಟುಗಳನ್ನು ಏ ಯಿಸುವದಾಗಿದೆ. ದೇಶದ ಭೌತಿಕ ಸಂಪತ್ತಿನ ರಕ್ಷ ಸೈನಿಕನು ಅವಶ್ಯವಿರುವಂತೆ ನೈತಿಕ, ಆಧ್ಯಾತ್ಮಿಕ, ಸಾಂ ತಿಕ ಸಂಪತ್ತಿನ ರಕ್ಷಣೆಗೆ ಶಿಕ್ಷಕನು ಅವಶ್ಯ. ನಮ್ಮ ದೇ ಪ್ರಾಚೀನ ಸಂಸ್ಕೃತಿಯ ತಳಹದಿಯ ಮೇಲೆ ನ ಗೌರವಕ್ಕೆ ಕುಂದು ತರದಂತಹ ಜೀವನ ಶಿಕ್ಷಣವನ್ನ ಶಿಕ್ಷಕನು ನಾಡಿಗೆ ನೀಡಬೇಕಾದಲ್ಲಿ ಅವನಲ್ಲಿ ತ್ಯಾಗಬು ಯೂ ತಾಳ್ಮೆಯೂ ಅಗತ್ಯ. ಇವು ಈ ಜೀವನ ಶಿಕ್ಷ ಪ್ರವರ್ತಕರಾದ ಮಹಾತ್ಮಾಜಿಯವರಲ್ಲಿದ್ದವು ಎಂಬುದನ್ನ ನೀವು ಮನಗಾಣಬೇಕು.

ಮಾನ್ಯ ವಿದ್ಯಾಮಂತ್ರಿಗಳ ಈ ಮುತ್ತಿನಂತಹ ಮಾತ ಗಳನ್ನು ಗಮನಕ್ಕೆ ತಂದುಕೊಂಡು, ಮಹಾತ್ಮಾ ಗಾಂಧಿ ಜಿಯವರ ಆದರ್ಶ ಜೀವನವನ್ನು ಎದುರಿಗೆ ಇಟ್ಟುಕೊಂಡ ಜೀವನ ಶಿಕ್ಷಣ ಕಾರ್ಯವನ್ನು ಶಿಕ್ಷಕರು ಮಾಡಿದಲ್ಲಿ, ನಮ್ ಜನತೆಯ ಜೀವನದ ಮಟ್ಟವು ಏರುವುದು; ಅದರೊಡ ತಂತಾನಾಗಿಯೇ ಶಿಕ್ಷಕನ ಜೀವನದ ಮಟ್ಟವೂ ಏರುವುದು ಎಂಬುದನ್ನು ಬೇರೆ ಹೇಳಬೇಕಾದ ಅಗತ್ಯವಿಲ್ಲ.

ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.

ಶ್ರೀ. ರಾ. ಸ್ವಾ. ಪಂಚಮುಖಿ, ಎಂ. ಎ. ಡೈರೆಕ್ಟರ ಕನ್ನಡ ರಿಸರ್ಚ, ಅವರಿಂದ

ಕನ್ನಡ ಸಂಶೋಧನ ಸಂಸ್ಥೆಯು ಕಾಂಗ್ರೆಸ್ ಮಂತ್ರಿ ಮಂಡಲದಿಂದ ೧೯೩೯ನೆಯ ವರ್ಷ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು. ಐತಿಹಾಸಿಕ ಮತ್ತು ವಾಙ್ಮಯ ವಿಷಯಕ ಸಂಶೋಧನೆಯೇ ಈ ಸಂಸ್ಥೆಯ ಮುಖ್ಯ ಉದ್ದೇಶವು. ಕರ್ನಾಟಕವು ಪ್ರಾಚೀನ ಕಾಲದಿಂದಲೂ ಹೆಸರಾದ ಪ್ರಬಲ ಪ್ರದೇಶವಾಗಿದ್ದು ಹಿಂದುಸ್ತಾನದ ರಾಜಕೀಯ ರಂಗದಲ್ಲಿ ಕ್ರಿ. ಶ. ೩ನೆಯ ಶತಮಾನದಿಂದಲೂ ಗಣ್ಯವಾದ ಸ್ಥಾನವನ್ನು ಪಡೆದಿದೆ. ಅದಕ್ಕೂ ಪೂರ್ವದ ಪ್ರಾಗೈತಿಹಾಸಿಕ ಸಾಂಸ್ಕೃತಿಕ ಸಂನಿವೇಶಗಳು ಕರ್ನಾಟಕದಲ್ಲಿ ಸಂಶೋಧಕನ ದೃಷ್ಟಿಗೆ ವಿಪುಲವಾಗಿ ಬೀಳುತ್ತವೆ. ಇವುಗಳಲ್ಲಿ ಪ್ರಾಚೀನ ಶಿಲಾಯುಗದಿಂದ ಆರಂಭ ಮಾಡಿ (ಸು. ಕ್ರಿ. ಶ. ಪೂ. ೫೦,೦೦೦ ವರ್ಷ) ಐತಿಹಾಸಿಕ ಯುಗ ಅಂದರೆ ಮೌರ್ಯರ ಕಾಲದ ವರೆಗೆ (ಕ್ರಿ. ಶ. ಪೂ. ೩ನೆಯ ಶತಮಾನ) ವಿವಿಧ ವಿಶಿಷ್ಟ ಸಂಸ್ಕೃತಿಗಳನ್ನು ಸೂಚಿಸುವ ಅವಶೇಷಗಳು ಕಂಡು ಹಿಡಿಯಲ್ಪಟ್ಟಿವೆ. ಅಂತು ಕರ್ನಾಟಕವು ಕ್ರಿ. ಶ. ಪೂ. ೫೦,೦೦೦ ವರ್ಷದಿಂದ ಇಲ್ಲಿಯ ವರೆಗೆ ವಿಶಿಷ್ಟ ರೀತಿಯಿಂದ ಭಾರತದ ಸಂಸ್ಕೃತಿಗೆ ಪೋಷಣೆಯನ್ನಿತ್ತಿದ್ದರಿಂದ ಸಂಶೋಧಕನಿಗೆ ಈಪ್ರದೇಶದ ಮಹತ್ವವು ವಿಶೇಷವಿದೆ.(ಹೊದಿಕೆಯ ಪುಟದಲ್ಲಿ ಪ್ರಾಗೈತಿಹಾಸಿಕ ಸನ್ನಿವೇಶಗಳ ನಕ್ಷೆಯನ್ನು ನೋಡಿರಿ).

ಈ ಸಂಸ್ಥೆಯು ಹುಟ್ಟುವ ಮೊದಲು ಏಕನಿಷ್ಠೆಯಿಂದ ಕರ್ನಾಟಕದ ಸಾಂಸ್ಕೃತಿಕ ಅವಶೇಷಗಳ ಸಂಕಲನೆಯನ್ನಾಗಲಿ ಸುಸಂಬದ್ಧವಾದ ಅಭ್ಯಾಸವನ್ನಾಗಲಿ ಯಾರೂ ಕೈಕೊಂಡಿದ್ದಿಲ್ಲ. ಸರಕಾರೀ ಕೆಲಸದಲ್ಲಿದ್ದು ಸಮಯ ಸಿಕ್ಕಾಗ ಆಸ್ಥೆಯಿಂದ ಕರ್ನಾಟಕದ ಇತಿಹಾಸವನ್ನು ಶಾಸನಗಳ ಪರಿಶೀಲನೆಯಿಂದ ಬಯಲಿಗೆ ಹಾಕಲಿಕ್ಕೆ ಎಷ್ಟೋ ವಿದ್ವಾಂಸರು ಪರಿಶ್ರಮಪಟ್ಟಿರುವರು. ಆದರೆ ವೈಯಕ್ತಿಕ ಪ್ರಯತ್ನವು ಇಂಥ ಬಹುಧನ-ಪ್ರಯಾಸಗಳಿಗೂ ಬೇಗ ಸಾಧ್ಯವಾಗದಿದ್ದ ಕೆಲಸವನ್ನು ಸಮಂಜಸವಾಗಿ ಕೊನೆಗಾಣಿಸಲು ಶಕ್ತವಾಗಲಾರದು. ಆದ್ದರಿಂದ ಮುಂಬಯಿ ಸರಕಾರದವರು ಈ ಸಂಶೋಧನ ಕೇಂದ್ರವನ್ನು ಧಾರವಾಡದಲ್ಲಿ ತೆಗೆದದ್ದು ಒಳ್ಳೇ ಜಾಣತನದ ಕಾರ್ಯವೆಂದು ಹೇಳದೆ ಇರಲಾರೆವು.

ಈ ಸಂಸ್ಥೆಯು ಹುಟ್ಟಿ ಈಗ ೯ ವರ್ಷಗಳಾದವು. ಅಷ್ಟರಲ್ಲಿ ಇದು ಮಾಡಿದ ಕಾರ್ಯವು ಬಹುಮುಖವಾಗಿದೆ. ಐತಿಹಾಸಿಕ ಸಾಮಗ್ರಿಗಳು ಅಂದರೆ ಶಿಲಾ-ತಾಮ್ರ-ಶಾಸನಗಳು ಮೋಡಿ ಪಾರ್ಶಿ ಮತ್ತು ಕನ್ನಡದ ಹಳೆಯ ಕಾಗದಪತ್ರಗಳು ಇವೇ ಮೊದಲಾದವುಗಳನ್ನು ಕಲೆ ಹಾಕಿ ಸಶಾಸ್ತ್ರವಾಗಿ ಅವುಗಳ ಅಧ್ಯಯನವನ್ನು ಆರಂಭಿಸಿದೆ. ಚಿತ್ರಕಲೆ, ಸಂಗೀತ ಕಲೆ, ವಾಸ್ತು ಶಿಲ್ಪ; ಮೂರ್ತಿಶಿಲ್ಪ ಇವೇ ಮೊದಲಾದ ಲಲಿತ ಕಲೆಗಳಲ್ಲಿ ಕ್ರಿ. ಶ. ೬ನೇ ಶತಮಾನದಿಂದ ಕರ್ನಾಟಕದ ಕಲಾವಿದರು ಉಚ್ಚ ತರಗತಿಯನ್ನು ಹೊಂದಿದ್ದರೆಂಬುದನ್ನು ಈ ಸಂಸ್ಥೆಯಲ್ಲಿ ಸಂಗ್ರಹಿಸಲ್ಪಟ್ಟ ವಿವಿಧ ಅವಶೇಷಗಳಿಂದ ತಿಳಿದುಕೊಳ್ಳುವಂತಿದೆ. ಸಾಹಿತ್ಯದಲ್ಲಿ ಕರ್ನಾಟಕದ ಕವಿಗಳೂ ಪ್ರಬಂಧಕಾರರೂ ಎಂಥ ಉತ್ತಮ ಕಾವ್ಯಗಳನ್ನೂ ಗ್ರಂಥಗಳನ್ನೂ ರಚಿಸಿದ್ದರೆಂಬುದು ಇಲ್ಲಿ ಕೂಡಿಸಲ್ಪಟ್ಟ ಸಾವಿರಾರು ಹಸ್ತಲಿಖಿತ ತಾಡಪೋಲೆಯ ಹೊತ್ತಿಗೆಗಳಿಂದ ಗೊತ್ತಾಗುವದು.

ಈ ಅಮೌಲ್ಯವಾದ ಪ್ರಾಚ್ಯವಸ್ತು ಸಂಗ್ರಹವು ದಿನದಿನಕ್ಕೂ ಬೆಳೆಯುತ್ತ ನಡೆದಿದೆ. ಹಿಂದುಸ್ತಾನದ ಬೇರೆ ಪ್ರದೇಶಗಳಲ್ಲೆಲ್ಲಿಯೂ ಕಣ್ಣಿಗೆ ಬೀಳದ, ವಿದ್ವಾಂಸರ ಮನಸ್ಸನ್ನು ಆಕರ್ಷಿಸುವ ಎಷ್ಟೋ ವಸ್ತುಗಳು ಈ ಸಂಸ್ಥೆಗೆ ಉಪಲಬ್ಧವಾಗಿವೆ. ಉದಾ: ಉಖಾ ಪಾತ್ರವೆಂಬ ಯಜ್ಞಪಾತ್ರೆ (ಮುಖಪತ್ರದ ಚಿತ್ರವನ್ನು ನೋಡಿರಿ) ಈ ಎಲ್ಲ ವಸ್ತುಗಳಿಂದ ಒಳ್ಳೇ ಬೋಧಕವಾದ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಈ ಸಂಸ್ಥೆಯಲ್ಲಿ ಸಿದ್ಧಪಡಿಸಲಾಗಿದೆ. ಕರ್ನಾಟಕದ ಇತಿಹಾಸವನ್ನೂ, ಸಾಂಸ್ಕೃತಿಕ ಉತ್ಕರ್ಷವನ್ನೂ ತಿಳಿದುಕೊಳ್ಳಲಿಕ್ಕೆ ನೂರಾರು ಹೊತ್ತಿಗೆಗಳನ್ನು ಓದುವದಕ್ಕಿಂತ ಈ ಸಂಗ್ರಹಾಲಯವನ್ನು ಲಕ್ಷಪೂರ್ವಕವಾಗಿ ಸಂದರ್ಶಿಸುವದರಿಂದ ಹೆಚ್ಚು ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ.

ಈ ಸಂಸ್ಥೆಯ ಸಂದರ್ಶನದಿಂದಲೂ ಅದರ ಪ್ರಕಟನೆಗಳ ಅಭ್ಯಾಸದಿಂದಲೂ ಕರ್ನಾಟಕವು ಒಂದು ಕೇವಲ ಚಿಕ್ಕ,

ಕೆಸರಿಲ್ಲದ ಪ್ರಾಂತವಾಗಿರದೆ ಭಾರತ ವರ್ಷದ ಸಂಸ್ಕೃತಿಯ ಶಿಖರಕ್ಕೆ ಕಿರೀಟವನ್ನಿಟ್ಟ ಹೆಮ್ಮೆಯ ನಾಡಾಗಿದೆಯೆಂಬುದು ತಿಳಿಯುವದು. ಮೊನ್ನೆ ಮೊನ್ನೆ (೮-೧೨-೪೮) ಧಾರ ನಾಡಕ್ಕೆ ಬಂದಿದ್ದ ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಮಾನ್ಯ ಎಂ. ಸಿ. ಚಗ್ಲಾ ಅವರು ಈ ಸಂಸ್ಥೆಯನ್ನು ಸಂದರ್ಶಿಸಿ, ವಿವರಗಳನ್ನು ಚನ್ನಾಗಿ ನೋಡಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ:—"I was considerably impressed with the excellent work that is being done by Mr. Panchamukhi to advance the cause of research in ancient Kannada Culture. One has only to visit this Institute to realise what a long and illustrious history of Culture and civilisation the People of Karnatak have behind them" ಶ್ರೀಮಾನ್ ಪಂಚಮುಖಿಯವರು ಕರ್ನಾಟಕದ ಸಾಂಸ್ಕೃತಿಕ ಸಂಶೋಧನವನ್ನು ಮುಂದುವರಿಸುವುದರಲ್ಲಿ ಮಾಡುತ್ತಿರುವ ಅತ್ಯುತ್ತಮವಾದ ಕಾರ್ಯವನ್ನು ನೋಡಿ ಬಹಳ ಆನಂದವಾಯಿತು. ಕರ್ನಾಟಕದ ಜನರಿಗೆ ವೈಭವಶಾಲಿಯಾದ ಅವಿಚ್ಛಿನ್ನ ಮೇಲ್ತರಗತಿಯ ಸಂಸ್ಕೃತಿಯ ಪರಂಪರೆಯು ಇರುವದೆಂಬುದನ್ನು ತಿಳಿದುಕೊಳ್ಳಲಿಕ್ಕೆ ಈ ಸಂಸ್ಥೆಯನ್ನು ಸಂದರ್ಶಿಸಿದರೆ ಸಾಕು.

ಹಿಂದೆ ಹೇಳಿದಂತೆ ಕ್ರಿ. ಶ. ಪೂ. ೫೦. ೦೦೦ ವರ್ಷಗಳಿಂದಲೂ ಕರ್ನಾಟಕಕ್ಕೆ ವಿಶಿಷ್ಟ ಸಂಸ್ಕೃತಿಯು ಜಾಗರೂಕವಾಗಿದ್ದು ರೂಪುಗೊಳ್ಳುತ್ತ ಬಂದಿದೆ. ಅಲ್ಲಿ ಸಂಖ್ಯೆಯಿಲ್ಲದಷ್ಟು ಮಹತ್ವದ ಅವಶೇಷಗಳು ಸಿಗುವವೆಂಬಲ್ಲಿ ಸಂಶಯವಿಲ್ಲ. ಅವುಗಳನ್ನು ಚಿಕಿತ್ಸಕನ ದೃಷ್ಟಿಯಿಂದ ಸಂಗ್ರಹಿಸಿ ಅಭ್ಯಾಸ ಮಾಡತಕ್ಕ ಸಮರ್ಥ ವಿದ್ವಾಂಸರು ಅವಶ್ಯ. ಕರ್ನಾಟಕದಲ್ಲಿ ಅನೇಕ ವಿದ್ವಾಂಸರಿರುವರು. ಅವರು ತಮ್ಮ ಲಕ್ಷವನ್ನು ಸಂಶೋಧನೆಯ ಕಡೆಗೆ ಎಳೆದರೆ ಈ ಕೆಲಸವು ಎಷ್ಟು ಹಗುರಾಗುವದು. ಶಾಲಾಧ್ಯಾಪಕರೂ ಪ್ರಾಧ್ಯಾಪಕರೂ ಈ ಕಾರ್ಯದಲ್ಲಿ ಅನೇಕ ಬಗೆಯಿಂದ ನೆರವಾಗಬಲ್ಲರು. ಮುಖ್ಯವಾಗಿ ಅವರು ಈ ಸಂಶೋಧನ ಕೇಂದ್ರಕ್ಕೆ ಬಂದು ಸಂಶೋಧನ ರೀತಿಗಳನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳತಕ್ಕದ್ದು. ಆ ಮೇಲೆ ಈ ಕೆಳಗಿನ ರೀತಿಗಳಲ್ಲಿ ಅವರು ತಮ್ಮ ಸಹಾಯವನ್ನು ಸಲ್ಲಿಸಬೇಕು. ಇದರಿಂದ ವೈಭವದಿಂದ ಪ್ರಜ್ವಲಿಸುವ ನಮ್ಮ ನಾಡಿನ ಕೀರ್ತಿ ಹೆಚ್ಚು ಬೆಳೆಯಬರುವದು:—

೧) ಹಳ್ಳಿಗಳಲ್ಲಿ ವಾಸಿಸುವ ಪ್ರಾಥಮಿಕ ಶಾಲಾ ಶಿಕ್ಷಕರು ತಮ್ಮ ಪರಿಚಯದ ಬಲದಿಂದ ಹಳೆಯ ತಾಮ್ರ ಪತ್ರಗಳನ್ನೂ, ಸಾಣ್ಯಗಳನ್ನೂ, ಕಲಾಕೃತಿಗಳನ್ನೂ, ಸಾಹಿತ್ಯ ಹೊತ್ತಿಗೆಗಳನ್ನೂ ಸಂಗ್ರಹಿಸಿ ಹೆಚ್ಚಿನ ಅಭ್ಯಾಸಕ್ಕಾಗಿ ಸಂಶೋಧನ ಸಂಸ್ಥೆಗೆ ಕಳಿಸತಕ್ಕದ್ದು.

೨) ಈ ಸಂಶೋಧನ ಸಂಸ್ಥೆಗೆ ಶಿಕ್ಷಕರು ವರ್ಷದಲ್ಲಿ ಮೈಯಾದರೂ ತಮ್ಮ ವಿದ್ಯಾರ್ಥಿಗಳನ್ನು ಕರೆದುಕೊಂಬಂದು ಅವರಿಗೆ ಪ್ರಾಚೀನ ವೈಭವದ ಕುರುಹುಗಳ ಪರಿಚಯವನ್ನು ಮಾಡಿಕೊಡಬೇಕು.

೩) ಶಿಕ್ಷಕರು ತಮ್ಮ ತಮ್ಮ ಹಳ್ಳಿಗಳಲ್ಲಿ ತಕ್ಕಮಟ್ಟಿಗೆ ಅಭ್ಯಾಸವನ್ನು ನಡೆಸಲು ಚಿಕ್ಕ ಬಾಲಕರ ಸಂಶೋಧನ ಘಟಗಳನ್ನು ಸ್ಥಾಪಿಸಿ ಅವುಗಳ ಮುಖ್ಯವಾಗಿ ತಮ್ಮ ಜವಾಬ್ದಾರಿಕೆಗಳನ್ನು ಸಾಗಿಸಬೇಕು. ಮುಖ್ಯವಾಗಿ ಸಂಶೋಧನ ಅಭ್ಯಾಸದ ರೀತಿಗಳನ್ನು ಅರಿತು ಅವುಗಳನ್ನು ಕೃತಿಗೆ ತರುವುದು ಅವಶ್ಯವಾಗಿದೆ.

ಈ ರೀತಿ ಅಚ್ಚುಕಟ್ಟಿನಿಂದ ಸಹಾಯವನ್ನು ಶಿಕ್ಷಕರು ಕೊಡುವ ನಿರ್ಧಾರವನ್ನು ಮಾಡುವುದರಿಂದ ಸ್ವಾಭಿಮಾನ ರಾಷ್ಟ್ರೀಯ ವೃತ್ತಿಯುಳ್ಳ ಚಿಕಿತ್ಸಕ ಬುದ್ಧಿಯ ವಿದ್ಯಾವಂತ ತರುಣ ಜನಾಂಗವು ಬೇಗನೆ ನಿರ್ಮಾಣವಾಗುವುದ ಸಂದೇಹವಿಲ್ಲ.

ಜಾಗತಿಕ ಶಾಂತಿ ಸಮ್ಮೇಳನ

ಅಂತರ ರಾಷ್ಟ್ರೀಯ ಅನುಬಂಧ

[ಕಳೆದ ಸಲ ಮೆಕ್ಸಿಕೋದಲ್ಲಿ ಜರುಗಿದ ಸಂಯುಕ್ತ ರಾಷ್ಟ್ರಗಳ ಶಾಂತಿ ಸಮ್ಮೇಲನದಲ್ಲಿ ಡಾ|| ಜ್ಯೂಲಿಯನ್ ಹಕ್ಸಲೆ ಅವರು ಮಾಡಿದ ಭಾಷಣದ ತಿರುಳು]

ಶ್ರೀ. ಆರ್ ವ್ಹಿ. ದೇಸಾಯಿ., ಪ್ರಿನ್ಸಿಪಾಲ್, ಬಿ ಟಿ. ಸಿ. ಧಾರವಾಡ.

ಶಾಂತಿ ಸಮ್ಮೇಲನವು ಮೆಕ್ಸಿಕೋದಲ್ಲಿ ನೆರೆದುದು ಅಂತರ ರಾಷ್ಟ್ರೀಯ ಹೃದಯ ಸಮ್ಮೇಲನದ ದೃಷ್ಟಿಯಿಂದ ಒಂದು ಅಪೂರ್ವ ಯೋಗ. ಈ ಸಮ್ಮೇಲನದ ನಿಲುಮೆಯನ್ನು ಅನುಗೊಳ್ಳುವ ನಾಡುಗಳೆಲ್ಲ ತಾವು ಕಲೆತು ಬೆರೆತು ತಿಳಿದು ತಿದ್ದಿಕೊಳ್ಳಲು ಜಗತ್ತಿನ ಎಲ್ಲ ಕಡೆಗೆ ಅದನ್ನು ಅನುಕೂಲ ವಾಗಿ ಜರುಗಿಸುವದು ಅದರ ಧ್ಯೇಯದ ಒಂದು ಅಂಗವೇ. ಮೆಕ್ಸಿಕೋ ಸರಕಾರದ ಹೃತ್ಪೂರ್ವಕ ಸ್ವಾಗತದಿಂದ ಈ ಸಮ್ಮೇಲನ ಅತ್ಯಂತ ಯಶಸ್ವಿಯಾಯಿತು. ನಾಡು ನಾಡುಗಳಿಂದ ಬಂದ ಪ್ರತಿನಿಧಿಗಳಲ್ಲಿ ಒಂದು ಬಗೆಯ ಬಿಚ್ಚು ಮನ, ಸ್ನೇಹ ಪೂರ್ಣ ವಿಚಾರ ವಿನಿಮಯ, ಕುಂದು ಕೊರತೆ ನೀಗಲು ಆತುರತೆಗಳು ಎದ್ದು ಕಾಣುತ್ತಿದ್ದವು. ಚರ್ಚಾಸಮಯದಲ್ಲಿ ಸೆಣೆಸಾಟ ಕಿಂಚಿತ್ ನಡೆದರೂ ಮುಕ್ತಾಯ ಮಾಧುರ್ಯದಲ್ಲಿಯೆ ಪರಿಣಮಿಸಿದೆ. ಒಕ್ಕೊರಲಿನ ನಿರ್ಣಯವನ್ನು ಸಮ್ಮೇಲನ ಕೈಕೊಂಡಿದೆ.

ಇಂದು ವಿಜ್ಞಾನವು ವಿನಾಶಗಾಮಿಯಾಗಿದೆಯೆಂದು 'ಅಣು ಬಾಂಬಿ' ನತ್ತ ಬೆರಳು ಮಾಡಿ ತೋರಿಸುತ್ತಾರೆ. ಆದರೆ ವೈಜ್ಞಾನಿಕ ಬೆಳವಣಿಗೆಯಲ್ಲಿ ಜಾಗತಿಕ ಉನ್ನತಿ ಯಿಲ್ಲದೆ ಇಲ್ಲ. ವೈಮಾನಿಕ ಅನುಕೂಲತೆ ಇಲ್ಲದಿರುವಾಗ ನಾವು ದೂರ ದೂರದಿಂದ ವಿಹಂಗಮಗಳಂತೆ ಹಾರಿಬಂದು ಇಂಥ ಮಂಗಲ ಸಮಾರಂಭದಲ್ಲಿ ಭಾಗವಹಿಸಬಹುದಾಗಿರಲಿಲ್ಲ ಈ ವಿಷಯದಲ್ಲಿ ಭಾರತೀಯ ಪ್ರತಿನಿಧಿಗಳಾದ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್ನರು ನುಡಿದಿದ್ದಾರೆ. ಅವರು ನಿನ್ನೆ 'ಆಕ್ಸಫರ್ಡಿನಲ್ಲಿ', ಇಂದು ಇಲ್ಲಿ, ನಾಳೆ ಭಾರತದ ಹಿರಿಯೋಲಗದಲ್ಲಿರುವುದು ವಿಜ್ಞಾನದ ಬೆನ್ನಾಸರದಿಂದಲೇ.

ಸಮ್ಮೇಲನದ ಕಾರ್ಯಕ್ರಮಗಳು ಮೂರುಭಾಷೆಗಳಲ್ಲಿ ನಡೆದುದು ನಮ್ಮ ಆಂತರಿಕ ಭಾವನೆಗಳ ಅಭಿವ್ಯಕ್ತಿಗೆ ಒಂದು ಸಹಕಾರ ನೀಡಿತೆನ್ನಬೇಕು. ಬೈಬಲ್ಲಿನಲ್ಲಿ 'ಕುಲವ ನಾಲಿಗೆಯರುಹಿತು' ಎಂಬ ನುಡಿ ಬರುವದು. ನಾಲಿಗೆಯು ನಮ್ಮ ಸಂಸ್ಕೃತಿ ಸಂಕೇತವಾಗಿದೆ.

ಸಮ್ಮೇಲನವು ಕನಸುಗಳ ಗುಡಿಗಟ್ಟಿ ತನ್ನಲ್ಲಿ ತಾನೆ ಹಿಗ್ಗಿದೆ, ಅದು ಸಜೀವ ಸಂಸ್ಥೆಯಾಗಿ ತಾನೆಳೆಸಿದುದನ್ನು ದೊರೆಕೊಳ್ಳಲು ದುಡಿಯುವದೆಂದು ಪ್ರತಿನಿಧಿಗಳು ಮನಗಂಡಿದ್ದಾರೆ. ಮೊದಲ ವರುಷದ ವರದಿಯಲ್ಲಿ ಪ್ರಗತಿ ಕಂಡು ಬರದಿದ್ದುದಕ್ಕೆ ಜಾಗತಿಕ ಪರಿಸ್ಥಿತಿಯಲ್ಲಿದ್ದ ತೀಕ್ಷ್ಣ ಕೋಲಾಹಲವೆ ಕಾರಣವಾಗಿದೆ. ಸಮ್ಮೇಲನ ತನ್ನ ಸಾಹಸದಿಂದ ಮಾನವನ ಹಕ್ಕು ಬಾಧ್ಯತೆಗಳನ್ನು ಪುನರ್ಘಟನೆಯ ಮಟ್ಟದಲ್ಲಿ ಅದಮ್ಯವಾಗಿ ಉಳಿಸುವಂತೆ ಅನುಗೊಳಿಸುತ್ತಿದ್ದೇವೆ. ಅಂತರರಾಷ್ಟ್ರೀಯ ಆರ್ಥಿಕ ಸಾಮಾಜಿಕ ಸಂಸ್ಥೆಗಳಿಗೆ ಸಹಕಾರ ಕೋರಿ ಜಗತ್ತಿನ ಎಲ್ಲ ರಂಗದಲ್ಲಿ ಮೈತ್ರಿಯನ್ನು ಭಾವಿಸಿದ್ದೇವೆ.

ಬರುವ ವರ್ಷದ ಕಾರರಂಗದಲ್ಲಿ ನಾವು ಪರಿಷ್ಕಾರ ಹಾಗು ಆಸ್ಥೆಯ ಧೋರಣ ವಹಿಸಿದ್ದೇವೆ. ಮುಂಗಾಣಿ ಆರು ದಶಲಕ್ಷದಿಂದ ಏಳುಮುಕ್ಕಾಲು ದಶಲಕ್ಷಕ್ಕೇರಿದರೂ ಅಂತರ ರಾಷ್ಟ್ರೀಯ ಶಿಕ್ಷಣ ಸಂಸ್ಕೃತಿ ವೈಜ್ಞಾನಿಕ ಅಭಿವೃದ್ಧಿಗಳಲ್ಲಿ ಕೈ ಹಾಕುವದು ಕಠಿಣವಾಗಿದೆ.

ಹೊಸ ವರುಷದ ನಮ್ಮ ಕಾರ್ಯ ಆರು ಮುಖವಾಗಿ ಬರಬೇಕಾಗಿದೆ.

(ಜಾಗತಿಕ ರಾಷ್ಟ್ರಗಳ ಪುನರ್ನಿರ್ಮಾಣ-ಸಂಗ್ರಾಮ ಸಂಸ್ಥ ರಾಷ್ಟ್ರಗಳು ತಮ್ಮ ಶೈಕ್ಷಣಿಕ ಸಾಂಸ್ಕೃತಿಕ ವೈಜ್ಞಾನಿಕ ಜೀವನದಲ್ಲಿ ತಮ್ಮ ಕಾಲ ಮೇಲೆ ತಾವೇ ನಿಲ್ಲಲು ಬಿಟ್ಟು ಕೊಟ್ಟು-

ವ್ಯಕ್ತಿಮೂಲಕ ವ್ಯವಹಾರ, ವಿದ್ಯಾರ್ಥಿ ಪ್ರಾಧ್ಯಾಪಕರು ತಜ್ಞರ ವಿನಿಮಯ ಅಲ್ಲದೆ. ಶೈಕ್ಷಣಿಕ ಹಾಗು ಸಾಂಸ್ಕೃತಿಕ ಕೊಡು ಕೊಳೆಗಳು. ಶೈಕ್ಷಣಿಕ ವಿಷಯದಲ್ಲಿ ಒಂದು ಮಹತ್ವದ ಹೆಜ್ಜೆ ಮೂಲ ಶಿಕ್ಷಣ-ಹಾಗು ರಾಷ್ಟ್ರೀಯ ಅರಿವು ಮಹಾ ವಿದ್ಯಾಲಯಗಳಲ್ಲಿಯ ಒಳಪಿಡಿಯಂತೆ ರೂಢಗೊಳ್ಳುವದು.

ಕಲೆ ಸಾಹಿತ್ಯ, ತತ್ವಜ್ಞಾನ, ಮಾನವೀಯತೆಯನ್ನಳವಡಿಸಿಕೊಂಡ ಜೀವಾಳದ ಸಂಪರ್ಕ ಪುರಾಣಗಳ ಭಾಷಾಂತರಗಳನ್ನು ಕುರಿತು ಯೋಚಿಸಿದೆ.

ಅಂತರ ರಾಷ್ಟ್ರೀಯ ಸಾಮಾಜಿಕ ಜೀವನವನ್ನೆ ಮಿಡಿಯುವಲ್ಲ ಸಮಾಜ ಶಾಸ್ತ್ರದ ಅನುಬಂಧವನ್ನು ಕುರಿತೂ ಒಂದು ಮುಖದಲ್ಲಿ ಬರೆದಿದೆ. ಜಗಜ್ಜೀವನದ ಅಂತಃಕರಣದ ಸಂಯೋಜನೆಯ ಮನೋವೈಜ್ಞಾನಿಕ ದೃಷ್ಟಿ ಅಲ್ಲಿದೆ.

ವಿಧಾಯಕ ವಿಜ್ಞಾನದ ಬಗ್ಗೆಯೂ ವಿಚಾರಿಸಿದೆ. ಅಂತರ ರಾಷ್ಟ್ರೀಯ ವಿಜ್ಞಾನಸಂಸ್ಥೆಗಳು ವಿಜ್ಞಾನವನ್ನು ವಿಧಾಯಕ ಮಾರ್ಗದಿಂದ ಬೆಳೆಸಲಿ. ಅದರ ಬೆನ್ನಾಸರದಿಂದ ಜಗತ್ತು ಮೃತ್ಯುವನ್ನು ದಾಟಲಿ ಎಂಬ ಹವಣಿಕೆಯಿಂದ ವಿಜ್ಞಾನ ಪ್ರಗತಿಯನ್ನು ಆರಿಸಿದೆ. ಅಂತರ ರಾಷ್ಟ್ರೀಯ ವಿಜ್ಞಾನ ಪ್ರಚಾರ ಹಾಗು ಅದರ ಹವಣುಗಳಲ್ಲಿ ನಾವು ಗಮನವಿಟ್ಟಿದ್ದೇವೆ.

ಸಮ್ಮೇಲನವು ಶಾಂತಿ ದೀಕ್ಷಾ ಕೇಂದ್ರವಾಗಬೇಕು. ಅಂತರ ರಾಷ್ಟ್ರೀಯ ವೈಮನಸ್ಸು ವಿದ್ರೋಹಗಳನ್ನು ನೀಗುವ ಪಾವನ ತೀರ್ಥವಾಗಬೇಕು. ಜಗತ್ತಿನ ಆಕಾಂಕ್ಷೆ ಹಾಗಿದೆ.

ಬೆಳ್ಳಕ್ಕರಿಗತನವನ್ನು ನೀಗಿ ಜನ ಜೀವನದ ಮಟ್ಟನ್ನು ಎತ್ತರಿಸಿ ಹೃದಯದಲ್ಲಿ ನಾಳಿನ ಜಗತ್ತು ಒಂದು ಎಂಬ ಭಾವನೆಯನ್ನು ಬಿತ್ತರಿಸಬೇಕು. ವಿಧಾಯಕವಿಜ್ಞಾನವು ಜಗತ್ತಿನ ದೂರಿನ ಸಂಬಂಧವನ್ನು ಕಡಿದೊಗೆದು ಅದು ನೆರೆಹೊರೆಯದು ಎಂಬ ಅದ್ವೈಷ್ಟಾಭಾವವನ್ನು ಊರಬೇಕು, ಬೀರಬೇಕು. ಈ ದೃಷ್ಟಿಯಿಂದ ವಿಶ್ವ ಮೈತ್ರಿಗಾಗಿ ಅಂತರ ರಾಷ್ಟ್ರೀಯರಲ್ಲಿ ಸದಿಚ್ಛೆಯ ಕೊಡುಕೊಳೆಗಾಗಿ ಶಿಕ್ಷಣದ ಗುರಿಯನ್ನು ಹೂಡಿದ್ದೇವೆ. ವಿಶ್ವವಿದ್ಯಾಲಯಗಳು ಅಂತರ ರಾಷ್ಟ್ರೀಯ ಸಂಪರ್ಕವಿಡುವ ಬಗ್ಗೆ, ಹಾಗು ಈ ತೆರನಾದ ಹೃದಯಧರ್ಮ ಬೋಧಿಸುವ ಶಿಕ್ಷಣಾಲಯ ತೆರೆದು ತರಬೇತು ಕೊಡಬೇಕೆನ್ನುವೆ. ಅಂತರ ರಾಷ್ಟ್ರೀಯ ಜೀವನದಲ್ಲಿ ಸೌಹಾರ್ದ ಪ್ರತಿಷ್ಠಾಪನೆಯು ನಮ್ಮ ಗುರಿಯಾಗಿದೆ. ಅದಕ್ಕಾಗಿ ನಾವು ಹಾಕುವ ಯೋಜನೆ ಭದ್ರವಾದ ಕಟ್ಟಾಗುವದೆಂದು ಹಾರೈಸುವೆ. ಆರ್ಥಿಕ ಹಾಗು ಮನೋವೈಜ್ಞಾನಿಕ ದೃಷ್ಟಿಯಿಂದ, ಈ ಸಮಸ್ಯೆಗಳನ್ನು ಅಭ್ಯಸಿಸಿ ಹೆಚ್ಚುತ್ತಿರುವ ಜನಸಂಖ್ಯೆ, ಅದರಿಂದ ಅಂತರ ರಾಷ್ಟ್ರೀಯತೆಯ ಮೇಲೆ ಆಗುವ ಆಘಾತಗಳನ್ನು ಕುರಿತು ಸೂಕ್ಷ್ಮತೆಯಿಂದ ಅವಲೋಕನ ನಡೆದಿದೆ. ಜಾಗತಿಕ ಕ್ಷೇತ್ರದಲ್ಲಿ ಒಂದು ಶಾಶ್ವತ ಸಮ್ಮತವಾದ ಯೋಜನೆ ಬರಲಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಂತರ ರಾಷ್ಟ್ರೀಯ ಅರಿವಿಗೆ ಎ[illegible] ಬಗೆಯುವ ದುರ್ಮೈತ್ರಿ ಬೆಳಿಸುವ ಪಠ್ಯಪುಸ್ತಕಗಳ ಸಮುದ್ರಾಸ್ತ್ರವ್ಯಂತು'ಮಾಡಿ ರಾಷ್ಟ್ರೀಯ ಸಂಬಂಧವ[illegible] ಸ್ನೇಹತಂತುವಿನಿಂದ ಬಿಗಿಯುವ ಪಠ್ಯಪುಸ್ತಕಗಳ ಏ[illegible]ಡಿನ ಬಗ್ಗೆ ಸಮ್ಮೇಲನ ಆಸ್ಥೆ ತಾಳಿದೆ.

ಜಾಗತಿಕ ಪುನರ್ನಿರ್ಮಾಣದ ಕಾರ್ಯದತ್ತ ನ[illegible] ದೃಷ್ಟಿ ವಿಶಾಲವಾಗಿದೆ. ಇಂದು ಜಾಗತಿಕ ರಾಷ್ಟ್ರಗಳ ಸ[illegible] ಇದಾದರೂ ಕೇವಲ ಎಂಟು ದಶಲಕ್ಷ ಡಾಲರುಗಳ 'ವ[illegible] ಗಾಣಿ' ಯುಳ್ಳದ್ದಾಗಿದೆ. ಸಾಂಸ್ಕೃತಿಕ ಶೈಕ್ಷಣಿಕ ವೈ[illegible]ನಿಕ ಪರಿಹಾರವೆಂದು ಹಣತೆರಲು ಮನ ಮಾಡಿದರೆ [illegible]ರಾರು ಕೋಟಿ ಡಾಲರುಗಳಾದರೂ ಕಡಿಮೆಯೆ. ಅದಕ[illegible] ಸಮ್ಮೇಲನವು ಸಂಸ್ಥೆಗಳನ್ನೂ ಸರಕಾರಗಳನ್ನೂ ಪ್ರ[illegible]ಪಿಸುತ್ತದೆ. ನಾವು ಕೈಕೊಂಡ ಚಟುವಟಿಕೆಗಳು ನ[illegible] ಅಳವಿನೊಳಗಿನವೂ ಹಾಗು ವಿಶ್ವದ ಮೇಲೆ ಪ್ರಭಾವ ಬೀ[illegible]ವಂತಹವೂ ಇವೆ ಎಂಬುದು ಗಮನೀಯ. ಅಂತರ[illegible]ಷ್ಟ್ರೀಯ ಆಡಳಿತ ಹಾಗು ಸಂಸ್ಥೆಗಳು ಈ ರೀತಿಯಲ್ಲಿ ನ[illegible]ಗೊಡುವವೆಂದು ಅಭಯ ಪಡೆದಾಗಿದೆ.

ಶಾಂತಿ, ಹಾಗು ಸಮೃದ್ಧವ ಕುಟುಂಬ ಜೀವನ ಸ್ಥಾಪನೆಯಲ್ಲಿ ನಾವು ದೋಷಗಳನ್ನು ಜಯಿಸಲೇ (ವೈಜ್ಞಾನಿಕ, ಸಾಂಸ್ಕೃತಿಕ, ಶೈಕ್ಷಣಿಕ ವಿಷಯಗಳಲ್ಲಿ ಅಡೆತಡೆ) ವಾಚನಾಲಯ, ಬಾನುಲಿ, ಮುದ್ರಣಾಲಯ ಸರ್ವತೋಮುಖವಾದ ಉನ್ನತಿಯಲ್ಲಿ ಬರುವ ಅಡ್ಡಿಗಳ[illegible] ಕಳೆಯುವ ಹಾಗು ಅವುಗಳ ತಾಂತ್ರಿಕ ಸೌಲಭ್ಯದ [illegible]ವೃದ್ಧಿಯ ಕಡೆಗೂ ನಾವು ಗಮನಿಸಿದ್ದೇವೆ. ಅಂತರ[illegible]ಷ್ಟ್ರೀಯರಲ್ಲಿ ಮಧುರ ಸಂಬಂಧವನ್ನುಂಟುಮಾಡುವ[illegible]ರ್ತಾವಾಹಿಸಿ (ಸುದ್ದಿ ಬಿತ್ತರಣೆಯ ಸಂಸ್ಥೆಯ) ವಿಷ[illegible]ವಾಗಿ ನಮ್ಮ ಗುರಿ ನೇರವಾಗಿದೆ.

ಸುದ್ದಿ ಸಂಸ್ಥೆಗಳು ರಾಜಕೀಯ ಆರ್ಥಿಕ ಕಟ್ಟು ಕ[illegible]ಗಳನ್ನು ಮೀರಿ ನಿಲ್ಲಬೇಕು. ಎಲ್ಲ ರಾಷ್ಟ್ರಗಳಿಗೂ ಸ[illegible]ಯನ್ನು ಬಿತ್ತರಿಸುವ, ಎಳಕೊಳ್ಳುವದಕ್ಕೆ ಒಂದು ಸಂ[illegible]ದ ಸಂವಾಹನೆ ಬೇಕು. ಇಂದು ಅನುಕೂಲವಾದ ಬಾನ[illegible]

ಳು ಚಿತ್ರನಿರ್ಮಾಣ ಸಾಮಗ್ರಿ ಇಲ್ಲದ ದೇಶಗಳಿಗೆ ಅದನ್ನು ಲ್ಪಿಸಿ ಜಗತ್ತಿನ ಸುದೂರ ಭಾವನೆಯನ್ನು ಪೋಗಲಾಡಿಸಿ ಂತರ ರಾಷ್ಟ್ರೀಯ ಹೃದಯಗಳನ್ನು ಒಂದಕ್ಕೊಂದು ಂಟಿಸುವದರಲ್ಲಿ ಯತ್ನಿಸುತ್ತಿದ್ದೇನೆ.

ಇನ್ನೊಂದು ಮಹತ್ವದ ಮುಂದಡಿ ಎಂದರೆ ಶೈಕ್ಷಣಿಕ ಕ್ಷೇತ್ರದಲ್ಲಿ ನೂರು ದೇಶಗಳಲ್ಲಿರುವ ವಿವಿಧ ವಿಶ್ವವಿದ್ಯಾ ಯಗಳು, ಅವುಗಳಲ್ಲಿಯ ಭಿನ್ನ ಭಿನ್ನ ವಿಚಾರ ಲಹರಿ, ಗು ಧ್ಯೇಯ ಧೋರಣ ಮುಂತಾದವುಗಳು ತಿರುಕಳಿ ದ ನನ್ನ ಜಾಗತಿಕ ತಿರುಗಾಟದಲ್ಲಿ ಅನುಭವಕ್ಕೆ ಬಂದ ಂಗತಿಗಳಾಗಿವೆ. ವೈವಿಧ್ಯವಿದ್ದರೂ ಅದರ ಹೃದಯ ತ್ರವೊಂದಿರುಮುತೆಸಗುವದು ನಮ್ಮ ದೃಷ್ಟಿಯಾಗಿದೆ. ಬೇತಿ ಶಿಕ್ಷಣಾಲಯಗಳು ಯಶಸ್ವಿಯಾಗಿ ರೂಪುಗೊಂಡು ಸ ಮಾಡಬೇಕು.

ಯುವಕ ಸಂಘಟನೆಯ ತರಬೇತಿ ಶಿಕ್ಷಣಾಲಯಗಳನ್ನು ಯುವವರಿದ್ದೇವೆ.

ಶಿಕ್ಷಣರಂಗದಲ್ಲಿಯ ಪುರೋಗಾಮಿಯಾದ ಇನ್ನೊಂದು ಕಾರ ನಾವು ಮಾಡಿದ್ದೇವೆ. ಅದುವೇ ಮೂಲ ಶಿಕ್ಷಣ ಜನೆ. ಬೆಳ್ಳಕ್ಕರಿಗತನವನ್ನು ಕಳೆದು ಜನಜೀವನ ನ್ನು ಉದಾತ್ತ ಹಾಗು ಉನ್ನತ ಮಟ್ಟಲಿನಲ್ಲಿ ಸಾಗಿಸಲು ತ್ತಗಡೆ ಸಾಂಸ್ಕೃತಿಕ ಪ್ರಚಾರ, ಆರೋಗ್ಯಾಭಿವರ್ಧನೆ, ಹಾಗು ವೃತ್ತಿಗಳನ್ನು ಆರ್ಥಿಕ ಸಾಮಾಜಿಕ ಅನುಕೂಲ್ಯ ಗಿ ಬಳಸಿಕೊಳ್ಳುವದು, ಈ ರೀತಿಯನ್ನು ನಾವು ಕಲಿಯ ಕಾಗಿದೆ. ಇಂಥ ವಿಧಾನವನ್ನು ನಾವು ಅನುಸಂಧಿಸ ಕಾಗಿದೆ. ಅಂದರೆ ಸಹಾನುಭೂತಿಯ ಆವಿಷ್ಕರಣ ಗುವದು. ಅದಕ್ಕಾಗಿ ಬೇರೆ ಬೇರೆ ಯೋಜನೆ, ಹೂಟ ಗಳನ್ನೂ ಆಹ್ವಾನಿಸುತ್ತೇವೆ. ಸಮಂಜಸವಾದ ಯೋ ನೆ ವಾರಿಗಳಿಗೆ ಸ್ವಾಗತವೂ ಇದೆ. ಇಲ್ಲಿ ನಾವು ನಾಗಾ ಟದಿಂದ ಸಾಗಬಯಸಿದ್ದೇವೆ. ಆಫ್ರಿಕೆ, ಚೀನಾ, ಮೇರಿಕೆ ಮೊದಲಾದ ದೇಶಗಳಲ್ಲಿ ವಿಚಾರಕ್ಕೆ ಬಿನ್ನವಿಸಿದೆ. ಗ್ರಾಮಿಕ ಉತ್ಪಾದನೆಯ ವಿಷಯದಲ್ಲಿ ಜಗತ್ತಿನಲ್ಲಿಯ ಷ್ಟಗಳ ಸೂಚನೆ ಸಲಹೆ ಕೇಳಿದೆ. ಅದು ಜಗತ್ತಿನ ಜನ ಯ ಹೃದಯದಲ್ಲಿಯ ವೈಷಮ್ಯ ನೀಗಿಸಲು ಬಲವಾದ ಂಧನೆಯಾಗಿದೆ. ಬೇರೆ ಬೇರೆ ಸರಕಾರಗಳಿಂದ ಸಲಹೆ ಸೂಚನೆಗಳು ಬಂದಲ್ಲಿ ಆದರದಿಂದ ಸ್ವೀಕರಿಸಲಿಚ್ಛೇವೆ. ನುಗೆ ಒಪ್ಪಿಗೆಯಾದ ಜಾಗತಿಕ ಉತ್ಕರ್ಷಕ್ಕೆ ಅನುಗುಣ ಂಥ ಯೋಜನೆಯನ್ನು ನಾವು ಬಿತ್ತರಿಸುವೆವು.

ಜಗತ್ತಿನಲ್ಲಿ ಸಾಕ್ಷರದಿಂದ ಹೃದಯಸೇತುವೆ ನಿರ್ಮಿಸು ವದು. ಸಾಹಿತ್ಯವಿಮರ್ಶೆಗಳ ವಿನಿಮಯ ಮಾಡುವ ಒಂದು ಕೇಂದ್ರದ ವಿಚಾರ ಮಾಡಲಿದೆ. ವರ್ಣ ಪುನರ್ನಿರ್ಮಾಣದ ತಾಂತ್ರಿಕ ಸೌಲಭ್ಯವು ಬೇರೆ ಬೇರೆ ದೇಶಕಾಲಗಳ ಕಲೆಯ ಕೈವಾರಿಯಾಗಿ ಬರುವುದು. ಸಂಗೀತಕ್ಕೆ 'ಗ್ರಾಮ ಫೋನೋ' ಯಂತ್ರವಿದ್ದ ಹಾಗೆ ಕಲೆಗೆ ವರ್ಣ ಪುನರ್ನಿ ರ್ಮಿತಿ.

ಜಗತ್ತಿಗೆ ಸಾಂಸ್ಕೃತಿಕ ಹಾಗು ವೈಜ್ಞಾನಿಕ ಭಾವನೆಯ ಐತಿಹಾಸಿಕ ಪರಂಪರೆಯನ್ನೊದವಿಸುವದು ನಮ್ಮ ಬೇರೊಂ ದು ಕಾರ್ಯವಾಗಿದೆ. ಜನತೆ ಮನ್ವಂತರಗಳ ಇತಿಹಾಸ ವನ್ನು ರಾಜಕೀಯ ಹಾಗು ಸೈನಿಕ ದೃಷ್ಟಿಕೋನದಿಂದ ನೋಡದೆ ಸಾಂಸ್ಕೃತಿಕ ವೈಜ್ಞಾನಿಕ ಬಗೆಯಿಂದ ಕಾಣಬೇಕು ಜಗತ್ತಿನ ವಿವಿಧ ಸಂಸ್ಕೃತಿಯಲ್ಲಿ ಬೆಳೆದ ಜನರ ಸಂಪರ್ಕ ದಿಂದ ಸತ್ಯ ಸಂಸ್ಕೃತಿಯ ಅರಿವಾಗಲು ಇಂಥ ಯೋಜನೆ ನೆರವಾಗುವದೆಂದು ನಾನು ಬಗೆಯುತ್ತೇನೆ.

ಗ್ರಂಥಸಂಗ್ರಹದಲ್ಲಿ ಆರ್ಥಿಕ ತೊಂದರೆ ಬರಬಾರದೆಂದು ನಾವೊಂದು 'ಪುಸ್ತಕ ಪರಿಚಯ ಪತ್ರ' ಯೋಜನೆ ಕೈಕೊಂ ಡಿದ್ದೇವೆ.

ಈ ವಿಷಯಗಳಿಗೆಲ್ಲ ಸಂಬಂಧಿಸಿದ ಅಂಶಗಳಲ್ಲಿ ನೆರವಾ ಗಲು ಒಂದು ರಾಷ್ಟ್ರೀಯ ಸಮಿತಿ ಸ್ಥಾಪಿಸಲು ಎಲ್ಲ ಸದಸ್ಯ ರಾಷ್ಟ್ರಗಳಿಗೆ ಆಮಂತ್ರಣವಿದೆ ಎಂಬುದು ಘಟನೆಯಲ್ಲಿ ಕಾಣಿಸಿದೆ. ಘಟನಾತ್ಮಕ ವ್ಯವಸ್ಥೆಗನುಗುಣವಾಗಿ ಇತರ ರಾಷ್ಟ್ರಗಳೆಲ್ಲ ವರ್ತಿಸಬಹುದಾಗಿ ಭಾವಿಸುತ್ತೇನೆ.

ಇಂಥ ಅಸಿಧಾರಾ ವ್ರತದಲ್ಲಿ ಕಾರ್ಯ ಪ್ರವೃತ್ತವಾದ ಸಂಸ್ಥೆ ವಿಶ್ವಾನುಗಾಮಿಯಾಗಿ, ವಿಶ್ವವ್ಯಾಪಕವಾಗಿ ಕೆಲಸ ಮಾಡುವದು. ಅಂತರ ರಾಷ್ಟ್ರೀಯ ಬಾಂಧವ್ಯವನ್ನು ರಾಜಕೀಯ ದೃಷ್ಟಿಯಿಂದ ಅಲಿಪ್ತವಾಗಿಯೂ ಭದ್ರವಾ ಗಿಯೂ ಇರುವಂತೆ ಎಸಗಬೇಕು. ರಾಜಕಾರಣದಿಂದ ವಿಶ್ವಶಾಂತಿಗೆ ವಿರೋಧ ಬಂದಾಗ ಅದನ್ನು ಪ್ರತಿಭಟಿಸಿ ಶಾಂತಿ ಹಾಗು ಸೌಹಾರ್ದಗಳನ್ನು ತಾಳುವಂತೆ ಕಾರ್ಯ ಎಸಗಬೇಕು. ರಾಜಕೀಯ ಮತಭೇದಗಳೇನೇ ಇದ್ದರೂ ಏಕ ಜಗತ್ತಿನ ನಿರ್ಮಿತಿಯನ್ನು ನಾವು ಸಹಜವಾಗಿ ಸಾಧಿಸ ಬಲ್ಲ ಆತ್ಮವಿಶ್ವಾಸ ನಮಗಿಂದು ಸಮ್ಮೇಲನದ ಅನುಭವದ ಪಾಠವಾಗಿದೆ.

ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಹೊಣೆ

ಕುಮಾರಿ ಕಮಲಾ ಬಾಜುರೊಳಕರ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ.

ನಾವು ಭಾರತ ಇತಿಹಾಸದಲ್ಲಿ ೧೫೦ ವರುಷಗಳ ದುರ್ದಮ್ಯವಾದ ಗುಲಾಮಗಿರಿಯ ಅಧ್ಯಾಯವನ್ನು ಮುಚ್ಚಿ ಈಗ ಒಂದು ವರುಷದಿಂದ ಸ್ವಾತಂತ್ರ್ಯ ಸುಖದ ಹೊಸ ಅಧ್ಯಾಯವನ್ನು ತೆರೆದಿದ್ದೇವೆ. ಈ ಸುಖದಲ್ಲಿಯೂ ದುಃಖದ ಕಲೆಗಳು ಹಲವಿವೆ. ಅವು ಬಾಪೂಜಿಯ ಕೊಲೆ, ಪಂಜಾಬದ ರಕ್ತಪಾತ, ಕಾಶ್ಮೀರದ ಹತ್ಯಾಕಾಂಡ, ಹೈದರಾಬಾದದ ಅತ್ಯಾಚಾರ ಆದರೂ ಇವನ್ನೆಲ್ಲ ದಾಟುತ್ತ ಈಗ ಮುನ್ನಡೆದಿದ್ದೇವೆ. ಅಲ್ಲೇನಿದೆಯೋ ಯಾರು ಬಲ್ಲರು? ಅಂತೂ ನಾವಿಂದು ಸ್ವತಂತ್ರ ಭಾರತೀಯರು. ಸ್ವತಂತ್ರ ರಾಷ್ಟ್ರಗಳ ಮಾಲಿಕೆಯಲ್ಲಿ ಸೇರಿಕೊಂಡವರು.

ಸ್ವಾತಂತ್ರ್ಯ ಸಂಪಾದನೆಯ ಕಾರ್ಯದಲ್ಲಿ ನಮ್ಮ ರಾಷ್ಟ್ರದ ಮುಂದಾಳುಗಳು ಪಟ್ಟ ಕಷ್ಟ ಅಷ್ಟಿಷ್ಟಲ್ಲ! ಸಾಮ್ರಾಜ್ಯ ಶಾಹಿಯ ಉಪಟಳವನ್ನು ಸಹಿಸಿ ಎಷ್ಟೋ ರಾಷ್ಟ್ರದ ಮುಖಂಡರನ್ನು ಬಲಿಗೊಟ್ಟು ನಾವಿಂದು ಅವರ ಬಲದಿಂದ ಪರ ರಾಷ್ಟ್ರಗಳ ಸರಿಸಮಾನರಾಗಿ ಮೆರೆಯುತಲಿದ್ದೇವೆ. ವಿರಾಮಕ್ಕಾಗಿ ಸ್ವಲ್ಪ ಕೂಡ್ರಬೇಕೆಂದರೆ ಭಾರತದ ಎದುರು ಮತ್ತೆ ಬಂದು ನಿಂತಿವೆ ಕೆಲವು ಭೀಕರ ಪ್ರಶ್ನೆಗಳು. ಇಂಥದರಲ್ಲಿಯೂ ನಾವು ಒಂದನ್ನು ನೋಡಿ ನಲಿಯಬೇಕಾಗಿದೆ. ಒಂದನ್ನು ನೋಡಿ ಉತ್ಸಾಹಪಡಬೇಕಾಗಿದೆ. ಅದು ನಮ್ಮ ಇತಿಹಾಸದಲ್ಲಿ ಸ್ವರ್ಣಾಕ್ಷರದಿಂದ ಕೆತ್ತಲ್ಪಟ್ಟ ಸ್ವಾತಂತ್ರ್ಯದ ಸುಖ.

ಇಂದು ನಮ್ಮ ಭಾರತದ ಸ್ಥಿತಿ ನಾವಿನ ನಡುವೆ ಹುಟ್ಟು ಇದ್ದಂತೆ. ಭಾರತವು ಸ್ವತಂತ್ರವಾದ ನಂತರ ಅದರ ಸ್ಥಿತಿ ಹೀಗಾದೀತೆಂದು ಯಾರೂ ನೆನೆದಿರಲಿಲ್ಲ. ಅಂತೇ ಎಷ್ಟೋ ಜನ ಕಷ್ಟಪಟ್ಟು ಇದನ್ನು ದೊರಕಿಸಿದರು. ಸ್ವಾತಂತ್ರ್ಯ ಸಂಪಾದನೆಯ ಕೆಲಸದಲ್ಲಿ ಪುರುಷರು ಎಷ್ಟು ಆಸ್ಥೆ ವಹಿಸಿ ದುಡಿದರೋ ಅಷ್ಟೇ ಆಸ್ಥೆಯಿಂದ ಸ್ತ್ರೀಯರೂ ಹೆಣಗಿದ್ದಾರೆ. ಅಡುಗೆಯ ಮನೆಯಲ್ಲಿ ಒಂದು ಕರಿಯ ಬಾವುಗ ಬಂದರೆ ಅಂಜಿ ಚಿಟ್ಟನೇ ಚೀರುವ ಮಹಾಧೀರೆಯರು ಅಂದು ಸಾಮ್ರಾಜ್ಯ ಶಾಹಿಯ ಒನಕೆ ಪೆಟ್ಟಿಗೆ ತಲೆಕೊಟ್ಟರು. ಪುರುಷರ ಹೆಜ್ಜೆಯೊಡನೆ ಸ್ವಾತಂತ್ರ್ಯದ ಹೆಜ್ಜೆ ಹಾಕಿ ಮುನ್ನಡೆದರು. ಇದೆಲ್ಲವೂ ಇತ್ತೀಚೆಗೆ ಗಾಂಧಿ-ಯುಗದಲ್ಲಾದ ಮಾರ್ಪಾ ಬಾಪೂಜಿಯ ದಾಂಡೀಯಾತ್ರೆ, ಉಪ್ಪಿನ ಸತ್ಯಾ 'ಚಲೇಜಾವ' ಚಳುವಳಿಯಲ್ಲಿ ಭಾಗವಹಿಸಿದರು. ರಕ್ತ ರುಜು ಹಾಕಿತು ಕಾಪ್ಟನ್ ಲಕ್ಷ್ಮಿಯ ಆಜಾದ ಇದೆಲ್ಲ ಒಂದು ಜಾಗೃತಿಯ ಕಾಲ.

ಬಾಪೂಜಿ ಒಂದೆಡೆಗೆ ಅಂದಿದ್ದಾರೆ "ವಿಶ್ವದ ಎಲ್ಲ ದ ಗಳಲ್ಲಿ ಹೆಂಗಸರದೇ ಘೋರವಾದುದು. ಗಂಡು ಶಕ್ತಿ ದಾಳ ಆಡುತ್ತಿದ್ದಾನೆ. ಹೆಣ್ಣು ಸೋತು ಸೋತು ಸೊ ತನ್ನ ಪಾಲಿಗೆ ಸರಿ ಎಂದು ತಿಳಿದಿದ್ದಾಳೆ. ಇದು ನ ದೌರ್ಜನ್ಯದ ಹೊರೆ. ಈ ಪಾಪ ಪರ್ವತವನ್ನು ಹೊ ನಾವೆಷ್ಟು ಮುಂದೆ ನಡೆದೇವು? ಈಗ ಆಕೆಗೆ ತನ್ನ ಪಾ ಅರಿವು ಆಗಿದೆ."

ನಿಜವಾಗಿಯೂ ಈಗ ಆಕೆಗೆ ತನ್ನ ಪಾಡಿನ ಅರಿವಾ ಆಕೆ ಇನ್ನು ದಾಸ್ಯದಲ್ಲಿರಲು ಒಪ್ಪಳು. ಎಲ್ಲ ರಂಗ ಲ್ಲಿಯೂ ಅವಳು ಮುಂದ್ಹಾಯ್ದು ಕೆಲಸ ಮಾಡಬೇಕೆ ತ್ತಾಳೆ. ಇನ್ನು ಅವಳನ್ನು ಬಂಧನದಲ್ಲಿಡುವುದು ಸರಿಯ ಹೆಣ್ಣಿಗೂ ಮನಸ್ಸಿದೆ, ಬುದ್ಧಿಯಿದೆ, ಕೆಲಸ ಮಾಡಬೇ ಬ ಕುತೂಹಲವೂ ಇದೆ. ಹೀಗಿದ್ದು ಅವಳ ಮೇ ಅಷ್ಟು ಬಲಾತ್ಕಾರ?

ಗಂಡು ಹೆಣ್ಣು ಪರಸ್ಪರ ಪೂರಕ ಸೃಷ್ಟಿ. ಒಬ್ಬರ ನೆ ಇನೊಬ್ಬರಿಗೆ ಬೇಕು. ಗಂಡು ಉರಿ, ಹೆಣ್ಣು ಬೆಳ ಉರಿಯಿಂದ ಬೆಳಕನ್ನೂ ಬೆಳಕಿನಿಂದ ಉರಿಯನ್ನೂ ಬೇ ಡಿಸಲು ಬಾರದು. ಎರಡೂ ಸಮಾಜಕ್ಕೆ ಅಷ್ಟೇ ಉ ಯುಕ್ತ. ಇನ್ನೊಂದೆಡೆ ಸ್ತ್ರೀ ಅಹಿಂಸೆಯ ಮೂ ಶಾಂತಿದಾಯಿನಿ, ಸ್ಥೈರ್ಯ ನಿಧಿ, ಚೇತನದ ಪ್ರತಿ ಗಂಡಿನ ತಾಯಾದ ಹೆಣ್ಣಿನ ತಾಕ್ಕಿಗೆ ಮಿತಿಯೇ? ಅಂ ಈ ಗಾಂಧಿ-ಯುಗದಲ್ಲಿ ಆಕೆಗೆ ಅಷ್ಟೊಂದು ಮಹತ್ವ.

ಹಿಂದಾದರೂ ಭಾರತ ಸ್ತ್ರೀಯರ ಪ್ರತಿಭೆಯೇನು ಕಡಿ ಇದ್ದಿಲ್ಲ. ಭಾರತ ಸಂಸ್ಕೃತಿಯಲ್ಲಿ ಸ್ತ್ರೀಯರ ಚಾ ತೆಯೂ ಒಂದು. ಮಾನವೇ ಧನವಾದ ನಮ್ಮ ದೇಶದ ಮಾನಕ್ಕಾಗಿ, ದೇಶಕ್ಕಾಗಿ ಪ್ರಾಣ ಕೊಟ್ಟ ಮತ್ತು ಸಂ ಸಮಯದಲ್ಲಿ ಚತುರತೆಯಿಂದ ತಮ್ಮ ಮಾನವನ್ನು ಉ

ಡ ಹಾಗು ದೇಶವನ್ನು ರಕ್ಷಿಸಿದ ಸ್ತ್ರೀ[illegible]ಯರು, ರಲ್ಲಿ ಸೀತೆ, ದ್ರೌಪದಿ, ಅಹಲ್ಯಾಬಾಯಿ, ಚೆಕಾಪಡಿ ಮ್ಮ, ಕಿತ್ತೂರ ಚೆನ್ನಮ್ಮ, ಮುಂತಾದವರು.

ದರೆ ಇಂದಿನ ಸ್ತ್ರೀಯರು ಹಿಂದಿನ ಯಾವ ಸೀತೆ, ಪದಿಯರಿಗಿಂತ ಕಡಿಮೆ ಇಲ್ಲ. ಅವರಿಗಿಂತಲೂ ಒಂದು ಜ್ಞ ಮುಂದೆ ಇಟ್ಟಿದ್ದಾರೆ. ಸೀತೆ ಒಬ್ಬ ರಾವಣನನ್ನು, ದ್ರೌಪದಿ ಒಬ್ಬ ದುರ್ಯೋಧನನನ್ನು ತಂದು ಧರ್ಮ ಸಂಗವನ್ನಷ್ಟು ಬೆಳಗಿದ್ದರೆ, ಇಂದಿನ ಸ್ತ್ರೀಯರು ರಾವಣ ಸ್ವರೂಪಿಯಾದ ಆಳರಸನನ್ನೆದುರಿಸಿ ಧಾರ್ಮಿಕ ಸಾಮಾ ಜಿಕ ರಾಜಕೀಯ ರಂಗಗಳಲ್ಲಿ ಮಿನುಗುತ್ತಿದ್ದಾರೆ. ಸಾಹಿತ್ಯ ಗದಲ್ಲಿ ಸರೋಜಿನಿದೇವಿ ತನ್ನ ತಂತಿ ನುಡಿಸಿದ್ದಾಳೆ. ಯಲಕ್ಷ್ಮಿ ರಶಿಯದ ವರೆಗೆ ಹೊಡೆದಿದ್ದಾಳೆ ತನ್ನ ಯಭೇರಿ. ಕ್ಯಾಪ್ಟನ್ ಲಕ್ಷ್ಮಿ ಸಿಂಹಿಣಿಯಂತೆ ಗರ್ಜಿಸಿ ದ್ದಾಳೆ. ಅಲ್ಲದೆ ಕಮಲಾದೇವಿ ನೆಹರು, ಸುಚೇತಾ ಪಲಾನಿ, ರಾಜಕುಮಾರಿ ಅಮೃತಕೌರ, ಸುಶೀಲಾ ಯರ, ಅರುಣಾ ಅಸಫಅಲಿ, ಲೀಲಾ ಮುನ್ಸಿ ಮುಂ ದವರೆಲ್ಲ ರಾಜಕೀಯ ರಂಗವನ್ನು ದಂಗುಗೊಳಿಸಿದ್ದಾರೆ ಂದು ರಾಜಕೀಯ ರಂಗವೇ, ಒಂದು ಸಾ ಮಾ ಜಿ ಕ ತ್ರವೇ, ಒಂದು ಧಾರ್ಮಿಕ ಕ್ಷೇತ್ರವೇ, ಒಂದು ಶಿಕ್ಷಣ ತ್ರವೇ ಎಲ್ಲದರಲ್ಲಿಯೂ ಅವರ ಕೈವಾಡ ಮೆರೆಯುತ್ತಿದೆ. ದರೂ ಎಷ್ಟೋ ಕಡೆ ಇಂಥ ಸುಧಾರಣೆ ಆಗದೆ ಉಳಿದದ್ದು ಖಾದಕರ. ಇದು ನಮ್ಮ ಶಿಕ್ಷಣ ಪದ್ಧತಿಯ ದೋಷ. ಗ್ಲೀಷು ಶಿಕ್ಷಣ ಎರಡು ವರ್ಗಗಳನ್ನು ಜನರಲ್ಲಿ ಮಾಡಿ ; ಒಂದು ಕಲಿತ ವರ್ಗ, ಇನ್ನೊಂದು ಕಲಿಯದ್ದು. ಗಾಗಿ ಕಲಿತ, ಕಲಿಯದ ಎರಡೂ ವರ್ಗಗಳ ಜನರಿಗೆ ಬಂಧ ಬೆಳೆಯದೆ ಅವರು ಬೇರೆ ಬೇರೆ ಆಗಿ ನಡುವಿನ ಸ್ಥಾ ವು ಬರಿದೇ ಬರಿದಾಗಿದೆ. ಹೀಗಾಗಬಾರದೆಂದೇ ಈಗಿನ ರಾ ಯ ಶಿಕ್ಷಣದ ಮೇಲು ಕೀಳನ್ನು ತೆಗೆದೊಗೆದು ಎಲ್ಲ ನ್ನು ಒಂದಾಗಿಸಲು ನಿರ್ಧರಿಸಿದೆ.

ಇನ್ನು ನಮ್ಮ ಕಲಿತ ಹೆಣ್ಣುಮಕ್ಕಳು ಹೊಗೆಬಂಡಿಯ ಮುಂದಿನ ಎಂಜಿನು ಇದ್ದಂತೆ ಇರಬೇಕು. ಎಂಜಿನು ನಗೆ ಹೊಂದಿದ, ತನ್ನನ್ನು ಅವಲಂಬಿಸಿದ ಡಬ್ಬಿಗಳನ್ನು ಳಿತಪ್ಪದಂತೆ ಎಳೆದುಕೊಂಡು ಹೋಗುವಂತೆ, ಸುಶಿಕ್ಷಿತ ಸ್ತ್ರೀಯರು ತಮ್ಮ ಅಶಿಕ್ಷಿತ ಸೋದರಿಯರನ್ನು ಒಳ್ಳೆಯ ದಿಗೆ ತರುವದು ಅವರ ಆದ್ಯ ಮತ್ತು ಪವಿತ್ರ ಕರ್ತವ್ಯ

ಇದು ವೈಜ್ಞಾನಿಕ ಯುಗ. ಪ್ರತಿಯೊಬ್ಬನೂ ಜ್ಞಾನ ಸಂಪಾದನೆಗಾಗಿ ತನಗೆ ಶಕ್ಯವಿದ್ದಷ್ಟು ಓದಲೇ ಬೇಕು. ಇದು ಸ್ತ್ರೀಯರಿಗೂ ಅನ್ವಯಿಸುತ್ತದೆ. ಹಾಗೆ ಅವರು ಓದುತ್ತಲೂ ಇದ್ದಾರೆ. ಇದಕ್ಕೆ ಈಗ ಒಳ್ಳೇ ಏರಿಕೆಯ ಸ್ಥಿತಿಯಲ್ಲಿದ್ದ ಸ್ತ್ರೀ ಶಿಕ್ಷಣವೇ ಸಾಕ್ಷಿ. ಸದ್ಯ ಹೆಚ್ಚು ಮಹತ್ವವಿದೆ ವಿದ್ಯೆಗೆ. ಅದರಂತೆ ಹೆಚ್ಚು ಜನ ಅದರ ಸಂಪಾದನೆಗೆ ಓದುತ್ತಲೂ ಇದ್ದಾರೆ ಆದರೆ ಈಗಿನ ಈ ಶಿಕ್ಷಣ ಅಷ್ಟೇನೂ ಸ್ತ್ರೀಯರಿಗೆ ಉಪಯುಕ್ತವಿಲ್ಲ. ಹೆಂಗಸರಿಗೆ ಗಂಡಸರಿಗಿಂತ ಓದಿನ ಅವಶ್ಯ ಹೆಚ್ಚು. ಆದರೆ ಅದು ಗಂಡಸರಿಗಿಂತ ಭಿನ್ನವಾಗಿರಬೇಕು. ಯಾಕಂದರೆ ಗಂಡಸರ ಹೆಂಗಸರ ಕಾರ್ಯಕ್ಷೇತ್ರಗಳೇ ಬೇರೆ. ಆದ್ದರಿಂದ ಅವರವರ ಶಿಕ್ಷಣ ಅವರ ಕಾರ್ಯಗಳಿಗನುಗುಣವಾಗಿರಬೇಕು. ಮುಖ್ಯ ಸ್ತ್ರೀಯರಿಗೆ ಓದು, ಬರೆಹ, ಹೊಲಿಗೆ, ಗೃಹ ವಿಜ್ಞಾನ, ಶಿಶು ಸಂಗೋಪನ, ಆರೋಗ್ಯ ವಿಜ್ಞಾನ, ತಕ ಮಟ್ಟಿಗೆ ಲೆಕ್ಕ ಇಷ್ಟು ಬಂದರೆ ಸಾಕು. ಇದಲ್ಲದೆ ಈಗಿನ ಶಿಕ್ಷಣದಲ್ಲಿ ಬಹುಮಟ್ಟಿಗೆ ಕಡಿಮೆ ಇದ್ದ ಆತ್ಮರಕ್ಷಣೆಗಾಗಿ ಸ್ವಲ್ಪ ಸೈನಿಕ ಶಿಕ್ಷಣವನ್ನಷ್ಟು ಹೇಳಿಕೊಟ್ಟರಾಯಿತು ಅಂದರೆ ಸ್ತ್ರೀಯರು ತಮ್ಮ ಕಾಲಮೇಲೆ ತಾವು ನಿಲ್ಲಲು ದುರ್ಧರ ಪ್ರಸಂಗಗಳನ್ನು ಎದುರಿಸಲು ಶಕ್ತರಾಗುವರು.

ಈಗ ಐವತ್ತು ವರುಷಗಳ ಹಿಂದಿನ ಸ್ಥಿತಿಗೂ ಈಗಿನ ಸ್ಥಿತಿಗೂ ಅಂತರ ಬಹಳವಿದೆ. ಸ್ತ್ರೀಯರಲ್ಲಿ ಬಹಳ ಸುಧಾರಣೆ ಆಗಿದೆ. ಆದರೂ ಇನ್ನೂ ಆಗತಕ್ಕಷ್ಟು ಆಗಿಲ್ಲ. ಸ್ತ್ರೀಯರ ಉದ್ಧಾರಕ್ಕಾಗಿ, ಸುಧಾರಣೆಗಾಗಿ ಎಲ್ಲರೂ ಮನಸ್ಸು ಮಾಡಿದರೆ ಅದು ಬೇಗನೆ ಆದೀತು. ಹೀಗಾಗಬೇಕಾದರೆ ನಮ್ಮಲ್ಲಿರುವ ಸಂಕೋಚಭಾವನೆ ದೂರಾಗಬೇಕು. ನಮ್ಮ ಸಂಶಯ ದೃಷ್ಟಿ ನಶಿಸಬೇಕು. ಮನಸ್ಸು ಪವಿತ್ರವಾಗಬೇಕು. ಅಂದರೆ ನಾವು ಕಣ್ಣು ತೆರೆದೇವು. ಮುಂದೆ ಬಂದೇವು.

ಒಂದೆಡೆ ಕವಿ ರವೀಂದ್ರರು "ಸ್ತ್ರೀಯರೆಂದರೆ ಭೋಗ್ಯ ಅಥವಾ ತ್ಯಾಜ್ಯ ವಸ್ತುವಲ್ಲ. ಆಕೆಯನ್ನು ದೇವತೆಯೆಂದು ಪೂಜಿಸಬೇಕಾಗಿಲ್ಲ. ಅಬಲೆಯೆಂದು ಆಕೆಯ ಮೇಲೆ ದಯ ನೀಡಬೇಕಾಗಿಲ್ಲ. ಆಕೆಯೂ ಪುರುಷರ ಸಮಾನ ಸ್ಕಂದಳು. ಪುರುಷನ ಕಷ್ಟಸುಖಗಳಲ್ಲಿ ನಲಿವು ಬೆಳಕುಗಳನ್ನು ನೀಡಬಲ್ಲಳು" ಎಂದಿದ್ದಾರೆ. ನಿಜವಾಗಿಯೂ ಈ ಮಾತು ಇಬ್ಬರ ದೃಷ್ಟಿಯಿಂದಲೂ ಅಷ್ಟೇ ಒಳ್ಳೆಯದು. ಒಂದು ರಥ

ನಡೆಯಲು ಎರಡು ಚಕ್ರಗಳ ಅಗತ್ಯ ಹೇಗೋ ಹಾಗೆ ಸಂಸಾರಕ್ಕಾಗಲಿ, ಸಮಾಜಕ್ಕಾಗಲಿ ಸ್ತ್ರೀಪುರುಷರ ಅಗತ್ಯವು ಅಷ್ಟೇ ಪ್ರಮಾಣದಲ್ಲಿದೆ. ಈಗಿನ ಪರಿಸ್ಥಿತಿಯಲ್ಲಿ ಇಬ್ಬರ ಮೇಲೆ ಅಷ್ಟೇ ಹೊಣೆ ಬಿದ್ದಿದೆ. ಆದರೆ ಸದ್ಯಕ್ಕೆ ಪುರುಷರಿಗಿಂತ ಸ್ತ್ರೀಯರ ಹೊಣೆಗಳು ಹೆಚ್ಚು. ಯಾಕೆಂದರೆ ಆತನು ಯಾವಾಗಲೂ ಹೊರಗಿನ ಕಾರ್ಯಭಾರವನ್ನು ನಡೆಸತಕ್ಕವನು. ಈಕೆಯಾದರೋ ಹೊರಗೆ, ಒಳಗೆ ಎಲ್ಲ ಕಡೆಗೆ ತನ್ನ ನೋಟ ಬೀರಬೇಕಾಗಿದೆ.

ಹೊರಗೆ ಸಮಾಜಕ್ಕೆ ನೆರವಾಗಬೇಕಾಗಿದೆ. ಒಳಗೆ ಗೃಹ ಕೃತ್ಯಗಳನ್ನು ಮಾಡಿ ಗೃಹಿಣಿಯೆನ್ನಿಸಿಕೊಳ್ಳಬೇಕಾಗಿದೆ ಮನೆತನದ ಸ್ವಚ್ಛತೆಯನ್ನು ಕಾಯಬೇಕಾಗಿದೆ. ಅತಿವ್ಯಯವನ್ನು ತಡೆದು ಮಿತವ್ಯಯದಿಂದಿರಬೇಕಾಗಿದೆ. ಅನಾಥರಿಗೆ ಅನ್ನ ಬಟ್ಟೆ ಕೊಟ್ಟು ಅನ್ನಪೂರ್ಣೆಯಾಗಬೇಕಾಗಿದೆ ಮಗುವನ್ನು ಜೋಪಾನ ಮಾಡಿ ತಾಯಿಯಾಗಬೇಕಾಗಿದೆ. ಮಗುವಿನ ಮನಸ್ಸಿನಲ್ಲಿ "ನಾಡಿಗಾಗಿ ನಾನು, ನುಡಿಗಾಗಿ ನನ್ನ ಬಾಳು" ಎಂಬ ಮಾತನ್ನು ಬಿಂಬಿಸುವ ಮಂತ್ರೋಪದೇಶಕಳಾಗಬೇಕಾಗಿದೆ. ಮತ್ತು ಮಗುವಿನಲ್ಲಿ ದೇಶಪ್ರೇಮವನ್ನು ಹುಟ್ಟಿಸಿ ವೀರಮಾತೆಯಾಗಬೇಕಾಗಿದೆ. ನಾಡಗುಡಿಯಲು ಮಗುವನ್ನು ಪ್ರೇರಿಸಿ ಸೇನಾನಿಯಾಗಬೇಕಾಗಿ ಮಗುವಿನ ನಡೆನುಡಿ ತಿದ್ದಿ ಇಂದಿನ ಬಾಲಕನನ್ನು ನಾಳೆ ನಾಗರೀಕನನ್ನು, ನಾಡದಿನ ಬಾಲಕನನ್ನು ಮಾಡಿ ಪರಮಗುರು ಆಗಬೇಕಾಗಿದೆ.

ಸ್ವತಂತ್ರ ಭಾರತದಲ್ಲಿ ಸ್ತ್ರೀಯ ಹೊಣೆ ಒಂದೇ! ಎರಡೆ ಅನೇಕವಿವೆ. ಒಂದೊಂದು ಹೊಣೆಯೂ ಒಂದೊಂದು ಪರೀಕ್ಷೆ ಇದ್ದಂತೆ ಈ ಎಲ್ಲ ಪರೀಕ್ಷೆಗಳಲ್ಲಿ ಆಕೆ ತೇರ್ಗಡೆ ಹೊಂದಲೇ ಬೇಕು. ಮತ್ತು ಹೊಂದಲು ಯತ್ನಿಸಬೇಕು. ಅಂದರೆ ನವಭಾರತದ ಸ್ತ್ರೀಯರ ನವೀನ ಕರ್ತವ್ಯವು ಭಾರತಕ್ಕೆ ಬಾವು ಕೊಟ್ಟ ಸ್ವಾತಂತ್ರ್ಯಸ್ವರ್ಣಕ್ಕೆ ಕೊಟ್ಟಂತಾದೀತು.

ಕ್ಯಾಪ್ಟನ್ ಲಕ್ಷ್ಮೀಬಾಯಿ

ಏಳಿ ಜಾತಿ ಐಕ್ಯಕೆ

(ಕೂಚು ಗೀತೆ)

ಸಾಗಿರೀಗ ಮುಂದೆ । ಜಾತಿ ಐಕ್ಯಕೆಂದೆ ।
ಬೇಗ ನೀಗಿ ಮೇಲು ಕೀಳು । ಹಿಡಿರಿ ಸಮತೆಯೊಂದೆ ।
ಸಡಿರಿ ಸುಖವನೊಂದೆ ॥ ಪ ॥

ಸರ್ವ ಜಾತಿಯಲ್ಲಿ । ಮರ್ಮವಿರುವದಲ್ಲಿ ।
ಎಲ್ಲ ಕೂಡಿ ಸತ್ಯದಲ್ಲಿ । ಐಕ್ಯವಾಗುವಲ್ಲಿ ।
ಗಾಂಧಿ ಮಾರ್ಗದಲ್ಲಿ ॥ ೧ ॥

ಹೇಯತನವ ನೀಗಿ । ಜಾತಿ ಐಕ್ಯ ಮಾಡಿ ।
ಐಕ್ಯವೇ ಸೌಖ್ಯ । ಎಂಬ ಬಸವ ತಾಗಿ ।
ನುಡಿದಾ ಗಾಂಧೀ ಯೋಗಿ ॥ ೨ ॥

ಬಸವ, ನಾನಕ, ಗಾಂಧಿಯಾ । ಎಸೆವ ತತ್ವ ಜಾತಿಯಾ ।
ಜನಕೆ ನೀಡಿ ಒಂದು ಗೂಡಿ । ಪಾಡು ಹಿಂದ ಕೀರ್ತಿಯಾ ।
ಭರತ ವರ್ಷ ಕೀರ್ತಿಯಾ ॥ ೩ ॥

ಅನ್ಯ ಜಾತಿ ತತ್ವವಾ । ಕೆಟ್ಟವೆಂದು ಬಗೆದವಾ ।
ಶಿಷ್ಟ ಭಾರತಾಂಬಿಗಾತ । ದುಷ್ಟ ಪುತ್ರ ನೋಡವಾ ।
ಶ್ರೇಷ್ಠ ಗಾಂಧಿ ನುಡಿದವಾ ॥ ೪ ॥

ಹಿಂದಮಾತೆ ಕಂದರಲ್ಲಿ । ಐಕ್ಯವೆಲ್ಲ ಜಾತಿಯಲ್ಲಿ ।
ಒಂದುಗೂಡುವಂತೆ । ಹರಸು ಶಾಂತಿದಾತನೇ ।
ಮೆರೆಸು ಗಾಂಧೀ ಮಾತ್ಮನೇ ॥ ೫ ॥

ರಾಮ ರಹಿಮ ಈಶ್ವರ । ಪ್ರೇಮ ನಾಮ ಶುಭಕರ ।
ಸ್ವಾಮಿ ಗಾಂಧಿ ಶಾಂತಿಗಾಗಿ । ಐಕ್ಯಕ್ಕೇಳಿ ಜಾತಿ ಎಲ್ಲಕ್ಕಾಗಿ ।
ಹಿಂದಮಾತೆ ಕೀರ್ತಿಗಾಗಿ ॥ ೬ ॥

ಅಮರಗೋಳ
೨೩—೧೦—೧೯೪೮

—ಹ. ಯ. ಮನಹಳ್ಳಿ
ಪ್ರೌಢ ಶಿಕ್ಷಣ. ಶಿಕ್ಷಕ, ಅಮರಗೋಳ
ಜಿ. ವಿಜಾಪೂರ

ಲಕ್ಷ್ಮೇಶ್ವರ

ಲೇಖಕರು;- ಶ್ರೀ. ಶಿ. ರಾ. ಕೊತ್ತಲ.

[ಬಟ್ಟೂರ ಶಾಲೆಯ ಒನೆಯ ಇಯತ್ತೆಯ ವಿದ್ಯಾರ್ಥಿಯು ತನ್ನ ಊರಿನ ವರ್ಣನೆಯನ್ನು ಮಾಡಿರುವನು. ಇವನಂತೆಯೆ ಇತರ ವಿದ್ಯಾರ್ಥಿಗಳೂ ತಮ್ಮ ತಮ್ಮ ಊರು ಐತಿಹಾಸಿಕ ಸ್ಥಳವಿದ್ದರೆ ಅಥವಾ ತಮ್ಮ ಊರಿನ ಹತ್ತರ ಐತಿಹಾಸಿಕ ಸ್ಥಳವಿದ್ದರೆ ಅದನ್ನು ಸಂದರ್ಶಿಸಿ ಅದರ ವರ್ಣನೆಯನ್ನು ಸಂಕ್ಷಿಪ್ತವಾಗಿ ಬರೆದು ಕಳಿಸಿದಲ್ಲಿ, ಅದು ಯೋಗ್ಯವಾದಲ್ಲಿ ಅದಕ್ಕೂ ಪ್ರಾಥಮಿಕ ಶಿಕ್ಷಣದಲ್ಲಿ ಎಡೆಕೊಡಲಾಗುವದು.

—ಸಂಪಾದಕರು.]

ಬಟ್ಟೂರ ಹತ್ತಿರ ಇರುವ ಐತಿಹಾಸಿಕ ಸ್ಥಳವೆಂದರೆ ಪುಲಿಗೆರೆ (ಲಕ್ಷ್ಮೇಶ್ವರ). ಪುಲಿಗೆರೆಯು ನಮ್ಮ ಊರಿಂದ ೪ ಮೈಲು ಇರುವದು. ಲಕ್ಷ್ಮೇಶ್ವರವು ಐತಿಹಾಸಿಕ ಸಂಗತಿಯಲ್ಲಿ ಒಳ್ಳೇ ಪ್ರಸಿದ್ಧ ಸ್ಥಳ. ಇಲ್ಲಿ ಲಕ್ಷ್ಮೇಶನೆಂಬ ಕವಿ ಆಳಿದನು. ಆತನ ರಾಜಧಾನಿ ಲಕ್ಷ್ಮೇಶ್ವರ. ಕನ್ನಡಿಗರಿಗೆ ಹೆಮ್ಮೆ ಹೆಮ್ಮೆಯವನಾದ ಪಂಪಕವಿ ಜನಿಸಿದ ಊರು ಪುಲಿಗೆರೆ. ಪಂಪಕವಿಯ ಆದಿಪುರಾಣ, ವಿಕ್ರಮಾರ್ಜುನ ವಿಜಯ ಎಂಬ ಎರಡು ಗ್ರಂಥಗಳನ್ನು ಬರೆದಿರುವನು, ಮತ್ತು ಇಲ್ಲಿ ಪ್ರಸಿದ್ಧ ಶಿಲ್ಪಿ ಎಂದು ಹೆಸರಾದ ಜಕ್ಕಣಾಚಾರ್ಯರು ಇಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿರುವರು. ಸೋಮೇಶ್ವರ ದೇವಾಲಯ, ಸಾವಿರಲಿಂಗನ ಗುಡಿ, ಜೋಳಗುಮಠ, ಅನೇಕ ಮಠಗಳನ್ನೂ ಗುಡಿಗಳನ್ನೂ ಬಗೆಬಗೆಯ ಚಿತ್ರಗಳನ್ನೂ ಕಟ್ಟಿಸಿ ರಚಿಸಿದ್ದಾರೆ, ಮತ್ತು ಇಲ್ಲಿ ಒಳ್ಳೇ ಹೆಸರಾದ ಅನೇಕ ಋಷಿಗಳ ಪಾದಬಿದ್ದ ಸ್ಥಳವಾಗಿದೆ. ಆದ್ದರಿಂದ ಇವರು ಪಾದಇಟ್ಟ ಸ್ಥಳವು ಒಂದು ಪವಿತ್ರತೀರ್ಥವಾಗಿದೆ. ವರ್ಷಕ್ಕೊಮ್ಮೆ ಸಂಕ್ರಾಂತಿಗೆ ಜನರು ಅಲ್ಲಿಗೆ ಹೋಗಿ ಸ್ನಾನ ಮಾಡಿ ಬರುವರು. ಆದ್ದರಿಂದ ಜನರು ಪುಣ್ಯ ಬರುತ್ತದೆ ಎನ್ನುವರು ಮತ್ತು ವರ್ಷಕ್ಕೊಮ್ಮೆ ಸೋಮೇಶ್ವರ ರಥೋತ್ಸವ ಆಗುವದು ಮತ್ತು ಇಲ್ಲಿ ವಾರಕ್ಕೊಮ್ಮೆ (ಶುಕ್ರವಾರ) ಸಂತೆಯಾಗುವದು. ಪೋಷ್ಟ ಅದೆ. ಪಂಪಸ್ಮಾರಕ ವಾಚನಾಲಯವದೆ. ಈ ಊರಲ್ಲಿ ಅನೇಕ ಗಿರಣಿಗಳು ಎಣ್ಣೆಯ ಮಿಲ್ಲುಗಳು ಇವೆ. ಮೋಟರ ಸ್ಟ್ಯಾಂಡ ಇದೆ ಇದರಿಂದ ಪ್ರವಾಸಿಕರಿಗೆ ಬಹಳೇ ಒಳಿತಾಗಿದೆ. ಅನೇಕ ಊರುಗಳಿಗೆ ಸರಕಾರೀ ರಸ್ತೆ ಅದೆ. ಈ ಊರು ವಿಳ (ಊರು) ಹಳ್ಳಿಗಳು ಕೂಡಿ ಒಂದು ಪಟ್ಟಣವಾಗಿದೆ. ಇದಕ್ಕೆ ಹಿಂದಿನ ಕಾಲಕ್ಕೆ ಪುಲಿಗೆರೆ ಅನ್ನುತ್ತಿದ್ದರು. ಈಗ ಲಕ್ಷ್ಮೇಶ್ವರ ಎಂದು ಪ್ರಸಿದ್ಧವಾಗಿದೆ. ಪೇಟೆಯು ನೋಡಕ್ಕಂಥಾದ್ದಾಗಿದೆ. ಈ ಊರಲ್ಲಿ ಕಾಟನ್ ಮಾರ್ಕೇಟ ಅದೆ ಇದು ವ್ಯಾಪಾರಕ್ಕೆ ಒಳ್ಳೇ ಪ್ರಸಿದ್ಧವಿರುವದು.

ಮಕ್ಕಳಲ್ಲಿ ಮಮತೆ

ಲೇಖಕರು:

ಶ್ರೀ ಭೀ. ಸ. ಮಣ್ಣೂರ. ಪ್ರ್ಯಾಕ್ಟಿಸಿಂಗ ಸ್ಕೂಲ್, ಧಾರವಾಡ

ಗುವು ಬಂದಾಗಲೇ ಮಮತೆಯು ಆದರ ಕೂಡ ತ್ತದೆ. ಮಕ್ಕಳಲ್ಲಿ ಮಮತೆ ಇಲ್ಲದವನಾರು? ಪಶು ಗಳು, ಕ್ರಿಮಿಕೀಟಕಗಳೂ ಕೂಡ ತಮ್ಮ ಮಕ್ಕಳನ್ನು ಸುತ್ತವೆ; ಆದರೆ ಮಾನವನು ತನ್ನ ಮಕ್ಕಳನ್ನು ಸುವದರಲ್ಲಿ ಏನಾಶ್ಚರ್ಯ! ಸಂಸಾರದಲ್ಲಿ ಪ್ರತಿಯೊಂ ಪ್ರಾಣಿಯೂ ಮಕ್ಕಳಲ್ಲಿ ಮಮತೆಯನ್ನು ತೋರಿಸು . ಆದರೆ 'ತನ್ನಂತೆ ಪರರೆಂಬ' ಭಾವನೆಯಿಂದ ತನ್ನ ಳಂತೆ ಹೆರವರ ಮಕ್ಕಳನ್ನು ಕಾಣುವ ಜನ ವಿರಳ. ಸಾಮಾಜಿಕ ಮಾತಾಯಿತು. ಇನ್ನು ಶಿಕ್ಷಣದಲ್ಲಿ ಳ ಮಮತೆಗೆ ಅಗ್ರಸ್ಥಾನವಿದೆ.

ಮನಶ್ಶಾಸ್ತ್ರ ದೃಷ್ಟಿಯಿಂದ ವಿಚಾರಿಸಿದರೆ, ಮಕ್ಕಳ ಸ್ಸಿನ ಹದವನ್ನು ಅರಿತು ಕೊಡುವ ಶಿಕ್ಷಣವೇ ಒಳ್ಳೆ ಶಿಕ್ಷಣವು; ಮಕ್ಕಳಲ್ಲಿ ಮಮತೆ ಇಲ್ಲದ ಮಾಸ್ತರನ್ನ ಸ್ತರನಲ್ಲ. ಅವನು ಹುಡುಗರನ್ನು ಕಾಯುವವ. ದಲ್ಲಿ ಹಸನ್ಮುಖಿಯಾದ ಶಿಕ್ಷಕನೇ ಯೋಗ್ಯ ಶಿಕ್ಷಕ. ಲಿನ ಎಲ್ಲ ಮಾತುಗಳೂ ತತ್ವಕ್ಕನುಸರಿಸಿ, ಸಿದ್ಧ ಮಾಡಿ ಾತುಗಳು. ಆದರೆ ಇದರಂತೆ ವರ್ತಿಸುವ ಶಿಕ್ಷಕ ? ಎಂದು ವಿಚಾರಿಸಿದಾಗ ಮನಸ್ಸು ಮಂಕಾಗುತ್ತದೆ.

ದ್ಯದ ಪರಿಸ್ಥಿತಿಯಲ್ಲಿ ವೇತನಕ್ಕಾಗಿ ದುಡಿಯುವ ಶಿಕ್ಷ ಪೆಚ್ಚು, ಹೊಟ್ಟೆಯ ಪಾಡಿಗಾಗಿ ಶಿಕ್ಷ'ವೃತ್ತಿಯನ್ನು ಂಡು ಮನಸ್ಸು ಹಿಡಿಯದಿದ್ದರೂ ಶಿಕ್ಷಣವನ್ನು ಕೊ ಶಿಕ್ಷಕರಲ್ಲಿ ಮಮತೆಯು ಎಂದೋ ಮಾಯವಾಗಿ ಗಿರುತ್ತದೆ. ಮಕ್ಕಳು ಕುತೂಹಲ ಪ್ರವೃತ್ತಿಗನು ವಾಗಿ ಪಾಠ ತಿಳಿಸಿಕೊಡುವಾಗ ನಡುವೆ ಬಾಯಿ ಹಾಕಿ ವದೇ ಪ್ರಶ್ನೆಯನ್ನು ಕೇಳಿದರೆ, "ನಿನಗೇನು ತಿಳಿಯು ? ಸುಮ್ಮನೆ ಕೂಡ್ರು" ಎಂದು ಸಿಟ್ಟು ಮಾಡಿ ಇಲ್ಲವೆ ಡೆದು ಕೂಡ್ರಿಸುತ್ತಾರೆ. ಅನೇಕ ವಿಷಯಗಳ ಬಗೆ ತುರಿಸಿಕೊಳ್ಳುವ ಶಿಕ್ಷಕರಿಗೆ ಮಕ್ಕಳಿಗೆ ಯಾವದೇ ವಿಷ ನ್ನು ಒಮ್ಮೆ ತಿಳಿಸಿ ಕೊಡುವದು ಸಾಕಾಗಿರುತ್ತದೆ. ಅದರಲ್ಲಿ ಮಂದ ಬುದ್ಧಿಯ ಹುಡುಗನು ತನ್ನ ಬುದ್ಧಿಗನು ಸಾರವಾಗಿ, "ಇದು ನನಗೆ ಚನ್ನಾಗಿ ತಿಳಿಯಲಿಲ್ಲ. ಇನ್ನೊ ಮ್ಮೆ ತಿಳಿಸಿರಿ" ಎಂದು ಕೇಳಿದಾಗ ಮಾಸ್ತರರ ಪಿತ್ತ ನೆತ್ತಿ ಗೇರುತ್ತದೆ. ಆ ಹುಡುಗನಿಗೆ ಅವರು "ನಿನ್ನ ತಲೆ. ನಿನಗೆ ತಿಳಿಸಕೊಡಬೇಕಾದರೆ ಬ್ರಹ್ಮ ಬರಬೇಕು. ನಿನಗೆ ಹೀಗೆ ತಿಳಿಯುವದಿಲ್ಲ. ಬಡಿಗೆಯ ಪೆಟ್ಟಿನಿಂದ ತಿಳಿಯುತ್ತದೆ." ಎಂದು ನಾಲ್ಕಾರು ಏಟುಗಳನ್ನು ಹಾಕಿ ಅವನಿಗೆ ತಿಳಿಸು ತ್ತಾರೆ. ಇದರಿಂದ ಮಕ್ಕಳಿಗೂ ಆ ಪಾಠ ತಿಳಿಯುವದಿಲ್ಲ. ಮಾಸ್ತರರಿಗೂ ತಮ್ಮ ಕಾರ್ಯ ಮಾಡಿದಂತಾಗುವದಿಲ್ಲ. ಇಂಥ ಶಿಕ್ಷಕರಿಂದ ಶಿಕ್ಷಣಕ್ಷೇತ್ರವು ತುಂಬಿದರೆ, ಶಿಕ್ಷಣವು ಪ್ರಗತಿ ಹೊಂದುವದೆಂತು? ಶಿಕ್ಷಣಕ್ಕಾಗಿ ಶಿಕ್ಷಕವೃತ್ತಿಯನ್ನು ಕೈಕೊಳ್ಳಬೇಕು. ಎಲ್ಲ ಉದ್ಯೋಗಗಳಲ್ಲಿ ಶಿಕ್ಷಣವು ಮಿಗಿ ಲಾದ ಉದ್ಯೋಗವು. ಅದು ನಮ್ಮ ಪವಿತ್ರ ಕರ್ತವ್ಯವು. ವೇತನವು ಕಡಿಮೆ ಇರಲಿ, ಇಲ್ಲವೇ ಹೆಚ್ಚಿರಲಿ; ಮಕ್ಕಳ ಪ್ರಗತಿಗಾಗಿ ದುಡಿಯುವುದೊಂದೇ ನಮ್ಮ ಕರ್ತವ್ಯ. ತನಗೆ ಪ್ರಪಂಚದಲ್ಲಿ ಬೇಕಾದಷ್ಟು ತೊಂದರೆಯಾಗಿರಲಿ. ಅವುಗಳ ನ್ನೆಲ್ಲ ಮರೆತು ಮಕ್ಕಳ ಕೂಡ ಮಮತೆಯಿಂದ ನಡೆದು ಕೊಂಡು, ಅವರೊಡನೆ ಸಮರಸಹೊಂದಿ, ಅವರನ್ನು ಪ್ರೀತಿ ಯಿಂದ ಆಡಿಸಿ ಕಲಿಸಬೇಕು. ಎಂಬ ವಿಚಾರದಿಂದ ಶಿಕ್ಷಣ ಕ್ಷೇತ್ರದಲ್ಲಿ ಅಡಿಯಿಡುವ ಶಿಕ್ಷಕರೆಷ್ಟು ?

ಶಿಕ್ಷಕರು ಮಮತೆಯುಳ್ಳವರಿರದಿದ್ದರೆ, ಮಕ್ಕಳ ಶಿಕ್ಷಣವು ಸರಿಯಾಗಿ ಸಾಗಲಾರದು. ಇಂಥ ಶಿಕ್ಷಕರು ಕೊಡುವ ಶಿಕ್ಷಣವು ಡಬ್ಬು ಕೊಡವ ಮೇಲೆ ನೀರು ಸುರುವಿದಂತೆಯೇ ಸರಿ. ಇಂಥ ಶಿಕ್ಷಕರಲ್ಲಿ ಮಕ್ಕಳಿಗೆ ಪ್ರೀತಿ, ಆದರ, ವಿಶ್ವಾಸ ಗಳು ಹುಟ್ಟಲಾರವು. ಇವರ ವಿದ್ಯಾಲಯವು ಮಕ್ಕಳಿಗೆ ಸೆರೆಮನೆಯಂತಾಗುವದು. ಮಕ್ಕಳಿಗೆ ಶಿಕ್ಷಕರು ಶಾಸಕ ನಂತೆ ಕಾಣುತ್ತಾರೆ. ಇಂಥ ಶಿಕ್ಷಕರಿಗೆ ಮಕ್ಕಳು ಒಟ್ಟು-ಗೂಡಿ ಒಮ್ಮೊಮ್ಮೆ ಶಿಕ್ಷೆಯನ್ನು ಕೊಡಲಿಕ್ಕೂ ಹಿಂದೆ ಮುಂ ದೆ ನೋಡುವದಿಲ್ಲ; ಶಿಕ್ಷೆಯನ್ನು ಕೊಟ್ಟ ಉದಾಹರಣೆಗಳೂ ಇವೆ.

ಒಟ್ಟಿನಲ್ಲಿ ಶಿಕ್ಷಕನು ಮಮತೆಯುಳ್ಳವನಾಗಿರಬೇಕು. ಮಮತೆಯಿಂದ ಮಕ್ಕಳಲ್ಲಿ ಅವರ ಬಗ್ಗೆ ಆದರ, ಪ್ರೀತಿ ಹೆಚ್ಚುತ್ತವೆ. ಅವನು ತಿಳಿಸುವ ವಿಷಯವನ್ನು ಮಕ್ಕಳು ತಲ್ಲೀನರಾಗಿ ಕೇಳುತ್ತಾರೆ. ತಮಗೆ ಬಂದ ಸಂಶಯದ ಬಗ್ಗೆ ಪ್ರಶ್ನೆಗಳನ್ನು ಮಾಡಿ, ತಮ್ಮ ಜ್ಞಾನವನ್ನು ಸರಿಪಡಿಸಿಕೊಳ್ಳುತ್ತಾರೆ. ಮಮತೆಯ ಶಿಕ್ಷಕನನ್ನು ಮಕ್ಕಳು ತಮ್ಮ ತಂದೆ ತಾಯಿಯಂತೆ ಪ್ರೀತಿಸುತ್ತಾರೆ. ಇಂಥ ಶಿಕ್ಷಕನ ಶಾಲೆಯು ಮಕ್ಕಳಿಗೆ ಮನೆಗಿಂತಲೂ ಹೆಚ್ಚು ಪ್ರೀಯಕರವಾಗುತ್ತದೆ; ಇವರನ್ನು ಮಕ್ಕಳು ಎಂದೂ ಮರೆಯುವದಿಲ್ಲ. ಅವರ ಪ್ರೇಮ ಮಕ್ಕಳ ಹೃದಯದಲ್ಲಿ ಅಚಲವಾಗಿ ಉಳಿಯುವದು. ಇವರೇ ನಿಜವಾದ ಶಿಕ್ಷಕರು! ಅವರ ಶಿಕ್ಷಣವೇ ನಿಜವಾದ ಶಿಕ್ಷಣ!! ಅವರ ಕೈಯಲ್ಲಿ ಕಲಿತ ವಿದ್ಯಾರ್ಥಿಗಳೇ ಧನ್ಯರು!!!

ಆದ್ದರಿಂದ ಪ್ರತಿಯೊಬ್ಬ ಶಿಕ್ಷಕರು ಮಕ್ಕಳಲ್ಲಿ ಯನ್ನು ತೋರಿಸಲೇಬೇಕು. ಮಕ್ಕಳ ಕೂಡ ಮ ಆಡಬೇಕು; ಅಕ್ಕರತೆಯಿಂದ ಕಲಿಸಬೇಕು. ಪ್ರಶ್ನೆಗಳ ಮಳೆ ಸುರಿಸಿದರೂ, ಶಿಕ್ಷಕರು ಸಾವಧಾ ಅವುಗಳಿಗೆಲ್ಲ ಉತ್ತರವೀಯಬೇಕು. ಮಮತೆಯ ವಾರದ ಮೇಲೆ ಶಿಕ್ಷಣದ ಮಂದಿರವನ್ನು ಕಟ್ಟ ನಮ್ಮ ಶಿಕ್ಷಕ ಬಾಂಧವರಲ್ಲಿ ಮಮತೆಯು ನರನಾ ಹರಿಯಬೇಕು; ಕಣ್ಮನಗಳಲ್ಲಿ ತುಂಬಬೇಕು; ಹೃ ದಿಂದ ಚಿಮ್ಮಿ ಪುಟಿಯಬೇಕು; ಕೃತಿಯಲ್ಲಿ ಸೂ ಯಬೇಕು. ಇಂಥ ಶಿಕ್ಷಕರೇ ಸ್ವತಂತ್ರ ಭಾರತದ ಶಿಕ್ಷಕರು. ಇವರಿಂದಲೇ ಭಾರತದ ಉದ್ಧಾರವಾಗು ಯಾವ ಸಂಶಯವೂ ಇಲ್ಲ.

ಮಕ್ಕಳಲ್ಲಿ ಮಮತೆಯುಳ್ಳ ಬಾಪೂ.

ಇಜಿಪ್ತ ದೇಶದ ಪ್ರಾಚೀನ ಧರ್ಮ

ಶ್ರೀ. ಎಚ್. ಎಸ್. ದೂದಿಹಳ್ಳಿ, ಬಿ. ಎ., ಬಿ. ಟಿ.

ಪ್ರಾಚೀನ ಕಾಲದಲ್ಲಿ— ಕ್ರಿ. ಪೂ. ೧೦೦೦ ವರೆಗೆ—ಗ್ರೀಸದಂತೆ ಇಜಿಪ್ತದಲ್ಲಿಯೂ ಸಣ್ಣ ಸಣ್ಣ ಪುರರಾಜ್ಯಗಳಿದ್ದವು. ಪ್ರತಿ ರಾಜ್ಯವು ತನ್ನದೇ ಆದ ದೇವನನ್ನು ಪೂಜಿಸಿತು. ಕಾಲಗತಿಯಲ್ಲಿ ಇಜಿಪ್ತವು ಏಕೀಕರಣವಾಗಿ, ಆರಾಧ್ಯ ದೇವತೆಗಳೂ ಏಕೀಕರಣ ಹೊಂದಿದವು. ಈ ರೀತಿಯಲ್ಲಿ "ಓಸಾಯರಿಸ್" ಎಂಬುದು ಇವರ ಮುಖ್ಯ ದೇವತೆಯಾಯಿತು. ಇವನು ಋತುಮಾನಕ್ಕನುಸರಿಸಿ ತಲೆದೋರುವ ದೇವತೆ. ಆದ್ದರಿಂದ ಯೋಗ್ಯ ಕಾಲಕ್ಕೆ ಇವನಿಗೆ ಬಲಿಯು ಅರ್ಪಿಸಲ್ಪಡುತ್ತಿತ್ತು. ಈ ದೇವತೆಯು ತನ್ನ ಋತುವಿನ ಕೂಡ ಹುಟ್ಟಿ ಬರುತ್ತಿದ್ದನು ಮತ್ತು ಋತುವು ಕೊನೆಗೊಂಡಾಗ ಇವನೂ ಮರಣ ಹೊಂದುತ್ತಿದ್ದನು. ಆದರೆ, ಇವನು ಅಮರನೆಂಬ ಕಲ್ಪನೆಯೂ ಅವರಲ್ಲಿ ಧೃಡವಾಗಿತ್ತು. ಸೂರ್ಯ ಮತ್ತು ಸಪಕ್ಷ ಕೀಟಕವೊಂದು ಇವನ ಆಯುಧಗಳಾಗಿದ್ದವು. ಸೂರ್ಯನ ಅಸ್ತೋದಯಗಳು ಈ ದೇವತೆಯ ಉತ್ಪತ್ತಿ ಲಯಗಳನ್ನು ಸೂಚಿಸಿದವು ಮತ್ತು ಆಯುಧ ರೂಪದಲ್ಲಿದ್ದ ಕೀಟಕವು ತನ್ನ ಪುನರ್ಜನ್ಮಕ್ಕಾಗಿ ತತ್ತಿಗಳನ್ನಿಡುತ್ತದೆಂದು ಇವರು ಭಾವಿಸಿದರು. ಕಾಲಗತಿಯಲ್ಲಿ "ಓಸಾಯರಿಸ್" ಮತ್ತು "ಎಪಿಸ್" (ನಂದಿ) ಗಳ ಏಕೀಕರಣವಾಯಿತು. 'ಎಪಿಸ್' ನಂತೆ ಅವನ ಹೆಂಡತಿಯಾದ "ಆಯಸಿಸ್"ಳ (ಆಕಳು) ಏಕೀಕರಣವೂ ನಡೆಯಿತು. "ಎಪಿಸ್" ಮತ್ತು "ಆಯಸಿಸ್" ದಂಪತಿಗಳಿಗೆ "ಹೊರಸ್" ಎಂಬ ಅಪತ್ಯವಾಯಿತು. "ಆಯಸಿಸ್"ಳು "ಹೊರಸ್" ನೊಂದಿಗೆ ಚಂದ್ರ ಬಿಂಬದಲ್ಲಿ ಕಂಡು ಬರುವಳಂತೆ! ಇದು ಶಾಶ್ವತವಾದ ಮಾತಲ್ಲವೇ? ಇದೇ ರೀತಿಯಲ್ಲಿ ಪ್ರಾಚೀನ ಧರ್ಮಗ್ರಂಥಗಳು ಇನ್ನೂ ಕೆಲವು ಶಾಶ್ವತತೆಯ ಕಲ್ಪನೆಗಳನ್ನು ಹೇಳುತ್ತವೆ. ಆದ್ದರಿಂದ, ಪ್ರಾಚೀನ ಕಾಲದ ಇಜಿಪ್ತದ ಜನರು ದೇವರ ಅಮರತ್ವದಲ್ಲಿ ನಂಬಿದ್ದರೆಂದೂ ಅದನ್ನು ಸಾಧಿಸುವದೇ ಮನುಷ್ಯನ ಉಚ್ಚ ಕರ್ತವ್ಯವಾಗಿತ್ತೆಂದೂ ತರ್ಕವಾಗುತ್ತದೆ.

ಕ್ರಿ. ಪೂ ೩೦೬ರ ಸುಮಾರಿಕ್ಕೆ ಗ್ರೀಕರು ಇಜಿಪ್ತವನ್ನು ಗೆದ್ದರು. ಬಳಿಕ ಅಲೆಕ್ಸಾಂಡ್ರಿಯಾ ಪಟ್ಟಣವು ಅಖಿಲ ಗ್ರೀಕ ಸಾಮ್ರಾಜ್ಯದ ಧರ್ಮಕೇಂದ್ರವೆನಿಸಿತು. ೧ನೇ ಟಾಲೀಮಿಯಾ ಅರಸು ಅಲ್ಲಿ ಒಂದು ದೊಡ್ಡ ದೇವಾಲಯವನ್ನು ಕಟ್ಟಿಸಿದನು ಮತ್ತು ಅದರಲ್ಲಿ "ಸೆರಾಫಿಸ್" ನ ಸ್ಥಾಪನೆ ಮಾಡಿದನು. ("ಸೇರಾಫಿಸ್" ಎಂಬುದು " ಓಸಾಯರಿಸ್" ಮತ್ತು "ಎಪಿಸ್" ದೇವತೆಗಳ ಏಕೀಕರಣವಾದ ನಂತರ ಬಂದ ಹೆಸರು) ಜೊತೆಗೆ "ಆಯಸಿಸ್" ಮತ್ತು "ಹೊರಸ್" ಇವರ ಸ್ಥಾಪನೆಯೂ ಆಯಿತು. ಈ ಮೂರು ದೇವತೆಗಳು ಬೇರೆ ಬೇರೆ ಎಂದು ತಿಳಿಯಲ್ಪಡುತ್ತಿದ್ದಿಲ್ಲ. ಒಬ್ಬ ದೇವನ ಮೂರು ರೂಪಗಳೆಂಬ ಭಾವನೆಯಿದ್ದಿತು. "ಸೊರಾಫಿಸ್" ದೇವತೆಗೆ ಮುಂದೆ, ಗ್ರೀಕರು "ಝಿಅಸ್" ನೆಂದೂ; ರೋಮಕರು "ಜ್ಯುಪಿಟರ್"ನೆಂದೂ, ಭಾರತೀಕರು ಸೂರ್ಯನೆಂದೂ ಕರೆದರು.

ದೇವತೆಗಳ ಅಮರತ್ವದಲ್ಲಿ ನಂಬಿಗೆಯು ಬೆಳೆಬೆಳೆದಂತೆ ಜನರಲ್ಲಿ ಇತರ ಕೆಲವು ಕಲ್ಪನೆಗಳು ಪ್ರಚಲಿತವಾದವು. ಉದಾ:—(೧) ದುಡಿಮೆಗೆ ಪ್ರತಿಫಲವು ಒಮ್ಮಿಲ್ಲೊಮ್ಮೆ ಬಂದೇ ತೀರುವದು. (೨) "ಸೊರಾಫಿಸ್"ನು ಪ್ರಾಣಿಗಳ ಉದ್ಧಾರಕನು. ಇತ್ಯಾದಿ.

ಕಾಲಗತಿಯಲ್ಲಿ "ಆಯಸಿಸ್" ದೇವತೆಯ ಭಕ್ತವೃಂದವು ಬೆಳೆಯಿತು. ಹಲವಾರು ದೇವಾಲಯಗಳಲ್ಲಿ ಈ ದೇವತೆಯ ಸ್ಥಾಪನೆಯಾಯಿತು. ಮುಂಬದಿಯಲ್ಲಿ ಮೇಣಬತ್ತಿಗಳನ್ನು ಉರಿಸಿ ಒಳ್ಳೇ ಭಕ್ತಿ ಪುರಸ್ಸರವಾಗಿ ಈ ದೇವತೆಗೆ ನೈವಿದ್ಯವು ಅರ್ಪಿಸಲ್ಪಟ್ಟಿತು. ಅರ್ಚಕನು ಅವಿವಾಹಿತನಿದ್ದು; ತಲೆಯನ್ನು ಪೂರ್ತಿಯಾಗಿ ಮುಂಡನ ಮಾಡಿಸಿಕೊಂಡಿರುತ್ತಿದ್ದನು. ಅರ್ಚನೆಯ ವೇಳೆಗೆ ಇವನು ತಲೆಬಾಗಿ ಭಕ್ತಿಭಾವದಿಂದ ದೇವರಿದಿರು ನಿಂತಿರುವ ದೃಶ್ಯವು ಬಹು ರೋಮಾಂಚಕಾರಿಯಾದುದು. ರೋಮಕರು ಈ ಧರ್ಮವನ್ನೇ ತಮ್ಮಲ್ಲಿ ಪ್ರಚಲಿತಗೊಳಿಸಿದರು ಮತ್ತು ಅವರು ಜಯಿಸಿದ ದೇಶಗಳಿಗೂ ಇದು ಹಬ್ಬಿತು. ಆದರೆ

ಇರಾಣದಲ್ಲಿ ಮಾತ್ರ ಇದಕ್ಕೆ "ಮಿಥ್ರೈಯಿಝುಮ್" ಎಂಬ ಪ್ರಾಚೀನ ಧರ್ಮವು ಪ್ರತಿಸ್ಪರ್ಧಿಯಾಯಿತು.

ರೋಮಕರ ಮುಖ್ಯ ದೇವತೆಯು ಜ್ಯುಪಿಟರ ಎಂಬದಷ್ಟೆ! ಈ ದೇವರ ಗುಡಿಗಳು ರೋಮಕರ ರಾಜ್ಯದಲ್ಲಿ ಪಟ್ಟಣಕ್ಕೊಂದರಂತೆ ಇವೆ. ಜೊತೆಗೆ, ಆಳುವ ಅರಸನ ಮತ್ತು ಸಿಝುರನ ಗುಡಿಗಳೂ ಕಂಡುಬರುವವು. ಈ ದೇವಾಲಯಗಳ ದರ್ಶನ ತೆಗೆದುಕೊಂಡಾಗ ಪ್ರಜರು, ತಮ್ಮ ರಾಜನಿಷ್ಠೆಯನ್ನು ತೋರಿಸುವದಕ್ಕಾಗಿ ಸುಗಂಧ ದ್ರವ್ಯಗಳನ್ನು ಸುಡುವರು. "ಆಯಸಿಸ್" ದೇವತೆಗೆ ಜನರು ತಮ್ಮ ಕಷ್ಟನಿವಾರಣೆಗಾಗಿ ಹರಿಕೆ ಕಟ್ಟುವರು. ಸೆವ್ಹಿಲ್ ಎಂಬಲ್ಲಿ ಕಾರ್ಥೇಜನ 'ವ್ಹಿನಸ್' ದೇವತೆಗೆ ಈ ರೀತಿ ಸೇವಾ ಸೂತ್ರಗಳು ನಡೆದವು.

"ಮಿಥ್ರೈಯಿಝುಂ" ಎಂಬ ಧರ್ಮವು ಇರಾಣದಲ್ಲಿ ನೆಲಿಸಿದ್ದತಷ್ಟೆ! ಇದು ರುಧಿರಪ್ರಿಯ ಧರ್ಮವಾಗಿದ್ದಿತು. ಪಶುಬಲಿಯೆ ಈ ಧರ್ಮದ ತಿರುಳು. ಬಲಿಬಿದ್ದ ಪಶುವಿನ ನೆತ್ತರದಲ್ಲಿ ಸ್ನಾನ ಮಾಡಿದವರಿಗೆ ನವಜೀವನವು ಪ್ರಾಪ್ತವಾಗುವದೆಂದು ಆ ಜನರು ನಂಬಿದರು. ಅಧುನಿಕ ಕಾಲದಲ್ಲಿ ಇಜಿಪ್ತ, ಇರಾಣ ಮುಂತಾದಲ್ಲಿ ಮಹಮ್ಮದೀಯ ಧರ್ಮವು ಪ್ರಚಲಿತವದೆ.

ವಿಶ್ವಕವಿ ರವೀಂದ್ರನಾಥ ಠಾಕೂರ



'ವಿಶ್ವಭಾರತ' ಎಂಬ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರು.

ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆ (೧೯೪೯)

೧೯೪೯ನೆಯ ಇಸವಿಯ ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯು ನಡೆಯಲಿಕ್ಕೆ ೧೯೪೯ನೆಯ ಇಸವಿಯ ಜಾನೇವರಿ ತಿಂಗಳದ ೨೭ ಮತ್ತು ೨೮ನೆಯ ತಾರೀಖುಗಳು ಗೊತ್ತುಪಡಿಸಲ್ಪಟ್ಟಿವೆ. ಸ್ಕಾಲರಶಿಪ್‌ದ ಸಂಖ್ಯೆಗಳು ಕೆಳಗೆ ಕಾಣಿಸಿದಂತೆ ಇರುವವು.

ಜಿಲ್ಲೆ	ಓಪನ್ (ಸಾಮಾನ್ಯ)	ಮುಸಲ್ಮಾನರನ್ನೊಳಗೊಂಡು ಮಧ್ಯಮ ವರ್ಗದವರಿಗಾಗಿ	ಬ್ಯಾಕವರ್ಡ (ಹಿಂದುಳಿದ ವರ್ಗದವರಿಗಾಗಿ)
೧. ಧಾರವಾಡ	೨	೨೭	೮ (ಹೆಣ್ಣು ಮಕ್ಕಳ ಸಲುವಾಗಿ ಕಾದಿಟ್ಟಿರುವ ೨ನ್ನು ಒಳಗೊಂಡು)
೨. ಬೆಳಗಾವ	೨	೨೩	೮ (,,)
೩. ಬಿಜಾಪುರ	೨	೨೦	೮ (,,)
೪. ಕಾರವಾರ	೨	೯	೨ (,,)
ಒಟ್ಟು	೮	೭೯	೨೬

ಟೀಪು— ಮುಸಲ್ಮಾನ ಉಮೇದವಾರರಿಗೆ ಸ್ಕಾಲರಶಿಪ್ಪುಗಳು ಕಾದಿಡಲ್ಪಡುವದಿಲ್ಲ. ಅವು ಮಧ್ಯಮ ವರ್ಗದವರಿಗಾಗಿಟ್ಟಿರುವ ಸ್ಕಾಲರಶಿಪ್ಪುಗಳಲ್ಲಿ ವಿಲೀನವಾಗಿರುವವು.

೨. ಈ ವರ್ಷದಿಂದ ಪರೀಕ್ಷೆಯು ಮಾಧ್ಯಮಿಕವು, ಬೆಳಗಾವ ಕೇಂದ್ರದಲ್ಲಿ ಕನ್ನಡ ಮತ್ತು ಮರಾಠಿ ಭಾಷೆಗಳಾಗಿಯೂ ಮತ್ತು ಧಾರವಾಡ, ಬಿಜಾಪುರ ಮತ್ತು ಕಾರವಾರ ಕೇಂದ್ರಗಳಲ್ಲಿ ಕನ್ನಡ ಭಾಷೆ ಮಾತ್ರವಾಗಿಯೂ ಇರುವದು. ಆದರೆ ಮುಸಲ್ಮಾನ ಉಮೇದವಾರರು ಉರ್ದು ಭಾಷೆಯನ್ನು ಪರೀಕ್ಷೆಯ ಮಾಧ್ಯಮಿಕವಾಗಿಯೂ ಬಾಗೂ ತಮ್ಮ ಪ್ರಾದೇಶಿಕಭಾಷೆಯಾಗಿಯೂ ಕೊಡಬಹುದು.

೩. ಪ್ರತಿಯೊಂದು ಕೇಂದ್ರದಲ್ಲಿ ಪರೀಕ್ಷೆಯು ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ನಡೆಯುವದು- ಸ್ಥಾನಿಕ ಸರಕಾರಿ ಹಾಯಸ್ಕೂಲದ ಹೆಡ್‌ಮಾಸ್ತರರು ಅಧ್ಯಕ್ಷರಾಗಿ ಉಳ್ಳ ಒಂದು ಕಮೀಟಿಯು ಈ ಪರೀಕ್ಷೆಯನ್ನು ನಡೆಯಿಸುವದು. ಧಾರವಾಡ ಕೇಂದ್ರದಲ್ಲಿ, ಆ್ಯಂಗ್ಲೋ-ಕನ್ನಡ ಗರ್ಲ್ಸ್ ಹಾಯಸ್ಕೂಲದ ಹೆಡ್ ಮಿಸ್ಟ್ರೆಸ್ ಧಾರವಾಡ ಅವರು ಅಧ್ಯಕ್ಷರಾಗಿ ಕೆಲಸ ನಡೆಯಿಸುವರು.

೪. ಪರೀಕ್ಷೆಯ ಪ್ರವೇಶ ಹಣವು (ಫೀ) ಒಂದು ರೂಪಾಯಿ ಇರುವದು. ಪರೀಕ್ಷೆಗೆ ಕೂಡಲೋಸುಗ ಮಾಡುವ ಅರ್ಜಿಯೊಂದಿಗೆ ಈ 'ಫೀ' ಹಣವನ್ನು ಕಳಿಸಿಕೊಡಬೇಕು. ಹಿಂದುಳಿದ ವರ್ಗದ ಉಮೇದವಾರರು ಫೀ ಹಣವನ್ನು ಸಲ್ಲಿಸುವ ಕಾರಣವಿಲ್ಲ.

೫. ಸೆಕಂಡರಿ ಶಾಲೆಯಲ್ಲಿಯ ಒಂದನೆಇಯತ್ತೆಯಲ್ಲಿ ಅಭ್ಯಾಸ ಮಾಡುತ್ತಿರುವ ಅಥವಾ ಪ್ರಾಥಮಿಕ ಶಾಲೆಯಲ್ಲಿಯ ಐದನೆಯ ಇಯತ್ತೆಯಲ್ಲಿ ಅಥವಾ ಅದಕ್ಕೂ ಮೇಲಿನ ಇಯತ್ತೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಯಾವನೇ ಅಥವಾ ಯಾವಳೇ ಉಮೇದವಾರನಾಗಲಿ, ಉಮೇದವಾರಳಾಗಲಿ ಸ್ಕಾಲರಶಿಪ್ಪಿಗಾಗಿ ಸ್ಪರ್ಧೆ ನಡೆಯಿಸಲು ಅರ್ಹವಾಗುವದಿಲ್ಲ. ಉಮೇದವಾರರ ವಯಸ್ಸು, ಪರೀಕ್ಷೆಯ ವಿಷಯ, ಸ್ಕಾಲರಸಿಪ್ಪುಗಳ ಬೆಲೆ ಮತ್ತು ಅವುಗಳ ಅವಧಿ ಮೊದಲಾದ ಹೆಚ್ಚಿನ ಮಾಹಿತಿಗಾಗಿ ಸುಧಾರಿಸಿದ ನಿಯಮಗಳನ್ನು ನೋಡಬಹುದು. ಈ ಸುಧಾರಿಸಿದ ನಿಯಮಗಳ ಪ್ರತಿಗಾಗಿ ಸ್ಕಾಲರಸಿಪ್ ಪರೀಕ್ಷೆಯ ಕಮೀಟಿಯ ಅಧ್ಯಕ್ಷರಿಗೆ ಅರ್ಜಿ ಮಾಡಿಕೊಂಡರೆ, ಅದು ಅವರಿಂದ ದೊರೆಯುವದು.

(ಸಹಿ) ಎ. ಎಸ್ ಸಾನೆ.
ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ

ಧಾರವಾಡ,
೩—೧೨—೧೯೪೮

ಇಂದಿನ ಶಿಕ್ಷಣದಲ್ಲಿ ಶಿಕ್ಷಕನ ಸ್ಥಾನ

ಶ್ರೀ. ಗ. ಜ. ಗುಂಜೀಕರ. ಬಿ. ಎ., ಬಿ. ಟಿ.

ಇಂದಿನ ಸ್ವತಂತ್ರ ಭಾರತದಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಈ ಕಾಲದಲ್ಲಿ ಎಲ್ಲಿ ನೋಡಿದಲ್ಲಿ ಹೊಸ ಉತ್ಸಾಹ, ಹೊಸ ಯೋಜನೆ, ಹೊಸ ಚಟುವಟಿಕೆಗಳು ಕಂಡುಬರುತ್ತಲಿವೆ. ಸಾಮಾಜಿಕ ಮತ್ತು ರಾಷ್ಟ್ರೀಯ ಕ್ಷೇತ್ರಗಳಲ್ಲಿ ಹಳೆಯ ಜೀವನವನ್ನು ಬದಲಾಯಿಸಿ ಸ್ವತಂತ್ರ ರಾಷ್ಟ್ರಕ್ಕೆ ಒಪ್ಪುವಂಥ ನೈತಿಕ ತಳಹದಿಯ ಮೇಲೆ ಬಲಿಷ್ಠವಾದ ರಾಷ್ಟ್ರವನ್ನೇ ಕಟ್ಟುವ ನಿರ್ಧಾರಕ್ಕೆ ನಮ್ಮ ಮಂದಾಳುಗಳು ಯತ್ನಿಸುತ್ತಿದ್ದಾರೆ.

ಹೊಸ ಸಮಾಜವನ್ನು ನಿರ್ಮಿಸಲಿಕ್ಕೆ ಸಮಾಜದ ಘಟಕಗಳಾದ ನಾಗರಿಕರಿಗೆ ಹೊಸ ಶಿಕ್ಷಣ ಮತ್ತು ಹೊಸ ದೃಷ್ಟಿ ಕೊಡುವದು ಇಂದಿನ ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಇಂಥ ಹೊಣೆಗಾರಿಕೆಯನ್ನು ಅರಿತು ಯೋಗ್ಯ ರೀತಿಯಿಂದ ಕೆಲಸ ಮಾಡಲಿಕ್ಕೆ ಇಂದಿನ ಶಿಕ್ಷಕರು ಸಿದ್ಧರಾಗಬೇಕು.

ಪ್ರಥಮತಃ ಶಿಕ್ಷಕರು ಹೊಸ ದೃಷ್ಟಿಯ ಗುಟ್ಟನ್ನು ಅರಿತುಕೊಂಡು ಹೊಸ ಮಾರ್ಗವನ್ನು ಅನುಸರಿಸಲಿಕ್ಕೆ ಮನಸಾ ಸಿದ್ಧರಾಗಬೇಕು. ಹಳೆಯ ಕಾಲದಿಂದ ನಡೆದುಬಂದ ಶಿಕ್ಷಣದ ಪದ್ಧತಿಯನ್ನೂ, ಧೋರಣವನ್ನೂ, ತ್ಯಜಿಸಿ ಹೊಸ ಪದ್ಧತಿಯನ್ನು ಕಲಿತು ಉತ್ಸಾಹದಿಂದಲೂ, ತನು ಮನ ಧನದಿಂದಲೂ ದುಡಿದು ಕಾರ್ಯರೂಪದಲ್ಲಿ ತರುವದು ಹಳೆಯ ಶಿಕ್ಷಕರಿಗೆ ಕಷ್ಟದಾಯಕವೆಂದು ಅನಿಸಿದರೂ ಪ್ರಯತ್ನದಿಂದ ಸುಲಭ ಸಾಧ್ಯವೆಂದು ತೋರದಿರದು. ಆದರೆ ಈ ಹೊಸ ಪದ್ಧತಿಯನ್ನು ಕಾರ್ಯರೂಪಕ್ಕಿಳಿಸುವ ಶ್ರದ್ಧೆ ಮತ್ತು ಮನಸ್ಸು ಶಿಕ್ಷಕರಲ್ಲಿ ಬೇಕು.

ಇಂದಿನ ರಾಷ್ಟ್ರದಲ್ಲಿ ಶಿಕ್ಷಕರು ಸರ್ವಾರ್ಥದಿಂದ ಗುರುಗಳಾಗುವರು. ರಾಷ್ಟ್ರ ವಿಕಾಸದ ಕೇಂದ್ರಗಳು ಹಳ್ಳಿಗಳಾಗುವದರಿಂದ ಪ್ರತಿಯೊಂದು ಹಳ್ಳಿಯ ಶಾಲೆಗಳು ಆಶ್ರಮಗಳಾಗುವವು. ಮತ್ತು ಅವು ಹಳ್ಳಿಯ ಸಂಸ್ಕೃತಿಯ ಕೇಂದ್ರಗಳೂ ಆಗುವವು. ಇಂಥ ಶಾಲೆಗಳ ಪ್ರತಿಯೊಬ್ಬ ಶಿಕ್ಷಕನ ಸ್ಥಾನವು ಪವಿತ್ರ ಮತ್ತು ಉದಾತ್ತವಾದದ್ದು ಇರುತ್ತದೆ. ಭಾರತೀಯ ಸಂಸ್ಕೃತಿಯ ತಳಹದಿಯು ವೈಯಕ್ತಿಕ ಮತ್ತು ಸಾಮಾಜಿಕ ನೀತಿಮತ್ತೆಗಳಿಗೆ ಸಂಬಂಧಿಸಿದ್ದು ಇರುವದ ದೆ ಆಚಾರ, ವಿಚಾರ ಮತ್ತು ಮಾತುಗಳಲ್ಲಿಯೂ ಸ ನೀತಿಮತ್ತೆ, ಉಚ್ಚಧ್ಯೇಯ, ಪವಿತ್ರತೆ ಇವುಗಳಿಗೆ ಸಂ ಧಿಸಿದ್ದು ಇರುತ್ತದೆ. ಶಿಕ್ಷಕನಲ್ಲಿ ಈ ಮೇಲಿನವು ಅನು ಣೀಯವಾಗಿರಬೇಕು. ನಮ್ಮ ಹಳ್ಳಿಯ ಶಾಲೆಗಳಲ್ಲಿ ಶಿಕ್ಷ ಹೊಂದತಕ್ಕ ಬಾಲಕರು ಮುಂದಿನ ಸಮಾಜದ ನ ಭಾವೀರಾಷ್ಟ್ರದ ಉಚ್ಚ ನಾಗರಿಕರಾಗತಕ್ಕವರಿರುವದಂ ಗುರುವು ತನ್ನ ವೈಯಕ್ತಿಕ ಪ್ರಭಾವವನ್ನು ಬೀರಿ ಮ ಮಾನಸಿಕ ಮತ್ತು ಆತ್ಮಿಕ ವಿಕಾಸವನ್ನು ಮಾಡುವ ಪ್ರತಿಯೊಬ್ಬ ಶಿಕ್ಷಕನ ವೈಯಕ್ತಿಕ ಜೀವನವಿರುವದು ಶ್ಯವಿದೆ.

ಇಂದಿನ ಶಿಕ್ಷಣದಲ್ಲಿ ಶಿಕ್ಷಕರಿಗೆ ಬರೇ ಶಾಲೆಯ ಕಾ ಕ್ಷೇತ್ರ ಮಾತ್ರವಿರದೆ, ಇಡೀ ಹಳ್ಳಿಯೇ ಆತನ ಕಾ ಕ್ಷೇತ್ರವಾಗುವದು. ಬಾಲಕರಿಗೆ ಸಮಾಜದ ಶಿಕ್ಷಣವ ಕೊಡುತ್ತಿರುವಾಗ ಹಳ್ಳಿಯೇ ಒಂದು ಪ್ರಯೋಗಶ ಯಾಗುವದು. ನಾಗರಿಕತೆಯ ಶಿಕ್ಷಣವನ್ನು ಕೊಡುವ ಶಿಕ್ಷಕರೂ, ಹುಡುಗರೂ, ಹಳ್ಳಿಯ ವಿವಿಧ ಜೀವನದ ಶಿ ಕ್ಷಣೆ ಮಾಡುತ್ತಾ, ಪ್ರತ್ಯಕ್ಷ ಸೇವಾರೂಪದಿಂದ ಹಳ್ಳಿ ಜನರ ಜೀವನ ಮಟ್ಟವನ್ನೇ ಸುಧಾರಿಸುವ ಕೆಲಸ ಮ ಬೇಕಾಗುವದು. ಇದರಿಂದ ಅಜ್ಞಜನರಿಗೆ ಮಾರ್ಗದ ಮಾಡುವ ಜವಾಬದಾರಿಯು ಶಿಕ್ಷಕನ ಮೇಲೆಯೇ ವದು. ಶಿಕ್ಷಕನು ಈ ಹೊಸ ಯುಗದಲ್ಲಿ ಸಮಾಜ ಸ ಕನು. ಆದರಿಂದ ಅವನ ಹೃದಯವು ವಿಶಾಲವಾದ ಇರಬೇಕು. ಹಳ್ಳಿಗರ ವಿಷಯದಲ್ಲಿ ಅವನಿಗೆ ಸಹಾ ಭೂತಿ ಮತ್ತು ಸಮಭಾವವಿರಬೇಕು.

ಇಂದಿನ ಶಾಲೆಯಲ್ಲಿ ಶಿಕ್ಷಕನು ಶ್ರಮಸಹಿಷ್ಣುವಿರಬೇಕ ಅವನು ಶ್ರಮ ಜೀವನದ ಮಹತ್ವವನ್ನು ಅರಿತವನಿರಬೇ ಮೂಲೋದ್ಯೋಗದ ಶಿಕ್ಷಣದಲ್ಲಿ ಶ್ರಮಜೀವನಕ್ಕೆ ಪ್ರಧಾ ಸ್ಥಾನವಿದೆ. ಶ್ರಮ ಜೀವನದಲ್ಲಿ ಅತ್ಯಂತ ಶ್ರದ್ಧೆ ಇದ್ದ ಪ ರತು ಹಳ್ಳಿಗರ ಜೀವನದಲ್ಲಿ ಶಿಕ್ಷಕನು ಸಮರಸಾ ಲಾರನು.

ಇಂದಿನ ಶಿಕ್ಷಕನಿಗೆ ಜ್ಞಾನ ಸಂಗ್ರಹದ ಲಾಲಸೆಯಿರ ಬೇಕು. ಶಿಕ್ಷಣದ ವಿವಿಧ ಅಂಗಗಳ ಸಮ್ಯಕ್ ಜ್ಞಾನವಿದ್ದ ಹೊರತು ಶಾಲೆಯಲ್ಲಿ ಶಿಕ್ಷಣವನ್ನು ಸಾಗಿಸುವದು ಅಶಕ್ಯ. ಅರ್ಧಮರ್ಧ ಜ್ಞಾನದಿಂದ ಶಿಕ್ಷಕನು ಮಕ್ಕಳ ಬೌದ್ಧಿಕ ಶಿಕ್ಷಣದ ಹ್ರಾಸಕ್ಕೆ ಕಾರಣನಾಗುತ್ತಾನೆ.

ಶಿಕ್ಷಕರಲ್ಲಿ ಕ್ರೀಡಾವೃತ್ತಿ ಅವಶ್ಯ ಬೇಕು. ಈ ವೃತ್ತಿಯಲ್ಲಿ ಸಾಹಸ, ಕಲ್ಪಕತೆ, ಪ್ರಸನ್ನತೆ, ತಾಳ್ಮೆ, ಸಹಕಾರ, ಸಂಘಟನ, ಪ್ರಯತ್ನ, ಜಯಾಪಜಯಗಳನ್ನು ಪ್ರಸನ್ನತ್ತು ಸಮಭಾವಗಳಿಂದ ಎದುರಿಸುವ ಪ್ರವೃತ್ತಿ, ಇವು ಅಡಕವಾಗಿವೆ. ಈ ಗುಣಗಳಿಂದ ಶಿಕ್ಷಕನು ಹುಡುಗರಲ್ಲಿ ಮತ್ತು ಹಳ್ಳಿಗರಲ್ಲಿ ತನ್ನ ವ್ಯಕ್ತಿತ್ವವನ್ನು ಸ್ಥಾಪಿಸಿಕೊಳ್ಳುವನು.

ಇಂದಿನ ಶಿಕ್ಷಣದಲ್ಲಿ ನಾಗರಿಕ ಶಿಕ್ಷಣ, ಮೂಲೋದ್ಯೋಶಿಕ್ಷಣ ಮತ್ತು ಶ್ರಮ ಜೀವನ ಇವು ಇಂದಿನ ಶಿಕ್ಷಣದ ಮೂಲ ಮಂತ್ರಗಳು. ಶಾಲೆಯು ಹಳ್ಳಿಯಲ್ಲಿ ಇರಬೇಕಾದ ಆದರ್ಶ ಜೀವನದ ಪ್ರತಿಬಿಂಬವಾಗಿರಬೇಕು. ಈ ಧ್ಯೇಯವನ್ನು ಮುಂದೆ ಇಟ್ಟುಕೊಂಡು ಅವಿರತ ಪ್ರಾಮಾಣಿಕ ರೀಯಿಂದ ದುಡಿಯುವದೇ ಶಿಕ್ಷಕರ ಆದ್ಯ ಕರ್ತವ್ಯವಾಗಿದೆ.

ಇಂದಿನ ಶಿಕ್ಷಕರಿಗೆ ವೈಯಕ್ತಿಕವಾಗಿ ಎಷ್ಟೋ ಕೌಟುಂಬಿಕ ಮತ್ತು ಆರ್ಥಿಕ ತೊಡಕುಗಳಿವೆ. ಅವರಿಗೆ ಸಮಾಜದ ಸಹಾನುಭೂತಿ ಬೇಕು.

ಈ ಮೇಲೆ ವಿವರಿಸಿದ ಮಾರ್ಗವೇ ಧ್ಯೇಯಮಾರ್ಗ. ಈ ಧ್ಯೇಯವನ್ನೇ ಮುಂದೆ ಇಟ್ಟುಕೊಂಡು ಪ್ರತಿಯೊಬ್ಬ ಶಿಕ್ಷಕನು ತನ್ನ ಕೈಲಾದ ಮಟ್ಟಿಗೆ ಈ ಪಥದೊಡನೆ ಧೈರದಿಂದ ಸಾಗಿದರೆ ಜನತಾ ಜನಾರ್ದನನು ಬಡಶಿಕ್ಷಕರನ್ನು ಮರೆಯಲಾರನು ಎಂದು ಭರವಸೆಯಿದೆ.

ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆ, ೧೯೪೯

ಕಾರ್ಯಕ್ರಮ

ಗುರುವಾರ, ೫—೧—೧೯೪೯.	೧೧-೦ ರಿಂದ ೧೪-೧೪ ರ ವರೆಗೆ	ಪರೀಕ್ಷೆಗೆ ಕೂಡುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
	೧೧-೩೦ ರಿಂದ ೧೨-೩೦ ರ ವರೆಗೆ	ಗಣಿತ.	೧೦೦
	೧-೩೦ ರಿಂದ ೨-೧೫ ರ ವರೆಗ	ಸಾಮಾನ್ಯಜ್ಞಾನ ಕಾಗದ ೧ (ಐತಿಹಾಸಿಕ, ಮತ್ತು ಭೌಗೋಲಿಕ ಮತ್ತು ರಾಜಕೀಯ)	೫೦
	೩-೦ ರಿಂದ ೩-೪೫ ರ ವರೆಗೆ	ಸಾಮಾನ್ಯಜ್ಞಾನ, ಕಾಗದ ೨ (ಭೌಗೋಲಿಕ, ಪ್ರಾಕೃತಿಕ ಮತ್ತು ಶಾಸ್ತ್ರೀಯ)	೫೦
ಶುಕ್ರವಾರ, ೫—೧—೧೯೪೮.	೨-೦ ರಿಂದ ೨-೪೫ ರ ವರೆಗೆ	ಪ್ರಾದೇಶಿಕ ಭಾಷೆ, ಕಾಗದ ೨ (ಮೌನವಾಚನ, ಪುನರ್ರಚನೆ, ಪ್ರಬಂಧ ರಚನೆ (ನಿಬಂಧ)	೫೦
	೪-೦ ರಿಂದ ೪-೪೫ ರ ವರೆಗೆ	ಪ್ರಾದೇಶಿಕ ಭಾಷೆ, ಕಾಗದ ೩ (ಓದುವದು, ಅರ್ಥಗ್ರಹಣ ಮುಂತಾದವು)	೫೦

ಧಾರವಾಡ.
೩—೧೨—೧೯೪೮

(ಸಹಿ) ಏ. ಎನ್. ಸಾನೆ.
ಎಜ್ಯುಕೇಶನಲ್ ಇನಸ್ಪೆಕ್ಟರ,
ದ ಭಾ. ಧಾರವಾಡ.

—ನಾವು ಯಾರು ?—

(ಲಾವಣಿ)

ಒಳ್ಳೆ ವಿದ್ಯಾವಂತರ್ಯಾರು । ಒಳ್ಳೆ ಬುದ್ಧಿವಂತರ್ಯಾರು ।
ಕಲ್ಲಿಗೆ ಚಿತ್ರ ಕೊರೆದವರ್ಯಾರು । ನಾವಲ್ಲವೇ ।
ನಾವಲ್ಲವೇ । ನಮ್ಮ ಜನರಲ್ಲವೇ ।
ಹಳ್ಳಿಯವರು ಎಂಬವರ್ಯಾರು । ಎಲ್ಲಾ ಬೆಳೆದು ಕೊಡುವವರ್ಯಾರು ।
ಮಿಲ್ಲಿನ ಕೆಲ್ಸ ಮಾಡುವರ್ಯಾರು । ನಾವಲ್ಲವೇ ॥ ೪ ॥

ಕೀರ್ತಿಶೌರ್ಯ ಉಳ್ಳವರ್ಯಾರು । ಸ್ವಾರ್ಥತ್ಯಾಗ ಗೈದವರ್ಯಾರು ।
ಮಾತೃಸೇವೆ ಮಾಡುವರ್ಯಾರು । ನಾವಲ್ಲವೇ ।
ನಾವಲ್ಲವೇ । ನಮ್ಮ ಜನರಲ್ಲವೇ ।
ನೀತಿಯಿಂದ ನಡೆಯುವರ್ಯಾರು । ಭೀತಿಯನ್ನು ಬಿಟ್ಟವರ್ಯಾರು ।
ಸೋತು ಬಾರದವರು ಯಾರು । ನಾವಲ್ಲವೇ ॥ ೧ ॥

ಹತ್ತಿ ಬಿತ್ತಿ ಬೆಳೆಯುವರ್ಯಾರು । ಮತ್ತೆ ನೂಲ ತೆಗೆಯುವರ್ಯಾರು ।
ಬಟ್ಟೆ ನೇಯ್ದು ಕೊಡುವವರ್ಯಾರು । ನಾವಲ್ಲವೇ ।
ನಾವಲ್ಲವೇ । ನಮ್ಮ ಜನರಲ್ಲವೇ ।
ಹಳ್ಳಿಯವರು ಎಂಬವರ್ಯಾರು । ಎಲ್ಲಾ ಕೆಲ್ಸ ಮಾಡವರ್ಯಾರು ।
ನೀತಿಯಿಂದ ನಡೆಯುವರ್ಯಾರು । ನಾವಲ್ಲವೇ ॥ ೨ ॥

ಸತ್ತು ಸುಣ್ಣ ಆಗುವರ್ಯಾರು । ಕತ್ತಿ ಲದ್ದಿ ಎತ್ತುವರ್ಯಾರು ।
ಮತ್ತೆ ನೂಲ ತೆಗೆಯುವರ್ಯಾರು । ನಾವಲ್ಲವೇ ।
ನಾವಲ್ಲವೇ । ನಮ್ಮ ಜನರಲ್ಲವೇ ।
ನಿತ್ಯ ಬೀದಿ ಗುಡಿಸುವರ್ಯಾರು । ಸತ್ಯದಿಂದ ನಡೆಯುವರ್ಯಾರು ।
ಚಿತ್ತದಿಂದ ಕೇಳುವರ್ಯಾರು । ನಾವಲ್ಲವೇ ॥ ೩ ॥

ಕಾಲಿಗೆ ಬೂಟು ಹೊಲಿಯುವರ್ಯಾರು । ಮೈಲಿಗೆ ಬಟ್ಟೆ ಒಗೆಯುವರ್ಯಾರು ।
ಹೊಟ್ಟೆಗಿಲ್ದೆ ತಿರುಗುವರ್ಯಾರು । ನಾವಲ್ಲವೇ ।
ನಾವಲ್ಲವೇ । ನಮ್ಮ ಜನರಲ್ಲವೇ ।
ಬೂಟು ಸೂಟು ಹಾಕುವರ್ಯಾರು । ಕೋಟು ಹ್ಯಾಟು ಹಾಕುವರ್ಯಾರು ।
ಆಫೀಸ ಕೆಲ್ಸ ಮಾಡುವರ್ಯಾರು । ನಾವಲ್ಲವೇ ॥ ೪ ॥
ಹಳ್ಳಿಯವರು ಎಂಬವರ್ಯಾರು । ಎಲ್ಲಾ ಬೆಳೆದು ಕೊಡುವವರ್ಯಾರು ।
ಮಿಲ್ಲಿನ ಕೆಲ್ಸ ಮಾಡುವರ್ಯಾರು । ನಾವಲ್ಲವೇ ।
ನಾವಲ್ಲವೇ । ನಮ್ಮ ಜನರಲ್ಲವೆ ।

ಕೀರ್ತಿ ಶೌರ್ಯ ಉಳ್ಳವರ್ಯಾರು । ಸ್ವಾರ್ಥತ್ಯಾಗ ಗೈದವರ್ಯಾರು ।
ಮಾತೃಸೇವೆ ಮಾಡುವರ್ಯಾರು । ನಾವಲ್ಲವೇ ॥ ೫ ॥

—ಎಸ್ .ಜಿ. ಕುಂಬಾರ
ಸರಕಾರೀ ಗಂಡು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಯುಗಪುರುಷ ಬಾಪೂಜಿ

ಸಾಗರದೋಪಮ ಶಾಂತಿಯ ।
ಆಗರ ಘನ ಸತ್ಯ ಮೂರ್ತಿ ಪಾವನ ಚರಿತಾ ॥
ಭೋಗದ ಭಾಗ್ಯವ ನೋಡದ ।
ತ್ಯಾಗದ ಸುರ-ಕೀರ್ತಿ ಸಮರ ಶಾಂತಿಯ ವೀರಾ ॥ ೧ ॥

ಅಂಧತೆ ಬೀರಿದ ಆಂಗ್ಲರ ।
ಹೊಂದದ ಆಳ್ವಿಕೆಗೆ ನೊಂದು ಕುಂದಿದ ಜನದಾ ॥
ನಂದವ ತೊಡೆದಾ ನೀಚರ—।
ನಂದೇ ಓಡಿಸಿದೆ ಸಾಗರಾಚೆಗೆ ನೀನೈ ॥ ೨ ॥

ಭಾರತ ಮಾತೆಯ ಭಾಗ್ಯವ ।
ಬೀರುತೆ ಪರದೇಶದಲ್ಲಿ ಮಾತೆಯ ತೇಜಾ-॥
ಗಾರವ ನಿಲಿಸುತ ಭರತರ್ ।
ಸಾರುಳ್ಳರು ಕೀಳಲ್ಲವೆನುತರುಹಿದೆ ಜಗಕೈ ॥ ೩ ॥

ದೇವನ ರಾಜ್ಯದಿ ಭಿನ್ನತೆ-।
ಯಾವದು ಇದು ಇಲ್ಲ ದೇವ ನಿರ್ಮಲ, ಶುದ್ಧ ॥
ಪಾವನ ಮನದಲಿ ನೋಡಲು ।
ಆವದು ತಾನಿಲ್ಲವೆಂದು ತಿಳಿಸಿಹೆ ಆರ್ಯ ॥ ೪ ॥

ದೇವನ ರಾಜ್ಯದಿ ಭೇದವೇ ? ।
ದೇವನ ರಾಜ್ಯದೊಳು ದುಃಖ ಸುಖಗಳು ಉಂಟೇ ? ॥
ದೇವನಲಿ ಸಿರಿ ಬಡತನವೇ ? ।
ಆವಾಗಿದು ಬೇಡವೆಂದು ದುಡಿದಿಹೆ ಪೂಜ್ಯ ॥ ೫ ॥

ಸಾ(ಸ)ರ್ವತ ರಕ್ಷಿಪ ತಂದೆಯೆ, ।
ಓರ್ವಜ್ಞನ ದುಸ್ಪಕೃತಿಗೆ ನೊಂದುತ ನೀನೈ ॥
ತೋರ್ವಾ ಲೋಕಕೆ ಸರಿದೈ ।
ಕಾರ್ವಳು ಭೂಮಾತೆ ಭರತೆ ಶೋಕಾನಲನಂ ॥ ೬ ॥

ನಿನ್ನಯ ಶಕ್ತಿಯ ಯುಕ್ತಿಯ ।
ನಿನ್ನಯ ತತ್ವವನು ದೇವ ಗಗನದಿ ಕುಳಿತೀ-॥
ಗುನ್ನತದಲಿ ಬೋಧಿಸಿ ನೀ-।
ನುನ್ನತ ಮಾರ್ಗದೊಳು ನಡೆಸು ನಮ್ಮೆಲ್ಲರನೈ ॥ ೭ ॥

ಸಮುದಾಯ ಶಿಕ್ಷಣ

ಪ್ರಧಾನ ಚಟುವಟಿಕೆ:- ವಿದ್ಯಾರ್ಥಿನಿಯರಿಗಾಗಿ ಮೂತ್ರಿ ತಯಾರಿಸುವದ

ಮೂತ್ರಿಯ ನೆಲಗಟ್ಟನ್ನು ತಯಾರಿಸುವದು.

ಶಿಕ್ಷಕರು: ಶ್ರೀ. ಈ. ಆರ್. ರಾವೂತ ವರ್ಗ; ೬

ಮೆಟ್ಟುಗಳು	ಮೆಟ್ಟುಗಳ ವಿವರ	ಆವಶ್ಯಕ ಜ್ಞಾನ
೧. ಯೋಜನೆ	೧) ಪ್ರೇರಣೆ:—	ಆರೋಗ್ಯದೃಷ್ಟಿಯಿಂದ ನಾಲೆಗಳಿಗೆ ಮೂತ್ರಿಗಳಿರು ಅತ್ಯವಶ್ಯವು. ಮೂತ್ರಿಗಳಿರುವದರಿಂದ ನಾಲೆಯ ಪರಿಸರವು ನ ವಾಗಿ ಉಳಿಯುವದು. ಮೂತ್ರಿಗಳ ಯೋಗ್ಯ ಉಪಯೋಗ ವ. ಕೊಂಡಲ್ಲಿ ರೋಗಗಳ ಪ್ರಸಾರವಾಗಲಾರದು ಆದರೆ ಯೊ ಕಾಲಕ್ಕೆ ಮೂತ್ರಿಗಳನ್ನು ನಿಯಮಿತತನದಿಂದ ಸ್ವಚ್ಛಗೊ ವದು ಮಹತ್ವವುಳ್ಳದ್ದು. ಮೂತ್ರಿಯಲ್ಲಿ ಸಂಚಯವಾದ ಮೂ ವನ್ನು ಗೊಬ್ಬರದ ಕಳೆಯುವಿಕೆಗಾಗಿ ಉಪಯೋಗಿಸಬಹು ಏಕೆಂದರೆ ಮೂತ್ರದಲ್ಲಿ ನೈಟ್ರೊಜನ್, ಫಾಸ್ಫರಸ್ ಮತ್ತು ಟ್ಯಾಶ ಮೊದಲಾದ ದ್ರವ್ಯಗಳು ಇರುವವು. ಈ ದ್ರವ್ಯಗಳು ಜಿ ಜಂತುಗಳಿಗೆ ಆಹಾರವಾಗಿ ದೊರೆತು, ಅವು ಗೊಬ್ಬರವನ್ನು ಕೂ ಲೆ ಕಳೆಯುವಂತೆ ಮಾಡುವವು. ಆದರೆ ವಿದ್ಯಾರ್ಥಿನಿಯರಿಗ ಪ್ರತ್ಯೇಕವಾದ ಮೂತ್ರಿಯ ವ್ಯವಸ್ಥೆ ಮಾಡಿದರೆ ಅವರ ಗೌ ವನ್ನು ಕಾಯ್ದಂತಾಗುವದು.
	೨) ಕೆಲಸದ ವಿವರ.	ಮೂತ್ರಿಯನ್ನು ತಯಾರಿಸುವದರಲ್ಲಿ ಎರಡು ಮುಖ್ಯ ಕೆ ಗಳಿರುವವು. ೧. ನೆಲಗಟ್ಟನ್ನು ತಯಾರಿಸುವದು, ೨. ಅದಕ್ಕೆ ಮಟ ಮಾಡುವದು. **ಮೂತ್ರಿಯ ನೆಲಗಟ್ಟನ್ನು ತಯಾರಿಸಬೇಕಾದರೆ:—** ೧. ಸ್ಥಳವನ್ನು ಗೊತ್ತುಪಡಿಸಬೇಕು. ೨. ನೆಲಗಟ್ಟನ್ನು ತಯಾರಿಸಬೇಕು. ೩. ಮೂತ್ರ ಸಂಚಯದ ತೆಗ್ಗನ್ನು ತೋಡಬೇಕು. ೪. ಮೆಟ್ಟುಗಳನ್ನು ಕೂಡ್ರಿಸಬೇಕು. **ಒಂದು ಒಳ್ಳೇ ಮೂತ್ರಿಯನ್ನು ತಯಾರಿಸಬೇಕಾದರೆ:—** ೧. ಮೂತ್ರಿಯು ಸಾಲೆಯ ವಾಯುವ್ಯಕ್ಕೆ ಇಲ್ಲವೆ ಆಗ್ನೇಯ ಸುಮಾರು ೫೦ ಯಾರ್ಡು ಅಂತರದಲ್ಲಿದ್ದು, ಗಾಳಿಯು ಸುವ ದಿಸೆಯಲ್ಲಿರದಂತೆ ನೋಡಿಕೊಳ್ಳತಕ್ಕದ್ದು. (ಸಾ ಸಾಧಾರಣವಾಗಿ ಮೂಡಣ ಹಾಗೂ ಪಡುವಣ ಗಾಳಿ ಬೀಸುತ್ತವೆ.
೨. ಪೂರ್ವ ಸಿದ್ಧತೆ:—	ಬೇಕಾದ ಸಾಧನಗಳ ಸಾಕಷ್ಟು ಸಂಗ್ರಹ, ಹಾಗೂ ಅವುಗಳ ಸರಿಯಾದ ಉಪಯೋಗ.	

ಪಾಠದ ಟಿಪ್ಪಣಿಗಳು

ಉಪಚಟುವಟಿಕೆಗಳು:-೧. ನೆಲಗಟ್ಟನ್ನು ತಯಾರಿಸುವದು, ೨. ತಟ್ಟಿಯನ್ನು ಹೆಣೆಯುವದು.

ದಿನಾಂಕ ೨೪-೯-೧೯೪೮

ಕಲಿಸುವ ಕ್ರಮ

ಶಿಕ್ಷಕರು ವರ್ಗದ ಸ್ವಚ್ಛತೆ, ವಿದ್ಯಾರ್ಥಿಗಳ ಅಚ್ಚುಕಟ್ಟುತನಗಳ ಕಡೆಗೆ ಲಕ್ಷ್ಯ ಕೊಡುವರು.

ಸಾಲೆಗಳಿಗೆ ಮೂತ್ರಿಗಳ ಅವಶ್ಯಕತೆ, ಮೂತ್ರಿಗಳಿರುವದರಿಂದ ಆಗುವ ಲಾಭಗಳು, ಮೂತ್ರಿಗಳ ಸ್ವಚ್ಛತೆ, ಮೂತ್ರಿಯಲ್ಲಿ ಸಂಚಯವಾದ ಮೂತ್ರದ ಉಪಯೋಗ ಮತ್ತು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕವಾದ ಮೂತ್ರಿಯ ಅವಶ್ಯಕತೆ ಇವುಗಳನ್ನು ಕುರಿತು ಶಿಕ್ಷಕರು ಪ್ರಶ್ನೆಗಳ ಮುಖಾಂತರ ವಿದ್ಯಾರ್ಥಿಗಳಿಂದ ಹೊರಡಿಸುವರು.

ಕೆಲಸದ ವಿವರಗಳನ್ನು ವಿದ್ಯಾರ್ಥಿಗಳೊಡನೆ ಚರ್ಚಿಸಿ, ಅವುಗಳನ್ನು ಶಿಕ್ಷಕರು ಕರೇ ಹಲಿಗೆಯ ಮೇಲೆ ಬರೆಯುವರು.

೧) ಸಾಲೆಯ ಯಾವ ದಿಕ್ಕಿಗೆ ಮೂತ್ರಿಯು ಇರಬೇಕು? ಏಕೆ? ಅದು ಸಾಲೆಯಿಂದ ಎಷ್ಟು ಅಂತರದಲ್ಲಿರಬೇಕು? ಏಕೆ? ಮೂತ್ರಿಯ ಸ್ಥಳವನ್ನು ಗೊತ್ತುಪಡಿಸುವಾಗ ಗಾಳಿ ಬೀಸುವ ದಿಸೆಯನ್ನು ಕಂಡು ಹಿಡಿಯಬೇಕಾದ ಕಾರಣವೇನು? ನಮ್ಮಲ್ಲಿ ಯಾವ ದಿಕ್ಕುಗಳಿಂದ ಗಾಳಿಗಳು ಬೀಸುತ್ತವೆ?

ಮೆಟ್ಟುಗಳು	ಮೆಟ್ಟುಗಳ ವಿವರ	ಆವಶ್ಯಕ ಜ್ಞಾನ
		ಸಾಧಾರಣವಾಗಿ ಮೂಡಣ ಹಾಗೂ ಪಡುವಣ ಗಾಳಿಗ ಬೀಸುತ್ತವೆ.
		೨) ನೆಲಗಟ್ಟು ೫ ಫೂ. ಉದ್ದ, ೪ ಫೂ. ಅಗಲವಾಗಿದ್ದು, ನೆಲದ ೩ ಇಲ್ಲವೆ ೪ ಇಂಚು ಎತ್ತರವಾಗಿರಬೇಕು; ಮತ್ತು ಪ್ರವೇ ವಿರುದ್ಧ ದಿಕ್ಕಿಗೆ ಸುಮಾರು ೧೫ ಅಂಶದ ಕೋನದಷ್ಟು ಇಳ ರಾಗುತ್ತ ಹೋಗಬೇಕು. ನೆಲಗಟ್ಟಿನ ಪಾತಳಿಯ ಇಳಿಜಾರ ಇಂಚಿನಲ್ಲಿ ೧ ಇಂಚಿನಷ್ಟು ಇರಬಹುದು.
		ಆಕೃತಿ—
		೩) ಮೂತ್ರ ಸಂಚಯದ ತೆಗ್ಗು ಪ್ರವೇಶದ ವಿರುದ್ಧ ದಿಕ್ಕಿಗಿದ್ದ ಅದರ ತ್ರಿಜ್ಯವು ೧ ಫೂಟು ಮತ್ತು ಆಳ ೨ ಫೂಟು ಇರಬೇಕ
		೪) ೧ ಫೂಟು ಉದ್ದ ೬ ಇಂಚು ಅಗಲವುಳ್ಳ ೨ ಮೆಟ್ಟುಗಳನ ನೆಲಗಟ್ಟಿನ ಮಧ್ಯದಲ್ಲಿ ಒಂದು ಫೂಟು ಅಂತರದ ಮೇಲೆ, ನೆ ಗಟ್ಟಿಗಿಂತ ೨ ಇಲ್ಲವೆ ಮೂರು ಇಂಚು ಎತ್ತರದ ಮೇಲೆ ಕೂ ಬೇಕು.
		ಒಂದು ಫೂಟುಪಟ್ಟಿ, ೪ ಫೂಟಿನ ಒಂದು ಹಗ್ಗ; ೩ ಗುದ್ದಲಿಗಳ ಮೂರು ಸಲಿಕೆಗಳು, ಒಂದು ಕುರ್ಪಿ ಮತ್ತು ನಾಲ್ಕು ಬುಟ್ಟಿಗಳ ಗೊರಸು, ೧'×೬"ನ ಎರಡು ಮೆಟ್ಟುಗಳು
	೨) ಸಂಘಟನೆ:—	೧) ಗೊರಸನ್ನು ಅಗೆಯುವವರು ಇಬ್ಬರು ವಿ. ಗಳ ಹೆಸರುಗಳ
		೨) ,, ತುಂಬುವವರು ,, ,, ,,
		೩) ,, ಒಯ್ಯುವವರು ,, ,, ,,
		೪) ,, ಹರವುವವರು ಮತ್ತು ಮೆಟ್ಟು ಕೂಡ್ರಿಸುವವರು ಒಬ್ಬ ವಿ. ಯ ಹೆಸರು
		೫) ತೆಗ್ಗನ್ನು ತೋಡುವವರು. ಇಬ್ಬರು ವಿದ್ಯಾರ್ಥಿಗಳ ಹೆಸ
	೩) ವೇಳೆಯ ಕಲ್ಪನೆ:—	೧೧ ವಿದ್ಯಾರ್ಥಿಗಳಿದ್ದಲ್ಲಿ ನೆಲಗಟ್ಟನ್ನು ತಯಾರಿಸುವದಕ್ಕ ಸುಮಾರು ಒಂದೂಕಾಲು ತಾಸಿನ ಅವಧಿ ಬೇಕಾಗಬಹುದು.
೩ ಕಾರ್ಯಾರಂಭ	೧) ಶಿಕ್ಷಕರ ಮಾದರಿಯ ಕೃತಿ	ನೆನಪಿನಲ್ಲಿಡಬೇಕಾದ ಸಂಗತಿಗಳು:—
		೧) ಅಗೆಯಬೇಕಾದ ನೆಲವನ್ನು ಎದುರಿಗಿಟ್ಟುಕೊಂಡು ಗುದ್ದ ಯಿಂದ ಅಗೆಯಬೇಕು.

ಕಲಿಸುವ ಕ್ರಮ

೨) ಮೂತ್ರಿಯ ನೆಲಗಟ್ಟಿನ ಉದ್ದ, ಅಗಲ, ಎತ್ತರ ಇವು ಎಷ್ಟಿರಬೇಕು? ಅದರ ಪಾತಳಿಯು ಹೇಗಿರಬೇಕು? ಅದು ಯಾವ ದಿಕ್ಕಿಗೆ ಇಳಿಜಾರು ಆಗಬೇಕು? ಏಕೆ? ಇಳಿಜಾರಿನ ಕೋನವೆಷ್ಟಿರಬೇಕು? ಎಷ್ಟು ಇಂಚಿನ ಇಳಿಜಾರು ಬೇಕಾದೀತು? ಏಕೆ?

೩) ಮೂತ್ರ ಸಂಚಯದ ತೆಗ್ಗು ಮೂತ್ರಿಯ ಯಾವ ದಿಕ್ಕಿಗಿರಬೇಕು? ಅದರ ಆಳ ಮತ್ತು ತ್ರಿಜ್ಯಗಳು ಎಷ್ಟಿರ ಬೇಕು?

೪) ಮೆಟ್ಟುಗಳು ಎಷ್ಟು ಉದ್ದ ಅಗಲವಾಗಿರಬೇಕು? ಏಕೆ? ಅವನ್ನು ಎಲ್ಲಿ ಮತ್ತು ಒಂದರಿಂದೊಂದನ್ನು ಎಷ್ಟು ಅಂತರದ ಮೇಲೆ ಕೂಡ್ರಿಸಬೇಕು?

(ಮೇಲಿನ ಪ್ರಶ್ನೆಗಳಿಗೆ ಉತ್ತರ ಹೊರಡಿಸುವಾಗ ಅವಶ್ಯವಿದ್ದಲ್ಲಿ ಶಿಕ್ಷಕರು ಆಕೃತಿಯ ಸಹಾಯವನ್ನು ತಕ್ಕೊಳ್ಳುವರು)

ಮೂತ್ರಿಯ ನೆಲಗಟ್ಟನ್ನು ತಯಾರಿಸಬೇಕೆಂದರೆ ಯಾವ ಯಾವ ಸಾಧನಗಳು ಎಷ್ಟೆಷ್ಟು ಬೇಕು? ಶಿಕ್ಷಕರು ಸಾಧನಗಳ ಸರಿಯಾದ ಉಪಯೋಗವನ್ನು ಕುರಿತು ವಿದ್ಯಾರ್ಥಿಗಳೊಡನೆ ಚರ್ಚಿಸುವರು.

ನೆಲಗಟ್ಟನ್ನು ತಯಾರಿಸುವದರಲ್ಲಿ ಅಡಕವಾದ ಕೆಲಸಗಳನ್ನು ಕುರಿತು ಚರ್ಚಿಸುತ್ತ, ಆಯಾ ಕೆಲಸಗಳಿಗಾಗಿ ಅವಶ್ಯವಿದ್ದಷ್ಟು ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುಸಾರ ಬೇರೆ ಬೇರೆ ಕೆಲಸಗಳನ್ನು ಆರಿಸಿಕೊಳ್ಳಲು ಹೇಳುವದು.

೧೧ ವಿದ್ಯಾರ್ಥಿಗಳು ನೆಲಗಟ್ಟನ್ನು ತಯಾರಿಸಬೇಕಾದರೆ ಎಷ್ಟು ಅವಧಿ ಬೇಕಾದೀತು?

ಅಗೆಯುವ, ತುಂಬುವ, ಒಯ್ಯುವ ಮತ್ತು ಗೊರಸನ್ನು ಹರವುವ ಸರಿಯಾದ ಪದ್ಧತಿಗಳನ್ನು ಶಿಕ್ಷಕರು ಮಾಡಿ ತೋರಿಸುವರು.

ಮೆಟ್ಟುಗಳು	ಮೆಟ್ಟುಗಳ ವಿವರ	ಆವಶ್ಯಕ ಜ್ಞಾನ
		ಸಾಧಾರಣವಾಗಿ ಮೂಡಣ ಹಾಗೂ ಪಡುವಣ ಗಾಳಿ ಬೀಸುತ್ತವೆ.
		೨) ನೆಲಗಟ್ಟು ೫ ಫೂ. ಉದ್ದ, ೪ ಫೂ. ಅಗಲವಾಗಿದ್ದು, ನೆಲ ೩ ಇಲ್ಲವೆ ೪ ಇಂಚು ಎತ್ತರವಾಗಿರಬೇಕು; ಮತ್ತು ಪ್ರವೆ ವಿರುದ್ಧ ದಿಕ್ಕಿಗೆ ಸುಮಾರು ೧/೫ ಅಂಶದ ಕೋನದಷ್ಟು ಇ ರಾಗುತ್ತ ಹೋಗಬೇಕು. ನೆಲಗಟ್ಟಿನ ಪಾತಳಿಯ ಇಳಿಜಾ ಇಂಚಿನಲ್ಲಿ ೧ ಇಂಚಿನಷ್ಟು ಇರಬಹುದು.
		ಆಕೃತಿ—
		೩) ಮೂತ್ರ ಸಂಚಯದ ತೆಗ್ಗು ಪ್ರವೇಶದ ವಿರುದ್ಧ ದಿಕ್ಕಿಗಿ ಅದರ ತ್ರಿಜ್ಯವು ೧ ಫೂಟು ಮತ್ತು ಆಳ ೨ ಫೂಟು ಇರಬೆ
		೪) ೧ ಫೂಟು ಉದ್ದ ೬ ಇಂಚು ಅಗಲವುಳ್ಳ ೨ ಮೆಟ್ಟುಗ ನೆಲಗಟ್ಟಿನ ಮಧ್ಯದಲ್ಲಿ ಒಂದು ಫೂಟು ಅಂತರದ ಮೇಲೆ ಗಟ್ಟಿಗಿಂತ ೨ ಇಲ್ಲವೆ ಮೂರು ಇಂಚು ಎತ್ತರದ ಮೇಲೆ ಇ ಬೇಕು.
		ಒಂದು ಫೂಟುಪಟ್ಟಿ, ೪ ಫೂಟಿನ ಒಂದು ಹಗ್ಗ; ೫ ಗುದ್ದ ಮೂರು ಸಲಿಕೆಗಳು, ಒಂದು ಕುರ್ಪಿ ಮತ್ತು ನಾಲ್ಕು ಬುಟ್ಟಿ ಗೊರಸು, ೧'×೬"ನ ಎರಡು ಮೆಟ್ಟುಗಳು
	೨) ಸಂಘಟನೆ:—	೧) ಗೊರಸನ್ನು ಅಗೆಯುವವರು ಇಬ್ಬರು ವಿ. ಗಳ ಹೆಸರು
		೨) ,, ತುಂಬುವವರು ,, ,, ,,
		೩) ,, ಒಯ್ಯುವವರು ,, ,, ,,
		೪) ,, ಹರವುವವರು ಮತ್ತು ಮೆಟ್ಟು ಕೂಡ್ರಿಸುವವರು ಒಬ್ಬ ವಿ. ಯ ಹೆಸ
		೫) ತೆಗ್ಗನ್ನು ತೋಡುವವರು. ಇಬ್ಬರು ವಿದ್ಯಾರ್ಥಿಗಳ ಇ
	೩) ವೇಳೆಯ: ಕಲ್ಪನೆ:—	೧೧ ವಿದ್ಯಾರ್ಥಿಗಳಿದ್ದಲ್ಲಿ ನೆಲಗಟ್ಟನ್ನು ತಯಾರಿಸುವದ ಸುಮಾರು ಒಂದೂಕಾಲು ತಾಸಿನ ಅವಧಿ ಬೇಕಾಗಬಹುದು.
೩ ಕಾರ್ಯಾರಂಭ	೧) ಶಿಕ್ಷಕರ ಮಾದರಿಯ ಕೃತಿ	ನೆನಪಿನಲ್ಲಿಡಬೇಕಾದ ಸಂಗತಿಗಳು:—
		೧) ಅಗೆಯಬೇಕಾದ ನೆಲವನ್ನು ಎದುರಿಗಿಟ್ಟುಕೊಂಡು ಗು ಯಿಂದ ಅಗೆಯಬೇಕು.

ಕಲಿಸುವ ಕ್ರಮ

೨) ಮೂತ್ರಿಯ ನೆಲಗಟ್ಟಿನ ಉದ್ದ, ಅಗಲ, ಎತ್ತರ ಇವು ಎಷ್ಟಿರಬೇಕು? ಅದರ ಪಾತಳಿಯು ಹೇಗಿರಬೇಕು? ಅದು ಯಾವ ದಿಕ್ಕಿಗೆ ಇಳಿಜಾರು ಆಗಬೇಕು? ಏಕೆ? ಇಳಿಜಾರಿನ ಕೋನವೆಷ್ಟಿರಬೇಕು? ಎಷ್ಟು ಇಂಚಿನ ಇಳಿಜಾರು ಬೇಕಾದೀತು? ಏಕೆ?

೩) ಮೂತ್ರ ಸಂಚಯದ ತೆಗ್ಗು ಮೂತ್ರಿಯ ಯಾವ ದಿಕ್ಕಿಗಿರಬೇಕು? ಅದರ ಆಳ ಮತ್ತು ತ್ರಿಜ್ಯಗಳು ಎಷ್ಟಿರ ಬೇಕು?

ಮೆಟ್ಟುಗಳು ಎಷ್ಟು ಉದ್ದ ಅಗಲವಾಗಿರಬೇಕು? ಏಕೆ? ಅವನ್ನು ಎಲ್ಲಿ ಮತ್ತು ಒಂದರಿಂದೊಂದನ್ನು ಎಷ್ಟು ಅಂತರದ ಮೇಲೆ ಕೂಡ್ರಿಸಬೇಕು?

(ಮೇಲಿನ ಪ್ರಶ್ನೆಗಳಿಗೆ ಉತ್ತರ ಹೊರಡಿಸುವಾಗ ಅವಶ್ಯವಿದ್ದಲ್ಲಿ ಶಿಕ್ಷಕರು ಆಕೃತಿಯ ಸಹಾಯವನ್ನು ತೆಕ್ಕೊಳ್ಳುವರು)

ಮೂತ್ರಿಯ ನೆಲಗಟ್ಟನ್ನು ತಯಾರಿಸಬೇಕೆಂದರೆ ಯಾವ ಯಾವ ಸಾಧನಗಳು ಎಷ್ಟೆಷ್ಟು ಬೇಕು? ಶಿಕ್ಷಕರು ಸಾಧನಗಳ ಸರಿಯಾದ ಉಪಯೋಗವನ್ನು ಕುರಿತು ವಿದ್ಯಾರ್ಥಿಗಳೊಡನೆ ಚರ್ಚಿಸುವರು.

ನೆಲಗಟ್ಟನ್ನು ತಯಾರಿಸುವದರಲ್ಲಿ ಅಡಕವಾದ ಕೆಲಸಗಳನ್ನು ಕುರಿತು ಚರ್ಚಿಸುತ್ತ, ಆಯಾ ಕೆಲಸಗಳಿಗಾಗಿ ಅವಶ್ಯವಿದ್ದಷ್ಟು ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುಸಾರ ಬೇರೆ ಬೇರೆ ಕೆಲಸಗಳನ್ನು ಆರಿಸಿಕೊಳ್ಳಲು ಹೇಳುವದು.

೧೧ ವಿದ್ಯಾರ್ಥಿಗಳು ನೆಲಗಟ್ಟನ್ನು ತಯಾರಿಸಬೇಕಾದರೆ ಎಷ್ಟು ಅವಧಿ ಬೇಕಾದೀತು?

ಅಗೆಯುವ, ತುಂಬುವ, ಒಯ್ಯುವ ಮತ್ತು ಗೊರಸನ್ನು ಹರವುವ ಸರಿಯಾದ ಪದ್ಧತಿಗಳನ್ನು ಶಿಕ್ಷಕರು ಮಾಡಿ ತೋರಿಸುವರು.

ಮೆಟ್ಟುಗಳು	ಮೆಟ್ಟುಗಳ ವಿವರ	ಆವಶ್ಯಕ ಜ್ಞಾನ
	೨) ವಿದ್ಯಾರ್ಥಿಗಳ ಪ್ರತ್ಯಕ್ಷ ಕೃತಿ	೨) ಗೊರಸನ್ನು ಒಯ್ಯುವವರ ಶಕ್ತಿಯನ್ನರಿತು, ಅವರಿಂ ಒಯ್ಯಲು ಶಕ್ಯವಾಗಬಹುದಾದಷ್ಟೇ ಗೊಚ್ಚನ್ನು ತುಂಬಬೇ ಮತ್ತು ಹೊರಿಸಬೇಕು. ೩) ಗೊರಸಿನ ಬುಟ್ಟಿಯನ್ನು ಹೆಗಲಮೇಲೆ ಹೊತ್ತುಕೊಂ ಹೋಗಿ, ಹರವುವವನು ತೋರಿಸಿದ ಸ್ಥಳದಲ್ಲಿ ಗೊರಸನ್ನು ಮಾ ಒಗೆಯಬೇಕು, ೪) ಗೊರಸನ್ನು ಈ ಮೊದಲು ಹೇಳಿದಂತೆ ಇಳಿಜಾರಾಗಿ ಕುಪ್ಪಿ ಯಿಂದ ಹರವಬೇಕು. ೫) ಮೂತ್ರ ಸಂಚಯದ ತೆಗ್ಗನ್ನು ಪ್ರವೇಶದ ವಿರುದ್ಧ ದಿಕ್ಕಿನ ತೋಡಬೇಕು. ೬) ನೆಲಗಟ್ಟಿನ ಮಧ್ಯಭಾಗದಲ್ಲಿ ಒಂದು ಫೂಟು ಅಂತರದ ಮೇ ಮೆಟ್ಟುಗಳನ್ನು ಕೂಡ್ರಿಸಬೇಕು.
೪. ಪರಿಶೀಲನೆ	ಅ) ಯೋಜನೆ ಮತ್ತು ಪ್ರತ್ಯಕ್ಷ ಕಾರ್ಯಗಳಲ್ಲಿಯ ಹೆಚ್ಚುಕಡಿಮೆ	
	ಬ) ಕಾರ್ಯ ನಿರ್ವಹಣೆಯಲ್ಲಾದ ತಪ್ಪುಗಳು—	
	ಕ) ಆಕಸ್ಮಿಕ ಘಟನೆಗಳು ಹಾಗೂ ವಿದ್ಯಾರ್ಥಿಗಳು ಅವನ್ನು ಎದು ರಿಸಿದ ರೀತಿ—	

ಕಲಿಸುವ ಕ್ರಮ

ಯೋಜನೆಯ ಮೇರೆಗೆ ಮತ್ತು ಮಾದರಿಯ ಕೃತಿಯಲ್ಲಿ ತೋರಿಸಿದಂತೆ ವಿದ್ಯಾರ್ಥಿಗಳು ಕೆಲಸವನ್ನು ಸಾಗಿಸಿರುವರೋ ಇಲ್ಲವೊ ಎಂಬ ಬಗ್ಗೆ ಶಿಕ್ಷಕರು ಖಾತ್ರಿ ಮಾಡಿಕೊಳ್ಳುವರು. ಸರಿಯಾದ ರೀತಿಯಲ್ಲಿ ಕೆಲಸ ಮಾಡಲು ಅಸಮರ್ಥರಾದವರಿಗೆ ಶಿಕ್ಷಕರು ನೆರವಾಗಿ ಮಾರ್ಗದರ್ಶನ ಮಾಡುವರು.

ಅ) (೧) ಸಾಲೆಯ ಯಾವ ದಿಕ್ಕಿನಲ್ಲಿ ಮೂತ್ರಿಯ ನೆಲಗಟ್ಟನ್ನು ತಯಾರಿಸಿದಿರಿ ? (೨) ಅದು ಯಾವ ದಿಕ್ಕಿನಲ್ಲಿ ಇರಬೇಕೆಂದು ನಾವು ಯೋಚಿಸಿದ್ದೆವು ? (೩) ಶಾಲೆಯಿಂದ ಅದು ಎಷ್ಟು ಅಂತರದಲ್ಲಿದೆ? (೪) ನಮ್ಮ ಯೋಜನೆಯ ಮೇರೆಗೆ ಅದು ಎಷ್ಟು ದೂರದಲ್ಲಿರಬೇಕು ? (೫) ನೆಲಗಟ್ಟಿನ ಉದ್ದ ಅಗಲಗಳು ಎಷ್ಟಿವೆ ? (೬) ಅದರ ಉದ್ದ ಅಗಲಗಳು ಎಷ್ಟು ಇರಬೇಕೆಂದು ನಾವು ಬಗೆದಿದ್ದೆವು ? (೭) ನೆಲಗಟ್ಟಿನ ಪಾತಳಿಯು ನೆಲದಿಂದ ಎಷ್ಟು ಎತ್ತರವಾಗಿದೆ ಮತ್ತು ಯಾವ ದಿಕ್ಕಿಗೆ ಇಳಿಜಾರು ಆಗಿದೆ ? (೮) ಅದು ಎಷ್ಟು ಎತ್ತರವಾಗಿರಬೇಕೆಂದೂ ಮತ್ತು ಯಾವ ದಿಕ್ಕಿಗೆ ಇಳಿಜಾರು ಆಗಬೇಕೆಂದು ಯೋಜಿಸಲಾಗಿತ್ತು ? (೯) ಇಳಿಜಾರಿನ ಕೋನವು ಸುಮಾರು ಎಷ್ಟು ಅಂಶವಿದೆ ? (೧೦) ಅದು ಎಷ್ಟು ಅಂಶದ ಕೋನವಿರಬೇಕಿತ್ತು ? (೧೧) ಎಷ್ಟು ಇಂಚಿನ ಇಳಿಜಾರು ಆಗಿದೆ ? (೧೨) ಎಷ್ಟು ಇಂಚಿನ ಇಳಿಜಾರು ಆಗಬೇಕಿತ್ತು ? (೧೩) ನೆಲಗಟ್ಟನ್ನು ಏತರಿಂದ ತಯಾರಿಸಿದಿರಿ ? (೧೪) ಅದನ್ನು ಏತರಿಂದ ತಯಾರಿಸಬೇಕೆಂದು ಯೋಚಿಸಲಾಗಿತ್ತು ? (೧೫) ಮೂತ್ರ ಸಂಚಯದ ತೆಗ್ಗು ಪ್ರವೇಶದ ಯಾವ ದಿಕ್ಕಿಗೆ ಇದೆ ? (೧೬) ಯಾವ ದಿಕ್ಕಿಗೆ ಅದು ಇರಬೇಕೆಂದು ಯೋಚಿಸಿದ್ದಿರಿ? (೧೭) ಅದರ ಅಳತೆಗಳು ಎಷ್ಟು ಇವೆ ? (೧೮) ಯಾವ ಅಳತೆಯ ತೆಗ್ಗನ್ನು ತೋಡಬೇಕೆಂದು ಮಾಡಿದ್ದಿರಿ ? (೧೯) ಯಾವ ಅಳತೆಯ ಮೆಟ್ಟುಗಳನ್ನು ಎಲ್ಲಿ ಕೂಡಿಸಿದಿರಿ? (೨೦) ಯಾವ ಅಳತೆಯ ಮೆಟ್ಟುಗಳನ್ನು ಎಲ್ಲಿ ಕೂಡ್ರಿಸಬೇಕೆಂದು ನಮ್ಮ ಯೋಜನೆ ಇತ್ತು ?

ಬ) ಕಾರ್ಯ ನಿರ್ವಹಣದಲ್ಲಿ ಆದ ತಪ್ಪುಗಳು ಯಾವವು ? ಆ ತಪ್ಪುಗಳು ಏಕೆ ಆದವು?, ಅವನ್ನು ಹೇಗೆ ಸರಿಪಡಿಸಿದಿರಿ ?

ಕ) ಯಾವ ಆಕಸ್ಮಿಕ ಘಟನೆಗಳು ಸಂಭವಿಸಿದವು ? ಅವುಗಳನ್ನು ನೀವು ಹೇಗೆ ಎದುರಿಸಿದಿರಿ ?

ಮೆಟುಗಳು	ಮೆಟ್ಟುಗಳ ವಿವರ	ಆವಶ್ಯಕ ಜ್ಞಾನ
	ಡ) ತಗಲಿದ ವೆಚ್ಚ	**ಮೂತ್ರಿಯ ನೆಲಗಟ್ಟನ್ನು ತಯಾರಿಸಲು ತಗಲಿದ ಖರ್ಚಿನ ವಿವರ:—** ರೂ. ಆ. ಪೈ ೧) ಗೊರಸಿನ ಬೆಲೆ ೦—೦—೦ ೨) ಕೆಲಸ ಮಾಡಿದ ವಿದ್ಯಾರ್ಥಿಗಳ ಕೂಲಿ (ತಾಸಿಗೆ ೦—೩—೦ ಯಂತೆ ೧೧ ವಿದ್ಯಾರ್ಥಿಗಳ ಒಂದೂಕಾಲು ತಾಸಿನ ಕೂಲಿಯು) ೨—೯—೩ ಅಂತೂ ಖರ್ಚು ೨—೯—೩
೫ ರೂಢಿ	ಇ) ಮಾಡಿದ ಕೆಲಸದ ವರದಿ—	೧) ಮೂತ್ರಿಯ ನೆಲಗಟ್ಟಿನ ಆಕೃತಿ ತೆಗೆಯುವದು. ೨) ಮಾಡಿದ ಕೆಲಸದ ವರದಿಯನ್ನು ಬರೆದಿಡುವದು. **ಮೂತ್ರಿಗಳನ್ನು ಕುರಿತು ಒಂದು ಚಿಕ್ಕ ನಿಬಂಧ:—** ೧) ಮೂತ್ರಿಗಳ ಅವಶ್ಯಕತೆ ೨) ಮೂತ್ರಿಗಳು ಎಲ್ಲಿ ಇರಬೇಕು ? ೩) ಒಳ್ಳೇ ಮೂತ್ರಿ ಹೇಗಿರಬೇಕು ? ೪) ಮೂತ್ರಿಗಳಿಗೆ ತಗಲಬಹುದಾದ ವೆಚ್ಚ. ೫) ಮೂತ್ರಿಗಳಿಂದ ಆಗುವ ಲಾಭಗಳು.

ಸಮುವಾಯುವಾ

ಚಟುವಟಿಕೆ	ಭಾಷೆ (೧)	ಗಣಿತ (೨)	ಶಾಸ್ತ್ರೀಯ ವಿಜ್ಞಾನ (೪)
ಮೂತ್ರಿಯ ನೆಲಗಟ್ಟನ್ನು ತಯಾರಿಸುವದು	೧ ಕಾರ್ಯ ನಿರ್ವಹಣದ ವರದಿ ೨ ಮೂತ್ರಿಗಳ ನಿಬಂಧ	೧) ಉಪಯೋಗಿಸಿದ ಕಚ್ಚಾ ಸಾಮಾನಿನ ಬೆಲೆ ೨) ಹುಡುಗರ ಪ್ರತಿ ತಾಸಿನ ಕೂಲಿ ೩) ನೆಲಗಟ್ಟಿಗೆ ತಗಲಿದ ಖರ್ಚು	೧) ಮೂತ್ರದ ಘಟಕಗಳು ೨) ಮೂತ್ರದಿಂದ ಗೊಬ್ಬರ ಕಳೆಯುವಿಕೆಗೆ ಆಗುವ ಸಹಾಯ ೩) ಜೀವ ಜಂತುಗಳ ಆಹಾ

ಕಲಿಸುವ ಕ್ರಮ

ಮೂತ್ರಿಯ ನೆಲಗಟ್ಟನ್ನು ತಯಾರಿಸುವದಕ್ಕಾಗಿ ನೀವು ಉಪಯೋಗಿಸಿದ ಸಾಮಾನುಗಳು ಯಾವವು? ವುಗಳ ಬೆಲೆ ಎಷ್ಟು? ಪ್ರತಿಯೊಬ್ಬ ವಿದ್ಯಾರ್ಥಿಯ ಒಂದು ತಾಸಿನ ಕೂಲಿ ಎಷ್ಟು? ನೀವೆಷ್ಟು ವಿದ್ಯಾರ್ಥಿಗಳು ಎಷ್ಟು ಅವಧಿಯ ವರೆಗೆ ಕೆಲಸ ಮಾಡಿದಿರಿ? ಹಾಗಾದರೆ ನಿಮ್ಮ ಕೂಲಿ ಎಷ್ಟಾಗುವದು? ಮೂತ್ರಿಯ ನೆಲಗಟ್ಟನ್ನು ತಯಾರಿಸುವದಕ್ಕಾಗಿ ತಗಲಿದ ಒಟ್ಟು ಖರ್ಚು ಎಷ್ಟಾದಂತಾಯಿತು? (ಇದೇ ಮೇರೆಗೆ ಗಚ್ಚು, ಸಿಮೆಂಟು, ಕಲ್ಲುಗಳಿಂದ ಬೇರೆ ಬೇರೆ ಅಳತೆಗಳುಳ್ಳ ನೆಲಗಟ್ಟುಗಳನ್ನು ತಯಾರಿಸುವದಕ್ಕಾಗಿ ತಗಲಬಹುದಾದ ಖರ್ಚಿನ ಅಂದಾಜನ್ನು ಶಿಕ್ಷಕರು ವಿದ್ಯಾರ್ಥಿಗಳಿಂದ ಮಾಡಿಸುವರು.)

೧) ಮೂತ್ರಿಯ ನೆಲಗಟ್ಟಿನ ಆಕೃತಿಯನ್ನು ತೆಗೆಯಿರಿ.

೨) ನೀವು ಮಾಡಿದ ಕಾರ್ಯದ ವರದಿಯನ್ನು ಬರೆಯಿರಿ.

'ಮೂತ್ರಿಗಳು' ಈ ವಿಷಯವನ್ನು ಕುರಿತು ಒಂದು ಚಿಕ್ಕ ನಿಬಂಧ ಬರೆಯಿರಿ. ವಿದ್ಯಾರ್ಥಿಗಳಿಂದ ನಿಬಂಧದ ಮುದ್ದೆಗಳನ್ನು ಶಿಕ್ಷಕರು ಹೊರಡಿಸುವರು.

ವಿಷಯಗಳು

ಆರೋಗ್ಯ ಶಾಸ್ತ್ರ (೪)	ಪೌರನೀತಿ (೫)	ಡ್ರಾಯಿಂಗ (೬)
೧) ಮೂತ್ರಿಗಳ ಅವಶ್ಯಕತೆ ೨) ಅದರ ಉಪಯೋಗದಿಂದ ಆಗುವ ಲಾಭಗಳು ೩) ಮೂತ್ರಿಗಳ ಯೋಗ್ಯ ಉಪಯೋಗ ೪) ಮೂತ್ರಿಗಳ ಸ್ವಚ್ಛತೆ	೧) ವಿದ್ಯಾರ್ಥಿನಿಯರಿಗಾಗಿ ಮೂತ್ರಿಗಳ ಅವಶ್ಯಕತೆ	೧) ಮೂತ್ರಿಯ ನೆಲಗಟ್ಟಿನ ಆಕೃತಿ

ಪ್ರೇಮದಿಂದ ವಿಶ್ವವನ್ನು ಗೆಲ್ಲಿರಿ

(ಶ್ರೀಮತಿ ಸರೋಜನಿ ನಾಯಡು, ಅವರ ಇಂಗ್ಲೀಷ ಭಾಷಣದ ಅನುವಾದ.)

ಶ್ರೀ. ವೀರೇಶ ಹಿರೇಮಠ, ಬಿ. ಎ., ಬಿ. ಟಿ. ಜಿ ಬಿ. ಟಿ. ಸಿ. ಧಾರವಾಡ.

(ಶ್ರೀಮತಿ ಸರೋಜನಿ ನಾಯಡು ಅವರು ದಕ್ಷಿಣ ಆಫ್ರಿಕೆಯಲ್ಲಿ ಪ್ರವಾಸ ಕೈಕೊಂಡಾಗ ಮನುಷ್ಯ ಮನುಷ್ಯರಲ್ಲಿಯ ಹಾಗೂ ಜನಾಂಗ ಜನಾಂಗದಲ್ಲಿಯ ಮಾತ್ಸರ್ಯ, ವೈರಭಾವವನ್ನು ಪ್ರತ್ಯಕ್ಷ ನೋಡಿ, ಹೃದಯ ಮಲ ಮಲನೆ ಮರುಗಿತು. ಎಲ್ಲಿ ನೋಡಿದಲ್ಲಿ ವಿಷಕಾರಕ ವೈರಭಾವವು ತಾಂಡವ ನೃತ್ಯವನ್ನಾಡುತ್ತಿತ್ತು, ಅಲ್ಲಿಯ ಜನತೆಯನ್ನು ಕುರಿತು ಶ್ರೀಮತಿ ಸರೋಜನಿ ನಾಯಡು ಅವರು ಒಂದು ಉತ್ಕೃಷ್ಟ ಉಪನ್ಯಾಸ ಮಾಡಿದರು.)

ನಾನು ಇಡೀ ವಿಶ್ವದ ಬಾಲಕರನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತೇನೆ. ಕೇವಲ ಒಂದೇ ರಾಷ್ಟ್ರದ ಮಕ್ಕಳನ್ನಲ್ಲ. ಇಲ್ಲವೆ ಬರೇ ಹಿಂದೂಸ್ತಾನದ ಹಸುಗೂಸುಗಳನ್ನಲ್ಲ. ವಿಶ್ವದ ಸಕಲ ರಾಷ್ಟ್ರಗಳ ಬಾಲಕರನ್ನು ಪ್ರೀತಿಸುತ್ತೇನೆ. ಜಗತ್ತಿನಲ್ಲಿ ಒಳ್ಳೆಯ ಮಹತ್ವದ ವಿಷಯವೆಂದರೆ 'ಬಾಲ್ಯತನ.' ಬಾಲಕರಲ್ಲಿ ಯಾವ ವರ್ಣದ್ವೇಷವಿಲ್ಲ, ಭಾಷಾದ್ವೇಷವಿಲ್ಲ, ಜಾತೀಯತೆಯ ಸಂಕರೋಗವಿಲ್ಲ. ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಬಾಲಕರು ಪ್ರೇಮವನ್ನು ಸೇತುವೆಯನ್ನಾಗಿ ಮಾಡಬಹುದು. ಅಂತಹ ಬಾಲಕರನ್ನು ಕುರಿತು ನಾನು ಈ ಚಿಕ್ಕ ಉಪನ್ಯಾಸ ಮಾಡಲಿರುವೆ.

ನೀವೆಲ್ಲರೂ ಶಾಲೆಗೆ ಹೊಗುವ ಮಕ್ಕಳೆಂದು ನನಗೆ ತೋರುತ್ತದೆ. ಕ್ಷಿಪ್ರದಲ್ಲಿಯೇ ನನ್ನ ಭಾವ-ಚಿತ್ರವನ್ನು ತೆಗೆಯುವ ತಯ್ಯಾರಿಯನ್ನು ನೀವು ನಡೆಸಿದಂತೆ ತೋರುತ್ತಿದೆ. ನನ್ನ ಚಿತ್ರವನ್ನು ನೀವು ಕಂಡಾಗ ದಯಮಾಡಿ ನೀವು ಈ ರೀತಿಯಾಗಿ ಭಾವಿಸಿ 'ಇಲ್ಲಿದೆ ಈ ಮುದುಕಿಯ ಚಿತ್ರ, ಜಗತ್ತಿನ ಎಲ್ಲ ಬಾಲಕರ ಮೈತ್ರಿ, ಇಂಗ್ಲಂಡ, ನಾರ್ವೆ, ಇಟಲಿ ಹಾಗೂ ಎಲ್ಲದೇಶಗಳ ಬಾಲಕರ ಆಟಗಲ್ಲಿಳಸಂಗಾತಿ.

ನಿಮಗೆಲ್ಲರಿಗೂ ಆಶ್ಚರ್ಯವಾಗಬಹುದು, ಕೇವಲ ಸಣ್ಣ ಮಕ್ಕಳನ್ನಷ್ಟೇ ಮಮತೆಯಿಂದ ಯಾಕೆ ಕಾಣುವಳೆಂದು. ಅದಕ್ಕೆ ಒಂದು ಕಾರಣವಿದೆ. ೨೦೦೦ ವರುಷಗಳ ಸ ದಲ್ಲಿ ಪ್ಯಾಲೆಸ್ಟಾಯಿನದಲ್ಲಿ ಒಬ್ಬ ದೊಡ್ಡ ಮನುಷ್ಯ ಹೋದ. ಆತನು ಈ ರೀತಿಯಾಗಿ ಹೇಳಿದ.—"ಬಾ ದಲ್ಲಿಯೇ ನಿಜವಾದ ಸ್ವರ್ಗವಿದೆ" ಕ್ರೈಸ್ತನು ಒಪ್ಪಿ ರೀತಿಯಾಗಿ ಹೇಳಿದ.—"ನನ್ನ ಹತ್ತಿರ ಶ್ರೀಮಂತರು ವದು ಬೇಡ, ಜ್ಞಾನ ಜನರೂ ಬೇಡ, ಇಲ್ಲವೆ ಸೇ ಪತಿಗಳೂ ಬೇಡ. ನನಗೆ ಕೇವಲ ಚಿಕ್ಕ ಬಾಲಕರು ನನ್ನ ಸುತ್ತು ಮುತ್ತಲು ಇರಬೇಕು. ಇದೇ ಬಯಕೆ."

ಆ ಮೇಲೆ ಸ್ವರ್ಗವೆಂದರೇನು? ನಾವು ಕಲ್ಪಿಸಿದಂ ರ್ಗವು ಆಕಾಶವನ್ನು ದಾಟಿ, ದೂರ ಸ್ಥಳದಲ್ಲಿ ಇಲ್ಲ, ಹಸುಗೂಸಗಳ ಪವಿತ್ರ ಹೃದಯಗಳಲ್ಲಿದೆ. ದೊಡ್ಡ ಶೌರ್ಯ, ತಂಟುಗಾರಿಕೆ, ಮೋಸ, ದಬ್ಬಾಳಿಕೆ ಮೊದ ಗುಣಗಳು ಸಿಕ್ಕಾ-ಪಟ್ಟೆಯಾಗಿ ಬೆಳೆದಿರುವವು. ಚಿಕ್ಕ ಳಲ್ಲಿ ಈ ಗುಣಗಳು ಇನ್ನೂ ನೆಲೆಸಿರುವದಿಲ್ಲ. ಮನು ಸ್ವಾರ್ಥಿಯಾದಂತೆ, ನೀಚನಾದಂತೆ ಚಿಕ್ಕ ಮಕ್ಕಳ ಸ್ವ ಯ ಪ್ರಪಂಚ ಸೇರಲು ಅನರ್ಹನಾಗುವನು. ಪರಮೇಶ್ ಬಾಲಕರ ಪ್ರಪಂಚವನ್ನು ಸರ್ವಾಂಗೀಣ ಸುಂದರವ ಮಾಡಿದ್ದಾನೆ, ಆ ಬಾಲಕರ ನಂದನವನದಲ್ಲಿ ನೇತ್ರಾ ವನ್ನೀಯುವ ನಾನಾ ತರದ ಪಕ್ಷಿಗಳಿವೆ; ಬಣ್ಣ ಬ ಪಾತರಗಿತ್ತಿಗಳಿವೆ., ಚಿಕ್ಕಿ ಚಿಕ್ಕಿಯ ಹೊನ್ನೇ ಹುಳುಗ ಸುಗಂದಯುಕ್ತವಾದ ಹೂಗಳಿಂದ ಭರಿತವಾದ ವಿವಿಧ ಗಳಿವೆ, ಎತ್ತರವಾದ ಪರ್ವತಗಳ ಮೇಲಿಂದ ಜರದಂಚಿ ತೆ ಬೀಳುವ ಜಲಪಾತಗಳಿವೆ, ಚಿಕ್ಕ ಮಕ್ಕಳ ಪ್ರಪಂ ಗಂಧರ್ವರ ಸೀಮೆಯು, ಇಂತಹ ಸುಂದರ ನಾಡಿನ ಸ ಳು ಸುಶೀಲ ಶಬ್ದಗಳನ್ನೇ ಆಡಬೇಕು. ಸುಂದರ ಸ ಗಳನ್ನೇ ಕೈಕೊಳ್ಳಬೇಕು. ಸುಂದರ ಹಾಗು ಸೌಮ್ಯ ಯನ್ನೇ ಸದಾ ಕಾಲದಲ್ಲಿ ಉಪಯೋಗಿಸಬೇಕು. ಅ

ಮಾತ್ರ ಅಂತಹ ಸ್ವರ್ಗೀಯ ನಾಡಿನಲ್ಲಿ ಬಾಲಕರು ವಾಸಿಸಲು ಯೋಗ್ಯರು.

ನಮ್ಮ ಹಿಂದೂಸ್ತಾನದ ಸಂಸ್ಕೃತಿಯು "ಸ್ವಾರ್ಥ ಜೀವನವನ್ನು ತ್ಯಜಿಸಿರಿ. ಸರ್ವರ ಕೂಡ ಪ್ರೇಮವನ್ನು ಬೆಳೆಸಿರಿ." ಎಂದು ಅನೇಕ ವರುಷಗಳಿಂದ ಘಂಟಾಘೋಷದಿಂದ ಸಾರುತಿದೆ. ದಯದಿಂದ ತುಂಬಿದ ಹೃದಯಿಗಳಿಂದ ಕ್ರೂರರು ನೀಚರು, ಪತಿತರು ಕೂಡ ಹೃದಯ ಪರಿವರ್ತನ ಮಾಡಿಕೊಳ್ಳುವರು. ದಯೆಯು ಎಲ್ಲ ದುರ್ಗುಣಗಳನ್ನು ಸುಡುವದು.

ಇದೇ ಮಾತನ್ನು ಹಿಂದಕ್ಕೊಮ್ಮೆ ದರ್ಬಾನದಲ್ಲಿ ವಾಸಿಸಿದ ಮಹಾ ಪುರುಷನುಡಿದ. ಆತನು ಬಡಕಲ ದೇಹದ ಬೈರಾಗಿಯಾಗಿದ್ದರೂ, ಆತನ ಆತ್ಮವು ವಿಶಾಲವಾಗಿತ್ತು. ಆತನ ಆತ್ಮೀಯ ತೇಜಸ್ಸು ಅಮರವಾಗಿದೆ. ಆತನು ಒಮ್ಮೆ ಪರಬಾನದಲ್ಲಿದ್ದನು. ಮತ್ತೊಮ್ಮೆ ಜೋಹ್ಯಾನ್ಸಬರ್ಗದಲ್ಲಿದ್ದನು. ಆತನ ಹೆಸರು ಗಾಂಧೀಜಿ. ಆತನು ವಿಶ್ವದ ಯಾವದೇ ಭಾಗದಲ್ಲಿ ಇದ್ದರೂ ಜಗತ್ತಿಗೆ ಆತನು ನೀಡಿದ ಸಂದೇಶ ಒಂದೇ ಇತ್ತು. ಆ ಸಂದೇಶವು ಈ ರೀತಿಯಾಗಿದೆ—



"ಪ್ರೇಮದಿಂದಲೇ ವಿಶ್ವವನ್ನು ನಾನು ಗೆಲ್ಲಲು ಸಮರ್ಥನು. ನೀವು ನನ್ನನ್ನು ಪೀಡಿಸಬಹುದು. ನನಗೆ ಚಿತ್ರಹಿಂಸೆಪಡಿಸಬಹುದು, ಕೊಲ್ಲಬಹುದು, ಆದರೂ ನನ್ನನ್ನು ಪೀಡಿಸಿದ, ಚಿತ್ರಹಿಂಸೆ ಕೊಟ್ಟ ಜನರನ್ನು ಕ್ಷಮಿಸುವೆನು."

ಈ ಸಂದೇಶವನ್ನು ಆತನು ಹೆಚ್ಚಾಗಿ ಚಿಕ್ಕ ಮಕ್ಕಳಿಗೆ ಬೋಧಿಸಿದನು. ವಯಸ್ಸಾದ ಹಿರಿಯರು ಈ ಸಂದೇಶವನ್ನು ಕಾರ್ಯರೂಪದಲ್ಲಿ ತರಲಿಕ್ಕಿಲ್ಲೆಂದು ಆತನಿಗೆ ಒಂದು ಭಯ. ದೊಡ್ಡವರಲ್ಲಿ ಆಶೆಬುರುಕತನ, ಸ್ವಾರ್ಥ, ಹೋರಾಟ ಪ್ರವೃತ್ತಿ ಕಸದಂತೆ ಬೆಳೆದಿರುವವು. ಸಂಗ್ರಾಮಗಳಲ್ಲಿ ಶೂರರು ತರುಣರು ಸಾವಿಗೀಡಾಗುವರು. ಆದುದರಿಂದ ನೀವೆಲ್ಲರೂ ನಿಮ್ಮ ತಂದೆ-ತಾಯಂದಿರಗಿಂತ ಜಾಣರಿರುವಿರಿ; ನಿಮ್ಮ ಹಿರಿಯರಿಗಿಂತ ಹೆಚ್ಚಿನ ಸುಸಂಧಿಯ ಕಾಲವು ತಾನಾಗಿಯೇ ಒದಗಿ ಬಂದಿದೆ; ಅಂತಹ ಸುಸಮಯದ ಸದುಪಯೋಗವನ್ನು ನೀವು ಮಾಡಿಕೊಳ್ಳಲೇ ಬೇಕು. ನಿಮ್ಮ ಚಿಕ್ಕ ಆತ್ಮಗಳನ್ನು ತೇಜಸ್ವಿಯುಳ್ಳವುಗಳನ್ನಾಗಿ ಮಾಡಿರಿ, ನೀವು ಯಾವಾಗಲೂ ಈ ಮಾತನ್ನು ಲಕ್ಷ್ಯದಲ್ಲಿಡಿರಿ. "ದೇವರ್ಯ ನನಗೆ ಶಕ್ತಿಯನ್ನು ಕೊಟ್ಟಿದ್ದರೆ ಅದನ್ನು ಅಶಕ್ತರಿಗೆ ಆಟದಲ್ಲಿಯಾಗಲಿ, ಕೆಲಸದಲ್ಲಾಗಲಿ ಸಹಾಯ್ಯ ನೀಡಲು." ನೀವು ನಿಮ್ಮ ಶಾಲೆಗಳಲ್ಲಿ ಸತ್ಯಮಯ, ದಯಾಮಯ ಹಾಗೂ ಧೈರ್ಯಮಯ ವಾತಾವರಣವನ್ನು ನಿರ್ಮಿಸಬೇಕು. ಯಾವದೇ ಬಾಲಕ ಇಲ್ಲವೆ ಬಾಲಕಿಯು ಮೋಸ ಮಾಡಿದಲ್ಲಿ ಇಲ್ಲವೆ ಅಸತ್ಯ ನುಡಿದಲ್ಲಿ ಉಳಿದ ಬಾಲ-ಬಾಲಕಿಯರು ಆ ತಪ್ಪನ್ನು ತಪ್ಪು ಮಾಡಿದವರಿಗೆ ಸ್ಪಷ್ಟವಾಗಿ ತಿಳಿಸಿ ಹೇಳಬೇಕು. ಜನರು ನಮಗೆ ಕೆಲವು ಸಲ ಮರ್ಯಾದೆಯನ್ನು ಸಲ್ಲಿಸುತ್ತಾರೆ. ಮರ್ಯಾದೆಯನ್ನು ಸಲ್ಲಿಸಿಕೊಳ್ಳುವದರಿಂದ ನಾವು ದೊಡ್ಡವರಾದಂತಾಗುವದಿಲ್ಲ. ಆ ಮರ್ಯಾದೆಗೆ ನಾವು ಅರ್ಹರೋ ಎಂಬದನ್ನು ನಾವು ನೋಡಬೇಕು. ದೇವರ ಪ್ರೀತಿಯನ್ನು ಸಂಪಾದಿಸಬೇಕಾದರೆ ಅತನಿಗೆ ಹೆಚ್ಚು ಪ್ರೀತ್ಯಾಸ್ಪದರಾದ ಸರ್ವ ಮಕ್ಕಳನ್ನು ಪ್ರೀತಿಸಬೇಕು ಅವರು ಡಚ್ಚರೇ ಇರಲಿ, ಇಂಗ್ಲಿಷರೇ ಇರಲಿ, ಇಲ್ಲವೆ ಆಫ್ರಿಕದವರೇ ಇರಲಿ, ನಾವು ಒಮ್ಮನಸ್ಸಿನಿಂದ ಅವರನ್ನು ಪ್ರೀತಿಸಬೇಕು. ನೀವು ಎಲ್ಲರೂ ಪ್ರತಿಜ್ಞೆ ಮಾಡಬೇಕು.—

"ಯಾವ ದೇಶದಲ್ಲಿ ವಿಭಜನೆ ಹಾಗೂ ವೈರಭಾವವು ಇದೆಯೋ ಅಂತಹ ರಾಷ್ಟ್ರದಲ್ಲಿ ನಾವು ವಾಸಿಸುವದಿಲ್ಲ." ಎಂದು.

ನೀವು ಇಡೀ ವಿಶ್ವವನ್ನು ಎಂದು ಪ್ರೀತಿಸುವಿರೋ ಅಂದು ಮಾತ್ರ ಇಡೀ ವಿಶ್ವದಲ್ಲಿ ಸುಖ-ಶಾಂತಿ-ಸಮಾಧಾನಗಳು ನೆಲೆಗೊಳ್ಳುವವು.

ಜೈ ಹಿಂದ!

ಪ್ರಾಥಮಿಕ ಶಿಕ್ಷಣ

ಯುಗಪುರುಷ ಬಾಪೂಜಿ

(೨೧ನೇ ಪುಟದಿಂದ ಮುಂದುವರಿದದ್ದು)

ಸಿರಿಪತಿಯೇ ನೀನಿನ್ನಯ ।
ಉರುತರ ದೇಹವನು ಬಿಟ್ಟು ಮನುಜಾಕೃತಿಯಿಂ ॥
ಮೆರೆದೆಮ್ಮೆಲ್ಲರ ಪೊರೆದ್ದೈ ।
ಪರಿಪರಿಯಿಂ ನಿಮ್ಮ ನುತಿಯಗ್ಗೈವೆವು ಸತತಂ ॥ ೮ ॥

ಸಂಧ್ಯಾಕಾಲದ ಸಮಯದಿ ।
ಪೊಂದುವೆ ಅವತಾರ, ಪೊಂದಿ ನಿನ್ನಯ ಯುಗಮಂ ॥
ಸಂದಿಸಿ ಬೇಗನೆ ಪೋದ್ದೈ ।
ಬಂದೇ ಬಹೆ ತಿರುಗಿ ಎಂದು ಬರುತಿಹೆ ಪೇಳ್ದೈ ? ॥ ೯ ॥

ಸಂ. ಸ. ಸೋಮಾಪುರ.
ಸರಕಾರಿ ಕ. ಗಂ. ಮುಕ್ಕಳ ಟ್ರೇನಿಂಗ ಕಾಲೇಜ
ಧಾರವಾಡ.

ಪ್ರಕಟನೆ

೧೯೪೯ನೆಯ ಇಸವಿಯಲ್ಲಿಯ ಗಂಡು ಮತ್ತು ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ.

ಈ ಮೂಲಕ ಕೆಳಗಿನಂತೆ ಜಾಹೀರ ಮಾಡಲಾಗಿದೆ:—

ಗಂಡು ಮತ್ತು ಹೆಣ್ಣು ಮಕ್ಕಳ ಸಲುವಾಗಿ ಸಾಮಾನ್ಯ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು ಕೆಳಗಿನ ಭಾಗದಲ್ಲಿ, ಕೆಳಗೆ ಕಾಣಿಸಿರುವ ಕೇಂದ್ರಗಳಲ್ಲಿ -ಪ್ರತಿಯೊಂದರಲ್ಲಿ- ಸೋಮವಾರ ದಿನಾಂಕ ೧೯೪೯ನೆಯ ಇಸವಿ ಮಾರ್ಚ ೭ನೆಯ ತಾರೀಖಿಗೆ ಪ್ರಾರಂಭವಾಗಿ ಮುಂದೆ ಮೂರು ದಿನ ನಡೆಯುವದು.

ಜಿಲ್ಲೆ	ಕೇಂದ್ರಗಳು
೧) ಧಾರವಾಡ	೧) ಧಾರವಾಡ ೨) ಗದಗ ೩) ಹುಬ್ಬಳ್ಳಿ ೪) ಹಾವೇರಿ
೨) ಬೆಳಗಾವ	೧) ಬೆಳಗಾವ ೧ (ಅ) ಬೈಲಹೊಂಗಲ (ಉಪಕೇಂದ್ರ) ೨) ಚಿಕ್ಕೋಡಿ ೩) ಅಥಣಿ ೩ (ಅ) ಜಮಖಂಡಿ (ಉಪಕೇಂದ್ರ)
೩) ಬಿಜಾಪುರ	೧) ಬಿಜಾಪುರ ೨) ಬಾಗಲಕೋಟೆ ೨ (ಅ) ಮುದ್ದೇಬಿಹಾಳ (ಉಪಕೇಂದ್ರ)
೪) ಕಾರವಾರ	೧) ಕಾರವಾರ ೨) ಕುಮಟಾ ೨ (ಅ) ಶಿರಶಿ (ಉಪಕೇಂದ್ರ)
೫) ಕೊಲ್ಹಾಪುರ (ಸಂಸ್ಥಾನ)	೧) ಕೊಲ್ಹಾಪುರ ೧ (ಅ) ಗಡಹಿಂಗ್ಲಜ (ಉಪಕೇಂದ್ರ)

೨. ಮೇಲ್ಕಾಣಿಸಿದ ಪ್ರತಿಯೊಂದು ಕೇಂದ್ರದಲ್ಲಿ ಪರೀಕ್ಷಾ ಮಂಡಲವೊಂದರಿಂದ ಪರೀಕ್ಷೆಯನ್ನು ಘೆಡೆಸಲಾಗವದು. ಮುಖ್ಯ ಮತ್ತು ಉಪಕೇಂದ್ರಗಳ ಪರೀಕ್ಷಾ ಮಂಡಲಗಳ ಅಧ್ಯಕ್ಷರು ಕೆಳಗೆ ಕಾಣಿಸಿದಂತೆ ಇರುವರುಃ—

CONTD IN
NEXT ROLL

END

END

END

END

END

END

END